# 2022-23

# ವಿದ್ಯಾ ಪ್ರವೇಶ

## [illegible]

## (೦೧ ನೇ ತರಗತಿಗಾಗಿ)

[illegible]

**ನಿಪುಣ್ ಭಾರತ್‌ಗಾಗಿ – ನಿಪುಣ್ ಕರ್ನಾಟಕ**

| ಸಹಯೋಗ | | |
|---|---|---|
| ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು | ಯುನಿಸೆಫ್<br>ಹಾಗೂ<br>ಅಕ್ಷರ ಪ್ರತಿಷ್ಠಾನ ಬೆಂಗಳೂರು | ಅಜೀಂ ಪ್ರೇಂಜಿ ಪ್ರತಿಷ್ಠಾನ<br>ಬೆಂಗಳೂರು |

DRAFT 22.02.22

## ಪರಿಕಲ್ಪನೆ ಮತ್ತು ಆಯೋಜನೆ

**ಶ್ರೀಮತಿ ದೀಪಾ ಚೋಳನ್** ಭಾ.ಆ.ಸೇ
**ರಾಜ್ಯ ಯೋಜನಾ ನಿರ್ದೇಶಕರು–**
**ಸಮಗ್ರ ಶಿಕ್ಷಣ ಕರ್ನಾಟಕ– ಬೆಂಗಳೂರು**

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀಮತಿ ಎಸ್.ಗೀತಾ**
ನಿರ್ದೇಶಕರು (ಗುಣಮಟ್ಟ)
ಸಮಗ್ರ ಶಿಕ್ಷಣ ಕರ್ನಾಟಕ– ಬೆಂಗಳೂರು

**ಶ್ರೀ ಕೆ.ರತ್ನಯ್ಯ**
ಸಹ ನಿರ್ದೇಶಕರು (ಗು)
ಸಮಗ್ರ ಶಿಕ್ಷಣ ಕರ್ನಾಟಕ– ಬೆಂಗಳೂರು

## ಕಾರ್ಯಕ್ರಮ ಸಂಯೋಜನೆ ಹಾಗೂ ನಿರ್ವಹಣೆ

**ಶ್ರೀಮತಿ ಮಂಜುಳಾ**
ಹಿರಿಯ ಕಾರ್ಯಕ್ರಮಾಧಿಕಾರಿ
ಸಮಗ್ರ ಶಿಕ್ಷಣ ಕರ್ನಾಟಕ – ಬೆಂಗಳೂರು

**ಶ್ರೀಮತಿ ಪ್ರಮೀತಾ ಅದೋನಿ**
ಕಾರ್ಯಕ್ರಮಾಧಿಕಾರಿ
ಸಮಗ್ರ ಶಿಕ್ಷಣ ಕರ್ನಾಟಕ – ಬೆಂಗಳೂರು

**ಡಾ॥ ಎಸ್. ಗುಣವತಿ**
ಕಿರಿಯ ಕಾರ್ಯಕ್ರಮಾಧಿಕಾರಿ
ಸಮಗ್ರ ಶಿಕ್ಷಣ ಕರ್ನಾಟಕ – ಬೆಂಗಳೂರು

DRAFT 22.02.22

| ಕ್ರ.ಸಂ | ಸಾಹಿತ್ಯ ರಚನೆಯಲ್ಲಿ ಭಾಗವಹಿಸಿದ ರಾಜ್ಯ ಸಂಪನ್ಮೂಲ ವ್ಯಕ್ತಿಗಳು |
|---|---|
| 01 | ಶ್ರೀಮತಿ ನಮಿತಾ ರಾವ್, ಸಮಾಲೋಚಕರು, ಯುನಿಸೆಫ್ ಕಾರ್ಯಕ್ರಮ, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು |
| 02 | ಶ್ರೀಮತಿ ವೈಜಯಂತಿ, ಪ್ರತಿನಿಧಿ, ಅಕ್ಷರ ಪ್ರತಿಷ್ಠಾನ, ಬೆಂಗಳೂರು |
| 04 | ಶ್ರೀ ರಾಜಾರಾಮ್, ಕಾರ್ಯದರ್ಶಿಗಳು, ರಾಷ್ಟ್ರೋತ್ಥಾನ ವಿದ್ಯಾಲಯ, ಹೊಳೆ ಹೊನ್ನೂರು, ಶಿವಮೊಗ್ಗ ಜಿಲ್ಲೆ. |
| 05 | ಶ್ರೀ ಚಂದ್ರಶೇಖರ್ ನಾಯಕ್, ಡಿ.ವೈ.ಪಿ.ಸಿ, ಉಪನಿರ್ದೇಶಕರ ಕಛೇರಿ, ಶಿರಸಿ ಶೈಕ್ಷಣಿಕ ಜಿಲ್ಲೆ. |
| 06 | ಶ್ರೀ ರವೀಂದ್ರ ಆರ್.ಡಿ, ಶಿಕ್ಷಣ ಸಂಯೋಜಕ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ |
| 07 | ಶ್ರೀ ಪ್ರಶಾಂತ್ ನಾಯ್ಕ, ಸ.ಶಿ., ಸ.ಹಿ.ಪ್ರಾ.ಶಾಲೆ, ಮರ್ಲೆ ಹೊಸಹಳ್ಳಿ, ಚಿಕ್ಕಮಗಳೂರು ಜಿಲ್ಲೆ, |
| 08 | ಶ್ರೀ ರಂಗನಾಥ್ ಎಸ್.ಆರ್, ಸ.ಶಿ., ಸ.ಹಿ.ಪ್ರಾ.ಶಾಲೆ ಹಳ್ಳಿಬೈಲು, ನರಸಿಂಹರಾಜಪುರ, ತಾ. ಚಿಕ್ಕಮಗಳೂರು, ಜಿ |
| 09 | ಶ್ರೀ ಕೆ.ಜಿ ನಾಯ್ಕ, ಸ.ಶಿ, ಸ.ಹಿ.ಪ್ರಾ.ಶಾಲೆ, ನೇರ್ಲಮನೆ, ಸಿದ್ದಾಪೂರ ತಾ. ಶಿರಿಸಿ, ಶೈಕ್ಷಣಿಕ ಜಿಲ್ಲೆ. |
| 10 | ಶ್ರೀಮತಿ ಜಯಂತಿ ಎಂ.ಎನ್, ಸ.ಶಿ., ಸ.ಕಿ.ಪ್ರಾ.ಶಾಲೆ, ವಬಸಂದ್ರ, ಹಾಲಪ್ಪನಹಳ್ಳಿ,ಹೊಸಕೋಟೆ ತಾ.ಬೆಂ.ಗ್ರಾ |
| 11 | ಶ್ರೀಮತಿ ಪ್ರೀತಿ ಹೆಗಡೆ, ಸ.ಶಿ.,ಸ.ಮಾ.ಪ್ರಾ.ಶಾಲೆ, ಹೆಗ್ಗನಹಳ್ಳಿ, ವಿಶ್ವನೀಡಂ ಬೆಂಗಳೂರು ಉತ್ತರ–60 |
| 12 | ಶ್ರೀ ರೇಣುಕಾರಾಧ್ಯ ಪಿ.ಪಿ, ಸ.ಶಿ.,ಸ.ಹಿ.ಪ್ರಾ.ಶಾಲೆ, ಅರಸೀಕೆರೆ, ಹಾಸನ ಜಿಲ್ಲೆ |
| 13 | ಶ್ರೀ ಮುರಳೀಧರ ಸ.ಶಿ., ಸ.ಹಿ.ಪ್ರಾ.ಶಾಲೆ, ವಡೇರಾಪುರ, ನಾಗಮಂಗಲ ತಾಲ್ಲೂಕು ಮಂಡ್ಯ ಜಿಲ್ಲೆ, |
| 14 | ಶ್ರೀಮತಿ ಸಂಧ್ಯಾ ಎಂ, ಹೆಗಡೆ ಸ.ಶಿ, ಸ.ಹಿ.ಪ್ರಾ ಶಾಲೆ, ಶ್ರೀನಿವಾಸ ಕಾಲೋನಿ, ಉತ್ತರ ಹಳ್ಳಿ ಕ್ಲಸ್ಟರ್, ಬೆಂ.ದ–01 |
| 15 | ಶ್ರೀಮತಿ ಪುಷ್ಪಾವತಿ ಹೆಚ್.ಎಂ, ಸ.ಶಿ.,ಸ.ಕಿ.ಪ್ರಾ ಶಾಲೆ, ಹಳೆಲಂಬಾಣಿ ತಾಂಡ್ಯ, ದೊಡ್ಡಬಿದರೆ, ಚಿ.ನಾ.ಹಳ್ಳಿ, ತುಮಕೂರು ಜಿಲ್ಲೆ. |
| 16 | ಶ್ರೀ ಶಂಭುಲಿಂಗಯ್ಯ ಹಿರೇಮಠ, ಬಿ.ಆರ್.ಪಿ, ಬಿ.ಆರ್.ಸಿ. ಹಾನಗಲ್, ಹಾವೇರಿ ಜಿಲ್ಲೆ |
| 17 | ಶ್ರೀ ಬಸವರಾಜ ತೇಲಿ, ಸಿ.ಆರ್.ಪಿ ವಿಜಯಪುರ ಗ್ರಾಮೀಣ/ಜಿಲ್ಲೆ |
| 18 | ಶ್ರೀ ತಿಪ್ಪಾನಾಯಕ್ ಎಲ್, ಸ.ಹಿ.ಪ್ರಾ ಶಾಲೆ, ಜನತಾ ಕಾಲೋನಿ, ಕಗದಾಳ, ಸವದತ್ತಿ ತಾ. ಬೆಳಗಾವಿ.ಜಿ |
| 19 | ಶ್ರೀಮತಿ ಸುನಂದ ಚೌಧರಿ, ಸಹ ಶಿಕ್ಷಕರು, ಸ.ಹಿ.ಪ್ರಾ.ಶಾಲೆ, ಬಸವಪಟ್ಟಣ ತಾ: ಕಲಬುರಗಿ ಜಿ: |
| 20 | ಶ್ರೀಮತಿ ಕೀರ್ತಿವತಿ ವಿ.ಎನ್., ಬಿ.ಐ.ಇ.ಆರ್.ಟಿ., ಧಾರವಾಡ ನಗರ ತಾ/ಜಿಲ್ಲೆ |
| 21 | ಶ್ರೀಮತಿ ಫೌಜಿಯಾ ಸರಾವತ್, ಸ.ಶಿ., ಸ.ಕಿ.ಪ್ರಾ ಶಾಲೆ ಕಲ್ಲುಗುಡ್ಡ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ |
| 22 | ಶ್ರೀಮತಿ ಲಲಿತಾ ವೈ.ಎನ್, ಸ.ಶಿ.,ಸ.ಹಿ.ಪ್ರಾ.ಶಾಲೆ, ಕಾಟಿಕೆರೆ ಕ್ಯಾಂಪ್, ಶಿವಮೊಗ್ಗ ತಾಲ್ಲೂಕು/ಜಿಲ್ಲೆ |
| 23 | ಶ್ರೀ ಲೋಕೇಶ್ ಕುಮಾರ್, ಎನ್.ಎಸ್, ಸ.ಹಿ.ಪ್ರಾ ಶಾಲೆ, ಕಣಜನಹಳ್ಳಿ, ಹಾಸನ ತಾ/ಜಿಲ್ಲೆ |
| 24 | ಶ್ರೀ ಕೆ.ಎಲ್.ಶಾನಭಾಗ, ಸ.ಶಿ. ಸ.ಉ.ಪ್ರೌ.ಶಾಲೆ, ಜಾಮ್ಯಜಾಲಿ, ಹೆಬ್ಳೆ, ಪೋಸ್ಟ್ ಭಟ್ಕಳ ತಾ. ಉತ್ತರ ಕನ್ನಡ ಜಿಲ್ಲೆ |
| 25 | ಶ್ರೀ ಬಿ.ಎಸ್. ಗೋಪಿನಾಥ್, ಸ.ಕಿ.ಪ್ರಾ. ಶಾಲೆ, ಅಂಬೇಡ್ಕರ್ ನಗರ, ಕೋಲಾರ ಜಿಲ್ಲೆ |
| 26 | ಶ್ರೀಮತಿ ಮಧುಮತಿ, ಸ.ಶಿ., ಸ..ಹಿ.ಪ್ರಾ,ಶಾಲೆ, ಶಂಕರನಹಳ್ಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ. |
| 27 | ಶ್ರೀ.ಮನೋಹರ ಚೀಲದ್, ಸ.ಶಿ., ಕೆ.ಎಲ್.ಪಿ.ಎಸ್., ಸತ್ತಿಗೇರಿ ತೋಟ, ಸವದತ್ತಿ, ಬೆಳಗಾವಿ ಜಿಲ್ಲೆ |
| 28 | ಶ್ರೀ ಬಸವರಾಜ. ಪಿ. ಪಾಟೀಲ, ಸಿ.ಆರ್.ಪಿ, ಸಿ.ಆರ್.ಸಿ ಹಳ್ಳೂರ. ತಾ: ಮೂಡಲಗಿ. ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ |
| 29 | ಶ್ರೀ ಗಣೇಶ್ ಕೊಡಿಯ, ಸ.ಶಿ.,ಜಿ.ಎಚ್.ಕೆ.ಪಿ.ಎಸ್, ನಾಗೋಡಾ,. ಜೋಯಿಡಾ, ತಾ. ಶಿರಸಿ ಶೈ. ಜಿಲ್ಲೆ |
| 30 | ಶ್ರೀ ರಜನಿಕಾಂತ್.ಟಿ.ಎಸ್.,ಸ.ಶಿ., ಸ.ಹಿ.ಪ್ರಾ.ಶಾಲೆ, ಸೊನಗಾನ ಹಳ್ಳಿ, ಗೌರಿಬಿದನೂರು ತಾ, ಚಿ.ಬಳ್ಳಾಪುರ ಜಿ |
| 31 | ಶ್ರೀ ನಾಗರಾಜ ನಾಯ್ಕ, ಸ.ಕಿ.ಪ್ರಾ ಶಾಲೆ ಹಿರೇಹದ್ದ ತಾ. ಸಿದ್ದಾಪು ಜಿ ಶಿರಸಿ, ಶೈ.ಜಿಲ್ಲೆ |
| 32 | ಶ್ರೀ ಈಶ್ವರ್ ಜಿ ಭಟ್, ಸಿ.ಆರ್.ಪಿ, ಸಂತೆಗುಳಿ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ. |

DRAFT 2022

| | |
|---|---|
| 33 | ಶ್ರೀಮತಿ ಶಬಾನಾ ಪರ್ವೀನ್ ಶೇಖ್ ಸ.ಶಿ. ಸ.ಹಿ.ಪ್ರಾ ಶಾಲೆ ಅಥರಾಡಿ, ಉಡು.ಪಿ ತಾ/ಜಿಲ್ಲೆ |
| 34 | ಶ್ರೀ ಹೇಮಂತ್ ಕುಮಾರ್ ಜಿ.ಎಸ್, ಸ.ಶಿ., ಜಿ.ಎಂ.ಪಿ.ಎಸ್, ಕೋಡಿಹಳ್ಳಿ, ಕನಕಪುರ, ರಾಮನಗರ ಜಿಲ್ಲೆ |
| 35 | ಶ್ರೀಮತಿ ಚೈತ್ರಾ ಕೆ.ಪಿ. ಸ.ಶಿ., ಸ.ಹಿ.ಪ್ರಾ ಶಾಲೆ, ನುಕ್ಕೂರು, ಉಡುಪಿ ಜಿಲ್ಲೆ |
| 36 | ಶ್ರೀಮತಿ ಲಕ್ಷ್ಮಿ ಶಾಸ್ತ್ರಿ, ಸ.ಶಿ.,ಸ.ಹಿ.ಪ್ರಾ ಶಾಲೆ ಚಂದ್ರಪ್ಪ ಸರ್ಕಲ್, ಬೆಂಗಳೂರು (ದ–01) |
| 37 | **Smt. Samshiya, GHPS Hoodlamane, Tq: Siddapur, Dis: Sirsi Educational District** |
| 38 | **Smt. Vidhya Byakode, KHPS Yaddravi , Ta sauvdatti** |
| 39 | **Smt. Thunga R V GHPS Holalagunda Tq: Kunigal Dist: Tumakur** |
| 40 | **Smt.Ruksana Begum M GHPS Roopanagudi Tq: Ballari East Dist: Ballari** |
| 41 | **Smt. Roopa TC, GHPS Hadigallu, Tq: Thirthahalli, Dist: Shivamogga** |
| 42 | **Sri Shekar GHPS Nakral Thanda Tq: H B Halli Dist: Vijayanagar** |
| 43 | **Sri S Kotresh GHS Ankasmudra Tq: Hagaribommanahalli Dist: Vijayanaga** |
| 44 | ಶ್ರೀ ಮಲ್ಲಿಕಾರ್ಜುನ, ಪ್ರತಿನಿಧಿ, ರೂಂ ಟು ರೀಡ್, ಬೆಂಗಳೂರು |
| 45 | ಶ್ರೀ ದೇವರಾಜ್, ಪ್ರತಿನಿಧಿ, ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ, ಬೆಂಗಳೂರು |
| 46 | ಶ್ರೀಮತಿ ವೀಣಾ, ಸಮಾಲೋಚಕರು, ಯುನಿಸೆಫ್ ಕಾರ್ಯಕ್ರಮ, ಬೆಂಗಳೂರು. |
| 47 | ಶ್ರೀಮತಿ ಚಿತ್ಕಲ, ಕಾರ್ಯಕ್ರಮ ಸಂಯೋಜಕರು, ಟಾಟಾ ಕಲಿಕಾ ಕೇಂದ್ರ, ಬೆಂಗಳೂರು |
| 48 | ಶ್ರೀಮತಿ ನಳಿನಿ ರಾಜ್, ಪ್ರತಿನಿಧಿ, ಅಕ್ಷರ ಪ್ರತಿಷ್ಠಾನ, ಬೆಂಗಳೂರು. |
| 49 | ಶ್ರೀ ಲೋಹಿತಾಶ್ವ ಚಾಮನೂರ, ಪ್ರತಿನಿಧಿ, ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ, ಯಾದಗಿರಿ. |

DRAFT 22.02.22

# ಭಾಗ-೧

DRAFT 22.02

# ಒಳಪುಟಗಳಲ್ಲಿ . . .


| ಕ್ರ.ಸ | | ಪುಟ ಸಂಖ್ಯೆ |
|---|---|---|
| | **ಭಾಗ–1** | |
| **ಅಧ್ಯಾಯ–01** | **ವಿದ್ಯಾಪ್ರವೇಶ–ಅರ್ಥ ಮತ್ತು ಮಹತ್ವ** | |
| | 1.1 ಪೀಠಿಕೆ: | |
| | 1.2 ವಿದ್ಯಾ ಪ್ರವೇಶ – ಏನು? ಮತ್ತು ಏಕೆ? | |
| | 1.3 ವಿದ್ಯಾಪ್ರವೇಶದ ಮಹತ್ವ | |
| | 1.4 ವಿದ್ಯಾ ಪ್ರವೇಶದ ವ್ಯಾಪ್ತಿ | |
| | 1.5 ವಿದ್ಯಾ ಪ್ರವೇಶದ ಉದ್ದೇಶಗಳು | |
| | 1.6 ವಿದ್ಯಾ ಪ್ರವೇಶದ ಬೋಧನಾ ತತ್ವ | |
| | 1.7 ಯೋಜನೆ ಮತ್ತು ನಿರ್ವಹಣೆ | |
| | 1.8 ಮಕ್ಕಳ ಕಲಿಕೆಯಲ್ಲಿ ಪೋಷಕರು ಮತ್ತು ಸಮುದಾಯದ ಸಹಭಾಗಿತ್ವ | |
| | 1.9 ವಿದ್ಯಾರ್ಥಿಗಳ ಪ್ರಗತಿ ಮತ್ತು ಅನುಪಾಲನೆ ಕ್ರಮಗಳು | |
| | 1.10 ಮಾದರಿ ವೇಳಾ ಪಟ್ಟಿ | |
| **ಅಧ್ಯಾಯ–2.** | **ಅಭಿವೃದ್ಧಿ ಗುರಿಗಳು – ಸಾಮರ್ಥ್ಯಗಳು – ಕಲಿಕಾ ಫಲಗಳು** | |
| | 2.1.1 ಅಭಿವೃದ್ಧಿ ಗುರಿ–01<br>**(ಉತ್ತಮ ಆರೋಗ್ಯ ಮತ್ತು ಸ್ವಾಸ್ಥ್ಯ ನಿರ್ವಹಣೆಯಲ್ಲಿ ಮಕ್ಕಳು ಸಮರ್ಥರಾಗುವುದು. ಮುಖ್ಯ ಸಾಮರ್ಥ್ಯಗಳು)** | |
| | 2.1.2 ಅಭಿವೃದ್ಧಿ ಗುರಿ –01ರ ಕಲಿಕಾ ಫಲಗಳ ವಿವರ | |
| | 2.2 ಅಭಿವೃದ್ಧಿ ಗುರಿ–02 – ಪ್ರಥಮ ಭಾಷೆ<br>**(ಪರಿಣಾಮಕಾರಿ ಸಂವಹನಕಾರರಾಗಿ ಮಕ್ಕಳು ರೂಪುಗೊಳ್ಳುವುದು)** | |
| | 2.2.1 ಅಭಿವೃದ್ಧಿ ಗುರಿ–02 ರ ಮುಖ್ಯ ಘಟಕಾಂಶಗಳ ವಿವರ: (Key Components): | |
| | 2.2.2. ಅಭಿವೃದ್ಧಿ ಗುರಿ–02ರ ಮುಖ್ಯ ಸಾಮರ್ಥ್ಯಗಳ ವಿವರ | |
| | 2.2.3 ಅಭಿವೃದ್ಧಿ ಗುರಿ–02 ರ ಕಲಿಕಾ ಫಲಗಳ ವಿವರ | |
| | 2.3 ಅಭಿವೃದ್ಧಿ ಗುರಿ–03<br>**(ಸಕ್ರಿಯ ಕಲಿಕಾರ್ಥಿಗಳಾಗಿ ಪರಿಚಿತ ಪರಿಸರದೊಂದಿಗೆ ಮಕ್ಕಳು ಸಂಪರ್ಕ ಸಾಧಿಸುವುದು)** | |
| | 2.3.1 ಅಭಿವೃದ್ಧಿ ಗುರಿ–03 ರ ಮುಖ್ಯ ಘಟಕಾಂಶಗಳ ವಿವರ | |
| | 2.3.2 ಅಭಿವೃದ್ಧಿ ಗುರಿ–03 ರ ಸಾಮರ್ಥ್ಯಗಳ ವಿವರ | |
| | 3.3.3 ಅಭಿವೃದ್ಧಿ ಗುರಿ–03ರ ಕಲಿಕಾ ಫಲಗಳ ವಿವರ | |
| **ಅಧ್ಯಾಯ–3** | **ವಿದ್ಯಾ ಪ್ರವೇಶದಲ್ಲಿ ಆಟದ ಅವಧಿಗಳು** | |
| | **ಭಾಗ–2** | |
| **ಅಧ್ಯಾಯ–4** | **ವಿದ್ಯಾ ಪ್ರವೇಶದಲ್ಲಿ ಚಟುವಟಿಕೆಗಳು– 90 ದಿನಗಳಿಗೆ ಅನ್ವಯವಾಗುವಂತೆ** | |
| | 4.1 ವಿದ್ಯಾ ಪ್ರವೇಶ 72 ದಿನಗಳ ಚಟುವಟಿಕೆಗಳು | |
| | 4.2 ಮೌಲ್ಯಮಾಪನ ಮಾರ್ಗಸೂಚಿ (01 ನೇ ತಿಂಗಳು) | |
| | 4.3 ಮೌಲ್ಯಮಾಪನ ಮಾರ್ಗಸೂಚಿ (02 ನೇ ತಿಂಗಳು) | |
| | 4.4 ಮೌಲ್ಯಮಾಪನ ಮಾರ್ಗಸೂಚಿ (03 ನೇ ತಿಂಗಳು) | |


DRAFT 2022

# ಅಧ್ಯಾಯ–1

# ವಿದ್ಯಾ ಪ್ರವೇಶ–ಅರ್ಥ ಮತ್ತು ಮಹತ್ವ

## 1.1) ಪೀಠಿಕೆ:

ಹೊಸ ಶಿಕ್ಷಣ ನೀತಿ–2020ನ್ನು ನಾವೀಗಾಗಲೇ ಸ್ವೀಕರಿಸಿದ್ದೇವೆ. ಶಿಕ್ಷಣವನ್ನು ಹೊಸ ದೃಷ್ಟಿಕೋನದ ಅಡಿಯಲ್ಲಿ ನೋಡುವುದರ ಅವಕಾಶ ನಮ್ಮೆಲ್ಲರಿಗೂ ಲಭ್ಯವಾಗಿದೆ. ಜಾಗತಿಕ ಬದಲಾವಣೆಗಳಿಗೆ ಅನುಗುಣವಾಗಿ ಶೈಕ್ಷಣಿಕ ಆಲೋಚನಾ ಕ್ರಮಗಳು, ಬೋಧನಾ ಉಪಕ್ರಮಗಳು ಹಾಗೂ ತರಗತಿ ಪ್ರಕ್ರಿಯೆಗಳೂ ಸಹ ಬದಲಾಗಬೇಕಿದೆ. ಹೊಸ ಹೊಸ ಆವಿಷ್ಕಾರಗಳಿಂದ ಮಗುವಿನ ಮನೋವಿಕಾಸ ಸಾಮರ್ಥ್ಯವು ಸಹ ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ.

ಶಾಲಾ ಶಿಕ್ಷಣವು ಶೈಕ್ಷಣಿಕ ಚಟುವಟಿಕೆಗಳ ಅನುಷ್ಠಾನದ ಭದ್ರ ಬುನಾದಿ ಎಂದೆನಿಸಿದೆ. ಶಾಲಾ ಶಿಕ್ಷಣದ ಮೊದಲ ಹಂತವಾದ ಬುನಾದಿ ಭಾಷಾ ಜ್ಞಾನ ಹಾಗೂ ಬುನಾದಿ ಸಂಖ್ಯಾಜ್ಞಾನ ಕೌಶಲಗಳ ~~ಮೇಲಿನ~~ ಸಮಗ್ರತೆಯ ಅಡಿಯಲ್ಲಿ ಉಳಿದೆಲ್ಲ ಹಂತಗಳ ಬೆಳವಣಿಗೆಯು ಅವಲಂಭಿತವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಈ ಹಿನ್ನೆಲೆಯಲ್ಲಿ ಬುನಾದಿ ಕಲಿಕೆಯ ಹಂತವನ್ನು ಬಲವರ್ಧನೆಗೊಳಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಕೋವಿಡ್ ಸಾಂಕ್ರಾಮಿಕ ಸನ್ನಿವೇಶದಿಂದಾಗಿ ಶಾಲಾಮಕ್ಕಳ ಕಲಿಕೆಯಲ್ಲಿ ಬಹುದೊಡ್ಡ ಕೊರತೆಯನ್ನು ಕಾಣುವಂತಾಯಿತು. ವಿವಿಧ ಪರ್ಯಾಯ ಶೈಕ್ಷಣಿಕ ಮಾರ್ಗಗಳನ್ನು ಹಾಗೂ ಆನ್‌ಲೈನ್ ಮಾಧ್ಯಮದ ಕಲಿಕೆಯನ್ನು ಅನುಷ್ಠಾನಗೊಳಿಸಿದರೂ, ಭೌತಿಕ ತರಗತಿಗಳ ಕಲಿಕಾ ಮಟ್ಟಕ್ಕೆ ತಕ್ಕಂತೆ ನಮ್ಮ ಮಕ್ಕಳ ಕಲಿಕೆಯನ್ನು ಕೊಂಡೊಯ್ಯಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಮಕ್ಕಳ ಕಲಿಕಾ ಕೊರತೆಯನ್ನು ನೀಗಿಸುವುದು ಹೇಗೆ? ಈ ಕೊರತೆಯನ್ನು ನೀಗಿಸಲು ಬೇಕಿರುವ ಸಮಯಾವಕಾಶವಾದರೂ ಎಷ್ಟು? ಶಿಕ್ಷಣದ ಕ್ರಮಿಸುವಿಕೆ ಹಾಗೂ ನಿರಂತರತೆ ಮೊದಲಿನಂತಾಗಲು ಏನು ಮಾಡಬೇಕು? ಎಂಬಿತ್ಯಾದಿ ಪ್ರಶ್ನೆಗಳು ನಮ್ಮನ್ನು ಕಾಡತೊಡಗಿದವು. ಪ್ರಸ್ತುತ ನಮಗೆ ಲಭ್ಯವಾಗುವ ಕಲಿಕಾ ಸಮಯ ಹಾಗೂ ಮಗುವಿನ ಕಲಿಕಾ ಅವಕಾಶದ ಸಮಯಕ್ಕೆ ಚಟುವಟಿಕೆಗಳನ್ನು ರೂಪಿಸುತ್ತಾ ಮತ್ತು ಅಳವಡಿಸುತ್ತಾ ಕಲಿಕಾ ಕೊರತೆಯನ್ನು ನೀಗಿಸುವ ಸವಾಲಿನೆಡೆಗೆ ನಮ್ಮ ಜವಾಬ್ದಾರಿಯನ್ನು ಹೊಂದಿಸಿಕೊಳ್ಳುವ ಅನಿವಾರ್ಯತೆ ಈಗ ಎದುರಾಗಿದೆ. ಈ ನಿಟ್ಟಿನಲ್ಲಿ ಪ್ರತಿ ಶಿಕ್ಷಕರೂ ಬದ್ಧತೆಯಿಂದ ಸಕ್ರಿಯವಾಗಿ ಕಾರ್ಯ ನಿರ್ವಹಿಸುವ ಅಗತ್ಯತೆ ~~ಜರೂರು~~ ಹಿಂದೆಂದಿಗಿಂತಲೂ ಇಂದು ತೀವ್ರವಾಗಿದೆ. ಈ ಹಿನ್ನೆಲೆಯಲ್ಲಿ ಈ ಸಾಹಿತ್ಯವನ್ನು ಅವಲೋಕಿಸಲು ಮತ್ತು ಚಟುವಟಿಕೆಗಳೊಂದಿಗೆ ಪ್ರಕ್ರಿಯೆಯನ್ನು ಅರ್ಥೈಸಿಕೊಳ್ಳಲು ಶಿಕ್ಷಕರನ್ನು ಕೋರಲಾಗಿದೆ.

**ಬುನಾದಿ ಹಂತದ ಐದು ವರ್ಷಗಳ ಶಾಲಾ ಶಿಕ್ಷಣದ ಸಂರಚನೆ**

**ಬುನಾದಿ ಅಕ್ಷರ ಮತ್ತು ಸಂಖ್ಯಾ ಜ್ಞಾನ**
**6 ವರ್ಷ ( 3 ರಿಂದ 9 ವರ್ಷ)**

| | | | | | |
|---|---|---|---|---|---|
| ಪೂರ್ವ ಪ್ರಾಥಮಿಕ–1 (3–4 ವರ್ಷ) | ಪೂರ್ವ ಪ್ರಾಥಮಿಕ–2 (4–5 ವರ್ಷ) | ಪೂರ್ವ ಪ್ರಾಥಮಿಕ–3 (5–6 ವರ್ಷ) ಬಾಲವಾಟಿಕಾ | ವಿದ್ಯಾ ಪ್ರವೇಶ<br>ತರಗತಿ–1 (6–7 ವರ್ಷ) | ತರಗತಿ–2 (7–8 ವರ್ಷ) | ತರಗತಿ–3 (8–9 ವರ್ಷ) |

DRAFT 2022

# ಶಿಕ್ಷಕರ ಅರಿವಿಗೊಂದು ಟಿಪ್ಪಣಿ

**ಆತ್ಮೀಯ ಶಿಕ್ಷಕರೇ,**

ಕೋವಿಡ್ ಸಾಂಕ್ರಾಮಿಕ ಸನ್ನಿವೇಶದಿಂದಾಗಿ ನಿಮ್ಮೆಲ್ಲರನ್ನು ಹತ್ತಿರದಿಂದ ಕಾಣಲು ಹಾಗೂ ಮಾರ್ಗದರ್ಶಿಸಲು ಸಾಧ್ಯವಾಗಲಿಲ್ಲ. ಮಗುವಿಗೆ ಎದುರಾದ ಕಲಿಕಾ ಕೊರತೆಯಂತೆಯೇ ತಮಗೂ ಸಹ ಅನೇಕ ಸಂದಿಗ್ಧ ಪರಿಸ್ಥಿತಿಗಳು ಕಾಡಿರ ಬಹುದು. ಭೌತಿಕ ತರಗತಿಗಳ ನಿರ್ವಹಣೆ ಸಮರ್ಪಕವಾಗಿ ಸಾಧ್ಯವಾಗದ ಕಾರಣ ಲಭ್ಯ ಅವಕಾಶದಲ್ಲಿ ಮಕ್ಕಳ ಕಡೆಗೆ ಆದಷ್ಟು ಗಮನ ಹರಿಸಲು ತಾವೆಲ್ಲರೂ ವಿವಿಧ ಪರ್ಯಾಯ ಶೈಕ್ಷಣಿಕ ಮಾರ್ಗಗಳನ್ನು ಅಳವಡಿಸಿಕೊಂಡಿದ್ದೀರಿ. ಸಕಾಲಕ್ಕೆ ಶಾಲೆ/ತರಗತಿಗಳು ನಡೆಯದೇ ಇದ್ದರೂ ಸಂದರ್ಭಕ್ಕೆ ಹೊಂದಿಕೊಳ್ಳುವ ವಿಧಾನಗಳನ್ನು ಮತ್ತು ಮಾಧ್ಯಮಗಳನ್ನು ಬಳಕೆ ಮಾಡಿಕೊಳ್ಳುವ ಮೂಲಕ ಮಗುವನ್ನು ಸಂಧಿಸಲು ಪ್ರಯತ್ನ ಪಟ್ಟಿರುವುದು ಶ್ಲಾಘನೀಯ.

2022–23ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪೂರಕವಾಗಿ ವಿದ್ಯಾಪ್ರವೇಶ ಎಂಬ ವಿನೂತನ ಶಾಲಾ ಸಿದ್ಧತಾ ಕಾರ್ಯಕ್ರಮದ ಮೂಲಕ ತಮ್ಮೆಲ್ಲರನ್ನು ಆತ್ಮೀಯವಾಗಿ ಸ್ವಾಗತಿಸುತ್ತಿದ್ದೇವೆ. ಮೂರು ತಿಂಗಳ ಶಾಲಾ ಸಿದ್ಧತಾ ಕಾರ್ಯಕ್ರಮವು 01ನೇ ತರಗತಿಗೆ ಪೂರಕವಾಗಿ ರೂಪುಗೊಂಡಿದ್ದರೂ, ಎಲ್ಲಾ ಹಂತದ ತರಗತಿಗಳಿಗೂ ಶಾಲಾ ಸಿದ್ಧತೆ ಎಂಬುದು ಅನಿವಾರ್ಯ ಮತ್ತು ಅತ್ಯಗತ್ಯ. ಏಕೆಂದರೆ, ಪ್ರತೀ ಮಗುವೂ ಕಲಿಕಾ ಕಂದರವನ್ನು ಅನುಭವಿಸಿ ಬಂದಿದೆ ಎಂಬುದನ್ನು ನಾವು ಒಪ್ಪಲೇಬೇಕು.

ಮಗುವನ್ನು ಶಾಲಾ ಸನ್ನಿವೇಶಕ್ಕೆ ಸಿದ್ಧಗೊಳಿಸುವ ಸಂದರ್ಭದಲ್ಲಿ ಅನೇಕ ಅಂಶಗಳ ಕಡೆಗೆ ನಾವು ಗಮನ ಹರಿಸಬೇಕಾಗುತ್ತದೆ. ಕೇವಲ ಭೌತಿಕವಾಗಿ ತರಗತಿ ಪ್ರಕ್ರಿಯೆಗೆ ಹೊಂದಿಸುವುದು ಮಾತ್ರವಲ್ಲದೆ, ಭಾವನಾತ್ಮಕವಾಗಿ ಹಾಗೂ ಸಾಮಾಜಿಕವಾಗಿ ಹೊಂದಿಸುವುದು ತೀರಾ ಅಗತ್ಯ. ಈ ಹಿನ್ನೆಲೆಯಲ್ಲಿ 03 ಮುಖ್ಯ ಗುರಿಗಳನ್ನು ಪ್ರಧಾನವಾಗಿರಿಸಿಕೊಂಡು ವಿದ್ಯಾ ಪ್ರವೇಶ ಕಾರ್ಯಕ್ರಮವು ರೂಪುಗೊಂಡಿದೆ. ಅವುಗಳೆಂದರೆ,

**1 ಉತ್ತಮ ಆರೋಗ್ಯ ಮತ್ತು ಸ್ವಾಸ್ಥ್ಯ ನಿರ್ವಹಣೆಯಲ್ಲಿ ಮಕ್ಕಳು ಸಮರ್ಥರಾಗುವುದು.**

**2 ಪರಿಣಾಮಕಾರಿ ಸಂವಹನಕಾರರಾಗಿ ಮಕ್ಕಳು ರೂಪುಗೊಳ್ಳುವುದು.**

**3 ಸಕ್ರಿಯ ಕಲಿಕಾರ್ಥಿಗಳಾಗಿ, ಪರಿಚಿತ ಪರಿಸರದೊಂದಿಗೆ ಮಕ್ಕಳು ಸಂಪರ್ಕ ಸಾಧಿಸುವುದು.**

- ಈ ಮೂರು ಮುಖ್ಯ ಗುರಿಗಳು ಪರಸ್ಪರ ಅವಲಂಭಿತವಾಗಿದ್ದು, ಸಾಮರ್ಥ್ಯಗಳ ಬೆಳವಣಿಗೆಗೆ ಅವಕಾಶ ನೀಡುವುದರ ಜೊತೆಗೆ ಮಕ್ಕಳ ಸಮಗ್ರ ವಿಕಾಸಕ್ಕೆ ಅನುವು ಮಾಡಿಕೊಡುತ್ತವೆ.

- **'ಉತ್ತಮ ಆರೋಗ್ಯ ಮತ್ತು ಸ್ವಾಸ್ಥ್ಯ'** ಎಂಬ ಗುರಿಯು ಭೌತಿಕ ಅಭಿವೃದ್ಧಿ, ಪೌಷ್ಠಿಕತೆ ಹಾಗೂ ಉತ್ತಮ ಆರೋಗ್ಯಕರ ಅಭ್ಯಾಸದ ಸಾಮರ್ಥ್ಯಗಳ ಬೆಳವಣಿಗೆ ಕಡೆಗೆ ಗಮನ ಹರಿಸುತ್ತದೆ. **'ಪರಿಣಾಮಕಾರಿ ಸಂವಹನಕಾರು'** ಎಂಬ ಗುರಿಯು ಕೇವಲ ಭಾಷಾ ಸಂವಹನ ಕೌಶಲದ ಕಡೆಗೆ ಗಮನ ಹರಿಸದೆ, ಸಂಖ್ಯಾ ಜ್ಞಾನದ ಭೌದ್ಧಿಕ ಅಂಶಗಳು ಮತ್ತು ಭಾವನಾತ್ಮಕ ಅಭಿವೃದ್ಧಿಯ ಅಂಶಗಳ ಸಂವಹನದ ಕಡೆಗೂ ಗಮನ ಹರಿಸುತ್ತದೆ. **'ಸಕ್ರಿಯ ಕಲಿಕಾರ್ಥಿ'**ಗಳು ಎಂಬ ಗುರಿಯು ಸ್ಥಳೀಯ ಪರಿಸರದೊಂದಿಗೆ ತಕ್ಷಣವೇ ಪ್ರತಿಸ್ಪಂದನೆಗೊಳ್ಳಲು ಹಾಗೂ ಪರಿಸರದ ಅರಿವಿನೊಂದಿಗೆ ಬುನಾದಿ ಶಿಕ್ಷಣ ಹಂತದ ಕಲಿಕಾಂಶಗಳನ್ನು ಗ್ರಹಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ, ಈ ಗುರಿಗಳಲ್ಲಿನ ಸಾಮರ್ಥ್ಯಗಳು ಹಾಗೂ ಕಲಿಕಾ ಫಲಗಳು ಭೌತಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸ್ವಾಭಾವಿಕ ಪರಿಸರದ ಪ್ರತಿಸ್ಪಂದನೆಗೆ ಮತ್ತು ಬೆಳವಣಿಗೆ ವಿಫುಲ ಅವಕಾಶಗಳನ್ನು ಒದಗಿಸಿಕೊಡುತ್ತವೆ.

- ವಿದ್ಯಾ ಪ್ರವೇಶ ಕಾರ್ಯಕ್ರಮದಲ್ಲಿನ ಎಲ್ಲಾ ಚಟುವಟಿಕೆಗಳು ಮತ್ತು ಕಲಿಕಾ ಹಾಳೆಗಳು ಮೂರೂ ಗುರಿಗಳ ಅಡಿಯಲ್ಲಿ ನಿರೂಪಿಸಲಾಗಿರುವ ಸಾಮರ್ಥ್ಯಗಳ ಕಲಿಕೆಗೆ ಪೂರಕವಾಗಿ ಸಿದ್ಧಗೊಂಡಿವೆ. ಇವುಗಳ ಮುಖ್ಯ ಉದ್ದೇಶ ಗುರಿವಾರು ನಿಗದಿಪಡಿಸರುವ ಸಾಮರ್ಥ್ಯ ಹಾಗೂ ಕಲಿಕಾ ಫಲಗಳನ್ನು ಪ್ರತಿ ವಿದ್ಯಾರ್ಥಿಯೂ ಸಾಧಿಸುವಂತಾಗಬೇಕು ಎಂಬುದಾಗಿದೆ.

***ವಿದ್ಯಾ ಪ್ರವೇಶ ಸಾಹಿತ್ಯದಲ್ಲಿ ಸೂಚಿಸಲಾಗಿರುವ ಚಟುವಟಿಕೆಗಳು ಸಲಹಾತ್ಮಕವಾಗಿದ್ದು ಶಿಕ್ಷಕರು ಸ್ಥಳೀಯ ಅವಶ್ಯಕತೆಗಳಿಗೆ ತಕ್ಕಂತೆ ಅವುಗಳಲ್ಲಿ ಮಾರ್ಪಾಡು ಮಾಡಿಕೊಳ್ಳಬಹುದು. ಮಗುವಿನ ಅಗತ್ಯತೆ, ಆಸಕ್ತಿ, ಭಿನ್ನತೆ, ಅರ್ಥೈಸಿಕೊಳ್ಳುವ ಕ್ರಮ ಅನುಸರಿಸಿ ಕಲಿಕಾ ಹಾಳೆಗಳನ್ನು ಪುನರ್ ರೂಪಿಸಿ ಕೊಳ್ಳಬಹುದು. ಮಕ್ಕಳ ಕಲಿಕೆಗೆ ಹಾಗೂ ಕಲಿಕಾ ಸಮಯಕ್ಕೆ ಸೂಕ್ತವಾಗುವಂತೆ ಕೆಲವು ಚಟುವಟಿಕೆಗಳನ್ನು ಪುನರಾವರ್ತಿಸಲು ಅವಕಾಶ ಕಲ್ಪಿಸಿದೆ. ಮಕ್ಕಳನ್ನು ಹೆಚ್ಚು ಹೆಚ್ಚು ತೊಡಗಿಸಿ ಕೊಳ್ಳುವುದರ ಜೊತೆಗೆ ಕಲಿಕೆಯನ್ನು ದೃಡೀಕರಣ ಮಾಡುವುದು ಸಹ ಶಿಕ್ಷಕರ ಜವಾಬ್ದಾರಿಯಾಗಿದೆ.***

- ಈ ಕೈಪಿಡಿಯಲ್ಲಿ ಶಿಕ್ಷಕರ ಅನುಕೂಲಕ್ಕಾಗಿ ಪ್ರಮುಖವಾಗಿ ಎರಡು ಭಾಗಗಳನ್ನು ಮಾಡಿಕೊಳ್ಳಲಾಗಿದೆ. ಭಾಗ ಒಂದರಲ್ಲಿ ವಿದ್ಯಾಪ್ರವೇಶ ಕುರಿತಂತೆ ಅರ್ಥೈಸುವಿಕೆ, ಗುರಿವಾರು ಸಾಮಥ್ಯಗಳು ಮತ್ತು ಕಲಿಕಾ ಫಲಗಳು ಹಾಗೂ ಆಟದ ಅವಧಿಗಳಿಗೆ ಸಂಬಂಧಿಸಿದ ವಿವರಗಳನ್ನು ಕಾಣಬಹುದು. ಭಾಗ ಎರಡರಲ್ಲಿ ದಿನವಾರು ಅನುಷ್ಠಾನಗೊಳಿಸಬೇಕಾದ ಚಟುವಟಿಕೆಗಳ ವಿವರಗಳನ್ನು ಕಾಣಬಹುದು.

DRAFT 22.02.22

➢ ಈಗಾಗಲೇ ವಿವರಿಸಿರುವ ಮೂರು ಗುರಿಗಳು ಪರಸ್ಪರ ಅವಲಂಭಿತವಾಗಿದ್ದು, ಮೂಲ ಸಾಮರ್ಥ್ಯ ಕಲಿಕೆಯ ಕಡೆಗೆ ಗಮನ ಹರಿಸುತ್ತವೆ. ಗುರಿಗಳ ಅಡಿಯಲ್ಲಿ ವಿನ್ಯಾಗೊಳಿಸುವ ಯಾವುದೇ ಕಲಿಕಾ ಅವಕಾಶಗಳು ಎಲ್ಲಾ ಮಕ್ಕಳನ್ನು (ಲಿಂಗಬೇಧವಿಲ್ಲದೆ) ಒಳಗೊಳ್ಳುವಂತೆ ರೂಪಿತವಾಗಬೇಕು. ದಿವ್ಯಾಂಗ ಮಕ್ಕಳ ಭಾಗವಹಿಸುವುವಿಕೆ ಕಲಿಕಾ ಪ್ರಕ್ರಿಯೆಯಲ್ಲಿ ಪ್ರಮುಖ ಆದ್ಯತೆಯಾಗಿದ್ದು ಅಂತಹ ಮಕ್ಕಳ ಅಗತ್ಯತೆ ಅಥವಾ ಕೊರತೆಗೆ ಪೂರಕಾವಾಗಿ ಕಲಿಕಾ ಸಮಯವಾಗಲಿ, ಅವಕಾಶವಾಗಲೀ ಹೆಚ್ಚು ಹೆಚ್ಚು ವಿನ್ಯಾಸಗೊಳ್ಳಬೇಕು.

➢ ವಿದ್ಯಾ ಪ್ರವೇಶ ಸಿದ್ಧತಾ ಕಾರ್ಯಕ್ರಮವು **'ಆಡುತ್ತಾ ಕಲಿ'** ತತ್ವವನ್ನು ಕೇಂದ್ರೀಕರಿಸಿದ್ದು ಸ್ಥಳೀಯವಾಗಿ ಲಭ್ಯವಾಗುವ ಸಾಮಗ್ರಿಗಳನ್ನು ಮಕ್ಕಳ ಕಲಿಕೆಗೆ ಒದಗಿಸಿ ಕೊಡುವುದು. **ಉದಾಹರಣೆಗೆ** ಗೊಂಬೆಗಳು, ವಿವಿಧ ರೀತಿಯ ಆಟಿಕೆಗಳು, ಪರಿಸರದಿಂದ ಸಂಗ್ರಹಿಸಿದ ಇತರೆ ಸಾಮಗ್ರಿಗಳು, ಆಸಕ್ತಿದಾಯಕ, ಕುತೂಹಲಭರಿತ ಪುಸ್ತಕಗಳು/ ಚಿತ್ರಸರಣಿಗಳು/ಕಥಾ ಸರಣಿಗಳು ಇತ್ಯಾದಿ. ಮಗುವನ್ನು ಸಕ್ರಿಯಗೊಳಿಸುವ ಪರಿಕರಗಳ ಸಂಗ್ರಹಣೆ ಅತ್ಯಗತ್ಯ. ಬಳಕೆ ಮಾಡುವ ಯಾವುದೇ ಆಟಿಕೆಗಳಾಗಲೀ/ ಪರಿಕರಗಳಾಗಲೀ ಮಗುವಿಗೆ ಹಾನಿಮಾಡದಂತೆ ನೋಡಿಕೊಳ್ಳುವುದು.

ಶಾಲಾ ಸಿದ್ಧತೆಯ ಚಟುವಟಿಕೆಗಳು ದಿನವೊಂದಕ್ಕೆ 04 ಗಂಟೆಗಳಂತೆ, ವಾರದ 05 ದಿನಗಳ ಕಲಿಕಾ ಪ್ರಕ್ರಿಯೆಗೆ ಯೋಜಿತ ಗೊಂಡಿವೆ. ಒಂದು ವೇಳೆ ನಿಗದಿ ಪಡಿಸಿದ 04 ಗಂಟೆಗಳಲ್ಲಿ ಚಟುವಟಿಕೆಗಳನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಲು ಸಾಧ್ಯವಾಗದಿದ್ದರೆ, ಪ್ರಕ್ರಿಯೆಗೆ ತಕ್ಕಂತೆ ಅಗತ್ಯ ಮಾರ್ಪಾಡು ಮಾಡಿಕೊಳ್ಳುವುದು. ಶನಿವಾರದಂದು ಪುನರ್ಮನನಕ್ಕೆ ಅವಕಾಶ ಕಲ್ಪಿಸಿದೆ. ಈ ಸಂದರ್ಭದಲ್ಲಿ ಕಳೆದ ದಿನಗಳ ಚಟುವಟಿಕೆಗಳನ್ನು ಮಕ್ಕಳು ಪುನರ್ಮನನ ಮಾಡಿ ಕೊಳ್ಳುವುದರೊಂದಿಗೆ ಶಿಕ್ಷಕರು ಮುಂದಿನ ವಾರಕ್ಕೆ ಯೋಜನೆ ರೂಪಿಸಿಕೊಳ್ಳಲು ಶನಿವಾರವನ್ನು ಸದ್ಬಳಕೆ ಮಾಡಿಕೊಳ್ಳುವುದು.

## 1.2) ವಿದ್ಯಾ ಪ್ರವೇಶ – ಏನು ಮತ್ತು ಏಕೆ?

➢ ಹೊಸ ಶಿಕ್ಷಣ ನೀತಿ–2020ರ ಆಶಯದಂತೆ ಒಂದನೇ ತರಗತಿಯ ಮಕ್ಕಳಿಗೆ ಮೂರು ತಿಂಗಳ ಅಥವಾ 12 ವಾರಗಳ **'ಆಡುತ್ತ ಕಲಿಯುವ'** ಶಾಲಾ ಸಿದ್ಧತಾ ಕಾರ್ಯಕ್ರಮದ ಭಾಗವಾಗಿ **'ವಿದ್ಯಾ ಪ್ರವೇಶ'**ವನ್ನು ಶಿಫಾರಸ್ಸು ಮಾಡಲಾಗಿದೆ.

➢ ಕೋವಿಡ್ ಸಾಂಕ್ರಾಮಿಕ ಸನ್ನಿವೇಶದಿಂದಾಗಿ ಶಾಲಾ ಶಿಕ್ಷಣದಿಂದ ದೂರ ಉಳಿದ ಮಕ್ಕಳನ್ನು ಶಾಲಾ ಸನ್ನಿವೇಶಕ್ಕೆ ಆತ್ಮೀಯವಾಗಿ ಆಹ್ವಾನಿಸಲು, ಕಲಿಕಾ ಪ್ರಕ್ರಿಯೆಗೆ ಅವರನ್ನು ಮರುಹೊಂದಾಣಿಕೆ ಮಾಡಿಕೊಳ್ಳಲು ಇದರಲ್ಲಿ ಅವಕಾಶವನ್ನು ಕಲ್ಪಿಸಿದೆ.

➢ ಎಲ್ಲಾ ಮಕ್ಕಳಿಗೂ ಮನೆ ಮತ್ತು ಶಾಲೆಯಲ್ಲಿ ಸಂತಸದಾಯಕ, ಭಾವನಾತ್ಮಕ, ಸುರಕ್ಷಿತ ಕಲಿಕಾ ವಾತಾವರಣವನ್ನು ಉದ್ದೀಪನಗೊಳಿಸುವುದರ ಅಗತ್ಯತೆ ಬಗ್ಗೆ ಇದು ಮಾರ್ಗದರ್ಶಿಸುತ್ತದೆ.

➢ ಒತ್ತಡ ಮುಕ್ತ ವಾತಾವರಣದಲ್ಲಿ ಮಕ್ಕಳು ಸಂತಸದಾಯಕವಾಗಿ ಕಲಿಯುವ ಅವಕಾಶಗಳೊಂದಿಗೆ ದಿವ್ಯಾಂಗ ಮಕ್ಕಳ ಅಗತ್ಯತೆಯನ್ನೂ ಗುರುತಿಸಿಕೊಳ್ಳುವುದರ ಕಡೆಗೂ ಆದ್ಯ ಗಮನ ನೀಡುತ್ತದೆ.

➢ ಮಗುವಿನ ಮಾತೃಭಾಷೆ ಅಥವಾ ಮನೆಯ ಭಾಷೆಯನ್ನು ಸ್ವೀಕರಿಸುವುದರ ಜೊತೆಗೆ ಉಳಿದ ಭಾಷಾ ಕಲಿಕೆಗೂ ತರಗತಿ ಕೋಣೆಗಳು ಅವಕಾಶ ಕಲ್ಪಿಸಬೇಕು ಎಂಬುದನ್ನು ನಿರ್ದೇಶಿಸುತ್ತಾ ಸಂಕೇತ ಭಾಷೆಯ ಅಳವಡಿಕೆಗೂ ಅವಕಾಶ ಮಾಡಿಕೊಡುತ್ತದೆ.

## 1.3 ವಿದ್ಯಾ ಪ್ರವೇಶದ ಮಹತ್ವ:

✓ ಹೊಸ ಶಿಕ್ಷಣ ನೀತಿ–2020ರ ಆಶಯದಂತೆ ವಿದ್ಯತಾಪ್ರವೇಶ ರೂಪುಗೊಂಡಿದ್ದರೂ ದೇಶಾದ್ಯಂತ ಗಮನ ಸೆಳೆಯುವ ಶಾಲಾ ಸಿದ್ಧತಾ ಕಾರ್ಯಕ್ರಮವಾಗಿದೆ.

✓ ಒಂದನೇ ತರಗತಿಯ ಕಲಿಕೆಗೆ ಮಗುವನ್ನು ಬೌದ್ಧಿಕವಾಗಿ, ದೈಹಿಕವಾಗಿ, ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಸಿದ್ಧಗೊಳಿಸುವುದರ ಚೌಕಟ್ಟನ್ನು ರೂಪಿಸಿಕೊಡುತ್ತದೆ.

✓ ಮಗುವಿನ ಮುಕ್ತ ಕಲಿಕೆಯನ್ನು ಮನೋವಿಕಾಸ ವಲಯದಿಂದ ಶೈಕ್ಷಣಿಕ ಮನೋವಿಜ್ಞಾನ ವಲಯದ ಕಡೆಗೆ ನಿರ್ದೇಶಿಸಲು ಯೋಜಿತ ಚಟುವಟಿಕೆಗಳನ್ನು ರೂಪಿಸಲು ಅವಕಾಶ ಕಲ್ಪಿಸುತ್ತದೆ.

✓ ಯೋಜಿತ ತರಗತಿ ಪ್ರಕ್ರಿಯೆಯಲ್ಲಿ ಕಲಿಕಾ ಸಮಯ ಮತ್ತು ಕಲಿಯುವ ಅವಕಾಶದ ಸಮಯವನ್ನು ಸದ್ಭಳಕೆ ಮಾಡಿಕೊಳ್ಳಲು ದಿನವಾರು ವಾರವಾರು ಚಟುವಟಿಕೆಗಳ ನಿರ್ವಹಣೆಗೆ ಮಹತ್ವ ಕಲ್ಪಿಸುತ್ತದೆ.


✓ ಮೂರು ತಿಂಗಳು ಅಥವಾ ಹನ್ನೆರಡು ವಾರಗಳ ಕಲಿಕೆಯೊಂದಿಗೆ ವಿಕಾಸ–ಬೆಳವಣಿಗೆ–ಅಭಿವೃದ್ಧಿ ಅಡಿಯಲ್ಲಿ ದಿನದಿಂದ ದಿನಕ್ಕೆ ಪ್ರತಿ ಮಗುವು ಬೆಳೆಯಲು ವಿಫುಲವಾದ ಅವಕಾಶಗಳನ್ನು ಸೃಜಿಸುತ್ತದೆ.

✓ ಗ್ರಹಣ ಶಕ್ತಿ, ಕಲ್ಪನಾ ಶಕ್ತಿ, ಊಹಾ ಶಕ್ತಿಗಳ ವೃದ್ಧಿಗೆ ಪ್ರಾಮುಖ್ಯತೆಯನ್ನು ನೀಡಿದ್ದು ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ವಿವಿಧ ಆಯಾಮಗಳಲ್ಲಿ ಕೆಲಸ ಮಾಡುವ ಅವಕಾಶವನ್ನು ಕಲ್ಪಿಸಿದೆ.

DRAFT 22.02.22

- ✓ ಮುಕ್ತ ಮತುಕತೆ, ಹೊರಾಂಗಣ/ಒಳಾಂಗಣಗಳ ಅರಿವು, ಸ್ಥಳೀಯ ಪರಿಸರದೊಂದಿಗೆ ಸಂಖ್ಯಾ ಜ್ಞಾನ, ಸ್ನಾಯು ಚಲನಾ ಕೌಶಲ, ಕಥಾ ಸಮಯ, ಆಡುವ ಸಮಯಗಳಲ್ಲಿ ತೊಡಗಿಸಿಕೊಳ್ಳುತ್ತಾ, ಭಾಷಾ ಅಭಿವೃದ್ಧಿಯೊಂದಿಗೆ ಉತ್ತಮ ಸಂವಹನಕಾರರಾಗುವಂತೆ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲು ಬೆಳಕು ಚೆಲ್ಲುತ್ತದೆ.
- ✓ ಮಗುವನ್ನು ಉದ್ದೇಶಿತ ಕಲಿಕೆಯ ಕಡೆಗೆ ನಿರ್ದೇಶಿಸುವುದರ ಕ್ರಮ, ಪ್ರಕ್ರಿಯೆಯ ವಿಧಾನ ಹಾಗೂ ಅಪೇಕ್ಷಿತ ಸಾಧನೆಯನ್ನು ಸ್ವಯಂ ಗುರುತಿಸಿಕೊಳ್ಳುವುದರ ಜೊತೆಗೆ ಶಿಕ್ಷಕರು ಸ್ವಮೌಲ್ಯಮಾಪನ ಮಾಡಿಕೊಳ್ಳುವಂತೆ ಪ್ರೇರೇಪಿಸುತ್ತದೆ.

## 1.4) ವಿದ್ಯಾ ಪ್ರವೇಶದ ವ್ಯಾಪ್ತಿ:




- ❖ ಒಂದನೇ ತರಗತಿಯ ಆರಂಭಿಕ ಮೂರು ತಿಂಗಳು ಅಥವಾ 12 ವಾರಗಳು.
- ❖ ಶಾಲಾ ಶಿಕ್ಷಣದ ಆರಂಭಿಕ ಐದು ವರ್ಷಗಳ ಎಫ್.ಎಲ್.ಎನ್. ಹಂತದಲ್ಲಿ ಇದರ ವ್ಯಾಪ್ತಿಯನ್ನು ಗುರುತಿಸಬಹುದು.
- ❖ ಪ್ರತಿ ದಿನ ನಾಲ್ಕು ಗಂಟೆಗಳಂತೆ ವಾರದ ಐದು ದಿನಗಳಿಗೆ ಕಲಿಕಾ ಅವದಿಗಳನ್ನು ನಿಗದಿ ಪಡಿಸಿದೆ.
- ❖ ಕಲಿಕಾ ಅವಧಿಯ ನಾಲ್ಕು ಗಂಟೆಗಳು ನಮ್ಯವಗಿದ್ದು, ನಿಗದಿ ಪಡಿಸಿದ ಚಟುವಟಿಕೆಗಳಿಗೆ ತಕ್ಕಂತೆ ಸಮಯವನ್ನು ಹೊಂದಾಣಿಕೆ ಮಾಡಿಕೊಳ್ಳಲು ಶಿಕ್ಷಕರಿಗೆ ಮುಕ್ತ ಅವಕಾಶ ಕಲ್ಪಿಸಿದೆ.
- ❖ ಪ್ರತಿ ಶನಿವಾರದ ಅವಧಿಗಳನ್ನು ವಾರದ ಚಟುವಟಿಕೆಗಳ ಪುನರಾವರ್ತನೆ ಹಾಗೂ ಮುಂದಿನ ವಾರದ ಕಾರ್ಯಯೋಜನೆಗೆ ಮೀಸಲಿಟ್ಟಿದೆ.


## 1.5) ವಿದ್ಯಾ ಪ್ರವೇಶದ ಉದ್ದೇಶಗಳು:

- ✓ ವಿವಿಧ ಸನ್ನಿವೇಶ/ಹಿನ್ನೆಲೆಗಳಿಂದ ಶಾಲೆಯನ್ನು ಪ್ರವೇಶಿಸುವ ವಿದ್ಯಾರ್ಥಿಗಳಲ್ಲಿ ಶಾಲಾ ಸಿದ್ಧತೆಯೊಂದಿಗೆ ಒಂದನೇ ತರಗತಿ ಕಲಿಕೆಗೆ ಅಣಿಗೊಳಿಸುವುದು.
- ✓ ಸರಳ/ಮೃದು ಧೋರಣೆಯೊಂದಿಗೆ ಒಂದನೇ ತರಗತಿ ಕಲಿಕೆಗೆ ಮಕ್ಕಳನ್ನು ಮಾನಸಿಕವಾಗಿ, ಭಾವನಾತ್ಮಕವಾಗಿ, ಶಾರೀರಿಕವಾಗಿ ಸಿದ್ಧಗೊಳಿಸುವುದು.
- ✓ ಆಟ ಕೇಂದ್ರಿತ, ಸಂತಸದಾಯಕ ವಾತಾವರಣದಲ್ಲಿ, ವಯೋಮಾನ ಆಧರಿಸಿದ ಯುಕ್ತ ಕಲಿಕಾ ಅನುಭವಗಳನ್ನು ಒದಗಿಸಿಕೊಡುವ ಮೂಲಕ ಸಮಗ್ರ ಅಭಿವೃದ್ಧಿಯ ಕಡೆಗೆ ಮಕ್ಕಳನ್ನು ಮನ್ನಡೆಸುವುದು.
- ✓ ಆಟಗಳ ಮೂಲಕ ಓದು–ಬರಹದ ಕಲಿಕೆ ಮತ್ತು ಸಂಖ್ಯಾ ಜ್ಞಾನ ಕೌಶಲವನ್ನು ಗಳಿಸುವುದರೊಂದಿಗೆ ಬುನಾದಿ ಸಾಮರ್ಥ್ಯಗಳಲ್ಲಿ ಹಿಡಿತ ಸಾಧಿಸುವುದು.

DRAFT 22.02.22

## 1.6) ವಿದ್ಯಾ ಪ್ರವೇಶದ ಬೋಧನಾ ತತ್ವ:

- ಬೋಧನಾ ತತ್ವಗಳಲ್ಲಿ ಶಿಕ್ಷಕರು ವಿದ್ಯಾಪ್ರವೇಶದ ಬೋಧನಾ ತತ್ವವು ಪ್ರಮುಖವಾಗಿ ಆಟ ಕೇಂದ್ರಿತವಾಗಿದ್ದು ಭೌದ್ಧಿಕ, ಭಾವನಾತ್ಮಕ ಮತ್ತು ಸ್ಥೂಲ ಸ್ನಾಯು ಚಲನಾ ಕೌಶಲಗಳ ಸಾಮರ್ಥ್ಯ ವೃದ್ಧಿಯೊಂದಿಗೆ ಬುನಾದಿ ಅಕ್ಷರ ಮತ್ತು ಸಂಖ್ಯಾ ಜ್ಞಾನದ ಕಲಿಕೆಯೆಡೆಗೆ ಮಕ್ಕಳನ್ನು ಪ್ರೇರೇಪಿಸುತ್ತದೆ. ಮಗುವಿನ ಆಸಕ್ತಿ ಅಭಿರುಚಿಗಳನ್ನು ಪೋಷಿಸುವ ಮೂಲಕ ಅನ್ವೇಷಣೆ, ಸಮಸ್ಯೆ ಪರಿಹಾರ, ತಾರ್ಕಿಕ ಆಲೋಚನೆಗಳೊಂದಿಗೆ ಅವರ ಗ್ರಹಣ ಶಕ್ತಿ, ಕಲ್ಪನಾ ಶಕ್ತಿ, ಊಹಾ ಶಕ್ತಿಯ ವಿಸ್ತರಣೆಗೆ ಅಕಾಶವನ್ನು ಕಲ್ಪಿಸಿ ಕೊಡುತ್ತದೆ. ಈ ತತ್ವದಲ್ಲಿ ಶಿಕ್ಷಕರು ಗಮನಿಸಬೇಕಾದ ಅಂಶವೆಂದರೆ 03 ಘಟಕಗಳ ಅಡಿಯಲ್ಲಿ ಮಕ್ಕಳ ಕಲಿಕಾ ಪ್ರಕ್ರಿಯೆಯನ್ನು ಬಲವರ್ಧನೆಗೊಳಿಸುವುದು. 1. ಆಟ, 2. ಸಂವಹನ, 3. ಪರಿಸರ




### 1.6.1 ಆಟದ ಮಾಧ್ಯಮ:–

ಆಟವು ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ನೆರವು ನೀಡುವುದಲ್ಲದೆ ಅವರ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ. ಯಾವುದೇ ಕಲಿಕಾ ಅವಕಾಶಗಳು ಆಟ ಕೇಂದ್ರಿತವಾಗಿದ್ದಲ್ಲಿ ಮತ್ತು ಸ್ಥಳೀಯ ಪರಿಸರದ ಸಂವಹನಕ್ಕೆ ಅವಕಾಶ ಕಲ್ಪಿಸಿದ್ದಲ್ಲಿ ಮಗುವಿನ ಮನೋವಿಕಾಸ ವೃದ್ಧಿಗೆ ಸಹಕಾರಿಯಾಗುತ್ತದೆ. ಆಟಗಳಲ್ಲಿ ಮುಕ್ತ ಆಟಗಳು ಮತ್ತು ನಿರ್ದೇಶಿತ ಆಟಗಳು ಎಂಬ ವಿಧಗಳಿದ್ದು ಅವುಗಳ ಮಹತ್ವದ ಕಡೆಗೆ ಒಂದಷ್ಟು ಗಮನ ಹರಿಸೋಣ.

- **ಮುಕ್ತ ಆಟ:–** ಮುಕ್ತ ಆಟಗಳು ಮಕ್ಕಳ ಆಯ್ಕೆಗಳಿಗೆ ಮತ್ತು ಸ್ವಯಂ ತೀರ್ಮಾನಗಳಿಗೆ ಹಾಗೂ ಇತರರ ಅಭಿರುಚಿ ಆಸಕ್ತಿಯೊಂದಿಗೆ ಅವರ ಹಕ್ಕುಗಳನ್ನು ಗ್ರಹಿಸಿಕೊಳ್ಳಲು ನೆರವಾಗುತ್ತವೆ. ಮಗುವು ತನಗಿಷ್ಟವಾದ ಆಟಿಕೆಗಳೊಂದಿಗೆ ಸ್ವತಂತ್ರವಾಗಿ ಆಡಿಕೊಳ್ಳಲು ಇತರರೊಂದಿಗೆ ತನ್ನನ್ನು ತೊಡಗಿಸಿಕೊಳ್ಳಲು ಅವಕಾಶವನ್ನು ಕಲ್ಪಿಸುತ್ತವೆ. ಇದು ಆಸಕ್ತಿದಾಯಕ ತರಗತಿ ಕೋಣೆಯ ಪ್ರಕ್ರಿಯೆಗೆ ಶಿಫಾರಸ್ಸು ಮಾಡುವುದಲ್ಲದೆ ಅನ್ವೇಷಣಾ ಪ್ರವೃತ್ತಿಗೆ, ಸಂಗೀತಾಭಿರುಚಿಗೆ, ಗೊಂಬೆಗಳ ಮೂಲೆಗಳನ್ನು ಸಿದ್ಧಗೊಳಿಸುವುದರ ಬಗ್ಗೆ ಬೆಳಕು ಚೆಲ್ಲುತ್ತದೆ.
- **ನಿರ್ದೇಶಿತ ಆಟಗಳು:–** ಈ ಆಟಗಳು ಶಿಕ್ಷಕರ ನಿರ್ದೇಶನದೊಂದಿಗೆ ಕೂಡಿದ್ದು ಸರಿಯಾದ ಮಾರ್ಗದರ್ಶನವನ್ನು ನೀಡುವುದರ ಮೂಲಕ ಇಂತಹ ಆಟಗಳನ್ನು ಆಡಿಸಬೇಕಿದೆ. ಪೂರಕ ಒಳಾಂಗಣ ಮತ್ತು ಹೊರಾಂಗಣ ವಾತಾವರಣವನ್ನು ಸೃಜಿಸಿಕೊಡುವ ಮೂಲಕ ನಿರೀಕ್ಷಿತ ಕಲಿಕೆಯ ಫಲಗಳನ್ನು ತಲುಪಬಹುದು.

### 1.6.2 ಸಂವಹನ

ಆಟ ಕೇಂದ್ರಿತ ಕಲಿಕಾ ಪ್ರಕ್ರಿಯೆಯು ಮಗು ಮತ್ತು ಶಿಕ್ಷಕ, ಮಗು ಮತ್ತು ಸಹವರ್ತಿ, ಮಗು ಮತ್ತು ಒಡಹುಟ್ಟಿದವರ ನಡುವಿನ ಸಂವಹನಕ್ಕೆ ಆದ್ಯತೆ ನೀಡುತ್ತದೆ. 03 ರೀತಿಯ ಸಂವಹನವನ್ನು ವಿದ್ಯಾಪ್ರವೇಶದಲ್ಲಿ ಗುರುತಿಸಲಾಗಿದ್ದು 1. ಸಹವರ್ತಿ ನಡುವಿನ ಸಂವಹನ, 2. ಸಾಮಗ್ರಿಯೊಂದಿಗಿನ ಸಂವಹನ, 3. ಹಿರಿಯರು ಅಥವಾ ಶಿಕ್ಷಕರೊಂದಿಗಿನ ಸಂವಹನದೊಂದಿಗೆ ಕಲಿಕಾ ಪ್ರಕ್ರಿಯೆಯು ಕೂಡಿರಬೇಕು ಎಂಬುದನ್ನು ಬೋಧನಾ ತತ್ವವು ನಿರ್ದೇಶಿಸುತ್ತದೆ.

### 1.6.3 ಪರಿಸರ:–

ಮಕ್ಕಳು ಸ್ವಭಾವಿಕವಾಗಿ ಕುತೂಹಲಕಾರಿಗಳಾಗಿದ್ದು, ಪ್ರತಿಯೊಂದರ ಬಗ್ಗೆ ತಿಳಿದುಕೊಳ್ಳಲು ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಅವರ ಆಸಕ್ತಿಯನ್ನು ಒಪ್ಪಿಕೊಳ್ಳುವ ಮತ್ತು ಪ್ರೇರೇಪಿಸುವ ನಿಟ್ಟಿನಲ್ಲಿ ನಮ್ಮ ಚಟುವಟಿಕೆಗಳ ಸಾಮಗ್ರಿಗಳು ವಿನ್ಯಾಸಗೊಳ್ಳಬೇಕು. ಕೌಶಲ್ಯಾಧಾರಿತ ವಸ್ತುಗಳು, ಮಾಡಿಕಲಿ ಚಟುವಟಿಕಾ ಸಾಮಗ್ರಿಗಳು, ಊಹಾ ಶಕ್ತಿಯನ್ನು ಹೆಚ್ಚಿಸುವಂತಹ ಚಿತ್ರ ಸರಣಿಗಳೊಂದಿಗೆ ಮುಕ್ತವಾಗಿ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವಂತಹ ತರಗತಿ ಸನ್ನಿವೇಶವನ್ನು ನಿರ್ಮಿಸುವುದು ಅತಿ ಅವಶ್ಯ ಎಂಬುದನ್ನು ಶಿಕ್ಷಕರು ಅರಿಯಬೇಕು.

### 1.7) ಯೋಜನೆ ಮತ್ತು ನಿರ್ವಹಣೆ

ಪ್ರಾರಂಭಿಕ 3 ತಿಂಗಳು ಅಥವಾ 12 ವಾರಗಳ ಶಾಲಾಸಿದ್ಧತೆಗಾಗಿ ಅಗತ್ಯ ಸೂಚನೆಗಳನ್ನು ಈ ಕೈಪಿಡಿಯಲ್ಲಿ ನೀಡಲಾಗಿದೆ. ಆದಾಗ್ಯೂ ಶಿಕ್ಷಕರು ಅವರ ಅಗತ್ಯ ಹಾಗೂ ಸ್ಥಳೀಯ ಸನ್ನಿವೇಶಕ್ಕೆ ಪೂರಕವಾಗಿ ಯೋಜನೆಯನ್ನು ರೂಪಿಸಿಕೊಳ್ಳುವುದು.


- ❖ ಮೂಲ ಸಾಮರ್ಥ್ಯ ಹಾಗೂ ಕಲಿಕೆಯ ಫಲಗಳನ್ನು ಅಭಿವೃದ್ಧಿ ಗುರಿಗಳ ಅಡಿಯಲ್ಲಿ ನಿರ್ಧರಿಸಲಾಗಿದ್ದು ಅದಕ್ಕೆ ಪೂರಕವಾದ ವಿವರಗಳನ್ನು ಅಧ್ಯಾಯ –2ರಲ್ಲಿ ನೀಡಲಾಗಿದ್ದು ಶಿಕ್ಷಕರು ಅವಲೋಕಿಸುವುದು.
- ❖ ನನ್ನ ಸಮಯ **(Free Indore play)** ಶೀರ್ಷಿಕೆ ಅಡಿಯಲ್ಲಿ 8 ರೀತಿಯ ಚಟುವಟಿಕಾ ಮೂಲೆಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು ಶಿಕ್ಷಕರು ಅಗತ್ಯ ಸಾಮಗ್ರಿಗಳ ಸಂಗ್ರಹದೊಂದಿಗೆ ಯೋಜನೆ ತಯಾರಿಸಿಕೊಳ್ಳುವುದು. ಈ ಬಗ್ಗೆ ಅಧ್ಯಾಯ–2ರಲ್ಲಿ ಹೆಚ್ಚಿನ ಮಾಹಿತಿಯನ್ನು ನೀಡಲಾಗಿದೆ.
- ❖ ದಿನವಾರು ಚಟುವಟಿಕೆಗಳಿಗೆ ಸಲಹಾತ್ಮಕ ಸೂಚನೆ ಮತ್ತು ಮಾರ್ಗದರ್ಶನಗಳನ್ನು ನೀಡಲಾಗಿದ್ದು ಭಾಗ 2 ರಲ್ಲಿ ಸವಿವರವಾಗಿ ಅವುಗಳನ್ನು ದಾಖಲಿಸಿದೆ.
- ❖ ಯೋಜನೆಯ ಸಿದ್ಧತೆಯ ಪೂರ್ವದಲ್ಲಿ ಶಿಕ್ಷಕರು ಚಟುವಟಿಕೆ/ಪಠ್ಯಕ್ರಮ ಬಯಸುವ ಸಾಮಗ್ರಿಗಳ ಅಗತ್ಯತೆಯ ಕಡೆಗೆ ಗಮನ ಹರಿಸಿ, ಸ್ಥಳೀಯ ಸಂಪನ್ಮೂಲಗಳನ್ನು ಹಾಗೂ ವೆಚ್ಚರಹಿತ ಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳುವುದು.
- ❖ ಮಕ್ಕಳನ್ನು ಪುನರಾವರ್ತಿತ ಚಟುವಟಿಕೆಗಳಿಗೆ ಒಳಪಡಿಸುವ ಸಂದರ್ಭದಲ್ಲಿ ಅಗತ್ಯವಿರುವ ಹೆಚ್ಚುವರಿ ಕಲಿಕಾಹಾಳೆಗಳನ್ನು ಬಳಕೆ ಮಾಡಿಕೊಳ್ಳುವ ಮೂಲಕ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುವುದು.

**ಆದ್ಯತೆಗೆ ಒಳಪಡುವ ಅಂಶಗಳು:**

- ➢ ಪ್ರತಿ ಮೊದಲು ಮಗುವಿನ ಹಿನ್ನಲೆಯನ್ನು ಅರ್ಥ ಮಾಡಿಕೊಳ್ಳಬೇಕು. ವಿಭಿನ್ನ ನೆಲೆಯಿಂದ ಆಗಮಿಸುವ ಮಕ್ಕಳಿದ್ದು ಅವನ ಅಥವಾ ಅವಳ ಪೂರ್ವ ಶಿಕ್ಷಣ ಕಲಿಕೆ ಕುರಿತಂತೆ ನೀವು ಅರ್ಥೈಸಿಕೊಳ್ಳಬೆಕು. ಏಕೆಂದರೆ ಕೆಲವು ಮಕ್ಕಳು ಅಂಗನವಾಡಿ ದಾಖಲಾಗಿ ಒಂದನೇ ತರಗತಿಗೆ ಪ್ರವೇಶಿಸಿದರೆ, ಮತ್ತೆ ಕೆಲವು ಮಕ್ಕಳು ನೇರವಾಗಿ ಒಂದನೇ ತರಗತಿಗೆ ಪ್ರವೇಶಿಸುವರು.
  - – **ಸಾಧ್ಯವಾದಲ್ಲಿ ಪ್ರತಿ ಮಗುವಿನ ಮನೆಗೆ ಭೇಟಿ ನೀಡುವುದು.**
  - – **ಮಗುವಿನ ಕುಟುಂಬದೊಂದಿಗಿನ ಸಂಬಂಧವನ್ನು ಧನಾತ್ಮಕವಾಗಿ ವಿಸ್ತರಿಸುವುದು.**
- ➢ ಪ್ರತಿ ಮಗುವೂ ಅವನ ಅಥವಾ ಅವಳ ಸಾಮರ್ಥ್ಯದ ಮೇಲೆ ಸ್ವತಂತ್ರವಾಗಿ ಕಲಿಯುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.
- ➢ ಶಿಕ್ಷಕರ ಪಾತ್ರ ನಿರ್ವಹಣೆಯೆಂದರೆ, ಮಕ್ಕಳನ್ನು ಪ್ರೇರೇಪಿಸುವುದು, ಅವರ ಹೃದಯಕ್ಕೆ ಮೃದುಧೋರಣೆಯ ಪ್ರತಿಸ್ಪಂದನೆ ನೀಡುವುದು, ಶಿಕ್ಷಕ ಮತ್ತು ಮಕ್ಕಳ ನಡುವಿನ ಪ್ರೀತಿಪೂರ್ವಕ ಬಾಂಧವ್ಯವನ್ನು ಹೆಚ್ಚಿಸಿಕೊಳ್ಳುವುದೇ ಆಗಿದೆ.
- ➢ ನೀವು ಯೋಜನೆ ರೂಪಿಸಿಕೊಂಡಿದ್ದರೂ, ತರಗತಿಯ ಸನ್ನಿವೇಶಕ್ಕೆ ಹಾಗೂ ಮಕ್ಕಳ ಆಸಕ್ತಿಗೆ ಅನುಗುಣವಾಗಿ ಅದನ್ನು ಅಗತ್ಯ ಬದಲಾವಣೆಗೆ ಒಳಪಡಿಸಬಹುದಾಗಿದೆ.
- ➢ ಯೋಜನೆಯನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಶಿಕ್ಷಕ ನಿರ್ದೇಶಿತ, ಮಗು ನಿರ್ದೇಶಿತ ಹಾಗೂ ಒಳಾಂಗಣ, ಹೊರಾಂಗಣ ಮತ್ತು ದೊಡ್ಡ–ಚಿಕ್ಕ ಗುಂಪುಗಳ ಚಟುವಟಿಕೆಗಳ ಅನುಷ್ಠಾನವನ್ನು ಮರೆಯುವಂತಿಲ್ಲ.

DRAFT 2022

➢ ಸಾಧ್ಯವಾದಷ್ಟು ಸ್ಥಳೀಯವಾಗಿ ಲಭ್ಯವಾಗುವ ಸಾಮಗ್ರಿ ಮತ್ತು ಗೊಂಬೆಗಳ ಬಳಕೆಯಿರಲಿ. ಮಕ್ಕಳು ತಮ್ಮ ಕೌಶಲ್ಯವನ್ನು ಬಳಸಿ ಸಾಮಗ್ರಿಗಳನ್ನು ಸುಲಭವಾಗಿ ಉಪಯೋಗಿಸಲು ಮತ್ತು ಸುರಕ್ಷಿತ ಕ್ರಮಗಳು ಒಳಗೊಂಡಿರುವಂತೆ ನೋಡಿಕೊಳ್ಳುವುದು.




ಚಿತ್ರಪಟಗಳು, ಭಿತ್ತಿಚಿತ್ರಗಳು, ಚಟುವಟಿಕಾ ಹಾಳೆಗಳು, ವಿವಿಧ ಮಾದರಿಗಳು ಇರುವಂತೆ ತರಗತಿ ಕೋಣೆಯ ಪ್ರದರ್ಶನಾ ಫಲಕವನ್ನು ಹೆಚ್ಚು ಆಕರ್ಷಕವಾಗಿರುವಂತೆ ನಿರ್ವಹಿಸಿ. ಇದು ಮಗುವನ್ನು ಕುತೂಹಲಗೊಳಿಸಲು, ಅವರ ಆಸಕ್ತಿಯನ್ನು ಹೆಚ್ಚಿಸಲು ಅಥವಾ ಒಂದು ಉದ್ದೇಶಿತ ಚಟುಚವಟಿಕೆಯ ಕಡೆಗೆ ಅವರ ಗಮನವನ್ನು ಸೆಳೆಯಲು ಸಹಕಾರಿಯಾಗುತ್ತದೆ.

- ❖ ಪ್ರದರ್ಶನಗೊಳ್ಳುವ ಯಾವುದೇ ಅಂಶಗಳು ಮಗುವಿನ ಕಣ್ಣಳತೆಗೆ ಎಟಕುವಂತಿರಬೇಕು. ಅವುಗಳನ್ನು ಸುಲಭವಾಗಿ ನೋಡಿ ಗ್ರಹಿಸಿಕೊಳ್ಳಲು ಸಾಧ್ಯವಾಗಬೇಕು.
- ❖ ಪ್ರದರ್ಶನ ಫಲಕದ ವಸ್ತುಗಳು ನಿಯಮಿತವಾಗಿ ಬದಲಾಗುತ್ತಿರಬೇಕು.
- ❖ ಪ್ರತಿ ಮಗುವಿನ ಚಟುವಟಿಕೆಯ ಪ್ರದರ್ಶನಕ್ಕೂ ಇಲ್ಲಿ ಅವಕಾಶವಿರಬೇಕು.
- ❖ ಪ್ರದರ್ಶಿತ ವಸ್ತುಗಳು ನಿರ್ದಿಷ್ಟ ಉದ್ದೇಶವನ್ನು ಈಡೇರಿಸುವಂತಿರ ಬೇಕು.
- ❖ ಅತೀ ಹೆಚ್ಚು ಚಟುವಟಿಕೆಗಳ ಪ್ರದರ್ಶನ ಮತ್ತು ಅಸ್ತವ್ಯಸ್ಥ ನಿರ್ವಹಣೆಗೆ ಒಳಪಟ್ಟ ಪ್ರದರ್ಶನವು ಮಕ್ಕಳ ಮನಸ್ಸಿಗೆ ಕಿರಿಕಿರಿಯನ್ನು ಉಂಟುಮಾಡಬಹುದು. ಆದ್ದರಿಂದ ಅವುಗಳ ನಿರ್ವಹಣೆಯಲ್ಲಿ ಮಿತಿಯಿರಲಿ.
- ❖ ಮಕ್ಕಳ ವೀಕ್ಷಣೆಗೆ ಹೆಚ್ಚು ಸಮಯವನ್ನು ಒದಗಿಸಿ. ನೀಡಿದ ಸಮಸ್ಯೆಯೊಂದಕ್ಕೆ ಯೋಚಿಸಿ, ವಿಭಿನ್ನ ರೀತಿಯಲ್ಲಿ ಅಭಿವ್ಯಕ್ತಿಸಲು ಅವಕಾಶ ಕಲ್ಪಿಸಿ. **ಉದಾಹರಣೆ:** ಮನೆಯನ್ನು ಹೇಗೆ ಕಟ್ಟಲಾಗುತ್ತದೆ? ಈ ಏಳು ಕಡ್ಡಿಯಿಂದ ನಮನೆಯ ಚಿತ್ರ ರಚಿಸಬಹುದೇ? ಇತ್ಯಾದಿ.

## 1.8 ದಿವ್ಯಾಂಗ ಮಕ್ಕಳ ಅಗತ್ಯತೆಗಳು

- ಸಾಮರ್ಥ್ಯಕ್ಕೆ ತಕ್ಕಂತೆ ಎಲ್ಲಾ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿಕೊಳ್ಳುವುದು ಹಾಗೂ ಸಂಕೋಚವಿಲ್ಲದ ಭಾವನೆಗಳಿಂದ ಬೆರೆಯಲು ಅವಕಾಶ ಕಲ್ಪಿಸುವುದು.
- ಇತರೆ ಮಕ್ಕಳು ಮುಕ್ತವಾಗಿ ವರ್ತಿಸಲು, ಪರಸ್ಪರ ಸಹಕರಿಸಲು ಹಾಗೂ ಒತ್ತಾಯ ರಹಿತ ಭಾವನೆಗಳಿಂದ ಒಂದುಗೂಡಲು ನೆರವಾಗುವುದು.

- ತರಗತಿ ಕೋಣೆಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು **'ನನ್ನ ಸಮಯ'** ಚಟುವಟಿಕಾ ಸಮಯವು ಹೆಚ್ಚು ಸೂಕ್ತವಾಗಿದ್ದು ಇದರ ಸದುಪಯೋಗ ಪಡೆದುಕೊಳ್ಳಲು ಅವರನ್ನು ಪ್ರೇರೇಪಿಸುವುದು.
- ಮನೆಯಲ್ಲಿ ಇವರಿಗೆ ನೆರವು ನೀಡಲು ಅಗತ್ಯವೆನಿಸುವ ಅಂಶಗಳನ್ನು ಇಂತಹ ಮಕ್ಕಳ ಪೋಷಕರೊಂದಿಗೆ ಸಮಾಲೋಚಿಸಿ, ಮಾರ್ಗದರ್ಶನ ನೀಡುವ ಮೂಲಕ ಕಲಿಕಾ ಸಮಯವನ್ನು ಪರಿಣಾಮಕಾರಿಗೊಳಿಸುವುದು.
- ಇಂತಹ ಮಕ್ಕಳ ಅಗತ್ಯತೆ ಸಂಬಂಧಿಸಿದಂತೆ ನಿಯೋಜನೆಗೊಂಡಿರುವ ಬಿ.ಐ.ಇ.ಆರ್.ಟಿ, ಡಿ.ಐ.ಇ.ಆರ್.ಟಿ ಹಾಗೂ ಇನ್ನಿತರ ಸಂಯೋಜಕರ ನೆರವಿನಿಂದ ಪೂರಕ ಮಾಹಿತಿ ಪಡೆದು ಕಾಳಜಿ ಮಾಡುವುದು. ಸ್ವಲೀನತೆ ಹಾಗೂ ಹೈಪರ್ ಆಕ್ಟೀವ್ ಆದ ಮಕ್ಕಳನ್ನು ನೋಡಿಕೊಳ್ಳುವ ಮಾರ್ಗಗಳ ಬಗ್ಗೆ ಅರಿತುಕೊಳ್ಳುವುದು.
- ಕಲಿಸುವಿಕೆಯಲ್ಲಿ ಪ್ರೀತಿಯು ಅತಿಮುಖ್ಯವಾಗಿದ್ದು ತರಗತಿ ಶಿಕ್ಷಕರು ಪ್ರೀತಿ ಮತ್ತು ಮೃದು ಧೋರಣೆಯೊಂದಿಗೆ ದಿವ್ಯಾಂಗ ಮಕ್ಕಳನ್ನು ಭಾವನಾತ್ಮಕವಾಗಿ ಪ್ರತಿಸ್ಪಂದಿಸುವುದು.

## 1.9 ವಿದ್ಯಾರ್ಥಿಗಳ ಪ್ರಗತಿ ಮತ್ತು ಅನುಪಾಲನೆಯ ಕ್ರಮಗಳು

- **ವೀಕ್ಷಣೆ:** ವೀಕ್ಷಣೆಯು ಮಕ್ಕಳು ಬೆರೆಯುವ ಸನ್ನಿವೇಶವನ್ನು ಅರ್ಥೈಸಿಕೊಳ್ಳಲು, ಅವರ ವ್ಯಕ್ತಿತ್ವದ ಭಿನ್ನತೆಗಳನ್ನು ಹಾಗೂ ಕ್ರಿಯಾಶೀಲತೆಯ ಆಯಾಮಗಳನ್ನು ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವ ಮನೋಧರ್ಮವನ್ನು ಗ್ರಹಿಸಿಕೊಳ್ಳಲು ನೆರವಾಗುತ್ತದೆ.
- **ಸಂಚಿತ ದಾಖಲೆಗಳು:** ವೀಕ್ಷಣೆಯ ಆಧಾರದ ಮೇಲೆ ಮಗುವಿನ ವರ್ತನೆ, ಭಾಷೆಯ ಬಳಕೆ, ಸಾಮಾಜಿಕ ಸಂಬಂಧ; ಪರಸ್ಪರ ಸಂವಹನ ಇತ್ಯಾದಿ ಕುರಿತ ಅಂಶಗಳನ್ನು ಸಂಕ್ಷಿಪ್ತವಾಗಿ ದಾಖಲಿಸುವುದು.
- **ಕೃತಿ ಸಂಪುಟಗಳು:** ಮಕ್ಕಳು ನಿರ್ವಹಿಸಿದ ಸೃಜನಶೀಲ ಚಟುವಟಿಕೆಗಳಾದ ಕ್ರಾಫ್ಟ್, ಪೇಂಟಿಂಗ್, ಕೋಲ್ಯಾಜ್, ವಿವಿಧ ಮಾದರಿ/ಕೆಲಸಗಳನ್ನು ಮಕ್ಕಳ ಹೆಸರು ಸಹಿತ ಪ್ರತೀ ಸಂಪುಟಗಳಲ್ಲಿ ದಾಖಲಿಸುವುದು.
- **ತಪಶೀಲು ಪಟ್ಟಿ:** ಅಭಿವೃದ್ಧಿಯ ಗುರಿಗಳಿಗೆ ತಕ್ಕಂತೆ ಕಲಿಕೆಯ ಫಲಗಳನ್ನು ಪಟ್ಟಿಮಾಡಿ ಅವುಗಳಿಗೆ ಅನುಸಾರವಾಗಿ ಮಕ್ಕಳು ತೋರಿಸುತ್ತಿರುವ ಪ್ರಗತಿಯನ್ನು ಗುರುತು ಮಾಡುವುದು.
- **ದರ್ಜಾಮಾಪನ:** ಮಕ್ಕಳು ನೀಡಲಾಗುವ ಟಾಸ್ಕ್ ಮತ್ತು ಕೌಶಲಗಳಿಗೆ ಪ್ರತಿಕ್ರಿಯಿಸುವ ಪ್ರಗತಿಯನ್ನು ದರ್ಜಾಮಾಪನಕ್ಕೆ ಒಳಪಡಿಸುವುದು.
- **ಛಾಯಾ ಚಿತ್ರಗಳು ಹಾಗೂ ವೀಡಿಯೋ ತುಣುಕುಗಳು:** ಮಗುವಿನ ಪ್ರತಿಕ್ರಿಯೆ ಹಾಗೂ ಸಕಾಲಕ್ಕೆ ತೋರಿಸುವ ಸಹವರ್ತನೆಯ ಅಂಶಗಳನ್ನು ಕುರಿತಂತೆ ಛಾಯಾ ಚಿತ್ರ ಸಂಗ್ರಹ ಹಾಗೂ ವೀಡಿಯೋ ಮಾಧ್ಯಮ ಬಳಸಿದ್ದಲ್ಲಿ ಮಗುವನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗುತ್ತದೆ ಇದರಿಂದ ಮಗುವಿನ ಬಹುಮುಖ ಆಯಾಮವನ್ನು ಹಾಗೂ ವ್ಯಕ್ತಿತ್ವದ ಮಜಲುಗಳನ್ನು ಅರಿಯಲು ಸಾಧ್ಯವಾಗುತ್ತದೆ.

## 1.10 ಮಕ್ಕಳ ಪ್ರಗತಿಯ ಜಾಡು ಗುರುತಿಸುವಿಕೆ ಅಥವಾ ಮೌಲ್ಯಮಾಪನ

- ಚಿಕ್ಕ ಚಿಕ್ಕ ಗುಂಪುಗಳಲ್ಲಿ ಮಕ್ಕಳು ಹೇಗೆ ವರ್ತಿಸುತ್ತಿದ್ದಾರೆ ಎಂಬುದರ ಕಡೆಗೆ ಶಿಕ್ಷಕರು ತಮ್ಮ ಗಮನವನ್ನು ಕೇಂದ್ರಿಕರಿಸುವುದು ಅಗತ್ಯ. ಹಾಗೆಯೇ, ವೀಕ್ಷಿಸಿದ ಅಂಶಗಳನ್ನು ಸಂಚಿತ ದಾಖಲೆಯಲ್ಲಿ ಬರೆದಿಡುವುದು. ಶಿಕ್ಷಕರ ಸಂಗ್ರಹಿತ ಅಭಿಪ್ರಾಯಗಳಾಗಲಿ, ವೀಕ್ಷಣೆಯ ಅಂಶಗಳಾಗಲಿ ಮಗುವಿನ ಭಾವನೆಗಳಿಗೆ ಧಕ್ಕೆ ತರದಂತೆ ಅವರ ವರ್ತನೆಗಳನ್ನು ಮೌಲ್ಯಮಾಪನಗೊಳಿಸುವುದು. ಪ್ರತೀ ಮಗುವಿನ ಮೌಲ್ಯಮಾಪನ ಮತ್ತು ಪ್ರಗತಿಯ ಅಂಶಗಳನ್ನು ದಾಖಲಿಸುವಾಗ ಹಿಂದಿನ ದಾಖಲಿತ ಅಂಶಗಳೊಂದಿಗೆ ಅದನ್ನು ಹೋಲಿಸಬೇಕೇ ಹೊರತು, ಇತರೆ ಮಕ್ಕಳ ಪ್ರಗತಿಯೊಂದಿಗೆ ಹೋಲಿಸದಂತೆ ಎಚ್ಚರಿಕೆ ವಹಿಸುವುದು.
- ಮೂರನೇ ಮೌಲ್ಯಮಾಪನ ಹಂತ ಮುಗಿದ ಕೂಡಲೇ ಮಗುವಿನ ಪ್ರಗತಿಯ ಅಂಶಗಳನ್ನು ಕ್ರೂಡೀಕರಿಸುವುದು. ಇದರಿಂದ ಮಗುವಿನ ಮುಂದಿನ ಬೆಳವಣಿಗೆಗೆ ಸಹಕಾರಿಯಾಗುವುದಲ್ಲದೇ ಕಲಿಕೆಯ ಅನುಭವಗಳಿಗೆ ಯೋಜಿಸಲು, ಪೋಷಕರೊಂದಿಗೆ ಚರ್ಚಿಸಲು, ಕಾರ್ಯತಂತ್ರಗಳನ್ನು ಸುಧಾರಿಸಿಕೊಳ್ಳಲು ನೆರವಾಗುತ್ತದೆ.

**ಗಮನವಿರಲಿ**

ಮಕ್ಕಳು ಮೆಚ್ಚುಗೆ ಹಾಗೂ ಪ್ರಶಂಸೆಗಳೊಂದಿಗೆ ಕಲಿಯುವರು. ಆದರೆ, ಟೀಕೆ ಟಿಪ್ಪಣಿಗಳಿಂದ ಕಲಿಯಲಾರರು. ಯಾವುದೇ ಮಗುವನ್ನು 'ಉತ್ತೀರ್ಣ' ಹಾಗೂ 'ಅನುತ್ತೀರ್ಣ' ಪದಗಳಿಂದ ಹೆಸರಿಸಬಾರದು.

DRAFT 2022

## 1.10 ಮಕ್ಕಳ ಕಲಿಕೆಯಲ್ಲಿ ಪೋಷಕರು ಮತ್ತು ಸಮುದಾಯದ ಸಹಭಾಗಿತ್ವ

ಶಾಲೆಯ ಔಪಚಾರಿಕ ಶಿಕ್ಷಣ ಪೂರ್ವದಲ್ಲಿ ಪೋಷಕರೇ ಮಗುವಿನ ಮೊದಲ ಶಿಕ್ಷಕರು ಎಂಬುದನ್ನು ಮರೆಯುವಂತಿಲ್ಲ. ಮಕ್ಕಳ ಶಿಕ್ಷಣ ಹಾಗೂ ಕಲಿಕೆಯಲ್ಲಿ ಪೋಷಕರು ಹಾಗೂ ಸಮುದಾಯದ ಸಹಭಾಗಿತ್ವ ಬಹುದೊಡ್ಡ ಬೆಂಬಲ ವ್ಯವಸ್ಥೆಯಾಗಿದೆ. ಆದುದರಿಂದ ಶಿಕ್ಷಕರು ಮಕ್ಕಳ ಕಲಿಕೆಯಲ್ಲಿ ಪೋಷಕರು ಸಮುದಾಯ ಉತ್ತಮವಾಗಿ ಭಾಗವಹಿಸಲು ಸಾಕಷ್ಟು ಪರಿಶ್ರಮ ಪಡಬೇಕು. ಇದಕ್ಕಾಗಿ ಕೆಳಕಂಡ ಅಂಶಗಳತ್ತ ಗಮನಹರಿಸಬಹುದು.

- ಸಮಯ ದೊರಕಿದಾಗ ಪ್ರತಿಯೊಬ್ಬ ಪೋಷಕರೊಂದಿಗೆ ಮಕ್ಕಳ ಕಲಿಕಾ ಪ್ರಗತಿ ಅವರ ಆಸಕ್ತಿ ಅವರಿಗೆ ಕಠಿಣವೆನಿಸುವ ಅಂಶಗಳ ಬಗ್ಗೆ ಮಾತನಾಡಬೇಕು.
- ಆಗಿಂದ್ದಾಗ್ಗೆ ಪೋಷಕರು ಶಾಲೆಗೆ ಬಂದು ಶಿಕ್ಷಕರೊಂದಿಗೆ ಮಕ್ಕಳ ಬಗ್ಗೆ ಮಾಡನಾಡಲು ಪ್ರೋತ್ಸಾಹಿಸಬೇಕು.
- ಸಮುದಾಯ ಮತ್ತು ಪೋಷಕರು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸುವುದರೊಂದಿಗೆ ಮಕ್ಕಳಲ್ಲಿ ಗೃಹ ಕಲಿಕಾ ವಾತಾವರಣವನ್ನು ಶಾಲೆಗಳಲ್ಲಿ ಮೂಡಿಸಲು ಪ್ರಯತ್ನಿಸಬೇಕು.

- ಆಗಿಂದ್ದಾಗ್ಗೆ ಪೋಷಕರು ಶಾಲೆಗೆ ಒಂದು ಶಿಕ್ಷಕರೊಂದಿಗೆ ಮಕ್ಕಳ ಬಗ್ಗೆ ಮಾತನಾಡಲು ಪ್ರೋತ್ಸಾಹಿಸಬೇಕು.
- ಸಮುದಾಯ ಮತ್ತು ಪೋಷಕರು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸುವುದರೊಂದಿಗೆ ಮಕ್ಕಳಲ್ಲಿ ಗೃಹ ಕಲಿಕಾ ವಾತಾವರಣವನ್ನು ಶಾಲೆಗಳಲ್ಲಿ ಮೂಡಿಸಲು ಪ್ರಯತ್ನಿಸಬೇಕು.
- ಕುಡಿಯುವ ನೀರು ಇನ್ನಿತರ ಸೌಲಭ್ಯಗಳನ್ನು ಪಡೆಯಲು ಸಮುದಾಯದ ನೆರವು ಪಡೆಯಬೇಕು.
- ವಿವಿಧ ಸ್ತರಗಳಲ್ಲಿರುವ ಸ್ಥಳೀಯ ವ್ಯಕ್ತಿಗಳು ಅಥವಾ ನಾಯಕರನ್ನು ಶಾಲಾಭಿವೃದ್ಧಿ ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳಬೇಕು.

**ಇವುಗಳು ಮಾತ್ರವಲ್ಲದೆ ಶಿಕ್ಷಕರು ಪೋಷಕರುಗಳಿಗೆ ಈ ಕೆಳಕಂಡ ವಿಷಯಗಳಲ್ಲಿ ಸಲಹೆ ಕೊಡಬೇಕು ಮತ್ತು ಪ್ರೋತ್ಸಾಹಿಸಬೇಕು.**

1. **ಮಕ್ಕಳೊಂದಿಗೆ ಸಮಯ ಕಳೆದು ಅವರಲ್ಲಿ ಭಾವನಾತ್ಮಕ ಸ್ಥೈರ್ಯ ಮತ್ತು ಮಾದರಿ ಧನಾತ್ಮಕ ನಡತೆಯನ್ನು ರೂಪಿಸಲು ಸಹಕರಿಸುವುದು.**
2. **ಮಕ್ಕಳ ಶೈಕ್ಷಣಿಕ ಚಟುವಟಿಕೆಯಲ್ಲಿ ಭಾಗವಹಿಸುವುದರೊಂದಿಗೆ ಅವರಿಗೆ ಶಿಕ್ಷಣದ ಬಗ್ಗೆ ಆಸಕ್ತಿ ಬೆಳೆಸುವುದು.**
3. **ಮಕ್ಕಳ ಭೌತಿಕ/ದೈಹಿಕ ಬೆಳವಣಿಗೆಗೆ ಪೂರಕವೆನಿಸುವ ಈಜುವುದು, ಓದುವುದು ಮುಂತಾದ ಆಟಗಳಿಗೂ ಪ್ರಾಮುಖ್ಯತೆ ನೀಡುವುದು.**
4. **ದಿನದ ಯಾವುದಾದರೂ ಒಂದು ಅವಧಿಯಲ್ಲಿ ಅಥವಾ ಮಲಗುವ ಮುನ್ನ ಮಕ್ಕಳಿಗೆ ಕಥೆಯನ್ನು ಹೇಳಿ ನಂತರ. . .**

- ✓ ಕಥೆಯಲ್ಲಿದವರು ಯಾರು? ಕಥೆಯಲ್ಲಿ ಅವರ ಪಾತ್ರವೇನು? ಎಂಬ ಪ್ರಶ್ನೆಗಳನ್ನು ಕೇಳುವುದರ ಮೂಲಕ ಅವರಲ್ಲಿ ಉತ್ತಮ ಗುಣಗಳನ್ನು ಬೆಳೆಸುವುದು.
- ✓ ಮಕ್ಕಳು ಕಥೆ ಹೇಳುವಂತೆ ಹಾಗೂ ಚಿತ್ರಗಳನ್ನು ಬರೆಯಲು ಪ್ರೋತ್ಸಾಹಿಸುವುದು.
- ✓ ಕಥೆಯನ್ನು ಕೇಳಿದ ನಂತರ ಚಿತ್ರಗಳನ್ನು ವೀಕ್ಷಿಸಿದ ನಂತರ ಮಕ್ಕಳನ್ನು ಹೊಗಳುವುದು.
- ✓ ಶಿಕ್ಷಕರ ಅಥವಾ ಪೋಷಕರ ಸುಪರ್ದಿಯಲ್ಲಿ ಮಕ್ಕಳು ಕಥೆಗಳ ಹಾಡುಗಳ ವೀಡಿಯೋಗಳನ್ನು ನೋಡಲು ಅವಕಾಶ ಕೊಡುವುದು ಆಟಗಳನ್ನಾಡಲು ಅವಕಾಶ ಕಲ್ಪಿಸುವುದು ಹಾಗೂ ಅವುಗಳ ಬಗ್ಗೆ ಚರ್ಚಿಸುವುದು.
- ✓ ಮಕ್ಕಳು ನಾಟಕ, ರೂಪಕ ಹಾಗೂ ಗೊಂಬೆಯಾಟಗಳಲ್ಲಿ ತಪ್ಪದೆ ಬಾಗವಹಿಸುವಂತೆ ನೋಡಿಕೊಳ್ಳುವುದು.
- ✓ ಮನೆಯಲ್ಲಿರುವ ವಸ್ತುಗಳ ಮೂಲಕ ಅವುಗಳ ಅಕಾರ ಬಣ್ಣ ಹಾಗೂ ಗಾತ್ರಗಳನ್ನು ಗುರುತಿಸುವುದು. ಅವುಗಳ ಬಗ್ಗೆ ಮಾತನಾಡುವುದು.
- ✓ ಮನೆಯ ಆಹಾರದ ರುಚಿಗಳು ಬಣ್ಣ ಉಪಯೋಗ ಮುಂತಾದವುಗಳ ಬಗ್ಗೆ ಚರ್ಚಿಸುವುದು.
- ✓ ಈ ದಿನ ಶಾಲೆಯಲ್ಲಿ ಏನು ಮಾಡಿದೆ? ಏನು ಊಟ ಮಾಡಿದೆ? ಯಾವ ಕಥೆ ಓದಿದೆ? ಮುಂತಾದ ಪ್ರಶ್ನೆಗಳನ್ನು ಪ್ರತಿದಿನ ಕೇಳುವುದು.
- ✓ ಮಕ್ಕಳ ನೋಟ್ ಪುಸ್ತಕಗಳು ದಿನಚರಿಗಳನ್ನು ಪ್ರತಿದಿನ ಪರಿಶೀಲಿಸುವುದು.
- ✓ ಮಕ್ಕಳ ಉತ್ತಮ ಕಾರ್ಯಗಳಿಗೆ ಪ್ರೋತ್ಸಾಹ ನೀಡುವುದು ಹೊಗಳುವುದು
- ✓ ಮಕ್ಕಳು ಮಾಡಿದ ತಪ್ಪುಗಳನ್ನು ಗುರುತಿಸಿ ಅವುಗಳನ್ನು ಸರಿಪಡಿಸುವುದು ಮಾರ್ಗದರ್ಶನ ಮಾಡುವುದು.
- ✓ ಉತ್ತಮವಾಗಿ ಕಲಿಯಲು ಅಥವಾ ಉತ್ತರಿಸಲು ಮನೆಯ ಹಿರಿಯರು ಸಹೋದರ ಸಹೋದರಿಯರು ಸ್ನೇಹಿತರು ಅಥವಾ ಶಿಕ್ಷಕರು ನೆರವು ಪಡೆಯುವುದು.

DRAFT 2022

- ✓ ಮಕ್ಕಳು ಶಾಲೆಗೆ ಸಿದ್ಧವಾಗುವಿಕೆಯ ಬಗ್ಗೆ ಪೋಷಕರು ಮತ್ತು ಸಮುದಾಯದ ಅರಿವು ಮೂಡಿಸಲು ಶಾಲೆಯ ವಿವಿಧ ಚಟುವಟಿಕೆಗಳಲ್ಲಿ ಎಂದರೆ ಶಿಕ್ಷಕರು ಪೋಷಕರ ಸಭೆಯಲ್ಲಿ ಭಾಗವಹಿಸಲು ಕ್ರಮವಹಿಸುವುದು. ಮನೆ ಮನೆ ಭೇಟಿ, ಶಾಲಾ ಸಿದ್ಧತಾ ಮೇಳ ಏರ್ಪಡಿಸುವುದು ಇತ್ಯಾದಿಗಳಲ್ಲಿ ಕಡ್ಡಾಯವಾಗಿ ಪಾಲ್ಗೋಳ್ಳುವಂತೆ ಮನವೊಲಿಸುವುದು.

## ಪೋಷಕರು ಮತ್ತು ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸುವ ಮಾರ್ಗಗಳು

**ಪ್ರತಿಯೊಂದು ಮಗುವಿನ ಆಸಕ್ತಿಯನ್ನು ತಿಳಿಯಲು ಮನೆಯವರೊಂದಿಗೆ ಮತ್ತು ಸಂಪರ್ಕ ಸಾಧಿಸುವುದು. ಮನೆಯಲ್ಲಿ ಮಕ್ಕಳೊಂದಿಗೆ ನಡೆದು ವಿಚಾರದಲ್ಲಿ ಮಾರ್ಗದರ್ಶನ ಸಲಹೆ ನೀಡುವುದು. 1ನೇ ತರಗತಿಯ ದಾಖಲಾತಿಗೆ ಮುನ್ನಾ ಶಾಲಾ ಸಿದ್ಧತಾ ಮೇಳವನ್ನು ಏರ್ಪಡಿಸಿ ಪೋಷಕರು ಮಕ್ಕಳೊಂದಿಗೆ ಭಾಗವಹಿಸಲು ತಿಳಿಸುವುದು ಮೇಳದಲ್ಲಿ ಮಕ್ಕಳ ಅಭಿವದ್ಧಿಗಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವುದು ಇದರಿಂದ ಪೋಷಕರಲ್ಲಿ ಜಾಗೃತಿಯುಂಟಾಗಿ ಅವರುಗಳು ಮನೆಯಲ್ಲಿ ಕಥೆ ಹೇಳುವುದು, ಶಿಶುಗೀತೆಗಳನ್ನು ಕಲಿಸುವುದು, ಹೇಳಿಸುವುದು, ಚರ್ಚೆ ಮಾಡುವುದು, ಹೊರಾಂಗಣ ಆಟ ಕುಶಲಕಲೆಗಳನ್ನು ಪರಿಚಯಿಸುವುದು, ಕಲಿಯಲು ಪ್ರೋತ್ಸಾಹಿಸುವುದರ ಮೂಲಕ ಶಾಲೆಯಲ್ಲಿ ಕಲಿಕೆಗೆ ಅಗತ್ಯವಿರುವ ವಾತಾವರಣವನ್ನು ಮೂಡಿಸಲು ಸಾಧ್ಯವಾಗುವುದು.**

### 1.10) ಮಾದರಿ ವೇಳಾಪಟ್ಟಿ

| ಅವಧಿಗಳು | ಸಮಯ (ವಿ.ಪ್ರ) | ಚಟುವಟಿಕೆಗಳು | 8 ಅವಧಿಗಳು |
|---|---|---|---|
| 1 | 30 ನಿಮಿಷ | ಶುಭಾಶಯ ವಿನಿಮಯ ಮತ್ತು ಮಾತುಕತೆ | 40 ನಿಮಿಷ |
| 2 | 30 ನಿಮಿಷ | ನನ್ನ ಸಮಯ | 40 ನಿಮಿಷ |
| | 10 ನಿಮಿಷ | ಅಲ್ಪ ವಿರಾಮ | |
| 3 | 30 ನಿಮಿಷ | ಬುನಾದಿ ಸಂಖ್ಯಾ ಜ್ಞಾನ | 40 ನಿಮಿಷ |
| 4 | 30 ನಿಮಿಷ | ಸೃಜನಶೀಲ ಕಲೆ | 40 ನಿಮಿಷ |
| | 40 ನಿಮಿಷ | ಊಟದ ವಿರಾಮ | |
| 5 | 60 ನಿಮಿಷ | ಭಾಷಾಭಿವೃದ್ಧಿ (ಆಲಿಸುವಿಕೆ+ಮಾತನಾಡುವಿಕೆ, ಓದುವಿಕೆ, ಬರೆವಣಿಗೆ) | 60 ನಿಮಿಷ |
| 6 | 30 ನಿಮಿಷ | ಹೊರಾಂಗಣ ಆಟಗಳು | 40 ನಿಮಿಷ |
| | 10 ನಿಮಿಷ | ಅಲ್ಪ ವಿರಾಮ | |
| 7 | 20 ನಿಮಿಷ | ಕಥಾ ಸಮಯ | 40 ನಿಮಿಷ |
| 8 | 10 ನಿಮಿಷ | ಮತ್ತೆ ಸಿಗೋಣ | 20 ನಿಮಿಷ |

******************************************☺*************************************************

## ಅಧ್ಯಾಯ–02.

## ವಿದ್ಯಾ ಪ್ರವೇಶ–ಅಭಿವೃದ್ಧಿ ಗುರಿ ಆಧರಿಸಿದ ಸಾಮರ್ಥ್ಯ ಮತ್ತು ಕಲಿಕಾ ಫಲಗಳು

### 2.1 ಅಭಿವೃದ್ಧಿ ಗುರಿಗಳು:

**ಉತ್ತಮ ಆರೋಗ್ಯ ಮತ್ತು ಸ್ವಾಸ್ಥ್ಯ ನಿರ್ವಹಣೆಯಲ್ಲಿ ಮಕ್ಕಳು ಸಮರ್ಥರಾಗುವುದು.**

**(Children Maintain Good Health & Well Being-H.W)**

ನಿಪುಣ್ ಭಾರತದ ಮುಖ್ಯ ಉದ್ದೇಶ ಮೂರು ಪ್ರಧಾನ ಗುರಿಗಳ ಮೂಲಕ ಮಗುವಿನ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವುದೇ ಆಗಿದೆ. ಅಭಿವೃದ್ಧಿಯ ಗುರಿ 1 ಮಗುವಿನ ಆರೋಗ್ಯ ಮತ್ತು ಸ್ವಾಸ್ಥ್ಯವನ್ನು ಕಾಯ್ದುಕೊಳ್ಳುವುದು. ಹಾಗಾಗಿ ಈ ಗುರಿಯು ಕೆಳಗೆ ನೀಡಿರುವ ಕಲಿಕಾ ಫಲಗಳನ್ನು ಹೊಂದಿದೆ.

#### 2.1.1 ಮುಖ್ಯ ಸಾಮರ್ಥ್ಯಗಳು

| | |
|---|---|
| 1 | ನಾನು ಮತ್ತು ನನ್ನ ಸುತ್ತಲಿನ ಜಗತ್ತು. **Awareness of self** |
| 2 | ಧನಾತ್ಮಕ ಚಿಂತನೆ ಮತ್ತು ಅಭಿವೃದ್ಧಿ. **Development of positive self-concept** |
| 3 | ಸ್ವ ನಿಯಂತ್ರಣ. **Self-regulation** |
| 4 | ತೀರ್ಮಾನ ಕೈಗೊಳ್ಳುವಿಕೆ ಮತ್ತು ಸಮಸ್ಯ ಬಗೆಹರಿಸುವಿಕೆ. **Decision-making and problem solving** |
| 5 | ಸಾಮಾಜಿಕ ವರ್ತನೆಯ ಅಭಿವೃದ್ಧಿ. **Development of prosocial behavior** |
| 6 | ಸ್ವ ರಕ್ಷಣೆಗಾಗಿ ಆರೋಗ್ಯಕರ ಅಭ್ಯಾಸ ಮತ್ತು ಸ್ವಚ್ಛತೆ–ನೈರ್ಮಲ್ಯದ ಅರಿವು. **Development of healthy habits, hygiene, sanitation and awareness for self-protection** |
| 7 | ಕೌಶಲಗಳ ಸಮಗ್ರ ಅಭಿವೃದ್ಧಿ. **Development of gross motor skills** |
| 8 | ಉತ್ತಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ನೇತ್ರ–ಕರಗಳ ಸಮನ್ವಯ. **Development of fine motor skills and eyehand Coordination** |
| 9 | ವೈಯಕ್ತಿಕ ಮತ್ತು ಗುಂಪು ಆಟ/ಕ್ರೀಡೆಗಳಲ್ಲಿ ಭಾಗವಹಿಸುವಿಕೆ. **Participation in individual and team games and sports** |

DRAFT 22.02.22

| 2.1.1 ಅಭಿವೃದ್ಧಿ ಗುರಿ 01ರ ಕಲಿಕಾ ಫಲಗಳು | | |
|---|---|---|
| ಕ್ರ.ಸ | ನಿಪುಣ್ ಕ್ರ.ಸಂ | ಕಲಿಕಾ ಫಲಗಳು |
| 1 | HW 3.1 | ತನ್ನ ಹಾಗೂ ಇತರರ ದೈಹಿಕ ಗುಣಲಕ್ಷಣಗಳು ಲಿಂಗ, ಆಸಕ್ತಿ, ಇಷ್ಟ ಮತ್ತು ಇಷ್ಟವಿಲ್ಲದಿರುವ ಬಗ್ಗೆ ವಿವರಿಸುವರು.<br>**Describes self and others in terms of physical characteristics, gender, interests, likes and dislikes.** |
| 2 | HW 3.2 | ಅವಿಭಕ್ತ ಕುಟುಂಬದ ಸದಸ್ಯರ ನಡುವಿನ ಸಂಬಂಧಗಳನ್ನು ತಿಳಿದು ವ್ಯಕ್ತಪಡಿಸುವರು.<br>**Exhibits the understanding of relationship with extended family members.** |
| 3 | HW 3.3 | ಚಟುವಟಿಕೆಗಳಲ್ಲಿ ಸ್ವಾತಂತ್ರ್ಯವನ್ನು ಪ್ರದರ್ಶಿಸುವರು.<br>**Demonstrates independence in activities.** |
| 4 | HW 3.4 | ಏಕಕಾಲದಲ್ಲಿ ಸೂಚನೆಗಳು ಮತ್ತು ಸರಳ ನಿಯಮಗಳನ್ನು ಪಾಲಿಸುವರು.<br>**Follows instructions and simple rules at the same time.** |
| 5 | HW 3.5 | ದೈನಂದಿನ ಚಟುವಟಿಕೆಗಳಲ್ಲಿ ಆಗುವ ಬದಲಾವಣೆಗೆಗಳಿಗೆ, ಹೊಂದಿಕೊಳ್ಳುವರು.<br>**Shows adaptability to any changes in routine/ daily schedule.** |
| 6 | HW 3.6 | ಯೋಜಿತ ಕಾರ್ಯಗಳು/ ವಿಷಯಗಳನ್ನು ಪೂರ್ಣಗೊಳಿಸುವುದರ ಮೇಲೆ ಗಮನ ಕೇಂದ್ರೀಕರಿಸುವರು.<br>**Focuses attention to complete tasks/topics assigned by others.** |
| 7 | HW 3.7 | ಭಾವನೆಗಳನ್ನು ಶಾಬ್ದಿಕ ಮತ್ತು ಅಶಾಬ್ದಿಕವಾಗಿ ವ್ಯಕ್ತಪಡಿಸುವರು. (ಸಂಜ್ಞೆಗಳು, ಚಿತ್ರಗಳು)<br>**Expresses emotions through verbal and non-verbal modes (gestures, drawings).** |
| 8 | HW 3.8 | ಆದ್ಯತೆ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ಆಯ್ಕೆ ಮಾಡುವರು ಹಾಗೂ ಜವಾಬ್ದಾರಿ ತೆಗೆದುಕೊಳ್ಳುವರು.<br>**Takes responsibility and makes choices basedon one's own preferences and interests.** |
| 9 | HW 3.9 | ಗೊಂದಲಗಳಿಗೆ ಪರಿಹಾರಗಳನ್ನು ಸೂಚಿಸುವರು ಮತ್ತು ವಯೋಮಾನಕ್ಕೆ ಅನುಗುಣವಾಗಿ ಹೊಂದಾಣಿಕೆ ಮಾಡಿಕೊಳ್ಳುವರು.<br>**Suggests solutions to conflicts and makes age appropriate adjustments.** |
| 10 | HW 3.10 | ಆಟ ಆಡುವಾಗ ಮತ್ತು ಸಮಾಲೋಚನೆ ಮಾಡುವಾಗ ಇತರರ ಸಲಹೆಗಳಿಗೆ ಮನ್ನಣೆ/ಸಹಮತವನ್ನು ವ್ಯಕ್ತಪಡಿಸುವರು.<br>**Demonstrates willingness to include other's ideas during interaction and play.** |
| 11 | HW 3.11 | ದೊಡ್ಡ ಮತ್ತು ಸಣ್ಣ ಗುಂಪು ಚಟುವಟಿಕೆಗಳಲ್ಲಿ ಅಗತ್ಯವಿರುವ ಮಕ್ಕಳಿಗೆ ಸಹಾಯ ಮಾಡುವರು.<br>**Helps peers who are in need during large and small group activities.** |
| 12 | HW 3.12 | ವಿಭಿನ್ನ ಹಿನ್ನೆಲೆಯುಳ್ಳ ಹಾಗೂ ವಿಶೇಷ ಚೇತನ ಮಕ್ಕಳ ಬಗ್ಗೆ ಸ್ವೀಕಾರ ಭಾವನೆ ಮತ್ತು ಸಂವೇದನಾಶೀಲತೆಯನ್ನು ಪ್ರದರ್ಶಿಸುವರು.<br>**Demonstrates sensitivity and acceptability towards children from diverse backgrounds including children with special needs.** |
| 13 | HW 3.13 | ಪ್ರಾಥಮಿಕ ಆರೋಗ್ಯ, ಸ್ವಚ್ಛತೆ, ಸುರಕ್ಷತೆ ಮತ್ತು ಸ್ವಾಸ್ಥ್ಯ ಅಭ್ಯಾಸಗಳು ಹಾಗೂ ಆರೋಗ್ಯಕರ ಆಹಾರಾಭ್ಯಾಸಗಳನ್ನು ನಿರ್ವಹಿಸುವರು ಮತ್ತು ಸುಧಾರಿತ ಸ್ವಾತಂತ್ರ್ಯವನ್ನು ಪ್ರದರ್ಶಿಸುವರು.<br>**Maintains and displays basic health, hygiene, sanitation practices, and healthy eating practices with increased independence.** |
| | | ಒಳ್ಳೆಯ ಮತ್ತು ಕೆಟ್ಟ ಸ್ಪರ್ಶದ ಬಗ್ಗೆ ಜಾಗೃತರಾಗಿರುವರು ಮತ್ತು ಅಪರಿಚಿತರಿಂದ ಅಂತರವನ್ನು ಕಾಯ್ದುಕೊಳ್ಳುವರು.<br>**Demonstrates awareness about good touch and bad touch and maintains** |

DRAFT 2.02.22

| | | |
|---|---|---|
| 14 | HW 3.14 | **distance from strangers.** |
| 15 | HW 3.15 | ಮನೆ, ಶಾಲಾ ಪೂರ್ವ ಅವಧಿ ಮತ್ತು ಆಟದ ಮೈದಾನಗಳಲ್ಲಿ ಸಾಮಾನ್ಯ ಸುರಕ್ಷತಾ ನಿಯಮಗಳನ್ನು ಅನುಸರಿಸುವರು.<br>**Follows basic rules of safety at home, preschool and playground.** |
| 16 | HW 3.16 | ಸಮಗ್ರ ಚಲನಾ ಕೌಶಲಗಳನ್ನು ಸೂಕ್ತ ಸಹಕಾರದೊಂದಿಗೆ ಪ್ರದರ್ಶಿಸುವರು. (ಉದಾ: ಓಡುವುದು, ನೆಗೆಯುವುದು, ಎಸೆಯುವುದು, ಒದೆಯುವುದು, ಹಿಡಿಯುವುದು ಇತ್ಯಾದಿ)<br>**Demonstrates gross motor skills with greater coordination, control and strength; e.g., running, jumping, throwing, kicking and catching, etc.** |
| 17 | HW 3.17 | ಸಂಗೀತ ಮತ್ತು ಚಾಲನಾ ಚಟುವಟಿಕೆಗಳಲ್ಲಿ ಅವಕಾಶ ಸೃಷ್ಟಿಸಿಕೊಂಡು ಸೃಜನಾತ್ಮಕವಾಗಿ ಮತ್ತು ಸಕ್ರಿಯವಾಗಿ ಭಾಗವಹಿಸುವರು.<br>**Explores space and participates actively and creatively in music and movement activities.** |
| 18 | HW 3.18ಎ | ನಿಖರತೆ ಮತ್ತು ನಿಯಂತ್ರಣದೊಂದಿಗೆ ಸಮಗ್ರ ಚಲನಾ ಕೌಶಲಗಳನ್ನು ಪ್ರದರ್ಶಿಸುವರು.<br>**Exhibits fine motor skills with precision and control.** |
| 19 | HW 3.18ಬಿ | ಗೆರೆ ಹಾಕಿ ಕತ್ತರಿಸುವುದು, ನೀರು ಸುರಿಯುವುದು, ಅಂಗಿಯ ಗುಂಡಿ ಹಾಕುವುದು ಇತ್ಯಾದಿ ಸಂಕೀರ್ಣ ಕಾರ್ಯಗಳನ್ನು ಪೂರ್ಣಗೊಳಿಸಲು ಸಂಯೋಜಿತ ಚಲನೆಗಳನ್ನು ಬಳಸುವರು.<br>**Uses coordinated movements to complete complex tasks like cutting along a line, pouring, buttoning, etc.** |
| 20 | HW 3.18ಸಿ | ಚಿತ್ರ ಬಿಡಿಸಲು, ಬಣ್ಣ ಹಚ್ಚಲು, ಬರೆಯಲು ಸಾಮಗ್ರಿಗಳನ್ನು ಸೂಕ್ತ ರೀತಿಯಲ್ಲಿ ಹಿಡಿಯುವರು. (ಹೆಬ್ಬೆರಳು ಮತ್ತು ತೋರ್ಬೆರಳುಗಳ ಸಮನ್ವಯದೊಂದಿಗೆ)<br>**Uses the pincer grip (coordination of the index finger and thumb to hold an item) to hold and manipulate tools for drawing, painting, and writing.** |

DRAFT 2022

**2.2) ಅಭಿವೃದ್ಧಿ ಗುರಿ–02 ಪ್ರಥಮ ಭಾಷೆ**
**ಪರಿಣಾಮಕಾರಿ ಸಂವಹನಕಾರರಾಗಿ ಮಕ್ಕಳು ರೂಪುಗೊಳ್ಳುವುದು**

**2.2.1 ಮುಖ್ಯ ಘಟಕಾಂಶಗಳು: (Key Components):**

1. ಮೌಖಿಕ ಭಾಷಾ ಅಭಿವೃದ್ಧಿ (Oral language Development)
2. ಧ್ವನಿ ಸಂಕೇತಗಳ ಗ್ರಹಿಕೆ (Phonological Awareness)
3. ಅಕ್ಷರಗಳ ಆಕಾರ ಮತ್ತು ಧ್ವನಿಗಳ ಸಹ ಸಂಬಂಧ (Decoding)
4. ಪದ ಸಂಪತ್ತು (Vocabulary)
5. ಅರ್ಥಗ್ರಹಿಕೆಯೊಂದಿಗೆ ಓದು (Reading Comprehension)
6. ನಿರರ್ಗಳ ಓದು (Reading Fluency)
7. ಮುದ್ರಿತ ವಿಷಯ ವಸ್ತುಗಳ ಪರಿಕಲ್ಪನೆ (Concept about Print)
8. ಬರವಣಿಗೆ (Writing)
9. ಓದುವ ಸಂಸ್ಕೃತಿ/ ಓದಿನೆಡೆಗೆ ಒಲವು (Culture of Reading/ Inclination towards Reading)

## 2.2.2. ಅಭಿವೃದ್ಧಿ ಗುರಿ–02 ರ ಮುಖ್ಯ ಸಾಮರ್ಥ್ಯಗಳು:

| ಕ್ರ.ಸಂ. | ಸಾಮರ್ಥ್ಯಗಳು |
|---|---|
| **ಆಲಿಸುವುದು ಮತ್ತು ಮಾತನಾಡುವುದು (Talking and Listening)** | |
| 1. | ಅರ್ಥಗ್ರಹಿಕೆಯೊಂದಿಗೆ ಆಲಿಸುವುದು. (Listening with comprehension) |
| 2. | ಸೃಜನಾತ್ಮಕ ಸ್ವ–ಅಭಿವ್ಯಕ್ತಿ ಮತ್ತು ಸಂವಹನ (Creative Self Expression and Conversation) |
| 3. | ಭಾಷೆ ಮತ್ತು ಸೃಜನಾತ್ಮಕ ಚಿಂತನೆ (Language and Creative thinking) |
| 4. | ಪದಸಂಪತ್ತಿನ ಅಭಿವೃದ್ಧಿ (Vocabulary Development) |
| 5. | ಸಂವಹನ ಮತ್ತು ಮಾತನಾಡುವ ಕೌಶಲ (Conversation and talking skills) |
| 6. | ಭಾಷೆಯ ಅರ್ಥಪೂರ್ಣ ಬಳಕೆ (Meaningful uses of language) |
| **ಅರ್ಥಗ್ರಹಿಕೆಯೊಂದಿಗೆ ಓದು (Reading with comprehension)** | |
| 1. | ಪುಸ್ತಕಗಳ ಜೊತೆಗಿನ ಒಡನಾಟ–ಬಾಂಧವ್ಯ (Bonding with Books) |
| 2. | ಮುದ್ರಿತ ಸಾಹಿತ್ಯದ ಅರ್ಥಪೂರ್ಣ ಗ್ರಹಿಕೆ (Print Awareness and Meaning Making) |
| 3. | ಭಾವಾಭಿವ್ಯಕ್ತಿಯೊಂದಿಗೆ ಓದು (Pretend Reading) |
| 4. | ಧ್ವನಿ ಸಂಕೇತ/ ಧ್ವನಿ ವಿಜ್ಞಾನದ ಗ್ರಹಿಕೆ (Phonological Awareness) |
| 5. | ಧ್ವನಿ ಮತ್ತು ಸಂಕೇತಗಳ ಸಂಯೋಜನೆ (Sound Symbol Association) |
| 6. | ಅನುಭವ ಮತ್ತು ಪೂರ್ವ ಜ್ಞಾನದ ಆಧಾರದ ಮೇಲೆ ಊಹಿಸುವಿಕೆ (Prediction and use of previous experiences with knowledge) |
| 7. | ಸಂತೋಷ, ಮನರಂಜನೆ ಹಾಗೂ ಇತರೆ ಉದ್ದೇಶಗಳಿಗಾಗಿ ಸ್ವತಂತ್ರ ಓದು (Independent reading for pleasure and various purposes.) |
| **ಉದ್ದೇಶಿತ ಬರಹ (Writing with purpose)** | |
| 1. | ಆರಂಭಿಕ ಸಾಕ್ಷರತಾ ಕೌಶಲಗಳು (Early literacy skills) |
| 2. | ಸ್ವ–ಅಭಿವ್ಯಕ್ತಿಗಾಗಿ ಬರವಣಿಗೆ (Writing for self-expression) |
| 3. | ಪದಗಳ ರಚನೆಯಲ್ಲಿ ಅಕ್ಷರ ಮತ್ತು ಧ್ವನಿ ಸಂಕೇತಗಳ ಬಳಕೆ (Make use of her/ his knowledge of letter and sounds, invents spellings to write) |
| 4. | ಭಾಷಾ ನಿಯಮಗಳನ್ನು ಅನುಸರಿಸಿದ ಬರಹ (Make efforts to write in conventional ways) |
| 5. | ಓದಿದ ಪಠ್ಯಕ್ಕೆ ಚಿತ್ರ/ ಪದ/ ಅರ್ಥಪೂರ್ಣ ವಾಕ್ಯಗಳ ಮೂಲಕ ಪ್ರತಿಕ್ರಿಯೆ (Response to reading with drawings/ words and meaningful sentences) |
| 6. | ಪ್ರಾಸಪದಗಳ ಬರವಣಿಗೆ (Writing of rhyming words) |
| 7. | ನಾಮಪದಗಳು ಮತ್ತು ಕ್ರಿಯಾಪದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳ ರಚನೆ (Write meaningful sentences using naming words and action words) |
| 8. | ಸ್ವಯಂ–ಅಭಿವ್ಯಕ್ತಿಗಾಗಿ ಸಂದೇಶಗಳ ಬರವಣಿಗೆ (Write messages to express themselves) |
| 9. | ಮಿಶ್ರಿತ ಭಾಷಾ ಸಂಕೇತಗಳ ಬಳಕೆ (Using mixed language codes) |
| 10. | ಮನೆ ಹಾಗೂ ಶಾಲೆಯಲ್ಲಿನ ವಿವಿಧ ಸನ್ನಿವೇಶಗಳನ್ನು ಆಧರಿಸಿದ ಬರವಣಿಗೆ<br>ಉದಾ: ಪಟ್ಟಿ ಮಾಡುವುದು, ಹಿರಿಯರಿಗೆ ಶುಭಾಶಯ ಬರವಣಿಗೆ, ಸ್ನೇಹಿತರಿಗೆ ಆಹ್ವಾನ ಪತ್ರ ಬರೆಯುವುದು.<br>(Write for different purposes in the classroom's activities and at home, such as making list, writing greeting to grandparents, messages/ invitation to friends, etc.) |

DRAFT 2022

| ವಿದ್ಯಾ ಪ್ರವೇಶ್ ನೀಡಿರುವ ಮೇಲಿನ ಸಾಮರ್ಥ್ಯಗಳೊಂದಿಗೆ ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ಈ ಎರಡು ಹೆಚ್ಚುವರಿ ಸಾಮರ್ಥ್ಯಗಳನ್ನು ಸೇರಿಸಿಕೊಳ್ಳಲಾಗಿದೆ. | |
|---|---|
| 11. | ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಗುರುತಿಸಿ ಓದು ಮತ್ತು ಬರೆಹ. (Identify and write the GUNITHAKSHARA and OTTAKSHARA letters) |
| 12. | ಸ್ವತಂತ್ರವಾಗಿ ಪದ ಹಾಗೂ ವಾಕ್ಯಗಳ ರಚನೆ (Create words and sentences independently) |

## 2.2.3) ಅಭಿವೃದ್ಧಿ ಗುರಿ–02ರ ಕಲಿಕಾ ಫಲಗಳು

| ಕ್ರ.ಸಂ. | ನಿಪುಣ್ ಕ್ರ.ಸಂ | ಕಲಿಕಾ ಫಲಗಳ ವಿವರಗಳು |
|---|---|---|
| 1. | 3.1 | ಅಪರಿಚಿತ ಶಿಕ್ಷಕರು, ಹೊಸ ಗೆಳೆಯರು, ಶಾಲಾ ಸಿಬ್ಬಂದಿ, ಇತರೆ ವಯಸ್ಕರು ಮೊದಲಾದವರೊಂದಿಗೆ ಶಾಲೆ ಮತ್ತು ಮನೆಯ ವಾತಾವರಣದಲ್ಲಿ ತಮ್ಮದೇ ಭಾಷೆಯಲ್ಲಿ ಸಂಭಾಷಣೆಯಲ್ಲಿ ತೊಡಗುವರು.<br>ECL1 3.1: Engages in conversation in school and home with unfamiliar teachers, new friends, school staff, other adults, etc., in their own language. |
| 2. | 3.2 | ಓದುವ ಮೂಲೆ/ ಗ್ರಂಥಾಲಯದಿಂದ ಪುಸ್ತಕವನ್ನು ಆಯ್ದುಕೊಳ್ಳುವರು. ಚಿತ್ರದ ಸಹಾಯದಿಂದ ಕಥೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದರೊಂದಿಗೆ ಮುದ್ರಿತ/ಬರೆದ ಪಠ್ಯವನ್ನು ಊಹಿಸುವರು.<br>ECL1 3.2: Selects book from reading corners/ reading area and attempts to understand the story with the help of pictures and can predict the written text. |
| 3. | 3.3 | ಕಥೆ/ಪದ್ಯವನ್ನು ಆಲಿಸಿದ ನಂತರ ತಮ್ಮ ಅನುಭವವನ್ನು ತಮ್ಮದೇ ಮಾತುಗಳಲ್ಲಿ ವ್ಯಕ್ತಪಡಿಸುವರು ಮತ್ತು ಅವುಗಳ ಬಗ್ಗೆ ಮಾತನಾಡುವರು. ಗೆಳೆಯರೊಂದಿಗೆ ಹಂಚಿಕೊಳ್ಳುವರು.<br>ECL1 3.3: Expresses their experiences of reading poems/ stories in their own language and talks about it and shares it with friends. |
| 4. | 3.4a | ತಮ್ಮದೇ ಭಾಷೆಯಲ್ಲಿ ಆಸಕ್ತಿದಾಯಕ ಶಿಶುಗೀತೆ/ ಪದ್ಯ/ ಹಾಡನ್ನು ಹಾಡುವಾಗ ಸೂಕ್ತ ಧ್ವನಿ/ ಸ್ವರಭಾರದ ಏರಿಳಿತ ಬಳಸುವರು.<br>ECL1 3.4: (a) Uses appropriate intonation and modulation of voice while reciting interesting poems/ songs in their own language. |
| 5. | 3.4b | ಪರಿಚಿತ ಶಿಶುಪ್ರಾಸ/ ಪದ್ಯಗಳನ್ನು ಸೂಕ್ತ ಸ್ವರಭಾರದೊಂದಿಗೆ ನಿರರ್ಗಳವಾಗಿ ಹೇಳುವರು<br>ECL1 3.4: (b) Recites with fluency with appropriate intonation parts of familiar poems in their own language. |
| 6. | 3.5 a | ತಮ್ಮ ನೆಚ್ಚಿನ ಕಥೆ ಪುಸ್ತಕವನ್ನು ಶಿಕ್ಷಕರಿಗೆ ಕಥೆಯನ್ನು ಹೇಳಲು ನೀಡುವರು.<br>ECL1 3.5: (a) Gives their favourite storybooks to the teacher to narrate the story. |
| 7. | 3.5 b | ಚಿತ್ರದಲ್ಲಿರುವ ವಸ್ತುಗಳನ್ನು ಅವಧಾನದಿಂದ/ ಏಕಾಗ್ರತೆಯಿಂದ ವೀಕ್ಷಿಸುವರು ಮತ್ತು ಅವುಗಳ ಬಗ್ಗೆ ಮಾತನಾಡುವರು. ಅಕ್ಷರಗಳನ್ನು ಹುಡುಕಿ ಅವುಗಳ ಹೆಸರು ಬರೆಯುವರು.<br>ECL1 3.5: (b) Observes attentively the objects in the pictures and talks about them and write their name by using invented spellings. |
| 8. | 3.6 a | ಮುದ್ರಿತ ಪಠ್ಯವನ್ನು ಅರ್ಥಗ್ರಹಿಕೆಯೊಂದಿಗೆ ಓದುವರು.<br>ECL1 3.6: (a) Reads with the understanding of print awareness. |
| 9. | 3.6 b | ಕಥೆಯನ್ನು ಅರ್ಥಗ್ರಹಿಕೆಯೊಂದಿಗೆ ಓದುವರು ಮತ್ತು ಘಟನೆಗಳಿಗೆ ಚಿತ್ರಗಳನ್ನು ಅನುಕ್ರಮವಾಗಿ ಜೋಡಿಸುವರು.<br>ECL1 3.6: (b) Reads the story by understanding and arranging the pictures in the sequence of events. |
| 10. | 3.7 | ಪರಿಚಿತ ಕಥೆ ಮತ್ತು ಪದ್ಯಗಳಲ್ಲಿನ ಪದಗಳಲ್ಲಿ ಬರುವ ಪುನರಾವರ್ತಿತ ಧ್ವನಿಯನ್ನು ಗುರ್ತಿಸುವರು.<br>ECL1 3.7: Identifies repeated sounds in words occurring in familiar stories and poems. |
| 11. | 3.8 a | ಸರಳವಾಗಿರುವ ಕಥೆ, ಪದ್ಯ ಮತ್ತು ಹಾಡುಗಳಲ್ಲಿ ಪುನರಾವರ್ತಿತ ಧ್ವನಿ, ಪದ ಮೊದಲಾದವುಗಳನ್ನು ಗುರ್ತಿಸುವರು.<br>ECL1 3.8: (a) Identifies repeated sounds, words, etc., in stories, poems and songs. |

DRAFT 22.02.22

| | | |
|---|---|---|
| 12. | 3.8 b | ಚಿತ್ರ ಮತ್ತು ಮುದ್ರಿತ ಪಠ್ಯ, ಪೂರ್ವಾನುಭವ ಮತ್ತು ಮಾಹಿತಿ, ಅಕ್ಷರ–ಧ್ವನಿ ಸಂಯೋಜನೆ ಮೊದಲಾದವುಗಳ ಸಹಾಯದಿಂದ ಪಠ್ಯವನ್ನು ಊಹಿಸುವರು.<br>ECL1 3.8: (b) Predicts about the written text with the help of pictures and print, previous experiences and information, letter-sound association, etc. |
| 13. | 3.9 | ತಮ್ಮ, ಗೆಳೆಯರ ಹಾಗೂ ಸುತ್ತಲಿನ ವಸ್ತುಗಳ ಹೆಸರು ಬರೆಯಲು ಆಸಕ್ತಿ ಬೆಳೆಸಿಕೊಳ್ಳುವರು.<br>ECL1 3.9: Takes interest in writing (invented spellings) one's own name, names of their friends and objects around them. |
| **ವಿದ್ಯಾ ಪ್ರವೇಶ್ ನೀಡಿರುವ ಮೇಲಿನ ಕಲಿಕಾ ಫಲಗಳೊಂದಿಗೆ ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ಈ ಎರಡು ಹೆಚ್ಚುವರಿ ಕಲಿಕಾ ಫಲಗಳನ್ನು ಸೇರಿಸಿಕೊಳ್ಳಲಾಗಿದೆ.** | | |
| 14. | SSK- 1 | ಬರವಣಿಗೆಯ ಸರಿಯಾದ ಕ್ರಮವನ್ನು ಅಭ್ಯಾಸ ಮಾಡುವರು.<br>Practice the correct mode of writing. |
| 15. | SSK-2. | ವರ್ಣಮಾಲೆಯ ಅಕ್ಷರಗಳನ್ನು ಗುರ್ತಿಸಿ ಓದಿ, ಬರೆಯುವರು.<br>Recognize and read the letters of the alphabet. |
| 16. | SSK-3. | ಕಲಿತ ಅಕ್ಷರಗಳಿಂದ ಸರಳ ಪದ, ಪದಗುಚ್ಛಗಳನ್ನು ರಚಿಸುವರು.<br>They will create simple word and phrases from learned letters. |

***************************************☺*********************************************

## 2.3 ಅಭಿವೃದ್ಧಿ ಗುರಿ–03

**ಸಕ್ರಿಯ ಕಲಿಕಾರ್ಥಿಗಳಾಗಿ, ಪರಿಚಿತ ಪರಿಸರದೊಂದಿಗೆ ಮಕ್ಕಳು ಸಂಪರ್ಕ ಸಾಧಿಸುವುದು.**

(GOAL 3: Children become involved learners and connect with their immediate environment (IL))

### 2.3.1 ಮುಖ್ಯ ಘಟಕಾಂಶಗಳು

| | |
|---|---|
| 1 | ಸಂವೇದನಾ ಅಭಿವೃದ್ಧಿ (Sensory Development) |
| 2 | ಜ್ಞಾನಾತ್ಮಕ ಕೌಶಲಗಳು (Cognitive Skills) |
| 3 | ಪರಿಸರಕ್ಕೆ ಸಂಬಂಧಿಸಿದ ಪರಿಕಲ್ಪನೆಗಳು (Concept related to environment) |
| 4 | ಪರಿಕಲ್ಪನೆ ಮೂಡಿಸುವುದು. (Concept Formation) |
| 5 | ಸಂಖ್ಯಾಜ್ಞಾನ (Number Sense) |
| 6 | ಸಂಖ್ಯಾ ಮೂಲಕ್ರಿಯೆಗಳು (Number Operations) |
| 7 | ಅಳತೆ (Measurement) |
| 8 | ಆಕೃತಿಗಳು (Shapes) |
| 9 | ದತ್ತಾಂಶ ನಿರ್ವಹಣೆ (Data Handling) |
| | ವಿನ್ಯಾಸ (Pattern) |
| | ಕ್ಯಾಲೆಂಡರ್‌ಚಟುವಟಿಕೆ (Calendar Activity) |
| | ತಂತ್ರಜ್ಞಾನ ಬಳಕೆ (Use of Technology) |

DRAFT 22.22

## 2.3.2 ವಿದ್ಯಾ ಪ್ರವೇಶ ಗುರಿ–3 ರ ಸಾಮರ್ಥ್ಯಗಳು (KEY COMPETENCIES)

| | |
|---|---|
| **1. ಸಂವೇದನಾ ಅಭಿವೃದ್ಧಿ (Sensory Development)** | |
| * ನೋಟ (Sight) | * ವಾಸನೆ (Smell) |
| * ಶಬ್ದ (Sound) | * ರುಚಿ (Taste) |
| * ಸ್ಪರ್ಶ (Touch) | |
| **2. ಜ್ಞಾನಾತ್ಮಕ ಕೌಶಲಗಳು (Cognitive Skills)** | |
| * ವೀಕ್ಷಣೆ (Observation) | * ಸೃಜನಾತ್ಮಕ ಚಿಂತನೆ (Creative Thinking) |
| * ಗುರುತಿಸುವುದು (Identification) | * ವಿಮರ್ಶಾತ್ಮಕ ಚಿಂತನೆ (Critical Thinking) |
| * ಸ್ಮರಣೆ (Memorisation) | * ಸಮಸ್ಯಾ ಪರಿಹಾರ (Problem Solving) |
| * ಜೋಡಣೆ (Matching) | * ತಾರ್ಕಿಕ ಚಿಂತನೆ (Reasoning) |
| * ವರ್ಗೀಕರಣ (Classification) | * ಕುತೂಹಲ (Curiosity) |
| * ವಿನ್ಯಾಸ (Patterns) | * ಪ್ರಾಯೋಗಿಕತೆ (Experimentation) |
| * ಅನುಕ್ರಮ ಚಿಂತನೆ (Sequential Thinking) | * ಪರಿಶೋಧನೆ (Exploration) |
| **3. ಪರಿಸರಕ್ಕೆ ಸಂಬಂಧಿಸಿದ ಪರಿಕಲ್ಪನೆಗಳು (Concept related to environment)** | |
| * ನೈಸರ್ಗಿಕ – ಪ್ರಾಣಿಗಳು, ಹಣ್ಣುಗಳು, ತರಕಾರಿಗಳು, ಆಹಾರ (Natural-animals, fruits, vegetables, food) | * ಸಾಮಾಜಿಕ – ನಾನು, ಕುಟುಂಬ, ಸಾರಿಗೆ, ಹಬ್ಬ, ಸಮುದಾಯದ ಸಹಾಯಕರು..ಇತ್ಯಾದಿ (Social - myself, family, transport, festival, community helpers, etc.) |
| * ಭೌತಿಕ – ನೀರು, ಗಾಳಿ, ಕಾಲಗಳು, ಸೂರ್ಯ, ಚಂದ್ರ, ಹಗಲು ಮತ್ತು ರಾತ್ರಿ (Physical - water, air, season,sun, moon, day and night) | |
| **4. ಪರಿಕಲ್ಪನೆ ಮೂಡಿಸುವುದು. (Concept Formation)** | |
| * ಬಣ್ಣಗಳು (Colours) | * ತೂಕ (weight) |
| * ಆಕಾರಗಳು (shapes) | * ಎತ್ತರ (height) |
| * ದೂರ (distance) | * ಕಾಲ (time) |
| * ಅಳತೆ (measurement) | * ಸ್ಥಳಾವಕಾಶದ ಅರಿವು (Spatial sense) |
| * ಗಾತ್ರ (size) | * ಒಂದಕ್ಕೊಂದನ್ನು ಹೊಂದಿಸುವುದು(One-to-one Correspondence) |
| * ಉದ್ದ (length) | |
| **5. ಸಂಖ್ಯಾಜ್ಞಾನ (Number Sense)** | |
| * ಎಣಿಸಿ ಎಷ್ಟು ಎಂದು ಹೇಳುವುದು. (Count and tell how many) | |
| * ಸಂಖ್ಯಾಸೂಚಕಗಳನ್ನು ಗುರುತಿಸುವುದು. (Numeral recognition) | |
| *ಅನುಕ್ರಮಣಿಕೆ ಜ್ಞಾನ (Sense of order) | |
| **6. ಸಂಖ್ಯಾ ಮೂಲಕ್ರಿಯೆಗಳು (Number Operations)** | |
| * ಸಂಕಲನ (Addition) | * ಗುಣಾಕಾರ (Multiplication) |
| * ವ್ಯವಕಲನ (Subtraction) | * ಭಾಗಾಕಾರ (Division) |

DRAFT 2022

| 7. ಅಳತೆ **(Measurement)** | |
|---|---|
| * ಉದ್ದ (Length) | * ಗಾತ್ರ (Volume) |
| * ದ್ರವ್ಯರಾಶಿ (Mass) | * ಉಷ್ಣತೆ (Temperature) |
| 8. ಆಕೃತಿಗಳು (**Data Handling)** | |
| * 2, 3 ಆಯಾಮದ ಆಕೃತಿಗಳು (2, 3 D Shapes) | * ಸಮತಲ (Plain) |
| * ಸರಳ ರೇಖೆ (Straight line) | * ವಕ್ರ ಮೇಲ್ಮೈಗಳು (Curved Surface) |
| * ವಕ್ರ ರೇಖೆ (Curved Line) | |
| 9. ದತ್ತಾಂಶ ನಿರ್ವಹಣೆ (**Data Handling)** | |
| 10 ವಿನ್ಯಾಸ **(Pattern)** | |
| 11. ಕ್ಯಾಲೆಂಡರ್‌ಚಟುವಟಿಕೆ (**Calendar Activity)** | |
| 12. ತಂತ್ರಜ್ಞಾನ ಬಳಕೆ **(Use of Technology)** | |

### 3.3.3 ವಿದ್ಯಾ ಪ್ರವೇಶ ಗುರಿ–3ರ ಕಲಿಕಾ ಫಲಗಳು

| ಕ್ರ.ಸಂ. | ವಿ.ಪ್ರ ಕ್ರ.ಸಂ. | ಕಲಿಕಾ ಫಲಗಳ ವಿವರಗಳು |
|---|---|---|
| 1 | IL3.1 | 3.1 : ಪರಿಸರವನ್ನು ವೀಕ್ಷಿಸಲು ಮತ್ತು ಅನ್ವೇಷಿಸಲು ಎಲ್ಲ ಜ್ಞಾನೇಂದ್ರಿಯಗಳನ್ನು ಬಳಸುವರು.<br>**IL3.1: Uses all the senses to observe and explore the environment.** |
| 2 | IL3.2 | 3.2 : ಸುತ್ತಲಿನ ಪರಿಸರದಲ್ಲಿನ ಸಾಮಾನ್ಯ ವಸ್ತುಗಳು, ಶಬ್ದಗಳು, ಜನರು, ಚಿತ್ರಗಳು, ಪ್ರಾಣಿಗಳು, ಪಕ್ಷಿಗಳ ಸೂಕ್ಷ್ಮ ಲಕ್ಷಣಗಳನ್ನು ಗುರುತಿಸುವರು ಮತ್ತು ವಿವರಿಸುವರು.<br>**IL3.2: Notices and describes finer details of common objects, sounds, people, pictures, animals, birds, in the immediate environment.** |
| 3 | IL3.3 ಎ | ಏಕಕಾಲಕ್ಕೆ ನೋಡಿದ 4–5 ವಸ್ತುಗಳನ್ನು ಸ್ಮರಿಸುವರು.<br>**IL3.3: (a) Remembers and recalls 4–5 objects seen at atime.** |
| 4 | IL3.3 ಬಿ | ಪರಿಚಿತ ವಸ್ತುವಿನ ಚಿತ್ರದಲ್ಲಿ ಬಿಟ್ಟು ಹೋದ 3 ರಿಂದ 5 ಭಾಗಗಳನ್ನು ಗುರುತಿಸುವರು.<br>**IL3.3: (b) Identifies 3–5 missing parts of a picture of familiar object.** |
| 5 | IL3.4 | ಎರಡು ಗುಂಪುಗಳಲ್ಲಿ 5 ರಿಂದ 6 ವಸ್ತುಗಳನ್ನು ಇಟ್ಟುಒಂದಕ್ಕೊಂದನ್ನು ಹೊಂದಿಸುವರು.<br>**IL3.4: Places 5–6 objects of two groups in one-to-one correspondence.** |
| 6 | IL3.5 | ವಸ್ತುಗಳ ಆಕಾರ, ಗಾತ್ರ, ಬಣ್ಣ ಇತ್ಯಾದಿ ಭೌತಿಕ ಲಕ್ಷಣಗಳನ್ನು ಆಧರಿಸಿ ಹೋಲಿಸಿ ವರ್ಗೀಕರಿಸುತ್ತಾರೆ ಮತ್ತು ಸ್ಥಾನ ಸೂಚಕ ಪದಗಳಾದ ಹಿಂದೆ–ಮುಂದೆ, ಅಕ್ಕ–ಪಕ್ಕ, ಒಳಗೆ–ಹೊರಗೆ ಬಳಸಿ ವಸ್ತುವಿನ ಸ್ಥಾನ ವಿವರಿಸುವರು.<br>**IL 3.5: Compares and classifies objects by three factors like shape, colour and size, etc. Correctly uses position words (beside, inside, under) to describe the location of objects.** |
| 7 | IL3.6 | 4 ರಿಂದ 5 ಚಿತ್ರ/ಚಿತ್ರಪಟ ಅಥವಾ ವಸ್ತುಗಳನ್ನು ಅನುಕ್ರಮವಾಗಿ ಜೋಡಿಸುವರು. (ಉದಾ: ಆಕಾರ, ಗಾತ್ರ, ಘಟನೆಗಳು ನಡೆಯುವ ಸಂದರ್ಭ)<br>**IL 3.6: Seriates/arranges 4–5 picture cards/objects in a sequence, e.g., shape, size and occurrence of events.** |
| 8 | IL3.7 | ಕಥೆಯಲ್ಲಿ ಬರುವ ಕಾಲಸಂಬಂಧಿತ ಘಟನಾಕ್ರಮಗಳನ್ನು ಅರ್ಥಮಾಡಿಕೊಳ್ಳುವರು. (ಯಾವುದು ಮೊದಲು ನಡೆಯಿತು? ರಾತ್ರಿಯಾರು ಬಂದರು? ಇತ್ಯಾದಿ)<br>**IL 3.7: When recited a story, can understand time related events like, What happened first?; Who came at night?; etc.** |
| 9 | IL3.8 A | ಸರಳ ಸಮಸ್ಯೆಗಳನ್ನು ಪರಿಹರಿಸುವ ಸಂದರ್ಭದಲ್ಲಿ ತಾರ್ಕಿಕವಾಗಿ ಯೋಚಿಸಿ ಪರಿಹಾರಗಳನ್ನು ಸೂಚಿಸುವರು.<br>**IL3.8: (a) Provides solutions to simple problem solving situations with reasons.** |

DRAFT 2022

| | | |
|---|---|---|
| 10 | IL3.8 B | ಪರಿಸರದಲ್ಲಿನ ವಸ್ತುಗಳನ್ನು ಅನ್ವೇಷಿಸುವರು ಮತ್ತು ಬದಲಿಸುವುದರಲ್ಲಿ ತೊಡಗಿಸಿಕೊಳ್ಳುವರು. ಪ್ರಶ್ನೆಗಳನ್ನು ಕೇಳುವರು, ವಿಚಾರಿಸುವರು, ಹುಡುಕುವರು ಮತ್ತು ತಾವೇ ಸ್ವತಃ ಪರಿಕಲ್ಪನೆ ಬೆಳೆಸಿಕೊಳ್ಳುವರು ಮತ್ತು ಊಹಿಸುವರು.<br>**IL3.8: (b) Engages in investigating and manipulating objects in the environment, asks questions, inquires, discovers and constructs one's own ideas and predicts.** |
| 11 | IL3.8 C | ಪರಿಸರದ ಅರಿವು ಮತ್ತು ಕಾಳಜಿಯನ್ನು ಪ್ರದರ್ಶಿಸುವರು. ಉದಾ: ನೀರನ್ನು ಪೋಲು ಮಾಡಬೇಡಿ, ಬಳಕೆಯಲ್ಲಿ ಇಲ್ಲದಿದ್ದಾಗ ಲೈಟುಗಳನ್ನು ಆರಿಸಬೇಕು.<br>**IL3.8: (c) Demonstrates awareness and sensitivity towards environmental concerns, e.g., do not waste water, switching of lights when not in use, etc.** |
| 12 | IL3.9 | ಹತ್ತರವರೆಗೆ ವಸ್ತುಗಳನ್ನು ಎಣಿಸುವರು.<br>**IL3.9: Counts up to 10 objects.** |
| 13 | IL3.10 | 9 ರವರೆಗಿನ ಸಂಖ್ಯೆಗಳಲ್ಲಿ ಸೂಚಿತ ಸಂಖ್ಯೆಯಿಂದ ಮುಮ್ಮುಖ ಮತ್ತು ಹಿಮ್ಮುಖ ಸಂಖ್ಯೆಗಳನ್ನು ಹೇಳುವರು.<br>**IL3.10: Can count forward and backward from a particular number up to 9.** |
| 14 | IL3.11 | 9 ರವರೆಗಿನ ಅಂಕಿಗಳನ್ನು ಗುರುತಿಸಿ ಹೇಳುವರು ಮತ್ತು ಬರೆಯುವರು.<br>**IL3.11: Identifies numerals with numbers and writes numerals up to 9.** |
| 15 | IL 3.12 | ವಸ್ತುಗಳು ಕಡಿಮೆಯಾಗುತ್ತಾ ಹೋಗಿ ಇಲ್ಲವಾಗುತ್ತವೆ ಎಂಬ ಗ್ರಹಿಕೆಯನ್ನು ಪ್ರದರ್ಶಿಸುವರು. (ಉದಾ: ಮರದ ಕೊಂಬೆಯಲ್ಲಿ 3 ಹಕ್ಕಿಗಳು ಕುಳಿತುಕೊಂಡಿದ್ದವು. ಅವುಗಳಲ್ಲಿ ಒಂದಾದ ನಂತರ ಒಂದರಂತೆ ಹಾರಿ ಹೋದವು. ಕೊನೆಯಲ್ಲಿ ಯಾವುದೇ ಹಕ್ಕಿ ಕೊಂಬೆಯಲ್ಲಿ ಉಳಿದಿಲ್ಲ)<br>**IL3.12: Demonstrates the awareness that things reduce in number and become nil, (e.g. 3 birds sitting on a branch of tree flew away one by one at the end, no bird is left on the branch).** |
| 16 | IL3.13 | 10 ರವರೆಗೆ ಸಂಖ್ಯೆಗಳಲ್ಲಿ ಎರಡು ಸಂಖ್ಯೆಗಳನ್ನು ಹೋಲಿಸುತ್ತಾರೆ, ದೊಡ್ಡದು–ಚಿಕ್ಕದು ಪದ ಬಳಸಿ ಹೇಳುವರು.<br>**IL3.13: Compares two numbers up to 10 and uses vocabulary like more than, less than.** |
| 17 | IL3.14 | 9 ಕ್ಕೆ ಮೀರದಂತೆ ಎರಡು ಗುಂಪು ಗಳಲ್ಲಿರುವ ವಸ್ತುಗಳನ್ನು ಒಟ್ಟು ಮಾಡುವರು ಮತ್ತು ಮರು ಎಣಿಸುವರು.<br>**IL3.14: Combines two groups up to 9 objects and recounts.** |
| 18 | IL3.15 | 9ರವರೆಗಿನ ವಸ್ತುಗಳಲ್ಲಿ ಕೆಲವನ್ನು ಹೊರಗೆತೆಗೆಯುವರು ಮತ್ತು ಮರುಎಣಿಕೆ ಮಾಡುವರು.<br>**IL3.15: Takes out objects from a collection up to 9 objects and recounts.** |
| 19 | IL3.20 | ಭಾರತೀಯ ಚಲಾವಣೆಯ ನಾಣ್ಯ ಮತ್ತು ನೋಟುಗಳನ್ನು ಗುರುತಿಸುವರು.<br>**IL3.20: Identifies Indian currency notes.** |
| 20 | IL3.21 | 3 ವಸ್ತುಗಳ ಉದ್ದ ಆಧರಿಸಿ ಅತೀಉದ್ದ, ಅತೀಚಿಕ್ಕ ಮತ್ತು ಅತೀಎತ್ತರ, ಅತೀಗಿಡ್ಡ ಎಂದು ಹೋಲಿಸುವರು.<br>**IL3.21: Compares three objects in terms of their length as longest/shortest and tallest/shortest.** |
| 21 | IL3.22 | 2 ವಸ್ತುಗಳ ತೂಕ ಆಧರಿಸಿ ಅತಿಭಾರ – ಅತಿಹಗುರ ಎಂದು ಹೋಲಿಸುವರು.<br>**IL 3.22: Compares two objects in terms of their weight as heavierthan/lighter than.** |
| 22 | IL3.23 | ಎರಡು ಪಾತ್ರೆಗಳ ಧಾರಣ ಸಾಮರ್ಥ್ಯವನ್ನು ಲೋಟ, ಚೊಂಬು, ಬಾಟಲ್, ಮತ್ತು ಬಕೆಟ್ ಇತ್ಯಾದಿಗಳಲ್ಲಿ ಹೋಲಿಸುವರು.<br>**IL3.23: Compares capacities of two vessels like bottles, glasses, bucket, etc.** |
| 23 | IL3.25 | ಸಮತಲ ಮೇಲ್ಮೈನಲ್ಲಿ 2 ಆಯಾಮ ಮತ್ತು 3 ಆಯಾಮದ ವಸ್ತುಗಳನ್ನು ಬಳಸಿ ಅಚ್ಚು ತೆಗೆಯುವರು.<br>**IL 3.25: Identifies 2-D shapes by tracing the faces of 3-D shapes on a plane surface.** |
| 24 | IL3.26 | ಅರ್ಧರೊಟ್ಟಿ, ಅರ್ಧತುಂಬಿದ ಲೋಟ ಇತ್ಯಾದಿ ಪದಗಳನ್ನು ತಮ್ಮ ನಿತ್ಯಜೀವನದ ಸಂದರ್ಭಗಳಲ್ಲಿ ಬಳಸುವರು.<br>**IL 3.26: Uses vocabulary like half roti/half a glass of water, etc., in daily context.** |
| 25 | IL3.27 | ಎಲೆಗಳ ಒತ್ತು ಚಿತ್ರ, ಬೆರಳು ಒತ್ತು ಚಿತ್ರ ಇತ್ಯಾದಿಗಳ ಮೂಲಕ ಹೊಸ ವಿನ್ಯಾಸಗಳನ್ನು ರಚಿಸುವರು.<br>**IL3.27: Creates new patterns with leaf printing or thumb printing, etc.** |
| 26 | IL3.28 | ತನ್ನ ಸುತ್ತಲಿನ ಸನ್ನಿವೇಶಗಳಿಂದ ತೀರ್ಮಾನಗಳನ್ನು ತೆಗೆದುಕೊಳ್ಳುವರು. (ಉದಾ: ನನ್ನಲ್ಲಿ ನೀಲಿ ಪೆನ್ಸಿಲ್‌ಗಳಿಗಿಂತ ಕೆಂಪು ಪೆನ್ಸಿಲ್‌ಗಳು ಹೆಚ್ಚು ಇವೆ)<br>**IL3.28: Draws inferences from situations that surround her/him, e.g., I have more red pencils than blue.** |
| 27 | IL3.29 | ವಾರದ ದಿನಗಳು ಮತ್ತು ವರ್ಷದ ತಿಂಗಳುಗಳ ಹೆಸರನ್ನು ಹೇಳುವರು.<br>**IL3.29: Recites the names of the days of the week andmonths of the year.** |
| 28 | IL3.30 | ತನ್ನ ಸುತ್ತಮುತ್ತಲೂ ಸಾಮಾನ್ಯವಾಗಿ ಲಭ್ಯವಿರುವ ತಾಂತ್ರಿಕ ಸಾಧನಗಳನ್ನು ವಿವರಿಸುವರು.<br>**IL3.30: Describes usage of commonly availabletechnological tools around her/him.** |

DRAFT 2022

# ಅಧ್ಯಾಯ–03 ವಿದ್ಯಾ ಪ್ರವೇಶದಲ್ಲಿ ಆಟದ ಅವಧಿಗಳು


| ಕ್ರಸ | ವಿವರ | ಏನು? (ಚಟುವಟಿಕೆ) | ಏಕೆ? (ಉದ್ದೇಶ) | ಹೇಗೆ? (ವಿಧಾನ–ಶಿಕ್ಷಕರಿಗೆ ಸೂಚನೆ/ ಮಾರ್ಗದರ್ಶನ) |
|---|---|---|---|---|
| 1 | ireet Meet *Teacher-initiated Morning group activity)* **ಭಾಶಯ ವಿನಿಮಯ** | 'ಶುಭಾಶಯ ವಿನಿಮಯ' ಎಂಬುದು ತರಗತಿ ಪ್ರಾರಂಭವಾಗುವ ಮೊದಲು ಶಿಕ್ಷಕರು ಮಕ್ಕಳೊಂದಿಗೆ ಸೇರಿ ಮಾಡಿಸುವ ಚಟುವಟಿಕೆಯಾಗಿದೆ. ಶಿಕ್ಷಕರು ಮಕ್ಕಳನ್ನು ತರಗತಿಗೆ ಸ್ವಾಗತಿಸಬೇಕು; ಮಕ್ಕಳನ್ನು ಅವರವರ ಹೆಸರಿನಿಂದ ಕರೆಯಿರಿ ಮತ್ತು ಅವರಲ್ಲಿ ಆತ್ಮೀಯತೆ, ಪ್ರೀತಿ ಮತ್ತು ಭದ್ರತೆಯ ಭಾವವನ್ನು ಬೆಳೆಸಲು ಚರ್ಚೆಯನ್ನು ಪ್ರಾರಂಭಿಸಿ. | ದಿನದ ಮೊದಲ ಚಟುವಟಿಕೆಯಾಗಿರುವ ಈ ಚಟುವಟಿಕೆಯು ಮಗುವಿಗೆ ಸಕಾರಾತ್ಮಕ ಆಲೋಚನೆಗಳೊಂದಿಗೆ ದಿನವನ್ನು ಪ್ರಾರಂಭಿಸಲು ಪ್ರಚೋದನೆಯನ್ನು ನೀಡುತ್ತದೆ. ಇದರ ಜೊತೆಗೆ:<br>•ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪರಸ್ಪರ ಉತ್ತಮ ಬಾಂಧವ್ಯ ಹೊಂದಲು ಸಹಾಯ ಮಾಡುತ್ತದೆ.<br>•ಹೊಸ ಪರಿಸರದಲ್ಲಿ ಕಲಿಯುವವರಿಗೆ ಸ್ವಾಗತದ ಮತ್ತು ಆರಾಮದಾಯಕ ಭಾವನೆಯನ್ನು ನೀಡುತ್ತದೆ<br>•ಮರುದಿನ ಶಾಲೆಗೆ ಪುನಃ ಬರಲು ಮಕ್ಕಳು ಎದುರು ನೋಡುವಂತೆ ಮಾಡುತ್ತದೆ.<br>•ಉತ್ತಮ ಶಿಷ್ಟಾಚಾರವನ್ನು ಕಲಿಯಲು ಮತ್ತು ಇತರರಿಗೆ ಶುಭಾಶಯ ಸಲ್ಲಿಸಲು ಮಕ್ಕಳಿಗೆ ಸಹಾಯ ಮಾಡುತ್ತದೆ.<br>•ತಮ್ಮ ಸಹಪಾಠಿಗಳು ಮತ್ತು ಶಿಕ್ಷಕರೊಂದಿಗೆ ಧನಾತ್ಮಕವಾಗಿ ಸಂವಹನ ನಡೆಸಲು ಮಕ್ಕಳಲ್ಲಿ ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತದೆ.<br>• ಮಕ್ಕಳು ತಮ್ಮ ಸರದಿಗಾಗಿ ಕಾಯುವುದನ್ನು ಕಲಿಯಲು ಸಹಾಯ ಮಾಡುತ್ತದೆ. | • ಅತ್ಯಂತ ಪ್ರೀತಿ ಮತ್ತು ಉತ್ಸಾಹದಿಂದ ಮಕ್ಕಳನ್ನು ಸ್ವಾಗತಿಸಿ.<br>• ಮಕ್ಕಳು ತರಗತಿಯನ್ನು ಸಾಲಾಗಿ ಪ್ರವೇಶಿಸಲಿ.<br>• ಪ್ರತಿ ಮಗುವನ್ನು ಅದರ ಹೆಸರಿನಿಂದ ಕರೆಯುವ ಮೂಲಕ ಮಗುವಿನಲ್ಲಿ ವಿಶೇಷ ಭಾವನೆ ಮೂಡಿಸಿ.<br>• ಪ್ರತಿದಿನ ಮಕ್ಕಳನ್ನು ವಿವಿಧ ವಿಧಾನಗಳಿಂದ ಅಭಿನಂದಿಸಿ.<br>• ದಿವ್ಯಾಂಗ ಮಕ್ಕಳಿಗೆ ವಿಶೇಷ ಗಮನ ನೀಡಿ.<br>• ಸ್ಪಷ್ಟವಾಗಿ ಶುಭಾಶಯ ಕೋರಿ, ಪ್ರತಿ ಮಗುವಿಗೂ ಮಹತ್ವ ನೀಡಿ ಮತ್ತು ಅಗತ್ಯವಿದ್ದರೆ ಶುಭಾಶಯವನ್ನು ಪುನರಾವರ್ತಿಸಿ.<br>• ಮುಂದಿನ ಮಗುವಿಗೆ ಶುಭಾಶಯ ಹೇಳುವ ಮೊದಲು, ಮಗು ನಿಮ್ಮ ಶುಭಾಶಯಗಳಿಗೆ ಪ್ರತಿಕ್ರಿಯಿಸುವವರೆಗೆ ಕಾಯಿರಿ.<br>• ಮಗುವಿನ ನೈರ್ಮಲ್ಯವನ್ನು ಗಮನಿಸಿ, ಟಿಪ್ಪಣಿ ಮಾಡಿಟ್ಟುಕೊಳ್ಳಿ ಮತ್ತು ಅದನ್ನು ಪ್ರತ್ಯೇಕವಾಗಿ ಹಿಮ್ಮಾಹಿತಿ ನೀಡಿ.<br>ತರಗತಿಯನ್ನು ಪ್ರವೇಶಿಸಿದ ನಂತರ ಆರಾಮವಾಗಿ ಕುಳಿತುಕೊಳ್ಳಲು ಮಕ್ಕಳಿಗೆ ಸೂಚಿಸಿ. |
| | **Circle Time**<br>**ಮಾತು ಕತೆ** | ಮುಕ್ತ ಮಾತುಕತೆ (ಮಕ್ಕಳ ಮಾತನಾಡುವ ಸಮಯ): ಇದು ಮಕ್ಕಳು ತಮ್ಮ ಆಲೋಚನೆಗಳು ಮತ್ತು ಭಾವನೆಗಳನ್ನು ತಾವಾಗಿಯೇ ವ್ಯಕ್ತಪಡಿಸುವ ಸಮಯ. | •ಮಕ್ಕಳಲ್ಲಿ ಸ್ವಯಂ ಅಭಿವ್ಯಕ್ತಿಯನ್ನು ಉತ್ತೇಜಿಸುತ್ತದೆ.<br>•ಆಲಿಸುವ ಮತ್ತು ಮಾತನಾಡುವ ಕೌಶಲ್ಯವನ್ನು ಅಭಿವೃದ್ಧಿಪಡಿಸುತ್ತದೆ.<br>•ಮಕ್ಕಳಿಗೆ ಇತರರ ಅಭಿಪ್ರಾಯಗಳು ಮತ್ತು ಆಲೋಚನೆಗಳನ್ನು ಪ್ರಶಂಸಿಸಲು ಸಹಾಯ | •ಪರಸ್ಪರರ ನಡುವೆ ಸಾಕಷ್ಟು ಜಾಗವನ್ನು ಬಿಟ್ಟು ವೃತ್ತ/ ಅರ್ಧವೃತ್ತದಲ್ಲಿ ಕುಳಿತುಕೊಳ್ಳುವಂತೆ ಮಾಡಿ.<br>•ಮಕ್ಕಳನ್ನು ಅವರ ತರಗತಿಗಳ ಆಧಾರದ ಮೇಲೆ ಪ್ರತ್ಯೇಕಿಸುವುದನ್ನು ತಪ್ಪಿಸಿ.<br>•ಸ್ಪಷ್ಟ ಸೂಚನೆಗಳನ್ನು ನೀಡಿ.<br>•ಹಿರಿಯ ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಯನ್ನು ಪ್ರಾರಂಭಿಸಿ. ಇದು |

| | | | | |
|---|---|---|---|---|
| | | | ಮಾಡುತ್ತದೆ.<br>•ಮಕ್ಕಳು ತಮ್ಮ ಸರದಿಗಾಗಿ ಕಾಯುವುದನ್ನು ಕಲಿಯಲು ಸಹಾಯ ಮಾಡುತ್ತದೆ.<br>•ಮಕ್ಕಳು ತಮ್ಮ ಸುಪ್ತ ಭಾವನೆಗಳನ್ನು ವ್ಯಕ್ತಪಡಿಸಲು ಸಹಾಯ ಮಾಡುತ್ತದೆ.<br>•ಮಕ್ಕಳು ತಮ್ಮ ಸುತ್ತಲಿನ ಪರಿಸರದ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ.<br>•ಮಕ್ಕಳಲ್ಲಿ ಸಹಾನುಭೂತಿ/ಸಂವೇದನೆಯನ್ನು ಬೆಳೆಸುತ್ತದೆ.<br>ಸೃಜನಶೀಲತೆ ಮತ್ತು ಕಲ್ಪನೆಯನ್ನು ಉತ್ತೇಜಿಸುತ್ತದೆ. | ಚಟುವಟಿಕೆಯನ್ನು ಸರಾಗವಾಗಿ ಪ್ರಾರಂಭಿಸಲು ಸಹಾಯ ಮಾಡುತ್ತದೆ ಮತ್ತು ಕಿರಿಯ ಮಕ್ಕಳು ಮುಕ್ತವಾಗಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ.<br>•ಎಲ್ಲಾ ಮಕ್ಕಳನ್ನು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ ಮತ್ತು ಮಾತನಾಡಲು ಅವರನ್ನು ಪ್ರೋತ್ಸಾಹಿಸಿ.<br>•ಚಟುವಟಿಕೆಯಲ್ಲಿ ಹಿರಿಯ ಮಕ್ಕಳು ಹೆಚ್ಚಿನ ಆದ್ಯತೆ ಪಡೆಯುವುದನ್ನು ತಪ್ಪಿಸಿ.<br>•ಪ್ರತಿ ಮಗುವಿಗೂ ಮಾತನಾಡಲು ಅವಕಾಶ ಸಿಗುವಂತೆ ನೋಡಿಕೊಳ್ಳಿ. ಮಕ್ಕಳು ಇತರರನ್ನು ಗೇಲಿ ಮಾಡಲು ಬಿಡಬೇಡಿ. |

DRAFT 22.02.22

| | | | | |
|---|---|---|---|---|
| 3 | ನನ್ನ ಸಮಯ | "ನನ್ನ ಸಮಯ" ಎಂಬ ಶೀರ್ಷಿಕೆಯು ಮಗುವಿನ ಮುಕ್ತ ಸಮಯವಾಗಿದ್ದು ತನಗಿಷ್ಟವಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ವಿಪುಲ ಅವಕಾಶಗಳನ್ನು ಕಲ್ಪಿಸುತ್ತದೆ. ಮಗುವಿನ ಗ್ರಹಣ ಶಕ್ತಿ, ಊಹಾ ಶಕ್ತಿ ಹಾಗೂ ಕಲ್ಪನಾ ಶಕ್ತಿಯ ಈಡೇರಿಕೆಯಂತಹ ಪ್ರಮುಖ ಉದ್ದೇಶವನ್ನು ಇದು ಒಳಗೊಂಡಿದೆ.<br><br>ಮಗುವಿನ ಬೌದ್ಧಿಕ , ಭಾವನಾತ್ಮಕ, ಶಾರೀರಿಕ ಹಾಗೂ ಸೂಕ್ಷ್ಮ ಚಲನಾ ಕೌಶಲಗಗಳ ಅಭಿವೃದ್ಧಿಗೆ "ನನ್ನ ಸಮಯ"ವು ಸಹಕಾರಿಯಾಗಬೇಕು. ಈ ನಿಟ್ಟಿನಲ್ಲಿ ಇದೊಂದು ಸ್ವತಂತ್ರ ಚಟುವಟಿಕೆಗಳ ನಿರ್ವಹಣೆಗೆ ಪ್ರೇರೇಪಿಸುವ ಮುಕ್ತ ಸಮಯವಾಗಿದೆ.<br>ಇದಕ್ಕಾಗಿ ವಿದ್ಯಾಪ್ರವೇಶದಲ್ಲಿ ಎಂಟು ಮೂಲೆ( ಸ್ಥಳ) ಗಳನ್ನು ಪ್ರತ್ಯೇಕವಾಗಿ ಗುರುತಿಸಲಾಗಿದ್ದು, ಪ್ರತಿ ಮೂಲೆಗೂ ಒಂದೊಂದು ಹೆಸರನ್ನು ನೀಡಲಾಗಿದೆ .ಹೆಸರಿಗೆ ತಕ್ಕಂತೆ ಪ್ರತಿ ಮೂಲೆಯೂ ಪೂರಕ ವಸ್ತುಗಳನ್ನು ಒಳಗೊಂಡಿರಬೇಕು.ಪ್ರಸಕ್ತ ಸಾಲಿನಲ್ಲಿ ಸ್ಥಳೀಯವಾಗಿ ಲಭ್ಯವಾಗುವ ಸಂಪನ್ಮೂಲಗಳಿಂದಲೇ ಸದರಿ ಮೂಲೆಗಳನ್ನು ವ್ಯವಸ್ಥಿತವಾಗಿ ರೂಪಿಸಿಕೊಳ್ಳುವುದು ಅತ್ಯಗತ್ಯ. ಮುಂದಿನ ದಿನಗಳಲ್ಲಿ ಅನೇಕ ಸಂಗ್ರಹಿತ ಸಾಮಗ್ರಿಗಳು ಈ ಮೂಲೆಯ ಭಾಗವಾಗಬಹುದು.<br>ಯಾವ ಮೂಲೆಯ ಚಟುವಟಿಕೆಗಳಲ್ಲಿ ಮಗು ತೊಡಗಿಕೊಳ್ಳುತ್ತದೋ ಅದರ ಆಸಕ್ತಿ ಮತ್ತು ಅಭಿರುಚಿಯನ್ನು ಗುರುತಿಸಿಕೊಳ್ಳುವ ಕಡೆಗೆ ಶಿಕ್ಷಕರು ಗಮನಹರಿಸಬೇಕು. ದಿನದಿಂದ ದಿನಕ್ಕೆ ಮಗುವಿನ ಆಸಕ್ತಿಯನ್ನು ಮೃದುಧೋರಣೆಯಿಂದ ವಿನೂತನಗೊಳಿಸುವ ಮತ್ತು ಎಲ್ಲಾ ಮೂಲೆಗಳಲ್ಲೂ ಮಗುವನ್ನು ಸಕ್ರಿಯಗೊಳಿಸುವ ಜವಾಬ್ದಾರಿಯನ್ನು ಶಿಕ್ಷಕ ನಿರ್ವಹಿಸಬೇಕು.<br>ಸಮನ್ವಯ ಶಿಕ್ಷಣವು ಗುಣಮಟ್ಟ ಶಿಕ್ಷಣದ ಆದ್ಯತೆಯಾಗಿದ್ದು, "ನನ್ನ ಸಮಯ"ದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗದಂತಹ ಮಕ್ಕಳ ಭಿನ್ನತೆಯನ್ನು ಅರ್ಥೈಸಿಕೊಳ್ಳುವಲ್ಲಿ ಮತ್ತು ಅವರರಿಗಾಗಿಯೇ ಯೋಜಿತ ಚಟುವಟಿಕೆಗಳನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾದದ್ದು.<br>ವಿದ್ಯಾಪ್ರವೇಶದ ತೊಂಬತ್ತನೇ ದಿನದ ಅಂತ್ಯಕ್ಕೆ ಪ್ರತೀ ಮಗುವೂ ಎಂಟು ಮೂಲೆಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಕಾರ್ಯನಿರ್ವಹಿಸುವುದು ಅತ್ಯಗತ್ಯ. | ● "ನನ್ನ ಸಮಯ" ಹಂತದಲ್ಲಿನ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಸ್ವತಂತ್ರವಾಗಿ ಆಯ್ಕೆ ಮಾಡಿಕೊಳ್ಳಲು, ನಿರ್ಧಾರ ಕೈಗೊಳ್ಳಲು ಹಾಗೂ ಬೇರೆಯವರ ಹಕ್ಕು ಹಾಗೂ ದೃಷ್ಟಿಕೋನವನ್ನು ಅರ್ಥೈಸಿಕೊಳ್ಳಲು ವಿಪುಲ ಅವಕಾಶಗಳನ್ನು ಒದಗಿಸುತ್ತವೆ.<br>● ಈ ಚಟುವಟಿಕೆಗಳು ಮಗುವಿಗೆ ತನ್ನ ಅನುಭವ ಹಾಗೂ ಭಾವನೆಗಳನ್ನು ಅಭಿವ್ಯಕ್ತಿಸಲು ಮುಕ್ತ ಅವಕಾಶ ಕಲ್ಪಿಸುತ್ತದೆ.<br>● ಸಾಮಾಜಿಕ ಕೌಶಲಗಳಾದ ಹಂಚಿಕೊಳ್ಳುವ, ಸರದಿಗಾಗಿ ಕಾಯುವ ಹಾಗೂ ವಿಚಾರ ವಿನಿಮಯದ ಮೂಲಕ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ವೃದ್ಧಿಸುತ್ತದೆ.<br>● ಪ್ರತಿಯೊಂದು ಮಗುವೂ ವಿಭಿನ್ನ ವಸ್ತುಗಳನ್ನು ಬಳಸಲು ಮತ್ತು ಅವುಗಳ ಗುಣಲಕ್ಷಣಗಳನ್ನು ತಿಳಿದುಕೊಳ್ಳಲು ಅವಕಾಶವನ್ನು ಪಡೆಯುತ್ತದೆ ಹಾಗೂ ವಸ್ತುಗಳನ್ನು ವಿಭಿನ್ನ ರೀತಿಯಲ್ಲಿ ಬಳಸಿ ಆಡಲು ತಮ್ಮ ಪೂರ್ವ ಜ್ಞಾನವನ್ನು ಬಳಸಿಕೊಳ್ಳುತ್ತದೆ.<br>● ಸೃಜನಶೀಲತೆ ಮತ್ತು ಸೌಂದರ್ಯಪ್ರಜ್ಞೆಯನ್ನು ಅಭಿವೃದ್ಧಿಪಡಿಸುತ್ತದೆ. | "ನನ್ನ ಸಮಯ" ಚಟುವಟಿಕೆಗಳಿಗಾಗಿ ಎಂಟು ಮೂಲೆಗಳಲ್ಲಿ ವಿವಿಧ ಸಾಮಗ್ರಿಗಳನ್ನು ವ್ಯವಸ್ಥೆಗೊಳಿಸಬೇಕಿದ್ದು<br>ಸಾಮಗ್ರಿಗಳು ಮಗುಸ್ನೇಹಿಯಾಗಿರುವಂತೆ ನೋಡಿಕೊಳ್ಳುವುದು ಅತೀ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಕೆಲವು ಸುರಕ್ಷತಾ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕಿದೆ:<br>* ಕಾಲಕಾಲಕ್ಕೆ ಸಾಮಗ್ರಿಗಳನ್ನು ಪುನರ್ ರೂಪಿಸಿ– ವ್ಯವಸ್ಥೆಗೊಳಿಸಿ<br>* ಅವಶ್ಯಕ ಸಾಮಗ್ರಿಗಳು ಮಕ್ಕಳ ಕೈಗೆಟುಕುವ ಸ್ಥಳದಲ್ಲಿರಲಿ<br>* ಚೂಪಾದ, ತುಕ್ಕು ಹಿಡಿದ, ಹೆಚ್ಚಿನ ಭಾರದ, ಒಡೆದು ಹೋಗುವ ವಸ್ತುಗಳನ್ನು ಇಡಬೇಡಿ.<br>* ಮಗು ಸಾಮಗ್ರಿಗಳನ್ನು ಕಚ್ಚದಂತೆ, ಚೀಪದಂತೆ, ಮುರಿಯದಂತೆ, ಎಸೆಯದಂತೆ, ಹಾಳು ಮಾಡದಂತೆ ಜಾಗೃತೆ ವಹಿಸಿ.<br>* ಒಂದೇ ಮೂಲೆಯಲ್ಲಿ ಎಲ್ಲಾ ಮಕ್ಕಳೂ ಗುಂಪುಗೂಡದಂತೆ ಮಾರ್ಗದರ್ಶನ ನೀಡಿ.<br>* ದಿವ್ಯಾಂಗ ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಹಾಗೂ ಇತರ ಮಕ್ಕಳ ಸಹಕಾರವನ್ನು ಖಚಿತಪಡಿಸಿಕೊಳ್ಳಿ.<br>* ಮಗು ತನಗೆ ಇಷ್ಟವಾದ ಮೂಲೆಯನ್ನು ಆರಿಸಿಕೊಳ್ಳಲು ಅವಕಾಶ ಮಾಡಿಕೊಡಿ.<br>* ಸೂಕ್ತವಾದ ಹಾಗೂ ವಯೋಮಾನಕ್ಕನುಗುಣವಾಗಿರುವ ಆಟಿಕೆಗಳನ್ನು ಒದಗಿಸಿ "ನೀವೇ ಮಾಡಿ" ಚಟುವಟಿಕೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಿ.<br>* ಮಕ್ಕಳ ಆಟ ಮತ್ತು ಕಲಿಕೆಯನ್ನು ಗಮನಿಸಿ, ಪ್ರತಿದಿನ ಮಗು ಒಂದೇ ಮೂಲೆಗೆ ಸೀಮಿತವಾಗದಂತೆ ಕಾಳಜಿವಹಿಸಿ.<br>ಎಲ್ಲಾ ಮೂಲೆಗಳಿಗೆ ಸಂದರ್ಭ–ಆಸಕ್ತಿಗನುಗುಣವಾಗಿ ಮಗು ತೆರಳಿ ವಿಭಿನ್ನ ಅನುಭವ ಪಡೆಯುವಂತೆ ಸೂಕ್ತ ಮಾರ್ಗದರ್ಶನ ನೀಡಿರಿ.<br>* ಪ್ರತಿನಿತ್ಯ ಕನಿಷ್ಠ 30 ನಿಮಿಷಗಳನ್ನಾದರೂ ತನ್ನಿಷ್ಟದ ಮೂಲೆಗಳಲ್ಲಿ ಆಟಿಕೆಗಳೊಂದಿಗೆ/ಸಾಮಗ್ರಿಗಳೊಂದಿಗೆ ತೊಡಗಿಸಿಕೊಳ್ಳಲು ಅವಕಾಶ ಒದಗಿಸಿಕೊಡಿ.<br>* ಸೂಚಿಸಲಾಗಿರುವ ಎಂಟು ಮೂಲೆಗಳು ನಿಶ್ಚಿತವಾಗಿದ್ದು ಎಲ್ಲಾ ಮೂಲೆಗಳನ್ನು ಸ್ವತಂತ್ರವಾಗಿಯೇ ನೋಡುವುದು.<br>ಮೂಲೆಗಳಲ್ಲಿ ಒದಗಿಸಲಾಗುವ ಸಾಮಗ್ರಿಗಳಲ್ಲಿ ಬದಲಾವಣೆ ಮಾಡಬಹುದೇ ಹೊರತು ಮೂಲೆಗಳ ಮರುಹೊಂದಾಣಿಕೆ ಅಥವಾ ಮರುನಾಮಕರಣಕ್ಕೆ ಅವಕಾಶವಿಲ್ಲ ಎಂಬುದನ್ನು ಗಮನಿಸುವುದು.<br>* 30 ನಿಮಿಷಗಳಲ್ಲಿ ಮಗು ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಮೂಲೆಗೆ ತೆರಳಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಹುದು.<br>* ಮಕ್ಕಳ ಆಸಕ್ತಿಗನುಗುಣವಾದ ಪುಸ್ತಕಗಳನ್ನು ಓದುವ ಮೂಲೆ ಅಥವಾ ತರಗತಿ ಗ್ರಂಥಾಲಯದಲ್ಲಿ ಒದಗಿಸುವ ಮೂಲಕ ಮಕ್ಕಳಲ್ಲಿ ಪುಸ್ತಕಗಳ ಬಗೆಗಿನ ಬಾಂಧವ್ಯ ಮತ್ತು ಪ್ರೀತಿಯನ್ನು ಹೆಚ್ಚಿಸಿ.<br>* ಮಕ್ಕಳು ಪುಸ್ತಕಗಳನ್ನು ಆಯ್ದುಕೊಂಡು ಓದಲು ಪ್ರಯತ್ನಿಸುವಾಗ, ಅವರ ಓದಿನ ನಟನೆಯನ್ನು (ಪ್ರಿಟೆಂಡ್ ರೀಡಿಂಗ್) ಗಮನಿಸಿ. |

DRAFT 2022




| | | | | |
|---|---|---|---|---|
| 4 | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ** | ಮಕ್ಕಳನ್ನು ಸಕ್ರಿಯವಾಗಿ ಚಟುವಟಿಕೆಗಳಲ್ಲಿ ತೊಡಗಿಸುವ ಮೂಲಕ **ಬುನಾದಿ ಸಂಖ್ಯಾಜ್ಞಾನ ಹೊಂದುವುದು ಮತ್ತು** ಸುತ್ತಲಿನ ಪರಿಸರದೊಂದಿಗೆ ಸಂಬಂಧ ರೂಪಿಸುವುದು. | * ಮಕ್ಕಳು ಆರಂಭಿಕ ಗಣಿತ ಮತ್ತು ಸಂಖ್ಯಾಸಾಮರ್ಥ್ಯಕ್ಕೆ ಭದ್ರವಾದ ಬುನಾದಿಯನ್ನು ಹೊಂದಲು ತರಗತಿಯ ಒಳಗೆ ಮತ್ತು ಹೊರಗೆ ಸೂಕ್ತ ಅವಕಾಶ ನೀಡುವುದು.<br>* ನೇರವಾದ ಕಲಿಕಾ ಅನುಭವಗಳಿಗೆ ಅವಕಾಶ ಒದಗಿಸಿಕೊಡುವುದು.<br>* ಭೌತಿಕ, ಸಾಮಾಜಿಕ, ನೈಸರ್ಗಿಕ ಪರಿಸರದೊಂದಿಗೆ ಸಂವಹನ ಬೆಳೆಸಿಕೊಳ್ಳುವುದು.<br>* ಮಕ್ಕಳು ಬಹಳ ಮುಖ್ಯವಾಗಿ ಚಿಂತನೆ ಮತ್ತು ತಾರ್ಕಿಕ ಕೌಶಲ್ಯ ಬೆಳೆಸಿಕೊಳ್ಳುವುದು.<br>* ಮಕ್ಕಳು 5–6 ವರ್ಷಗಳ ವಯೋಮಾನಕ್ಕೆ | * ಆರಂಭಿಕ ಸಂಖ್ಯಾಸಾಮರ್ಥ್ಯದ ಚಟುವಟಿಕೆಗಳನ್ನು ವಿನೂತನವಾಗಿ ರೂಪಿಸುವುದು, ಆಟಗಳ ಸಹಾಯದಿಂದ ಆಸಕ್ತಿದಾಯಕಗೊಳಿಸುವುದು.<br>* ಸೂಕ್ತವಾಗಿ ವಿನ್ಯಾಸಗೊಂಡ ತರಗತಿ ಕೋಣೆ ಸಿದ್ಧಪಡಿಸುವುದು.<br>* ಯೋಜಿತ ಆಟ/ಚಟುವಟಿಕೆಗಳಿಗೆ ಅಗತ್ಯ ಕಲಿಕಾ ಸಾಮಗ್ರಿಗಳನ್ನು ಸ್ಥಳೀಯವಾಗಿ ಹೊಂದಿಸಿಕೊಳ್ಳುವುದು.<br>* ಸಿದ್ಧಪಡಿಸಿ ನೀಡಲಾದ ಒಟ್ಟು ಚಟುವಟಿಕಗಳ ಜೊತೆಗೆ ಅಗತ್ಯ ಎನಿಸಿದರೆ ತಮ್ಮದೇ ಚಟುವಟಿಕೆ ರಚಿಸಿಕೊಳ್ಳುವುದು.<br>* ಎರಡು ಮತ್ತು ಮೂರನೆಯ ತರಗತಿ ಮಕ್ಕಳಿಗೆ ಸೂಕ್ತ ಮಾರ್ಪಾಡು ಮಾಡಿದ ಅಥವಾ ಶ್ರೇಣೀಕೃತ ಚಟುವಟಿಕೆ ಆಯೋಜಿಸುವುದು.<br>* ಉನ್ನತ ಹಂತದ ಜ್ಞಾನಾತ್ಮಕ ಕೌಶಲ ಗಳಿಸಲು ಸಹಾಯಮಾಡುವುದು.<br>* ನೀಡಿದ ಕಲಿಕಾಫಲಗಳಿಗೆ ಅಗತ್ಯವಿರುವ ಒದಗಿಸಿದ ಅಭ್ಯಾಸದ ಹಾಳೆಗಳನ್ನು ಶಿಕ್ಷಕರು |

DRAFT 2022

| | | | | |
|---|---|---|---|---|
| | | | ಬರುವುದರಲ್ಲಿ ಅಂಕಿಗಳು, ಆಕಾರ, ಬಣ್ಣಗಳು, ವಿನ್ಯಾಸಗಳು ಮತ್ತು ಸ್ಥಳಾವಕಾಶದ ಬಗ್ಗೆ ಜ್ಞಾನ ಮತ್ತು ಅನುಭವವನ್ನು ಹೊಂದುವುದು.<br>* ಮಕ್ಕಳು ಅಂಕಿಗಳು, ಕ್ಯಾಲೆಂಡರ್, ಕ್ಯಾಲ್ಕುಲೇಟರ್, ಗಡಿಯಾರ, ಅಕ್ಷರ, ಸಂಕೇತಗಳನ್ನು ತಮ್ಮ ಸುತ್ತಲಿನ ಪರಿಸರದಲ್ಲಿ ಗುರುತಿಸುವುದು ಮತ್ತು ಅವುಗಳ ಉಪಯೋಗವನ್ನು ತಿಳಿಯುವುದು<br>* ಕತೆ, ಪ್ರಾಸ ಪದ್ಯಗಳು ಮತ್ತು ಕೆಲವು ಹಾಡುಗಳನ್ನು ಮಕ್ಕಳು ಕಲಿಯುವುದು. ಅನೇಕ ಸಂಖ್ಯೆಗಳನ್ನೊಳಗೊಂಡ ಆಟಗಳು ಮತ್ತು ಚಟವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು. ಉದಾ : ಬ್ಲಾಕ್ಸ್, ರಿಂಗ್ಸ್, ಕಲ್ಲುಗಳನ್ನು ಗಾತ್ರದ ಆಧಾರದಲ್ಲಿ ದೊಡ್ಡದರಿಂದ ಚಿಕ್ಕ ಗಾತ್ರದವರೆಗೆ ಅನುಕ್ರಮವಾಗಿ ಜೋಡಿಸುವುದು, ಗುಂಪು ಮಾಡುವುದು ಮತ್ತು ವಿಂಗಡಿಸುವುದು.<br>* ಇಂದ್ರಿಯಗಳ ಸಹಾಯದಿಂದ ಸಂವೇದನಾ ಬೆಳವಣಿಗೆ (ದೃಷ್ಟಿ, ಶಬ್ದ, ಸ್ಪರ್ಶ, ವಾಸನೆ ಮತ್ತು ರುಚಿ)<br>* ಜ್ಞಾನಾತ್ಮಕ ಕೌಶಲಗಳಾದ ವೀಕ್ಷಣೆ, ಗುರುತಿಸುವುದು, ಸ್ಮರಣೆ, ಜೋಡಣೆ, ವರ್ಗೀಕರಣ, ವಿನ್ಯಾಸ, ಅನುಕ್ರಮ ಚಿಂತನೆ, ಸೃಜನಾತ್ಮಕ ಚಿಂತನೆ, ವಿಮರ್ಷಾತ್ಮಕ ಚಿಂತನೆ, ಸಮಸ್ಯಾ ಪರಿಹಾರ, ತಾರ್ಕಿಕ ಚಿಂತನೆ, ಕುತೂಹಲ, ಪ್ರಾಯೋಗೀಕತೆ, ಪರಿಶೋಧನೆ ಇತ್ಯಾದಿಗಳನ್ನು ಬೆಳೆಸುವುದು.<br>* ಬಣ್ಣ, ಆಕಾರ, ದೂರ, ಅಳತೆ, ಗಾತ್ರ, ಉದ್ದ, ತೂಕ, ಎತ್ತರ, ಕಾಲ, ಸ್ಥಳಾವಕಾಶದ ಅರಿವು, ಒಂದಕ್ಕೊಂದನ್ನು ಹೊಂದಿಸುವುದರ ಪರಿಕಲ್ಪನೆ ಮೂಡಿಸುವುದು.<br>* ಎಣಿಸಿ ಹೇಳುವುದು, ಸಂಖ್ಯಾಸೂಚಕಗಳನ್ನು ಗುರುತಿಸುವುದು ಮತ್ತು ಅನುಕ್ರಮಣಿಕೆ ಜ್ಞಾನ, ದತ್ತಾಂಶ ನಿರ್ವಹಣೆ, ಕ್ಯಾಲೆಂಡರ್ ಬಗ್ಗೆ ತಿಳಿದುಕೊಳ್ಳುವುದರ ಮೂಲಕ ಸಂಖ್ಯಾಜ್ಞಾನ | ಮಕ್ಕಳಿಗೆ ನೀಡಿ ಪೂರ್ಣಗೊಳಿಸಲು ಮಾರ್ಗದರ್ಶನ ಮಾಡುವುದು. |

DRAFT 22.02.22

| | | | | |
|---|---|---|---|---|
| | | | ಬೆಳೆಸಿಕೊಳ್ಳುವುದು. | |
| 5 | ಸೃಜನಾತ್ಮಕ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು | ಸೃಜನಾತ್ಮಕ ಕಲೆ ಮತ್ತು ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ : ಇದು ಮಕ್ಕಳಲ್ಲಿ ಸೃಜನಶೀಲತೆ ಹಾಗೂ ಸೂಕ್ಷ್ಮ ಸ್ನಾಯು ಕೌಶಲಗಳ ವಿಕಾಸಕ್ಕೆ ಅವಕಾಶ ಮಾಡಿಕೊಡುತ್ತದೆ | •ಇದು ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಸಹಕಾರಿಯಾಗಿದೆ.<br>•ಸೂಕ್ಷ್ಮ ಚಲನಾ ಕೌಶಲಗಳನ್ನು ಅಭಿವೃದ್ಧಿ ಪಡಿಸುತ್ತದೆ.<br>•ಸೃಜನಶೀಲತೆಯ ವಿಕಾಸ ಹೊಂದಲು ಅವಕಾಶ ನೀಡುತ್ತದೆ.<br>•ಸ್ವಯಂ ಅರಿವು ಮತ್ತು ಇತರರ ಭಾವನೆಗಳಿಗೆ ಗೌರವ ನೀಡುವುದನ್ನು ಸೂಚಿಸುತ್ತದೆ.<br>•ಸಕಾರಾತ್ಮಕ ಚಿಂತನೆ, ಸೌಂದರ್ಯೋಪಾಸನೆ ಮತ್ತು ಹಂಚಿಕೊಳ್ಳುವ/ ಹೊಂದಾಣಿಕೆ ಮಾಡಿಕೊಳ್ಳುವ ಮನೋಭಾವನೆಯನ್ನು ಬೆಳೆಸುತ್ತದೆ.<br>•ಕಣ್ಣು–ಕೈಗಳ ಸಮನ್ವಯತೆಯನ್ನು ಹೆಚ್ಚಿಸುತ್ತದೆ.<br>•ಏಕಾಗ್ರತೆ ಹೆಚ್ಚಿಸುವುದರ ಮೂಲಕ ಆಕಾರ/ ಗಾತ್ರ/ ವಿನ್ಯಾಸಗಳು/ ಫಜಲ್/ ಮರಳು/ ಮಣ್ಣಿನಲ್ಲಿ ಆಟವಾಡುವ ಹವ್ಯಾಸವನ್ನು ಹೆಚ್ಚಿಸುತ್ತದೆ.<br>•ಸಾಮಾಜಿಕ ಪರ ನಡವಳಿಕೆ ಹೊಂದಿ ತನ್ನ ಕಲ್ಪನೆಯ ಅಂಶಗಳನ್ನು ಮೌಖಿಕವಾಗಿ ವಿವರಿಸುವುದರ ಮೂಲಕ ಭಾಷಾಭಿವೃದ್ಧಿ/ಸಂಖ್ಯಾಜ್ಞಾನ ಹೊಂದಲು ಸಹಕಾರಿಯಾಗುತ್ತದೆ.<br>•ಉತ್ತಮ ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಳ್ಳುತ್ತಾರೆ. | •ಚಟುವಟಿಕೆಗಳನ್ನು ಮಕ್ಕಳಿಂದಲೇ ಪ್ರಾರಂಭಿಸುವುದು.<br>•ಎಲ್ಲಾ ಚಟುವಟಿಕೆಗಳಲ್ಲಿ ಪ್ರತಿ ಮಗು ಭಾಗವಹಿಸುವದನ್ನು ಖಚಿತ ಪಡಿಸಿಕೊಳ್ಳುವುದು.<br>•ಪ್ರತಿ ಮಗು ಅನನ್ಯ,ಅವರಲ್ಲಿ ತಮ್ಮದೇ ಆದ ಸಾಮರ್ಥ್ಯವಿರುತ್ತದೆ ಎಂಬ ಭರವಸೆಯನ್ನು ತುಂಬುವುದು.<br>•ಚಟುವಟಿಕೆಗಳಲ್ಲಿ ಮಕ್ಕಳ ದೈಹಿಕ, ಮಾನಸಿಕ ,ಸಾಮಾಜಿಕ ವಿಕಾಸದ ವೃದ್ಧಿಯು ಶ್ರೇಣಿಕೃತವಾಗಿರುವಂತೆ ಗಮನಿಸುವುದು.<br>•ಸುಗಮಕಾರರು ಮಕ್ಕಳೊಂದಿಗೆ ಉತ್ತಮ ಬಾಂದವ್ಯ ಹೊಂದಿರುವುದು.<br>•ಮಕ್ಕಳಿಗೆ ಕತ್ತರಿ ,ಕಡ್ಡಿ ಮುಂತಾದ ವಸ್ತುಗಳನ್ನು ನೀಡಿದಾಗ ಸುಗಮಕಾರರು ವಿಶೇಷವಾಗಿ ಮಕ್ಕಳ ಸುರಕ್ಷತೆಯ ಬಗ್ಗೆ ಗಮನಹರಿಸುವುದು.<br>•ಮಕ್ಕಳು ಸ್ವಾವಲಂಬಿಗಳಾಗುವಂತೆ ಪ್ರೇರೇಪಿಸುವುದು.<br>•ಮಕ್ಕಳು ಸುಲಭವಾಗಿ ಚಟುವಟಿಕೆಗಳನ್ನು ನಿರ್ವಹಿಸಲು ಸೂಕ್ತ ಸ್ಥಳಾವಕಾಶ ನೀಡುವುದು.<br>•ಮಕ್ಕಳು ಒತ್ತಡವಿಲ್ಲದೇ ಮುಕ್ತವಾಗಿ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವುದು.<br>•ಸುಗಮಕಾರರು ಸೂಚನೆಗಳನ್ನು ಸ್ಪಷ್ಟವಾಗಿ ನೀಡುವುದು.<br>•ಎಲ್ಲಾ ತರಗತಿಗಳಿಗೆ ಮಾಡಿಸುವ ಚಟುವಟಿಕೆಗಳ ಪೂರ್ವ ತಯಾರಿಯನ್ನು ಮೊದಲು ಮಾಡಿಟ್ಟುಕೊಳ್ಳುವುದು.<br>• ಮಕ್ಕಳು ಬಳಸಿದ ಸಾಮಗ್ರಿಗಳನ್ನು ತರುವ/ತೆಗೆದಿಡುವ ಮತ್ತು ಹಾಳಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಕೊಡಬೇಕು.<br>•ಮಕ್ಕಳು ಸೂಚನೆಗಳನ್ನು ಅರ್ಥೈಸಿಕೊಂಡ ನಂತರ ಚಟುವಟಿಕೆಗಳನ್ನು ಮಾಡಲು ಅವಕಾಶ ಮಾಡಿಕೊಡುವುದು.<br>•ಚಟುವಟಿಕೆ ಮಾಡಿಸುವಾಗ ಸ್ವಚ್ಛತೆಯ ಬಗ್ಗೆ ಗಮನ ನೀಡುವುದು. |
| 6<br><br>6.1 | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ<br><br>ಆಲಿಸುವು | ಸಾಕ್ಷರತೆ ಎಂದರೆ ಕೇವಲ ಓದುವುದು ಮತ್ತು ಬರೆಯುವುದು ಮಾತ್ರವಲ್ಲ. ಇದು ಮಗುವಿನ ಆಲಿಸುವ ಕೌಶಲ, ವಿಷಯದ ಕುರಿತಂತೆ ತನ್ನದೇ ರೀತಿಯಲ್ಲಿ ಅರ್ಥ ಕಟ್ಟಿಕೊಳ್ಳುವುದು, ತಾರ್ಕಿಕವಾಗಿ | * ಭಾಷಾ ಕಲಿಕೆ ಪ್ರಾರಂಭವಾಗುವುದು ಆಲಿಸುವುದು ಮತ್ತು ಮಾತನಾಡುವುದರ ಮೂಲಕ.<br>* ಪರಿಸರದಲ್ಲಿಯ ವಿವಿಧ ಧ್ವನಿಗಳನ್ನು ಆಲಿಸಲು ಅವಕಾಶ ಕಲ್ಪಿಸುವುದು. ಉದಾ..ಪ್ರಾಣಿ/ಪಕ್ಷಿಗಳ ಕೂಗು, ವಾಹನಗಳ ಸದ್ದು ಇತ್ಯಾದಿ.<br>* ಮೃದು ಹಾಗೂ ದೊಡ್ಡ ಶಬ್ದಗಳನ್ನು ಆಲಿಸಿ ಅವುಗಳ ವ್ಯತ್ಯಾಸವನ್ನು ಗುರುತಿಸಲು ಅವಕಾಶ ಕಲ್ಪಿಸುವುದು. | * ಇದು ಶಿಕ್ಷಕರಿಂದ ಪ್ರಾರಂಭಿಸಲ್ಪಡುವ ಚಟುವಟಿಕೆ.<br>* ವಿವಿಧ ಪ್ರಾಸಗೀತೆ/ಹಾಡುಗಳನ್ನು ಹಾಡಿಸುವುದು.<br>* ಪ್ರಾಸ ಪದಗಳನ್ನು ಆಲಿಸುವುದು.<br>* ಆಶು ಭಾಷಣಗಳನ್ನು ಮಾಡಿಸುವುದು.<br>* ನಾಟಕಾಭಿನಯ ಮಾಡಿಸುವುದು.<br>* ಪದಗಳಲ್ಲಿಯ ಮೊದಲ, ಮಧ್ಯದ, ಕೊನೆಯ ಅಕ್ಷರಗಳನ್ನು ಆಲಿಸುವುದು ಹಾಗೂ ಪುನರುಚ್ಚರಿಸುವದು. |


DRAFT 2022

| | | | | |
|---|---|---|---|---|
| | **ದು ಮತ್ತು ಮಾತನಾಡುವುದು** | ಆಲೋಚಿಸುವುದು ಹಾಗೂ ಪರಿಣಾಮಕಾರಿ ಯಾಗಿ ಅಭಿವ್ಯಕ್ತಿ ಗೊಳಿಸುವ ಅಂಶಗಳನ್ನು ಒಳಗೊಂಡಿದೆ. ಇದು ಮಗು ತಾನು ತನ್ನ ಜಗತ್ತಿಗೆ ಹೇಗೆ ತೆರೆದು ಕೊಳ್ಳುತ್ತದೆ ಹಾಗೂ ತನ್ನ ಸುತ್ತಲಿನ ಜಗತ್ತನ್ನು ಹೇಗೆ ಅರಿತುಕೊಳ್ಳುತ್ತದೆ ಎನ್ನುವುದನ್ನು ತಿಳಿಸುತ್ತದೆ. ಮಗು ಶಾಲೆಗೆ ಬರುವ ಮುನ್ನವೇ ತನ್ನ ಬಾಹ್ಯ ಪ್ರಪಂಚದ ಕುರಿತಂತೆ ತನ್ನದೇ ರೀತಿಯಲ್ಲಿ ಅರ್ಥೈಸಿಕೊಂಡು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ ಎನ್ನುವ ಅಂಶವನ್ನು ಅಲ್ಲಗಳೆಯುವಂತಿಲ್ಲ. ಅಂತಹ ಮಗುವಿಗೆ ತಾನು ಗಳಿಸಿಕೊಂಡಿರುವ ಜ್ಞಾನದ ಹರವನ್ನು ಗಟ್ಟಿಗೊಳಿಸುವ ಹಾಗೂ ವಿಸ್ತರಿಸುವ ಚಟುವಟಿಕೆಗಳು ದೊರಕುವಂತಾಗಬೇಕು. ಭಾಷೆಯ ಆಲಿಸುವಿಕೆ ಮತ್ತು ಮಾತನಾಡುವಿಕೆಯ ಪ್ರಮುಖಾಂಶಗಳು ಸಾಧಿತವಾಗಲು ವಿವಿಧ ಚಟುವಟಿಕೆಗಳು ರೂಪುಗೊಳಿಸುವುದಾಗಿದೆ. | * ಮಗುವಿನ ಉಚ್ಚಾರಣೆಯಲ್ಲಿಯ ದೋಷಗಳನ್ನು ಗುರುತಿಸುವುದು.<br>* ಪ್ರಾಸಗೀತೆ/ಹಾಡುಗಳನ್ನು ಹಾಡುವಾಗ ಸ್ಪಷ್ಟತೆಯನ್ನು ಗಮನಿಸುವುದು.<br>* ಶಾಲೆಗೆ ಬರುವ ಪೂರ್ವದಲ್ಲಿಯೇ ಮಗು ಸಾಕಷ್ಟು ಪದ ಸಂಪತ್ತನ್ನು ಕಟ್ಟಿಕೊಂಡಿರುತ್ತದೆ. ತರಗತಿಯಲ್ಲಿ ಹೆಚ್ಚು ಹೆಚ್ಚು ಆಲಿಸುವುದು ಮತ್ತು ಮಾತನಾಡುವಿಕೆಗೆ ಅವಕಾಶ ಕಲ್ಪಿಸುವುದರ ಮೂಲಕ ಕಲಿಕಾ ವಾತಾವರಣವನ್ನು ಸೃಜಿಸುವುದು.<br>* ಮಗು ತರಗತಿಯಲ್ಲಿ ಮುಕ್ತವಾಗಿ ಮಾತನಾಡುವ ವಾತಾವರಣ ಕಲ್ಪಿಸುವುದು.<br>* ಶಾಲಾ ಭಾಷೆಯ ಜೊತೆಯಲ್ಲಿ ಮನೆಭಾಷೆಯನ್ನೂ ಬಳಸಲು ಅವಕಾಶ ಕಲ್ಪಿಸುವುದರ ಮೂಲಕ ಮಗುವಿನಲ್ಲಿ ಮಾತನಾಡುವ ಕುರಿತಂತೆ ಆತ್ಮವಿಶ್ವಾಸ ಬೆಳೆಸುವುದು.<br>* ವಿವಿಧ ಚಟುವಟಿಕೆಗಳಾದ ಸಂಭಾಷಣೆ, ಅನುಭವ ಹಂಚಿಕೆ, ಪ್ರಶ್ನೋತ್ತರ, ಸರಳ ಸೂಚನೆಗಳನ್ನು ಬಳಸುವುದು, ಪ್ರಾಸಗೀತೆ/ ಹಾಡುಗಳನ್ನು ಹಾಡಿಸುವುದು, ಕಥೆ ಹೇಳುವುದು, ಗಟ್ಟಿ ಓದು, ನಾಟಕಾಭಿನಯ, ಆಟಗಳು ಇತ್ಯಾದಿ ಚಟುವಟಿಕೆಗಳ ಮೂಲಕ ಮಾತನಾಡಲು ಅವಕಾಶ ಕಲ್ಪಿಸುವುದು.<br>* ಹೊಸ ಪದಗಳ ಪರಿಚಯ ಹಾಗೂ ಅವುಗಳ ಬಳಕೆಯ ಕುರಿತಂತೆ ಹೊಸ ಹೊಸ ವಿಧಾನಗಳನ್ನು ಬಳಸುವುದು.<br>* ಆಲಿಸುವಿಕೆ ಮತ್ತು ಮಾತನಾಡುವಿಕೆಯನ್ನು ಪರಿಣಾಮಕಾರಿಯಾಗಿ ರೂಢಿಸಲು, ಭಾಷಾ ಬೆಳವಣಿಗೆಯ ವಿವಿಧ ಮಜಲುಗಳನ್ನು ನಿರ್ದಿಷ್ಟ ದಿನಗಳಲ್ಲಿ ಪುನರಾವರ್ತನೆಗೊಳಿಸುವ ಮೂಲಕ ಸಾಧಿಸಲು ಪ್ರಯತ್ನಿಸಲಾಗಿದೆ. ಉದಾ..ಪ್ರತಿ ಸೋಮವಾರದ ಚಟುವಟಿಕೆಗಳು ಆಲಿಸಿ ಅರ್ಥ ಮಾಡಿಕೊಳ್ಳುವ ಚಟುವಟಿಕೆಗಳನ್ನು ಒಳಗೊಂಡಿದ್ದರೆ, ಮಂಗಳವಾರ ಮತ್ತು ಗುರುವಾರದ ಚಟುವಟಿಕೆಗಳು ಧ್ವನಿ ವಿಜ್ಞಾನದ ಕುರಿತ ಚಟುವಟಿಕೆಗಳನ್ನು ಒಳಗೊಂಡಿದೆ. ಬುಧವಾರದ ಚಟುವಟಿಕೆಗಳು ಮೌಖಿಕ ಅಭಿವ್ಯಕ್ತಿ ಅಥವಾ ಸ್ವ ಅಭಿವ್ಯಕ್ತಿಯ ಕುರಿತಾಗಿದ್ದರೆ ಶುಕ್ರವಾರದ ಚಟುವಟಿಕೆಗಳು ಪದ ಸಂಪತ್ತಿನ ಅಭಿವೃದ್ಧಿ ಹಾಗೂ ಅವುಗಳ ಸಂದರ್ಭೋಚಿತ ಬಳಕೆಯನ್ನು ಒಳಗೊಂಡಿದೆ. | * ಆರಂಭಿಕ ಧ್ವನಿಯೊಂದಿಗೆ ವಸ್ತುಗಳನ್ನು ಗುರುತಿಸುವುದು.<br>* ಪದಗಳನ್ನು ರಚಿಸಿ ಹೇಳುವುದು.<br>* ಧ್ವನಿ ವ್ಯತ್ಯಾಸಗಳನ್ನು ಗುರುತಿಸುವುದು.<br>* ಬಿಟ್ಟು ಹೋದ ಅಕ್ಷರ/ಪದ/ಅಂಕಿಗಳನ್ನು ಊಹಿಸುವುದು.<br>* ಅಕ್ಷರಗಳನ್ನು ಸಂಯೋಜಿಸಿ ಪದಗಳನ್ನು ರಚಿಸಿ ಹೇಳುವುದು.<br>* ಇತರರ ಧ್ವನಿಗಳನ್ನು ಆಲಿಸಿ, ಸರಿ/ತಪ್ಪುಗಳನ್ನು ಗುರುತಿಸುವುದು.<br>* ಮುಕ್ತವಾಗಿ ಮಾತನಾಡಲು ಅವಕಾಶ ಕಲ್ಪಿಸುವುದು.<br>* ನೀಡಿದ ವಿಷಯದ ಕುರಿತು ತಾರ್ಕಿಕವಾಗಿ ಆಲೋಚಿಸಿ, ತನ್ನದೇ ಮಾತುಗಳಲ್ಲಿ ಅಭಿವ್ಯಕ್ತಿಸುವುದು. |

DRAFT 2022

| | | | | |
|---|---|---|---|---|
| | | | ಇವುಗಳನ್ನು ಅರ್ಥೈಸಿಕೊಂಡು ಆಲಿಸುವಿಕೆ ಮತ್ತು ಮಾತನಾಡುವಿಕೆಯನ್ನು ಪರಿಣಾಮಕಾರಿಯಾಗಿ ಸಾಧಿಸುವುದು. | |
| 6.2 | ಅರ್ಥಗ್ರಹಿಕೆಯೊಂದಿಗಿನ ಓದು | ಓದುವಿಕೆ ಎಂಬುದು ಮೂಲಭೂತವಾಗಿ ಅರ್ಥೈಸಿಕೊಳ್ಳುವ ಒಂದು ಪ್ರಕ್ರಿಯೆಯಾಗಿದೆ ಮತ್ತು ಗ್ರಹಿಕೆಯು ಓದುವಿಕೆಯ ಅವಿಭಾಜ್ಯ ಅಂಗವಾಗಿದೆ.<br><br>ಬುನಾದಿ ಸಾಕ್ಷರತೆಯು, ಓದಲು,ಮಾತನಾಡಲು, ಅಗತ್ಯವಿರುವ ಕೌಷಲ ಮತ್ತು ಸಾಮರ್ಥ್ಯ ಹೊಂದಿರುತ್ತದೆ.<br><br>ಆರಂಭಿಕ ಹಂತದಲ್ಲಿ ಮಕ್ಕಳು ಚಿತ್ರಗಳನ್ನು ಸನ್ನಿವೇಶಗಳನ್ನು ಊಹಿಸಿ ಪಠ್ಯದ ಅರ್ಥ ಮತ್ತು ಭಾವವನ್ನು ಗ್ರಹಿಸುತ್ತಾರೆ. ಆರಂಭದ ತರಗತಿಗಳಲ್ಲಿ ಮಕ್ಕಳು ತಮ್ಮ ಅನುಭವಗಳ ಮತ್ತು ತಾವು ಕಲಿತ ಧ್ವನಿಗಳ ಬೆಂಬಲದೊಂದಿಗೆ ಪಠ್ಯವನ್ನು ಓದುತ್ತಾರೆ.<br><br>ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆಯ ಎರಡನೇ ವಿಭಾಗ "ಅರ್ಥಗ್ರಹಿಕೆಯೊಂದಿಗೆ ಓದು"ವಿನಲ್ಲಿ ವಿದ್ಯಾಪ್ರವೇಶಕ್ಕೆ ಸಂಬಂಧಿಸಿದಂತೆ 16 ಚಟುವಟಿಕೆಗಳನ್ನು ಗುರುತಿಸಲಾಗಿದೆ.<br><br>ಇಲ್ಲಿ ಗುರುತಿಸಲಾದ ಚಟುವಟಿಕೆಗಳು, ವಿವಿಧ | ಪುಸ್ತಕಗಳನ್ನು ಹಿಡಿದುಕೊಳ್ಳುವ ರೀತಿ, ಓದಲು ಕುಳಿತುಕೊಳ್ಳುವ ಭಂಗಿ ಹಾಗೂ ಹಾಳೆಗಳನ್ನು ತಿರಿಗಿಸುವ ಬೆರಳುಗಳ ಚಲನೆಯನ್ನು ರೂಡಿಸುವುದು.<br>ಪಠ್ಯಾಂಶವನ್ನು ಕಣ್ಣಿನ ಚಲನೆಯೊಂದಿಗೆ ಮನಸ್ಸಿನಲ್ಲಿ ಅರ್ಥದ ಸಹಸಂಬಂಧ ಕಲ್ಪಿಸಿಕೊಳ್ಳುವುದು.<br>ಧ್ವನಿ ಮತ್ತು ಸಂಕೇತಗಳ ಸಂಯೋಜನೆಯೊಂದಿಗೆ ಓದಿನ ತಾರ್ಕಿಕತೆಯನ್ನು ಅರಿತು ವಿಸಂಕೇತೀಕರಣ (ಆಜಛಿಶಿಜುಟಿಂ 1ಣಂ 30 ತಿಂಡಿಫ)ಮಾಡುತ್ತಾ ಸ್ಪಷ್ಟವಾದ ಉಚ್ಚಾರದೊಂದಿಗೆ ಓದಿನ ಪದಗಳ ವೇಗವನ್ನು ಹೆಚ್ಚಿಸುತ್ತಾ ಸಾಗುವುದು.<br>ಭಾಷೆಯ ಲಯ ಮತ್ತು ಪ್ರಾಸಗಳನ್ನು ಅರ್ಥಮಾಡಿಕೊಂಡು ಗ್ರಹಿಸುವುದು.<br>ಓದುವಮೂಲೆ /ಗ್ರಂಥಾಲಯದಿಂದ ಮುದ್ರಿತ ಸಂಪನ್ಮೂಲ ಸಾಮಗ್ರಿಗಳನ್ನು ಆಯ್ದುಕೊಂಡು ಓದುವ ಮೂಲಕ ಅರ್ಥಪೂರ್ಣ ಗ್ರಹಿಕೆ ಅವಕಾಶಗಳನ್ನು ನೀಡುವುದು.<br>ಚಿತ್ರ, ಸಂಕೇತಗಳು ಮತ್ತು ಸೂಚನಾ ಫಲಕಗಳು ಇತ್ಯಾದಿ ಸಾಮಗ್ರಿಗಳನ್ನು ಓದುವುದು ಮತ್ತು ಗ್ರಹಿಸುವುದು.<br>ಚಿತ್ರದಲ್ಲಿನ ವಸ್ತು/ವ್ಯಕ್ತಿ/ಘಟನೆಗಳನ್ನು ಹೆಸರಿಸುವುದು ಊಹಿಸಿ ಅರ್ಥೈಸಿಕೊಳ್ಳಲು ಚಿತ್ರದೊಂದಿಗೆ ಪಠ್ಯವನ್ನು ಸಂಬಂಧಿಕರಿಸುವುದು.<br>ಅನುಭವ ಮತ್ತು ಪೂರ್ವಜ್ಞಾನದ ಆಧಾರದ ಮೇಲೆ ಊಹಿಸುವುದು.<br>ಓದಿದ್ದನ್ನು ಅರ್ಥೈಸಿಕೊಂಡು ಮೂಕಾಭಿನಯದೊಂದಿಗೆ ಮತ್ತು ಭಾವಾಭಿನಯಗಳ ಮೂಲಕ ಪ್ರತಿಕ್ರಿಯಿಸುವುದು.<br>ಸಂತೋಷ ಮನೋರಂಜನೆ ಹಾಗೂ ಇತರೆ ಉದ್ದೇಶಗಳಿಗಾಗಿ ಸ್ವತಂತ್ರವಾಗಿ ಓದುವುದು.<br>ತಾವು ಓದಿದ/ವೀಕ್ಷಿಸಿದ ಪಠ್ಯ, ಕಥೆ ಮತ್ತು ಘಟನೆಗಳನ್ನು ತನ್ನ ಸ್ವಂತ ಅನುಭವಗಳಿಗೆ ಸಹಸಂಬಂಧಿಕರಿಸುವುದು.<br>ಓದಿದ ವಿಷಯಗಳನ್ನು ವಿಶ್ಲೇಷಿಸುವದು, ವಿವರಿಸುವದು, ಸಂಕ್ಷೇಪೀಕರಿಸುವುದು, ವಿಸ್ತರಿಸುವುದು ಮತ್ತು ತಮ್ಮ ಪೂರ್ವದ | • ಮಕ್ಕಳು ಓದಲು ಬಳಸುವ ವಿವಿಧ ತಂತ್ರಗಳನ್ನು ತಾರ್ಕಿಕ ಅಂಶಗಳನ್ನು ಪರಿಚಯಿಸುವುದು.<br>• ಉದಾ:–<br>–ಪೂರ್ವಜ್ಞಾನ ಬಳಸುವುದು.<br>–ಊಹಿಸುವುದು.<br>–ಪ್ರಶ್ನಿಸುವುದು.<br>–ತೀರ್ಮಾನಿಸುವುದು.<br>–ದೃಶೀಕರಿಸುವುದು.<br>• ಮುದ್ರಣದ ಸಾಮಗ್ರಿಗಳ ಅರಿವು ಪುಸ್ತಕಗಳೊಂದಿಗೆ ಸಂಬಂಧೀಕರಿಸುವ ಚಟುವಟಿಕೆಗಳನ್ನು ಓವಪಚಾರಿಕವಾಗಿ ಜಾರಿಗೊಳಿಸುವುದು.<br>• ಮುದ್ರಣವು ಯಾವ ರೀತಿ ಇದೆ. ಧ್ವನಿಯೊಂದಿಗೆ ಹೇಗೆ ಮುದ್ರಣವು ಸೇರಿಕೊಂಡಿದೆ ಮುದ್ರಣದ ಅರ್ಥವೇನು ಎಂಬುದರ ಕುರಿತು ಅರ್ಥಮಾಡಿಕೊಂಡು ಬಳಸುವುದು.<br>• ದಿನನಿತ್ಯ ಬಳಸುವ ವಸ್ತುಗಳ ಮೇಲಿನ ಲೋಗೋಗಳು ಮತ್ತು ಲೇಬಲ್‌ಗಳು, ಚಿತ್ರ ಸಂಕೇತಗಳು, ಸೂಚನಾ ಫಲಕಗಳು, ಪುಸ್ತಕದ ಹೆಸರು ಮತ್ತು ಮುಖಪುಟ ಇತ್ಯಾದಿ ಪರಿಕಲ್ಪನೆಗಳ ಕುರಿತು ಮಕ್ಕಳಲ್ಲಿ ವಿವಿಧ ರೂಪದ ಪ್ರಶ್ನೆಗಳನ್ನು ಕೇಳುವುದರ ಮೂಲಕ ಅರ್ಥಗ್ರಹಿಕೆಯೊಂದಿಗೆ ಓದಲು ಅವಕಾಶ ಕಲ್ಪಿಸಬೇಕು.<br>ಉದಾ:– ಈ ಪುಸ್ತಕದ ಮುಖಪುಟ ಎಲ್ಲಿದೆ? ಚಾಕಲೇಟ್ ಬಿಸ್ಕಿಟ್ ಕವರ್, ಸೂಚನಾ ಫಲಕಗಳಲ್ಲಿನ ಸೂಚನೆ ಮತ್ತು ಪೂರಕ ಚಿತ್ರಸಂಕೇತದ ಸಹಿತವಾಗಿ ಇತ್ಯಾದಿ..<br>ಮೇಲಿನ ಲಿಪಿಸಂಕೇತಗಳಿಗೆ ಧ್ವನಿ ಸಂಬಂಧಗಳನ್ನು ಅರ್ಥೈಸುವುದು.<br>• ಈ ಪುಟವನ್ನು ನಾನು ಎಲ್ಲಿಂದ ಓದಲು ಆರಂಭಿಸಬೇಕು?<br>• ಪ್ರಾಸಗೀತೆ/ಕವಿತೆ/ಕಥೆಗಳನ್ನು ಹೇಳುವ ಮೂಲಕ ಪದಗಳು ಮತ್ತು ಉಚ್ಚಾರಾಂಶಗಳಲ್ಲಿನ ಲಯ ಮತ್ತು ಯತಿಯ ಸ್ಥಾನದ ಜಾಗೃತಿ ಮೂಡಿಸುವುದು. (ಎಲ್ಲಿಗೆ ನಿಲ್ಲಿಸುತ್ತಾ ಓದು ಮುಂದುವರೆಸುವುದು – ಕನ್ನಡದಲ್ಲಿ ಯತಿಯ ಸ್ಥಾನವನ್ನು ಗುರುತಿಸಲು ಲೇಖನ ಚಿಹ್ನೆಗಳನ್ನು ಗಮನಿಸುತ್ತಾ ಧ್ವನಿ ಏರಿಳಿತಗಳನ್ನು ಬಳಸುತ್ತಿರುವುದರಿಂದ ಆ ಅಂಶಗಳನ್ನು ಓದಿನಲ್ಲಿ ರೂಡಿಗತ ಮಾಡುವುದು)<br>• ವಾಕ್ಯದಲ್ಲಿನ 2/3 ಅಕ್ಷರಗಳ ಪದಗಳಲ್ಲಿನ ಪ್ರಾಸಪದಗಳನ್ನು ಓದುವುದು ಮತ್ತು ಅಭಿವ್ಯಕ್ತಿಸಲು ಅವಕಾಶಗಳನ್ನು ತರಗತಿಯಲ್ಲಿ ನೀಡುವುದು.<br>• ಮಕ್ಕಳಿಗೆ ಸುತ್ತಲಿನ ಪರಿಸರದಲ್ಲಿನ ಮದ್ರಿತ ಸಾಮಗ್ರಿಗಳನ್ನು ಓದುವ ಕಾರ್ಯಗಳನ್ನು ನೀಡುತ್ತಾ ಅವರನ್ನು ಔಪಚಾರಿಕ ಹಂತದಲ್ಲಿನ ಚಿಕ್ಕ ಚಿಕ್ಕ ಪಠ್ಯಗಳು, ಕಥೆಗಳು ಮತ್ತು ಪದ್ಯಗಳಿಗೆ ತೆರೆದುಕೊಳ್ಳುವಂತೆ ಮಾಡುವುದು.<br>• ವಿವಿಧ ಪದಗಳಲ್ಲಿರುವ ಧ್ವನಿಗುಚ್ಚಗಳನ್ನು ವಿಭಜನೆ ಮಾಡುವುದು ಮತ್ತು ವಿವಿಧ ಧ್ವನಿಗಳನ್ನು ಕೂಡಿಸಿ ಒಂದು ಪದ ರಚಿಸುವುದು ಚಟುವಟಿಕೆಗಳನ್ನು ಆಯೋಜಿಸುವುದು.<br>• ವಾಕ್ಯದಲ್ಲಿನ ಪ್ರಾರಂಭದ /ಮಧ್ಯದ/ಅಂತ್ಯದ ಪದಗಳನ್ನು ಗುರುತಿಸುವುದು ಮತ್ತು ನಿರ್ದಿಷ್ಟ ಪದಗಳಲ್ಲಿನ ಆರಂಭದ/ ಮಧ್ಯದ ಮತ್ತು ಅಂತ್ಯದ ಲಿಪಿ/ಧ್ವನಿಗಳ ಸಂಕೇತಗಳನ್ನು ಗುರುತಿಸಿ ಗ್ರಹಿಸುವ ಕಾರ್ಯಗಳನ್ನು ಮಕ್ಕಳಿಗೆ ನಿಯೋಜಿಸುವುದು. ಜೊತೆಗೆ ಅದರ ಅಭಿವ್ಯಕ್ತಿಗಳನ್ನು ಮಾಡಲು ಮಕ್ಕಳಿಗೆ ಅವಕಾಶಗಳನ್ನು ನೀಡುವುದು. |

DRAFT 2022

| | | | | |
|---|---|---|---|---|
| | | ವಿಧಾನಗಳ ಮೂಲಕ ಸದರಿ ಕೋರ್ಸನಲ್ಲಿ ಬೇರೆ ಬೇರೆ ದಿನಗಳಲ್ಲಿ ಪುನರಾವರ್ತನೆಯಾಗಿವೆ. | ಅನುಭವಕ್ಕೆ ಸಹಸಂಬಂಧೀಕರಿಸಿ ತಮ್ಮ ಸಹಜ ಭಾಷೆಯಲ್ಲಿ ಅಭಿವ್ಯಕ್ತಪಡಿಸಲು ಶಕ್ತರಾಗುವುದು. | • ಪರಿಚಿತ ಪದಗಳನ್ನು ಒಂದೊಂದೇ ಬರೆದು ಆ ಪದದ ಸಹಸಂಬಂಧದ ಸುತ್ತ ಬರುವ ಪದಗಳ ಪಟ್ಟಿ ತಯಾರಿಸುವ ಪದಜಾಲದ ಚಟುವಟಿಕೆಗಳನ್ನು ಶಿಕ್ಷಕರು ಆಯೋಜಿಸುವುದು. ಆನಂತರ ಅಲ್ಲಿ ಬರೆದಿರುವ ಪದಗಳನ್ನು ಓದಿ ಗ್ರಹಿಸುವ ಮತ್ತು ಪರಸ್ಪರ ಮಕ್ಕಳು ಅಭ್ಯಾಸ ಮಾಡುವ ಚಟುವಟಿಕೆಗಳನ್ನು ನೀಡುವುದು.<br><br>ಉದಾಹರಣೆ ಮನೆ ಎಂಬುದು ಪರಿಚಿತ ಮಧ್ಯದ ಪದವಾದರೆ ಅದರ ಸುತ್ತ, ಕುಟುಂಬದ ಸದಸ್ಯರುಗಳು, ಮನೆಯಲ್ಲಿನ ವಸ್ತುಗಳು, ಮನೆಯಲ್ಲಿರುವ ಕೊಠಡಿಗಳು, ಮನೆಯಲ್ಲಿರುವ ಸಾಕುವ ಪ್ರಾನಿಗಳು ಇತ್ಯಾದಿ ರೀತಿಯಲ್ಲಿ ಮನೆಯ ಸುತ್ತ ಅದಕ್ಕೆ ಸಂಬಂಧಿಸಿದ ಪದಗಳನ್ನು ಬರೆದು ಶಿಕ್ಷಕರು ಕಪ್ಪುಹಲಗೆ ಮೇಲೆ ಬರೆದು ಉಳಿದ ಪದಗಳನ್ನು ಮಕ್ಕಳಿಂದ ಕೇಳಿ ಬರೆದು ಓದು ಚಟುವಟಿಕೆಯನ್ನು ಮುಂದುವರೆಸುವುದು.<br>• ಮಕ್ಕಳಿಗೆ ಕಣ್ಣಿಗೆ ಕಾಣುವಂತೆ ಚಿತ್ರಪದಗಳ ಚಾರ್ಟ್ ಪೋಸ್ಟರ್ ಗಳನ್ನು ಪ್ರದರ್ಶಿಸುವುದು. ಅದರ ಸಹಸಂಬಂಧದಲ್ಲಿ ಚಿತ್ರ ಮತ್ತು ಪದಗಳನ್ನು ಓದುವ ಚಟುವಟಿಕೆ ನಡೆಸುವುದು.<br>• ಮಕ್ಕಳು ಸ್ವತಂತ್ರವಾಗಿ ಓದಲು ಅವಕಾಶ ಮಾಡಿಕೊಡುವುದು.<br>– ಕಥೆ ಪುಸ್ತಕಳಿಂದ ಚಿತ್ರಗಳನ್ನು ಓದಲು ಪ್ರೋತ್ಸಾಹಿಸುವುದು.<br>– ಸರಣಿ ಚಿತ್ರಗಳ ಮೂಲಕ ಘಟನೆಗಳನ್ನು ಅನುಕ್ರಮವನ್ನು ಅರ್ಥ ಮಾಡಿಕೊಳ್ಳಲು ಓದಲು ಚಿತ್ರ ಸಹಿತ ವಿವಿಧ ರೀತಿಯ ಪುಸ್ತಕಗಳನ್ನು ಒದಗಿಸುವುದು.<br>• ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ವಿವಿಧ ಗುಂಪುಗಳನ್ನಾಗಿ ಮಾಡಿ ವಿವಿಧ ರೀತಿಯ ಓದುವಿಕೆ ಕ್ರಗಳನ್ನು ಬಳಸಿ ಓದಲು ಅವಕಾಶ ಒದಗಿಸುವುದು.<br>ಉದಾ ;–<br>ಹಂಚಿದ ಓದುವಿಕೆ – ಶಿಕ್ಷಕರು ದಪ್ಪ ಅಕ್ಷರಗಳನ್ನು ಒಳಗೊಂಡ ಪುಸ್ತಕಗಳನ್ನು ಹಿಡಿದುಕೊಂಡು ಗಟ್ಟಿಯಾಗಿ ಉಚ್ಚರಿಸುತ್ತಾ ಹೆಚ್ಚಿನ ಸಹಾಯ ನೀಡುವ ಮೂಲಕ ಪದ್ಯವನ್ನು ಒಟ್ಟಿಗೆ ಓದುವುದು ಇಲ್ಲಿ ಮಕ್ಕಳು ಸ್ಮರಣೆಯಿಂದ ಪದಗಳನ್ನು ಗುರುತಿಸುವರು.<br>ಮಾರ್ಗದರ್ಶಿತ ಓದುವಿಕೆ – ಈ ಸಂದರ್ಭದಲ್ಲಿ ಶಿಕ್ಷಕರು ಮಕ್ಕಳಿಗೆ ಹೆಚ್ಚಿನ ಸೂಚನೆಗಳನ್ನು ನೀಡುವ ಮೂಲಕ ಓದಲು ಅವಕಾಶ ಕಲ್ಪಿಸಿಕೊಡಬೇಕು.<br>• ಚಟುವಟಿಕೆಗಳನ್ನು ನಿರ್ವಹಿಸಲು ಅವಶ್ಯವಿರುವ ಬೋಧನಾ ಕಲಿಕಾ ಸಾಮಾಗ್ರಿಗಳನ್ನು ಮುಂಚಿತವಾಗಿಯೇ ವ್ಯವಸ್ಥೆ ಮಾಡುವುದು ಮುಖ್ಯವಾಗಿ ಸಂಪನ್ಮೂಲಗಳು ಕಡಿಮೆ ಬೆಲೆಯ/ಬೆಲೆ ರಹಿತ ನೈಸರ್ಗಿಕವಾಗಿ ದೊರೆಯುವ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಬೇಕು.<br>• ವಾರದ ಕೊನೆಯ ದಿನ ಶನಿವಾರದಂದು ಆ ವಾರದ ಚಟುವಟಿಕೆಗಳನ್ನು ಪುನರಾವರ್ತನೆ ಮಾಡುವುದು.<br>• ಮಕ್ಕಳ ಪ್ರಗತಿಯನ್ನು ನಿಯಮಿತವಾಗಿ ಮೌಲ್ಯ ಮಾಪನ ಮಾಡುವುದು. |
| 6.3 | **ಉದ್ದೇಶಿತ ಬರಹ** | ಉದ್ದೇಶಿತ ಬರವಣಿಗೆಯು ಆಲಿಸುವುದು ಮತ್ತು ಮಾತನಾಡುವುದು ಹಾಗೂ ಅರ್ಥಗ್ರಹಿಕೆಯೊಂದಿಗೆ | • ಬರವಣಿಗೆಯ ಆರಂಭಿಕ ಕೌಶಲಗಳನ್ನು ಅಭ್ಯಾಸ ಮಾಡಿಸುವುದು.<br>• ಬರವಣಿಗೆಯೆಡೆಗೆ ಮಕ್ಕಳನ್ನು ಸೆಳೆಯುವುದು.<br>• ಉತ್ತಮ ಚಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಅಕ್ಷರಗಳನ್ನು, ಪದಗಳನ್ನು ಹಾಗೂ ವಾಕ್ಯಗಳನ್ನು ಗುರುತಿಸಿ | • ಮಕ್ಕಳ ಬರವಣಿಗೆಗಾಗಿ ಸ್ನಾಯುಗಳನ್ನು ಅಭಿವೃದ್ಧಿಪಡಿಸಲು ಕ್ರಮವಹಿಸುವುದು.<br>• ಬರವಣಿಗೆಗಾಗಿ ಗೀಚು ಬರೆಹವನ್ನು ಆರಂಭದಲ್ಲಿ ಬಳಸುವುದು.<br>• ಬರವಣಿಗೆಗಾಗಿ ಚಿತ್ರವನ್ನು ಬಳಸುವುದು.<br>• ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. |

| | | | | |
|---|---|---|---|---|
| | | ಓದಿನ ನಂತರದ ಹಂತ ಇದಾಗಿದ್ದು, ಇವುಗಳ ಮೂಲಕ ಮಕ್ಕಳನ್ನು ಉತ್ತಮ ಸಂವಹನಕಾರರನ್ನಾಗಿ ಮಾಡಬೇಕಿದೆ. ಇದಕ್ಕಾಗಿ ನಾವು ಬುನಾದಿ ಭಾಷೆ ಹಾಗೂ ಅಕ್ಷರಜ್ಞಾನದ ಅಡಿಯಲ್ಲಿ 38 ಚಟುವಟಿಕೆಗಳನ್ನು ನೀಡಲಾಗಿದ್ದು, ಉದ್ದೇಶಿತ ಬರೆಹಕ್ಕಾಗಿ 08 ಚಟುವಟಿಕೆಗಳನ್ನು ಗುರುತಿಸಿ ಕಲಿಕೆಯನ್ನುಂಟು ಮಾಡಬೇಕಿದೆ. | ಬರೆಯುವುದು.<br>• ಸೃಜನಶೀಲ ಅಭಿವ್ಯಕ್ತಿಯ ಕೌಶಲವನ್ನು ವೃದ್ಧಿಸುವುದು.<br>• ಸೂಕ್ಷ್ಮ ಸ್ನಾಯು ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಬರವಣಿಗೆಗೆ ಪೂರಕವಾದ ಸ್ನಾಯುಗಳನ್ನು ಬಲಪಡಿಸುವುದು.<br>• ಕೈ–ಕಣ್ಣುಗಳನ್ನು ಸಂಯೋಜಿಸುವ ಮೂಲಕ ಬರವಣಿಗೆಗೆ ಅಣಿಗೊಳಿಸುವುದು.<br>• ಬರವಣಿಗೆಗಾಗಿ ಗೀಚು ಬರೆಹವನ್ನು ಬಳಸುವುದು.<br>• ಬರವಣಿಗೆಗಾಗಿ ಚಿತ್ರವನ್ನು ಬಳಸುವುದು.<br>• ಕ್ರಿಯಾತ್ಮಕ ಉದ್ದೇಶಕ್ಕಾಗಿ ಬರೆಯುವುದು.<br>• ತಮ್ಮ ಹೆಸರನ್ನು ಬರೆಯುವುದು.<br>• ಬರವಣಿಗೆ ಸಾಮಗ್ರಿಗಳೊಂದಿಗೆ ಪರಿಶೋಧಿಸುವುದು.<br>• ಬರವಣಿಗೆಯಲ್ಲಿ ಸೂಕ್ತ ಕ್ರಮವನ್ನು ಅನುಸರಿಸುವುದು. (ಎಡದಿಂದ ಪ್ರಾರಂಭಿಸಿ ಬಲಕ್ಕೆ ಮುಕ್ತಾಯ ಮಾಡುವುದು)<br>• ಅವಧಾನದಿಂದ ಆಲಿಸಿ ಬರೆಯುವುದು.<br>• ಬರವಣಿಗೆಯ ಮೂಲಕ ಪದಸಂಪತ್ತನ್ನು ಹೆಚ್ಚಿಸುವುದು.<br>• ಅಕ್ಷರಗಳನ್ನು, ಪದಗಳನ್ನು ಹಾಗೂ ವಾಕ್ಯಗಳನ್ನು ಗುರ್ತಿಸುವುದು.<br>• ಮುದ್ರಣದ ಅರಿವನ್ನುಂಟು ಮಾಡುವುದು.<br>• ಬರವಣಿಗೆಯ ಮೂಲಕ ಅರ್ಥಗ್ರಹಿಕೆಯನ್ನುಂಟು ಮಾಡುವುದು.<br>• ಆಲಿಸಿ ಅರ್ಥಮಾಡಿಕೊಳ್ಳುವುದು.<br>• ಹಂಚಿಕೊಂಡು (ಹಂಚಿತ) ಬರೆಯುವಂತೆ ಮಾಡುವುದು.<br>• ವೀಕ್ಷಣೆ, ಕಲ್ಪನೆ, ಚಿಂತನೆ ಹಾಗೂ ಪರಿಸರದ ಅರಿವು ಮೂಡಿಸುವುದು. | • ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>• ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು.<br>• ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| 7 | ಹೊರಾಂಗಣ ಆಟಗಳು | ಕ್ರೀಡೆಗಳು ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಮೂಡಿಸುವಲ್ಲಿ ಸಫಲವಾಗಿವೆ. ಹೊರಾಂಗಣ ಆಟಗಳು ಮನಸ್ಸಿಗೆ ಸಂತೋಷ ನೀಡುವುದಲ್ಲದೆ ದೈಹಿಕ | ಹೊರಾಂಗಣ ಆಟಗಳು ಮಕ್ಕಳಿಗೆ ಮನೋರಂಜನೆ ಮತ್ತು ಸಂತೋಷಉಂಟು ಮಾಡುವುದು ಅಲ್ಲದೆ ಅವರ ಸರ್ವತೋನ್ಮುಖ ಬೆಳವಣಿಗೆಗೆ ಸಹಾಯಕ ಮಾಡುತ್ತದೆ ಇದರ ಜೊತೆಗೆ:<br>• ಸ್ಥೂಲ ಸ್ನಾಯು ಬೆಳವಣಿಗೆ ಹಾಗೂ ಅಭಿವೃದ್ಧಿಗೆ | • ಮರಳು ಮತ್ತು ನೀರಿನ ಪ್ರದೇಶವು ಸ್ವಚ್ಛ ಹಾಗೂ ಸುರಕ್ಷಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.<br>• ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮೈದಾನವು ವಿಶಾಲವಾಗಿರಬೇಕು. |

| | | | | |
|---|---|---|---|---|
| | | ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಿವೆ..<br>ಹೊರಾಂಗಣ ಆಟಗಳನ್ನು ವಿವಿಧ ವಯೋಮಾನದ ಮಕ್ಕಳಿಗೆ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯತೆಯನ್ನು ಒದಗಿಸುತ್ತದೆ.<br>ಮಕ್ಕಳಿಗೆ ಕನಿಷ್ಠ ಮೂವತ್ತು ನಿಮಿಷಗಳ ಕಾಲ ದೈನಂದಿನ ಆಟದಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡುವುದು.<br>ಹೊರಾಂಗಣ ಆಟ ಮಕ್ಕಳಲ್ಲಿ ಪರಿಸರ ಅನ್ವೇಷಣೆ, ಗುಂಪುಗಳಲ್ಲಿ ಆಡುವ ಕಲೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತವೆ ಹಾಗು ದೊಡ್ಡ ಸ್ನಾಯುಗಳ ಸಾಮಾನ್ಯವನ್ನು ಅಭಿವೃದ್ಧಿಪಡಿಸಲು ಸಹಾಯಮಾಡುತ್ತವೆ.<br>ಹೊರಾಂಗಣ ಆಟಗಳಿಗೆ ಸಾಕಷ್ಟು ಸ್ಥಳವನ್ನು ಒದಗಿಸಬೇಕಾಗಿರುತ್ತದೆ .<br>ಹೊರಾಂಗಣ ಆಟಗಳಲ್ಲಿ ಈ 3 ಚಟುವಟಿಕೆಗಳು ಒಳಗೊಂಡಿವೆ.<br>ಮುಕ್ತ ಆಟ: ಹತ್ತುವುದು, ಸಿಗಿಯುವುದು, ಆಟದ ಮೈದಾನದಲ್ಲಿ ರುವ ಉಪಕರಣ ಬಳಸಿ ಆಡುವುದು ಇತ್ಯಾದಿ.<br>• ರಚನಾತ್ಮಕ ಚಟುವಟಿಕೆ : ದೈಹಿಕ ಚಲನೆ ಮತ್ತು ಸಮತೋಲನ ದಂತಹ ಚಟುವಟಿಕೆ. ವಿಧಾನ ನಿಗದಿತ ಆಟಗಳು ಶಿಕ್ಷಕ ನಿರ್ದೇಶಿತ ವಾಗಿರಬೇಕು. | ಸಹಾಯ ಮಾಡುತ್ತದೆ.<br>• ಶರೀರದಲ್ಲಿ ರಕ್ತ ಪರಿಚಲನೆ ಸರಾಗವಾಗಿ ರೋಗನಿರೋಧಕ ಶಕ್ತಿ ವೃದ್ಧಿಯಾಗಲು ಸಹಕಾರಿಯಾಗಿದೆ.<br>• ದೇಹದ ನಿಯಂತ್ರಣ ಸಾಧಿಸಲು ಸಾಧ್ಯವಾಗುತ್ತದೆ.<br>• ನಿಗದಿತ ನಿರ್ಧಾರ ತೆಗೆದುಕೊಳ್ಳುವ ಕೌಶಲ್ಯವನ್ನು ಬೆಳೆಸುತ್ತದೆ.<br>• ಸಮಯವನ್ನು ಸದುಪಯೋಗ ಪಡಿಸಿಕೊಳ್ಳಲು ಸಹಕಾರಿಯಾಗಿದೆ.<br>• ಸ್ಮರಣಶಕ್ತಿ ವೃದ್ಧಿಸಲು ಸಹಕರಿಸುವುದರ ಜೊತೆಗೆ ಸಮಸ್ಯೆ ಪರಿಹಾರ ಕೌಶಲ್ಯವನ್ನು ಅಭಿವೃದ್ಧಿಪಡಿಸುತ್ತದೆ.<br>• ತಂಡ ಸ್ಪೂರ್ತಿ ಬೆಳೆಸುವುದರೊಂದಿಗೆ ನಾಯಕತ್ವದ ಗುಣಗಳನ್ನು ಕಟ್ಟಿಕೊಳ್ಳಲು ಸಹಕಾರಿಯಾಗಿದೆ.<br>• ಶಿಸ್ತು , ತಾಳ್ಮೆ, ಸಹಕಾರ ಮನೋಭಾವ, ಸಾಮಾಜಿಕ ಬಾಂಧವ್ಯವನ್ನು ವೃದ್ಧಿಸುತ್ತದೆ ಹಾಗೂ ಸಂಯಮವನ್ನು ಬೆಳೆಸುತ್ತದೆ. | • ಹೊರಾಂಗಣ ಆಟದ ಪರಿಕರಗಳು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಇವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.<br>• ಆಟದ ಪರಿಕರಗಳು ಮಕ್ಕಳ ವಯೋಮಾನಕ್ಕೆ ಅನುಗುಣವಾಗಿರುವವೋ ಎಂದು ಖಚಿತಪಡಿಸಿಕೊಳ್ಳಿ.<br>• ಆಟದ ಸಮಯದಲ್ಲಿ ಗುಂಪು ಸಂವಹನಕ್ಕಾಗಿ ಅವಕಾಶಗಳನ್ನು ಯೋಜಿಸುವುದು. |

DRAFT 22.02.22

| | | | | |
|---|---|---|---|---|
| | | • ಪ್ರಾಯೋಗಿಕ ಚಟುವಟಿಕೆ :ಮಣ್ಣನ್ನು ಅಗೆಯುವುದು, ಗಿಡವನ್ನು ನೆಡುವುದು, ಇತರೆ ತೋಟಗಾರಿಕೆ ಚಟುವಟಿಕೆಗಳು. | | |
| 8 | ಕಥಾ ಸಮಯ | ಕಥೆ ಎಂದರೆ ಯಾರಿಗೆ ತಾನೆ ಇಷ್ಟವಿರುವುದಿಲ್ಲ. ಎಲ್ಲರೂ ಇಷ್ಟ ಪಡುತ್ತಾರೆ ಅಲ್ಲವೇ? ಅದರಲ್ಲಿಯೂ ಮಕ್ಕಳು ಕಥೆಗಳನ್ನು ತುಂಬಾ ಇಷ್ಟ ಪಡತ್ತಾರೆ ಮತ್ತೂ ಅವರಿಗೆ ಇಷ್ಟವಾದ ಕಥೆಯನ್ನು ಹೇಳಿ ಬಿಟ್ಟರೇ! ಮತ್ತೆ ಮತ್ತೆ ಅದನ್ನೇ ಹೇಳು ಎಂದು ಗೋಗರೆಯುವು ದುಂಟು. ಕಥೆ, ನಾಟಕ, ರೂಪಕ ಇತ್ಯಾದಿ ಚಟವಟಿಕೆಗಳು ಕಲಿಕೆಯ ವಿವಿಧ ಸಾಮರ್ಥ್ಯಗಳನ್ನು ವೃದ್ಧಿಸುತ್ತವೆ. ಮಕ್ಕಳು ಕಥೆಗಳನ್ನು ಕೇಳುತ್ತಾ ಕೇಳುತ್ತಾ ಸ್ನೇಹ, ಗೌರವ, ಧೈರ್ಯ, ಹೊಂದಾಣಿಕೆ, ಗುಂಪು ಕಾರ್ಯ, ಸಹಕಾರ ಭಾವನೆ ಇತ್ಯಾದಿ ಮೌಲ್ಯಗಳನ್ನು ಮತ್ತು ಗುಣಳನ್ನು ತಮಗರಿ ವಿಲ್ಲದಂತೆಯೇ ರೂಢಿಸಿ ಕೊಳ್ಳುವುದು ಸಹಜ. ಇದರೊಟ್ಟಿಗೆ ಕಥೆಯ ಸನ್ನಿವೇಶಗಳನ್ನು ಮತ್ತು ಪಾತ್ರಗಳನ್ನು ತಮ್ಮ ಸ್ವಾನುಭವಗಳಿಗೆ ಹೋಲಿಸಿ ಕೊಂಡು ಭಾವನಾತ್ಮಕವಾಗಿ | ➢ ಆಲಿಸುವ ಸಾಮರ್ಥ್ಯವನ್ನು ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>➢ ಸೃಜನಸೀಲತೆಯನ್ನು ಅಭಿವೃದ್ಧಿ ಪಡಿಸುವುದು.<br>➢ ಪ್ರಶ್ನಿಸುವ ಮನೋಭಾವನೆಯನ್ನು ಉಂಟುಮಾಡುವುದು.<br>➢ ಏಕಾಗ್ರತೆಯನ್ನು ಹೆಚ್ಚಿಸಿ ಕುತೂಹಲ ಪ್ರವೃತ್ತಿಯನ್ನು ಉಂಟುಮಾಡುವುದು.<br>➢ ಹಾಗಾದರೆ, ಹಾಗಾಗದಿದ್ದರೆ ಇತ್ಯಾದಿ ಸಂದರ್ಭಗಳಿಗೆ ಹೋಲಿಕೆ ಮಾಡುವ ಕೌಶಲವನ್ನು ರೂಢಿಸುವುದು.<br>➢ ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ನಿರ್ಗಳವಗಿ ಮಾತನಾಡುವ ಕೌಶಲವನ್ನು ರೂಢಿಸುವುದು.<br>➢ ಕಥೆಗೆ ಸಂಬಂಧಿಸಿದ ಚಿತ್ರಗಳ ಸಂಗ್ರಹ ಮಾಡುವ ಆಸಕ್ತಿಯನ್ನು ಉಂಟುಮಾಡುವುದು.<br>➢ ಅಭಿನಯ ಕೌಶಲ, ಸಹಕಾರ ಭಾವನೆ ಬೆಳೆಸುವುದು.<br>➢ ಸಭಾಕಂಪನವನ್ನು ದೂರ ಓಡಿಸುವುದು.<br>➢ ನಾಯಕತ್ವ ಗುಣಗಳನ್ನು ವೃದ್ಧಿಗೊಳಿಸುವುದು.<br>➢ ಶಿಸ್ತು, ಸಂಯಮ, ಸಮಯಪಾಲನೆ ಇತ್ಯಾದಿ ಮೌಲ್ಯಗಳನ್ನು ರೂಢಿಸುವುದು.<br>➢ ಓದುವ ಹವ್ಯಾಸವನ್ನು ಬೆಳೆಸುವುದು. ಪದಸಂಪತ್ತನ್ನು ಹೆಚ್ಚಿಸುವುದು ಮತ್ತು ಗ್ರಾಂಥಿಕ ಶಬ್ಧಗಳನ್ನು ಪರಿಚಯಿಸುವುದು. | ಯಾವ ರೀತಿ ಕಥೆಗಳನ್ನು ಆಯ್ಕೆ ಮಾಡಿಕೊಳ್ಳ ಬೇಕು?<br>• ಮಕ್ಕಳ ಬೌದ್ಧಿಕ ಮಟ್ಟಕ್ಕೆ ಅನುಗುಣವಾಗಿಬೇಕು.<br>• ಶಾಲೆಯ ಸುತ್ತಲಿನ ವಾತಾವರಣಕ್ಕೆ ಹೊಂದಾಣಿಕೆಯಾಗುವಂತಿರಬೇಕು.<br>• ಮನೋರಂಜನೆಯನ್ನು ನೀಡುಂತಿರಬೇಕು.<br>• ಆಸಕ್ತಿ, ಕುತೂಹಲ ಉಂಟುಮಾಡುವಂತಿರಬೇಕು.<br>• ಮಕ್ಕಳ ಕಲ್ಪನೆಗೆ ನಿಲುಕುವಂತಿರಬೇಕು.<br>• ಕಡ್ಡಿ ಗೊಂಬೆಗಳು, ಮುಖವಾಡಗಳು ಮತ್ತು ಚಿತ್ರಕಥಾ ಸರಣಿಯ ಚಿತ್ರಗಳನ್ನು ಬಳಸಿ ಹೇಳಲು ಅನುಕೂಲ ವಾಗುವಂತಿರಬೇಕು.<br>ಕಥೆಯ ನಿರೂಪಣೆ ಹೇಗಿರಬೇಕು?<br>• ಮಕ್ಕಳಿಗೆ ಪರಿಚಿತವಾಗಿರುವ ಸರಳ ಭಾಷೆಯಲ್ಲಿ ನಿರೂಪಿಸಬೇಕು.<br>• ಸ್ವರಭಾರ ಏರಿಳಿತ ಹಾಗೂ ಹಾವ ಭಾವದೊಂದಿಗೆ ನಿರೂಪಿಸಬೇಕು.<br>• ಆಂಗಿಕ ಚಲನೆಯಿಂದ ಕೂಡಿರಬೇಕು.<br>• ಕಥೆಯ ಮಧ್ಯದಲ್ಲಿ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಬೇಕು.<br>• ಮಕ್ಕಳಿಗೆ ಪ್ರಶ್ನಿಸಲು ಅವಕಾಶ ಕಲ್ಪಿಸಬೇಕು.<br>• ಚಿತ್ರ, ಇತರೆ ಪರಕರಗಳನ್ನು ಬಳಸುವ ಅಗತ್ಯವಿದ್ದಲ್ಲಿ ಕಡ್ಡಾಯವಾಗಿ ಅವುಗಳನ್ನು ಬಳಸಿಯೇ ಕಥೆಯನ್ನು ಹೇಳಬೇಕು.<br>• ಕಥೆಯನ್ನು ನಿಲ್ಲಿಸ ಬೇಕಾದ ಸಂದರ್ಭದಲ್ಲಿ ಒಂದು ಕುತೂಹಲ ಹಂತಕ್ಕೆ ಕಥೆಯನ್ನು ನಿಲ್ಲಿಸಿ ಅಗತ್ಯ ಸೂಚನೆಗಳನ್ನು ನೀಡಬೇಕು.<br>ಒಂದನೇ ವಾರದಲ್ಲಿ ಕಥೆಯ ನಿರ್ವಹಣೆ ಹೀಗಿರಲಿ –<br>• ಕಥೆಯನ್ನು ಆಯ್ಕೆ ಮಾಡಿಕೊಂಡ ನಂತರ ಕಥೆಯ ನಿರೂಪಣೆಗೆ ಅಗತ್ಯವಾದ ಪರಿಕರಗಳನ್ನು ಸಿದ್ಧಪಡಿಸಿಕೊಳ್ಳಿ.<br>• ಒಂದು ಮತ್ತು ಎರಡನೇ ದಿನ ಕಥೆಯನ್ನು ನಿರೂಪಿಸಿ. ಕಥೆ ಹೇಳುವಾಗ ಭಾಷೆ, ಆಂಗಿಕ ಚಲನೆ, ಹಾವ ಭಾವ ಸೂಕ್ತವಗಿರಲಿ.<br>• ಸಮಯ ಉಳಿದಲ್ಲಿ ಕಥಯನ್ನು ಮತ್ತೊಮ್ಮೆ ಅರ್ಥೈಸಿ. |

DRAFT 2022

| | | | | |
|---|---|---|---|---|
| | | ವ್ಯವಹರಿಸುವುದುಂಟು.<br>ಕಥೆ ಹೇಳುವ ವಿಧಾನಗಳು ಹಲವು. ಹಾಗಾಗಿ ಕಥೆಯನ್ನು ಹೇಳುವವರು ಶಿಕ್ಷಕರಾಗಲಿ, ಅಥವಾ ಪೋಷಕರಾಗಲಿ ಒಂದಿಷ್ಟು ಅಂಶಗಳನ್ನು ಗಮನಿಸ ಬೇಕಾದುದು ಅತ್ಯಗತ್ಯ.<br>ಇಲ್ಲಿ ಕಥೆಯ ಆಯ್ಕೆ, ಲಕ್ಷಣಗಳು, ನಿರೂಪಣಾ ಶೈಲಿ, ಕೇಳುವವರ ವಯೋಮಾನ, ಕಥೆಯ ನಂತರದ ಪ್ರಶ್ನೋತ್ತರ ಇತ್ಯಾದಿಗಳನ್ನು ಗಮನದಲ್ಲಿರಿಸಿ ಕೊಂಡು 'ಕಥಾ ಸಮಯದ ಬಳಕೆಯನ್ನು ತರಗತಿ ಕೊಠಡಿಯಲ್ಲಿ ಯವ ರೀತಿ ಅಳವಡಿಸಿಕೊಳ್ಳ ಬಹುದು ಎನ್ನುವ ಅಂಶಗಳನ್ನು ನೀಡಿದೆ. ಅವುಗಳನ್ನು ಒಮ್ಮೆ ಅವಲೋಕಿಸೋಣ.<br>ಒಂದು ವಾರಕ್ಕೆ ಒಂದು ಅಥವಾ ಎರಡು ಕಥೆಗಳನ್ನು ಕಥಾ ಸಮಯದಲ್ಲಿ ಹೇಳುವ ಅವಕಾಶವಿದ್ದು, ಹೆಚ್ಚುವರಿಯಾಗಿ ಅನುಬಂಧ ದಲ್ಲಿಯೂ ಕೆಲವು ಕಥೆಗಳನ್ನು ನೀಡಿದೆ. ಇವುಗಳನ್ನು ಈಗಾಗಲೇ ಶ್ರೇಣಿಕೃತವಾಗಿ ಜೋಡಿಸಲಾಗಿದ್ದರೂ ನಿಮ್ಮ ನಿಮ್ಮ ಶಾಲಾ ಸನ್ನಿವೇಶ ಹಾಗೂ ವಿದ್ಯಾರ್ಥಿಗಳ ಬೌಧಿಕ ಮಟ್ಟಕ್ಕೆ ಅನುಗುಣ ವಾಗಿ | | • ಮೂರನೆಯ ದಿನ ಕಥೆಗೆ ಸಂಬಂಧಿಸಿದ ವಸ್ತು, ಚಿತ್ರ, ಪರಿಕರಗಳನ್ನು ಮತ್ತುಷ್ಟು ಆಕರ್ಷಣೀಯವಾಗಿ ಕಥೆಯನ್ನು ಹೇಳಿ. ಹೀಗೆ ಕಥೆಯನ್ನು ಹೇಳುವಾಗ ಎರಡು ಮತ್ತು ಮೂರನೇ ತರಗತಿಯ ಮಕ್ಕಳಿಗೆ ಸರಳ ಪ್ರಶ್ನೆಗಳನ್ನು ಕೇಳಿ ಕಥೆಯ ಪಾತ್ರಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.<br>• ನಾಲ್ಕನೆಯ ದಿನ ಕಥೆಯನ್ನು ವಿಭಿನ್ನ ಶೈಲಿಯಲ್ಲಿ ಹೇಳುವುದರ ಜೊತೆಗೆ ಸಾಮೂಹಿಕವಾಗಿ ಕಥೆಯ ಪಾತ್ರಗಳು, ಸನ್ನಿವೇಶ, ಅವುಗಳ ವಿಶೇಷತೆಯನ್ನು ಹೆಸರಿಸಲು ಪ್ರಶ್ನೆಗಳನ್ನು ಕೇಳಿ.<br>• ಐದನೆಯ ದಿನ ಕಥೆಯನ್ನು ನಿರೂಪಿಸಲು ಮಕ್ಕಳಿಗೆ ಅವಕಾಶ ನೀಡಿ.<br>• ಪ್ರಾರಂಭದ ದಿನಗಳಲ್ಲಿ 2 ಮತ್ತು 3ನೇ ತರಗತಿಯ ವಿದ್ಯಾರ್ಥಿಗಳು ಕಥೆ ಹೇಳಲಿ ಕ್ರಮೇಣ ಒಂದನೆಯ ತರಗತಿಯ ವಿದ್ಯಾರ್ಥಿಗಳು ಪ್ರಯತ್ನಿಸಲಿ.<br>ಈ ರೀತಿಯಾಗಿ ಮೊದಲ ಮೂರು ವಾರಗಳಲ್ಲಿ ಒಂದು ವಾರಕ್ಕೆ ಒಂದು ಕಥಯಂತೆ ಕಥೆಗಳ ನಿರೂಪಣೆ ಯಾಗುತ್ತದೆ. ನಾಲ್ಕನೇ ವಾರದಿಂದ ಕಥೆಯ ನಿರೂಪಣೆಯಲ್ಲಿ ಶಿಕ್ಷಕರು ಹೊಸ ಹೊಸ ವಿಧಾನಗಳನ್ನು ಬಳಕೆ ಮಾಡಿಕೊಳ್ಳಬಹುದು..<br>ಅವುಗಳೆಂದರೆ. . . .<br>• ಕಡ್ಡಿ ಚಿತ್ರ/ ಹತ್ತಿ ಗೊಂಬೆ / ಬೆರಳು ಗೊಂಬೆಗಳನ್ನು ಬಳಸಿ ಕಥೆ ಹೇಳುವುದು.<br>• ಮುಖವಾಡ ಬಳಸಿ ಅಭಿನಯದೊಂದಿಗೆ ಕಥೆ ಹೇಳುವುದು.<br>• ಚಿತ್ರಗಳನ್ನು ಅನುಕ್ರಮವಾಗಿ ಜೋಡಿಸಿ ಕಥೆ ಹೆಣೆಯುವುದು.<br>• ಮೂರ್ತ ರೂಪದ ವಸ್ತುಗಳನ್ನು ಬಳಸಿ ಕಥೆಯನ್ನು ನಿರೂಪಿಸುವುದು.<br>• ಒಬ್ಬೊಬ್ಬರು ಒಂದೊಂದು ವಾಕ್ಯವನ್ನು ಹೇಳಿ ಕಥೆಯನ್ನು ರಚಿಸುವುದು.<br>• ಕಥೆಯ ಪಾತ್ರಗಳನ್ನು ಆಧರಿಸಿ, ಕಥೆಯನ್ನು ಸೃಜಿಸುವುದು.<br>• ಕಥೆಯನ್ನು ಆಲಿಸಿದ ನಂತರ ಅದರಲ್ಲಿನ ಚಿಕ್ಕ ಚಿಕ್ಕ ಸಂಭಾಷಣೆಯನ್ನು ಹೇಳಲು ಅವಕಾಶ ಕಲ್ಪಿಸುವುದು.<br>• ಕಥೆಯನ್ನು ಅರ್ಧಕ್ಕೆ ನಿಲ್ಲಿಸಿ ಕಥೆಯನ್ನು ಮುಂದುವರೆಸಲು ಮಕ್ಕಳಿಗೆ ತಿಳಿಸುವುದು.<br>ಕ್ರಮವಾಗಿ 3, 6, 9 ಮತ್ತು 12ನೆಯ ವಾರಗಳಲ್ಲಿ ಇಂಗ್ಲೀಷ ಭಾಷೆಯಲ್ಲಿರುವ ಕಥೆಗಳನ್ನು ವಾರದ ಮೂರು ದಿನಗಳಲ್ಲಿ ಉದಾ : ಸೋಮವಾರ, ಮಂಗಳವಾರ, ಬುಧವಾರಗಳಂದು ಹೇಳುವುದು. ಇದು ದ್ವಿತೀಯ ಭಾಷೆಯಾಗಿರುವುದರಿಂದ ಚಿತ್ರ ಸಹಿತ, ಪರಿಕರ ಸಹಿತ, ಸೂಕ್ತ ತಯಾರಿಯೊಂದಿಗೆ ಕಥೆಯನ್ನು ಸರಳವಾಗಿ ನಿರೂಪಿಸುವುದು. ಕಥೆಯಲ್ಲಿ ಬರುವ ಪಾತ್ರಗಳ್ನು ಎರಡೂ ಭಾಷೆಯಲ್ಲಿ ಹೇಳಿ ಮಕ್ಕಳಿಗೆ ಅರ್ಥೈಸುವುದು. |

| | | | | |
|---|---|---|---|---|
| | | ಮರುಹೊಂದಾಣಿಕೆ ಮಾಡಿಕೊಳ್ಳುವ, ಹೆಚ್ಚುವರಿ ಕಥೆಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಶಿಕ್ಷಕರಿಗಿದೆ.<br>ಸಾಮಾನ್ಯವಾಗಿ ಹಾಡು, ಕಥೆ, ನಾಟಕ, ಚರ್ಚೆ ಇತ್ಯಾದಿ ಯಾವುದೇ ಚಟುವಟಿಕೆಯ ನಿರ್ವಹಣೆಯ ಪ್ರಾರಂಭದಲ್ಲಿ ಮಕ್ಕಳ ಅವಧಾನವನ್ನು ಸತತವಾಗಿ 30 ನಿಮಿಷಗಳ ಕಾಲ ಹಿಡಿದಿಟ್ಟುಕೊಳ್ಳುವುದು ಸಾಹಸದ ಮಾತೇ ಸರಿ. ಹಾಗಾಗಿ ಪ್ರಾರಂಭದ ದಿನಗಳಲ್ಲಿ ಕಥಾ ಸಮಯದ ಅವಧಿಯ ನಿರ್ವಹಣೆ ಹೀಗಿರಲಿ<br>➢ ಯಾವುದಾದರೊಂದು ಪೂರ್ವಭಾವಿ ಚಟುವಟಿಕೆಯನ್ನು ಆಯೋಜಿಸಿ, ಮಕ್ಕಳ ಗಮನವನ್ನು ನಿಮ್ಮ ಕಡೆ ಸೆಳೆದುಕೊಳ್ಳಿ.<br>➢ ನೀವು ಯೋಜಿಸಿದಂತೆ ಕಥೆಯನ್ನು ನಿರೂಪಿಸಿ.<br>➢ ಪ್ರತಿ 5 ಅಥವಾ 8 ನಿಮಿಷದ ನಂತರ ಕಥೆ ಹೇಳುವುದನ್ನು ಸ್ವಲ್ಪ ನಿಲ್ಲಿಸಿ. ಯಾವುದಾದರೊಂದು ಸಣ್ಣ ಚಟುವಟಿಕೆಯನ್ನು ಮಾಡಲು ಸೂಚಿಸಿ. **ಉದಾಹರಣೆ :** | | 10, 11, 12ನೆಯ ವಾರಗಳ ಕಥಾ ಸಮಯದಲ್ಲಿ ರೂಢಿಯಂತೆ ಕಥೆಯನ್ನು ಹೇಳಿದ ನಂತರ ಮತ್ತೊಮ್ಮೆ ಕಥೆಯ ಸಾಹಿತ್ಯವನ್ನು ಶಿಕ್ಷಕರು ಓದಬೇಕು. ಇದನ್ನು ಆಲಿಸಿದ ಮಕ್ಕಳು ಕಥೆಯನ್ನು ಅರ್ಥೈಸಿಕೊಂಡಿರುವುದನ್ನು ಖಾತ್ರಿಪಡಿಸಿ ಕೊಳ್ಳಲು ಸರಳ ಪ್ರಶ್ನೆಗಳನ್ನು ಕೇಳುವುದು.<br>ಕಥೆಯಲ್ಲಿನ ಪಾತ್ರಗಳ ಚಿತ್ರಗಳನ್ನು ಬಿಡಿಸಲು ಅಥವಾ ರೇಖಾಚಿತ್ರಗಳಲ್ಲಿ ಬಿಡಿಸಲು ಮಕ್ಕಳಿಗೆ ಅವಕಾಶ ಒದಗಿಸುವುದು.<br>ಪಪೆಟ್ ಪ್ರದರ್ಶನದ ಕಾರ್ಡಗಳು ಮತ್ತು ಪರಿಕರಗಳನ್ನು ಬಳಸಿ ಮಕ್ಕಳು ಪ್ರದರ್ಶನ ನೀಡಲು 2 ಮತ್ತು 3ನೇ ತರಗತಿಯ ಮಕ್ಕಳಿಗೆ ಅವಕಾಶ ನೀಡುವುದು.<br>ಸಾಮಾನ್ಯ ಸೂಚನೆಗಳು :<br>➢ ಅಯ್ಕೆಮಾಡಿದ ಕಥೆನ್ನು ಶಿಕ್ಷಕರು ಎರಡರಿಂದ ಮೂರು ಸಲ ಓದಿ ಅರ್ಥೈಸಿಕೊಳ್ಳುವುದು.<br>➢ ಕಥೆಗೆ ಅಗತ್ಯವಾದ ಸಾಮಗ್ರಿಗಳನ್ನು ಅನುಕ್ರಮವಾಗಿ ಜೋಡಿಸಿಟ್ಟುಕೊಳ್ಳುವುದು.<br>➢ ಕಥೆಯ ನಿರೂಪಣೆಗೆ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟತೆ ಇರಿಸಿಕೊಳ್ಳುವುದು.<br>➢ ವಿದ್ಯಾರ್ಥಿಗಳನ್ನು ವೃತ್ತಾಕಾರದಲ್ಲಿ ಕುಳ್ಳಿರಿಸಿ, ಅದೇ ವೃತ್ತದಲ್ಲಿಯೇ ಶಿಕ್ಷಕರು ಕುಳಿತುಕೊಳ್ಳುವುದು.<br>➢ ಕಥೆಯು ಈಗಾಗಲೇ ಪರಿಚಿತವಾಗಿದ್ದಲಿ ಮಕ್ಕಳಿಗೆ ಹೇಳಲು ಅವಕಾಶ ನೀಡುವುದು.<br>➢ ಕಥೆಯನ್ನು ಹೇಳಿದ ನಂತರ ಮಕ್ಕಳಿಗೆ ಸರಳ ಪ್ರಶ್ನೆಗಳನ್ನು ಕೇಳುವುದು ಮತ್ತು ಕಥೆಯನ್ನು ನಿರೂಪಿಸುವಂತೆ ಪ್ರೋತ್ಸಾಹಿಸುವುದು.<br>➢ ಕಥೆಯನ್ನು ತಮ್ಮ ಪೋಷಕರ ಜೊತೆ ಹಂಚಿಕೊಳ್ಳಲು ಪ್ರೇರೇಪಿಸುವುದು.<br>➢ ಚಿಕ್ಕ ಚಿಕ್ಕ ಕಥೆಯ ಪುಸ್ತಕಗಳನ್ನು ಓದುವ ಮೂಲೆಯಲ್ಲಿ ಪ್ರತ್ಯೇಕವಾಗಿ ಇರಿಸಿ ಬಳಸಲು ಮಕ್ಕಳಿಗೆ ಸೂಚನೆಗಳನ್ನು ನೀಡುವುದು.<br>➢ ಮಕ್ಕಳು ಸಂಗ್ರಹಿಸುವ ಚಿತ್ರ ಸರಣಿಗಳನ್ನು ಅಥವಾ ಸಣ್ಣ ಕಥೆಗಳನ್ನು ಪ್ರದರ್ಶನಕ್ಕೆ ವ್ಯವಸ್ಥೆಮಾಡುವುದು.<br>**ಯಾವ ರೀತಿ ಕಥೆಗಳನ್ನು ಆಯ್ಕೆ ಮಾಡಿಕೊಳ್ಳ ಬೇಕು?**<br>• **ಮಕ್ಕಳ ಬೌದ್ಧಿಕ ಮಟ್ಟಕ್ಕೆ ಅನುಗುಣವಾಗಿಬೇಕು.**<br>• **ಶಾಲೆಯ ಸುತ್ತಲಿನ ವಾತಾವರಣಕ್ಕೆ ಹೊಂದಾಣಿಕೆಯಾಗುವಂತಿರಬೇಕು.**<br>• **ಮನೋರಂಜನೆಯನ್ನು ನೀಡುಂತಿರಬೇಕು.**<br>• **ಆಸಕ್ತಿ, ಕುತೂಹಲ ಉಂಟುಮಾಡುವಂತಿರಬೇಕು.** |

DRAFT 22.02.22

| | | | | |
|---|---|---|---|---|
| | | ಚಪ್ಪಾಳೆ ತಟ್ಟುವುದು/ಕುಪ್ಪಳಿಸಿ ಕುಳಿತುಕೊಳ್ಳುವುದು/ಸ್ಥಳ ಬದಲಿಸುವುದು. . . .ಹೀಗೆ ಮಾಡುವುದರಿಂದ ಮಕ್ಕಳ ಅವಧಾನ ಕೇಂದ್ರಿಕರಿಸಬಹುದು ಮತ್ತು ಕಥೆಯನ್ನು ಮುಂದುವರೆಸಬಹುದು. | | • ಮಕ್ಕಳ ಕಲ್ಪನೆಗೆ ನಿಲುಕುವಂತಿರಬೇಕು.<br>• ಕಡ್ಡಿ ಗೊಂಬೆಗಳು, ಮುಖವಾಡಗಳು ಮತ್ತು ಚಿತ್ರಕಥಾ ಸರಣಿಯ ಚಿತ್ರಗಳನ್ನು ಬಳಸಿ ಹೇಳಲು ಅನುಕೂಲ ವಾಗುವಂತಿರಬೇಕು.<br>ಕಥೆಯ ನಿರೂಪಣೆ ಹೇಗಿರಬೇಕು?<br>• ಮಕ್ಕಳಿಗೆ ಪರಿಚಿತವಾಗಿರುವ ಸರಳ ಭಾಷೆಯಲ್ಲಿ ನಿರೂಪಿಸಬೇಕು.<br>• ಸ್ವರಭಾರ ಏರಿಳಿತ ಹಾಗೂ ಹಾವ ಭಾವದೊಂದಿಗೆ ನಿರೂಪಿಸಬೇಕು.<br>• ಆಂಗಿಕ ಚಲನೆಯಿಂದ ಕೋಡಿರಬೇಕು.<br>• ಕಥೆಯ ಮಧ್ಯದಲ್ಲಿ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಬೇಕು.<br>• ಮಕ್ಕಳಿಗೆ ಪ್ರಶ್ನಿಸಲು ಅವಕಾಶ ಕಲ್ಪಿಸಬೇಕು.<br>• ಚಿತ್ರ, ಇತರೆ ಪರಕರಗಳನ್ನು ಬಳಸುವ ಅಗತ್ಯವಿದ್ದಲ್ಲಿ ಕಡ್ಡಾಯವಾಗಿ ಅವುಗಳನ್ನು ಬಳಸಿಯೇ ಕಥೆಯನ್ನು ಹೇಳಬೇಕು.<br>• ಕಥೆಯನ್ನು ನಿಲ್ಲಿಸ ಬೇಕಾದ ಸಂದರ್ಭದಲ್ಲಿ ಒಂದು ಕುತೂಹಲ ಹಂತಕ್ಕೆ ಕಥೆಯನ್ನು ನಿಲ್ಲಿಸಿ ಅಗತ್ಯ ಸೂಚನೆಗಳನ್ನು ನೀಡಬೇಕು.<br><br>ಒಂದನೇ ವಾರದಲ್ಲಿ ಕಥೆಯ ನಿರ್ವಹಣೆ ಹೀಗಿರಲಿ –<br>• ಕಥೆಯನ್ನು ಆಯ್ಕೆ ಮಾಡಿಕೊಂಡ ನಂತರ ಕಥೆಯ ನಿರೂಪಣೆಗೆ ಅಗತ್ಯವಾದ ಪರಿಕರಗಳನ್ನು ಸಿದ್ಧಪಡಿಸಿಕೊಳ್ಳಿ.<br>• ಒಂದು ಮತ್ತು ಎರಡನೇ ದಿನ ಕಥೆಯನ್ನು ನಿರೂಪಿಸಿ. ಕಥೆ ಹೇಳುವಾಗ ಭಾಷೆ, ಆಂಗಿಕ ಚಲನೆ, ಹಾವ ಭಾವ ಸೂಕ್ತವಗಿರಲಿ.<br>• ಸಮಯ ಉಳಿದಲ್ಲಿ ಕಥಯನ್ನು ಮತ್ತೊಮ್ಮೆ ಅಭ್ಯಸಿಸಿ.<br>• ಮೂರನೆಯ ದಿನ ಕಥೆಗೆ ಸಂಬಂಧಿಸಿದ ವಸ್ತು, ಚಿತ್ರ, ಪರಿಕರಗಳನ್ನು ಮತ್ತುಷ್ಟು ಆಕರ್ಷಣೀಯವಾಗಿ ಕಥೆಯನ್ನು ಹೇಳಿ. ಹೀಗೆ ಕಥೆಯನ್ನು ಹೇಳುವಾಗ ಎರಡು ಮತ್ತು ಮೂರನೇ ತರಗತಿಯ ಮಕ್ಕಳಿಗೆ ಸರಳ ಪ್ರಶ್ನೆಗಳನ್ನು ಕೇಳಿ ಕಥೆಯ ಪಾತ್ರಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.<br>• ನಾಲ್ಕನೆಯ ದಿನ ಕಥೆಯನ್ನು ವಿಭಿನ್ನ ಶೈಲಿಯಲ್ಲಿ ಹೇಳುವುದರ ಜೊತೆಗೆ ಸಾಮೂಹಿಕವಾಗಿ ಕಥೆಯ ಪಾತ್ರಗಳು, ಸನ್ನಿವೇಶ, ಅವುಗಳ ವಿಶೇಷತೆಯನ್ನು ಹೆಸರಿಸಲು ಪ್ರಶ್ನೆಗಳನ್ನು ಕೇಳಿ.<br>• ಐದನೆಯ ದಿನ ಕಥೆಯನ್ನು ನಿರೂಪಿಸಲು ಮಕ್ಕಳಿಗೆ ಅವಕಾಶ ನೀಡಿ. |

DRAFT 2022

| | | | | |
|---|---|---|---|---|
| | | | | • ಪ್ರಾರಂಭದ ದಿನಗಳಲ್ಲಿ 2 ಮತ್ತು 3ನೇ ತರಗತಿಯ ವಿದ್ಯಾರ್ಥಿಗಳು ಕಥೆ ಹೇಳಲಿ ಕ್ರಮೇಣ ಒಂದನೆಯ ತರಗತಿಯ ವಿದ್ಯಾರ್ಥಿಗಳು ಪ್ರಯತ್ನಿಸಲಿ.<br>ಈ ರೀತಿಯಾಗಿ ಮೊದಲ ಮೂರು ವಾರಗಳಲ್ಲಿ ಒಂದು ವಾರಕ್ಕೆ ಒಂದು ಕಥಯಂತೆ ಕಥೆಗಳ ನಿರೂಪಣೆ ಯಾಗುತ್ತದೆ. ನಾಲ್ಕನೇ ವಾರದಿಂದ ಕಥೆಯ ನಿರೂಪಣೆಯಲ್ಲಿ ಶಿಕ್ಷಕರು ಹೊಸ ಹೊಸ ವಿಧಾನಗಳನ್ನು ಬಳಕೆ ಮಾಡಿಕೊಳ್ಳಬಹುದು..<br>ಅವುಗಳೆಂದರೆ. . . .<br>• ಕಡ್ಡಿ ಚಿತ್ರ/ ಹತ್ತಿ ಗೊಂಬೆ / ಬೆರಳು ಗೊಂಬೆಗಳನ್ನು ಬಳಸಿ ಕಥೆ ಹೇಳುವುದು.<br>• ಮುಖವಾಡ ಬಳಸಿ ಅಭಿನಯದೊಂದಿಗೆ ಕಥೆ ಹೇಳುವುದು.<br>• ಚಿತ್ರಗಳನ್ನು ಅನುಕ್ರಮವಾಗಿ ಜೋಡಿಸಿ ಕಥೆ ಹೆಣೆಯುವುದು.<br>• ಮೂರ್ತ ರೂಪದ ವಸ್ತುಗಳನ್ನು ಬಳಸಿ ಕಥೆಯನ್ನು ನಿರೂಪಿಸುವುದು.<br>• ಒಬ್ಬೊಬ್ಬರು ಒಂದೊಂದು ವಾಕ್ಯವನ್ನು ಹೇಳಿ ಕಥೆಯನ್ನು ರಚಿಸುವುದು.<br>• ಕಥೆಯ ಪಾತ್ರಗಳನ್ನು ಆಧರಿಸಿ, ಕಥೆಯನ್ನು ಸೃಜಿಸುವುದು.<br>• ಕಥೆಯನ್ನು ಆಲಿಸಿದ ನಂತರ ಅದರಲ್ಲಿನ ಚಿಕ್ಕ ಚಿಕ್ಕ ಸಂಭಾಷಣೆಯನ್ನು ಹೇಳಲು ಅವಕಾಶ ಕಲ್ಪಿಸುವುದು.<br>• ಕಥೆಯನ್ನು ಅರ್ಧಕ್ಕೆ ನಿಲ್ಲಿಸಿ, ಕಥೆಯನ್ನು ಮುಂದುವರೆಸಲು ಮಕ್ಕಳಿಗೆ ತಿಳಿಸುವುದು.<br>ಕ್ರಮವಾಗಿ 3, 6, 9 ಮತ್ತು 12ನೆಯ ವಾರಗಳಲ್ಲಿ ಇಂಗ್ಲೀಷ ಭಾಷೆಯಲ್ಲಿರುವ ಕಥೆಗಳನ್ನು ಹೇಳುವುದು. ಇದು ದ್ವಿತೀಯ ಭಾಷೆಯಾಗಿರುವುದರಿಂದ ಚಿತ್ರ ಸಹಿತ, ಪರಿಕರ ಸಹಿತ, ಸೂಕ್ತ ತಯಾರಿಯೊಂದಿಗೆ ಕಥೆಯನ್ನು ಸರಳವಾಗಿ ನಿರೂಪಿಸುವುದು. ಕಥೆಯಲ್ಲಿ ಬರುವ ಪಾತ್ರಗಳ್ನು ಎರಡೂ ಭಾಷೆಯಲ್ಲಿ ಹೇಳಿ ಮಕ್ಕಳಿಗೆ ಅರ್ಥೈಸುವುದು. 10, 11ನೆಯ ವಾರಗಳ ಕಥಾ ಸಮಯದಲ್ಲಿ ರೂಢಿಯಂತೆ ಕಥೆಯನ್ನು ಹೇಳಿದ ನಂತರ ಮತ್ತೊಮ್ಮೆ ಕಥೆಯ ಸಾಹಿತ್ಯವನ್ನು ಶಿಕ್ಷಕರು ಓದಬೇಕು. ಇದನ್ನು ಆಲಿಸಿದ ಮಕ್ಕಳು ಕಥೆಯನ್ನು ಅರ್ಥೈಸಿಕೊಂಡಿರುವುದನ್ನು ಖಾತ್ರಿಪಡಿಸಿ ಕೊಳ್ಳಲು ಸರಳ ಪ್ರಶ್ನೆಗಳನ್ನು ಕೇಳುವುದು. ಕಥೆಯಲ್ಲಿನ ಪಾತ್ರಗಳ ಚಿತ್ರಗಳನ್ನು ಅಥವಾ ರೇಖಾಚಿತ್ರಗಳನ್ನು ಬಿಡಿಸಲು ಮಕ್ಕಳಿಗೆ ಅವಕಾಶ ಒದಗಿಸುವುದು. ಪಪೆಟ್ ಪ್ರದರ್ಶನದ ಕಾರ್ಡಗಳು ಮತ್ತು ಪರಿಕರಗಳನ್ನು ಬಳಸಿ ಮಕ್ಕಳು ಪ್ರದರ್ಶನ ನೀಡಲು 2 ಮತ್ತು 3ನೇ ತರಗತಿಯ ಮಕ್ಕಳಿಗೆ ಅವಕಾಶ ನೀಡುವುದು.<br>ಸಾಮಾನ್ಯ ಸೂಚನೆಗಳು :<br>➢ ಆಯ್ಕೆಮಾಡಿದ ಕಥೆನ್ನು ಶಿಕ್ಷಕರು ಎರಡರಿಂದ ಮೂರು ಸಲ ಓದಿ ಅರ್ಥೈಸಿಕೊಳ್ಳುವುದು.<br>➢ ಕಥೆಗೆ ಅಗತ್ಯವಾದ ಸಾಮಗ್ರಿಗಳನ್ನು ಅನುಕ್ರಮವಾಗಿ ಜೋಡಿಸಿಟ್ಟುಕೊಳ್ಳುವುದು. |

DRAFT 22.02.22

| | | | | |
|---|---|---|---|---|
| | | | | ➢ ಕಥೆಯ ನಿರೂಪಣೆಗೆ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟತೆ ಇರಿಸಿಕೊಳ್ಳುವುದು.<br>➢ ವಿದ್ಯಾರ್ಥಿಗಳನ್ನು ವೃತ್ತಾಕಾರದಲ್ಲಿ ಕುಳ್ಳಿರಿಸಿ, ಅದೇ ವೃತ್ತದಲ್ಲಿಯೇ ಶಿಕ್ಷಕರು ಕುಳಿತುಕೊಳ್ಳುವುದು.<br>➢ ಕಥೆಯು ಈಗಾಗಲೇ ಪರಿಚಿತವಾಗಿದ್ದಲಿ ಮಕ್ಕಳಿಗೆ ಹೇಳಲು ಅವಕಾಶ ನೀಡುವುದು.<br>➢ ಕಥೆಯನ್ನು ಹೇಳಿದ ನಂತರ ಮಕ್ಕಳಿಗೆ ಸರಳ ಪ್ರಶ್ನೆಗಳನ್ನು ಕೇಳುವುದು ಮತ್ತು ಕಥೆಯನ್ನು ನಿರೂಪಿಸುವಂತೆ ಪ್ರೋತ್ಸಾಹಿಸುವುದು.<br>➢ ಕಥೆಯನ್ನು ತಮ್ಮ ಪೋಷಕರ ಜೊತೆ ಹಂಚಿಕೊಳ್ಳಲು ಪ್ರೇರೇಪಿಸುವುದು.<br>➢ ಚಿಕ್ಕ ಚಿಕ್ಕ ಕಥೆಯ ಪುಸ್ತಕಗಳನ್ನು ಓದುವ ಮೂಲೆಯಲ್ಲಿ ಪ್ರತ್ಯೇಕವಾಗಿ ಇರಿಸಿ ಬಳಸಲು ಮಕ್ಕಳಿಗೆ ಸೂಚನೆಗಳನ್ನು ನೀಡುವುದು.<br>ಮಕ್ಕಳು ಸಂಗ್ರಹಿಸುವ ಚಿತ್ರ ಸರಣಿಗಳನ್ನು ಅಥವಾ ಸಣ್ಣ ಕಥೆಗಳನ್ನು ಪ್ರದರ್ಶನಕ್ಕೆ ವ್ಯವಸ್ಥೆಮಾಡುವುದು. |
| 9 | ಮತ್ತೆ ಸಿಗೋಣ | ✓ ಇದು ಆಯಾ ದಿನದ ಚಟುವಟಿಕೆಗಳನ್ನು ಪುನರಾವಲೋಕನ ಮಾಡಕೊಳ್ಳಲು ನಿಗದಿಪಡಿಸಿರುವ ಚಟುವಟಿಕೆ<br>✓ ದಿನದ ಕೊನೆಯ ಅವಧಿಯಲ್ಲಿ 30 ನಿಮಿಷಗಳು ನಿರ್ವಹಿಸಲ್ಪಡುತ್ತದೆ.<br>✓ ಇಲ್ಲಿ ಮಕ್ಕಳು ತಮಗೆ ದುರೆತ ಅವಕಾಶವನ್ನು ಬಳಸಿಕೊಂಡು ತಮ್ಮ ಕಲಿಕೆಯ್ನು ಹಂಚಿಕೊಳ್ಳುವರು.<br>✓ ತಮ್ಮ ಇಷ್ಟದ ಚಟುವಟಿಕೆಗಳ ಬಗ್ಗೆ ವಿಶೇಷವಾಗಿ ಅಭಿವ್ಯಕ್ತಿಸುವರು.<br>✓ ಅಗತ್ಯವಿರುವ ಪರಿಕಲ್ಪನೆಗಳ ಕಲಿಕೆಯ ಬಗ್ಗೆ ಸ್ಪಷ್ಟತೆಯನ್ನು | • ಮಕ್ಕಳು ಪ್ರತಿ ನಿತ್ಯ ನಿರ್ವಹಿಸುವ ಚಟುವಟಿಕೆಗಳನ್ನು ಪುನರಾವಲೋಕನ ಮಾಡಿಸುವುದು.<br>• ಕೊರತೆ ಇರುವ ಪರಿಕಲ್ಪನೆಗಳನ್ನು ಗುರುತಿಸಿ, ಕಲಿಕೆಯ ಪುನರ್ ಬಲನಗೊಳಿಸುವುದು.<br>• ಅಭಿವ್ಯಕ್ತಿ ಸಾಮರ್ಥ್ಯವನ್ನು ವೃದ್ಧಿಸುವುದು.<br>• ಮರುದಿನದ ಚಟುವಟಿಕೆಗಳಿಗೆ ಸಿದ್ಧರಾಗಲುಮಕ್ಕಳನ್ನು ಪ್ರೇರೇಪಿಸುವುದು.<br>ಶಾಲೆಉ ಅನುಭವಗಳನ್ನು ಪೋಷಕರೊಂದಿಎ ಹಂಚಿಕೊಳ್ಳಲು ಉತ್ತೇಜಿಸುವುದು. | "ಮತ್ತೆ ಸಿಗೋಣ" ಚಟುವಟಿಕೆಯನ್ನು ಆಯೋಜಿಸುವ ಮುನ್ನ. . .<br>• ಮಕ್ಕಳೊಂದಿಗೆ ವೃತ್ತಾಕಾರದಲ್ಲಿ ಕುಳಿತುಕೊಳ್ಳವುದು.<br>• ಆ ದಿನದ ಅನುಭವವನ್ನು ಹಂಚಿಕೊಳ್ಳಲು ಮಕ್ಕಳಿಗೆ ಸರಳ ಪ್ರಶ್ನೆಗಳನ್ನು ಕೇಳುವುದು.<br>• ಪ್ರತಿ ಮಗುವು ತನ್ನ ಅನುಭವವನ್ನು ಹೇಳಲು ಪ್ರೋತ್ಸಾಹಿಸುವುದು.<br>• ಮಕ್ಕಳ ಪ್ರಗತಿಯನ್ನು ಪೋಷಕರೊಂದಿಗೆ ಹಂಚಿಕೊಳ್ಳಲು ದಿನಚರಿಯನ್ನು ನಿರ್ವಹಿಸುವುದು.<br>ಯಾವುದಾದರೊಂದು ಹಾಡು/ಪ್ರಾಸ ಪದ್ಯವನ್ನು ಹೇಳುವುದರ ಮೂಲಕ ದಿನದ ಚಟುವಟಿಕೆಯನ್ನು ಪೂರ್ಣಗೊಳಿಸಿ ಮಕ್ಕಳನ್ನು ಬೀಳ್ಕೊಡಿರಿ. |

DRAFT 22.02.22

| | | | | |
|---|---|---|---|---|
| | | ಕೇಳಿ ಪಡೆಯುವರು.<br>ಆ ದಿನದ ಎಲ್ಲಾ ಚಟುವಟಿಕೆಗಳು ಸಂತಸದಾಯಕವಾಗಿ ಮುಕ್ತಾಯಗೊಂಡಿರುವುದನ್ನು 'ಮತ್ತೆ ಸಿಗೋಣ' ಚಟುವಟಿಕೆಯು ಖಾತ್ರಿಗೊಳಿಸುವುದರೊಂದಿಗೆ ಮರುದಿನದ ಚಟುವಟಿಕೆಗಳಿಗೆ ಮಕ್ಕಳು ಅಣಿಯಾಗಲು ಪ್ರೇರೇಪಿಸುತ್ತದೆ. | | |
| 10 | **ಪ್ರತಿಬಿಂಬ** | ಪ್ರತಿಬಿಂಬ– ತರಗತಿಯಲ್ಲಿ ನಡೆಯುವ ನಿರಂತರ ಮೌಲ್ಯಮಾಪನ | * ಪ್ರತಿ ಮಗುವಿನ ತೊಡಗಿಸಿಕೊಳ್ಳುವಿಕೆ ಮತ್ತು ಕಲಿಕೆಯ ಮೌಲ್ಯಾಂಕನ ಮಾಡುವುದು.<br>* ಕಲಿಕಾ ಕೊರತೆಯನ್ನು ಗುರುತಿಸಿ ಪ್ರತಿ ಮಗುವಿನ ಅಗತ್ಯತೆಗನುಗುಣವಾಗಿ ಬೋಧನಾ ವಿಧಾನ/ಚಟುವಟಿಕೆಯನ್ನು ರೂಪಿಸುವುದು ಮತ್ತು ಬದಲಾಯಿಸುವುದು.<br>* ಮುಂದಿನ ವಾರದ ಚಟುವಟಿಕೆಗಳನ್ನು ಯೋಜಿಸುವುದು.<br>* ಸಾಧನೆಯ ಮೌಲ್ಯಮಾಪನವನ್ನು ಎಲ್ಲ ಮೂರು ಅಭಿವೃದ್ಧಿ ಗುರಿಗಳಲ್ಲಿಯೂ ಮಾಡುವುದು. | * ಶಿಕ್ಷಕರು ತಮ್ಮ ತರಗತಿಯಲ್ಲಿ ಮಕ್ಕಳ ಕಲಿಕಾಪ್ರಕ್ರಿಯೆಯನ್ನು ನಿರಂತರವಾಗಿ ವೀಕ್ಷಿಸುವುದು, ಮೇಲುಸ್ತುವಾರಿ ಮಾಡುವುದು, ದಾಖಲಿಸಿಕೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು.<br>* ವಿವಿಧ ವಿಧಾನಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳ ಅಭ್ಯಾಸದ ಹಾಳೆಗಳು, ಮುದ್ರಿತ ಧ್ವನಿ/ವೀಡಿಯೋ, ಸಾಂದರ್ಭಿಕ ದಾಖಲೆಗಳು, ಇತ್ಯಾದಿ) ಸಂಗ್ರಹಿಸಿದ ಮೌಲ್ಯಮಾಪನದ ದತ್ತಾಂಶವನ್ನು ಪರಿಶೀಲಿಸುವುದು. ಚಟುವಟಿಕೆ/ಕಲಿಕಾ ಅನುಭವದಲ್ಲಿ ಅಗತ್ಯ ಮಾರ್ಪಾಡು ಮಾಡಿಕೊಳ್ಳುವುದು. |
| 11 | **ನನ್ನ ಸಾಧನೆ** | ನನ್ನ ಸಾಧನೆ– ಪ್ರತಿ ವಾರದಲ್ಲಿ ಗಳಿಸಿದ ಕಲಿಕಾ ಫಲಗಳ ಮೌಲ್ಯಮಾಪನ | * ಪ್ರತಿ ಮಗುವು ತರಗತಿ ಕೋಣೆ ಅಥವಾ ಹೊರಾಂಗಣದಲ್ಲಿ ನಡೆಯುವ ಆಟ/ಚಟುವಟಿಕೆ/ಕಲಿಕಾ ಅನುಭವದಲ್ಲಿ ಭಾಗವಹಿಸುವ ರೀತಿಯನ್ನು ಅವಲೋಕಿಸಿ ಪ್ರಗತಿ ದಾಖಲಿಸುವುದು.<br>* ಆಸಕ್ತಿಗಳನ್ನು ಪತ್ತೆಹಚ್ಚುವುದು ಮತ್ತು ವಿರಳವಾಗಿ ಭಾಗವಹಿಸುವ ಅಥವಾ ಭಾಗವಹಿಸದೇ ಇರುವ ಚಟುವಟಿಕೆಗಳನ್ನು ಗುರುತಿಸಿ ಸೂಕ್ತ ಬದಲಾವಣೆ ಮಾಡಿಕೊಳ್ಳುವುದು.<br>* ನಿರೀಕ್ಷಿತ ಕಲಿಕಾಫಲಗಳ ಸಾಧನೆಯ ಪ್ರಮಾಣವನ್ನು ನಿಖರವಾಗಿ ನಮೂದಿಸುವುದು. | * ವಾರದಲ್ಲಿ ಒಂದು ದಿನ ಇಡೀ ವಾರದ ಎಲ್ಲ ಚಟುವಟಿಕೆಗಳಲ್ಲಿ ಮಗುವಿನ ಸಕ್ರಿಯ ತೊಡಗಿಸಿಕೊಳ್ಳುವ ರೀತಿಯನ್ನು ಮತ್ತು ಗಳಿಸಿದ ಕಲಿಕಾ ಫಲಗಳನ್ನು ನೀಡಲಾದ ತಪಶೀಲು ಪಟ್ಟಿಯಲ್ಲಿ ದಾಖಲಿಸುವುದು.<br>* ನನ್ನ ಸಾಧನೆಯು ಮೂರೂ ಅಭಿವೃದ್ಧಿ ಗುರಿಗಳ ಒಟ್ಟಾರೆ ಮೌಲ್ಯಮಾಪನ ಮಾಡುವುದು. |

DRAFT 22.02.22

# ಭಾಗ–೨

DRAFT 22.02

# ಅಧ್ಯಾಯ–04

## ವಿದ್ಯಾ ಪ್ರವೇಶದಲ್ಲಿ 72 ದಿನಗಳ ಚಟುವಟಿಕೆಗಳು

**ವಾರ–1** **ದಿನ–1**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 1 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಸಾಮರ್ಥ್ಯ: ಶುಭಾಶಯಗಳು ಮತ್ತು ಸ್ವಾಗತದಂತಹ ಸಾಮಾಜಿಕ ನಡವಳಿಕೆಯ ಅಭಿವೃದ್ಧಿ.**<br>**ಚಟುವಟಿಕೆಯ ಉದ್ದೇಶ: ಆತ್ಮೀಯತೆ ಭಾವನೆಯನ್ನು ಮೂಡಿಸುವುದು.**<br>**ಸಾಮಗ್ರಿ: ಬಲೂನ್/ಹೂವು/ಚಾಕಲೇಟ್**<br>**ವಿಧಾನ:**<br>1. ಮಕ್ಕಳು ಚಪ್ಪಾಳೆ ತಟ್ಟುತ್ತಾ ತರಗತಿಯನ್ನು ಪ್ರವೇಶಿಸಲಿ.<br>2. ಮಗು ತರಗತಿಯನ್ನು ಪ್ರವೇಶಿಸುವಾಗ ಶಿಕ್ಷಕರು ಮಗುವಿಗೆ " ನಮಸ್ತೆ, ಗುಡ್ ಮಾರ್ನಿಂಗ್" ಎಂದು ಗ್ರೀಟ್ ಮಾಡುವುದು.<br>3. ನಂತರ ಪ್ರತಿ ಮಗುವಿನ ಹೆಸರನ್ನು ಕೇಳಿ, ಅವನ/ಅವಳ ಹೆಸರನ್ನು ಹೇಳಿ ಹೂ/ಬಲೂನ್/ಚಾಕಲೇಟ್ ನೀಡಿ ಸ್ವಾಗತಿಸಿ.<br>ಉದಾ : "ಗೀತಾ, ನಿನಗೆ ಸ್ವಾಗತ,welcome" ಎಂದು ಹೇಳಿ ಸ್ವಾಗತಿಸುವುದು. |
| | ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | **ಚಟುವಟಿಕೆ–1: ನನ್ನ ಕುರಿತು (ಗುರಿ–1)**<br>**ಸಾಮರ್ಥ್ಯ:** ಸ್ವಯಂ ಪ್ರಜ್ಞೆ, ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಗಳ ಅಭಿವೃದ್ಧಿ, ಆಲಿಸುವುದು ಮತ್ತು ಮಾತನಾಡುವುದು.<br>**ಉದ್ದೇಶ:** ತನ್ನ ಕುರಿತು ಮಾತನಾಡಲು ಪ್ರೇರೇಪಿಸುವುದು.<br>**ಸಾಮಗ್ರಿ:**<br>**ವಿಧಾನ:** ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ..<br>2. "ಹಲೋ, ಮಕ್ಕಳೇ ಗುಡ್ ಮಾರ್ನಿಂಗ್" (ನಿಮ್ಮ ಕೈಬೀಸಿ) ಎಂದು ಹೇಳುವ ಮೂಲಕ ಅವರನ್ನು ಸ್ವಾಗತಿಸಿ ಮತ್ತು ಮೂರು ಬಾರಿ ಚಪ್ಪಾಳೆ ತಟ್ಟಿ.<br>3. ಹಾಯ್ ಟೀಚರ್, ಗುಡ್ ಮಾರ್ನಿಂಗ್" (ಕೈ ಬೀಸುವ ಮೂಲಕ) ಎಂದು ಹೇಳುವ ಮೂಲಕ ಪ್ರತಿಕ್ರಿಯಿಸಲು ಮಕ್ಕಳಿಗೆ ತಿಳಿಸಿ ಮತ್ತು ಮೂರು ಬಾರಿ ಚಪ್ಪಾಳೆ ತಟ್ಟಲು ತಿಳಿಸಿ..<br>4. ಅವರ ಬಗ್ಗೆ ಮಾತನಾಡಲು ಪ್ರೋತ್ಸಾಹಿಸಿ.<br>( ಉದಾ : "ಮಹೇಶ, ಬೆಳಿಗ್ಗೆ ಏನು ತಿಂಡಿ ತಿಂದು ಬಂದೆ?", " ಸಲೀನಾ, ನಿನಗೆ ಯಾವ ತಿಂಡಿ ಇಷ್ಟ ? )<br>***2ನೇ ತರಗತಿಯ ಮಕ್ಕಳು ಅವರ, ಪೋಷಕರು ಹಾಗೂ ಒಡಹುಟ್ಟಿದವರ ಹೆಸರುಗಳನ್ನು ಹೇಳಲು ಪ್ರೋತ್ಸಾಹಿಸಬಹುದು; ಮೂರನೇ ತರಗತಿಯವರು ತಮ್ಮ ಕುಟುಂಬದ ಬಗ್ಗೆ ಮಾತನಾಡಬಹುದು.** |
| | ನನ್ನ ಸಮಯ(ಈಡಿಜಜ Indoor play) | **ದಿನ– 01**<br>ತರಗತಿಯ ಎಲ್ಲಾ ಕಲಿಕಾಮೂಲೆಗಳಿಗೆ ಶಿಕ್ಷಕರು ಮಕ್ಕಳನ್ನು ಕರೆದೊಯ್ದು, ಪ್ರತಿ ಮೂಲೆಯಲ್ಲಿನ ಸಾಮಗ್ರಿಗಳು ಹಾಗೂ ಅವುಗಳ ಬಳಕೆಯ ಕುರಿತು ಮಾರ್ಗದರ್ಶನ ಮಾಡುತ್ತಾರೆ ಹಾಗೂ ಕೆಲವು ಮಾದರಿ ಚಟುವಟಿಕೆಗಳನ್ನು ಪರಿಚಯಿಸುತ್ತಾರೆ. ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತ ಅವರ ಅರ್ಥೈಸಿಕೊಳ್ಳುವಿಕೆಯನ್ನು ಖಾತ್ರಿ ಪಡಿಸಿಕೊಳ್ಳುತ್ತಾರೆ. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿದೇ ೯ಶಿತ) ಚಟುವಟಿಕೆ) | **ಸಾಮರ್ಥ್ಯ : ದೃಷ್ಟಿ, ಜ್ಞಾನ, ಸ್ಮರಣೆ, ಪರಿಸರದ ಅರಿವು.**<br>**ಚಟುವಟಿಕೆ : 1 ನೋಡು ಮತ್ತು ಹೇಳು (ಗುರಿ. 3)**<br>**ಉದ್ದೇಶ : ನೋಡಿದ ವಸ್ತುಗಳನ್ನು ನಿಗದಿತ ಸಮಯದಲ್ಲಿ ಸ್ಮರಿಸಿ ಹೇಳುವ ಕೌಶಲವನ್ನು ಬೆಳೆಸುವುದು.**<br>**ಅಗತ್ಯ ಸಾಮಗ್ರಿಗಳು : ತರಗತಿ ಅಥವಾ ಅಡುಗೆಕೋಣೆಯಲ್ಲಿ ಲಭ್ಯವಿರುವ ಹಣ್ಣುಗಳು, ತರಕಾರಿಗಳು, ಪಾತ್ರೆಗಳು ಹಾಗೂ ಇತರೆ ಸಾಮಾನ್ಯ ವಸ್ತುಗಳು.**<br>**ವಿಧಾನ : ಮಕ್ಕಳನ್ನು ಅರ್ಧವೃತ್ತಾಕಾರದಲ್ಲಿ ಕೂರಿಸುವುದು. 8 ರಿಂದ 10 ವಸ್ತುಗಳನ್ನು ಕೆಲವು ನಿಮಿಷಗಳ ಕಾಲ ಮಕ್ಕಳಿಗೆ ತೋರಿಸುವುದು. ನಂತರ ವಸ್ತುಗಳನ್ನು ಮುಚ್ಚುವುದು. ಈಗ ಮಕ್ಕಳು ನೋಡಿದ್ದನ್ನು ಸ್ಮರಿಸಿ ಹೇಳಲು ಅವಕಾಶ ನೀಡುವುದು.** |

DRAFT 22.02.22

| | | | |
|---|---|---|---|
| | | | ನಂತರ ಆ ವಸ್ತುಗಳ ಚಿತ್ರಗಳನ್ನು ಪ್ರದರ್ಶಿಸಿ ಅವುಗಳಲ್ಲಿ ಹೋಲಿಕೆ ಇರುವ ಮತ್ತು ಇಲ್ಲದಿರುವ ಹಾಗೂ ಪರಸ್ಪರ ಸಂಬಂಧ ಇರುವ ವಸ್ತುಗಳ ಚಿತ್ರಗಳನ್ನು ವಿಂಗಡಿಸಲು ತಿಳಿಸುವುದು. ಈ ಕ್ರಿಯೆಯು ಯೋಜಿತವಾಗಿ ಮತ್ತು ನಿಧಾನವಾಗಿ ಸಾಗಬೇಕು.<br>**ತರಗತಿ–2**<br>**ತಾನು ನೋಡಿದ ವಸ್ತುಗಳಲ್ಲಿ ಪರಸ್ಪರ ಸಂಬಂಧ ಮತ್ತು ಹೋಲಿಕೆ ಇರುವ ವಸ್ತುಗಳನ್ನು ವಿಂಗಡಿಸುವುದು ಮತ್ತು ಪಟ್ಟಿ ಮಾಡಲು ಹೇಳುವುದು.**<br>**ತರಗತಿ–3**<br>**ಈ ಚಟುವಟಿಕೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.**<br>**ಉದಾ:–1. ವಸ್ತುಗಳನ್ನು ಯಾವ ಆಧಾರದ ಮೇಲೆ ವಿಂಗಡಿಸಿದೆ?**<br>**2. ಕೆಂಪು ಬಣ್ಣದ ತರಕಾರಿಗಳ ಹೆಸರನ್ನು ಹೇಳು?**<br><br>*** ಬಳಸಬೇಕಾದ ಅಭ್ಯಾಸ ಹಾಳೆಗಳು: I.L-1 ( 01, 02,03ನೇ ತರಗತಿ)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಹಂಚಿಕೊಳ್ಳುವುದು.<br>**ಚಟುವಟಿಕೆ – 37 ಒತ್ತು ಚಿತ್ರ ರಚನೆ ಗುರಿ – 1**<br>ಉದ್ದೇಶ;<br>• ಸೂಕ್ಮ ಸ್ನಾಯುಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ.<br>• ಏಕಾಗ್ರತೆಯೊಂದಿಗೆ ಬಣ್ಣಗಳ ಪರಿಚಯವಾಗುತ್ತದೆ.<br>• ಹಂಚಿಕೊಳ್ಳುವ ಮತ್ತು ಹೊಂದಾಣಿಕೆ ಮಾಡಿಕೊಳ್ಳುವ ಮನೋಭಾವನೆ ಬೆಳೆಯುತ್ತದೆ.<br>ಸಾಮಗ್ರಿಗಳು : ಬಣ್ಣ ಮತ್ತು ಪೇಪರ್<br>ವಿಧಾನ : ಎರಡು ಮಕ್ಕಳಿಗೆ ಒಂದು ಬಟ್ಟಲಿನಂತೆ ಬಣ್ಣ ಹಾಗೂ ಹಾಳೆಗಳನ್ನು ಕೊಡುವುದು. ಪ್ರತಿ ಮಗುವಿಗೆ ತನ್ನ ಆಯ್ಕೆಯ ಚಿತ್ರವನ್ನು ಬರೆಯಲು ಹೇಳುವುದು ನಂತರ ತನ್ನ ತೋರು ಬೆರಳುಗಳ ತುದಿ ಅಥವಾ ಹೆಬ್ಬೆರಳನ್ನು ಬಣ್ಣದಲ್ಲಿ ಅದ್ದಿ ಕಾಗದದ ಮೇಲೆ ಒತ್ತು ಚಿತ್ರ ರಚಿಸಲು ಹೇಳುವುದು. ಇದೇ ರೀತಿ ಅಕ್ಷರಗಳು ಮತ್ತು ಅಂಕಿಗಳಿಗೂಬೆರಳನ್ನು ಬಳಸಿ ಬಣ್ಣ ಹಚ್ಚುವುದು.<br>ಮಾರ್ಪಾಡುಗಳು : ಮಕ್ಕಳು ಎಲೆಗಳನ್ನು ಬಣ್ಣದಲ್ಲಿ ಅದ್ದಿ ಕಾಗದದ ಮೇಲೆ ಒತ್ತು ಚಿತ್ರಗಳನ್ನು ಮಾಡುವುದು. ಇದೇ ರೀತಿ ಪಾದ ಮತ್ತು ಹಸ್ತಗಳ ಒತ್ತು ಚಿತ್ರಗಳನ್ನು ರಚಿಸಲು ಹೇಳಬಹುದು.<br>ವಿವರ; 2 ಮತ್ತು 3ನೇ ತರಗತಿಗೆ ಅವರ ಕಲ್ಪನೆಗೆ ತಕ್ಕಂತೆ ಚಿತ್ರ ಬಿಡಿಸಲು ಅವಕಾಶ ನೀಡುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ನೆನಪಿಸಿಕೊಳ್ಳುವುದು, ಕ್ರಮಾನುಗತ ಆಲೋಚನೆ, ಪದ ಸಂಪತ್ತಿನ ಅಭಿವೃದ್ಧಿ, ಅನುಭವ ಹಂಚಿಕೆ**<br>**ಚಟುವಟಿಕೆ : 14 ಅನುಭವ ಹಂಚಿಕೆ, ( ಗುರಿ 2) ಇಅಜ–1**<br>**ಉದ್ದೇಶಗಳು:**<br>*** ಮಗು ತಾನು ತಿಳಿದುಕೊಂಡಿದ್ದನ್ನು ನೆನಪಿಸಿಕೊಳ್ಳುವುದು,**<br>*** ವಿಷಯಗಳನ್ನು ಕ್ರಮಾನುಗತವಾಗಿ ಆಲೋಚಿಸಿ ಜೋಡಿಸುವುದು. * ತಮ್ಮ ಮಾತುಗಳಲ್ಲಿ ಹೊಸ ಪದಗಳು ಸೇರಿಕೊಳ್ಳುತ್ತಿರುವುದನ್ನು ಗಮನಿಸುವುದು.**<br>**ಅಗತ್ಯ ಸಾಮಗ್ರಿಗಳು– ಇಲ್ಲ**<br>**ವಿಧಾನ: ಮಕ್ಕಳನ್ನು ವೃತ್ತಾಕಾರದಲ್ಲಿ ಕಣ್ಣುಮುಚ್ಚಿ ಕೂರುವಂತೆ ಹೇಳುವುದು. ಹಿಂದಿನ ದಿನ ಅಥವಾ ವಾರದ ಕೊನೆಯ ದಿನವನ್ನು ಹೇಗೆ ಕಳೆದರು ಎಂದು ಯೋಚಿಸಲು ತಿಳಿಸಿ, ಅವಕಾಶ ನೀಡುವುದು. ನಂತರ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.**<br>*** ನೀನು ಈ ದಿನ ಎಷ್ಟು ಗಂಟೆಗೆ ಎದ್ದೆ?**<br>*** ಶಾಲೆಗೆ ಬರುವಾಗ ನಿನ್ನ ಬಳಿ ಏನಿತ್ತು?**<br>*** ದಾರಿಯಲ್ಲಿ ಏನೇನು ನೋಡಿದೆ?**<br>*** ನಿನ್ನೆಯ ದಿನವನ್ನು ನೀನು ಹೇಗೆ ಕಳೆದೆ?**<br>*** ನಿನ್ನೆ ಏನಾದರೂ ವಿಶೇಷ ಘಟನೆ ನಡೆದಿದ್ರೆ ನಮ್ಮ ಬಳಿ ಹಂಚಿಕೊಳ್ಳುವೆಯಾ?**<br>*** ನಿನ್ನೆ ನೀನು ಗೆಳೆಯರ ಜೊತೆ ಯಾವ ಆಟ ಆಡಿದೆ?**<br>**ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳಿಗೆ ಸರಳ ಪ್ರಶ್ನೆಗಳನ್ನು ಕೇಳಿ ಅವರ ಅನುಭವಗಳನ್ನು ವಿಸ್ತಾರಗೊಳಿಸಲು** |

DRAFT 22.02.22

| | | | |
|---|---|---|---|
| | | | ಅವಕಾಶ ಕಲ್ಪಿಸುವುದು. 3 ನೇ ತರಗತಿಯ ಮಕ್ಕಳಿಗೆ ಮುಕ್ತ ಅವಕಾಶ ನೀಡಿ ತಮ್ಮ ಅನುಭವಗಳನ್ನು ಕ್ರಮಬದ್ಧವಾಗಿ ಜೋಡಿಸಿ ಹೇಳಲು ತಿಳಿಸುವುದು. ಹಿಂದಿನ ಇತರ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>**ಚಟುವಟಿಕೆ....18**<br>1. ಚಿತ್ರ ಸಂಪುಟ (ಗುರಿ–2) ವಿಷಯ:'ಉದ್ಯಾನದಲ್ಲಿ ನೀವು ನೋಡಿರುವ ವಸ್ತುಗಳು/ವಿಷಯಗಳು'<br>ಉದ್ದೇಶ:<br>• ಚಿತ್ರ ಓದುವುದು ಮತ್ತು ಚರ್ಚಿಸಿ ಅರ್ಥಮಾಡಿಕೊಳ್ಳುವುದು.<br>• ಸಂತೋಷ ಮನೋರಂಜನೆ ಹಾಗೂ ಇತರೆ ಉದ್ದೇಶಗಳಿಗಾಗಿ ಸ್ವತಂತ್ರವಾಗಿ ಓದುವುದು.<br>ಅಗತ್ಯ ಸಾಮಗ್ರಿಗಳು :ಉದ್ಯಾನವನಕ್ಕೆ ಸಂಬಂಧಿಸಿದ ಚಿತ್ರಗಳು, ಉದ್ಯಾನವನದಲ್ಲಿ ನೋಡಬಹುದಾದ ವಿಷಯವಸ್ತುಗಳ ಕುರಿತ ಕಥನ/ಕವಿತೆ/ ಹಾಡುಗಳ ಪಟ್ಟಿ.<br>ವಿಧಾನ : ಮಕ್ಕಳಿಗೆ ಪರಿಚಿತವಿರುವ ಹಾಡು ಮತ್ತು ಶಿಶುಗೀತೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಗುರುತಿಸುವುದು.<br>* ಹಾಡು/ಕಥೆಯಲ್ಲಿರುವ ವಿಶೇಷ ಪದಗಳನ್ನು ಗುರುತಿಸಿ ಹೆಸರಿಸುವುದು.<br>* ಹಾಡು/ಕಥೆಯಲ್ಲಿ ಬರುವ ಮುಖ್ಯ ಪಾತ್ರಗಳನ್ನು ಗುರುತಿಸುವುದು ಮತ್ತು ಪುನರಾವರ್ತಿತ ಪದ/ಸಾಲುಗಳನ್ನು ಹೇಳುವುದು/ಬರೆಯುವುದು.<br>* ಮಾದರಿ ಚಿತ್ರಗಳನ್ನು (ಉದ್ಯಾನವನಕ್ಕೆ ಸಂಬಂಧಿಸಿದ) ಓದುವುದು ಮತ್ತು ಅದರ ಕುರಿತಾಗಿ ಪ್ರತಿಕ್ರಿಯಿಸುತ್ತಾ ಶಿಕ್ಷಕರೊಂದಿಗೆ ಚರ್ಚಿಸುವರು.<br>ವೈಯಕ್ತಿಕ ಚಿತ್ರ ಸಂಪುಟ.– ಕಥೆ ಅಥವಾ ಹಾಡುಗಳಲ್ಲಿ ಬರುವ ವಸ್ತುಗಳು ಅಥವಾ ವಿಶೇಷ ಪದಗಳನ್ನು ಪ್ರತಿ ಮಗು ಸನ್ನಿವೇಶ ಚಿತ್ರಗಳನ್ನು ಓದಿ ಗ್ರಹಿಸಿ ವೈಯಕ್ತಿಕವಾಗಿ ಚರ್ಚಿಸಲು ಅನುವು ಮಾಡಿಕೊಡುವುದು. ಆ ಚಿತ್ರ ಓದಿನ ಗ್ರಹಿಕೆಗಳನ್ನು ಅಭಿವ್ಯಕ್ತಿಸುವುದನ್ನು ಖಾತ್ರಿಮಾಡಿಕೊಳ್ಳುವುದು.<br>ಉದಾ..ಹೂಗಳು, ಮರಗಳು, ಪಕ್ಷಿಗಳು ಮಕ್ಕಳ ಆಟಿಕೆಯ ಸಾಮಗ್ರಿಗಳು, ಕುಳಿತುಕೊಳ್ಳುವ ಆಸನಗಳು ಇತ್ಯಾದಿ.. ಚಿತ್ರಗಳು/ವಿಡಿಯೋಗಳು/ಕ್ಷೇತ್ರಭೇಟಿ.<br>ಶಿಕ್ಷಕರು ಸುಗಮಕಾರಿಕೆಯಲ್ಲಿ ಬಳಸಬಹುದಾದ ಬೆಳವಣಿಗೆಯ ಪ್ರಶ್ನೆಗಳು:<br>• ಉದ್ಯಾನವನವನ್ನು ನೋಡಿರುವಿರಾ?<br>• ನೀವು ಉದ್ಯಾನವನಗಳಲ್ಲಿ ಏನೇನು ನೋಡಿರುವಿರಿ?<br>• ನಿಮ್ಮಊರಿನಲ್ಲಿ ಇರುವ ಉದ್ಯಾನವನಗಳಲ್ಲಿ ಯಾವ ಯಾವ ರೀತಿಯ ವಸ್ತು ಮತ್ತು ವಿಷಯಗಳನ್ನು ಗಮನಿಸಿದ್ದೀರಿ?<br>• ನಿಮ್ಮಇಷ್ಟದ ಉದ್ಯಾನವನದಲ್ಲಿ ಏನೇನು ಇದ್ದರೆ ನಿನಗೆ ಖುಷಿಯಾಗುತ್ತದೆ?<br>• ನಿಮ್ಮ ಶಾಲೆಯಲ್ಲಿ ಸುಂದರ ಉದ್ಯಾನವನ ನಿರ್ಮಾಣ ಮಾಡುವುದಾದರೆ ನೀನು ಏನೇನು ಜವಾಬ್ದಾರಿ ತೆಗೆದುಕೊಳ್ಳುವೆ?<br>• ಉದ್ಯಾನವನ ನಿರ್ಮಾಣ ಮಾಡುವುದದಕ್ಕೆ ಯಾವೆಲ್ಲ ಸಾಮಗ್ರಿಗಳ ಅವಶ್ಯಕತೆ ಇದೆ? ಇತ್ಯಾದಿ<br>ಹೀಗೆ ಶಿಕ್ಷಕರು ತಮ್ಮ ಸ್ಥಳೀಯ ಸಂದರ್ಭಕ್ಕನುಗುಣವಾದ ಪ್ರಶ್ನಾವಳಿಗಳನ್ನು ರೂಪಿಸಿಕೊಂಡು ತರಗತಿಯನ್ನು ಅನುಕೂಲಿಸುವುದು.<br>ಉದ್ಯಾನವನಕ್ಕೆ ಸಂಬಂಧಿಸಿದ ಚಿತ್ರಗಳನ್ನು/ ಚಿತ್ರಪಟಗಳನ್ನು/ ವಿಡಿಯೋ/ ಹಾಡು/ಕಥೆಗಳನ್ನೂ ಬಳಸಿ ಅಥವಾ ಪ್ರದರ್ಶಿಸಿ ಮಕ್ಕಳೊಂದಿಗೆ ಚರ್ಚಿಸಬಹುದು.<br>ಸದರಿ ಸಂದರ್ಭದಲ್ಲಿ ಶಿಕ್ಷಕರು ಮಕ್ಕಳನ್ನು ಮುಕ್ತವಾಗಿ ಮಾತನಾಡಲು, ಪ್ರಶ್ನೆಗಳನ್ನು ಕೇಳಲು ಹಾಗೂ ತಮ್ಮ ಸಹಜ ಭಾಷೆಯಲ್ಲಿ ಚರ್ಚಿಸಲು ಅವಕಾಶಗಳನ್ನು ಮಾಡಿಕೊಡುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಚರ್ಚಿಸಲು ಸಹಾಯ ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು. ಜೊತೆಗೆ 2ನೇ ಮತ್ತು 3ನೇ ತರಗತಿಯ ಮಕ್ಕಳಿಗೂ ಅವರ ವಯೋಮಾನಕ್ಕನುಗುಣವಾದ ವಿಷಯ ವ್ಯಾಪ್ತಿಯ ಉನ್ನತ ಚಿಂತನೆಗಳು ಚರ್ಚೆಯಲ್ಲಿ ಬರುವಂತೆ ತರಗತಿಯನ್ನು ಅನುಕೂಲಿಸುವುದು. |

DRAFT 2022

| | | | |
|---|---|---|---|
| | | | *(ಸದರಿ ಚಟುವಟಿಕೆಯ ಮುಂದುವರೆದ ಭಾಗವು 5ನೇ ದಿನದಲ್ಲಿ ಮುಂದುವರೆಯುವುದು)* |
| | | ಉದ್ದೇಶಿತ ಬರಹ | **ಸಾಮರ್ಥ್ಯ: ಬರವಣಿಗೆಯ ಆರಂಭಿಕ ಕೌಶಲಗಳನ್ನು ಅಭ್ಯಾಸ ಮಾಡಿಸುವುದು, ಬರವಣಿಗೆಯೆಡೆಗೆ ಮಕ್ಕಳನ್ನು ಸೆಳೆಯುವುದು.**<br>**ಚಟುವಟಿಕೆ: ತೋಚಿದಂತೆ ಗೀಚು (ಗುರಿ – 2) ಇಅಘ–1**<br>**ಉದ್ದೇಶ:**<br>*** ಬರವಣಿಗೆಯ ಕೌಶಲಗಳನ್ನು ರೂಢಿಸಿಕೊಳ್ಳುವುದು.**<br>*** ಸೂಕ್ಷ್ಮ ಸ್ನಾಯು ಕೌಶಲಗಳನ್ನು ಅಭಿವೃದ್ಧಿಗೊಳಿಸುವುದು.**<br>**ಅಗತ್ಯ ಸಾಮಗ್ರಿ : ವಾಲ್‌ಸ್ಲೇಟ್.ಸೀಮೆ ಸುಣ್ಣ**<br>**ವಿಧಾನ :**<br>*** ವಾಲ್‌ಸ್ಲೇಟ್ ಮೇಲೆ ಮಕ್ಕಳು ಇಷ್ಟ ಬಂದಂತೆ ಗೀಚಲು/ಬರೆಯಲು ತಿಳಿಸುವುದು.**<br>*** ಎಲ್ಲ ಮಕ್ಕಳ ಬರೆಹ/ಚಿತ್ರ ರಚನೆಯನ್ನು ವೀಕ್ಷಿಸಿ ಪ್ರೋತ್ಸಾಹಿಸುವುದು.**<br>*** ಚಿತ್ರಗಳನ್ನು ಬರೆಯಲು ಪ್ರೇರೇಪಿಸುವುದು.**<br>**ತರಗತಿವಾರು ವಿವರ: 2 ಮತ್ತು 3 ನೇ ತರಗತಿ ಮಕ್ಕಳಿಗೆ ವಾಲ್‌ಸ್ಲೇಟ್ ಮೇಲೆ ಇಷ್ಟ ಬಂದಂತೆ ಚಿತ್ರಿಸಲು/ಬರೆಯಲು ತಿಳಿಸುವುದು.** |
| | **ಹೊರಾಂಗಣ ಆಟಗಳು** | | ಚಟುವಟಿಕೆ –16 ಹೊರಾಂಗಣ ಆಟದ ಸ್ಥಳ ಮತ್ತು ವಸ್ತುಗಳನ್ನು ತಿಳಿದುಕೊಳ್ಳುವುದು. ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ನಿರ್ಧಾರ ತೆಗೆದುಕೊಳ್ಳುವಿಕೆ.<br>ಬೇಕಾಗುವ ಸಾಮಗ್ರಿ: ಸ್ಕಿಪ್ಪಿಂಗ್ ರೋಪ್ಸ್, ಚೆಂಡುಗಳು, ಬ್ಯಾಟ್ಸ್.<br>ವಿಧಾನ:<br>• ಮಕ್ಕಳಿಗೆ ಹೊರಾಂಗಣ ಆಟದ ಸ್ಥಳ ಮತ್ತು ಸಂಬಂಧಿತ ವಸ್ತುಗಳನ್ನು ಪರಿಚಯಿಸುವುದು.<br>• ಸುರಕ್ಷತಾ ನಿಯಮಗಳನ್ನು ತಿಳಿಸುವುದು.<br>• ಆಟದ ಮೈದಾನದ ಸಲಕರಣೆಗಳ ಬಳಿ ಇರುವಾಗ ಎಂದಿಗೂ ಓಡಬೇಡಿ ಅಥವಾ ಇತರರನ್ನು ತಳ್ಳಬೇಡಿ ಮತ್ತು ಎಳೆಯಬೇಡಿ.<br>• ನೀವು ಇತರರೊಂದಿಗೆ ಚೆಂಡನ್ನು ಹಂಚಿಕೊಂಡಾಗ, ನಿಮ್ಮ ಸರದಿಗೆ ಕಾಯಬೇಕು ಮತ್ತು ಸುರಕ್ಷಿತವಾಗಿ ಆಡಲು ಮರೆಯದಿರಿ.<br>• **ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೂ ಈ ನಿಯಮಗಳನ್ನು ತಿಳಿಸುವುದು.** |
| | **ಕಥಾ ಸಮಯ** ು | | **ಶೀರ್ಷಿಕೆ :** ಸಿಂಹ ಮತ್ತು ಇಲಿ<br>**ಸಾಮಗ್ರಿಗಳು :**ಕಥೆಯ ಸಾಹಿತ್ಯ<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>**ವಿಧಾನ :**<br>**ಕಥಾ ಸಾಹಿತ್ಯ ನಿರೂಪಣೆ**<br>➢ ಶಿಕ್ಷಕರು ಕಥೆ ಹೇಳುವ ಮುನ್ನಕಥೆಯನ್ನು ಓದಿ ಅರ್ಥೈಸಿಕೊಳ್ಳಬೇಕು.<br>➢ ಕಥೆ ಹೇಳುವಾಗ ಶಿಕ್ಷಕರು ಮಕ್ಕಳೊಂದಿಗೆ ವೃತ್ತದಲ್ಲಿ ಕುಳಿತುಕೊಳ್ಳಬೇಕು.<br>➢ ಸೂಕ್ತ ಆಂಗಿಕ ಚಲನೆಯೊಂದಿಗೆ ಸರಳ ಭಾಷೆಯಲ್ಲಿಕಥೆಯನ್ನು ಹೇಳಬೇಕು.<br>➢ ಸರಳ ಪ್ರಶ್ನೆಗಳನ್ನು ಕೇಳಿ ಕಥೆಯನ್ನುಅರ್ಥೈಸಬೇಕು.<br>**ಕಥೆ :**<br>**ಒಮ್ಮೆ ಕಾಡಿನ ರಾಜನಾದ ಸಿಂಹವು ಆಹಾರಕ್ಕಾಗಿಕಾಡೆಲ್ಲಾಅಲೆದಾಡಿತು. ಎಷ್ಟು ಹುಡುಕಾಡಿದರೂ ಆ ದಿನ ಒಂದೂ ಪ್ರಾಣಿಯುಅದರಕಣ್ಣಿಗೆ ಬೀಳಲಿಲ್ಲ. ಸಮಯ ಮೀರಿದ್ದರಿಂದಕಂಗಾಲಾದ ಸಿಂಹವು ಸುಸ್ತಾಗಿ ಒಂದು ಮರದಡಿಯಲ್ಲಿ ಮಲಗಿತು. ಇದರ ಪರಿವೆಯೇಇಲ್ಲದೇ ಇಲಿ ಮರಿಯೊಂದು ಮರದ ಬುಡದಲ್ಲಿದ್ದ ಬಿಲದಿಂದ ಹೊರಗೆ ಬಂದುಆಟವಾಡತೊಡಗಿತ್ತು. ಆಟವಾಡುತ್ತಾ ಸಿಂಹದ ಮೈಮೇಲೆಲ್ಲಾಓಡಾಡುತ್ತಿತ್ತು. ಇದರಿಂದ ಸಿಟ್ಟಿಗೆದ್ದ ಸಿಂಹವು ತನ್ನಕೈಯಲ್ಲಿ ಇಲಿ ಮರಿಯನ್ನು ಹಿಡಿದು, ಎಲೈ ಪಿಳ್ಳೆಯೇ ನೀನು ನನ್ನ ಬೆರಳಿನಷ್ಟಿರುವೆ. ನನ್ನ ಮೈಮೇಲೆ ಓಡಾಡಲು ನಿನಗೆಷ್ಟು ಧೈರ್ಯ? ಹಸಿವೆಯಿಂದ ಬಳಲುತ್ತಿರುವ ನನ್ನ ನಿದ್ರಾ ಭಂಗಮಾಡಿದೆ. ನಿನ್ನನ್ನು ಈಗಲೇ ಒಂದೇ ಬಾರಿಗೆತಿಂದು ಮುಗಿಸುವೆಎಂದು ಘರ್ಜಿಸಿತು. ಅದಕ್ಕೆ ಹೆದರಿದ ಇಲಿಮರಿಯುಅಯ್ಯಾ! ಮೃಗರಾಜ ತಿಳಿಯದೇ ತಪ್ಪುಮಾಡಿದೆ. ನನ್ನನ್ನು ಬಿಟ್ಟು ಬಿಡು. ಮೇಲಾಗಿ ನನ್ನನ್ನುತಿಂದರೂ ಹೊಟ್ಟೆತುಂಬಲಾರದು, ದಯವಿಟ್ಟುಕನಿಕರಿಸುಎಂದುಅಂಗಲಾಚಿತು. ಇಂದು ನನ್ನನ್ನು ಬಿಟ್ಟುಉಪಕಾರ ಮಾಡಿದರೆ, ನಾನು ನಿನಗೆ ಎಂದಾದರೂ ಸಹಾಯ ಮಾಡುವೆಎಂದಿತು. ಒಂದುಕ್ಷಣ ಆಲೋಚಿಸಿದಸಿಂಹವು ಕಾಡಿನರಾಜನಾದ ನನಗೆ ನಿನ್ನ ಸಹಾಯವೇ!? ಎಂದುಅಪಹಾಸ್ಯದಿಂದ** |

DRAFT 22.02.22

| | | |
|---|---|---|
| | | ನಗುತ್ತಾ,ಎಲ್ಲಾದರೂ ಹೋಗಿ ಬದುಕಿಕೊಎಂದು ಹೇಳಿ ಇಲಿ ಮರಿಯನ್ನು ಬಿಸಾಡಿತು. ಬದುಕಿದೆಯಾ ಬಡಜೀವವೇಎಂದುಇಲಿಯು ಓಡಿ ಬಿಲವನ್ನು ಸೇರಿಕೊಂಡಿತು.<br>ಕೆಲವು ದಿನಗಳ ನಂತರದೂರದಲೆಲ್ಲೋ ಸಿಂಹವು ಕಾಪಾಡಿ, ಕಾಪಾಡಿಎಂದುಚೀರುತ್ತಿದ್ದಧ್ವನಿ ಇಲಿಗೆ ಕೇಳಿಸಿತು. ಆ ಧ್ವನಿಬಂದ ದಿಕ್ಕಿಗೆ ಇಲಿಮರಿಯುಓಡಿಹೋಗಿ ನೋಡಿತು. ಸಿಂಹವು ಬಲೆಯೊಳಗೆ ಬಿದ್ದು ಹೊರಬರಲಾರದೇಒದ್ದಾಡುತ್ತಿತ್ತು. ಇದನ್ನು ಗಮನಿಸಿದ ಇಲಿಯು ಎಲೈ ರಾಜನೇ ಸ್ವಲ್ಪ ನಿಲ್ಲು, ನಾನು ನನ್ನಚೂಪಾದ ಹಲ್ಲುಗಳಿಂದ ಈ ಬಲೆಯನ್ನು ಕತ್ತರಿಸಿ ನಿನ್ನನ್ನು ಪಾರುಮಾಡವೆಎಂದಿತು. ಅದೇರೀತಿ ಬಲೆಯನ್ನುಕಟ್..ಕಟ್..ಎಂದುಕಡಿದು ಸಿಂಹವನ್ನು ಬಿಡಿಸಿತು. ಬಲೆಯಿಂದ ಹೊರಬಂದ ಸಿಂಹವ ಇಲಿಮರಿಗೆಕೃತಜ್ಞತೆಯನ್ನು ತಿಳಿಸಿತು. ಇಲಿಯು ಸಿಂಹವು ತನಗೆ ಮಾಡಿದಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಿದೆನೆಂಬ ಸಂತೋಷದಿಂದತನ್ನ ಬಿಲವನ್ನು ಸೇರಿಕೊಂಡಿತು.<br>ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.<br>1) ಈ ಕಥೆಯಲ್ಲಿ ಬರುವ ಪಾತ್ರಗಳನ್ನು ಹೆಸರಿಸಿ.<br>2) ಇಲಿಯನ್ನು ತಿಂದು ಹಾಕುವೆನೆಂದು ಸಿಂಹವು ಏಕೆ ಹೇಳಿತು?<br>(ಕಥೆಯನ್ನು ಆನಂದಿಸುವುದರಜೊತೆಗೆ, ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

**ವಾರ–1** **ದಿನ–2**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| **2** | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:**<br>• ವ ುಕ್ಕಳನ್ನು ಚಪ್ಪಾಳೆ ತಟ್ಟುವ ಮೂಲಕ ಮತ್ತು ಚಿಟಿಕೆ ಹೊಡೆಯುವ ಮೂಲಕ ತರಗತಿಗೆ ಪ್ರವೇಶಿಸುವಂತೆ ಮಾಡಿ.<br>• ಅವರನ್ನು ವೃತ್ತಾಕಾರದಲ್ಲಿ ನಿಲ್ಲಲು ಸೂಚಿಸಿ.<br>• "ಚಪ್ಪಾಳೆ ತಟ್ಟು, , ಚಿಟಿಕೆ ಹೊಡಿ" ಚಟುವಟಿಕೆಯನ್ನು ಮಾಡಲು ಮಕ್ಕಳಿಗೆ ತಿಳಿಸಿ. ಚಟುವಟಿಕೆಯನ್ನು 3 ರಿಂದ ನಾಲ್ಕು ಬಾರಿ ಪುನರಾವರ್ತಿಸಿ. |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | **ಚಟುವಟಿಕೆ–1: "ನನ್ನ ಹೆಸರು...: (ಗುರಿ–1)**<br>**ಸಾಮರ್ಥ್ಯ:** ಸ್ವಯಂ ಪ್ರಜ್ಞೆ, ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಗಳ ಅಭಿವೃದ್ಧಿ, ಆಲಿಸುವುದು ಮತ್ತು ಮಾತನಾಡುವುದು.<br>**ಉದ್ದೇಶ:** ತನ್ನ ಹೆಸರನ್ನು ಹೇಳುವುದು.<br>**ಸಾಮಗ್ರಿ:** ಹಿಡಿಯಲು ಮತ್ತು ಎಸೆಯಲು ಸುಲಭವಾದ ಮಧ್ಯಮ ಗಾತ್ರದ ಚೆಂಡು (ಅಥವಾ ಪೇಪರ್–ಬಾಲ್).<br>**ವಿಧಾನ:**<br>• ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ. ಆಟವನ್ನು ಪ್ರಾರಂಭಿಸುವ ಮೊದಲು ಸ್ಪಷ್ಟ ಸೂಚನೆಗಳನ್ನು ನೀಡಿ. ಈ ಆಟವನ್ನು ಆಡುವ ಮೊದಲು, ನಿಮ್ಮ ಹೆಸರನ್ನು ಹೇಳಿ. ಉದಾಹರಣೆಗೆ, "ನನ್ನ ಹೆಸರು ______".<br>• ಚೆಂಡನ್ನು ಒಂದು ಮಗುವಿನ ಕಡೆಗೆ ಎಸೆಯಿರಿ. ಅದನ್ನು ಹಿಡಿಯಲು ಮಗುವಿಗೆ ಹೇಳಿ ಮತ್ತು "ನನ್ನ ಹೆಸರು _____, ನಿನ್ನ ಹೆಸರೇನು?"<br>• ಮಗುವು ತನ್ನ ಸರದಿಯನ್ನು ಪೂರ್ಣಗೊಳಿಸಿದಾಗ, ಅವನ/ಅವಳ ಆಯ್ಕೆಯ ಮತ್ತೊಂದು ಮಗುವಿಗೆ ಚೆಂಡನ್ನು ಎಸೆಯುವಂತೆ ಮಗುವಿಗೆ ಹೇಳಿ.<br>• ಯಾರು ಚೆಂಡನ್ನು ಹಿಡಿಯುತ್ತಾರೋ ಅವರು "ನನ್ನ ಹೆಸರು ________" ಎಂದು ಹೇಳುವ ಮೂಲಕ ಅವರ ಹೆಸರನ್ನು ಪರಿಚಯಿಸಬೇಕು.<br>• ಪ್ರತಿ ಮಗುವು ಅವನ/ಅವಳ ಹೆಸರುಗಳನ್ನು ಪರಿಚಯಿಸುವವರೆಗೆ ಆಟವನ್ನು ಮುಂದುವರಿಸಿ.<br>(ಒಂದು ಮಗು ವು ಅವನ/ಅವಳ ಹೆಸರನ್ನು ಪರಿಚಯಿಸುತ್ತಿರುವಾಗ ಉಳಿದ ಮಕ್ಕಳು ಕೇಳಬೇಕು ಮತ್ತು ಅವರ |

DRAFT 22.02.22

| | | |
|---|---|---|
| | | ಸರದಿಗಾಗಿ ಕಾಯಬೇಕು ಎಂದು ಖಚಿತಪಡಿಸಿಕೊಳ್ಳಿ.) |
| | ನನ್ನ ಸಮಯ<br>**(Free Indoor play)** | **ದಿನ– 02**<br>ತರಗತಿಯ ಎಲ್ಲಾ ಕಲಿಕಾಮೂಲೆಗಳಿಗೆ ಶಿಕ್ಷಕರು ಮಕ್ಕಳನ್ನು ಕರೆದೊಯ್ದು, ಪ್ರತಿ ಮೂಲೆಯಲ್ಲಿನ ಸಾಮಗ್ರಿಗಳು ಹಾಗೂ ಅವುಗಳ ಬಳಕೆಯ ಕುರಿತು ಮಾರ್ಗದರ್ಶನ ಮಾಡುತ್ತಾರೆ ಹಾಗೂ ಕೆಲವು ಮಾದರಿ ಚಟುವಟಿಕೆಗಳನ್ನು ಪರಿಚಯಿಸುತ್ತಾರೆ. ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತ ಅವರ ಅರ್ಥೈಸಿಕೊಳ್ಳುವಿಕೆಯನ್ನು ಖಾತ್ರಿ ಪಡಿಸಿಕೊಳ್ಳುತ್ತಾರೆ. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿದೇ ್ಶಿತ) ಚಟುವಟಿಕೆ)** | **ಸಾಮರ್ಥ್ಯ : ಧ್ವನಿಯ ಅರಿವು, ಇತರರೊಂದಿಗೆ ಸಂವೇದನಾ ಶೀಲತೆ, ಅನುಭೂತಿ**<br>**ಚಟುವಟಿಕೆ : 3 ಧ್ವನಿಯನ್ನು ಊಹಿಸು. (ಗುರಿ–3)**<br>**ಉದ್ದೇಶ:– ಆಲಿಸಿದ ಶಬ್ಧವನ್ನು ಗುರುತಿಸಿ, ಹೇಳುವ ಕೌಶಲ ಬೆಳೆಸುವುದು.**<br>**ಅಗತ್ಯ ಸಾಮಗ್ರಿಗಳು : ಸ್ಥಳೀಯವಾಗಿ ಲಭ್ಯವಿರುವ ಸಂಗೀತ ಸಾಧನಗಳು/ ಮೋಬೈಲ್**<br>**ವಿಧಾನ : ಮಕ್ಕಳನ್ನು ಹೊರಾಂಗಣಕ್ಕೆ ಕರೆದುಕೊಂಡು ಹೋಗುವುದು. ಮಕ್ಕಳಿಗೆ ಅವರ ಕಣ್ಣುಗಳನ್ನು ಮುಚ್ಚಿಕೊಳ್ಳಲು ಹೇಳುವುದು. ವಿವಿಧ ರೀತಿಯ ಸಾಧನ/ವಾದ್ಯಗಳನ್ನು ನುಡಿಸುವ ಮೂಲಕ ವಿಭಿನ್ನ ಶಬ್ದಗಳನ್ನು ಮಾಡುವುದು. ಅವರು ಕಣ್ಣುಗಳನ್ನು ಮುಚ್ಚಿಕೊಂಡೆ ಕೇಳಿಸಿಕೊಂಡ ಶಬ್ಧಗಳನ್ನು ಗುರುತಿಸಿ ಹೇಳಲು ಪ್ರೋತ್ಸಾಹಿಸುವುದು. ನಂತರ ಮಕ್ಕಳ ಅನುಭವಗಳನ್ನು ಚರ್ಚಿಸುವುದು. ಇದರ ಆಧಾರದಲ್ಲಿ ಕೆಲವು ಜನರು ಕಡಿಮೆ ಅಥವಾ ಯಾವುದೇ ಶಬ್ಧಜ್ಞಾನ ಹೊಂದಿರುವುದಿಲ್ಲ. ಇನ್ನೂ ಕೆಲವರು ತೀಕ್ಷ್ಣವಾದ ಶಬ್ದಜ್ಞಾನವನ್ನು ಹೊಂದಿರುತ್ತಾರೆ ಎಂಬ ಅಂಶವನ್ನು ಅವರಿಗೆ ತಿಳಿಸುತ್ತಾ ತಮ್ಮ ಕಿವಿಗಳ ಆರೈಕೆಯನ್ನು ಹೇಗೆ ಮಾಡಿಕೊಳ್ಳಬಹುದು ಎಂಬುದನ್ನು ಮಕ್ಕಳೊಂದಿಗೆ ಚರ್ಚಿಸುವುದು . ಅವರು ಸ್ನಾನದ ನಂತರ ತಕ್ಷಣವೇ ತಮ್ಮ ಕಿವಿಗಳನ್ನು ಸ್ವಚ್ಛಗೊಳಿಸಲು ತಮ್ಮ ಪೋಷಕರ ಸಹಾಯವನ್ನು ಪಡೆಯಬಹುದು ಮತ್ತು ಕಿವಿಗಳನ್ನು ಸ್ವಚ್ಛಗೊಳಿಸಲು ಕಿವಿಗಳಲ್ಲಿ ಯಾವುದೇ ಚೂಪಾದ/ಅಪಾಯಕಾರಿ ವಸ್ತುಗಳನ್ನು ಬಳಸಬಾರದು ಎಂಬ ಅರಿವನ್ನು ಜೊತೆ ಜೊತೆಗೆ ಮೂಡಿಸುವುದು.**<br>**ತರಗತಿ–2**<br>**1. ಶಿಕ್ಷಕರು ಪ್ರಾಣಿ ಪಕ್ಷಿಗಳ ಧ್ವನಿಯ ಅನುಕರಣೆ ಮಾಡಿ, ಇದು ಯಾವ ಪ್ರಾಣಿ ಪಕ್ಷಿಯ ಕೂಗು ಎಂದು ಗುರುತಿಸಲು ಹೇಳುವುದು.**<br>**2. ಪ್ರಾಣಿ ಮತ್ತು ಪಕ್ಷಿಗಳ ಕೂಗುಗಳನ್ನು ಅನುಕರಿಸಲು ಹೇಳುವುದು.**<br>**ತರಗತಿ–3**<br>**1.ಸ್ಥಳೀಯವಾಗಿ ಲಭ್ಯವಿರುವ ಸಂಗೀತ ವಾದ್ಯಗಳ ಶಬ್ಧವನ್ನು ಗುರುತಿಸಲು ತಿಳಿಸುವುದು.**<br>**2.ಪರಿಚಯಿಸಿದ ಸಂಗೀತ ವಾದ್ಯಗಳನ್ನು ಪಟ್ಟಿ ಮಾಡಲು ತಿಳಿಸುವುದು.**<br>**3. ಯಾವುದಾದರು ವಾದ್ಯದ ಜೊತೆ ಶಿಶುಗೀತೆ ಹೇಳಿಸುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸೂಕ್ಮ ಚಲನಾ ಕೌಶಲಗಳ ಅಭಿವೃದ್ಧಿ.<br>ಚಟುವಟಿಕೆ – 02 ಕಡ್ಡಿ ಚಿತ್ರ ರಚನೆ. ಗುರಿ – 1,2,3.<br>ಉದ್ದೇಶ;<br>• ಅನುಪಯುಕ್ತ ವಸ್ತುಗಳ ಮರುಬಳಕೆಯ ಬಗ್ಗೆ ಅರಿಯುತ್ತಾರೆ.<br>• ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಕ್ರಿಯಾಶೀಲರಾಗಲು ಅನುವು ಮಾಡಿಕೊಡುತ್ತದೆ.<br>• ಕಲಿಕೆಯ ಪ್ರಾರಂಭಕ್ಕೆ ಅನುಕೂಲವಾಗುತ್ತದೆ.<br>ಸಾಮಗ್ರಿಗಳು : ಕಡ್ಡಿ, ಹಾಳೆ ಮತ್ತು ಅಂಟು.<br>ವಿಧಾನ : ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು. ಮಕ್ಕಳಿಗೆ ಹಾಳೆ, ಕಡ್ಡಿ ಮತ್ತು ಅಂಟನ್ನು ನೀಡುವುದು. ಸುಗಮಕಾರರು ಕಡ್ಡಿ ಚಿತ್ರಗಳನ್ನು ಮಾದರಿಯಾಗಿ ಮಕ್ಕಳಿಗೆ ಮಾಡಿ ತೋರಿಸಿ ಮಕ್ಕಳೂ ಸಹ ತಮ್ಮ ಆಯ್ಕೆಯ ಕಡ್ಡಿ ಚಿತ್ರಗಳನ್ನು ಮಾಡಿ ಹಾಳೆಯ ಮೇಲೆ ಅಂಟಿಸಲು ಪ್ರೋತ್ಸಾಹಿಸುವುದು.<br>ವಿವರ; 2 ಮತ್ತು 3ನೇ ತರಗತಿಗೆ ಕಡ್ಡಿಗಳಿಂದ ಆಕೃತಿ ರಚಿಸಿ, ಆಕೃತಿಯಲ್ಲಿರುವ ಎರಡು ಅಥವಾ ಮೂರು ಕಡ್ಡಿಗಳನ್ನು ತೆಗೆದು ಆಕೃತಿಯ ಮುಖದ ದಿಕ್ಕನ್ನು ಬದಲಾಯಿಸುವಂತೆ ಸೂಚಿಸುವುದು. |

| | | | |
|---|---|---|---|
| | | | |
| | | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ:– ಧ್ವನಿ ಸಂಕೇತಗಳ ಅರಿವು, ಅಕ್ಷರ ಶಬ್ದ ಸಹ ಸಂಬಂಧ.<br>ಚಟುವಟಿಕೆ–20 ಹೆಸರಿನ ಆರಂಭಿಕ ಅಕ್ಷರದಿಂದ ವಸ್ತುವನ್ನು ಪತ್ತೆ ಹಚ್ಚುವುದು (ಗುರಿ–2) **ECL-2**<br>ಉದ್ದೇಶಗಳು:–<br>* ಧ್ವನಿ ಸಂಕೇತಗಳ ಅರಿವು ಮೂಡಿಸುವುದು.<br>* ಅಕ್ಷರಗಳು ಮತ್ತು ಪದಗಳ ನಡುವಿನ ಸಹಸಂಬಂಧವನ್ನು ಗ್ರಹಿಸುವುದು.<br>* ಪದಗಳನ್ನು ಗ್ರಹಿಸಿ ಗುರುತಿಸುವುದು.<br>* ಅಂತ್ಯಾಕ್ಷರಿ ಪದಗಳನ್ನು ಬರೆಯುವುದು.<br>ಅಗತ್ಯ ಸಾಮಗ್ರಿಗಳು– ಇಲ್ಲ<br>ಸಲಹಾತ್ಮಕ ವಿಷಯ : ವರ್ಗಕೋಣೆಯ ವಸ್ತುಗಳು<br>ವಿಧಾನ:– ಸುಳಿವುಗಳ ಮೂಲಕ ತರಗತಿ ಕೋಣೆಯಲ್ಲಿರುವ ವಸ್ತುವಿನ ಹೆಸರನ್ನು ಊಹಿಸಿ, ಹೇಳುವ ಚಟುವಟಿಕೆಯನ್ನು ಆಯೋಜಿಸಿ. ಉದಾಹರಣೆಗಾಗಿ ಶಿಕ್ಷಕರು ನನ್ನ ಮನಸ್ಸಿನಲ್ಲಿರುವ ವಸ್ತು ಕಪ್ಪು ಬಣ್ಣವನ್ನು ಹೊಂದಿದ್ದು ಅದರ ಹೆಸರು ಕ ಅಕ್ಷರದಿಂದ ಪ್ರಾರಂಭವಾಗುತ್ತದೆ ಎಂದು ಹೇಳಿದಾಗ ಮಕ್ಕಳು ಕರಿಹಲಗೆ ಎಂದು ಗುರುತಿಸುವುದು. ಹೀಗೆಯೇ ವಿವಿಧ ಉದಾಹರಣೆಗಳನ್ನು ನೀಡುವುದು.<br>ತರಗತಿವಾರು ವಿವರ: 2ನೇ ಮತ್ತು 3ನೇ ತರಗತಿ ಮಕ್ಕಳಿಗೆ ಪದಗಳ ಮುಂದುವರೆದ ಭಾಗವಾಗಿ ವಾಕ್ಯಗಳನ್ನು ರಚಿಸುವಂತೆ ಹಾಗೂ ಸರಳ ವಾಕ್ಯಗುಚ್ಛಗಳನ್ನು ರಚಿಸುವಂತೆ ಚಟುವಟಿಕೆಗಳನ್ನು ಮುಂದುವರೆಸುವುದು..( 10 ನೇ ದಿನಕ್ಕೆ ಮುಂದುವರೆದಿದೆ)<br>ಅಭ್ಯಾಸದ ಹಾಳೆಗಳು: **EC-1 (ತರಗತಿ 1, 2, 3)** |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಪದ ಸಂಪತ್ತಿನ ಅಭಿವೃದ್ಧಿ, ಸ್ವಯಂ ಅಭಿವ್ಯಕ್ತಿ, ನಟನಾ ಓದು.<br>ಚಟುವಟಿಕೆ 1: ಚಿತ್ರ ಓದು (ಗುರಿ–2)<br>ಉದ್ದೇಶ: ವಿವಿಧ ಘಟನೆ/ಸನ್ನಿವೇಶಗಳ ಚಿತ್ರಗಳನ್ನು ನೋಡುವುದರ ಮೂಲಕ ಘಟನೆಗಳನ್ನು ಅರ್ಥಮಾಡಿಕೊಳ್ಳುವುದು.<br>ಅಗತ್ಯ ಸಾಮಾಗ್ರಿಗಳು: ವಿವಿಧ ಘಟನೆ/ ಸ್ಥಳ/ ಜಾತ್ರೆ/ ಮೇಳಗಳ ಚಿತ್ರಗಳು/ ಉದ್ಯಾನವನ/ ಪೇಟೆ/ ಶಾಲೆ/ ಪ್ರಾಣಿ ಸಂಗ್ರಹಾಲಯ/ ಹಬ್ಬ / ಜಾತ್ರೆಯ ಇತ್ಯಾದಿಗಳ ಚಿತ್ರಗಳು<br>ವಿಧಾನ: ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸುವುದು ಶಿಕ್ಷಕರು ವಿವಿಧ ದಿನ ಪತ್ರಿಕೆ, ಪುಸ್ತಕ, ನಿಯತ ಕಾಲಿಕೆ ಮುಂತಾದವುಗಳಲ್ಲಿಯ ಚಿತ್ರಗಳನ್ನು ವೀಕ್ಷಿಸಲು ತಿಳಿಸುವುದು ಅವುಗಳಲ್ಲಿ ಒಂದು ಸನ್ನಿವೇಶ/ಘಟನೆಯ ಚಿತ್ರವನ್ನು ಆಯ್ಕೆ ಮಾಡಿಕೊಂಡು ಶಿಕ್ಷಕರು ಆಸನ್ನಿವೇಶದ ವಿವರಣೆಯನ್ನು ನೀಡುವುದು.<br>2ಮತ್ತು 3ನೇ ತರಗತಿಗೆ: ಶಿಕ್ಷಕರು ಸನ್ನಿವೇಶದ ಕುರಿತು ವಿವರಣೆ ನೀಡುವಾಗ 2ಮತ್ತು 3ನೇ ತರಗತಿಯ ವಯಸ್ಸು ಮತ್ತು ಅಗತ್ಯತೆಯನ್ನು ಗಮನಿಸುವುದು<br>ವಿಶೇಷ ಸೂಚನೆ: ಇದೆ ಚಟುವಟಿಕೆಯನ್ನು ಒಂದನೇ ವಾರದ ನಾಲ್ಕನೇ ದಿನದಂದು ಮುಂದುವರೆದಿದೆ |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉತ್ತಮ ಚಲನಾ ಕೌಶಲಗಳ ಮತ್ತು ಸೃಜನಶೀಲ ಅಭಿವ್ಯಕ್ತಿಯ ಅಭಿವೃದ್ಧಿ.<br>ಚಟುವಟಿಕೆ –45 ಒತ್ತು ಚಿತ್ರ (ಗುರಿ: 1) **ECW-2**<br>ಉದ್ದೇಶಗಳು:<br>* ಬರವಣಿಗೆಗೆ ಪೂರಕವಾದ ಸ್ನಾಯುಗಳನ್ನು ಬಲಗೊಳಿಸುವುದು.<br>* ದೃಶ್ಯ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>* ಆಕಾರಗಳನ್ನು ಟ್ರೇಸ್ ಮಾಡುವುದು.<br>* ಮಕ್ಕಳಲ್ಲಿರುವ ಸೃಜನಶೀಲ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>ಸಂಪನ್ಮೂಲ ಸಾಮಗ್ರಿ : ತರಗತಿಯಲ್ಲಿ ಲಭ್ಯವಿರುವ ಸಾಮಗ್ರಿಗಳು, ಪೇಪರ್ ಮತ್ತು ಪೆನ್ಸಿಲ್<br>ವಿಧಾನ: ಕೊಟ್ಟಿರುವ ಆಕಾರಗಳನ್ನು ಗುರುತಿಸಲು ನಿಯಂತ್ರಿತ ದೃಶ್ಯ ಚಾಲನಾ ಕೌಶಲಗಳನ್ನು ಅಭಿವೃದ್ಧಿ ಪಡಿಸಲು ಮಕ್ಕಳಿಗೆ ಅವಕಾಶಗಳನ್ನು ಒದಗಿಸುವುದು. ಮಕ್ಕಳಿಗೆ ವಸ್ತು, ಕಾಗದ ಮತ್ತು ಪೆನ್ಸಿಲ್ ನೀಡಿ ವಸ್ತುವನ್ನು ಕಾಗದದ ಮೇಲೆ ಇರಿಸಿಕೊಳ್ಳಲು ಹೇಳಿ, ಅದರ ಅಂಚುಗಳನ್ನು ಗುರುತಿಸಲು ಹೇಳುವುದು. ಇದೇ ಮಾದರಿಯಲ್ಲಿ ವಿವಿಧ ಆಕಾರದ ವಸ್ತುಗಳ ಅಂಚುಗಳನ್ನು ಟ್ರೇಸ್ ಮಾಡಿದ ನಂತರ ಆಕಾರವನ್ನು ಗುರುತಿಸಲು ತಿಳಿಸುವುದು.<br>ಉದಾಹರಣೆಗೆ: ಮೊದಲು ವೃತ್ತವನ್ನು ಗುರುತಿಸುತ್ತಾರೆ. ನಂತರ ಚೌಕ, ಆಯತವನ್ನು ಗುರುತಿಸುತ್ತಾರೆ. ಮಕ್ಕಳು |

DRAFT 2022

| | | |
|---|---|---|
| | | ಗುರುತಿಸಿದ ಭಾಗಗಳಿಗೆ ಕ್ರೆಯಾನ್ಸ್ ಅಥವಾ ಬಣ್ಣವನ್ನು ನೀಡಿ ತುಂಬಲು ಹೇಳುವುದು.<br>**ತರಗತಿವಾರು ವಿವರ: 2ನೇ ಮತ್ತು 3ನೇ ತರಗತಿ ಮಕ್ಕಳಿಗೆ ವಿಭಿನ್ನ ಮಾದರಿಗಳನ್ನು ನೀಡಿ ಅವುಗಳನ್ನು ರಚಿಸುವಂತೆ ಹಾಗೂ ಬರವಣಿಗೆಯಲ್ಲಿ ಸೂಕ್ತ ಬದಲಾವಣೆಗಳನ್ನು ಗುರುತಿಸಿಕೊಳ್ಳಲು ಚಟುವಟಿಕೆಗಳನ್ನು ನಡೆಸುವುದು.** |
| | **ಹೊರಾಂಗಣ ಆಟಗಳು** | ಚಟುವಟಿಕೆ: ಕುಂಟೆಬಿಲ್ಲೆ<br>ಸಾಮರ್ಥ್ಯ : ದೇಹದ ಸಮತೋಲನ ಬೆಳೆಸಲು.<br>ಸಾಮಗ್ರಿ : ಬಿಲ್ಲೆ , ಬಳಪ<br>ವಿಧಾನ :<br>• ನೆಲದಮೇಲೆ ಬಳಪದ ಸಹಾಯದಿಂದ ಆಟಕ್ಕೆ ಬೇಕಾದ ಚೌಕಗಳನ್ನು ಎಳೆಯುವುದು.<br>• ಮಕ್ಕಳು ಚೌಕದ ಗೆರೆಯ ತುಳಿಯದಂತೆ ಬಿಲ್ಲೆಯನ್ನು ಕಾಲಿನಿಂದ ಚೌಕದಿಂದ ಚೌಕಕ್ಕೆ ದೂಡುತ್ತಾ ಆಟ ಆಡಲುಸೂಚಿಸುವುದು.<br>• **ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೂ ಈ ಆಟವನ್ನೇ ಮುಂದುವರೆಸಿ ಆಡಿಸುವುದು.** |
| | **ಕಥಾ ಸಮಯ** | **ಶೀರ್ಷಿಕೆ :** ಸಿಂಹ ಮತ್ತು ಇಲಿ<br>**ಸಾಮಗ್ರಿಗಳು :** ಸರಣಿ ಚಿತ್ರಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ **ಆಲೋಚನಾ ಶಕ್ತಿಯನ್ನು ವೃದ್ಧಿಸುವುದು**<br>➢ **ಪ್ರಶ್ನಿಸುವ ಮನೋಭಾವಉಂಟುಮಾಡುವುದು.**<br>➢ **ಊಹಿಸುವ ಕೌಶಲವನ್ನು ಹೆಚ್ಚಿಸುವುದು.**<br>**ವಿಧಾನ :**<br>**ಸರಣಿ ಚಿತ್ರಗಳು**<br>ಸರಣಿ ಚಿತ್ರಗಳನ್ನು ವಿವಿಧ ಕಾರ್ಯತಂತ್ರಗಳ ಅಡಿಯಲ್ಲಿಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು. (ಕಥೆಯನ್ನು ಆನಂದಿಸುವುದರಜೊತೆಗೆ, ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

**ವಾರ–1** **ದಿನ–3**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 3 | ಶುಭಾಶಯ ವಿನಿಮಯ<br>*(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | ದಿನ–2 ರಲ್ಲಿ ಉಲ್ಲೇಖಿಸಲಾದ ಶುಭಾಶಯ ವಿನಿಮಯ ಚಟುವಟಿಕೆಯನ್ನು ಪುನರಾವರ್ತಿಸಿ. |
| | **ಮಾತು ಕತೆ**<br>***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ*** | **ಚಟುವಟಿಕೆ–1: ಸ್ಯಾಚ್ಯೂ ಆಟ...: (ಗುರಿ–1)**<br>**ಸಾಮರ್ಥ್ಯ:** ಸ್ವಯಂ ಪ್ರಜ್ಞೆ, ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಗಳ ಅಭಿವೃದ್ಧಿ, ಆಲಿಸುವುದು ಮತ್ತು ಮಾತನಾಡುವುದು.<br>**ಉದ್ದೇಶ:** ಮಗು ತನ್ನ ಹೆಸರನ್ನು ಹೇಳುವುದು.<br>**ಸಾಮಗ್ರಿ:** ಸಂಗೀತ ಪ್ಲೇಯರ್ (ಮೊಬೈಲ್ /ತಂಬೂರಿ) |

DRAFT 2.02.22

| | | |
|---|---|---|
| | *ಸಾಮೂಹಿಕ ಚಟುವಟಿಕೆ)* | ವಿಧಾನ:<br>• ಸಂಗೀತವನ್ನು ನುಡಿಸಿ ಮತ್ತು ಸಂಗೀತ ವು ನುಡಿಸುತ್ತಿದ್ದಂತೆ ನೃತ್ಯ ಮಾಡಲು ಮಕ್ಕಳಿಗೆ ಸೂಚನೆ ನೀಡುತ್ತಾರೆ.<br>• ಸಂಗೀತವು ನಿಂತಾಗ ಪ್ರತಿ ಮಗುವು ತಕ್ಷಣವೇ ವಿಗ್ರಹದಂತೆ ನಿಲ್ಲಬೇಕು ಮತ್ತು ಸಂಗೀತವು ಮತ್ತೆ ಪ್ರಾರಂಭವಾಗುವವರೆಗೆ ಅದೇ ಸ್ಥಿತಿಯಲ್ಲಿರಬೇಕು.<br>• ಸ್ಥಿರವಾಗಿ ನಿಲ್ಲದೇ ಇರುವ ಮಗುವನ್ನು ಗುರುತಿಸಿ ಮತ್ತು "ಹಲೋ, ಗುಡ್ ಮಾರ್ನಿಂಗ್, ನನ್ನ ಹೆಸರು ________" ಎಂದು ಹೇಳಲು ತಿಳಿಸಿ. ಆ ಮಗು ಆಟದಿಂದ ಔಟ್ ಆಗುತ್ತದೆ.<br>• ಸಂಗೀತವನ್ನು ನುಡಿಸಿ ಮತ್ತು ಚಟುವಟಿಕೆಯನ್ನು ಪುನರಾವರ್ತಿಸಿ. ಪ್ರತಿಯೊಬ್ಬರೂ ತಮ್ಮನ್ನು ತಾವು ಪರಿಚಯಿಸುವ ಅವಕಾಶವನ್ನು ಪಡೆಯುತ್ತಾರೆ ಎಂದು ಖಚಿತಪಡಿಸಿಕೊಳ್ಳಿ. |
| | ನನ್ನ ಸಮಯ<br>**(Free Indoor play)**<br>**('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು)** | ದಿನ :– 3<br>**ಕಲಿಕಾ ಸಿದ್ಧತಾ ಭಾಗವಾಗಿ 8 ಮೂಲೆಗಳಲ್ಲಿ ಮೊದಲ ಹಂತದಲ್ಲಿ ನಿಗದಿಪಡಿಸಿರುವ ಮೂಲೆವಾರು ಚಟುವಟಿಕೆಗಳ ಬಗ್ಗೆ ಹಾಗೂ ಆಯಾ ಮೂಲೆಗಳ ಸಾಮಗ್ರಿಗಳನ್ನು ಬಳಸುವ ಬಗ್ಗೆ ಶಿಕ್ಷಕರು ಮಕ್ಕಳಿಗೆ ಪರಿಚಯ ಒದಗಿಸುವರು. ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತ ಅವರ ಅರ್ಥೈಸಿಕೊಳ್ಳುವಿಕೆಯನ್ನು ಖಾತ್ರಿ ಪಡಿಸಿಕೊಳ್ಳುತ್ತಾರೆ.**<br>**( ಮೂಲೆವಾರು ಸಲಹಾತ್ಮಕ ಚಟುವಟಿಕೆಗಳನ್ನು ನೀಡಿದ್ದು, ಸಾಮರ್ಥ್ಯಗಳನ್ನು ಸಾಧಿಸಲು ಅನುಕೂಲವಾಗುವಂತೆ ಮಕ್ಕಳಿಗೆ ಹೆಚ್ಚುವರಿ ಚಟುವಟಿಕೆಗಳನ್ನು ಯೋಜಿಸಬಹುದಾಗಿದೆ.)**<br>*****************************************************************************<br>**ಮೂಲೆ – ಬಿಲ್ಡಿಂಗ್ ಬ್ಲಾಕ್ಸ್ ಮೂಲೆ:–**<br>**ಸಾಮರ್ಥ್ಯ: ಕಣ್ಣು ಮತ್ತು ಕೈಗಳ ಸಂಯೋಜನೆಯನ್ನು ಸಾಧಿಸುವುದು.**<br>ಚಟುವಟಿಕೆ: ವಸ್ತುಗಳ ವರ್ಗೀಕರಣ<br>ಉದ್ದೇಶ : ವಸ್ತುವಿನ ಗಾತ್ರದ ಆಧಾರದ ಮೇಲೆ ವರ್ಗೀಕರಣ ಮಾಡುವಳು/ನು..<br>ಸಾಮಗ್ರಿ :– ಕಲಿಕಾ ಕಿಟ್‌ನ ಬ್ಲಾಕ್ಸ್ ಗಳು<br>(ಲಭ್ಯವಿಲ್ಲದಿದ್ದಲ್ಲಿ ಸೋಪ್ ಬಾಕ್ಸ್, ಬೆಂಕಿ ಪೊಟ್ಟಣಗಳು,<br>ಪೇಸ್ಟ್ ಬಾಕ್ಸ್, ರಟ್ಟಿನ ಬಾಕ್ಸ್ ಗಳು ಇತ್ಯಾದಿ)<br>ವಿಧಾನ:<br>ವಿದ್ಯಾ ಪ್ರವೇಶ (ವಿ.ಪ್ರ):<br>ವಿವಿಧ ಗಾತ್ರದ ಸಾಮಗ್ರಿಗಳನ್ನು ಗಾತ್ರದ ಆಧಾರದ ಮೇಲೆ (ದೊಡ್ಡ,ಚಿಕ್ಕ) ವರ್ಗೀಕರಿಸುವುದು.<br>**2 ನೇ ತರಗತಿ&3 ನೇ ತರಗತಿ :**<br>ವಿವಿಧ ಗಾತ್ರದ ಸಾಮಗ್ರಿಗಳನ್ನು ಗಾತ್ರದ ಆಧಾರದ ಮೇಲೆ ಏರಿಕೆ ಕ್ರಮದಲ್ಲಿ ಜೋಡಿಸುವುದು.<br>*****************************************************************************<br>**ಮೂಲೆ – ಗಣಿತ ಮೂಲೆ:–**<br>ಸಾಮರ್ಥ್ಯ: ವಸ್ತುಗಳ ಗಾತ್ರ, ಎತ್ತರ–ಗಿಡ್ಡ, ಭಾರ–ಹಗುರ ಆಧಾರದ ಮೇಲೆ ವರ್ಗೀಕರಿಸುವುದು ಹಾಗೂ ಚಿತ್ರ/ಸಂಖ್ಯೆಗಳ ಹೋಲಿಕೆ ಮಾಡುವುದು.<br><br>ಚಟುವಟಿಕೆ: ಆಕೃತಿಗಳ ಚಿತ್ರಪಟಕ್ಕೆ ಆಕೃತಿ ಕಾರ್ಡ್ ಗಳ ಜೋಡಣೆ<br>ಉದ್ದೇಶ : ಸಮತಲಾಕೃತಿಗಳನ್ನು ಹೋಲಿಸಿ ಜೋಡಿಸುವಳು/ನು.<br>ಸಾಮಗ್ರಿ :– * ವಿವಿಧ ಸಮತಲಾಕೃತಿಗಳನ್ನೊಳಗೊಂಡ ಚಿತ್ರಪಟಗಳು<br>* ಬಣ್ಣದ ಹಾಳೆಯಿಂದ ಕತ್ತರಿಸಲಾದ ವಿವಿಧ ಸಮತಲಾಕೃತಿಗಳು<br>(ಬಣ್ಣದ ಹಾಳೆಯಿಂದ ಕತ್ತರಿಸಿದ ಆಕೃತಿಗಳು ಚಿತ್ರಪಟದಲ್ಲಿನ ಆಕೃತಿಗಳಿಗೆ ಸಮನಾಗಿರಬೇಕು ಅಥವಾ ಚಿಕ್ಕದಾಗಿರಬೇಕು)<br><br>ವಿಧಾನ:<br>ವಿದ್ಯಾ ಪ್ರವೇಶ (ವಿ.ಪ್ರ):<br>ವಿವಿಧ ಆಕೃತಿಗಳನ್ನೊಳಗೊಂಡ ಚಿತ್ರಪಟವನ್ನು ನೆಲದ ಮೇಲೆ ಇಡಬೇಕು. |

DRAFT 22.02.22

ಚಿತ್ರಪಟದಲ್ಲಿನ ಆಕೃತಿಗಳಿಗೆ ಹೊಂದಿಕೆಯಾಗುವ ಬಣ್ಣದ ಹಾಳೆಯ ಸಮತಲಾಕೃತಿಗಳನ್ನು ಚಿತ್ರಪಟಕ್ಕೆ ಹೊಂದಿಸುವುದು.

**2 ನೇ & 3 ನೇ ತರಗತಿ :**

ಹೋಲಿಕೆಯುಳ್ಳ ಆಕೃತಿಗಳ ತುಂಡುಗಳನ್ನು ಚಿತ್ರಪಟಕ್ಕೆ ಹೊಂದಿಸುವುದು ಮತ್ತು ತರಗತಿ ಕೋಣೆಯಲ್ಲಿರುವ ವಿವಿಧ ವಸ್ತುಗಳೊಂದಿಗೆ ಆಕೃತಿಗಳನ್ನು ಹೋಲಿಕೆ ಮಾಡುವುದು.

***********************************************************************************

**ಅನ್ವೇಷಣೆ ಅಥವಾ ವಿಜ್ಞಾನ ಮೂಲೆ:**

**ಸಾಮರ್ಥ್ಯ: ವೈಜ್ಞಾನಿಕ, ಅನ್ವೇಷಣಾ ಮನೋಭಾವ ಹಾಗೂ ಚಿಂತನಾ ಮನೋಭಾವಗಳನ್ನು ಬೆಳೆಸುವುದು.**

ಚಟುವಟಿಕೆ: ರಂಗಿನಾಟ

ಉದ್ದೇಶ : *ಸ್ವತಂತ್ರ ವಾಗಿ ಕಾರ್ಯ ನಿರ್ವಹಿಸುವುದರೊಂದಿಗೆ ಅನ್ವೇಷಣಾ ಮನೋಭಾವ ಬೆಳೆಸಿ ಕೊಳ್ಳುತ್ತಾಳೆ/ನೆ.




ಸಾಮಗ್ರಿ :– * ಪಾರದರ್ಶಕ ಪ್ಲಾಸ್ಟಿಕ್ ಲೋಟಗಳು
* ನೀರು
* ಬಣ್ಣಗಳು

ವಿಧಾನ:

ವಿದ್ಯಾ ಪ್ರವೇಶ (ವಿ.ಪ್ರ):

ನೀರಿನಲ್ಲಿ ಬಣ್ಣಗಳನ್ನು ಬೆರೆಸುವುದರಿಂದ ಆಗುವ ಬದಲಾವಣೆಗಳನ್ನುಮಕ್ಕಳು ಗಮನಿಸುವುದು.

**2 &3 ನೇ ತರಗತಿ :**

ನೀರಿನಲ್ಲಿ ಬಣ್ಣಗಳನ್ನು ಬೆರೆಸುವುದರಿಂದ ಆಗುವ ಬದಲಾವಣೆಗಳನ್ನು ಗಮನಿಸುತ್ತಾರೆ ಹಾಗೂ ಬದಲಾದ ನೀರಿನ ಬಣ್ಣವನ್ನು ಕೋಣೆಯಲ್ಲಿರುವ ವಸ್ತುಗಳೊಂದಿಗೆ ಹೋಲಿಕೆ ಮಾಡುವುದು

*****************************************************************************

**ಗೊಂಬೆಗಳ ಮೂಲೆ :**




**ಸಾಮರ್ಥ್ಯ: ಸೌಂದರ್ಯೋಪಾಸನೆ, ವೈಯಕಿಕ ಸ್ವಚ್ಛತೆ, ಅಭಿವ್ಯಕ್ತಿ ಕೌಶಲ್ಯ ಬೆಳೆಸುವುದು.**

ಚಟುವಟಿಕೆ: ಗೊಂಬೆ ಹೆಜ್ಜೆ .. ನನ್ನ ಹೆಜ್ಜೆ.

ಉದ್ದೇಶ : *ಸ್ವತಂತ್ರ ವಾಗಿ ಕಾರ್ಯ ನಿರ್ವಹಿಸುವ ಮನೋಭಾವ ಬೆಳೆಸಿ ಕೊಳ್ಳುತ್ತಾಳೆ/ನೆ.
* ಕಣ್ಣು ಮತ್ತು ಕೈ ಸಹಸಂಬಂಧದ ಅಭಿವೃದ್ಧಿ.

ಸಾಮಗ್ರಿ :– ಪ್ರಾಣಿ–ಪಕ್ಷಿ, ಮನುಷ್ಯನ ಬೊಂಬೆಗಳು, ಬಣ್ಣಗಳು, ಡ್ರಾಯಿಂಗ್ ಶೀಟ್‌ಗಳು, ಪ್ಲೇಟ್ ಗಳು

ವಿಧಾನ:

ವಿದ್ಯಾ ಪ್ರವೇಶ (ವಿ.ಪ್ರ):

ಬೊಂಬೆಗಳ ಪಾದಗಳನ್ನು ಬಣ್ಣದಲ್ಲಿ ಅದ್ದಿ ಪಾದದ ಅಚ್ಚುಗಳನ್ನು ಡ್ರಾಯಿಂಗ್ ಹಾಳೆಯ ಮೇಲೆ ಮೂಡಿಸುವುದು.

**2 ನೇ & 3 ನೇ ತರಗತಿ :**

ಬೊಂಬೆಗಳ ಪಾದಗಳನ್ನು ಬಣ್ಣಗಳಲ್ಲಿ ಅದ್ದಿ ಪಾದದ ಅಚ್ಚುಗಳನ್ನು ಡ್ರಾಯಿಂಗ್ ಹಾಳೆಯ ಮೇಲೆ ಮೂಡಿಸುವುದರೊಂದಿಗೆ ಪಾದದ ಅಚ್ಚುಗಳ ಗಾತ್ರವನ್ನು ಹೋಲಿಸುವುದು.

*****************************************************************************

**ಓದುವ / ತರಗತಿ ಗ್ರಂಥಾಲಯ ಮೂಲೆ :**

**ಸಾಮರ್ಥ್ಯ: ಚಿತ್ರಗಳನ್ನು ಓದುವುದರೊಂದಿಗೆ ಅರ್ಥೈಸಿಕೊಳ್ಳುವುದು, ಕಲ್ಪನಾಶಕ್ತಿ, ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸುವುದು.**


ಚಟುವಟಿಕೆ: ಚಿತ್ರ ಓದು

ಉದ್ದೇಶ : ಚಿತ್ರ ಗುರುತಿಸುವುದರೊಂದಿಗೆ ಸ್ಪಷ್ಟವಾಗಿ ಓದುತ್ತಾನೆ / ಳೆ

ಸಾಮಗ್ರಿ :– ಪ್ರಾಣಿ–ಪಕ್ಷಿ, ವಸ್ತುಗಳ ಚಿತ್ರಗಳು

ವಿದ್ಯಾ ಪ್ರವೇಶ (ವಿ.ಪ್ರ):

ಚಿತ್ರಗಳನ್ನು ಗುರುತಿಸಿ, ಸ್ಪಷ್ಟವಾಗಿ ಹೆಸರಿಸುವುದು.



**2 ನೇ & 3 ನೇ ತರಗತಿ :**

ಚಿತ್ರಗಳನ್ನು ಗುರುತಿಸಿ, ಸ್ಪಷ್ಟವಾಗಿ ಓದುವುದರೊಂದಿಗೆ ಪದದ ಮೊದಲ ಅಕ್ಷರದ ಶಬ್ಧವನ್ನೂ ಉಚ್ಚರಿಸುವುದು.

*******************************************************************************

**ಕಲೆಗೊಂದು ನೆಲೆ/ಕರಕುಶಲ ಮೂಲೆ:**

**ಸಾಮರ್ಥ್ಯ: ಸೂಕ್ಷ್ಮ ಸ್ನಾಯು ಬೆಳವಣಿಗೆಯೊಂದಿಗೆ ಸೌಂದರ್ಯೋಪಾಸನೆ, ಸೃಜನಶೀಲತೆಯನ್ನು ಬೆಳೆಸುವುದು.**

ಚಟುವಟಿಕೆ: ಬಣ್ಣದ ಬೆರಳು

ಉದ್ದೇಶ : ಬೆರಳಚ್ಚಿನಿಂದ ವಿನ್ಯಾಸಗಳ ರಚನೆ.

ಸಾಮಗ್ರಿ :– ಬಣ್ಣ, ರೇಖಾ ಚಿತ್ರಗಳು,

ಹಳೆಯ ಪುಸ್ತಕದ ಗೊಂಬೆ ಚಿತ್ರಗಳು (ಆಕೃತಿ, ಪ್ರಾಣಿ, )

ವಿದ್ಯಾ ಪ್ರವೇಶ (ವಿ.ಪ್ರ):



ಬೆರಳಿಗೆ ಬಣ್ಣ ಹಚ್ಚಿ ಆಕೃತಿಗಳ ರೇಖಾ ಚಿತ್ರದ ಅಂಚುಗಳಿಗೆ ಬೆರಳಚ್ಚು ಒತ್ತುವುದು.

**2 ನೇ & 3 ನೇ ತರಗತಿ :**

ಆಕೃತಿಗಳ ಜೊತೆಗೆ ಪ್ರಾಣಿ ಪಕ್ಷಿಗಳ ಚಿತ್ರ ಬಳಸುವುದು. ಸಮಂಜಸ ಬಣ್ಣಗಳನ್ನು ಬಳಸುವುದು.

*************************************************************************

ಬರೆಯುವ ಮೂಲೆ :

ಸಾಮರ್ಥ್ಯ : ಬರವಣಿಗೆ ಸಿದ್ಧತಾ ಅಭ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಅಕ್ಷರಗಳ ವಿನ್ಯಾಸವನ್ನು ರಚಿಸುವುದು.

ಚಟುವಟಿಕೆ: "ಸೀತಾಫಲ ಚಿತ್ರಿಸು"

ಉದ್ದೇಶ: ಬೆರಳುಗಳ ಸರಳ ಚಲನೆ ರೂಢಿಸಿಕೊಳ್ಳುವಳು/ನು

ಸಾಮಗ್ರಿಗಳು: ಸೀತಾಫಲ/ ಕೊರೆಯಚ್ಚುಗಳು, ಬಿಳಿಹಾಳೆ, ಕ್ರೇಯಾನ್ಸ್

ವಿಧಾನ : .ವಿದ್ಯಾಪ್ರವೇಶ (ವಿ.ಪ್ರ)

"ಸೀತಾಫಲ" ವನ್ನು ಬಿಳಿಹಾಳೆಯ ಮೇಲಿಟ್ಟು ಕೊರೆದ ಭಾಗಗಳಲ್ಲಿ ಕ್ರೇಯಾನ್ಸ್ ನ ಸಹಾಯದಿಂದ ಗೆರೆಗಳನ್ನು ಎಳೆಯುವುದು.

(2&3 ನೇ ತರಗತಿ)

ಬಿಳಿಹಾಳೆಯ ಮೇಲೆ ಸುರುಳಿಯಾಕಾರಗಳನ್ನು ಚಿತ್ರಿಸುವುದು.

************************************************************************

**ಆಟಿಕೆ / ಮಾಡಿ ನೋಡು ಮೂಲೆ :**

**ಸಾಮರ್ಥ್ಯ: ಆಲೋಚನಾಶಕ್ತಿ, ಸೃಜನಶೀಲತೆ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು.**

ಚಟುವಟಿಕೆ: ಗುರಿ ಮುಟ್ಟು

ಉದ್ದೇಶ : ಸ್ನಾಯುಗಳ ಸಮತೋಲನದೊಂದಿಗೆ ನಿರ್ದಿಷ್ಠ ಗುರಿ ಸಾಧಿಸುತ್ತಾನೆ/ ಳೆ.

ಸಾಮಗ್ರಿ :– ದೊಡ್ಡ ಚಮಚ, ಬಾಲ್, ಬುಟ್ಟಿ, ರಟ್ಟು

ವಿಧಾನ: ವಿದ್ಯಾ ಪ್ರವೇಶ (ವಿ.ಪ್ರ):



ದೊಡ್ಡ ಚಮಚದಲ್ಲಿ ಬಾಲ್ ನ್ನು ಹಿಡಿದು ಬೀಳಿಸದಂತೆ ಸಮತೋಲನದೊಂದಿಗೆ ಸಾಗುತ್ತ ನಿರ್ದಿಷ್ಠ ಪಡಿಸಿದ ಸ್ಥಳದಲ್ಲಿ ಇಡಲಾದ ಬುಟ್ಟಿಯಲ್ಲಿ ಹಾಕುವುದು.ಕನಿಷ್ಠ 5–6 ಬಾರಿ ಪುನರಾವರ್ತಿಸುವುದು.

**2 ನೇ & 3 ನೇ ತರಗತಿ :**

ಮೇಲಿನ ಚಟುವಟಿಕೆಯಲ್ಲಿ ಚಮಚದ ಬದಲು ರಟ್ಟನ್ನು ಹಾಗೂ ಸಾಗುವ ಅಂತರವನ್ನು ಹೆಚ್ಚಿಸಿ ಚಟುವಟಿಕೆ ನಿರ್ವಹಿಸುವುದು.

*********************************************************************************

DRAFT 2022

| | | |
|---|---|---|
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | ಸಾಮರ್ಥ್ಯ : ಹೊಂದಿಸುವುದು, ಬಣ್ಣದ ಕಲ್ಪನೆ<br>ಚಟುವಟಿಕೆ...14 ಬಣ್ಣಗಳನ್ನು ಹೊಂದಿಸು (ಗುರಿ 3)<br>ಉದ್ದೇಶ:– ಬಣ್ಣಗಳನ್ನು ಗುರುತಿಸುವುದು.<br>ಅಗತ್ಯ ಸಾಮಗ್ರಿಗಳು : ಡೊಮಿನೋ ಕಾರ್ಡುಗಳು/ ವಿವಿಧ ಬಣ್ಣಗಳ ಮಿಂಚು ಪಟ್ಟಿಗಳು<br>ವಿಧಾನ : ಎಲ್ಲಾ ಮಕ್ಕಳು ಅರ್ಧವೃತ್ತಾಕಾರದಲ್ಲಿ ಕುಳಿತುಕೊಳ್ಳುವಂತೆ ಹೇಳುವುದು. ಪ್ರತಿ ಮಗುವಿಗೆ ಒಂದೊಂದು ಬಣ್ಣದ ಡೊಮಿನೊ ಕಾರ್ಡ್‌ನ್ನು ವಿತರಿಸುವುದು. ವೃತ್ತದ ಮಧ್ಯದಲ್ಲಿ ಬೇರೆ ಬೇರೆ ಬಣ್ಣದ ಡೊಮಿನೊ ಕಾರ್ಡ್‌ಗಳನ್ನು ಇರಿಸುವುದು. ನಂತರ ಒಂದೇ ಬಣ್ಣದ ಕಾರ್ಡ್ ಹೊಂದಿರುವ ಮಕ್ಕಳನ್ನು ಮುಂದೆ ಬರಲು ಹೇಳುವುದು. ಅವರಲ್ಲಿರುವ ಬಣ್ಣಕ್ಕನುಗುಣವಾಗಿ ಕಾರ್ಡ್‌ಗಳನ್ನು ವೃತ್ತದಲ್ಲಿರುವ ಬಣ್ಣದ ಕಾರ್ಡ್ ಮೇಲೆ ಇರಿಸಲು ಹೇಳುವುದು. ಇದೇ ರೀತಿ ಉಳಿದ ಮಕ್ಕಳು ಕೂಡ ಮುಂದೆ ಬಂದು ತಮ್ಮ ತಮ್ಮ ಡೊಮಿನೊ ಕಾರ್ಡ್‌ಗಳ ಬಣ್ಣ ಅರ್ಥಮಾಡಿಕೊಂಡು ಹೊಂದಿಸುತ್ತಾರೆ. ನಂತರ ಒಂದು ಗುಂಪಿನಲ್ಲಿ ಒಂದೇ ಬಣ್ಣದ ಕಾರ್ಡ್ ಮಾತ್ರ ಒಟ್ಟಿಗೆ ಇರುವಂತೆ ಜೋಡಿಸಲು ಮಕ್ಕಳಿಗೆ ಹೇಳುವುದು.<br>ಉದಾ: ಹಸಿರು, ಕೆಂಪು, ಹಳದಿ ಇತ್ಯಾದಿ.<br>ಹೀಗೆಯೇ ವಿವಿಧ ಬಣ್ಣದ ಮಿಂಚು ಪಟ್ಟಿಗಳು, ವಿವಿಧ ಬಣ್ಣದ ವಸ್ತುಗಳು, ಹೂವುಗಳು ಇತ್ಯಾದಿಗಳನ್ನು ಬಣ್ಣಕ್ಕನುಗುಣವಾಗಿ ಹೊಂದಿಸಲು ತಿಳಿಸುವುದು.<br>ತರಗತಿ–2<br>ಪ್ರತಿ ಬಣ್ಣಕ್ಕೆ ತಾನು ನೋಡಿದ ಕನಿಷ್ಠ 2 ವಸ್ತುಗಳನ್ನು ಹೇಳಲು ತಿಳಿಸುವುದು.<br>ತರಗತಿ–3<br>ಕೆಂಪು, ಹಸಿರು, ನೀಲಿ ಕಪ್ಪು ಮತ್ತು ಬಿಳಿ ಬಣ್ಣವಿರುವ ಸ್ಥಳೀಯವಾಗಿ ತಾನು ನೋಡಿದ ವಸ್ತು/ಪ್ರಾಣಿ/ಪಕ್ಷಿ/ಸಸ್ಯ ಪಟ್ಟಿ ಮಾಡಲು ಹೇಳುವುದು. |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ.<br>ಚಟುವಟಿಕೆ – 48 ಕೊಲ್ಯಾಜ್ ಮಾಡುವುದು. ಗುರಿ;1<br>ಉದ್ದೇಶ;<br>• ಸೂಕ್ಮ ಸ್ನಾಯುಗಳ ಬೆಳವಣಿಗೆಗೆ ಅನುಕೂಲವಾಗುತ್ತದೆ.<br>• ತಮ್ಮಲ್ಲಿರುವ ಕಲೆಯನ್ನು ಅಭಿವ್ಯಕ್ತಗೊಳಿಸಲು ಸಹಾಯವಾಗುತ್ತದೆ.<br>• ಒಂದು ಚೌಕಟ್ಟಿನೊಳಗೆ[ ಸ್ಥಳದ ಪರಿಕಲ್ಪನೆ.]ಕೆಲಸ ಮಾಡುವ ವಿಧಾನ ತಿಳಿಯುತ್ತದೆ.<br>• ವಸ್ತುಗಳನ್ನು ಕತ್ತರಿಸಲು, ಹಿಡಿಯಲು ಹಿಡಿತ ಸಾಧಿಸುತ್ತಾರೆ.<br>ಸಾಮಗ್ರಿಗಳು : ಬಣ್ಣದ ಹಾಳೆಗಳು ಮತ್ತು ಅಂಟು.<br>ವಿಧಾನ : ಕಾಗದವನ್ನು ಸಣ್ಣ ಸಣ್ಣ ತುಂಡುಗಳಾಗಿ ಹರಿದು ಹಾಕಲು ಮಕ್ಕಳಿಗೆ ಹೇಳುವುದು. ನಂತರ ಹರಿದ ಹಾಳೆಗಳನ್ನು ನೀಡಿರುವ ರೇಖಾ ಚಿತ್ರಗಳಿಗೆ ಅಂಟಿಸಲು ಹೇಳುವುದು.ಆ ರೇಖಾ ಚಿತ್ರಗಳು ಮರ, ಗುಡಿಸಲು ಪ್ರಾಣಿ ಅಥವಾ ಯಾವುದೇ ಇತರ ವಸ್ತುಗಳ ಚಿತ್ರಗಳು ಆಗಿರಬಹುದು. ಮಕ್ಕಳು ರಚಿಸಿದ ಯಾವುದೇ ವಿನ್ಯಾಸದಲ್ಲಿ ಕಾಗದದ ಚೂರುಗಳನ್ನು ಅಂಟಿಸಿ ತಮ್ಮದೇ ಆದ ಕೊಲ್ಯಾಜ್ ಮಾಡಲು ಅವಕಾಶ ಮಾಡಿಕೊಡುವುದು. ಹಳೆಯ ಬಟ್ಟೆಯ ತುಂಡುಗಳು ಅಥವಾ ಇತರ ತ್ಯಾಜ್ಯ ವಸ್ತುಗಳು ಅಥವಾ ಎಲೆಗಳು ಅಥವಾ ದಳಗಳು ಇತ್ಯಾದಿಗಳನ್ನು ಕೊಲ್ಯಾಜ್ ಚಟುವಟಿಕೆಯಲ್ಲಿ ಅಂಟಿಸಲು ಬಳಸಬಹುದಾಗಿದೆ.<br>ವಿವರ; 2 ಮತ್ತು 3 ನೇ ತರಗತಿಗೆ ಇದೇ ಚಟುವಟಿಕೆಯನ್ನು ಮಾಡಿಸಿ ಕೊಲ್ಯಾಜ್‌ಗೆ ಸಂಭಂದಿಸಿದ ವಿವರಣೆಯನ್ನು ತಮ್ಮದೇ ಆದ ಶೈಲಿ ಮತ್ತು ಭಾಷೆಯಲ್ಲಿ ಹೇಳುವಂತೆ ತಿಳಿಸುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ / ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ: ಕ್ರಿಯಾತ್ಮಕ ಸ್ವ ಅಭಿವ್ಯಕ್ತಿ, ಧ್ವನಿ ಸಂಕೇತ ಹಾಗೂ ಪ್ರಾಸದ ಅರಿವು, ಪರಿಸರ ಪ್ರಜ್ಞೆ, ಪದಸಂಪತ್ತಿನ ಬೆಳವಣಿಗೆ<br>ಚಟುವಟಿಕೆ 3 ಹಾಡು, ಪ್ರಾಸಗೀತೆ, ಪದ್ಯ/ನಾಟಕ. (ಗುರಿ–2) **ECL-3**<br>ಉದ್ದೇಶ:<br>* ಧ್ವನಿ ಸಂಕೇತಗಳ ಅರಿವನ್ನು ಮೂಡಿಸುವುದು.<br>* ಪ್ರಾಸಗಳ ಅರಿವನ್ನು ಉಂಟು ಮಾಡುವುದು.<br>* ಕ್ರಿಯಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.<br>* ತನ್ನ ಸುತ್ತಲಿನ ಪರಿಸರದೊಂದಿಗೆ ಸಂಬಂಧೀಕರಿಸುವುದು. |

DRAFT 22.02.22

| | | | |
|---|---|---|---|
| | | | ಅಗತ್ಯ ಸಾಮಗ್ರಿಗಳು– ಇಲ್ಲ<br>ವಿಧಾನ: ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ. ಶಿಕ್ಷಕರು ಮಕ್ಕಳಿಗೆ ಪರಿಚಿತ ಪ್ರಾಸಗೀತೆಯನ್ನು ಹಾಡಿ ತೋರಿಸಲಿ. ಶಿಕ್ಷಕರನ್ನು ಅನುಕರಿಸುತ್ತಾ ಮಕ್ಕಳು ಹಾಡನ್ನು ಪುನರುಚ್ಚರಿಸಲು ತಿಳಿಸಿ. ಉದಾ..ಬೇಕೇ ಬೇಕೇ ತರಕಾರಿ<br>ನೆನಪಿಡಬೇಕಾದ ಅಂಶಗಳು:<br>* ಮಕ್ಕಳು ಹಾಡನ್ನು ಆನಂದಿಸಲು ಸೂಕ್ತ ಅಭಿನಯ ಹಾಗೂ ಉತ್ಸಾಹದಿಂದ ಹಾಡಿ.<br>* ಮಗುವಿಗೆ ತಿಳಿದಿರುವ ಹಾಡನ್ನು ಹೇಳಲು ಉತ್ತೇಜಿಸಿ.<br>ತರಗತಿವಾರು ವಿವರ: 2 ಹಾಗೂ 3 ನೇ ತರಗತಿ ಮಕ್ಕಳು ಶಿಕ್ಷಕರನ್ನು ಅನುಕರಿಸುತ್ತಾ ರಾಗಬದ್ಧವಾಗಿ ಅಭಿನಯದೊಂದಿಗೆ ಹಾಡುವುದು. (9 ನೇ ದಿನಕ್ಕೆ ಮುಂದುವರೆದಿದೆ) |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಓದಿನೆಡೆಗೆ ಮಕ್ಕಳ ಆಸಕ್ತಿ<br>ಚಟುವಟಿಕೆ: ಓದುವ ಮೂಲೆ<br>ಅಗತ್ಯ ಸಾಮಗ್ರಿಗಳು: ವಿವಿಧ ಪುಸ್ತಕಗಳು, ಕಥೆ ಪುಸ್ತಕಗಳು, ದಿನ ಪತ್ರಿಕೆಗಳು, ಓದುವೆ ನಾನು ಕಾರ್ಡು, ಕಾಗದ ಹಾಳೆ,ಸ್ಕೆಚ್ಚ ಪೆನ್ನುಗಳು, ಸಚಿತ್ರ ಕೋಶ, ಕಥಾ ಸರಣಿ ಚಿತ್ರಗಳು, ಇತ್ಯಾದಿ<br>ಉದ್ದೇಶ: ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿ ಮೂಡಿಸುವುದು. ಓದುವಿಕೆಗೆ ತರಗತಿ ವಾತಾವರಣವನ್ನು ಸಿದ್ದಗೊಳಿಸುವುದು.<br>ವಿಧಾನ:<br>* ಮಕ್ಕಳನ್ನು ಓದುವ ಮೂಲೆಗೆ ಕಳುಹಿಸುವುದು.<br>* ಮಕ್ಕಳು ತಮಗಿಷ್ಟವಾದ ಪುಸ್ತಕ ಆಯ್ದು ಕೊಳ್ಳಲು ಅವಕಾಶ ಕಲ್ಪಿಸುವುದು.<br>* ಪುಸ್ತಕ ಓದಲು / ಊಹಾತ್ಮಕವಾಗಿ ಓದಲು ಪ್ರೇರೇಪಿಸುವುದು.<br>2ಮತ್ತು 3ನೇ ತರಗತಿ: ಮಕ್ಕಳು ಓದಿರುವುದನ್ನು ಅಭಿವ್ಯಕ್ತಿಸುವುರು ಉದಾಹರಣೆಗೆ ತಮಗಿಷ್ಟವಾದ ಪುಸ್ತಕ/ಪಾತ್ರ/ಸನ್ನಿವೇಶದ ಕುರಿತು ಮಾತನಾಡುತ್ತಾರೆ. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಸೂಕ್ಷ್ಮ ಸ್ನಾಯು ಕೌಶಲಗಳ ಅಭಿವೃದ್ಧಿ, ಉದ್ದೇಶಿತ ಬರವಣಿಗೆ<br>ಚಟುವಟಿಕೆ. 37 ಚಿತ್ರಿಸುವುದು ಮತ್ತು ಹೆಸರಿಸುವುದು (ಗುರಿ–2) **ECW-3**<br>ಉದ್ದೇಶ:<br>* ಚಿತ್ರ ಬಿಡಿಸುವ ಮೂಲಕ ಸೂಕ್ಷ್ಮ ಸ್ನಾಯುಗಳ ಬೆಳವಣಿಗೆ ಆಗುವಂತೆ ನೋಡಿಕೊಳ್ಳುವುದು.<br>* ಹೆಸರಿಸುವ ಮೂಲಕ ಬರವಣಿಗೆ ಕೌಶಲ ರೂಢಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ, ಕ್ರೇಯಾನ್ಸ್ ಮತ್ತು ಬಣ್ಣದ ಪೆನ್ಸಿಲ್‌ಗಳು<br>ವಿಧಾನ : ಮಕ್ಕಳು ತಮ್ಮ ಆಯ್ಕೆಯ ಚಿತ್ರ ಬಿಡಿಸುವುದು<br>ಉದಾ. ಹಣ್ಣು, ಗೊಂಬೆ/ಆಟಿಕೆ. ಪುಸ್ತಕ, ಹೂ ಇತ್ಯಾದಿ<br>* ಬರೆದ ಚಿತ್ರಕ್ಕೆ ಒಂದು ಹೆಸರು ಕೊಡಲು ತಿಳಿಸುವುದು<br>ತರಗತಿವಾರು ವಿವರ: 2 ತರಗತಿಯ ವಿದ್ಯಾರ್ಥಿಗಳು ಸ್ವಲ್ಪ ಮೇಲ್ಮಟ್ಟದ ಚಿತ್ರ ಬಿಡಿಸುವುದು. ಮತ್ತು 3 ನೇ ತರಗತಿಯ ವಿದ್ಯಾರ್ಥಿಗಳು ಸರಳ ಸನ್ನಿವೇಶದ ಚಿತ್ರವನ್ನು ಆಯ್ದು ಬಿಡಿಸುವುದು. |
| | **ಹೊರಾಂಗಣ ಆಟಗಳು** | Day 4<br>ಚಟುವಟಿಕೆ: ಕೆರೆ ದಡ<br>ಸಾಮರ್ಥ್ಯ : ಏಕಾಗ್ರತೆ ಬೆಳೆಸಲು , ಆಲಿಸುವ ಕೌಶಲ್ಯ ಬೆಳೆಸಲು , ದೇಹದ ಸಮತೋಲನ ಅಭಿವೃದ್ಧಿಪಡಿಸಲು .<br>ಸಾಮಗ್ರಿ : ಸುಣ್ಣದ ಪುಡಿ<br>ವಿಧಾನ:<br>• ಮಕ್ಕಳ ಸಂಖ್ಯೆಗೆ ಅನುಗುಣವಾಗಿ ದೊಡ್ಡ ವೃತ್ತವನ್ನು ಸುಣ್ಣದ ಪುಡಿಯ ಸಹಾಯದಿಂದ ಬರೆಯುವುದು.<br>• ಮಕ್ಕಳನ್ನು ವೃತ್ತದ ಗೆರೆಯ ಹೊರಭಾಗದಲ್ಲಿ ನಿಲ್ಲಲು ಸೂಚಿಸುವುದು.<br>• ಶಿಕ್ಷಕರು ಕೆರೆ ದಡ ಎಂಬ ಸೂಚನೆಯನ್ನು ಅನುಸರಿಸಿ ಮಕ್ಕಳಿಗೆ ಆಡಲು ತಿಳಿಸುವುದು.<br>• ಸೂಚನೆಯನ್ನು ಪಾಲಿಸದವರು ಆಟದಿಂದ ಹೊರಗುಳಿಯುವರು.<br>**ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೂ ಈ ಆಟವನ್ನೇ ಮುಂದುವರೆಸಿ ಆಡಿಸುವುದು.** | |
| | **ಕಥಾ ಸಮಯ** | **ಶೀರ್ಷಿಕೆ** : ಸಿಂಹ ಮತ್ತು ಇಲಿ<br>**ಸಾಮಗ್ರಿಗಳು** :ಮುಖವಾಡಗಳು | |

DRAFT 22.02.22

| | | |
|---|---|---|
| | | **ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>➢ **ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವ ಆಸಕ್ತಿಯನ್ನು ಬೆಳೆಸುವುದು.**<br>➢ **ಪ್ರಶ್ನಿಸುವ ಮನೋಭಾವಉಂಟುಮಾಡುವುದು.**<br><br>**ವಿಧಾನ :** ***ಮುಖವಾಡಗಳು***<br><br>ಮುಖವಾಡಗಳನ್ನು ಬಳಸಿ ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು. ಹಿರಿಯ ವಿದ್ಯಾರ್ಥಿಗಳನ್ನು ಬಳಸಿಕೊಂಡು ಪಾತ್ರಗಳನ್ನು ಹಂಚಿಅಭಿನಯಿಸಲು ಸಹಕರಿಸಿ.<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>(ಕಥೆಯನ್ನು ಆನಂದಿಸುವುದರಜೊತೆಗೆ, ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. “ನೀನೇ ಮಾಡಿ ನೋಡು” ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

**ವಾರ–1** **ದಿನ–4**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 4 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:**<br>• ಮಕ್ಕಳನ್ನು ಚಪ್ಪಾಳೆ ತಟ್ಟುವ ಮೂಲಕ ಮತ್ತು ಚಿಟಿಕೆ ಹೊಡೆಯುವ ಮೂಲಕ ತರಗತಿಗೆ ಪ್ರವೇಶಿಸುವಂತೆ ಮಾಡಿ.<br>• ಅವರನ್ನು ವೃತ್ತಾಕಾರದಲ್ಲಿ ನಿಲ್ಲಲು ಸೂಚಿಸಿ.<br>• "ಗುಡ್ ಮಾರ್ನಿಂಗ್ ಮಕ್ಕಳೇ, ಹೇಗಿದ್ದೀರಿ?" ಎಂದು ಹೇಳುವ ಮೂಲಕ ಮಕ್ಕಳನ್ನು ಸ್ವಾಗತಿಸಿ. ಮತ್ತು "ಗುಡ್ ಮಾರ್ನಿಂಗ್ ಟೀಚರ್" ಎಂದು ಹೇಳುವ ಮೂಲಕ ಪ್ರತಿಕ್ರಿಯಿಸುವಂತೆ ಮಕ್ಕಳನ್ನು ಪ್ರೋತ್ಸಾಹಿಸಿ. ನಾವು ಚೆನ್ನಾಗಿದ್ದೇವೆ, ಧನ್ಯವಾದಗಳು".<br>• ಶುಭಾಶಯಗಳಿಗೆ ಮಕ್ಕಳು ಆತ್ಮವಿಶ್ವಾಸದಿಂದ ಪ್ರತಿಕ್ರಿಯಿಸುವವರೆಗೆ ಚಟುವಟಿಕೆಯನ್ನು ಪುನರಾವರ್ತಿಸಿ. |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | • **ಚಟುವಟಿಕೆ : ಕ್ಲ್ಯಾಪ್ ಆಂಡ್ ಕ್ಲ್ಯಾಪ್**<br>**ವಿಧಾನ:**<br>• ಮಕ್ಕಳನ್ನು ವೃತ್ತದಲ್ಲಿ ಕೂರಿಸಿ.<br>• ಚಪ್ಪಾಳೆಯನ್ನುಪರಿಚಯಿಸಿ, ತಾಳಬದ್ಧವಾಗಿ ಚಪ್ಪಾಳೆ ತಟ್ಟುವುದನ್ನು ರೂಢಿಸಿ.<br>• ಇದನ್ನು ಕೆಲವು ಬಾರಿ ಪುನರಾವರ್ತಿಸಿ. ನಂತರ ನಿಧಾನವಾಗಿ, ನಿಧಾನವಾಗಿ ಮಕ್ಕಳು ನಿಮ್ಮೊಂದಿಗೆ ಮಾಡುವಂತೆ ಮಾಡಿ.<br>• ನಂತರ ಅದೇ ಲಯದೊಂದಿಗೆ ನಿಮ್ಮ ಹೆಸರನ್ನು ಪರಿಚಯಿಸಿ : "ನನ್ನ ಹೆಸರು _______–" (ಚಪ್ಪಾಳೆ |

DRAFT 22.02.22

| | | |
|---|---|---|
| | | ಜೊತೆಗೆ)<br>• ಮಗುವಿಗೆ ಅದೇ ಲಯದೊಂದಿಗೆ ಅವನ/ಅವಳ ಹೆಸರನ್ನು ಪರಿಚಯಿಸುವ ಮೂಲಕ ಅದೇ ರೀತಿ ಮಾಡಲು ಹೇಳಿ.<br>• ಪ್ರತಿ ಮಗುವು ಲಯವನ್ನುಕಾಯ್ದುಕೊಂಡು ಅವನ/ಅವಳ ಹೆಸರನ್ನು ಪರಿಚಯಿಸಲು ಅವಕಾಶ ನೀಡಿ. |
| | ನನ್ನ ಸಮಯ(Free Indoor play) ('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು) | **ಅನುಪಾಲನ ಸೂಚಿ:–**<br>* ಮಗು ತನ್ನ ಆದ್ಯತೆಯಂತೆ ಕಲಿಕಾ ಮೂಲೆಗೆ ಸಾಗಿ ನೀಡಲಾಗಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ಶಿಕ್ಷಕರು ಖಾತ್ರಿ ಪಡಿಸಿ ಕೊಳ್ಳುವುದು.<br>* ಅಗತ್ಯವಿರುವ ಕಡೆಗಳಲ್ಲಿ ಮಗುವಿಗೆ ಸೂಕ್ತ ಮಾರ್ಗದರ್ಶನ ನೀಡುವುದು.<br>* ಅಗತ್ಯ ಸಾಮಗ್ರಿಗಳ ಲಭ್ಯತೆ ಬಗ್ಗೆ ಗಮನ ಹರಿಸುವುದು.<br>* ದಿವ್ಯಾಂಗ ಮಕ್ಕಳಿಗೆ ಮೂಲೆಗಳಿಗೆ ಸಾಗುವಲ್ಲಿ ಹಾಗೂ ಚಟುವಟಿಕೆ ನಿರ್ವಹಣೆಯು ಸುಗಮವಾಗಿರುವಂತೆ ಕ್ರಮವಹಿಸುವುದು.<br>* ಚಟುವಟಿಕಾ ಸಾಮಗ್ರಿಗಳನ್ನು ಬಳಸುವಾಗ ಮಕ್ಕಳ ಸುರಕ್ಷತೆಯನ್ನು ಕಾಯ್ದುಕೊಳ್ಳುವುದು. (ಬಣ್ಣಗಳನ್ನು ಬ್ಲಾಕ್ ಗಳನ್ನು ಬಾಯಿಗೆ ಹಾಕಿಕೊಳ್ಳದಂತೆ.....ಎಸೆಯದಂತೆ ..ಇತ್ಯಾದಿ)<br>* ಮಗುವು ಹಿಂದಿನ ದಿನ ಅಪೂರ್ಣಗೊಳಿಸಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸುವ ಬಗ್ಗೆ ಮಾರ್ಗದರ್ಶನ ನೀಡುವುದು.<br>* ಮಕ್ಕಳ ಆಸಕ್ತಿ, ಸೃಜನಶೀಲತೆ ಬಗ್ಗೆ ಶಿಕ್ಷಕರು ಗಮನಹರಿಸಿ ಪ್ರಶಂಸಿಸಿ ಅಗತ್ಯವಿರುವಲ್ಲಿ ಪ್ರೇರಣೆ ಒದಗಿಸುವುದು.<br>* ಒದಗಿಸಲಾಗಿರುವ ಚಟುವಟಿಕೆ ಹಾಗೂ ಸಾಮಗ್ರಿಗಳನ್ನು ಬಳಸಿ ಮಗುವಿಗೆ ಕಲಿಕಾ ವೇದಿಕೆ ಒದಗಿಸಿರುವ ಬಗ್ಗೆ ಶಿಕ್ಷಕರು ಸ್ವಯಂ ಅವಲೋಕನ ಮಾಡಿಕೊಳ್ಳುವುದು.<br>* ಮಕ್ಕಳು ಸಂತಸದಿಂದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಪ್ರೇರೆಪಿಸುವುದು.<br>* ಮಗು ಪ್ರತಿದಿನವೂ ನಿರ್ದಿಷ್ಟ ಮೂಲೆಗೆ ಮಾತ್ರ ಸೀಮಿತವಾಗದಂತೆ ಹಾಗೂ ಎಲ್ಲಾ ಮೂಲೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಕಾಳಜಿ ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | **ಸಾಮರ್ಥ್ಯ : ಆಕೃತಿಯ ಪರಿಕಲ್ಪನೆ**<br>**ಚಟುವಟಿಕೆ–26 ಆಕೃತಿಗಳನ್ನು ಗುರುತಿಸು ಮತ್ತು ಹೆಸರಿಸು (ಗುರಿ–3)**<br>**ಉದ್ದೇಶ:–** ವಿವಿಧ ಆಕೃತಿಗಳನ್ನು ಗುರುತಿಸಿ ಹೆಸರಿಸುವುದು.<br>ಅಗತ್ಯ ಸಾಮಗ್ರಿಗಳು: ವಿವಿಧ ಆಕೃತಿಗಳು, ಢಪ್ಲಿ, ಆಡಿಯೋ ಪ್ಲೇಯರ್, ಟಿ.ವಿ<br>ವಿಧಾನ : ವಿವಿಧ ಆಕೃತಿಗಳನ್ನು ಪ್ರತಿ ಮಗುವಿಗೆ ನೀಡಿರಿ. ಆಕೃತಿಗಳ ಬಗ್ಗೆ ಒಂದು ಹಾಡು/ಪದ್ಯವನ್ನು ಹಾಕಿರಿ ಅಥವಾ ಹಾಡಿಸಿರಿ. ಮಕ್ಕಳು ಹಾಡು/ಪದ್ಯದಲ್ಲಿ ಬರುವ ಆಕೃತಿಗಳನ್ನು ತೋರಿಸುತ್ತಾ ಹಾಡನ್ನು ಪುನರಾವರ್ತಿಸಲಿ. ಪ್ರತಿ ಮಗು ಹಾಡುವಾಗ ಪ್ರಸ್ತಾಪವಾಗುವ ಆಕೃತಿಯನ್ನು ಮುಟ್ಟಿ ನೋಡಲು ಪ್ರೋತ್ಸಾಹಿಸಿ. ನಂತರ ಮಕ್ಕಳಿಗೆ ಯಾವುದಾದರೂ ಆಕೃತಿಯ ಬಗ್ಗೆ ಮಾತನಾಡಲು ಪ್ರೇರೇಪಿಸಿ.<br>ಗಣಿತ ಕಿಟ್‌ನಲ್ಲಿರುವ ಆಕೃತಿಗಳನ್ನು ಪರಿಚಯಿಸುವುದು.<br>ಗಣಿತ ಕಲಿಕಾ ಆಂದೋಲನದ ಆಕೃತಿಯ ಬಳಸಿ ಆಟ ಆಡಿಸುವುದು.<br>**ತರಗತಿ–2**<br>ತಾನು ನೋಡಿದ ವಿವಿಧ ಆಕೃತಿಯ ವಸ್ತುಗಳ ಹೆಸರನ್ನು ಹೇಳಿಸುವುದು.<br>ಉದಾ:– ರೊಟ್ಟಿ/ ತಟ್ಟೆ/ಸೂರ್ಯ/ಚಂದ್ರ–ವೃತ್ತ ಆಕೃತಿ, ಕಪ್ಪುಹಲಗೆ–ಆಯತ ಆಕೃತಿ, ಹಾಸುಗಲ್ಲು–ಚೌಕ ಆಕೃತಿ, ಗ್ಯಾಸ್ ಸಿಲಿಂಡರ್– ಸಿಲಿಂಡರ್ ಆಕೃತಿ, ಹುಟ್ಟುಹಬ್ಬದ ಕಾಗದದ ಟೋಪಿ– ಶಂಕು ಆಕೃತಿ ಇತ್ಯಾದಿ<br>**ತರಗತಿ–3**<br>1. ತನಗೆ ತಿಳಿದಿರುವ ಆಕೃತಿಗಳ ಹೆಸರು ಮತ್ತು ಅವುಗಳ ಬಗ್ಗೆ ಹೇಳಲು ಪ್ರೇರೆಪಿಸುವುದು.<br>2. ತನಗೆ ಗೊತ್ತಿರುವ ಆಕೃತಿಯನ್ನು ಬಿಡಿಸಲು ಹೇಳುವುದು.<br><br>* ಬಳಸಬೇಕಾದ ಅಭ್ಯಾಸ ಹಾಳೆಗಳು: I.L-2 & 3 ( 01, 02,03ನೇ ತರಗತಿ) |

DRAFT 2022

| | | | |
|---|---|---|---|
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ : ಸ್ವಯಂ ಮತ್ತು ಇತರರ ಬಗ್ಗೆ ಅರಿವು, ಮೌಖಿಕ ಭಾಷಾ ವಿಕಾಸ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ – 02 ಅಭಿನಯ ಗೀತೆಗಳು/ನಾಟಕಗಳು ಗುರಿ – 1<br>ಉದ್ದೇಶ;<br>• ಶಾರೀರಿಕ ಬೆಳವಣಿಗೆಯ ವಿಕಾಸ ಹೊಂದುತ್ತಾರೆ.<br>• ಪದಸಂಪತ್ತು ಹೆಚ್ಚುವುದರೊಂದಿಗೆ ಪ್ರಾಸ, ಲಯ, ಸಂದರ್ಭ ಹಾಗೂ ಸ್ಪಷ್ಟ ಉಚ್ಚಾರಣೆ ಮಾಡುತ್ತಾರೆ.<br>• ಆಂಗಿಕ ಭಾವನೆಗಳನ್ನು ಗುರ್ತಿಸುತ್ತಾರೆ.<br><br>**ಸಾಮಗ್ರಿಗಳು** : ಹಾಡು (ಡಿಂಗಿ ಟಕ ಹಾಡು)<br>ಡಿಂಗಿ ಟಕ ಡಿಂಗಿ ಟಕ ಡಿಂಗಿ ಟಕ ಡಿಂಗ್<br>ಅರೇ ಡಿಂಗಿ ಟಕ ಡಿಂಗಿ ಟಕ ಡಿಂಗಿ ಟಕ ಡಿಂಗ್.<br>ನಾನು ನೋಡುವೆ ಕಣ್ಣಳಿಂದಲೇ[ಡಿಂಗಿ ಟಕ]<br>ನಾನು ಕೇಳುವೆ ಕಿವಿಗಳಿಂದಲೇ[ಡಿಂಗಿ ಟಕ]<br>ವಾಸನೆ ಗ್ರಹಿಸುವೆ ಮೂಗಿನಿಂದಲೇ[ಡಿಂಗಿ ಟಕ]<br>ರುಚಿಯ ತಿಳಿಯುವೇ ನಾಲಿಗೆಯಿಂದಲೇ[ಡಿಂಗಿ ಟಕ]<br>ಸ್ಪರ್ಶ ತಿಳಿಯುವೆ ಚರ್ಮದಿಂದಲೇ[ಡಿಂಗಿ ಟಕ]<br>ವಿಧಾನ : ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು. ಸುಗಮಕಾರರು ತಾಳಬದ್ಧ ಚಟುವಟಿಕೆಗಳನ್ನು ನಡೆಸಲು ಮಕ್ಕಳಿಗೆ ಅವಕಾಶ ಕಲ್ಪಿಸುವುದು. ಶಿಶುಗೀತೆಗಳು, ಅಭಿನಯ ಗೀತೆಗಳು, ಹಾಡುಗಳಿಗೆ ಪರಿಕರಗಳನ್ನು ಉಪಯೋಗಿಸಿ ಅಥವಾ ಆಂಗಿಕ ಚಲನವಲನಗಳಿಂದ ಹಾಡಿಸುವುದು. ಉದಾಹರಣೆಗೆ ದೇಹದ ಅಂಗಾಂಗಗಳನ್ನು ಪರಿಚಯಿಸಲು ಕಣ್ಣು, ಮೂಗು, ನಾಲಿಗೆ, ಚರ್ಮ ಮತ್ತು ಕಿವಿಗಳನ್ನು ತೋರಿಸುತ್ತ ಅಭಿನಯ ಗೀತೆಯನ್ನು ಹಾಡಿಸುವುದು.<br>ವಿವರ; 2 ಮತ್ತು 3 ನೇ ತರಗತಿಗೆ ಅಭಿನಯ ಗೀತೆಯನ್ನು ಹಾಡಿಸಿದ ನಂತರ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>* **ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-1 ( 01, 02,03ನೇ ತರಗತಿ)** |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | **ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಪದ ಸಂಪತ್ತಿನ ಅಭಿವೃದ್ಧಿ, ಚಾಲನಾ ಕೌಶಲಗಳ ಅಭಿವೃದ್ಧಿ.**<br>**ಚಟುವಟಿಕೆ: 15 ಪ್ರಾಸ ಪದಗಳನ್ನು ಆಲಿಸುವುದು (ಗುರಿ–02) ECL-4**<br>**ಉದ್ದೇಶಗಳು:**<br>* **ಧ್ವನಿ ವಿಜ್ಞಾನದ ಅರಿವನ್ನು ಹೊಂದುವಂತೆ ಮಾಡುವುದು.**<br>* **ಪ್ರಾಸಪದಗಳ ಮೂಲಕ ಪದಸಂಪತ್ತನ್ನು ಹೆಚ್ಚಿಸುವುದು.**<br>* **ಸ್ಥೂಲ ಹಾಗೂ ಸೂಕ್ಷ್ಮ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.**<br>ಅಗತ್ಯ ಸಾಮಗ್ರಿಗಳು:– ಇಲ್ಲ<br>**ವಿಧಾನ:**<br>* **ಮಕ್ಕಳಿಗೆ ಪರಿಚಿತವಿರುವ ಶಿಶು ಪ್ರಾಸಗಳನ್ನು ಆರಿಸಿಕೊಳ್ಳುವುದು**<br>* **ಹಾಡು ಹೇಳುವಾಗ ಪ್ರಾಸ ಪದಗಳನ್ನು ಸ್ವಲ್ಪ ಒತ್ತಿ ಹೇಳುವುದು.**<br>* **ಪ್ರಾಸ ಗೀತೆಗೆ ತಕ್ಕಂತೆ ಅಭಿನಯಿಸಲು ತಿಳಿಸುವುದು.**<br>**ತರಗತಿವಾರು ವಿವರ: 2 ಹಾಗೂ 3 ನೇ ತರಗತಿ ಮಕ್ಕಳು ಶಿಕ್ಷಕರನ್ನು ಅನುಕರಿಸುತ್ತಾ ರಾಗಬದ್ಧವಾಗಿ ಅಭಿನಯದೊಂದಿಗೆ ಹಾಡುವುದು. (8 ನೇ ದಿನಕ್ಕೆ ಮುಂದುವರೆದಿದೆ)** |
| | | **ಅರ್ಥಗ್ರಹಿಕೆಯೊಂದಿಗಿನ ಓದು** | ಸಾಮರ್ಥ್ಯ: ಪದ ಸಂಪತ್ತಿನ ಅಭಿವೃದ್ಧಿ, ಸ್ವಯಂ ಅಭಿವ್ಯಕ್ತಿ, ನಟನಾ ಓದು.<br>ಚಟುವಟಿಕೆ 1: ಚಿತ್ರ ಓದು (ಗುರಿ–2)<br>ಉದ್ದೇಶ: ವಿವಿಧ ಘಟನೆ/ಸನ್ನಿವೇಶಗಳ ಚಿತ್ರಗಳನ್ನು ನೋಡುವುದರ ಮೂಲಕ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಏನು? ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವರು<br>ಅಗತ್ಯ ಸಾಮಾಗ್ರಿಗಳು: ವಿವಿಧ ಘಟನೆ/ ಸ್ಥಳ/ ಜಾತ್ರೆ/ ಮೇಳಗಳ ಚಿತ್ರಗಳು/ ಉದ್ಯಾನವನ/ ಪೇಟೆ/ ಶಾಲೆ/ ಪ್ರಾಣಿ |

| | | | |
|---|---|---|---|
| | | | ಸಂಗ್ರಹಾಲಯ/ ಹಬ್ಬ / ಜಾತ್ರೆಯ ಇತ್ಯಾದಿಗಳ ಚಿತ್ರಗಳು<br>ವಿಧಾನ: ದಿನ 2ರ ಚಿತ್ರ ಓದು ಚಟುವಟಿಕೆ ಮುಂದುವರೆಸುತ್ತಾ ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಹಿಂದೆ ಬಳಸಿರುವ ಸನ್ನಿವೇಶ ಚಿತ್ರವನ್ನು ನೀಡುವುದು. ಮಕ್ಕಳು ಚಿತ್ರವನ್ನು ನೋಡಿ ಘಟನೆಯನ್ನು ಅರ್ಥೈಸಿಕೊಳ್ಳುವುರು ನಂತರ ಶಿಕ್ಷಕರು ಮಕ್ಕಳು ಸುತ್ತಲಿನ ಪರಿಸರಕ್ಕೆ ಹೊಂದಾಣಿಕೆಯಾಗುವಂತೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>ಶಿಕ್ಷಕರು ಸನ್ನಿವೇಶದ ಚಿತ್ರ ತೋರಿಸಿ ಅದರ ಬಗ್ಗೆ ಈ ರೀತಿಯ ಪ್ರಶ್ನೆಗಳನ್ನು ಕೇಳಬಹುದು.<br>*. ನೀವು ಎಂದಾದರು ಇಂತಹ ಸ್ಥಳಕ್ಕೆ ಹೋಗಿದ್ದೀರಾ?<br>* ಈ ಸನ್ನಿವೇಶವು ನಿಮಗೆ ಏನನ್ನು ನೆನಪಿಸುತ್ತಿದೆ?<br>* ಈ ಚಿತ್ರದಲ್ಲಿ ಇರುವ ಜನರು ಏನು ಆಡುತ್ತಿದದಾರೆ?<br>* ಈ ಸನ್ನಿವೇಶದಲ್ಲಿ ಜನರು ಏನು ಮಾಡುತ್ತಿದ್ದಾರೆ? ಇತ್ಯಾದಿ<br>2ಮತ್ತು 3ನೇ ತರಗತಿಗೆ: ಶಿಕ್ಷಕರು ಸನ್ನಿವೇಶದ ಕುರಿತು ತಾರ್ಕಿಕ ಪ್ರಶ್ನೆಗಳನ್ನು ಕೇಳುವುದರ ಮೂಲಕ ಸ್ವತಂತ್ರ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು<br>ವಿಶೇಷ ಸೂಚನೆ: ಇದೆ ಚಟುವಟಿಕೆಯನ್ನು 2ನೇ ವಾರದ 8ನೇ ದಿನದಂದು ಮುಂದುವರೆದಿದೆ |
| | | ಉದ್ದೇಶಿತ ಬರಹ | **ಸಾಮರ್ಥ್ಯ: ಸಣ್ಣ ಸ್ನಾಯುಗಳ ಚಲನೆ ಮತ್ತು ಸೃಜನಾತ್ಮಕ ಅಭಿವ್ಯಕ್ತಿ.**<br>**ಚಟುವಟಿಕೆ: 51 ಚುಕ್ಕಿ ಸೇರಿಸಿ ಬಣ್ಣ ಹಾಕು (ಗುರಿ 01) ECW-4**<br>**ಉದ್ದೇಶಗಳು:**<br>*** ಸೂಕ್ಷ್ಮ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.**<br>*** ಮಕ್ಕಳ ಸೃಜನಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.**<br>**ಸಾಮಗ್ರಿ: ಕ್ರಯಾನ್ಸ್, ಬಣ್ಣದ ಪೆನ್ಸಿಲ್, ಚಾಕ್ಪೀಸ್**<br>**ವಿಧಾನ: ಸ್ಲೇಟ್ ಅಥವಾ ಹಾಳೆಯ ಮೇಲೆ ಚುಕ್ಕಿಗಳಿಂದ ವಿವಿಧ ಆಕಾರಗಳನ್ನು ಬಿಡಿಸುವುದು. ಮಕ್ಕಳಿಗೆ ಈ ಚುಕ್ಕಿಗಳನ್ನು ಜೋಡಿಸಿ ಆ ಚಿತ್ರಕ್ಕೆ ಬಣ್ಣ ತುಂಬಲು ಹೇಳುವುದು.**<br>**ತರಗತಿವಾರು ವಿವರ: 2 ಹಾಗೂ 3ನೇ ತರಗತಿಯ ವಿದ್ಯಾರ್ಥಿಗಳು ವಿವಿಧ ಆಕಾರಗಳ ಚುಕ್ಕಿಗಳನ್ನು ಮೂಡಿಸಿಕೊಡುವಂತೆ ತಿಳಿಸಿ 1ನೇ ತರಗತಿ ಮಕ್ಕಳು ಅವುಗಳನ್ನು ಸೇರಿಸಿ, ಚಿತ್ರ ಪೂರ್ಣಗೊಳಿಸಿ ಸೂಕ್ತ ಬಣ್ಣಗಳನ್ನು ತುಂಬುವಂತೆ ಮಾಡುವುದು. ಹಿರಿಯ ತರಗತಿಯ ಮಕ್ಕಳ ಸಹಕಾರದೊಂದಿಗೆ ಗುಂಪು ಚಟುವಟಿಕೆಯನ್ನು ಆಯೋಜಿಸುವುದು.** |
| | **ಹೊರಾಂಗಣ ಆಟಗಳು** | ಚಟುವಟಿಕೆ: ಕೆರೆ ದಡ<br>ಸಾಮರ್ಥ್ಯ : ಏಕಾಗ್ರತೆ ಬೆಳೆಸಲು , ಆಲಿಸುವ ಕೌಶಲ್ಯ ಬೆಳೆಸಲು , ದೇಹದ ಸಮತೋಲನ ಅಭಿವೃದ್ಧಿಪಡಿಸಲು .<br>ಸಾಮಗ್ರಿ : ಕಡ್ಡಿ<br>ವಿಧಾನ:<br>• ಮಕ್ಕಳ ಸಂಖ್ಯೆಗೆ ಅನುಗುಣವಾಗಿ ದೊಡ್ಡ ವ್ರತವನ್ನು ಕಡ್ಡಿಯ ಸಹಾಯದಿಂದ ಬರೆಯುವುದು .<br>• ಮಕ್ಕಳನ್ನು ವೃತ್ತದ ಗೆರೆಯ ಹೊರಭಾಗದಲ್ಲಿ ನಿಲ್ಲಿಸುವುದು .<br>• ಶಿಕ್ಷಕರು ಕೆರೆ ದಡ ಎಂಬ ಸೂಚನೆಯನ್ನು ಅನುಸರಿಸಿ ಮಕ್ಕಳಿಗೆ ಆಡಲು ತಿಳಿಸುವುದು.<br>• ಸೂಚನೆಯನ್ನು ಪಾಲಿಸದವರು ಆಟದಿಂದ ಹೊರಗುಳಿಯುವರು.<br>**ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೂ ಈ ಆಟವನ್ನೇ ಮುಂದುವರೆಸಿ ಆಡಿಸುವುದು.** | |
| | **ಕಥಾ ಸಮಯ** | **ಶೀರ್ಷಿಕೆ :** ಸಿಂಹ ಮತ್ತು ಇಲಿ<br>**ಸಾಮಗ್ರಿಗಳು** :ಸಂಭಾಷಣೆಇರುವ ಮಿಂಚುಪಟ್ಟಿಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು. | |

DRAFT 22.02.22

| | | |
|---|---|---|
| | | ➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>➢ ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವ ಆಸಕ್ತಿಯನ್ನು ಬೆಳೆಸುವುದು.<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ **ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು.**<br>➢ **ನಿರರ್ಗಳವಾಗಿ ಮಾತನಾಡುವ ಕೌಶಲವನ್ನುರೂಢಿಸುವುದು.**<br>**ವಿಧಾನ :**<br>**ಪಾತ್ರಾಭಿನಯ**<br>➢ ಶಿಕ್ಷಕರು ಕಥೆಯನ್ನು ಪುನರಾವಲೋಕನ ಮಾಡುವುದು.<br>➢ ಕಥೆಯ ನಿರೂಪಣೆಯನ್ನುಮಾಡಲುಎರಡು ಮತ್ತು ಮೂರನೇತರಗತಿಯ ಮಕ್ಕಳಿಗೆ ಸಹಕರಿಸುವುದು.<br>➢ ಮಿಂಚುಪಟ್ಟಿಗಳನ್ನು ನೀಡಿ, ಪಾತ್ರಗಳ ಸಂಭಾಷಣೆಯನ್ನುಹೇಳಿಸುವುದು.<br>➢ ಮಕ್ಕಳು ತಪ್ಪಾಗಿ ಹೇಳಿದರೂ ಸಕಾರಾತ್ಮಕವಾಗಿ ಸ್ವೀಕರಿಸಿ ಆ ನಂತರ ಸರಿಪಡಿಸಿಕಥೆಯನ್ನು ಮುಂದುವರೆಸಲುಹೇಳುವುದು. |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>"ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

**ವಾರ–1** **ದಿನ–5**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 5 | **ಶುಭಾಶಯ ವಿನಿಮಯ** | ದಿನ–4 ರಲ್ಲಿ ಉಲ್ಲೇಖಿಸಲಾದ ಶುಭಾಶಯ ವಿನಿಮಯ ಚಟುವಟಿಕೆಯನ್ನು ಪುನರಾವರ್ತಿಸಿ. |
| | **ಮಾತು ಕತೆ** | ದಿನ –4 ರ ಮಾತುಕತೆ ಚಟುವಟಿಕೆಯನ್ನು ಮಾಡಿಸಿ |
| | **ನನ್ನ ಸಮಯ(Free Indore play)** | ದಿನ – 5<br>ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ವಿಂಗಡಣೆ, ಪರಿಸರದ ಅರಿವು.**<br>**ಚಟುವಟಿಕೆ. : 17 ಗುಂಪು ಮಾಡುವುದು. (ಗುರಿ–3)**<br>**ಉದ್ದೇಶ:–ವಸ್ತುವಿನ ಭೌತಿಕ ಲಕ್ಷಣಗಳನ್ನು ಆಧರಿಸಿ ವಿಂಗಡಿಸುವುದು.**<br>**ಅಗತ್ಯ ಸಾಮಗ್ರಿಗಳು : ವಿವಿಧ ತರಹದ ಬ್ಲಾಕ್‌ಗಳು, ಗುಂಡಿಗಳು, ಗೋಲಿಗಳು, ಬೀಜಗಳು, ರಿಂಗ್ಸ್, ಆಟಿಕೆಗಳು/ ಗಣಿತ ಕಲಿಕಾ ಆಂದೋಲನದ ಕಿಟ್**<br>**ವಿಧಾನ : ವಸ್ತುವಿನ ಭೌತಿಕ ಲಕ್ಷಣಗಳನ್ನು ಆಧರಿಸಿ ಹೋಲಿಕೆ ಮಾಡಿ ಅದಕ್ಕೆ ಅನುಗುಣವಾಗಿ ವಸ್ತುಗಳನ್ನು ಗುಂಪುಗಳಾಗಿ ವಿಂಗಡಿಸಿ, ಅವುಗಳ ವ್ಯತ್ಯಾಸಗಳನ್ನು ಗಮನಿಸುವುದು.**<br>**ಉದಾ: ವಿವಿಧ ತರಹದ ಬ್ಲಾಕ್‌ಗಳು, ಗುಂಡಿಗಳು, ಗೋಲಿಗಳು, ಬೀಜಗಳು, ರಿಂಗ್ಸ್, ಆಟಿಕೆಗಳು.ಇವುಗಳನ್ನು ಆಕಾರ, ಗಾತ್ರ, ಬಣ್ಣ ಆಧಾರದ ಮೇಲೆ ಗುಂಪುಗಳಾಗಿ ವಿಂಗಡಿಸುವುದು.**<br>**ಈ ಪ್ರಕ್ರಿಯೆಯ ಅನುಭವ ಪಡೆದ ನಂತರ ಯಾವ ಲಕ್ಷಣಗಳ ಆಧಾರದ ಮೇಲೆ ವಿಂಗಡಿಸಲಾಗಿದೆ ಎಂದು ತಿಳಿಸಲಿ.**<br>**ತರಗತಿ–2** |

DRAFT 22.02.22

| | | | |
|---|---|---|---|
| | | | 1. ಶಾಲೆಯಲ್ಲಿ ಲಭ್ಯವಿರುವ ವಿವಿಧ ವಸ್ತು ಮತ್ತು ಆಟೋಪಕರಣಗಳನ್ನು ಗಾತ್ರ, ಆಕಾರ ಮತ್ತು ಬಣ್ಣಗಳ ಆಧಾರದ ಮೇಲೆ ವಿಂಗಡಿಸಲು ಹೇಳುವುದು.<br>2. ವಸ್ತುಗಳನ್ನು ಯಾವ ಆಧಾರದ ಮೇಲೆ ವಿಂಗಡಿಸಿದಿರಿ ?<br>**ತರಗತಿ–3**<br>**ಬಾಲ್, ರಿಂಗ, ಹುಣಸೆಬೀಜ, ಗೋಲಿ, ಮಣಿಗಳು ಇತ್ಯಾದಿ ವಸ್ತುಗಳನ್ನು ತೋರಿಸಿ ಅವುಗಳ ಹೆಸರು ಮತ್ತು ಅವುಗಳ ಗುಣಲಕ್ಷಣಗಳ ಬಗ್ಗೆ ಹೇಳಿಸುವುದು.**<br><br>* **ಬಳಸಬೇಕಾದ ಅಭ್ಯಾಸ ಹಾಳೆಗಳು: I.L-4 ( 01, 02,03ನೇ ತರಗತಿ)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.<br>ಚಟುವಟಿಕೆ – 35 ಕ್ಲೇ/ಮಣ್ಣು ಅಥವಾ ಹಿಟ್ಟಿನಿಂದ ಅಚ್ಚು ತೆಗೆಯುವುದು. ಗುರಿ–1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ದಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ತಮ್ಮ ಕಲ್ಪನೆಯ ಆಕೃತಿ ಮೂಡಿಸುವುದರ ಜೊತೆಗೆ ಸೃಜನ ಶೀಲತೆಯನ್ನು ಅಭಿವ್ಯಕ್ತಗೊಳಿಸಲು ಸಹಕಾರಿಯಾಗುತ್ತದೆ.<br>ಸಾಮಗ್ರಿಗಳು : ಕ್ಲೇ ಅಥವಾ ಕಲಸಿದ ಹಿಟ್ಟು.<br>ವಿಧಾನ : ಮಕ್ಕಳಿಗೆ ಕ್ಲೇ/ಮಣ್ಣು ಅಥವಾ ಕಲಸಿದ ಹಿಟ್ಟನ್ನು ನೀಡಿ ಅದರೊಂದಿಗೆ ತಮ್ಮ ಆಯ್ಕೆಯ ಮಾದರಿಗಳನ್ನು ಮಾಡಲು ಹೇಳುವುದು. ಹಬ್ಬಗಳಿಗೆ ಸಂಭಂದಿಸಿದಂತೆ ದೀಪಾ ಇತ್ಯಾದಿ ಮಾದರಿಗಳನ್ನು ಮಾಡಲು ಹೇಳಿ ನಂತರ ಬಣ್ಣ ತುಂಬಲು ಹೇಳುವುದು.ಮಕ್ಕಳು ಕ್ಲೇ ಅಥವಾ ಹಿಟ್ಟಿನಲ್ಲಿ ಮಾದರಿಗಳನ್ನು ತಯಾರಿಸುವಾಗ ಸುಗಮಕಾರರು ಗಮನಿಸುತ್ತಿರಬೇಕು. ಚಟುವಟಿಕೆ ಮುಗಿದ ಮೇಲೆ ಮಕ್ಕಳು ತಯಾರಿಸಿದ ಮಾದರಿಯನ್ನು ವಿವರಿಸಲು ಹೇಳುವುದು. ಸುಗಮಕಾರರು ಮಕ್ಕಳಿಗೆ ವಿವಿಧ ಮಾದರಿಗಳನ್ನು ತಯಾರಿಸಲು ಸಣ್ಣ ಮೊಂಡಾದ ಪ್ಲಾಸ್ಟಿಕ್ ಚಾಕು , ಅಚ್ಚುಗಳು ಮತ್ತು ರೋಲಿಂಗ್ ಪಿನ್ನುಗಳು ಅಥವಾ ಮರದ ಚಿಗುರುಗಳು , ಹೂಗಳು, ಬಣ್ಣ ಮುಂತಾದ ಇತರ ಪರಿಕರಗಳನ್ನು ಒದಗಿಸಬಹುದು. ಮಾದರಿಗಳನ್ನು ವೈವಿಧ್ಯಮಯವಾಗಿ ಮಾಡಲು ಬೀಜಗಳು, ಚಿತ್ರಗಳು, ಕಲ್ಲುಗಳು, ಚಿಪ್ಪುಗಳು ಇತ್ಯಾದಿಗಳನ್ನು ಒದಗಿಸುವುದು.ಚಟುವಟಿಕೆಯ ನಂತರ ಮಕ್ಕಳು ತಮ್ಮ ಕೈಗಳನ್ನು ತೊಳೆದುಕೊಳ್ಳುವಂತೆ ನೋಡಿಕೊಳ್ಳುವುದು.<br>ವಿವರ; 2 ಮತ್ತು 3 ನೇ ತರಗತಿಗೆ ವಿಷಯ [ ಹಬ್ಬ, ಸಮಾರಂಭ, ಅಡುಗೆ ಮನೆಯ ಪರಿಕರಗಳು] ವನ್ನು ನೀಡಿ ಅದಕ್ಕೆ ತಕ್ಕಹಾಗೆ ಮಾದರಿಗಳನ್ನು ತಯಾರಿಸಲು ಪ್ರೋತ್ಸಾಹ ನೀಡುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಗಮನವಿಟ್ಟು ಕೇಳುವುದು, ಸೃಜನಾತ್ಮಕ ಆಲೋಚನೆ, ಪರಿಸರ ಜಾಗೃತಿ ಮೂಡಿಸುವುದು.**<br>**ಚಟುವಟಿಕೆ: 5 ಪದ ಊಹಿಸು (ಗುರಿ–2) ECL-5**<br>**ಉದ್ದೇಶ:**<br>* **ಪ್ರಶ್ನೆಗಳನ್ನು ಕೇಳುವ ಮೂಲಕ ಮಕ್ಕಳಲ್ಲಿ ಆಲಿಸುವ ಸಾಮರ್ಥ್ಯ ಹೆಚ್ಚಿಸುವುದು.**<br>* **ಸೃಜನಶೀಲ ಆಲೋಚನೆಯ ಮೂಲಕ ಮಾತನಾಡಲು ಅವಕಾಶ ಕಲ್ಪಿಸುವುದು.**<br>* **ತಮ್ಮ ಸುತ್ತಲಿನ ಪರಿಸರದ ಬಗೆಗಿನ ಅರಿವನ್ನು ಪಡೆದು ಕೊಳ್ಳುವುದು.**<br>**ವಿಧಾನ: ಮಕ್ಕಳನ್ನು ವೃತ್ತಾಕಾರದಲ್ಲಿ ಕೂಡಿಸುವುದು.**<br>**ಹೌದು/ ಇಲ್ಲ ಎನ್ನುವ ಪ್ರಶ್ನೆಗಳನ್ನು ಕೇಳುವುದರ ಮೂಲಕ ಊಹಿಸಿದ ಪದವನ್ನು ಕಂಡುಹಿಡಿಯುವುದು ಹೇಗೆ ಎನ್ನುವುದನ್ನು ತೋರಿಸಿಕೊಡುವುದು.**<br>**ಉದಾ: ಮಕ್ಕಳಿಗೆ ಊಹೆ ಮಾಡಿ ಹೇಳುವಂತೆ ಪ್ರೇರೇಪಿಸುವುದು. ಇದು ಮಾವಿನ ಹಣ್ಣು ಎಂದು ಊಹಿಸುವುದು. ಈ ರೀತಿಯ ಪ್ರಶ್ನೆಗಳನ್ನು ಕೇಳಲು ಪ್ರೇರೇಪಿಸುವುದು. ಶಿಕ್ಷಕರು ಮಾವಿನ ಹಣ್ಣು ಎನ್ನುವ ಪದವನ್ನು ಊಹಿಸಿ ಮಕ್ಕಳು ಹೌದು/ಇಲ್ಲ ಎಂಬ ಪ್ರಶ್ನೆಗಳನ್ನು ಕೇಳುವ ಮೂಲಕ ಉತ್ತರವನ್ನು ಪತ್ತೆ ಹಚ್ಚಲು ಹೇಳುವುದು.**<br>**ಉದಾಹರಣೆಗಾಗಿ • ಇದು ಒಂದು ವಸ್ತುವೇ? ಹಣ್ಣೇ? ತರಕಾರಿಯೇ? ಪ್ರಾಣಿಯೇ? ವ್ಯಕ್ತಿಯೇ?** |

DRAFT 2022

| | | | |
|---|---|---|---|
| | | | • ಇದು ಚಲಿಸುವುದೇ?<br>• ಇದು ತರಗತಿಯಲ್ಲಿ ಇದೆಯೇ?<br>• ಉದ್ಯಾನವನದಲ್ಲಿ ಸಿಗುತ್ತದೆಯೇ?<br>. ಮಕ್ಕಳಿಗೆ ಈ ಚಟುವಟಿಕೆ ಪರಿಚಿತವಾದ ನಂತರ ಇದೇ ರೀತಿ ಸರಿಯಾದ ಉತ್ತರ ಊಹಿಸುವವರೆಗೂ ಪ್ರಶ್ನೆಗಳನ್ನು ಕೇಳಲು ಪ್ರೇರೇಪಿಸುವುದು.<br>ತರಗತಿವಾರು ವಿವರ: 2 ನೇ ತರಗತಿ ಮಕ್ಕಳು ಪ್ರಶ್ನೆಗಳನ್ನು ಕೇಳುವುದು. 3 ನೇ ತರಗತಿಯ ಮಕ್ಕಳು ತಾವು ಉತ್ತರ ಪಡೆಯಲೆತ್ನಿಸಿದ ಪದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸಿದ್ಧಪಡಿಸಿ ಕೇಳಿ ಉತ್ತರ ಪಡೆಯುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>**ಚಟುವಟಿಕೆ....18**<br>• ಚಿತ್ರ ಸಂಪುಟ (ಗುರಿ–2) ವಿಷಯ: 'ಉದ್ಯಾನದಲ್ಲಿ ನೀವು ನೋಡಿರುವ ವಸ್ತುಗಳು/ವಿಷಯಗಳು',<br>ಉದ್ದೇಶ:<br>• ಮಕ್ಕಳು ಚಿತ್ರ ಓದುವುದು ಮತ್ತು ಚರ್ಚಿಸಿ ಅರ್ಥ ಮಾಡಿಕೊಳ್ಳುವುದು ಮತ್ತು ವೈಯಕ್ತಿಕಚಿತ್ರ ಸಂಪುಟಗಳನ್ನು ರಚಿಸುವರು.<br>• ಅನುಭವ ಮತ್ತು ಪೂರ್ವಜ್ಞಾನದ ಆಧಾರದ ಮೇಲೆ ಊಹಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ, ಕ್ರೇಯಾನ್ಸ್, ಅಂಟು, ಉದ್ಯಾನವನಕ್ಕೆ ಸಂಬಂಧಿಸಿದ ಚಿತ್ರಗಳು, ಉದ್ಯಾನವನದಲ್ಲಿ ನೋಡಬಹುದಾದ ವಿಷಯವಸ್ತುಗಳ ಕುರಿತ ಕಥನ/ಕವಿತೆ/ಹಾಡುಗಳ ಪಟ್ಟಿ.<br>ವಿಧಾನ : ಮಕ್ಕಳಿಗೆ ಪರಿಚಿತವಿರುವ ಹಾಡು ಮತ್ತು ಶಿಶುಗೀತೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಗುರುತಿಸುವುದು.<br>* ಹಾಡು/ಕಥೆಯಲ್ಲಿರುವ ವಿಶೇಷ ಪದಗಳನ್ನು ಗುರುತಿಸಿ ಹೇಳುವರು. ಶಿಕ್ಷಕರು ಮಕ್ಕಳು ಗ್ರಹಿಸಿ ಹೇಳಿದ ಪದಗಳನ್ನು ಕಪ್ಪುಹಲಗೆಯ ಮೇಲೆ ಬರೆಯುವುದು ಆ ಪದಗಳ ಕುರಿತು ಚರ್ಚಿಸುವರು ಹಾಗೂ ಆಯಾ ಪರಿಚಿತ ಪದಗಳ ಆಧಾರದಲ್ಲಿ ಪದಜಾಲಗಳನ್ನು ಕಪ್ಪುಹಲಗೆ ಅಥವಾ ಚಾರ್ಟಗಳಲ್ಲಿ ಬರೆದು ಚರ್ಚಿಸುವರು.<br>*ಮಕ್ಕಳಿಗೆ ಹಾಳೆ ಕ್ರೇಯಾನ್ಸ್ಇನಿತರ ಸಾಮಗ್ರಿಗಳನ್ನು ನೀಡಿ ಉದ್ಯಾನವನದ ಚಿತ್ರ ನೋಡಿ ಅಥವಾ ಉದ್ಯಾನವನದಲ್ಲಿ ಈ ಹಿಂದಿನ ಅನುಭವದ ಮೇಲೆ ಮಕ್ಕಳು ಚಿತ್ರಗಳನ್ನು ಬರೆಯಲು ಮತ್ತು ಬಣ್ಣ ಹಚ್ಚಲು ಅವಕಾಶ ನಿಡುವುದು.<br>ವೈಯಕ್ತಿಕ ಚಿತ್ರ ಸಂಪುಟ.–ಮಕ್ಕಳು ರಚಿಸಿದ ಚಿತ್ರಗಳನ್ನು ತಮ್ಮ ಕೃತಿ ಸಂಪುಟದಲ್ಲಿ ಸಂಗ್ರಹಿಸಲು ತಿಳಿಸುವುದು ಮತ್ತು ಅವುಗಳನ್ನು ಮುಂದಿನ 6ನೇ ದಿನದಲ್ಲಿ ಚರ್ಚಿಸುವುದಾಗಿ ತಿಳಿಸುವುದು.<br>ಉದಾ..ಹೂಗಳು, ಮರಗಳು, ಪಕ್ಷಿಗಳು ಮಕ್ಕಳ ಆಟಿಕೆಯ ಸಾಮಗ್ರಿಗಳು, ಕುಳಿತುಕೊಳ್ಳುವ ಆಸನಗಳು ಇತ್ಯಾದಿ.. ಚಿತ್ರಗಳು/ವಿಡಿಯೋಗಳು/ಕ್ಷೇತ್ರಭೇಟಿಯ ಅನುಭವದ ಆಧಾರದ ಮೇಲೆ ಮಕ್ಕಳು ವೈಯಕ್ತಿಕವಾಗಿ ಚಿತ್ರಬರೆಯಲು ಅವಕಾಶವಿರುವಂತೆ ನೋಡಿಕೊಳ್ಳುವುದು.<br>ಉದ್ಯಾನವನಕ್ಕೆ ಸಂಬಂಧಿಸಿದ ಚಿತ್ರಗಳನ್ನು/ಚಿತ್ರಪಟಗಳನ್ನು/ವಿಡಿಯೋ/ಹಾಡು/ಕಥೆಗಳನ್ನೂ ಬಳಸಿ ಅಥವಾ ಪ್ರದರ್ಶಿಸಿ ಮಕ್ಕಳೊಂದಿಗೆ ಚರ್ಚಿಸಬಹುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಸಹಾಯ ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು. ಜೊತೆಗೆ 2ನೇ ಮತ್ತು 3ನೇ ತರಗತಿಯ ಮಕ್ಕಳಿಗೂ ಸ್ವತಂತ್ರವಾಗಿ ಚಿತ್ರಬರೆಯಲು ಮತ್ತು ಬಣ್ಣಹಾಕಲು ಅವಕಾಶ ನೀಡಿ ಅವರೂ ಸಹ ತಮ್ಮ ಕೃತಿಸಂಪುಟಗಳಲ್ಲಿ ಸಂಗ್ರಹಿಸಲು ಅವಕಾಶ ನೀಡುವುದು.<br>*(ಸದರಿ ಚಟುವಟಿಕೆಯ ಮುಂದುವರೆದ ಭಾಗವು 7 ನೇ ದಿನದಲ್ಲಿ ಮುಂದುವರೆಯುವುದು)* |
| | | ಉದ್ದೇಶಿತ ಬರಹ | ಸಾಮರ್ಥ್ಯ: ಕೈ–ಕಣ್ಣುಗಳ ನಡುವೆ ಹೊಂದಾಣಿಕೆ<br>ಚಟುವಟಿಕೆ 52 : ಚಿತ್ರ ರಚಿಸಿ. (ಗುರಿ 01) **ECW-5**<br>ಉದ್ದೇಶಗಳು:<br>• ಸೂಕ್ಷ್ಮ ಚಾಲನಾ ಕೌಶಲಗಳನ್ನು ಬೆಳೆಸುವುದು.<br>• ಕಣ್ಣು–ಕೈಗಳ ಸಮನ್ವಯವನ್ನು ಅಭಿವೃದ್ಧಿಪಡಿಸುವುದು.<br>ಸಾಮಗ್ರಿಗಳು: ಕಪ್ಪು ಹಲಗೆ/ ಸ್ಲೇಟು, ಸೀಮೆಸುಣ್ಣ |

DRAFT 2022

| | | |
|---|---|---|
| | | **ವಿಧಾನ: ಮಕ್ಕಳಿಗೆ ವಿವಿಧ ಚಿತ್ರ/ ಆಕೃತಿಗಳನ್ನು ರಚಿಸಲು ಅವಕಾಶ ನಿಡುವುದು. ತಮ್ಮ ಕಲ್ಪನೆಯಂತೆ ಚಿತ್ರ ರಚಿಸಲು ಹೇಳುವುದು. ಮಕ್ಕಳು ತಮ್ಮ ಇಷ್ಟದಂತೆ ಚಿತ್ರ ರಚಿಸಿ ಬಣ್ಣ ತುಂಬಲು ಹೇಳುವುದು. ಸೃಜನಾತ್ಮಕತೆ ಪ್ರೋತ್ಸಾಹಿಸಲು ಶಿಕ್ಷಕರು ತಮ್ಮ ಆಲೋಚನೆಗಳನ್ನು ಮಕ್ಕಳ ಮೇಲೆ ಒತ್ತಡ ತರಬಾರದು.**<br>**ತರಗತಿವಾರು ವಿವರ: 1ನೇ ತರಗತಿ ಮಕ್ಕಳು ರಚಿಸಿದ ಚಿತ್ರ/ ಆಕೃತಿಗಳನ್ನು 2ನೇ ತರಗತಿಯ ಮಕ್ಕಳು ಹೆಸರಿಸುವುದು.. 3ನೇ ತರಗತಿಯ ಮಕ್ಕಳು ಚಿತ್ರಗಳಿಗೆ ಪೂರಕವಾಗಿ ಒಂದೆರಡು ವಾಕ್ಯಗಳನ್ನು ಮಾತನಾಡುವುದು.** |
| | **ಹೊರಾಂಗಣ ಆಟಗಳು** | ಚಟುವಟಿಕೆ: ಕಣ್ಣಾ ಮುಚ್ಚಾಲೆ<br>ಸಾಮರ್ಥ್ಯ: ಸೂಕ್ಷ್ಮ ಮನೋಭಾವ , ಅನ್ವೇಷಣೆ ಮನೋಭಾವ ಬೆಳೆಸಲು.<br>ವಿಧಾನ:<br>• ಒಂದು ಮಗುವಿನ ಕಣ್ಣನ್ನು ಮುಚ್ಚಿ ಉಳಿದ ಮಕ್ಕಳಿಗೆ ಬಚ್ಚಿಟ್ಟುಕೊಳ್ಳಲು ಸೂಚಿಸುವುದು.<br>• ನಿಗಧಿತ ಸಮಯದಲ್ಲಿ ಬಚ್ಚಿಕೊಂಡ ಮಕ್ಕಳನ್ನು ಹುಡುಕಲು ತಿಳಿಸುವುದು.<br>• ಕಣ್ಣು ಮುಚ್ಚಿಕೊಂಡ ಮಗು ಅಡಗಿಕೊಂಡ ಮಕ್ಕಳಲ್ಲಿ ಮೊದಲು ಯಾರು ಸಿಗುತಾರೋ ಅವರು ಈ ಆಟವನ್ನು ಮುಂದುವರೆಸುತ್ತಾರೆ.<br>• ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೂ ಈ ಆಟವನ್ನೇ ಮುಂದುವರೆಸಿ ಆಡಿಸುವುದು. |
| | **ಕಥಾ ಸಮಯ** | ➢ ಕಥೆ ಹೇಳುವುದು ಪ್ರತಿ ದಿನ ನಡೆಯುವ ಒಂದು ಪ್ರಕ್ರಿಯೆ. ಇದು ಮಕ್ಕಳಲ್ಲಿ ಮುದ್ರಿತ ಸಾಮಗ್ರಿಗಳ ಬಗ್ಗೆ ಜಾಗೃತಿ, ಶಬ್ದಸಂಪತ್ತಿನ ಬೆಳವಣಿಗೆ, ಆಲಿಸುವ ಸಾಮರ್ಥ್ಯ ಮತ್ತು ಗ್ರಾಂಥಿಕ ಶಬ್ದಗಳನ್ನು ಗ್ರಹಿಸುವುದರ ಜೊತೆಗೆ ಮೌಲ್ಯಗಳನ್ನು ಮತ್ತು ಸಂಸ್ಕಾರವನ್ನು ಕಲಿಸುತ್ತದೆ.<br>**ಕಥೆಯ ಶೀರ್ಷಿಕೆ :** ಸಿಂಹ ಮತ್ತು ಇಲಿ<br>**ಸಾಮಗ್ರಿಗಳು :** ಸಂಭಾಷಣೆ ಇರುವ ಮಿಂಚಪಟ್ಟಿಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವ ಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>➢ ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವ ಆಸಕ್ತಿಯನ್ನು ಬೆಳೆಸುವುದು.<br>➢ ಪ್ರಶ್ನಿಸುವ ಮನೋಭಾವ ಉಂಟುಮಾಡುವುದು.<br>➢ **ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು.**<br>➢ **ನಿರರ್ಗಳವಾಗಿ ಮಾತನಾಡುವ ಕೌಶಲವನ್ನು ರೂಢಿಸುವುದು.**<br>**ವಿಧಾನ :**<br>***ಪಾತ್ರಾಭಿನಯ***<br>➢ ಕಥೆಯನ್ನು ಪುನರಾವಲೋಕನ ಮಾಡಿಕೊಳ್ಳುವುದು.<br>➢ ಕಥೆಯ ನಿರೂಪಣೆಯನ್ನು ಮಾಡಲು ಎರಡು ಮತ್ತು ಮೂರನೇ ತರಗತಿಯ ಮಕ್ಕಳಿಗೆ ಸಹಕರಿಸುವುದು.<br>➢ ಮಕ್ಕಳು ತಪ್ಪಾಗಿ ಹೇಳಿದರೂ ತಕ್ಷಣವೇ ತಿದ್ದದೇ ಸಕಾರಾತ್ಮಕವಾಗಿ ಸ್ವೀಕರಿಸಿ ಆ ನಂತರ ಸರಿಪಡಿಸಿ ಕಥೆಯನ್ನು ಮುಂದುವರೆಸಲು ಹೇಳುವುದು.<br>➢ ಮಿಂಚುಪಟ್ಟಿಗಳಲ್ಲಿ ಪಾತ್ರಗಳ ಸಂಭಾಷಣೆಯನ್ನು ಚಿಕ್ಕ ಚಿಕ್ಕದಾಗಿ ಬರೆದು ನೀಡುವುದು. |
| | **ಮತ್ತೆ ಸಿಗೋಣ** | ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. ನೀನೇ ಮಾಡಿ ನೋಡು (ಮಾಡಿ ನೋಡು) ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

DRAFT 22.02.22

**ವಾರ–1** **ದಿನ–6**

| | | | | | |
|---|---|---|---|---|---|
| | ಪ್ರತಿಬಿಂಬ (ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | | | |
| | ನನ್ನ ಸಾಧನೆ | ಗಳಿಸಿದ ಕಲಿಕಾ ಫಲಗಳು | | | |
| | ಕಲಿಕಾಫಲಗಳು | | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
| | ಶಾಲೆಯ ದಿನಚರಿಗೆ ಹೊಂದಿಕೊಳ್ಳುವರು. | | | | |
| | ಸಂತೋಷದಿಂದ ಶಾಲೆಗೆ ಬರುವರು. | | | | |
| | ಶಿಕ್ಷಕರಿಗೆ ಮತ್ತು ಸ್ನೇಹಿತರಿಗೆ ಶುಭ ಕೋರುವರು. | | | | |
| | ಗುಂಪು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವರು. | | | | |
| | ಸರಳ ಸೂಚನೆಗಳನ್ನು ಅನುಸರಿಸುವರು. | | | | |
| | ತನ್ನ ಸುತ್ತಮುತ್ತಲಿನ ಪರಿಸರದ ಬಗ್ಗೆ ಕುತೂಹಲ ತೋರಿಸುವರು. | | | | |
| | ಜೇಡಿಮಣ್ಣು/ಹಿಟ್ಟಿನಿಂದ ಮಾದರಿ ತಯಾರಿಸುವುದನ್ನು ಆನಂದಿಸುವರು. | | | | |
| | ಒಂದೇ ರೀತಿಯ ವಸ್ತುಗಳನ್ನು ಗುಂಪು ಮಾಡುವರು. | | | | |
| | ಇಂದ್ರಿಯಗಳ ಸಹಾಯದಿಂದ ವಸ್ತುಗಳನ್ನು ಗುರುತಿಸುವರು. | | | | |
| | ಪ್ರಾಸಗೀತೆಗಳನ್ನು ಆನಂದಿಸುವರು. | | | | |
| | ಚಿತ್ರಪಟದಲ್ಲಿನ ವಸ್ತುಗಳನ್ನು ಹೆಸರಿಸುವರು. | | | | |
| | ಯೋಚನೆಗಳನ್ನು ವ್ಯಕ್ತಪಡಿಸಲು ಗೀಚುವರು. | | | | |
| | | | | | |

**ವಾರ–2** **ದಿನ–7**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 7 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1: ಹಕ್ಕಿಯಂತೆ ಹಾರು.**<br>**ಸಾಮಗ್ರಿ:** ಡ್ರಮ್<br>**ವಿಧಾನ:**<br>• ಹಕ್ಕಿಯಂತೆ ಹಾರುವ ಅಭಿನಯ ಮಾಡುತ್ತಾ ತರಗತಿಗೆ ಪ್ರವೇಶಿಸಲು ಮಕ್ಕಳಿಗೆ ಹೇಳಿ– ಮತ್ತು 'ಹಾಯ್‌ಟೀಚರ್' ಎಂದು ಹೇಳಿಸಿ.<br>"ಹಲೋ,________– ಎಂದು ಮಕ್ಕಳ ಹೆಸರು ಹೇಳಿ ಅವರನ್ನು ಸ್ವಾಗತಿಸಿ.<br>• Left right left ಎಂದು ಹೇಳುತ್ತಾ ಮಾರ್ಚ್‌ಪಾಸ್ ಮಾಡುತ್ತಾ ತರಗತಿಯಲ್ಲಿ ವೃತ್ತವನ್ನು ರಚಿಸಲು ಮಕ್ಕಳಿಗೆ ತಿಳಿಸಿ. ಶಿಕ್ಷಕರು ಅದನ್ನು ಆಸಕ್ತಿದಾಯಕವಾಗಿಸಲು ಡ್ರಮ್‌ಅನ್ನು ಬಳಸಬಹುದು. (ಮಕ್ಕಳ ಮೊಣಕಾಲುಗಳು ಸರಿಯಾಗಿ ಬಾಗುವುದನ್ನು ಖಚಿತಪಡಿಸಿಕೊಳ್ಳಿ, ಮತ್ತು ಅವರ ಪಾದಗಳು ನೆಲವನ್ನು ಸ್ಪರ್ಶಿಸುವುದನ್ನು ಖಚಿತ ಪಡಿಸಿಕೊಳ್ಳಿ.)<br>**ಚಟುವಟಿಕೆ 2:** ಕೆಂಪು, ಹಳದಿ ಮತ್ತು ಹಸಿರು [ಟ್ರಾಫಿಕ್ ಸಿಗ್ನಲ್] |

DRAFT 22.02.22

| | | | |
|---|---|---|---|
| | | | ಅಗತ್ಯವಿರುವ ಸಾಮಗ್ರಿಗಳು: ಟ್ರಾಫಿಕ್ ಸಿಗ್ನಲ್ ದೀಪಗಳ ಮಾದರಿ / ಕೆಂಪು, ಹಳದಿ, ಹಸಿರು ಕಾರ್ಡ್ ಗಳು<br>• ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಮಾಡಿ ಮತ್ತು ಸೂಚನೆಗಳನ್ನು ವಿವರಿಸಿ.<br>• ಅವರು "ಹಳದಿ ಬೆಳಕು" ಕೇಳಿದಾಗ/ನೋಡಿದಾಗ, ಅವರು ನಡೆಯಬೇಕು,<br>• ಅವರು "ಹಸಿರು ಬೆಳಕು" ಕೇಳಿದಾಗ ಅವರು ಹಕ್ಕಿಯಂತೆ ಹಾರಬೇಕು, ಮತ್ತು<br>• ಅವರು "ಕೆಂಪು ಬೆಳಕು" ಕೇಳಿದಾಗ "ಅವರು ನಿಂತು ನಗಬೇಕು. ಚಟುವಟಿಕೆಯನ್ನು 3 ರಿಂದ ನಾಲ್ಕು ಬಾರಿ ಪುನರಾವರ್ತಿಸಿ |
| | **ಮಾತು ಕತೆ** | | ದಿನ -1 ರ ಮಾತುಕತೆ ಚಟುವಟಿಕೆಯನ್ನು ಮಾಡಿಸಿ |
| | **ನನ್ನ ಸಮಯ (Free Indore play)** | | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿದೇ ರ್ಶಿತ) ಚಟುವಟಿಕೆ)** | | **ಸಾಮರ್ಥ್ಯ : ಶಬ್ದದ ಅರಿವು, ಸ್ಮರಣೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ...2 ಆಲಿಸಿ ಹೇಳು (ಗುರಿ 3)**<br>**ಉದ್ದೇಶಗಳು:- ವಿವಿಧ ಧ್ವನಿಗಳನ್ನು ಆಲಿಸುವುದು.**<br>**ಅಗತ್ಯ ಸಾಮಗ್ರಿಗಳು : ಶ್ರವಣ ಉಪಕರಣ/ಮೊಬೈಲ್**<br>**ವಿಧಾನ : ಮಕ್ಕಳನ್ನು ವಿವಿಧ ಗುಂಪುಗಳಲ್ಲಿ ಕುಳಿತುಕೊಳ್ಳಲು ಹೇಳುವುದು. ಪ್ರತಿ ಗುಂಪಿನ ಮಕ್ಕಳು ಶ್ರವಣ ಉಪಕರಣದ ಸಹಾಯದಿಂದ ಪ್ರಾಣಿಗಳ ಧ್ವನಿಗಳನ್ನು ಆಲಿಸಿ, ಯಾವ ಪ್ರಾಣಿ ಎಂದು ಗುರುತಿಸುವುದು. ಪ್ರತಿ ಮಗುವಿಗೂ ಅವಕಾಶ ಸಿಗುವವರೆಗೆ ಚಟುವಟಿಕೆ ಮುಂದುವರೆಸುವುದು.**<br>**ತರಗತಿ-2, 3**<br>**1. ಶಿಕ್ಷಕರು ಪ್ರಾಣಿ ಪಕ್ಷಿಗಳ ಧ್ವನಿಯ ಅನುಕರಣೆ ಮಾಡಿ, ಇದು ಯಾವ ಪ್ರಾಣಿ ಪಕ್ಷಿಯ ಕೂಗು ಎಂದು ಗುರುತಿಸಲು ಹೇಳುವುದು.**<br>**2. ಪ್ರಾಣಿ ಮತ್ತು ಪಕ್ಷಿಗಳ ಕೂಗುಗಳನ್ನು ಅನುಕರಿಸಲು ಹೇಳುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ನಡುವೆ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ – 33 ಟ್ರೇಸ್ ಮಾಡುವುದು.[ ಮರಳು.] ಗುರಿ – 1<br>ಉದ್ದೇಶ.<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ದಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಬರವಣಿಗೆಗೆ ಪೂರಕ ಚಟುವಟಿಕೆಯಾಗಿರುತ್ತದೆ.<br>ಸಾಮಗ್ರಿಗಳು : ಮರಳು.<br>ವಿಧಾನ : ಮಕ್ಕಳಿಗೆ ಒಂದು ಟ್ರೇನಲ್ಲಿ ಮರಳನ್ನು ನೀಡುವುದು ಮತ್ತು ಅವರಿಗೆ ಮರಳಿನ ಮೇಲೆ ಬರೆಯಲು ಸಣ್ಣ ಕಡ್ಡಿಯನ್ನು ಕೊಡುವುದು.ಮರಳಿನ ಮೇಲೆ ವಿವಿಧ ವಕ್ರಾಕೃತಿ ರೇಖೆಗಳನ್ನು ಮಾಡಲು ಹೇಳುವುದು.<br>ವಿವರ; 2 ಮತ್ತು 3 ನೇ ತರಗತಿಗೆ ಸರಳರೇಖೆ ಮತ್ತು ವಕ್ರ ರೇಖೆಗಳನ್ನು ಬಳಸಿ ತಮ್ಮ ಇಷ್ಟದ ಚಿತ್ರ ಬರೆಯಲು ಅವಕಾಶ ಮಾಡಿಕೊಡುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ : ಆಲಿಸುವಿಕೆ, ಸೃಜನಾತ್ಮಕ, ಸ್ವ- ಅಭಿವ್ಯಕ್ತಿ, ಔಪಚಾರಿಕ ಮಾತುಗಾರಿಕೆ,**<br>**ಚಟುವಟಿಕೆ: 8. ಆಶುಭಾಷಣ (ಗುರಿ-2) ECL-6**<br>**ಉದ್ದೇಶ :**<br>* **ಆಯ್ದುಕೊಂಡ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡುವುದು.**<br>* **ಔಪಚಾರಿಕ ಮಾತುಗಾರಿಕೆಯ ಕೌಶಲವನ್ನು ಬೆಳೆಸುವುದು.** |

DRAFT 22.02.22

| | | | |
|---|---|---|---|
| | ಸಾಕ್ಷರತೆ | | * ಆಲಿಸಿದ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳುವುದು.<br>* ಸೃಜನಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.<br>ಸಾಮಗ್ರಿ : ಪ್ರಾಣಿ, ಪಕ್ಷಿ, ವಾಹನಗಳ ಚಿತ್ರಗಳ ಮಿಂಚುಪಟ್ಟಿಗಳು<br>ವಿಧಾನ : ಡಬ್ಬದಲ್ಲಿ ಪ್ರಾಣಿ, ಪಕ್ಷಿ, ವಿವಿಧ ವಾಹನಗಳ ಚಿತ್ರಗಳ ಮಿಂಚುಪಟ್ಟಿಗಳನ್ನು ಹಾಕುವುದು, . ಮಕ್ಕಳಿಗೆ ಡಬ್ಬದಲ್ಲಿ ಕೈ ಹಾಕಿ ಯಾವುದಾದರೂ ಒಂದು ಮಿಂಚುಪಟ್ಟಿಯನ್ನು ತೆಗೆದುಕೊಂಡು ಅದರಲ್ಲಿರುವ ಚಿತ್ರದ ಬಗ್ಗೆ ತಮ್ಮದೇ ಮಾತುಗಳಲ್ಲಿ ಹೇಳಲು ಅವಕಾಶ ನೀಡುವುದು.<br>ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಆಯ್ಕೆ ಮಾಡಿಕೊಂಡ ವಿಷಯದ ಕುರಿತು 2 ರಿಂದ 3 ನಿಮಿಷಗಳ ಕಾಲ ಮಾತನಾಡುವುದು.. 3ನೇ ತರಗತಿಯ ಮಕ್ಕಳು ವಿಷಯದ ದೈನಂದಿನ ಬಳಕೆ ಅಥವಾ ಅನ್ವಯಿಕ ಅಂಶಗಳ ಬಗ್ಗೆ ಮಾತನಾಡುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>ಚಟುವಟಿಕೆ....18<br>• ಚಿತ್ರ ಸಂಪುಟ (ಗುರಿ–2) ವಿಷಯ: 'ಉದ್ಯಾನದಲ್ಲಿ ನೀವು ನೋಡಿರುವ ವಸ್ತುಗಳು/ವಿಷಯಗಳು',<br>ಉದ್ದೇಶ:<br>• ಚಿತ್ರದಲ್ಲಿನ ವಸ್ತು/ವ್ಯಕ್ತಿ/ಘಟನೆಗಳನ್ನು ಹೆಸರಿಸುವುದು ಊಹಿಸಿ ಅರ್ಥೈಸಿಕೊಳ್ಳಲು ಚಿತ್ರದೊಂದಿಗೆ ಪಠ್ಯವನ್ನು ಸಂಬಂಧಿಕರಿಸುವುದು.<br>• ಮಕ್ಕಳು ಚಿತ್ರಓದುವುದು ಮತ್ತು ಚರ್ಚಿಸಿ ಅರ್ಥಮಾಡಿಕೊಳ್ಳುವುದು ಮತ್ತು ವೈಯಕ್ತಿಕಚಿತ್ರ ಸಂಪುಟಗಳನ್ನು ರಚಿಸಿ ವೈಯಕ್ತಿಕವಾಗಿ ಮತ್ತು ಗುಂಪುಗಳಲ್ಲಿ ಮಂಡಿಸುವುದು ಮತ್ತು ಗುಂಪಿನಲ್ಲಿ ಕುಳಿತು ಗೋಡೆ ಪತ್ರಿಕೆಗಳನ್ನು ರಚಿಸುವುದು.<br>ಅಗತ್ಯ ಸಾಮಗ್ರಿಗಳು : ಮಕ್ಕಳು ರಚಿಸಿದ ಚಿತ್ರಗಳು<br>ವಿಧಾನ : 'ಉದ್ಯಾನದಲ್ಲಿ ನೀವು ನೋಡಿರುವ ವಸ್ತುಗಳು/ವಿಷಯಗಳಿಗೆ ಸಂಬಂಧಿಸಿದಂತೆ ಮಕ್ಕಳು ಬರೆದ ಚಿತ್ರಗಳನ್ನು ಕೃತಿಸಂಪುಟದಿಂದ ತೆಗೆದು ಅದರ ಬಗ್ಗೆ ಸಹಜವಾಗಿ ಮಾತನಾಡಲು ಪ್ರೋತ್ಸಾಹಿಸುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಸಹಾಯ ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು ಜೊತೆಗೆ 2ನೇ ಮತ್ತು 3ನೇತರಗತಿಯ ಮಕ್ಕಳಿಗೂ ಸ್ವತಂತ್ರವಾಗಿ ಮಾತನಾಡಲು ಅವಕಾಶ ನೀಡುವುದು.<br>*(ಸದರಿ ಚಟುವಟಿಕೆಯ ಮುಂದುವರೆದ ಭಾಗವು 11ನೇ ದಿನದಲ್ಲಿ ಮುಂದುವರೆಯುವುದು)* |
| | | ಉದ್ದೇಶಿತ ಬರಹ | ಸಾಮರ್ಥ್ಯ: ಬರವಣಿಗೆಯ ಆರಂಭಿಕ ಕೌಶಲ, ಬರವಣಿಗೆಯೆಡೆಗೆ ಒಲವು/ ಆಸಕ್ತಿ<br>ಚಟುವಟಿಕೆ : ತೋಚಿದಂತೆ ಗೀಚು. (ಗುರಿ–2) **ECW-1**<br>ಉದ್ದೇಶಗಳು:<br>* ಬರವಣಿಗೆಯ ಆರಂಭಿಕ ಕೌಶಲಗಳನ್ನು ರೂಢಿಸುವುದು.<br>* ಬರವಣಿಗೆಯ ಬಗ್ಗೆ ಒಲವು/ ಆಸಕ್ತಿ ಮೂಡಿಸುವುದು.<br>ಅಗತ್ಯ ಸಾಮಗ್ರಿ :<br>ದಿನಪತ್ರಿಕೆಗಳು ಖಾಲಿ ಹಾಳೆಗಳು, ಕ್ರಯಾನ್ಸ್, ಪೆನ್ಸಿಲ್ ಇತ್ಯಾದಿ.<br>ವಿಧಾನ :<br>* ಮಕ್ಕಳಿಗೆ ದಿನಪತ್ರಿಕೆ/ ಖಾಲಿ ಹಾಳೆಗಳನ್ನು ಕೊಡುವುದು.<br>* ಅವರಿಗೆ ಇಷ್ಟಬಂದಂತೆ ಗೀಚಲು/ ಬರೆಯಲು ತಿಳಿಸುವುದು.<br>* ಎಲ್ಲ ಮಕ್ಕಳ ಬರೆಹ/ ಚಿತ್ರ ರಚನೆಯನ್ನು ಪ್ರದರ್ಶಿಸಿ ಪ್ರೋತ್ಸಾಹಿಸುವುದು.<br>ತರಗತಿವಾರು ವಿವರ:<br>2 ಮತ್ತು 3ನೇ ತರಗತಿಯ ಮಕ್ಕಳಿಗೆ ಅಕ್ಷರ/ ಅಂಕಿಗಳನ್ನು ಬಳಸಿ ವಿವಿಧ ಚಿತ್ರಗಳನ್ನು ಬರೆಯಲು ಪ್ರೇರೇಪಿಸುವುದು. |

| | |
|---|---|
| | <br> |
| **ಹೊರಾಂಗಣ ಆಟಗಳು** | **Day 7**<br>ಚಟುವಟಿಕೆ –20 ಚೆಂಡನ್ನು ಬುಟ್ಟಿಗೆ ಎಸೆ ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ.<br>ಬೇಕಾಗುವ ಸಾಮಗ್ರಿ: ಚೆಂಡು<br>ವಿಧಾನ:<br>• ಒಂದು ಬುಟ್ಟಿಯನ್ನು ಸ್ವಲ್ಪ ದೂರದಲ್ಲಿ ಇರಿಸುವುದು.<br>• ಬುಟ್ಟಿಯಿಂದ ಸ್ವಲ್ಪ ದೂರದಲ್ಲಿ ಒಂದು ಗೆರೆಯನ್ನೆಳೆದು ಮಕ್ಕಳಿಗೆ ಆ ಗೆರೆಯಲ್ಲಿ ನಿಂತು ಚೆಂಡನ್ನು ಬುಟ್ಟಿಗೆ ಎಸೆಯುವಂತೆ ಸೂಚಿಸುವುದು.<br>**ಎರಡು ಮತ್ತು ಮೂರನೇ ತರಗತಿ ಮಕ್ಕಳಿಗೆ ಬುಟ್ಟಿಯ ದೂರವನ್ನು ಹೆಚ್ಚಿಸುತ್ತಾ ಆಟವಾಡಿಸುವುದು.** |
| **ಕಥಾ ಸಮಯ** | **ಶೀರ್ಷಿಕೆ** :ಗೆಳೆಯರ ಬೇಸಾಯ<br>**ಸಾಮಗ್ರಿಗಳು** :ಕಥೆಯ ಸಾಹಿತ್ಯ<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>**ವಿಧಾನ :**<br>***ಕಥಾ ಸಾಹಿತ್ಯ***<br>➢ ಶಿಕ್ಷಕರು ಕಥೆ ಹೇಳುವ ಮುನ್ನಕಥೆಯನ್ನು ಓದಿ ಅರ್ಥೈಸಿಕೊಳ್ಳಬೇಕು.<br>➢ ಸೂಕ್ತ ಆಂಗಿಕ ಚಲನೆಯೊಂದಿಗೆ ಸರಳ ಭಾಷೆಯಲ್ಲಿಕಥೆಯನ್ನು ಹೇಳಬೇಕು.<br>➢ ಕಥೆ ಹೇಳುವಾಗ ಶಿಕ್ಷಕರು ಮಕ್ಕಳೊಂದಿಗೆ ವೃತ್ತದಲ್ಲಿ ಕುಳಿತುಕೊಳ್ಳಬೇಕು.<br>➢ ಸರಳ ಪ್ರಶ್ನೆಗಳ್ನು ಕೇಳಿ ಕಥೆಯನ್ನುಅರ್ಥೈಸಬೇಕು.<br><br>**ಕಥೆ :**<br>**ಒಮ್ಮೆನರಿ ಮತ್ತುಕರಡಿಕೂಡಿ ಬೇಸಾಯ ಮಾಡಲು ಹೊರಟವು. ಜಾಣ ನರಿಯುಭೂಮಿಯ ಮೇಲೆ ಬೆಳೆಯುವ ಭಾಗ ನನಗೆ ಇರಲಿ, ಭೂಮಿಯ ಒಳಗೆ ಬೆಳೆಯುವ ಭಾಗ ನಿನಗೆ ಎನ್ನುವಕರಾರು ಹಾಕಿತು. ಇಬ್ಬರೂ ಸೇರಿ ಸೌತೆಕಾಯಿ ಬೆಳೆದರು. ಸೌತೆಕಾಯಿಗಳೆಲ್ಲ ನರಿಯ ಪಾಲಾದವು. ಕರಡಿಗೆ ಬೇರುಗಳು, ಬಳ್ಳಿಗಳು ದೊರೆತವು. ಬೇಸರಗೊಂಡಕರಡಿ ಈ ಬಾರಿ ಭೂಮಿಯ ಮೇಲಿನ ಬೆಳೆಯಭಾಗ ನನಗೆ ಎಂದಿತು. ಹಾಗೆಯೇಆಗಲಿ ಎಂದು ನರಿಯುಒಪ್ಪಿಕೊಂಡಿತು. ನರಿಯು ಈ ಬಾರಿಯೂಜಾಣತನದಿಂದಗೆಣಸು ಬೆಳೆಯೋಣ ಎಂದಿತು.ಅದಕ್ಕೆಕರಡಿಯೂಒಪ್ಪಿತು. ಈ ಸಲವೂ ಭೂಮಿಯ ಒಳಗಿನ ಭಾಗವಾದಗೆಣಸು ನರಿಯ ಪಾಲಾಯಿತು. ಬಳ್ಳಿಗಳು ಮಾತ್ರಕರಡಿಗೆ ಸಿಕ್ಕಿತು. ನರಿಯ ಮೋಸಗಾರಿಕೆ ತಿಳಿದ ಕರಡಿಯುಅದರ ಸಹವಾಸವೇ ಬೇಡಾಎಂದುಸಪ್ಪೆ ಮೋರೆ ಹಾಕಿಕೊಂಡುಹೊರಟುಹೋಯಿತು.**<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>**3) ಬೇಸಾಯ ಮಾಡಲುಯಾರುಯಾರು ಹೊರಟರು?**<br>**4) ಮೊದಲು ಬೆಳೆದ ಬೆಳೆ ಯಾವುದು?**<br><br>(ಕಥೆಯನ್ನು ಆನಂದಿಸುವುದರಜೊತೆಗೆ, ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

DRAFT 22.02.22

| | | |
|---|---|---|
| | | • "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

**ವಾರ–2** **ದಿನ–8**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 8 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1: ಹಕ್ಕಿಯಂತೆ ಹಾರು.**<br>**ಸಾಮಗ್ರಿ:** ಡ್ರಮ್<br>**ವಿಧಾನ:** ದಿನ –7 ರಲ್ಲಿ ಉಲ್ಲೇಖಿಸಲಾದ ನೀಡಲಾದ ಚಟುವಟಿಕೆ –1 ಅನ್ನು ಪುನರಾವರ್ತಿಸಿ<br>**ಚಟುವಟಿಕೆ 2: ಆಲಿಸಿ ಮತ್ತು ಪ್ರತಿಕ್ರಿಯಿಸಿ**<br>ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಮಾಡಿ ಮತ್ತು ಸೂಚನೆಗಳನ್ನು ವಿವರಿಸಿ. ಈ ಕೆಳಗಿನ ಸೂಚನೆಗಳನ್ನು ಲಯಬದ್ಧವಾಗಿ ಹೇಳಿ ಮತ್ತು ಪ್ರದರ್ಶಿಸಿ. ಸೂಚನೆಗಳನ್ನು ಕೇಳಲು ಮಕ್ಕಳಿಗೆ ಹೇಳಿ.<br>1. Stand up! (ಎದ್ದು ನಿಲ್ಲು)<br>2. Clap your hands (ಎರಡು ಬಾರಿ ಕೈಗಳನ್ನು ಚಪ್ಪಾಳೆ ತಟ್ಟಿ)<br>3. Turn around (ತಿರುಗಿ)<br>4. Clap your hands!( (ಎರಡು ಬಾರಿ ಕೈಗಳನ್ನು ಚಪ್ಪಾಳೆ ತಟ್ಟಿ)<br>5. Sit down (ಕುಳಿತು)<br>6. Clap your hands (ಎರಡು ಬಾರಿ ಕೈಗಳನ್ನು ಚಪ್ಪಾಳೆ ತಟ್ಟಿ)<br>7. Wave your hands (ನಿಮ್ಮ ಕೈಯನ್ನು ಗಾಳಿಯಲ್ಲಿ ಬೀಸಿರಿ) |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ದಿನ -2 ರ ಮಾತುಕತೆ ಚಟುವಟಿಕೆಯನ್ನು ಮಾಡಿಸಿ |
| | **ನನ್ನ ಸಮಯ (Free Indore play)** ('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು) | ದಿನ – 8<br>ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.<br>ಚಟುವಟಿಕೆ – ಚಿತ್ರ ಅಂಟಿಸು.. ಗುರಿ – 1<br>ಉದ್ದೇಶ;<br>• ಸೂಕ್ಮ ಸ್ನಾಯುಗಳ ಅಭಿವೃದ್ದಿಯಾಗುತ್ತದೆ .<br>• ಚಿತ್ರಗಳನ್ನು ಆಯ್ಕೆ ಮಾಡಿ ಸಂಗ್ರಹಿಸುವ ಕೌಶಲ ಬೆಳೆಯುತ್ತದೆ.<br>• ಕೈಗಳ ಮತ್ತು ಬೆರಳುಗಳ ಕುಶಲತೆ ಹೆಚ್ಚುವುದರ ಜೊತೆಗೆ ಏಕಾಗ್ರತೆ ಬೆಳೆಯುತ್ತದೆ.<br>ಸಾಮಗ್ರಿಗಳು : ಹಳೆಯ ದಿನಪತ್ರಿಕೆಗಳು/ ಪುಸ್ತಕಗಳು., ರಟ್ಟು ಮತ್ತು ಅಂಟು. |

DRAFT 2022

<table>
<tr><td></td><td colspan="2"></td><td>ವಿಧಾನ : ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸುವುದು. ಚಿತ್ರಗಳಿರುವಂತಹ ಹಳೆಯ ದಿನಪತ್ರಿಕೆ/ ಪುಸ್ತಕಗಳನ್ನು ಪ್ರತಿ ಮಗುವಿಗೂ ನೀಡುವುದು. ಅದರಲ್ಲಿನ ದೊಡ್ಡ ಚಿತ್ರಗಳನ್ನು ಕತ್ತರಿಸಿ ರಟ್ಟು/ ಹಳೆಯ ರಜಿಸ್ಟರ್ ಕವರ್/ ಚಾರ್ಟ ಪೇಪರಿನಲ್ಲಿ ಚಿತ್ರಗಳನ್ನು ಅಂಟಿಸಲು ಅವಕಾಶ ಮಾಡಿಕೊಡುವುದು. ನಂತರ ಅಂಟಿಸಿದ ಚಿತ್ರದ ಮೇಲೆ ಅಂಕು ಡೊಂಕು ರೇಖೆಗಳನ್ನು ಹಾಕಲು ಹೇಳುವುದು.<br>ಸುಗಮಕಾರರು ಈ ಚಿತ್ರಗಳನ್ನು ಬಳಸಿ ಪಜಲ್ ಆಡಿಸುವುದು. ಪಜಲ್ ತಯಾರಿಸಲು ತ್ಯಾಜ್ಯ/ ಅನುಪಯುಕ್ತ ವಸ್ತುಗಳನ್ನು ಬಳಸಿಕೊಂಡು ಆಟಿಕೆಗಳನ್ನು ತಯಾರಿಸಲು ಮಕ್ಕಳನ್ನು ತೊಡಗಿಸಿಕೊಳ್ಳುವುದು.<br>ವಿವರ; 2 ಮತ್ತು 3 ನೇ ತರಗತಿಗೆ ತಾವು ಸಂಗ್ರಹಿಸಿ ಕತ್ತರಿಸಿದ ಚಿತ್ರಗಳನ್ನು ರಟ್ಟಿಗೆ ಅಂಟಿಸುವುದರ ಮೂಲಕ ಅದರ ಬಗ್ಗೆ ತನ್ನದೇ ಮಾತುಗಳಲ್ಲಿ ವಿವರಿಸುವರು.<br>* ಬಳಸಬೇಕಾದ ಅಭ್ಯಾಸ ಹಾಳೆಗಳು: I.L-5 ( 01, 02,03ನೇ ತರಗತಿ)</td></tr>
<tr><td></td><td colspan="2">ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)</td><td>ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.<br>ಚಟುವಟಿಕೆ – ಚಿತ್ರ ಅಂಟಿಸು.. ಗುರಿ – 1<br>ಉದ್ದೇಶ;<br>• ಸೂಕ್ಮ ಸ್ನಾಯುಗಳ ಅಭಿವೃದ್ದಿಯಾಗುತ್ತದೆ .<br>• ಚಿತ್ರಗಳನ್ನು ಆಯ್ಕೆ ಮಾಡಿ ಸಂಗ್ರಹಿಸುವ ಕೌಶಲ ಬೆಳೆಯುತ್ತದೆ.<br>• ಕತ್ತರಿಯನ್ನು ಹಿಡಿದು ಹಾಳೆಯನ್ನು ಕತ್ತರಿಸುವ ವಿಧಾನವನ್ನು ತಿಳಿಯುತ್ತಾರೆ.<br>• ಕೈಗಳ ಮತ್ತು ಬೆರಳುಗಳ ಕುಶಲತೆ ಹೆಚ್ಚುವುದರ ಜೊತೆಗೆ ಏಕಾಗ್ರತೆ ಬೆಳೆಯುತ್ತದೆ.<br>ಸಾಮಗ್ರಿಗಳು : ಹಳೆಯ ದಿನಪತ್ರಿಕೆಗಳು/ ಪುಸ್ತಕಗಳು., ರಟ್ಟು ಮತ್ತು ಅಂಟು.<br>ವಿಧಾನ : ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸುವುದು. ಚಿತ್ರಗಳಿರುವಂತಹ ಹಳೆಯ ದಿನಪತ್ರಿಕೆ/ ಪುಸ್ತಕಗಳನ್ನು ಪ್ರತಿ ಮಗುವಿಗೂ ನೀಡುವುದು. ಅದರಲ್ಲಿನ ದೊಡ್ಡ ಚಿತ್ರಗಳನ್ನು ಕತ್ತರಿಸಿ ರಟ್ಟು/ ಹಳೆಯ ರಜಿಸ್ಟರ್ ಕವರ್/ ಚಾರ್ಟ ಪೇಪರಿನಲ್ಲಿ ಚಿತ್ರಗಳನ್ನು ಅಂಟಿಸಲು ಅವಕಾಶ ಮಾಡಿಕೊಡುವುದು. ನಂತರ ಅಂಟಿಸಿದ ಚಿತ್ರದ ಮೇಲೆ ಅಂಕು ಡೊಂಕು ರೇಖೆಗಳನ್ನು ಹಾಕಲು ಹೇಳುವುದು.<br>ಸುಗಮಕಾರರು ಈ ಚಿತ್ರಗಳನ್ನು ಬಳಸಿ ಪಜಲ್ ಆಡಿಸುವುದು. ಪಜಲ್ ತಯಾರಿಸಲು ತ್ಯಾಜ್ಯ/ ಅನುಪಯುಕ್ತ ವಸ್ತುಗಳನ್ನು ಬಳಸಿಕೊಂಡು ಆಟಿಕೆಗಳನ್ನು ತಯಾರಿಸಲು ಮಕ್ಕಳನ್ನು ತೊಡಗಿಸಿಕೊಳ್ಳುವುದು.<br>ವಿವರ; 2 ಮತ್ತು 3 ನೇ ತರಗತಿಗೆ ತಾವು ಸಂಗ್ರಹಿಸಿ ಕತ್ತರಿಸಿದ ಚಿತ್ರಗಳನ್ನು ರಟ್ಟಿಗೆ ಅಂಟಿಸುವುದರ ಮೂಲಕ ಅದರ ಬಗ್ಗೆ ತನ್ನದೇ ಮಾತುಗಳಲ್ಲಿ ವಿವರಿಸುವರು.</td></tr>
<tr><td></td><td>ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ</td><td>ಆಲಿಸುವುದು ಮತ್ತು ಮಾತನಾಡುವುದು</td><td>ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಪದ ಸಂಪತ್ತಿನ ಅಭಿವೃದ್ಧಿ, ಚಾಲನಾ ಕೌಶಲಗಳ ಅಭಿವೃದ್ಧಿ.<br>ಚಟುವಟಿಕೆ: 15 ಪ್ರಾಸ ಪದಗಳನ್ನು ಆಲಿಸುವುದು (ಗುರಿ–02) ECL-4 ( 4 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>* ಧ್ವನಿ ವಿಜ್ಞಾನದ ಅರಿವನ್ನು ಹೊಂದುವಂತೆ ಮಾಡುವುದು.<br>* ಪ್ರಾಸಪದಗಳ ಮೂಲಕ ಪದಸಂಪತ್ತನ್ನು ಹೆಚ್ಚಿಸುವುದು.<br>* ಸ್ಥೂಲ ಹಾಗೂ ಸೂಕ್ಷ್ಮ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು:– ಇಲ್ಲ<br>ವಿಧಾನ:<br>* ಮಕ್ಕಳಿಗೆ ಈಗಾಗಲೇ 4 ನೇ ದಿನದಲ್ಲಿ ಹೇಳಿರುವ ಶಿಶು ಪ್ರಾಸ ಗೀತೆಯನ್ನೇ ಹೇಳುವುದು.<br>* ಹಾಡು ಹೇಳುವಾಗ ಪ್ರಾಸ ಪದಗಳನ್ನು ಸ್ವಲ್ಪ ಒತ್ತಿ ಹೇಳುವುದು.<br>* ಪ್ರಾಸ ಗೀತೆಗೆ ತಕ್ಕಂತೆ ಅಭಿನಯಿಸಲು ತಿಳಿಸುವುದು.<br>* ಒತ್ತಿ ಹೇಳಿದ ಪದಗಳನ್ನು ಪ್ರತ್ಯೇಕವಾಗಿ ಹೇಳಿಸುವುದು.<br>ತರಗತಿವಾರು ವಿವರ: 2 ಹಾಗೂ 3 ನೇ ತರಗತಿ ಮಕ್ಕಳು ಶಿಕ್ಷಕರನ್ನು ಅನುಕರಿಸುತ್ತಾ ರಾಗಬದ್ಧವಾಗಿ ಅಭಿನಯದೊಂದಿಗೆ ಹಾಡುವುದು. ವಿಶೇಷವಾಗಿ ಹೇಳಿದ ಪದಗಳನ್ನು ಬರೆದು ಕೊಳ್ಳುವರು. (14 ನೇ ದಿನಕ್ಕೆ ಮುಂದುವರೆದಿದೆ)</td></tr>
</table>

DRAFT 22.02.22

| | | | |
|---|---|---|---|
| | | ಅರ್ಥಗ್ರಹಿಕೆಂ ಕೊಂದಿಗಿನ ಓದು | ಸಾಮರ್ಥ್ಯ: ಪದ ಸಂಪತ್ತಿನ ಅಭಿವೃದ್ಧಿ, ಸ್ವಯಂ ಅಭಿವ್ಯಕ್ತಿ, ನಟನಾ ಓದು.<br>ಚಟುವಟಿಕೆ 1: ಚಿತ್ರ ಓದು (ಗುರಿ–2)<br>ಉದ್ದೇಶ: ವಿವಿಧ ಘಟನೆ/ಸನ್ನಿವೇಶಗಳ ಚಿತ್ರಗಳನ್ನು ನೋಡುವುದರ ಮೂಲಕ ಸನ್ನಿವೇಶವನ್ನು ವಿವರಿಸುವರು<br>ಅಗತ್ಯ ಸಾಮಾಗ್ರಿಗಳು: ವಿವಿಧ ಘಟನೆ/ ಸ್ಥಳ/ ಜಾತ್ರೆ/ ಮೇಳಗಳ ಚಿತ್ರಗಳು/ ಉದ್ಯಾನವನ/ ಪೇಟೆ/ ಶಾಲೆ/ ಪ್ರಾಣಿ ಸಂಗ್ರಹಾಲಯ/ ಹಬ್ಬ / ಜಾತ್ರೆಯ ಇತ್ಯಾದಿಗಳ ಚಿತ್ರಗಳು<br>ವಿಧಾನ: ದಿನ 4ರ ಚಿತ್ರ ಓದು ಚಟುವಟಿಕೆ ಮುಂದುವರೆಸುತ್ತಾ<br>ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಹಿಂದೆ ಬಳಸಿರುವ ಸನ್ನಿವೇಶ ಚಿತ್ರವನ್ನು ನೀಡುವುದು. ನಂತರ ಮಕ್ಕಳು ಆ ಚಿತ್ರವನ್ನು ವೀಕ್ಷಿಸುವುದರ ಮೂಲಕ ಅಲ್ಲಿಯ ಸನ್ನಿವೇಶವನ್ನು ವಿವರಿಸುವಂತೆ ಮತ್ತು ನಟನಾ ಓದು ಮಾಡುವಂತೆ ತಿಳಿಸುವುದು.<br>2ಮತ್ತು 3ನೇ ತರಗತಿಗೆ: ಶಿಕ್ಷಕರು ಸನ್ನಿವೇಶದ ಕುರಿತು ಮಕ್ಕಳ ಅನುಭವಕ್ಕೆ ತಂದುಕೊಂಡು ವಿವರಿಸಲು ತಿಳಿಸುವುದು |
| | | ಉದ್ದೇಶಿತ ಬರಹ | ಸಾಮರ್ಥ್ಯ: ಕೈ–ಕಣ್ಣು ಸಂಯೋಜನೆ, ಬರವಣಿಗೆ ಕೌಶಲಗಳ ಅಭ್ಯಾಸ, ಸೃಜನಶೀಲ ಅಭಿವ್ಯಕ್ತಿ.<br>ಚಟುವಟಿಕೆ: ಮುಕ್ತ ಚಿತ್ರರಚನೆ (ಗುರಿ–2) **ECW-6**<br>ಉದ್ದೇಶಗಳು:<br>• ಬರವಣಿಗೆಯ ಆರಂಭಿಕ ಕೌಶಲಗಳನ್ನು ರೂಢಿಸುವುದು.<br>• ಕಣ್ಣು–ಕೈಗಳ ಸಮನ್ವಯ ಕೌಶಲವನ್ನು ಅಭಿವೃದ್ಧಿಪಡಿಸುವುದು.<br>• ಕ್ರಿಯಾತ್ಮಕ ಅಭಿವ್ಯಕ್ತಿಗೆ ಅವಕಾಶ ನೀಡುವುದು.<br>ಅಗತ್ಯ ಸಾಮಗ್ರಿಗಳು: ವಾಲ್‌ಸ್ಲೇಟ್, ಸೀಮೆ ಸುಣ್ಣ<br>ವಿಧಾನ: ವಾಲ್‌ಸ್ಲೇಟ್‌ನಲ್ಲಿ ಮುಕ್ತವಾಗಿ ಬರೆಯಲು, ಅನಿಸಿದ್ದನ್ನು ಬಿಡಿಸಲು ಅವಕಾಶ ಕಲ್ಪಿಸುವುದು. ಅವರ ಬರವಣಿಗೆ ಬಗ್ಗೆ ಮಾತನಾಡಲು ತಿಳಿಸುವುದು. ಅವರಿಗೆ ಪ್ರಶ್ನೆ ಕೇಳುತ್ತಾ ಬರವಣಿಗೆ ಬಗ್ಗೆ ಮಾಹಿತಿ ಪಡೆಯುವುದು.<br>ತರಗತಿವಾರು ವಿವರ: 2 ಮತ್ತು 3 ನೇ ತರಗತಿಯ ಮಕ್ಕಳಿಗೆ ತಾವು ಚಿತ್ರಿಸಿದ ಚಿತ್ರದ ಕುರಿತು ಮಾತನಾಡಲು ತಿಳಿಸುವುದು. |
| | **ಹೊರಾಂಗಣ ಆಟಗಳು** | | Day 8<br>ಚಟುವಟಿಕೆ –20 (ಚಿ) ಚೆಂಡನ್ನು ಮೇಲೆ ಮತ್ತು ಕೆಳಗೆ ಎಸೆ: ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ.<br>ಬೇಕಾಗುವ ಸಾಮಗ್ರಿ: ಚೆಂಡು<br>ವಿಧಾನ:<br>• ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ ಚೆಂಡನ್ನು ಮೇಲಕ್ಕೆ ಎಸೆದು ಹಿಡಿಯಲು ಸೂಚಿಸುವುದು.<br>**ಎರಡು ಮತ್ತು ಮೂರನೇ ತರಗತಿ ಮಕ್ಕಳಿಗೆ ಚೆಂಡನ್ನು ಮೇಲಕ್ಕೆ ಎಸೆದು ಹಿಡಿಯಲು ಹಾಗೂ ನೆಲಕ್ಕೆ ಪುಟಿಸಿ ಹಿಡಿಯಲು ಸೂಚಿಸುವುದು.** |
| | **ಕಥಾ ಸಮಯ** | | ಮೊದಲ ದಿನದಲುದ್ದೇಶದಂತೆಕಥಾ ಸಮಯವು ಮುಂದುವರೆಯುತ್ತದೆ.<br>**ಕಥಾ ಸಾಹಿತ್ಯ**<br>ಶಿಕ್ಷಕರು ಕಥೆಯನ್ನು ನಿರೂಪಿಸುವುದರಜೊತೆಗೆ ಮಕ್ಕಳ ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು ಉದಾ :ಯಾರು ಏನು ಹೇಳಿದರು? ನಂತರಏನಾಯಿತು?<br>ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.<br>5) ನರಿಯುಯಾವಕರಾರು ಹಾಕಿತು?<br>6) ಎರಡನೆ ಸಲ ಬೆಳೆದ ಬೆಳೆ ಯಾವುದು?<br>(ಕಥೆಯನ್ನು ಆನಂದಿಸುವುದರಜೊತೆಗೆ, ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |

DRAFT 2022

| | | |
|---|---|---|
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>• "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |


DRAFT 2022

**ವಾರ–2** **ದಿನ–9 (ಬುಧವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 9 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:**<br>**ವಿಧಾನ:**<br>• ಹೈ ಫೈವ್ ಕೊಡುವ ಮೂಲಕ ತರಗತಿ ಪ್ರವೇಶಿಸಲು ಮಕ್ಕಳಿಗೆ ಹೇಳಿ– ಮತ್ತು 'ಹಾಯ್‌ಟೀಚರ್' ಎಂದು ಹೇಳಿಸಿ. "ಹಲೋ,________– ಎಂದು ಮಕ್ಕಳ ಹೆಸರು ಹೇಳಿ ಅವರನ್ನು ಸ್ವಾಗತಿಸಿ.<br>• ಕದಮ್‌ತಾಲ್ ಚಟುವಟಿಕೆಯಂತೆ ಮಾಡುವುದು |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | **ಚಟುವಟಿಕೆ–1: ತರಕಾರಿ ತರಕಾರಿ (ಗುರಿ–1)** #ಭಾರತೀಯ ಭಾಷಾ ಸಂಸ್ಥಾನ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರ ರಚಿತ<br>**ಸಾಮರ್ಥ್ಯ:** ಸ್ವಯಂ ಪ್ರಜ್ಞೆ, ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಗಳ ಅಭಿವೃದ್ಧಿ, ಆಲಿಸುವುದು ಮತ್ತು ಮಾತನಾಡುವುದು.<br>**ಉದ್ದೇಶ:** ಪದ್ಯ ಭಾಗವನ್ನು ಆಲಿಸಿ ಸರಳ ಪ್ರಶ್ನೆಗಳಿಗೆ ಉತ್ತರಿಸುವುದು.<br>**ಸಾಮಗ್ರಿ:**<br>**ವಿಧಾನ::** ಲಯಬದ್ಧ ಚಲನೆಗಳನ್ನು ಮಾಡಲು ಮಕ್ಕಳಿಗೆ ಅವಕಾಶಗಳು ಮತ್ತು ಅನುಭವಗಳನ್ನು ಒದಗಿಸಿ. "ತರಕಾರಿ ತರಕಾರಿ" ಪ್ರಾಸವನ್ನು ಹಾಡಿಸಿ. ಹಾಡಿದ ನಂತರ ಪದ್ಯದ ಕುರಿತು ಪ್ರಶ್ನೆಗಳನ್ನು ಕೇಳಿ.<br><br>ತರಕಾರಿ ತರಕಾರಿ<br>ಅಮ್ಮನು ತಂದ ತರಕಾರಿ<br>ದಪ್ಪನೆ ಇರುವ ಕುಂಬಳಕಾಯಿ<br>ಉದ್ದನೆ ಇರುವ ಪಡುವಲಕಾಯಿ<br>ಸಣ್ಣಗಿರುವ ಬೆಂಡೆಕಾಯಿ<br>ನುಣ್ಣಗೆ ಇರುವ ತೊಂಡೆಕಾಯಿ<br>ಅಮ್ಮನು ತಂದ ತರಕಾರಿ<br>ನಾನು ತಿಂದ ತರಕಾರಿ |
| | **ನನ್ನ ಸಮಯ (Free Indore play)** | ದಿನ – 9<br>ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ** | **ಸಾಮರ್ಥ್ಯ : ಪರಸ್ಪರ ಸಂಬಂಧ ಗುರುತಿಸಿ ಹೊಂದಿಸುವುದು, ಪರಿಸರದ ಅರಿವು**<br>**ಚಟುವಟಿಕೆ : 15 ಗುರುತಿಸಿ ಹೊಂದಿಸು (ಗುರಿ–3)**<br>**ಉದ್ದೇಶ:– ಪರಸ್ಪರ ಎರಡು ವಸ್ತುಗಳ ನಡುವಿನ ಸಹಸಂಬಂಧ ಗುರುತಿಸುವುದು.**<br>**ಅಗತ್ಯ ಸಾಮಗ್ರಿಗಳು : ಬೀಗ– ಕೀ, ಮೇಣದಬತ್ತಿ– ಬೆಂಕಿಪೊಟ್ಟಣ, ಕಪ್ –ಸಾಸರ್, ಲೋಟ–ಜಗ್, ಸೀಮೆಸುಣ್ಣ– ಡಸ್ಟರ್, ಪೆನ್ಸಿಲ್–ಎರೇಸರ್.** |

| | | | |
|---|---|---|---|
| | ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ( ನಿರ್ದೇಶಿತ) ಚಟುವಟಿಕೆ) | | ವಿಧಾನ : ಆರಂಭದಲ್ಲಿ ವಸ್ತುಗಳ ನಡುವಿನ ಪರಸ್ಪರ ಸಂಬಂಧ ಗುರುತಿಸಿ ಹೊಂದಾಣಿಕೆ ಮಾಡಲು ತಿಳಿಸುವುದು. ಸಂಗ್ರಹಿಸಿದ ವಸ್ತುಗಳನ್ನು ಬೀಗ– ಕೀ, ಮೇಣದಬತ್ತಿ– ಬೆಂಕಿಪೊಟ್ಟಣ, ಕಪ್–ಸಾಸರ್, ಲೋಟ–ಜಗ್, ಸೀಮೆಸುಣ್ಣ–ಡಸ್ಟರ್, ಪೆನ್ಸಿಲ್–ಎರೇಸರ್.ಇವುಗಳನ್ನು ಒಟ್ಟಾಗಿ ಹಾಕಿ ಗುರುತಿಸಲು ಹೇಳುವುದು ಮತ್ತು ಪ್ರತಿಯೊಂದು ವಸ್ತುವನ್ನು ಹೆಸರಿಸುವುದು. ಮೊದಲಿಗೆ ಪೆನ್ಸಿಲಯನ್ನು ಗುಂಪಿನಿಂದ ತೆಗೆದು ತೋರಿಸುವುದು. ಪೆನ್ಸಿಲ್‌ಗೆ ಸಂಬಂಧವಿರುವ ವಸ್ತುವನ್ನು ಗುಂಪಿನಲ್ಲಿ ಗುರುತಿಸಿ ಹೊರತೆಗೆಯುವುದು (ಎರೇಸರ್). ಹೀಗೆ ಒಂದು ವಸ್ತುವಿಗೆ ಪರಸ್ಪರ ಸಂಬಂಧವಿರುವ ವಸ್ತುಗಳನ್ನು ಗುರುತಿಸಿ ಹೋಲಿಸುವುದು.<br>**ತರಗತಿ–2**<br>ತನಗೆ ಗೊತ್ತಿರುವ ಸಹಸಂಬಂಧವಿರುವ ವಸ್ತುಗಳ ಹೆಸರನ್ನು ಮೌಖಿಕವಾಗಿ ಹೇಳಿಸುವುದು.<br>**ತರಗತಿ–3**<br>ಮಕ್ಕಳಿಗೆ ವಸ್ತುಗಳ ಹೆಸರನ್ನು ಹೇಳಿಸಿ ಅದಕ್ಕೆ ಸಹಸಂಬಂಧವಿರುವ ಇನ್ನೊಂದು ವಸ್ತುವಿನ ಹೆಸರನ್ನು ಹೇಳಲು ಪ್ರೇರೆಪಿಸುವುದು.<br>ಉದಾ:– ಸೀಮೆಸುಣ್ಣ–ಕಪ್ಪುಹಲಗೆ<br><br>*** ಬಳಸಬೇಕಾದ ಅಭ್ಯಾಸ ಹಾಳೆಗಳು: I.L-6 & 7 ( 01, 02,03ನೇ ತರಗತಿ)** |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.<br>ಚಟುವಟಿಕೆ –ಪಜಲ್ ತಯಾರಿಸುವುದು.. ಗುರಿ – 1<br>ಉದ್ದೇಶ;<br>• ಚಿತ್ರಗಳನ್ನು ಆಯ್ಕೆ ಮಾಡಿ ಸಂಗ್ರಹಿಸುವ ಕೌಶಲ ಬೆಳೆಯುತ್ತದೆ.<br>• ಕೈಗಳ ಮತ್ತು ಬೆರಳುಗಳ ಕುಶಲತೆ ಹೆಚ್ಚುವುದರ ಜೊತೆಗೆ ಏಕಾಗ್ರತೆ ಬೆಳೆಯುತ್ತದೆ.<br><br>ಸಾಮಗ್ರಿಗಳು; ಹಳೆಯ ದಿನಪತ್ರಿಕೆಗಳು/ ಮಸ್ತಕಗಳು., ರಟ್ಟು ಮತ್ತು ಅಂಟು<br>ವಿಧಾನ : ಹಿಂದಿನ ದಿನದ ಚಟುವಟಿಕೆಯನ್ನು ಪೂರ್ಣಗೊಳಿಸಿ ಜಿಗ್ ಜಾಗ್ ಪಜಲ್ ಅನ್ನು ರಚಿಸುವುದು.[ಮೊದಲ ದಿನ ದಿನಪತ್ರಿಕೆ/ ಮಸ್ತಕಗಳಲ್ಲಿನ ಕತ್ತರಿಸಿದ ದೊಡ್ಡ ಚಿತ್ರಗಳನ್ನು ಸಂಗ್ರಹಿಸಿ ಅದನ್ನು ರಟ್ಟಿಗೆ ಅಂಟಿಸಲು ಹಾಗೂ ತಮ್ಮದೇ ಆದ ಪಜಲ್ ಗಳನ್ನು ರಚಿಸಲು ಹೇಳುವುದು.].<br>ವಿವರ; 2 ಮತ್ತು 3 ನೇ ತರಗತಿಗೆ ತಾವು ಸಂಗ್ರಹಿಸಿ ಕತ್ತರಿಸಿದ ಚಿತ್ರಗಳನ್ನು ರಟ್ಟಿಗೆ ಅಂಟಿಸುವುದರ ಮೂಲಕ ತನ್ನದೇ ಫಜಲ್ ಗಳನ್ನು ರಚಿಸಲು ಅವಕಾಶ ಕಲ್ಪಿಸುವುದು.<br>*** ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-2 ( 01, 02,03ನೇ ತರಗತಿ)** |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ: ಕ್ರಿಯಾತ್ಮಕ ಸ್ವ ಅಭಿವ್ಯಕ್ತಿ, ಧ್ವನಿ ಸಂಕೇತ ಹಾಗೂ ಪ್ರಾಸದ ಅರಿವು, ಪರಿಸರ ಪ್ರಜ್ಞೆ, ಪದಸಂಪತ್ತಿನ ಬೆಳವಣಿಗೆ<br>ಚಟುವಟಿಕೆ 3 ಹಾಡು, ಪ್ರಾಸಗೀತೆ, ಪದ್ಯ/ನಾಟಕ. (ಗುರಿ–2) **ECL-3** ( 3 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶ:<br>* ಧ್ವನಿ ಸಂಕೇತಗಳ ಅರಿವನ್ನು ಮೂಡಿಸುವುದು.<br>* ಪ್ರಾಸಗಳ ಅರಿವನ್ನು ಉಂಟು ಮಾಡುವುದು.<br>* ಕ್ರಿಯಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.<br>* ತನ್ನ ಸುತ್ತಲಿನ ಪರಿಸರದೊಂದಿಗೆ ಸಂಬಂಧೀಕರಿಸುವುದು.<br>ಅಗತ್ಯ ಸಾಮಗ್ರಿಗಳು– ಇಲ್ಲ<br>ವಿಧಾನ: ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ. ಶಿಕ್ಷಕರು ಮಕ್ಕಳಿಗೆ 3 ನೇ ದಿನದದಂದು ಪರಿಚಯಿಸಿದ ಪ್ರಾಸಗೀತೆಯನ್ನೇ ಅಭಿನಯದೊಂದಿಗೆ ಹಾಡಿ ತೋರಿಸಲಿ. ಶಿಕ್ಷಕರನ್ನು ಅನುಕರಿಸುತ್ತಾ ಮಕ್ಕಳು ಹಾಡನ್ನು ಪುನರುಚ್ಚರಿಸಲು ತಿಳಿಸಿ.<br>ನೆನಪಿಡಬೇಕಾದ ಅಂಶಗಳು:<br>* ಮಕ್ಕಳು ಹಾಡನ್ನು ಆನಂದಿಸಲು ಸೂಕ್ತ ಅಭಿನಯ ಹಾಗೂ ಉತ್ಸಾಹದಿಂದ ಹಾಡಿ.<br>* ಮಗುವಿಗೆ ತಿಳಿದಿರುವ ಹಾಡನ್ನು ಹೇಳಲು ಉತ್ತೇಜಿಸಿ.<br>ತರಗತಿವಾರು ವಿವರ: 2 ಹಾಗೂ 3 ನೇ ತರಗತಿ ಮಕ್ಕಳು ಶಿಕ್ಷಕರನ್ನು ಅನುಕರಿಸುತ್ತಾ ರಾಗಬದ್ಧವಾಗಿ ಅಭಿನಯದೊಂದಿಗೆ ಹಾಡುವುದು. (27 ನೇ ದಿನಕ್ಕೆ ಮುಂದುವರೆದಿದೆ) |
| | | ಅರ್ಥ ಗ್ರಹಿಕೆ | ಸಾಮರ್ಥ್ಯ : ಪದ ಗುರುತಿಸುವುದು, ಮುದ್ರಿತ ಪಠ್ಯದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ : 11 ಹೆಸರಿನ ಜಗತ್ತು (ಗುರಿ 2) |

DRAFT 22.02.22

| | | | |
|---|---|---|---|
| | | ಯೊಂ ದಿಗಿನ ಓದು | ಉದ್ದೇಶ: ಪರಿಚಿತ ಸನ್ನಿವೇಶದಲ್ಲಿನ ವಸ್ತುಗಳನ್ನು ಲಿಪಿಸಂಕೇತಗಳೊಂದಿಗೆ ಸಹ ಸಂಬಂಧಿಕರಿಸಿಕೊಳ್ಳುವುದು. ಸಾಹಿತ್ಯ ಮತ್ತು ವಸ್ತು ಒಂದೇ ಇದೆ ಎಂಬ ತೀರ್ಮಾನಕ್ಕೆ ಬಂದು ಓದುವಿಕೆಯಲ್ಲಿ ಆಸಕ್ತಿ ಬೆಳಸಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಚಾರ್ಟ್ ಪೇಪರ್, ಪೆನ್ಸಿಲ್, ಕ್ರೇಯಾನ್ಸ್, ನಮಗೆ ಕಣ್ಣಿಗೆ ಕಾಣುವ ಸುತ್ತಮುತ್ತಲಿನ ಸಾಮಾಗ್ರಿಗಳು<br>ವಿಧಾನ :<br>– ಮಕ್ಕಳ ಸಹಾಯದಿಂದ ತರಗತಿಯಲ್ಲಿರುವ ಸಾಮಾನ್ಯ/ಪರಿಚಿತ ವಸ್ತುಗಳ ಹೆಸರನ್ನು ಪಟ್ಟಿ ಮಾಡುವುದು.<br>ಉದಾ– ಮೇಜು, ಖುರ್ಚಿ, ಬಾಗಿಲು ಇತ್ಯಾದಿ.<br>– ಸಿದ್ಧಪಡಿಸಿದ ನಾಮ ಫಲಕಗಳನ್ನು ಆಯಾ ವಸ್ತುಗಳ ಮೇಲೆ ಅಂಟಿಸುವುದು.<br>– ಇನ್ನೊಂದು ಸೆಟ್ ನಾಮ ಫಲಕಗಳ ಮಿಂಚುಪಟ್ಟಿಗಳನ್ನು ತಯಾರಿಸಿಟ್ಟುಕೊಳ್ಳುವುದು.<br>– ಪದಗಳ ಮಿಂಚುಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುತ್ತಾ, ಮಕ್ಕಳಿಂದ ಗಟ್ಟಿಯಾಗಿ ಹೇಳಿಸುವುದು.<br>– ಪದ ಉಚ್ಛರಿಸುತ್ತಾ ಆ ವಸ್ತುವಿನ ಬಳಿಗೆ ಮಗು ಹೋಗಲು ತಿಳಿಸುವುದು.<br>_ ಮಗು ಕನಿಷ್ಟ ನಾಲ್ಕೈದು ವಸ್ತುಗಳನ್ನಾದರೂ ಹೆಸರಿಸಲು ಅವಕಾಶ ಕಲ್ಪಿಸುವುದು..<br>_ ಆ ಪದಗಳನ್ನು ಕಥೆಯಲ್ಲಿ ಗುರುತಿಸಲು ಅವಕಾಶ ಕಲ್ಪಿಸುವುದು.<br>– ಚಿತ್ರ ಸಹಿತ ನಾಮಫಲಕ/ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿ, ಚಟುವಟಿಕೆ ಸ್ಥಳದಲ್ಲಿ/ಸಮಯದಲ್ಲಿ ಮಕ್ಕಳಿಗೆ ಗುರುತಿಸಿ ಓದಲು (ಚಿತ್ರಗಳ ಸಹಾಯದಿಂದ) ಅವಕಾಶ ಕಲ್ಪಿಸುವುದು.<br>2ಮತ್ತು 3ನೇ ತರಗತಿ: ಕಥೆ/ಪಠ್ಯದಲ್ಲಿ ಬಂದಿರುವ ಮುಖ್ಯಪದಗಳ ಮಿಂಚುಪಟ್ಟಿ ತಯಾರಿಸಿಕೊಳ್ಳುವುದು<br>ಮಕ್ಕಳಿಗೆ ಶಿಕ್ಷಕರು ಕಥೆ/ಪಠ್ಯವನ್ನು ನೀಡಿ ಓದಲು ಅವಕಾಶ ಕಲ್ಪಿಸುವುದು.ನಂತರ ಮಿಂಚುಪಟ್ಟಿಯಲ್ಲಿರುವ ಪದಗಳನ್ನು ಕತೆಯಲ್ಲಿ ಹುಡುಕಲು ಸೂಚಿಸುವುದು.<br><br> |
| | | ಉದ್ದೇ ಶಿತ ಬರಹ | ಸಾಮರ್ಥ್ಯ: ಸೂಕ್ಷ್ಮ ಸ್ನಾಯು ಕೌಶಲಗಳ ಅಭಿವೃದ್ಧಿ, ಉದ್ದೇಶಿತ ಬರವಣಿಗೆ<br>ಚಟುವಟಿಕೆ: 37 ಚಿತ್ರಿಸುವುದು ಮತ್ತು ಹೆಸರಿಸುವುದು. (ಗುರಿ–2) **ECW-3**<br>ಉದ್ದೇಶಗಳು:<br>• ಸೂಕ್ಷ್ಮ ಸ್ನಾಯು ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಉದ್ದೇಶಿತ ಬರವಣಿಗೆಗೆ ಅಣಿಗೊಳಿಸುವುದು.<br>• ಆಯ್ಕೆಯ ಚಿತ್ರ ಬಿಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ , ಕ್ರೇಯಾನ್ಸ್, ಪೆನ್ಸಿಲ್<br>ವಿಧಾನ : ಮಕ್ಕಳು ತಮ್ಮ ಆಯ್ಕೆಯ ಗಿಡಮರಗಳ ಚಿತ್ರ ಬಿಡಿಸುವುದು.ಬರೆದ ಚಿತ್ರಕ್ಕೆ ಬಣ್ಣ ತುಂಬಿ ಹೆಸರಿಸಲು ತಿಳಿಸುವುದು<br>ತರಗತಿವಾರು ವಿವರ: 2 ಮತ್ತು 3ನೇ ತರಗತಿಯ ಮಕ್ಕಳು ತಮ್ಮ ಆಯ್ಕೆಯ ಗಿಡಮರಗಳ ಚಿತ್ರವನ್ನು ರಚಿಸಿ, ಹೆಸರಿಸಲು ತಿಳಿಸುವುದು. |
| | **ಹೊರಾಂಗಣ ಆಟಗಳು** | Day 9<br>ಚಟುವಟಿಕೆ –23 ಗುರಿಇಟ್ಟು ಒದೆ. ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ.<br>ಬೇಕಾಗುವ ಸಾಮಗ್ರಿ: ದೊಡ್ಡ ಚೆಂಡು<br>ವಿಧಾನ:<br>• ಚೆಂಡನ್ನು ಬಳಸಿ ದೂರದಲ್ಲಿ ಇರಿಸಲಾಗಿರುವ ಬಕೇಟಿಗೆ ಗುರಿಯಿಡಲು ಮಕ್ಕಳನ್ನು ಪ್ರೋತ್ಸಾಹಿಸುವುದು.<br>•ಚಟುವಟಿಕೆಯ ಯಾವುದಾದರೂ ಹಂತದಲ್ಲಿ ಪ್ರತಿ ಮಗುವೂ ಯಶಸ್ಸನ್ನು ಕಾಣುವ ಹಾಗೆ ಪ್ರೋತ್ಸಾಹಿಸುವುದು.<br>**ಎರಡು ಮತ್ತು ಮೂರನೇ ತರಗತಿ ಮಕ್ಕಳಿಗೆ ಬಕೇಟಿನ ದೂರವನ್ನು ಹೆಚ್ಚಿಸುತ್ತಾ ಆಟವಾಡಿಸುವುದು.** | |

DRAFT 22.02.22

| | | |
|---|---|---|
| | ಕಥಾ ಸಮಯ | **ಶೀರ್ಷಿಕೆ :**ಗೆಳೆಯರ ಬೇಸಾಯ<br>**ಸಾಮಗ್ರಿಗಳು :** ಸರಣಿ ಚಿತ್ರಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ **ಆಲೋಚನಾ ಶಕ್ತಿಯನ್ನು ವೃದ್ಧಿಸುವುದು**<br>➢ **ಪ್ರಶ್ನಿಸುವ ಮನೋಭಾವಉಂಟುಮಾಡುವುದು.**<br>➢ **ಊಹಿಸುವ ಕೌಶಲವನ್ನು ಹೆಚ್ಚಿಸುವುದು.**<br>ವಿಧಾನ :<br>***ಕಡ್ಡಿ ಚಿತ್ರಗಳು***<br>ಕಡ್ಡಿ ಚಿತ್ರಗಳನ್ನು ಬಳಸಿ ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು.<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>• "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

**ವಾರ–2** **ದಿನ–10**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 10 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ*** | ದಿನ–7 ರಲ್ಲಿ ಉಲ್ಲೇಖಿಸಲಾದ ಶುಭಾಶಯ ವಿನಿಮಯ ಚಟುವಟಿಕೆಯನ್ನು ಪುನರಾವರ್ತಿಸಿ. |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ದಿನ–8 ರಲ್ಲಿ ಉಲ್ಲೇಖಿಸಲಾದ ಹಾಡನ್ನು ಹಾಡಿ ಈ ಕೆಳಕಂಡ ರೀತಿಯ ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಉತ್ತರವನ್ನು ಪಡೆಯುವುದು.<br>ಮಕ್ಕಳಿಗೆ ಕೇಳಬಹುದಾದ ಪ್ರಶ್ನೆಗಳು:<br>• ನಿಮ್ಮ ಮನೆಯಲ್ಲಿ ಯಾರು ತರಕಾರಿ ತರುತ್ತಾರೆ?<br>• ನಿನಗೆ ಯಾವ ತರಕಾರಿ ಇಷ್ಟ?<br>• ಕುಂಬಳಕಾಯಿ ನೋಡಿದಿರಾ?<br>• ಯಾವ ಯಾವ ತರಕಾರಿ ತಿಂದಿದ್ದೀಯಾ? ಇತ್ಯಾದಿ.... |
| | **ನನ್ನ ಸಮಯ (Free Indore play)** | ದಿನ – 10<br>ಮಕ್ಕಳು ತಾವು ನಿರ್ವಹಿಸಲಿಚ್ಛಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |

DRAFT 22.02.22

| | | |
|---|---|---|
| | ('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು) | |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | **ಸಾಮರ್ಥ್ಯ : ಹೊಂದಿಸುವುದು, ಪರಿಸರದ ಅರಿವು. ಬಣ್ಣದ ಕಲ್ಪನೆ, ಆಕಾರ–ಗಾತ್ರ**<br>**ಚಟುವಟಿಕೆ : 12 ನನ್ನನ್ನು ಗುರುತಿಸು. (ಗೋಲ –3)**<br>**ಉದ್ದೇಶ:– ವಸ್ತುವಿನ ಆಕಾರ, ಗಾತ್ರ ಮತ್ತು ಬಣ್ಣಗಳ ಆಧರಿಸಿ ಜೋಡಿಸುವುದು.**<br>**ಅಗತ್ಯ ಸಾಮಗ್ರಿಗಳು : ಪರಿಸರದಲ್ಲಿಯ ವಿವಿಧ ರೀತಿಯ ವಸ್ತುಗಳು, ಬ್ಲಾಕ್ ಗಳು, ಚೌಕಗಳು, ಚಿಕ್ಕ ಕಲ್ಲುಗಳು, ಬಾಟಲ್ ಮುಚ್ಚಳಗಳು, ಲಿಂಬು, ಚೆಂಡುಗಳು ಇತ್ಯಾದಿ**<br><br>**ವಿಧಾನ : ಒಂದೇ ರೀತಿಯ ವಸ್ತುಗಳನ್ನು ಗುರುತಿಸಲು ಮಕ್ಕಳಿಗೆ ಎಂಟರಿಂದ ಹತ್ತು ವಸ್ತುಗಳನ್ನು ನೀಡುವುದು. ಮಕ್ಕಳು ಸಣ್ಣ ಗುಂಪುಗಳಲ್ಲಿ ಕೆಲಸ ಮಾಡುವಾಗ ಪ್ರತಿ ಗುಂಪಿಗೆ ಬ್ಲಾಕ್‌ಗಳು, ಸೀಮೆಸುಣ್ಣ, ಬಾಟಲ್ ಮುಚ್ಚಳ, ಚೆಂಡುಗಳನ್ನು ನೀಡಿ. ಬಾಟಲ್ ಮುಚ್ಚಳಗಳನ್ನು ಮಕ್ಕಳಿಗೆ ಹುಡುಕಲು ಹೇಳುವುದು. ನಿಡಲಾದ ವಸ್ತುಗಳನ್ನು ಆಕಾರ, ಗಾತ್ರ, ಬಣ್ಣ, ಗುಣಲಕ್ಷಣಗಳ ಆಧಾರದಲ್ಲಿ ಹೊಂದಿಸುವುದು. ವಿಭಿನ್ನ ರೀತಿಯ ವಸ್ತುಗಳನ್ನು ನೀಡಿ ಒಂದಕ್ಕಿಂತ ಒಂದು ಹೇಗೆ ಭಿನ್ನವಾಗಿವೆ ಎಂದು ತಿಳಿಸಲು ಹೇಳುವುದು.**<br>**ತರಗತಿ–2**<br>**ಈ ಮೇಲಿನ ಚಟುವಟಿಕೆಯನ್ನು ಮಾಡಿಸುವುದು.**<br>**ತರಗತಿ–3**<br>**ಮೇಲಿನ ಚಟುವಟಿಕೆಯಂತೆ 10 ರಿಂದ 15 ವಸ್ತುಗಳನ್ನು ಗುಂಪಿನಲ್ಲಿ ಕೊಟ್ಟು ಅವುಗಳ ಗಾತ್ರ, ಆಕಾರ, ಬಣ್ಣದ ಆಧಾರದ ಮೇಲೆ ಜೋಡಿಸಲು ಹೇಳುವುದು.**<br><br>* **ಬಳಸಬೇಕಾದ ಅಭ್ಯಾಸ ಹಾಳೆಗಳು: I.L-8 & 9 ( 01, 02,03ನೇ ತರಗತಿ)** |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.<br>ಚಟುವಟಿಕೆ –. 34 ಆಕೃತಿಗಳನ್ನು ಅಂಟಿಸು./ನನ್ನನ್ನು ಹುಡುಕು. ಗುರಿ – 1 ಮತ್ತು 3<br>ಉದ್ದೇಶ;<br>• ಕತ್ತರಿಯನ್ನು ಹಿಡಿದು ಹಾಳೆಯನ್ನು ಕತ್ತರಿಸುವ ವಿಧಾನವನ್ನು ತಿಳಿಯುತ್ತಾರೆ.<br>• ಕೈ ಮತ್ತು ಬೆರಳುಗಳ ಕುಶಲತೆ ಹೆಚ್ಚುವುದರ ಜೊತೆಗೆ ಏಕಾಗ್ರತೆ ಹೆಚ್ಚಿಸಿಕೊಳ್ಳುತ್ತಾರೆ.<br>• ವಸ್ತುಗಳನ್ನು ಹೋಲಿಸುವುದನ್ನು ಕಲಿಯುತ್ತಾರೆ.<br>ಸಾಮಗ್ರಿಗಳು : 1.ಕತ್ತರಿ, ಬಣ್ಣದ ಪೇಪರ್, ಅಂಟು.<br>2. ಸೀಮೆಸುಣ್ಣ, ಪೆನ್ಸಿಲ್,ಪುಸ್ತಕಗಳು, ಕಲ್ಲು/ ಬೀಜ/ಚೀಲ[ ಮೂರಕ್ಕಿಂತ ಹೆಚ್ಚು ವಸ್ತುಗಳಿರಬೇಕು.<br>ವಿಧಾನ :1. ಬಿಳಿ ಪೇಪರಿನಲ್ಲಿ ವಿವಿಧ ಆಕೃತಿಗಳ[ ವೃತ್ತ, ತ್ರಿಭುಜ,ಚೌಕ ಮತ್ತು ಆಯತ] ಚಿತ್ರಗಳನ್ನು ಕತ್ತರಿಸಿ ಇನ್ನೊಂದು ಬಣ್ಣದ ಹಾಳೆಯ ಮೇಲೆ ಅಂಟಿಸಲು ಹೇಳುವುದು.<br>2. ಶಿಕ್ಷಕರು ಮಗುವಿಗೆ ಒಂದು ವಸ್ತುವನ್ನು ನೀಡಬೇಕು. ಅದೇ ರೀತಿಯ ವಸ್ತು ಮತ್ತು ಅದಕ್ಕೆ ಸಂಭಂದಿಸಿದ ಇತರೆ ವಸ್ತುಗಳನ್ನು ತರಗತಿ ಕೊಠಡಿಯಲ್ಲಿ ಹುಡುಕಲು ಹೇಳಬೇಕು. ಈ ಆಟವನ್ನು ಇತರ ಅನೇಕ ವಸ್ತುಗಳೊಂದಿಗೆ ಪುನರಾವರ್ತಿಸಬೇಕು.<br>ಹೆಚ್ಚುವರಿಯಾಗಿ ಸುಗಮಕಾರರು ನೆಲದ ಮೇಲೆ ಎರಡು ವೃತ್ತಗಳನ್ನು ಬರೆದು ಅದಕ್ಕೆ ಎ ಮತ್ತು ಬಿ ಎಂದು ಹೆಸರಿಸಬೇಕು.ಮಗು ಪಡೆದ ವಸ್ತುಗಳನ್ನು ಎ ಗುಂಪಿಗೂ ಅದಕ್ಕೆ ಸಂಭಂದಿಸಿದ ವಸ್ತುವನ್ನು ಬಿ ಗುಂಪಿಗೂ ಹಾಕಲು ತಿಳಿಸುವುದು.<br>ವಿವರ; 2ಮತ್ತು 3 ನೇ ತರಗತಿಗೆ ವಸ್ತುಗಳನ್ನು ಹುಡುಕಿ ಹೊಂದಿಸುವ ಆಟವಾಡಲು ತಿಳಿಸುವುದು. |

DRAFT 22.02.22

| | | | |
|---|---|---|---|
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ:– ಧ್ವನಿ ಸಂಕೇತಗಳ ಅರಿವು, ಅಕ್ಷರ ಶಬ್ದ ಸಹ ಸಂಬಂಧ.<br>ಚಟುವಟಿಕೆ–20 ಹೆಸರಿನ ಆರಂಭಿಕ ಅಕ್ಷರದಿಂದ ವಸ್ತುವನ್ನು ಪತ್ತೆ ಹಚ್ಚುವುದು (ಗುರಿ–2) **ECL-2** **(2 ನೇ ದಿನದಿಂದ ಮುಂದುವರೆದಿದೆ.)**<br>ಉದ್ದೇಶಗಳು:–<br>* ಧ್ವನಿ ಸಂಕೇತಗಳ ಅರಿವು ಮೂಡಿಸುವುದು.<br>* ಅಕ್ಷರಗಳು ಮತ್ತು ಪದಗಳ ನಡುವಿನ ಸಹಸಂಬಂಧವನ್ನು ಗ್ರಹಿಸುವುದು.<br>* ಪದಗಳನ್ನು ಗ್ರಹಿಸಿ ಗುರುತಿಸುವುದು.<br>* ಅಂತ್ಯಾಕ್ಷರಿ ಪದಗಳನ್ನು ಬರೆಯುವುದು.<br>ಅಗತ್ಯ ಸಾಮಗ್ರಿಗಳು– ಇಲ್ಲ<br>ಸಲಹಾತ್ಮಕ ವಿಷಯ : ಹಣ್ಣುಗಳು<br>ವಿಧಾನ:– ಸುಳಿವುಗಳ ಮೂಲಕ ತರಗತಿ ಹಣ್ಣುಗಳ ಹೆಸರನ್ನು ಊಹಿಸಿ ಹೇಳುವ ಚಟುವಟಿಕೆಯನ್ನು ಆಯೋಜಿಸಿ. ಉದಾಹರಣೆಗಾಗಿ ಶಿಕ್ಷಕರು 'ನನ್ನ ಮನಸ್ಸಿನಲ್ಲಿರುವ ಹಣ್ಣು ಹಸಿರು ಬಣ್ಣವನ್ನು ಹೊಂದಿದ್ದು ಅದರ ಹೆಸರು ದ್ರಾ ಅಕ್ಷರದಿಂದ ಪ್ರಾರಂಭವಾಗುತ್ತದೆ ಎಂದು ಹೇಳಿದಾಗ ಮಕ್ಕಳು ದ್ರಾಕ್ಷಿ ಎಂದು ಗುರುತಿಸುವುದು. ಹೀಗೆಯೇ ವಿವಿಧ ಉದಾಹರಣೆಗಳನ್ನು ನೀಡುವುದು.<br>ತರಗತಿವಾರು ವಿವರ: 2ನೇ ಮತ್ತು 3ನೇ ತರಗತಿ ಮಕ್ಕಳಿಗೆ ಪದಗಳ ಮುಂದುವರೆದ ಭಾಗವಾಗಿ ವಾಕ್ಯಗಳನ್ನು ರಚಿಸುವಂತೆ ಹಾಗೂ ಸರಳ ವಾಕ್ಯಗುಚ್ಚಗಳನ್ನು ರಚಿಸುವಂತೆ ಚಟುವಟಿಕೆಗಳನ್ನು ಮುಂದುವರೆಸುವುದು..( 22 ನೇ ದಿನಕ್ಕೆ ಮುಂದುವರೆದಿದೆ)<br>**ಅಭ್ಯಾಸದ ಹಾಳೆಗಳು: EC-2 (ತರಗತಿ 1, 2, 3)** |
| | | ಅರ್ಥಗ್ರಹಿಕೆಯೊಂದಿಗಿನ ಓದು | **ಸಾಮರ್ಥ್ಯ: ಪದ ಸಂಪತ್ತು ಅಭಿವೃದ್ಧಿ ಸ್ವಯಂ ಅಭಿವ್ಯಕ್ತಿ ನಟನಾ ಓದು**<br>**ಚಟುವಟಿಕೆ 1 ಎ: ಊಹಾತ್ಮಕ ಓದು (ಗುರಿ–2)**<br>**ಉದ್ದೇಶ: ಮಕ್ಕಳು ಪುಸ್ತಕದಲ್ಲಿನ ಚಿತ್ರ ಸನ್ನಿವೇಶವನ್ನು ನೋಡುವುದರ ಮೂಲಕ ಚಿತ್ರಸಂಕೇತಗಳನ್ನು ಅರ್ಥಹಿಸಿಕೊಂಡು ಸಂಬಂಧೀಕರಿಸಿಕೊಂಡು ಅಭಿವ್ಯಕ್ತಿಸುವುದು.**<br>ಅಗತ್ಯ ಸಾಮಗ್ರಿಗಳು: **ಸಚಿತ್ರ ಕೋಶ, ಸರಣಿ ಚಿತ್ರ ಕಥೆ ಪುಸ್ತಕ**<br>**ವಿಧಾನ: ಮಕ್ಕಳು ಚಿತ್ರಗಳನ್ನೊಳಗೊಂಡ ಪುಸ್ತಕಗಳನ್ನ ಸಚಿತ್ರ ಕೋಶ, ಸರಣಿ ಚಿತ್ರ ಕಥೆ ಪುಸ್ತಕ ನೋಡಿ ಅಲ್ಲಿರುವ ಸನ್ನಿವೇಶ ವನ್ನು ಊಹೆ ಮಾಡಿ ಓದುವರು.**<br>**2ನೇ ಮತ್ತು 3ನೇ ತರಗತಿ: ಚಿತ್ರ ಸನ್ನಿವೇಶವನ್ನು ಸಾಹಿತ್ಯದೊಂದಿಗೆ ಸಹ ಸಂಬಂಧಿಕರಿಸಿಕೊಂಡು ಸರಳವಾಗಿ ಓದುವಿಕೆಯಲ್ಲಿ ತೊಡಗುತ್ತಾರೆ** |
| | | ಉದ್ದೇಶಿತ ಬರಹ | ಸಾಮರ್ಥ್ಯ: ಕೈಕಣ್ಣು ಸಂಯೋಜನೆ, ಬರವಣಗೆ ಕೌಶಲಗಳ ಅಭ್ಯಾಸ, ಸೃಜನಶೀಲ ಅಭಿವ್ಯಕ್ತಿ.<br>ಚಟುವಟಿಕೆ: 2 ಮುಕ್ತ ಚಿತ್ರ ರಚನೆ (ಗುರಿ–2 ) **ECW-6**<br>ಉದ್ದೇಶಗಳು:<br>• ಬರವಣಿಗೆಯ ಆರಂಭಿಕ ಕೌಶಲಗಳನ್ನು ರೂಢಿಸುವುದು.<br>• ಕಣ್ಣು–ಕೈಗಳ ಸಮನ್ವಯ ಕೌಶಲವನ್ನು ಅಭಿವೃದ್ಧಿಪಡಿಸುವುದು.<br>• ಕ್ರಿಯಾತ್ಮಕ ಅಭಿವ್ಯಕ್ತಿಗೆ ಅವಕಾಶ ನೀಡುವುದು.<br>ಅಗತ್ಯ ಸಾಮಗ್ರಿಗಳು: ಕ್ರೇಯಾನ್ಸ್, ಬಣ್ಣದ ಪೆನ್ಸಿಲ್‌ಗಳು, ಮಾರ್ಕರ್, ಸ್ಲೇಟ್ ಬಿಳಿಯ ಹಾಳೆಗಳು<br>ವಿಧಾನ: ವಾಲ್‌ಸ್ಲೇಟ್‌ನಲ್ಲಿ ಮುಕ್ತವಾಗಿ ಬರೆಯಲು, ಅನಿಸಿದ್ದನ್ನು ಬಿಡಿಸಲು ಅವಕಾಶ ಕಲ್ಪಿಸುವುದು. ಅವರ ಬರವಣಿಗೆ ಬಗ್ಗೆ ಮಾತನಾಡಲು ತಿಳಿಸುವುದು. ಅವರಿಗೆ ಪ್ರಶ್ನೆ ಕೇಳುತ್ತಾ ಬರವಣಿಗೆ ಬಗ್ಗೆ ಮಾಹಿತಿ ಪಡೆಯುವುದು.<br>ತರಗತಿವಾರು ವಿವರ: ತಮ್ಮ ಇಷ್ಟದ ಚಿತ್ರ/ ಸನ್ನಿವೇಶವನ್ನು ಚಿತ್ರಿಸಿ, ಅವುಗಳ ಬಗ್ಗೆ 4–5 ವಾಕ್ಯಗಳನ್ನು ಬರೆಯಲು ತಿಳಿಸಿ. |
| | **ಹೊರಾಂಗಣ ಆಟಗಳು** | | ಚಟುವಟಿಕೆ –24 ಬೌನ್ಸ್ ಮಾಡಿ ಚೆಂಡನ್ನು ಹಿಡಿಯುವುದು. ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ.<br>ಬೇಕಾಗುವ ಸಾಮಗ್ರಿ: ಚೆಂಡು<br>ವಿಧಾನ: |

DRAFT 2022

| | | |
|---|---|---|
| | | • ಮಕ್ಕಳನ್ನು ಪರಸ್ಪರ ಎದುರು ನಿಲ್ಲಿಸಿ ಒಬ್ಬರಿಗೊಬ್ಬರು ಚೆಂಡನ್ನು ಬೌನ್ಸ್ ಮಾಡಿ ಎಸೆಯಲು ಹಾಗೂ ಹಿಡಿಯಲು ಸೂಚಿಸುವುದು.<br>• **ಎರಡು ಮತ್ತು ಮೂರನೇ ತರಗತಿ ಮಕ್ಕಳಿಗೆ ಚೆಂಡನ್ನು ನಿದಿಷ್ಟ ಮಗುವಿಗೆ ಎಸೆಯಲು ತಿಳಿಸುವುದು. ಚೆಂಡಿನ ಗಾತ್ರವನ್ನು ಬದಲಿಸಬಹುದು.** |
| | **ಕಥಾ ಸಮಯ** | **ಶೀರ್ಷಿಕೆ :**ಗೆಳೆಯರ ಬೇಸಾಯ<br>**ಸಾಮಗ್ರಿಗಳು :**ಮುಖವಾಡಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>➢ **ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವ ಆಸಕ್ತಿಯನ್ನು ಬೆಳೆಸುವುದು.**<br>➢ **ಪ್ರಶ್ನಿಸುವ ಮನೋಭಾವಉಂಟುಮಾಡುವುದು.**<br>**ವಿಧಾನ :**<br>***ಗೊಂಬೆಗಳು***<br>ಗೊಂಬೆಗಳನ್ನು ಬಳಸಿ ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು. ಹಿರಿಯ ವಿದ್ಯಾರ್ಥಿಗಳನ್ನು ಬಳಸಿಕೊಂಡು ಪಾತ್ರಗಳನ್ನು ಹಂಚಿಅಭಿನಯಿಸಲು ಸಹಕರಿಸಿ.<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>• "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–2** **ದಿನ–11 (ಶುಕ್ರವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 11 | **ಶುಭಾಶಯ ವಿನಿಮಯ** | ದಿನ–9 ರಲ್ಲಿಉಲ್ಲೇಖಿಸಲಾದ ಶುಭಾಶಯ ವಿನಿಮಯ ಚಟುವಟಿಕೆ ಯನ್ನು ಪುನರಾವರ್ತಿಸಿ |
| | **ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ದಿನ–9 ರಲ್ಲಿ ಉಲ್ಲೇಖಿಸಲಾದ ಹಾಡನ್ನು ಈ ಕೆಳಕಂಡ ರೀತಿಯಲ್ಲಿ ಹಾಡಿಸಿ ಅವರ ಇಷ್ಟದ ತರಕಾರಿಗಳ ಕುರಿತು ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಉತ್ತರವನ್ನು ಪಡೆಯುವುದು<br><br>**ಶಿಕ್ಷಕರು:** ತರಕಾರಿ ತರಕಾರಿ<br>**ಮಕ್ಕಳು:** ಅಮ್ಮನು ತಂದ ತರಕಾರಿ<br>**ಶಿಕ್ಷಕರು:** ದಪ್ಪನೆ ಇರುವ ಕುಂಬಳಕಾಯಿ<br>**ಮಕ್ಕಳು:** ಉದ್ದನೆ ಇರುವ ಪಡುವಲಕಾಯಿ |


DRAFT 22.02.22

| | | |
|---|---|---|
| | | **ಶಿಕ್ಷಕರು:** ಸಣ್ಣಗಿರುವ ಬೆಂಡೆಕಾಯಿ<br>**ಮಕ್ಕಳು:** ನುಣ್ಣಗೆ ಇರುವ ತೊಂಡೆಕಾಯಿ<br>**ಶಿಕ್ಷಕರು:** ಅಮ್ಮನು ತಂದ ತರಕಾರಿ<br>**ಮಕ್ಕಳು:** ನಾನು ತಿಂದ ತರಕಾರಿ<br>• ನಿನಗೆ ತಿಳಿದಿರುವ ತರಕಾರಿಗಳ ಹೆಸರು ಹೇಳು.<br>• ನಿನಗೆ ಇಷ್ಟವಿರುವ ತರಕಾರಿಗಳ ಹೆಸರು ಹೇಳು.<br>• ನಿನಗೆ ಇಷ್ಟ ಇಲ್ಲದಿರುವ ತರಕಾರಿಗಳ ಹೆಸರು ಹೇಳು. ಇತ್ಯಾದಿ. |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ (ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ : ಹೋಲಿಕೆ, ಹೊಂದಾಣಿಕೆ, ವಿಂಗಡಣೆ, ಗಾತ್ರ/ಪ್ರಮಾಣದ ಪರಿಕಲ್ಪನೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ...18 ಹೋಲಿಕೆ ಮಾಡೋಣ (ಗುರಿ 3)**<br>**ಉದ್ದೇಶ:– ವಸ್ತುಗಳ ಗಾತ್ರ ಮತ್ತು ಪ್ರಮಾಣವನ್ನು ಆಧರಿಸಿ ಹೋಲಿಸಿ ವಿಂಗಡಿಸುವುದು.**<br>**ಅಗತ್ಯ ಸಾಮಗ್ರಿಗಳು : ಪೆನ್ಸಿಲ್‌ಗಳು, ಮಾಪಕಗಳು, ಹಣ್ಣುಗಳು (ಸೇಬು,ಕಿತ್ತಳೆ), ತರಕಾರಿಗಳು(ಆಲೂಗಡ್ಡೆ/ಈರುಳ್ಳಿ), ಪಾತ್ರೆಗಳು (ಚಮಚ, ಬಟ್ಟಲುಗಳು, ತಟ್ಟೆಗಳು) , ವಿಭಿನ್ನ ಗಾತ್ರದ ಇತರೆ ವಸ್ತುಗಳು.**<br>**ವಿಧಾನ : ಸರಳವಾದ ಹೋಲಿಕೆ ಕಾರ್ಯವನ್ನು ಮೊದಲು ಸ್ಟ್ರಾಗಳು, ಪೆನ್ಸಿಲ್‌ಗಳು, ಹಣ್ಣುಗಳು, ತರಕಾರಿಗಳು ಮತ್ತು ಲಭ್ಯವಿರುವ ಇತರೆ ವಸ್ತುಗಳನ್ನು ಬಳಸಿ ಮಾಡುವುದು.**<br>*** ಗಾತ್ರ ಮತ್ತು ಪ್ರಮಾಣವನ್ನು ಆಧರಿಸಿ ಹೋಲಿಕೆ ಮಾಡುವುದು. ಗಾತ್ರದ ಆಧರಿಸಿ ವಸ್ತುಗಳ ಗುಂಪಿನಿಂದ ಅತಿ ದೊಡ್ಡ ವಸ್ತು, ಮಕ್ಕಳ ಗುಂಪಿನಿಂದ ಅತಿ ಎತ್ತರವಾದ ಹುಡುಗ, ಅತಿ ಉದ್ದವಾದ ಕೋಲು/ಚಾಕಪೀಸ್ ಆರಿಸಲು ಹೇಳುವುದು.**<br>*** ಹೋಲಿಕೆಯು ಒಂದೇ ವಿಧದ ವಸ್ತುಗಳೊಂದಿಗೆ ಆಗಬೇಕು. ಹೋಲಿಸುವ ಚಟುವಟಿಕೆಯನ್ನು ಮಿಶ್ರ ಗುಂಪಿನಲ್ಲಿ ನಡೆಸಬಾರದು. ಉದಾ: ಆಯತಾಕಾರದ ವಸ್ತುವನ್ನು ವೃತ್ತಾಕಾರದ ವಸ್ತುವಿನೊಂದಿಗೆ ಅಥವಾ ಚೆಂಡನ್ನು ಸೇಬು ಹಣ್ಣಿನೊಂದಿಗೆ ಹೋಲಿಸಬಾರದು.**<br>*** ಅದೇ ರೀತಿ ಪ್ರಮಾಣವನ್ನು ಹೋಲಿಸುವಾಗ ಒಂದೇ ರೀತಿಯ ವಸ್ತುಗಳಿರುವ ಯಾವ ಗುಂಪಿನಲ್ಲಿ ವಸ್ತುಗಳು ಹೆಚ್ಚು ಇವೆ ಎಂದು ಹೋಲಿಸಿ ಹೇಳುವುದು.**<br>**ತರಗತಿ–2**<br>**1. ಕುಂಬಳಕಾಯಿ ಮತ್ತು ಆಲೂಗಡ್ಡೆ ಇವುಗಳಲ್ಲಿ ಭಾರ ಮತ್ತು ಹಗುರದ ವ್ಯತ್ಯಾಸವನ್ನು ಗುರುತಿಸಲು ತಿಳಿಸುವುದು.**<br>**2. ಮೂಲಂಗಿ ಮತ್ತು ನುಗ್ಗೆಕಾಯಿ ಇವುಗಳಲ್ಲಿ ಎತ್ತರ ಮತ್ತು ಗಿಡ್ಡ ಹೋಲಿಕೆಯನ್ನು ಗುರುತಿಸಲು ಹೇಳುವುದು.**<br>**ತರಗತಿ–3**<br>**ದಪ್ಪ–ಸಣ್ಣ, ಉದ್ದ–ಗಿಡ್ಡ, ಭಾರ–ಹಗುರ ಇವುಗಳಿಗೆ ಉದಾಹರಣೆಯನ್ನು ಹೇಳಿ ಬರೆಯಲು ಹೇಳುವುದು.**<br><br>*** ಬಳಸಬೇಕಾದ ಅಭ್ಯಾಸ ಹಾಳೆಗಳು: I.L-10, & 11 ( 01, 02,03ನೇ ತರಗತಿ)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.<br>ಚಟುವಟಿಕೆ –41 ರಂಗೋಲಿ/ವಿನ್ಯಾಸರಚನೆ. ಗುರಿ – 1<br>ಉದ್ದೇಶ;<br>• ಸೂಕ್ಮ ಸ್ನಾಯುಗಳ ಬೆಳವಣಿಗೆಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯತೆ ಬರುತ್ತದೆ.<br>• ಸೌಂದರ್ಯೋಪಾಸನೆ ವಿಕಾಸವಾಗುತ್ತದೆ.<br>• ಮೇಲ್ಮೈ[ ಒರಟು, ಮೆದು] ಸ್ವರೂಪವನ್ನು ತಿಳಿಯುತ್ತದೆ..<br><br>ಸಾಮಗ್ರಿಗಳು ; ರಂಗೋಲಿ ಪುಡಿ, ಹಾಳೆ ಮತ್ತು ಅಂಟು. |

DRAFT 2022

| | | | |
|---|---|---|---|
| | | | ವಿಧಾನ ; ಒಂದು ಬಟ್ಟಲಿನಲ್ಲಿ ಅಂಟು, ಬಣ್ಣದ ರಂಗೋಲಿ/ ಮರಳು, ರೇಖಾ ಚಿತ್ರಗಳನ್ನು [ ಮಗು ಒಂದನ್ನು ಆಯ್ಕೆ ಮಾಡಿಕೊಳ್ಳಲಿ.] ನೀಡುವುದು. ಮಕ್ಕಳು ತಮ್ಮ ಕಾಗದದ ಮೇಲೆ ಚಿತ್ರವನ್ನು ಅಂಟಿಸಿ,ಅದರ ಮೇಲೆ ಅಂಟನ್ನು ಸವರಿ ಅದರ ಮೇಲೆ ಬಣ್ಣದ ರಂಗೋಲಿ ಪುಡಿ/ ಮರಳನ್ನು ತಮ್ಮ ಬೆರಳುಗಳಿಂದ ಉದುರಿಸುವುದು/ಚಿಮುಕಿಸುವುದು.ಹೆಚ್ಚುವರಿ ಮರಳನ್ನು ಪ್ಯಾನ್, ಟ್ರೇ ಅಥವಾ ಪೇಪರ್ ಪ್ಲೇಟ್‌ನ್ನು ಮೇಜಿನ ಮೇಲೆ ಇರಿಸಿ ಸುರಿಯಲು ಹೇಳುವುದು.ಅವರು ಹೂ,ಗುಡಿಸಲನ್ನು ಅಂಟು ಮತ್ತು ರಂಗೋಲಿ / ಮರಳನ್ನು ಬಳಸಿ ಮಾಡಬಹುದು.ಹೆಚ್ಚುವರಿ ಮರಳನ್ನು ಅಲುಗಾಡಿಸಿದಾಗ ಕಾಗದದ ಮೇಲೆ ಕಾಣಿಸಿಕೊಳ್ಳುವ ಚಿತ್ರಗಳನ್ನು ನೋಡಿ ಸಂತೋಷಪಡುತ್ತಾರೆ. ಮಕ್ಕಳಿಗೆ ಪರಿಚಿತ ಪರಿಕಲ್ಪನೆಗಳನ್ನು ನೀಡಿ ಚಿತ್ರ ರಚಿಸಿ/ ಬಣ್ಣ ತುಂಬಲು ಪ್ರೋತ್ಸಾಹಿಸಬೇಕು.<br>ವಿವರ; 2 ಮತ್ತು 3ನೇ ತರಗತಿಗೆ ಚುಕ್ಕಿ ಇಟ್ಟು ರಂಗೋಲಿ ಬಿಡಿಸಿ ಬಣ್ಣ ತುಂಬಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | **ಸಾಮರ್ಥ್ಯ : ಪದ ಸಂಪತ್ತಿನ ಅಭಿವೃದ್ಧಿ, ಊಹಿಸುವುದು, ತಂಡದ ಸದಸ್ಯರೊಂದಿಗೆ ಸಹಕಾರದಿಂದ ಕೆಲಸ. ಸೂಚನೆಗಳ ಪಾಲನೆ.**<br>**ಚಟುವಟಿಕೆ .6 ವಸ್ತುವನ್ನು ಊಹಿಸು (ಗುರಿ–2) ECL-7**<br>**ಉದ್ದೇಶಗಳು:**<br>* ಸೂಕ್ತ ಪದ ರಚಿಸುವುದು.<br>* ಸಾಂಘಿಕ ಮನೋಭಾವನೆ ಬೆಳೆಸುವುದು.<br>* ಸೂಚನೆಗಳನ್ನು ಎಚ್ಚರಿಕೆಯಿಂದ ಆಲಿಸಿ ಅನುಸರಿಸುವುದು.<br>* ಪದ ಸಂಪತ್ತನ್ನು ಅಭಿವೃದ್ಧಿ ಪಡಿಸುವುದು.<br>ಅಗತ್ಯ ಸಾಮಗ್ರಿಗಳು : ಬ್ಯಾಗ್, ಲಭ್ಯ ವಸ್ತುಗಳು<br>ವಿಧಾನ : ತರಗತಿಯಲ್ಲಿರುವ ಸೀಮೆ ಸುಣ್ಣ, ರಬ್ಬರ್, ಡಸ್ಟರ್ , ಡೈಸ್ ಮೊದಲಾದ ವಸ್ತುಗಳನ್ನು ಒಂದು ಚೀಲದಲ್ಲಿ ಹಾಕಿ..<br>– ಮಕ್ಕಳನ್ನು ಒಬ್ಬೊಬ್ಬರಿ ಕರೆದು ಬ್ಯಾಗ್‌ನಲ್ಲಿರುವ ವಸ್ತುಗಳಲ್ಲಿ ಯಾವುದಾದರೂ ಒಂದು ವಸ್ತುವನ್ನು ಸ್ಪರ್ಶಿಸಿ, ಆ ವಸ್ತುಗಳನ್ನು ಊಹಿಸಲು ಹೇಳುವುದು. ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಕ್ಕಳು ವಸ್ತುವನ್ನು ಸರಿಯಾಗಿ ಗುರುತಿಸಲು ಸಹಾಯ ಮಾಡುವುದು.<br>ಉದಾಹರಣೆಗಾಗಿ:<br>• ನೀನು ಸ್ಪರ್ಶಿಸುತ್ತಿರುವ ವಸ್ತು ದೊಡ್ಡದೋ ಚಿಕ್ಕದೋ ?<br>• ನೀನು ಸ್ಪರ್ಶಿಸುತ್ತಿರುವ ವಸ್ತುವಿನ ಆಕಾರ ಹೇಗಿದೇ?<br>• ಯಾವ್ಯದರಿಂದ ಆ ವಸ್ತು ಮಾಡಲ್ಪಟ್ಟಿದೆ?<br>• ನೀನು ಸ್ಪರ್ಶಿಸುತ್ತಿರುವ ವಸ್ತು ಗಟ್ಟಿಯಾಗಿದೆಯೇ? ಮೃದುವಾಗಿದೆಯೇ?<br>• ನೀನು ಸ್ಪರ್ಶಿಸುತ್ತಿರುವ ವಸ್ತು ಏನಿರಬಹುದು?<br>– ಮಕ್ಕಳು ಗುರುತಿಸಿದ ವಸ್ತುಗಳ ಕುರಿತು ಅವರೊಂದಿಗೆ ಚರ್ಚಿಸುವುದು.<br>ತರಗತಿಯ ವಿವರ: 2 ನೇ ತರಗತಿಯ ಮಕ್ಕಳು ತಾವು ಗುರುತಿಸಿದ ವಸ್ತುವಿನ ಬಗ್ಗೆ 3–4 ವಾಕ್ಯಗಳಲ್ಲಿ ಮಾತನಾಡುವುದು. 3 ನೇ ತರಗತಿಯ ಮಕ್ಕಳು 2 ರಿಂದ 3 ನಿಮಿಷ ಆ ವಸ್ತುವಿನ ಬಗ್ಗೆ ಮಾತನಾಡುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | **ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ....18**<br>• ಚಿತ್ರ ಸಂಪುಟ (ಗುರಿ–2) ವಿಷಯ: 'ಉದ್ಯಾನದಲ್ಲಿ ನೀವು ನೋಡಿರುವ ವಸ್ತುಗಳು/ವಿಷಯಗಳು',<br>ಉದ್ದೇಶ:<br>• ಮಕ್ಕಳು ಗುಂಪಿನಲ್ಲಿ ಕುಳಿತು ತಯಾರಿಸಿದ ಗೋಡೆ ಪತ್ರಿಕೆಗಳನ್ನು ರಚಿಸಿ ಮಂಡಿಸುವುದು<br>ಅಗತ್ಯ ಸಾಮಗ್ರಿಗಳು : ಚಾರ್ಟಗಳು, ಸ್ವರಚಿತ ಚಿತ್ರಗಳು, ಕ್ರೇಯಾನ್ಸ್, ಅಂಟು, ಇಂಚುಪಟ್ಟಿ, ಟ್ಯಾಗ್<br>ವಿಧಾನ : ಮಕ್ಕಳು ಗುಂಪುಗಳಲ್ಲಿ ಅಗತ್ಯ ಸಾಮಗ್ರಿ ಬಳಸಿ ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳ ಬಗ್ಗೆ ಗೋಡೆ ಪತ್ರಿಕೆ ತಯಾರಿಸಲು ಅಗತ್ಯ ಸಹಾಯ ನೀಡುವುದು. ರಚಿಸಿದ ಗೋಡೆ ಪತ್ರಿಕೆಯನ್ನು ತರಗತಿಯಲ್ಲಿ ಮಂಡಿಸಲು ಅವಕಾಶ ನೀಡುವುದು. ಸಿದ್ಧವಾದ ಗೋಡೆಪತ್ರಿಕೆಗಳನ್ನು ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.<br><br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳಿಗೆ ಸಹಾಯ ಒದಗಿಸಿ ಗುಂಪುಗಳಲ್ಲಿ ಯೋಜನಾಕಾರ್ಯಗಳನ್ನು ಮಾಡಲು |

DRAFT 2022

| | | |
|---|---|---|
| | | ತಿಳಿಸುವುದು. |
| | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಕ್ರಿಯಾತ್ಮಕ ಸ್ವ ಅಭಿವ್ಯಕ್ತಿ, ಬರವಣಿಗೆಯ ಸರಿಯಾದ ಕ್ರಮ<br>ಚಟುವಟಿಕೆ ಸಂಖ್ಯೆ: ಮಾದರಿ ಬರವಣಿಗೆ (ಗುರಿ–2) **ECW-7**<br>ಉದ್ದೇಶಗಳು:<br>• ಬರವಣಿಗೆಯ ಸರಿಯಾದ ಕ್ರಮವನ್ನು ರೂಢಿಸುವುದು.<br>• ಉದ್ದೇಶಕ್ಕೆ ಅನುಗುಣವಾಗಿ ಬರೆಯುವ ಕೌಶಲವನ್ನು ಬೆಳೆಸುವುದು.<br>• ಕ್ರಿಯಾತ್ಮಕ ಸ್ವ–ಅಭಿವ್ಯಕ್ತಿಗೆ ಅವಕಾಶ ನೀಡುವುದು.<br>ಅಗತ್ಯ ಸಾಮಗ್ರಿಗಳು: ಕರಿಹಲಗೆ, ಚಾಕ್‌ಪೀಸ್.<br>ವಿಧಾನ:<br>• ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು.<br>• ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>• ಮಕ್ಕಳ ಹೆಸರು ಹಾಗೂ ಅವರು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು.<br>• ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.<br>ತರಗತಿವಾರು ವಿವರ: 2ನೇ ತರಗತಿಯ ವಿದ್ಯಾರ್ಥಿಗಳಿಗೆ ಪದಗಳನ್ನು ಹಾಗೂ 3ನೇ ತರಗತಿಯ ವಿದ್ಯಾರ್ಥಿಗಳಿಗೆ ವಾಕ್ಯಗಳನ್ನು ಕರಿಹಲಗೆ/ ವಾಲ್‌ಸ್ಲೇಟ್ ಮೇಲೆ ಉಕ್ತಲೇಖನ ನೀಡಿ ಬರೆಯುವ ಕ್ರಮವನ್ನು ಗಮನಿಸುವುದು. ಅವಶ್ಯಕತೆ ಇದ್ದಲ್ಲಿ ಸೂಕ್ತ ಹಿಮ್ಮಾಹಿತಿಯೊಂದಿಗೆ ಮಾರ್ಗದರ್ಶನ ನೀಡುವುದು. |
| | **ಹೊರಾಂಗಣ ಆಟಗಳು** | Day 11<br>ಚಟುವಟಿಕೆ –29 ರೋಲಿಂಗ್(ಉರುಳಿಸು) ಗುರಿ–1<br> <br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ<br>ಬೇಕಾಗುವ ಸಾಮಗ್ರಿ: ಚೆಂಡು<br>ವಿಧಾನ:<br>• ನೆಲದಮೇಲೆ ನೇರ ಗೆರೆಯನ್ನು ಎಳೆಯುವುದು.<br>• ಮಕ್ಕಳು ಸರದಿಯಲ್ಲಿ ಆ ಗೆರೆಯ ಮೇಲೆ ಚೆಂಡನ್ನು ಉರುಳಿಸಲು ಸೂಚಿಸುವುದು.<br>**ಎರಡು ಮತ್ತು ಮೂರನೇ ತರಗತಿ ಮಕ್ಕಳನ್ನು ವೃತ್ತದಲ್ಲಿ ನಿಲ್ಲಿಸಿ ಒಬ್ಬರಿಗೊಬ್ಬರು ಚೆಂಡನ್ನು ವೃತ್ತದಲ್ಲಿ ಉರುಳಿಸಲು ತಿಳಿಸುವುದು.** |
| | **ಕಥಾ ಸಮಯ** | ➢ **ಶೀರ್ಷಿಕೆ** :ಗೆಳೆಯರ ಬೇಸಾಯ<br>➢ **ಸಾಮಗ್ರಿಗಳು** :ಸಂಭಾಷಣೆಇರುವ ಮಿಂಚಪಟ್ಟಿಗಳು<br>➢ **ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>➢ ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವ ಆಸಕ್ತಿಯನ್ನು ಬೆಳೆಸುವುದು.<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ **ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು.**<br>➢ **ನಿರರ್ಗಳವಾಗಿ ಮಾತನಾಡುವ ಕೌಶಲವನ್ನುರೂಢಿಸುವುದು.**<br><br>➢ **ವಿಧಾನ :**<br>***ಪಾತ್ರಾಭಿನಯ*** |

| | | |
|---|---|---|
| | | ➢ ಕಥೆಯನ್ನು ಪುನರಾವಲೋಕನ ಮಾಡಿಕೊಳ್ಳುವುದು.<br>➢ ಕಥೆಯ ನಿರೂಪಣೆಯನ್ನುಮಾಡಲುಎರಡು ಮತ್ತು ಮೂರನೇತರಗತಿಯ ಮಕ್ಕಳಿಗೆ ಸಹಕರಿಸುವುದು.<br>➢ ಮಿಂಚುಪಟ್ಟಿಗಳನ್ನು ನೀಡಿ, ಪಾತ್ರಗಳ ಸಂಭಾಷಣೆಯನ್ನು ಹೇಳಿಸುವುದು.<br>➢ ಮಕ್ಕಳು ತಪ್ಪಾಗಿ ಹೇಳಿದರೂ ಸಕಾರಾತ್ಮಕವಾಗಿ ಸ್ವೀಕರಿಸಿ ಆ ನಂತರ ಸರಿಪಡಿಸಿ ಕಥೆಯನ್ನು ಮುಂದುವರೆಸಲು ಹೇಳುವುದು. |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>• "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–2** **ದಿನ–12 (ಶನಿವಾರ)**

| | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ | | |
|---|---|---|---|---|
| | ಪ್ರತಿಬಿಂಬ (ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | | |
| | ನನ್ನ ಸಾಧನೆ | | | |
| 1 | ಕಲಿಕಾಫಲಗಳು | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
| 2 | ಶಾಲೆಯ ದಿನಚರಿಗೆ ಹೊಂದಿಕೊಳ್ಳುವರು. | | | |
| 3 | ಸಂತೋಷದಿಂದ ಶಾಲೆಗೆ ಬರುವರು. | | | |
| 4 | ಶಿಕ್ಷಕರಿಗೆ ಮತ್ತು ಸ್ನೇಹಿತರಿಗೆ ಶುಭ ಕೋರುವರು. | | | |
| 5 | ಗುಂಪು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವರು. | | | |
| 6 | ಸರಳ ಸೂಚನೆಗಳನ್ನು ಅನುಸರಿಸುವರು. | | | |
| 7 | ತನ್ನ ಸುತ್ತಮುತ್ತಲಿನ ಪರಿಸರದ ಬಗ್ಗೆ ಕುತೂಹಲ ತೋರಿಸುವರು. | | | |
| 8 | ಜೇಡಿಮಣ್ಣು/ಹಿಟ್ಟಿನಿಂದ ಮಾದರಿ ತಯಾರಿಸುವುದನ್ನು ಆನಂದಿಸುವರು. | | | |
| 9 | ಒಂದೇ ರೀತಿಯ ವಸ್ತುಗಳನ್ನು ಹೋಲಿಕೆ ಮಾಡುವರು. | | | |
| 10 | ಇಂದ್ರಿಯಗಳ ಸಹಾಯದಿಂದ ವಸ್ತುಗಳನ್ನು ಗುರುತಿಸುವರು. | | | |
| 11 | ಪ್ರಾಸಗೀತೆಗಳನ್ನು ಸಂತಸದಿಂದ ಹಾಡುವರು. | | | |
| 12 | ಶಾಲೆಯ ದಿನಚರಿಗೆ ಹೊಂದಿಕೊಳ್ಳುವರು. | | | |
| | | | | |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–3** **ದಿನ–13 (ಸೋಮವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 13 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ :** ಕದಮ್ ತಾಲ್<br>**ಸಾಮಗ್ರಿಗಳು:** ಡ್ರಮ್ /ತಂಬೂರಿ<br>1 ಮೂರು ಬಾರಿ ಚಪ್ಪಾಳೆ ತಟ್ಟುವ ಮೂಲಕ ತರಗತಿ ಪ್ರವೇಶಿಸಲು ಮಕ್ಕಳಿಗೆ ಹೇಳಿ– ಮತ್ತು 'ಹಾಯ್ ಟೀಚರ್' ಎಂದು ಹೇಳಿಸಿ.<br>"ಹಲೋ,________– ಎಂದು ಮಕ್ಕಳ ಹೆಸರು ಹೇಳಿ ಅವರನ್ನು ಸ್ವಾಗತಿಸಿ.  <br>**ಹಿಂದಿನ ದಿನದಂತೆ ಕದಮ್‌ತಾಲ್ ಚಟುವಟಿಕೆ ಮಾಡುವುದು.**<br>2. ಪ್ರತಿ ಮಗುವನ್ನು ಅವನ/ ಅವಳ ಹೆಸರಿನಿಂದ ಕರೆದು **"Good morning, welcome " "Have a magical Monday"** ಎಂದು ಹೇಳುವ ಮೂಲಕ ಮಕ್ಕಳನ್ನು ಸ್ವಾಗತಿಸಿ. ಅವರು **"Thank you. Same to you"** ಎಂದು ಉತ್ತರಿಸಲಿ.<br>ಅವರಿಗೆ ಮುಷ್ಟಿ ಬಂಪ್ ನೀಡಲು ಮಕ್ಕಳಿಗೆ ಹೇಳಿ. |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | **ಚಟುವಟಿಕೆ–1: ನನ್ನನ್ನು ತಿಳಿಯಿರಿ**<br>**ಸಾಮರ್ಥ್ಯ:** ಸ್ವಯಂ ಪ್ರಜ್ಞೆ, ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಗಳ ಅಭಿವೃದ್ಧಿ, ಆಲಿಸುವುದು ಮತ್ತು ಮಾತನಾಡುವುದು.<br>**ಉದ್ದೇಶ:** ನಿರ್ದಿಷ್ಟ ವಿಷಯದ ಕುರಿತು ಮಾತನಾಡುವುದು.<br><br>**ಸಾಮಗ್ರಿಗಳು:** ಬ್ಯಾಗ್, ಪೇಪರ್ ಬಾಲ್, ಬಾಕ್ಸ್, ಬಾಲ್, ಬಾಚಣಿಗೆ, ಪೆನ್ಸಿಲ್, ಕಲ್ಲು, ಗೋಲಿ, ಹತ್ತಿ, ಆಟಿಕೆ, ಕೋಲು, ಒಣ ಎಲೆ, ಸಾಬೂನು ಇತ್ಯಾದಿ<br>**ವಿಧಾನ:**<br>1. ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ.<br>3. ಎರಡು ಬಾರಿ ಚಪ್ಪಾಳೆ ತಟ್ಟಿ , ಒಮ್ಮೆ ಜಿಗಿಯಿರಿ. ( Clap twice , jump once )<br>ಎರಡು ಬಾರಿ ಕುಪ್ಪಳಿಸಿ , ಕೈಗಳನು ಬೀಸಿ. ( Hop twice, Wave your hands )<br>ಚಟುವಟಿಕೆಯನ್ನು ಮುಂದುವರಿಸಿ.<br>4. ಮಕ್ಕಳನ್ನು ವೃತ್ತಾಕಾರದಲ್ಲಿ ಕುಳಿತುಕೊಳ್ಳುವಂತೆ ಹೇಳಿ ಮತ್ತು ಶಿಕ್ಷಕರು ವಸ್ತುಗಳು ಇರುವ ಚೀಲದೊಂದಿಗೆ ಮಧ್ಯದಲ್ಲಿ ಕುಳಿತುಕೊಳ್ಳಲಿ.<br>5. ಶಿಕ್ಷಕರು ಕಾಗದದ ಚೆಂಡನ್ನು ಪಾಸ್ ಮಾಡಲಿ ಮತ್ತು ಶಿಕ್ಷಕರು **stop** ಎಂದು ಹೇಳಿದಾಗ ಯಾರ ಕೈಯಲ್ಲಿ ಚೆಂಡು ಇರುವುದೋ ಅವರು ಬಂದು ಚೀಲದಿಂದ ಒಂದು ವಸ್ತುವನ್ನು ಆರಿಸಿ, ಅದು ಏನು ಎಂದು ಮುಟ್ಟಿ ಹೇಳಬೇಕು.<br>6. ನಂತರ ಮಗುವನ್ನು ಅವನು/ಅವಳು ವಸ್ತುವನ್ನು ಹೇಗೆ ಗುರುತಿಸಿತು ಎಂದು ಕೇಳಿ. ಮಗು ವು ಅದರ ಆಕಾರ, ಬಣ್ಣ ಇತ್ಯಾದಿಗಳ ಕುರಿತು ಮಾತನಾಡಲಿ.<br>7. ಚಟುವಟಿಕೆಯನ್ನು ಪುನರಾವರ್ತಿಸಿ ಮತ್ತು ಪ್ರತಿ ಮಗುವಿಗೆ ಅವಕಾಶ ಸಿಗುವಂತೆ ನೋಡಿಕೊಳ್ಳಿ.<br>(ಸೂಚನೆ: ಶಿಕ್ಷಕರು ತಮ್ಮದೇ ಆದ ಪ್ರಶ್ನೆಗಳನ್ನು ಸೇರಿಸಬಹುದು ಮತ್ತು ಮಕ್ಕಳು ತಮ್ಮ ಸ್ಥಳೀಯ ಭಾಷೆಯಲ್ಲಿಯೂ ಮಾತನಾಡಲು ಪ್ರೋತ್ಸಾಹಿಸಬಹುದು) |
| | **ನನ್ನ ಸಮಯ(Free Indore play)** | ದಿನ – 13<br>ಮಕ್ಕಳು ತಾವು ನಿರ್ವಹಿಸಲಿಚ್ಛಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |


DRAFT 22.02.22

| | | | |
|---|---|---|---|
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿದೆ ೯ಶಿತ) ಚಟುವಟಿಕೆ) | | **ಸಾಮರ್ಥ್ಯ: ಹೆಚ್ಚು–ಕಡಿಮೆ ಪರಿಕಲ್ಪನೆ, ವೀಕ್ಷಣೆ, ಗುರುತಿಸುವುದು, ಪರಿಸರದ ಅರಿವು.**<br>**ಚಟುವಟಿಕೆ...33 ಹೆಚ್ಚು–ಕಡಿಮೆ–ಸಮ (ಗುರಿ 3)**<br>**ಉದ್ದೇಶ:– ಹೆಚ್ಚು–ಕಡಿಮೆ–ಸಮದ ಪರಿಕಲ್ಪನೆ ಹೊಂದುವುದು.**<br>**ಅಗತ್ಯ ಸಾಮಗ್ರಿಗಳು : ವಿಭಿನ್ನ ಪ್ರಮಾಣದ ಧಾನ್ಯಗಳು, ಆಟಿಕೆ ನೋಟುಗಳು ಮತ್ತು ನಾಣ್ಯಗಳು, ಚಿತ್ರಪಟಗಳು**<br>**ವಿಧಾನ : ಅಕ್ಕಿ/ಬೇಳೆ/ರಾಗಿ/ಕಡಲೆ ಮುಂತಾದ ಧಾನ್ಯಗಳ ವಿಭಿನ್ನ ಪ್ರಮಾಣದ ರಾಶಿಗಳನ್ನು ಮಾಡುವುದು. ಮಕ್ಕಳು ವೀಕ್ಷಿಸಿ ಯಾವುದು ಹೆಚ್ಚು/ಕಡಿಮೆ ಎಂಬುದನ್ನು ಗುರುತಿಸುವುದು.**<br>**ತರಗತಿ–2**<br>**1. ಮೇಲಿನಂತೆ ವಿವಿಧ ಆಹಾರ ಧಾನ್ಯಗಳನ್ನು ಬಳಸಿ ಹೆಚ್ಚು–ಕಡಿಮೆ ವ್ಯತ್ಯಾಸವನ್ನು ಗುರುತಿಸಲು ತಿಳಿಸುವುದು.**<br>**2. 10ರೂ ಮೌಲ್ಯದ ನೋಟು ಮತ್ತು 20ರೂ ಮೌಲ್ಯದ ನೋಟು ಪ್ರದರ್ಶಿಸಿ ಇವುಗಳಲ್ಲಿ ಹೆಚ್ಚು–ಕಡಿಮೆ ವ್ಯತ್ಯಾಸವನ್ನು ಗುರುತಿಸಲು ತಿಳಿಸುವುದು.**<br>**ತರಗತಿ–3**<br>**ವಿವಿಧ ಮೌಲ್ಯದ ಆಟಿಕೆ ನೋಟುಗಳನ್ನು ಬಳಸಿ ಹೆಚ್ಚು–ಕಡಿಮೆ–ಸಮಗಳನ್ನು ಗುರುತಿಸಲು ಹೇಳುವುದು.**<br><br>*** ಬಳಸಬೇಕಾದ ಅಭ್ಯಾಸ ಹಾಳೆಗಳು: I.L- 12 ( 01, 02,03ನೇ ತರಗತಿ)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸಮಾಜಮುಖಿ ನಡವಳಿಕೆಯ ವಿಕಾಸ , ಇತರರ ಭಾವನೆ ಮತ್ತು ಹಕ್ಕುಗಳನ್ನು ಗೌರವಿಸುವುದು. ಸೃಜನಶೀಲತೆ ಮತ್ತು ಸೌಂದರ್ಯಪ್ರಜ್ಞೆಯ ವಿಕಾಸ , ಗಮನಿಸುವಿಕೆ,ಕಲ್ಪನಾ ಶಕ್ತಿಯ ವಿಕಾಸ ಮತ್ತು ಪದಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ –10 ಹಬ್ಬಗಳ ಆಚರಣೆ. ಗುರಿ – 1<br>ಉದ್ದೇಶ;<br>• ಮಕ್ಕಳಿಗೆ ನಮ್ಮ ಸಂಸ್ಕೃತಿಯಲ್ಲಿರುವ ಅನೇಕ ವಿಷಯಗಳ ಅರಿವಾಗುತ್ತದೆ.<br>• ಸೌಂದರ್ಯ ಪ್ರಜ್ಞೆಯ ವಿಕಾಸವಾಗುತ್ತದೆ.<br>• ವಿವಿಧ ರಾಷ್ಟ್ರೀಯ ಹಬ್ಬಗಳ ಆಚರಣೆಯಿಂದ ದೇಶ ಪ್ರೇಮ ಮೂಡುತ್ತದೆ. ಕ<br>ಸಾಮಗ್ರಿಗಳು ; .ಹಬ್ಬಗಳ ಚಿತ್ರಗಳು/ ಮಿಂಚುಪಟ್ಟಿಗಳು.<br>ವಿಧಾನ ; ಮಕ್ಕಳಿಗೆ ಪರಿಚಿತ ಹಾಗೂ ಪ್ರಮುಖ ಹಬ್ಬಗಳ [ಸಾಂಸ್ಕೃತಿಕ ಮತ್ತು ರಾಷ್ಟ್ರೀಯ ಹಬ್ಬಗಳು ] ಪರಿಚಯ ಮತ್ತು ಆಚರಣೆಯ ವಿಧಾನಗಳನ್ನು ಪರಿಚಯಿಸುವುದು.ಸ್ವಾತಂತ್ರ ದಿನಾಚರಣೆ , ಗಣರಾಜ್ಯೋತ್ಸವ, ಮಕರಸಂಕ್ರಾಂತಿ, ದೀಪಾವಳಿ , ಹೋಳಿ , ಈದ್, ಕ್ರಿಸ್‌ಮಸ್, ಗುರುಪೂರ್ಣಿಮಾ ಮುಂತಾದ ವಿವಿಧ ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಸೂಕ್ತ ಸುರಕ್ಷತಾ ಕ್ರಮಗಳ ಬಗ್ಗೆ ವಿವರಿಸಬೇಕು.ಇದರಿಂದ ಭಾರತದಲ್ಲಿನ ವಿವಿಧ ಹಬ್ಬಗಳ ಆಚರಣೆ ಹೇಗೆ ಎಂಬುದನ್ನು ತಿಳಿಯುವರು.<br>ವಿವರ; 2 ಮತ್ತು 3ನೇ ತರಗತಿಗೆ ಹಬ್ಬಗಳ ಆಚರಣೆಯಲ್ಲಿ ಅಲಂಕಾರಕ್ಕಾಗಿ ತೋರಣ ಮಾಡಲು ಹೇಳುವುದು.<br>*** ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-3 ( 01, 02,03ನೇ ತರಗತಿ)** |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ–ಆಲಿಸುವ ಕೌಶಲ, ಕ್ರಿಯಾತ್ಮಕ ಸ್ವ ಅಭಿವ್ಯಕ್ತಿ, ಔಪಚಾರಿಕ ಮಾತುಕತೆ, ಬಣ್ಣಗಳ ಕಲ್ಪನೆ**<br>**ಚಟುವಟಿಕೆ 8A ನೋಡಿ ಹೇಳು ( ಗುರಿ–2) ECL-8**<br>**ಉದ್ದೇಶ:**<br>*** ಆಯ್ದುಕೊಂಡ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡುವುದು.**<br>*** ಔಪಚಾರಿಕ ಮಾತುಗಾರಿಕೆಯ ಕೌಶಲವನ್ನು ಬೆಳೆಸುವುದು.**<br>*** ಆಲಿಸಿದ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳುವುದು.**<br>*** ಸೃಜನಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.**<br>**ಸಾಮಗ್ರಿ–ಪ್ರಾಣಿ, ಪಕ್ಷಿ, ವಾಹನಗಳು ಇತ್ಯಾದಿಗಳು ಚಿತ್ರ/ಆಟಿಕೆ**<br>**ವಿಧಾನ–ಪ್ರಾಣಿ/ಪಕ್ಷಿ/ವಾಹನಗಳು ಇತ್ಯಾದಿಗಳ ಆಟಿಕೆ/ಚಿತ್ರಗಳನ್ನು ಚೀಲದಲ್ಲಿ ರಿಸಿ.. ಮಕ್ಕಳನ್ನು ಒಬ್ಬೊಬ್ಬರನ್ನಾಗಿ ಕರೆದು ಚೀಲದಿಂದ ಯಾವುದಾದರೂ ಒಂದು ಚಿತ್ರ/ಆಟಿಕೆಯನ್ನು ತೆಗೆದುಕೊಂಡು ಅದರ ಆಕಾರ, ಬಣ್ಣ, ಉಪಯೋಗ, ಲಕ್ಷಣಗಳ ಬಗ್ಗೆ ಮಾತನಾಡಲು ತಿಳಿಸಿ.** |

DRAFT 2022

| | | | |
|---|---|---|---|
| | | | ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಆಯ್ಕೆ ಮಾಡಿಕೊಂಡ ವಿಷಯದ ಕುರಿತು 2 ರಿಂದ 3 ನಿಮಿಷಗಳ ಕಾಲ ಮಾತನಾಡುವುದು.. 3ನೇ ತರಗತಿಯ ಮಕ್ಕಳು ವಿಷಯದ ದೈನಂದಿನ ಬಳಕೆ ಅಥವಾ ಅನ್ವಯಿಕ ಅಂಶಗಳ ಬಗ್ಗೆ ಮಾತನಾಡುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | **ಸಾಮರ್ಥ್ಯ: ಪದ ಸಂಪತ್ತಿನ ಅಭಿವೃದ್ಧಿ, ಸ್ವಯಂ ಅಭಿವ್ಯಕ್ತಿ ನಟನಾ ಓದು.**<br>**ಚಟುವಟಿಕೆ 1 ಬಿ : ನೋಡಿ ಓದು (ಗುರಿ–2)**<br>**ಉದ್ದೇಶ : ಮುದ್ರಿತ ವಸ್ತುಗಳ ಮೇಲಿರುವ ಚಿತ್ರ ಮತ್ತು ಬರಹಗಳನ್ನು ಗಮನಿಸಿ ಊಹಿಸಿ ಓದುವರು.**<br>ಅಗತ್ಯ ಸಾಮಗ್ರಿಗಳು: ವಸ್ತುಗಳ ಮೇಲಿರುವ ಮುದ್ರಿತ ಬರಹಗಳು ಬಸ್ ಟಿಕೆಟ್ ,ರಶೀದಿಗಳು(ರ‍್ಯಾಪರ‍್ಸ್/ಕವರ‍್ಸ್)<br>**ವಿಧಾನ: ಒಂದು ಖಾಲಿ ಪೆಟ್ಟಿಗೆಯಲ್ಲಿ ಮುದ್ರಿತ ಬರಹವನ್ನೊಳಗೊಂಡ ವಿವಿಧ ವಸ್ತುಗಳನ್ನು ಅಥವಾ ಆ ವಸ್ತುಗಳ ಕವರ್‌ಗಳನ್ನು ಇಡುವುದು. ಮಕ್ಕಳು ಅವುಗಳನ್ನು ಹೊರತೆಗೆದು ಅವುಗಳನ್ನು ಗುರುತಿಸುವುದು ಮತ್ತು ಓದುವುದು.**<br>2 ಮತ್ತು 3ನೇ ತರಗತಿ : ವಿವಿಧ ವಸ್ತುಗಳ ಕವರ್‌ಗಳನ್ನು ಗುರುತಿಸುವ ಜೊತೆಗೆ ಅಲ್ಲಿರುವ ಸೂಚನೆಗಳನ್ನು ದಿನಾಂಕಗಳನ್ನು ಇತ್ಯಾದಿ ಅಂಶಗಳನ್ನು ಓದಲು ತಿಳಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ : ಮಕ್ಕಳೊಂದಿಗೆ ಬರವಣಿಗೆ, ಉದ್ದೇಶಿತ ಬರವಣಿಗೆ, ಅವಧಾನ ಮತ್ತು ಆಲಿಸುವುದು, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ ಸಂಖ್ಯೆ : 32 ಹಂಚಿತ ಬರೆಹ (ಗುರಿ : 2) **ECW-8**<br>ಉದ್ದೇಶಗಳು:<br>• ಹಂಚಿತ ಬರವಣಿಗೆಯನ್ನು ಪರಿಚಯಿಸುವುದು.<br>• ಉದ್ದೇಶಕ್ಕನುಸಾರವಾಗಿ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿಸುವುದು.<br>• ಅವಧಾನದೊಂದಿಗೆ ಉದ್ದೇಶಿತ ಬರೆಹದಲ್ಲಿ ತೊಡಗಿಸುವುದು.<br>• ಸೃಜನಾತ್ಮಕವಾಗಿ ಚಿಂತಿಸಿ ಅವುಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವುದು.<br>• ಪದ ಸಂಪತ್ತನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು: ಕಪ್ಪುಹಲಗೆ ಡ್ರಾಯಿಂಗ್ ಶೀಟ್<br>ವಿಧಾನ: ಹಂಚಿತ ಬರೆಹ ಚಟುವಟಿಕೆಗಳನ್ನು ತಿಂಗಳಿಗೆ ಎರಡು ಅಥವಾ ಮೂರು ಬಾರಿ ಆಯೋಜಿಸುವುದು. ಒಂದು ವಿಷಯವನ್ನು ನೀಡಿ ಆ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಕಥೆಯ ಮೂಲಕ ಅಥವಾ ಬರವಣಿಗೆ ಮೂಲಕ ಹಂಚಿಕೊಳ್ಳಲು ತಿಳಿಸುವುದು.<br>ಸಲಹಾತ್ಮಕ ಸೂಚಿತ ವಿಷಯಗಳು:– ಮನೆ<br>ಗಮನಿಸಬೇಕಾದ ಅಂಶಗಳು:<br>• ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಾಕ್ಯಗಳನ್ನು ರಚಿಸಲು ಅಗತ್ಯ ಸುಳಿವುಗಳನ್ನು ನೀಡುವುದು. ಮಕ್ಕಳೊಂದಿಗೆ ಬರವಣಿಗೆಯಲ್ಲಿ ತೊಡಗಿಕೊಳ್ಳುವ ಮೂಲಕ ಬರವಣಿಗೆಯ ಪ್ರಾತ್ಯಕ್ಷಿಕೆ ನೀಡುವುದು<br>• ಶಿಕ್ಷಕರು ಮೊದಲನೇ ವಾಕ್ಯವನ್ನು ಬರೆದು ಓದುವುದು. ನಂತರ ಮಕ್ಕಳು ತಮ್ಮ ಸ್ವಂತ ವಾಕ್ಯವನ್ನು ಹೇಳಿ ಬರೆಯಲು ತಿಳಿಸುವುದು.<br>• ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಪ್ರತಿಕ್ರಿಯಿಸಲು ಅವಕಾಶ ಕಲ್ಪಿಸಬಹುದು. ಅಂತಹ ಸನ್ನಿವೇಶದಲ್ಲಿ ಶಿಕ್ಷಕರು ಅದನ್ನು ಶಾಲಾ ಭಾಷೆಯಲ್ಲಿ ಅನುವಾದಿಸಿ ಹೇಳುವುದು.<br>ತರಗತಿವಾರು ವಿವರ: 1ನೇ ತರಗತಿಯವರು ವಿವರಿಸಿದ ಅಂಶಗಳನ್ನು 2ನೇ ಹಾಗೂ 3ನೇ ತರಗತಿಯ ಮಕ್ಕಳು ಬರವಣಿಗೆ ಮೂಲಕ ಅಭಿವ್ಯಕ್ತಿಪಡಿಸಲು ತಿಳಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |

DRAFT 22.02.22

| | | |
|---|---|---|
| | ಹೊರಾಂಗಣ ಆಟಗಳು | ಚಟುವಟಿಕೆ: ಕಣ್ಣಾಮುಚ್ಚಾಲೆ.<br>ಸಾಮರ್ಥ್ಯ: ಊಹಿಸುವ ಮತ್ತು ಅನ್ವೇಷಿಸುವ ಮನೋಭಾವ ಬೆಳೆಸುವುದು.<br>ಸಾಮಗ್ರಿ: ಇಲ್ಲ<br>ವಿಧಾನ:<br>• ಒಂದು ಮಗುವಿನ ಕಣ್ಣನ್ನು ಮುಚ್ಚಿ ಉಳಿದ ಮಕ್ಕಳಿಗೆ ಬಚ್ಚಿಟ್ಟುಕೊಳ್ಳಲು ಸೂಚಿಸುವುದು.<br>• ನಿಗದಿತ ಸಮಯದಲ್ಲಿ ಬಚ್ಚಿಟ್ಟುಕೊಂಡ ಮಕ್ಕಳನ್ನು ಹುಡುಕಲು ತಿಳಿಸುವುದು.<br>• ಆ ಮಗು ಅಡಗಿಕೊಂಡ ಮಕ್ಕಳಲ್ಲಿ ಯಾರನ್ನು ಮೊದಲು ಹುಡುಕುವನೋ ಅವರು ಈ ಆಟವನ್ನು ಮುಂದುವರೆಸುತ್ತಾರೆ.<br>• **ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೂ ಇದೇ ಆಟವನ್ನು ಆಡಿಸುವುದು.** |
| | ಕಥಾ ಸಮಯ | **ಶೀರ್ಷಿಕೆ : ಸೋನಿ & ಟೊಮೆಟೋಸ್**<br>**ಸಾಮಗ್ರಿಗಳು : ಸಾಹಿತ್ಯ, ಚಿತ್ರಗಳು/ವಸ್ತುಗಳು**<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಮಾತನಾಡುವ ಸಾಮರ್ಥ್ಯವನ್ನು ಬೆಳೆಸುವುದು.<br>**ವಿಧಾನ :**<br>➢ **ಶಿಕ್ಷಕರು ಕಥೆಯ ರಚನಾ ಶೈಲಿಯನ್ನು ಅರ್ಥಮಾಡಿಕೊಂಡು ಓದಿಕೊಳ್ಳುವುದು.**<br>➢ **ಕಥೆಯ ಪಾತ್ರಗಳನ್ನು/ವಸ್ತುಗಳನ್ನು ಮಕ್ಕಳಿಗೆ ಅರ್ಥ ಮಾಡಿಸುವುದು.**<br>➢ **ಮೊದಲು ಕಥೆಯನ್ನು ಕನ್ನಡದಲ್ಲಿಯೇ ಹೇಳುವುದು.**<br>➢ **ನಂತರವೂ ಕಥೆಯನ್ನು ಕನ್ನಡದಲ್ಲಿ ಹೇಳುತ್ತ ನಡು ನಡುವೆ ಕಥೆಯ ಪಾತ್ರಗಳನ್ನು/ವಸ್ತುಗಳನ್ನು ಇಂಗ್ಲೀಷನಲಿ ಪರಿಚಯಿಸುವುದು.**<br>➢ **ಆಯ್ದ ಪದಗಳನ್ನು ಪುನರುಚ್ಚರಿಸಲು ಮಕ್ಕಳಿಗೆ ಹೇಳುವುದು.**<br>**ಕಥೆ :**<br><br><br>(ಕಥೆಯನ್ನು ಆನಂದಿಸುವುದರ ಜೊತೆಗೆ ಆಲಿಸುತ್ತಿದ್ದಾರೆ ಎನ್ನುವುದನ್ನು ಖಚಿತಪಡಿಸಿ ಕೊಳ್ಳುವುದು) |

| | | |
|---|---|---|
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–3** **ದಿನ–14 (ಮಂಗಳವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 14 | ಶುಭಾಶಯ ವಿನಿಮಯ | **ಚಟುವಟಿಕೆ** 1.<br>ಪ್ರತಿ ಮಗುವನ್ನು ಅವನ/ ಅವಳ ಹೆಸರಿನಿಂದ ಕರೆದು **"Good morning, welcome "** "**Have a Ting tong Tuesday"** ಎಂದು ಹೇಳುವ ಮೂಲಕ ಮಕ್ಕಳನ್ನು ಸ್ವಾಗತಿಸಿ. ಅವರು **"Good morning Thank you. Same to you"**ಎಂದು ಉತ್ತರಿಸಲಿ.<br>ಮತ್ತು ಮುಷ್ಟಿ ಬಂಪ್ ಮಾಡಿ.<br>**ಚಟುವಟಿಕೆ 2**<br>ಹಿಂದಿನ ದಿನದಂತೆ ವೃತ್ತದಲ್ಲಿ **ಕದಮ್‌ತಾಲ್ ಚಟುವಟಿಕೆ** ಮಾಡಿಸುವುದು. |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ಚಟುವಟಿಕೆ: ನಿಮ್ಮನ್ನು ನೀವು ಗ್ರಹಿಸಿ<br>ಸಾಮಗ್ರಿಗಳು: ಯಾವುದೂ ಇಲ್ಲ.<br>ವಿಧಾನ:<br>1. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ.<br>2. ಇಂದು ಯಾವ ವಾರ ಎಂದು ಪ್ರಶ್ನಿಸಿ. **"**ಮಂಗಳವಾರ**"** ಎಂದು ಮಕ್ಕಳು ಉತ್ತರಿಸಲಿ.( What day is it today? Today is Tuesday ) ಹೀಗೆ ಇಂಗ್ಲೀಷ್ ನಲ್ಲಿ ಪ್ರಶ್ನಿಸಿ ಉತ್ತರಿಸಲು ಮಾರ್ಗದರ್ಶನ ನೀಡುವುದು.<br>3. ಶಿಕ್ಷಕರು ಮಕ್ಕಳಿಗೆ ಕಣ್ಣುಗಳನ್ನು ಮುಚ್ಚಲು ಸೂಚಿಸಲಿ.<br>4. ಈಗ ಮಕ್ಕಳು ಕಣ್ಣು ಮುಚ್ಚಿದಾಗ ಅವರಿಗೆ ಹೇಗನಿಸಿತ್ತು ಎಂದು ಕೇಳಿ.<br>5. ಅವರು, ನೋಡಲು ಕಣ್ಣು ಅಗತ್ಯವಾಗಿದೆ ಎಂದು ಉತ್ತರಿಸಲು ಪ್ರೋತ್ಸಾಹಿಸಿ.<br>6. ಕಿವಿ, ಮೂಗು, ನಾಲಗೆಗಳ ಬಗ್ಗೆಯೂ ಮಾತನಾಡಲು ಪ್ರೇರೇಪಿಸಿ.<br><br>(ಸೂಚನೆ: ಶಿಕ್ಷಕರು ತಮ್ಮದೇ ಆದ ಪ್ರಶ್ನೆಗಳನ್ನು ಸೇರಿಸಬಹುದು ಮತ್ತು ಮಕ್ಕಳು ತಮ್ಮ ಸ್ಥಳೀಯ ಭಾಷೆಯಲ್ಲಿಯೂ ಮಾತನಾಡಲು ಪ್ರೋತ್ಸಾಹಿಸಬಹುದು)<br><br>**ಚಟುವಟಿಕೆ: ರೈಮ್** Head, shoulders, knees and toes<br><br>ವಿಧಾನ: ರೈಮ್ ಅನ್ನು ಅಭಿನಯದೊಂದಿಗೆ ಮಕ್ಕಳಿಗೆ ಹೇಳಿ ಕೊಡಿ.<br>Head, shoulders, knees and toes<br>Knees and toes, Knees and toes,<br>Head, shoulders, knees and toes<br>It's my body. It's my body.<br>Eyes and ears and mouth and nose<br>Mouth and nose, Mouth and nose, |

DRAFT 22.02.22

| | | | |
|---|---|---|---|
| | | | Eyes and ears and mouth and nose<br>It's my body. It's my body. |
| | ನನ್ನ ಸಮಯ(**Free Indore play)**<br>('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು) | | ದಿನ – 14<br>* ಮಗು ಎಲ್ಲಾ ಮೂಲೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದನ್ನು ಹಾಗೂ ಸೂಕ್ತವಾಗಿ ಪೂರ್ಣಗೊಳಿಸಿರುವುದನ್ನು ಖಚಿತ ಪಡಿಸಿಕೊಳ್ಳುವುದು.<br>* ಅಪೂರ್ಣಗೊಳಿಸಿರುವ ಚಟುವಟಿಕೆಗಳನ್ನು ಮಗು ಪೂರ್ಣಗೊಳಿಸಲು ಸಹಕರಿಸುವುದು.<br>* ಮುಂದಿನ ದಿನಗಳಲ್ಲಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಯಾವ ಮಕ್ಕಳ ಕಡೆಗೆ ಹೆಚ್ಚು ಗಮನಹರಿಸಬೇಕೆಂಬ ಬಗ್ಗೆ ಶಿಕ್ಷಕರು ಮಾನಸಿಕವಾಗಿ ಸಿದ್ಧರಾಗುವುದು.<br>* ದಿನದ ಅಂತ್ಯಕ್ಕೆ ಕಲಿಕಾ ಮೂಲೆಗಳಲ್ಲಿ ಮುಂದಿನ ಹಂತಕ್ಕೆ ಹೊಂದಿಸಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ ) ಚಟುವಟಿಕೆ)** | | **ಸಾಮರ್ಥ್ಯ: ಶಬ್ಧದ ಅರಿವು, ಸ್ಮರಣೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ...2 ಆಲಿಸಿ ಹೇಳು (ಗುರಿ 3)**<br>**ಉದ್ದೇಶಗಳು:– ಶಬ್ಧವನ್ನು ಆಲಿಸಿ ಗುರುತಿಸುವುದು.**<br>**ಅಗತ್ಯ ಸಾಮಗ್ರಿಗಳು : ಶ್ರವಣ ಉಪಕರಣ/ಮೋಬೈಲ್**<br>**ವಿಧಾನ : ಮಕ್ಕಳನ್ನು ವಿವಿಧ ಗುಂಪುಗಳಲ್ಲಿ ಕುಳಿತುಕೊಳ್ಳಲು ಹೇಳುವುದು. ಪ್ರತಿ ಗುಂಪಿನ ಮಕ್ಕಳು ಶ್ರವಣ ಉಪಕರಣದ ಸಹಾಯದಿಂದ ಪ್ರಾಣಿಗಳ ಧ್ವನಿಗಳನ್ನು ಆಲಿಸಿ, ಯಾವ ಪ್ರಾಣಿ ಎಂದು ಗುರುತಿಸುವುದು. ಪ್ರತಿ ಮಗುವಿಗೂ ಅವಕಾಶ ಸಿಗುವವರೆಗೆ ಚಟುವಟಿಕೆ ಮುಂದುವರೆಸುವುದು.**<br>**ತರಗತಿ–2**<br>**1. ಶಿಕ್ಷಕರು ಪ್ರಾಣಿ ಪಕ್ಷಿಗಳ ಧ್ವನಿಯ ಅನುಕರಣೆ ಮಾಡಿ, ಇದು ಯಾವ ಪ್ರಾಣಿ ಪಕ್ಷಿಯ ಕೂಗು ಎಂದು ಗುರುತಿಸಲು ಹೇಳುವುದು.**<br>**2. ಪ್ರಾಣಿ ಮತ್ತು ಪಕ್ಷಿಗಳ ಕೂಗುಗಳನ್ನು ಅನುಕರಿಸಲು ಹೇಳುವುದು.**<br>**ತರಗತಿ–3**<br>**1.ಸ್ಥಳೀಯವಾಗಿ ಲಭ್ಯವಿರುವ ಸಂಗೀತ ವಾದ್ಯಗಳ ಶಬ್ಧವನ್ನು ಗುರುತಿಸಲು ತಿಳಿಸುವುದು.**<br>**2.ಪರಿಚಯಿಸಿದ ಸಂಗೀತ ವಾದ್ಯಗಳನ್ನು ಪಟ್ಟಿ ಮಾಡಲು ತಿಳಿಸುವುದು.**<br>**3. ಯಾವುದಾದರು ವಾದ್ಯದ ಜೊತೆ ಶಿಶುಗೀತೆ ಹೇಳಿಸುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ,<br>ಚಟುವಟಿಕೆ –51.ಚುಕ್ಕೆ ಸೇರಿಸಿ ಚಿತ್ರ ಮಾಡು. ಮತ್ತು ಬಣ್ಣ ತುಂಬಿಸು. ಗುರಿ – 1<br>ಉದ್ದೇಶ;<br>• ಸೂಕ್ಮ ಸ್ನಾಯುಗಳ ಬೆಳವಣಿಗೆಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯತೆ ಬರುತ್ತದೆ.<br>• ಬಣ್ಣಗಳ ಪರಿಕಲ್ಪನೆ ಮೂಡುತ್ತದೆ.<br><br>ಸಾಮಗ್ರಿಗಳು ; ಕ್ರೆಯಾನ್ಸ್, ಕಲರ್ ಪೆನ್ಸಿಲ್ಸ್, ಚಾಕ್ ಪೀಸ್.<br>ವಿಧಾನ ; ವಿವಿಧ ಆಕಾರಗಳು ಮತ್ತು ವಿನ್ಯಾಸಗಳ ಚುಕ್ಕಿ ಚಿತ್ರಗಳನ್ನು ಮಕ್ಕಳಿಗೆ ನೀಡಿ ಚುಕ್ಕೆ ಸೇರಿಸಿ ಚಿತ್ರ ಮಾಡಲು ಹೇಳುವುದು. ನಂತರ ರಚಿಸಿದ ಚಿತ್ರಗಳಿಗೆ ಕ್ರೆಯಾನ್ಸ್ ಚಾಕ್‌ಪೀಸ್ ನಿಂದ ಬಣ್ಣ ತುಂಬಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ತಮಗೆ ಇಷ್ಟವಾದ ಚಿತ್ರ ಬರೆದು ಬಣ್ಣ ತುಂಬಲು ಹೇಳುವುದು. |
| | **ಭಾಷಾ ಅಭಿವೃದ್ಧಿ ಮತ್ತು** | **ಆಲಿಸುವುದ ು ಮತ್ತು ಮಾತನಾಡ** | **ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಪದ ಸಂಪತ್ತಿನ ಅಭಿವೃದ್ಧಿ, ಚಾಲನಾ ಕೌಶಲಗಳ ಅಭಿವೃದ್ಧಿ.**<br>**ಚಟುವಟಿಕೆ: 15 ಪ್ರಾಸ ಪದಗಳನ್ನು ಆಲಿಸುವುದು (ಗುರಿ–02) ECL-4 ( 8 ನೇ ದಿನದಿಂದ ಮುಂದುವರೆದಿದೆ)**<br>**ಉದ್ದೇಶಗಳು:** |

DRAFT 22.02.22

| | | | |
|---|---|---|---|
| | ಬುನಾದಿ ಸಾಕ್ಷರತೆ | ುವುದು | * ಧ್ವನಿ ವಿಜ್ಞಾನದ ಅರಿವನ್ನು ಹೊಂದುವಂತೆ ಮಾಡುವುದು.<br>* ಪ್ರಾಸಪದಗಳ ಮೂಲಕ ಪದಸಂಪತ್ತನ್ನು ಹೆಚ್ಚಿಸುವುದು.<br>* ಸ್ಥೂಲ ಹಾಗೂ ಸೂಕ್ಷ್ಮ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು:– ಇಲ್ಲ<br>ವಿಧಾನ:<br>* ಮಕ್ಕಳಿಗೆ ಈಗಾಗಲೇ 4 ನೇ ದಿನದಲ್ಲಿ ಹೇಳಿರುವ ಶಿಶು ಪ್ರಾಸ ಗೀತೆಯನ್ನೇ ಹೇಳುವುದು.<br>* ಹಾಡು ಹೇಳುವಾಗ ಪ್ರಾಸ ಪದಗಳನ್ನು ಸ್ವಲ್ಪ ಒತ್ತಿ ಹೇಳುವುದು.<br>* ಪ್ರಾಸ ಗೀತೆಗೆ ತಕ್ಕಂತೆ ಅಭಿನಯಿಸಲು ತಿಳಿಸುವುದು.<br>* ಒತ್ತಿ ಹೇಳಿದ ಪದಗಳನ್ನು ಪ್ರತ್ಯೇಕವಾಗಿ ಹೇಳಿಸುವುದು.<br>* ಪ್ರಾಸಗೀತೆಯಲ್ಲಿಯ ಪ್ರಾಸ ಪದಗಳನ್ನು ಪರಿಚಯಿಸಿ ಅದಕ್ಕೆ ಮತ್ತೆ ಇನ್ನೊಂದು ಪ್ರಾಸ ಪದ ಸೇರಿಸುವುದು.<br>ತರಗತಿವಾರು ವಿವರ: 2 ನೇ ತರಗತಿ ಮಕ್ಕಳು ಶಿಕ್ಷಕರನ್ನು ಅನುಕರಿಸುತ್ತಾ ರಾಗಬದ್ಧವಾಗಿ ಅಭಿನಯದೊಂದಿಗೆ ಹಾಡುವುದು. ವಿಶೇಷವಾಗಿ ಹೇಳಿದ ಪದಗಳನ್ನು ಬರೆದು ಕೊಳ್ಳುವರು. ಅದಕ್ಕೆ ಇನ್ನೂ ಎರಡೆರಡು ಪ್ರಾಸಪದಗಳನ್ನು ಸೇರಿಸಲು ಪ್ರಯತ್ನಿಸುವುದು. 3 ನೇ ತರಗತಿ ಮಕ್ಕಳು ಶಿಕ್ಷಕರನ್ನು ಅನುಕರಿಸುತ್ತಾ ರಾಗಬದ್ಧವಾಗಿ ಅಭಿನಯದೊಂದಿಗೆ ಹಾಡುವುದು.ಪ್ರಾಸಪದಕ್ಕೆ ಇನ್ನೂ ಎರಡೆರಡು ಪ್ರಾಸಪದಗಳನ್ನು ಸೇರಿಸಲು ಪ್ರಯತ್ನಿಸುವುದು. (26 ನೇ ದಿನಕ್ಕೆ ಮುಂದುವರೆದಿದೆ) |
| | | ಅರ್ಥಗ್ರಹಿಕೆ ಯೊಂದಿಗಿನ ಓದು | ಸಾಮರ್ಥ್ಯ: ಪದ ಗುರ್ತಿಸುವಿಕೆ, ಮುದ್ರಣದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತು ಅಭಿವೃದ್ಧಿ..<br>ಚಟುವಟಿಕೆ 11 ಎ : ನಾಮಫಲಕ(ಗುರಿ–2)<br>ಉದ್ದೇಶ : ನಾಮಫಲಕಗಳಲ್ಲಿಯ ಹೆಸರುಗಳನ್ನು ಚಿತ್ರಗಳ ಸಹಾಯದಿಂದ ಗುರುತಿಸುವರು ಮತ್ತು ಓದುವರು.<br>ಅಗತ್ಯ ಸಾಮಗ್ರಿಗಳು: ಮಿಂಚು ಪಟ್ಟಿ, ನೋಟ್ ಪುಸ್ತಕ, ಚಿತ್ರ ಪಟ.<br>ವಿಧಾನ: . ಮಗುವಿನ ಹೆಸರಿನ ಪಕ್ಕದಲ್ಲಿ ಯಾವುದಾದರೂ ವಸ್ತು, ಪ್ರಾಣಿಗಳ ಚಿತ್ರ ಅಂಟಿಸಿ ನಾಮ ಫಲಕಗಳನ್ನು ರಚಿಸುವುದು. ನಂತರ ತನ್ನ ಹೆಸರನ್ನು ಗುರುತಿಸಲು ತಿಳಿಸುವುದು ಒಂದು ವೇಳೆ ಮಕ್ಕಳು ಹೆಸರುಗಳನ್ನು ಗುರ್ತಿಸಲು ವಿಫಲವಾದರೆ ಹೆಸರಿನ ಮುಂದೆ ಅಂಟಿಸಿರುವ ಚಿತ್ರಗಳ ಸಹಾಯದಿಂದ ತನ್ನ ಹೆಸರನ್ನು ತೋರಿಸಲು ನೆರವಾಗುವುದು<br>2 ಮತ್ತು 3ನೇ ತರಗತಿ : ತನ್ನ ಸ್ನೇಹಿತರ ಹೆಸರುಗಳನ್ನು ಗುರುತಿಸುವ ಚಟುವಟಿಕೆಯನ್ನು ಮಾಡಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಕೈ–ಕಣ್ಣು ಸಂಯೋಜನೆ, ಬರವಣಿಗೆ ಕೌಶಲಗಳ ಅಭ್ಯಾಸ, ಸೃಜನಶೀಲ ಅಭಿವ್ಯಕ್ತಿ.<br>ಚಟುವಟಿಕೆ: 2 ಮುಕ್ತ ಚಿತ್ರರಚನೆ (ಗುರಿ–2) **ECW-6**<br>ಉದ್ದೇಶಗಳು:<br>• ಬರವಣಿಗೆಯ ಆರಂಭಿಕ ಕೌಶಲಗಳನ್ನು ರೂಢಿಸುವುದು.<br>• ಕಣ್ಣು–ಕೈಗಳ ಸಮನ್ವಯ ಕೌಶಲವನ್ನು ಅಭಿವೃದ್ಧಿಪಡಿಸುವುದು.<br>• ಕ್ರಿಯಾತ್ಮಕ ಅಭಿವ್ಯಕ್ತಿಗೆ ಅವಕಾಶ ನೀಡುವುದು.<br>ಅಗತ್ಯ ಸಾಮಗ್ರಿಗಳು: ವಾಲ್‌ಸ್ಲೇಟ್, ಸೀಮೆ ಸುಣ್ಣ<br>ವಿಧಾನ: ವಾಲ್‌ಸ್ಲೇಟ್‌ನಲ್ಲಿ ಮುಕ್ತವಾಗಿ ಬರೆಯಲು, ಅನಿಸಿದ್ದನ್ನು ಬಿಡಿಸಲು ಅವಕಾಶ ಕಲ್ಪಿಸುವುದು. ಅವರ ಬರವಣಿಗೆ ಬಗ್ಗೆ ಮಾತನಾಡಲು ತಿಳಿಸುವುದು. ಅವರಿಗೆ ಪ್ರಶ್ನೆ ಕೇಳುತ್ತಾ ಬರವಣಿಗೆ ಬಗ್ಗೆ ಮಾಹಿತಿ ಪಡೆಯುವುದು.<br>ತರಗತಿವಾರು ವಿವರ: 2 ಮತ್ತು 3 ನೇ ತರಗತಿಯ ಮಕ್ಕಳಿಗೆ ತಾವು ಚಿತ್ರಿಸಿದ ಚಿತ್ರದ ಕುರಿತು ಮಾತನಾಡಲು ತಿಳಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | ಹೊರಾಂಗಣ ಆಟಗಳು | Day 14:<br>ಚಟುವಟಿಕೆ : ಲಗೋರಿ ಗುರಿ 1<br>ಸಾಮರ್ಥ್ಯ : ಕೈ ಕಾಲುಗಳ ಚಲನೆ , ಚುರುಕುತನ,  | |

DRAFT 2022

| | | |
|---|---|---|
| | | ಸಾಮಗ್ರಿ : 7 ಚಪ್ಪಟೆ ಕಲ್ಲುಗಳು , ಮೆತ್ತನೆಯ ಚೆಂಡು.<br>ವಿಧಾನ :<br>• ಮಕ್ಕಳನ್ನು ಎರಡು ಗುಂಪುಗಳಾಗಿ ವಿಂಗಡಿಸುವುದು.<br>• ಒಂದು ಚಿಕ್ಕ ವೃತ್ತದಲ್ಲಿ 7 ಚಪ್ಪಟೆ ಕಲ್ಲುಗಳನ್ನು ಒಂದರ ಮೇಲೊಂದರಂತೆ ಜೋಡಿಸುವುದು .<br>• ವೃತ್ತದಿಂದ ಸಮಾನ ದೂರದಲ್ಲಿ ಗೆರೆಗಳನ್ನು ಎಳೆಯಬೇಕು.<br>• ಆ ಗೆರೆಯಿಂದ ಒಂದು ಗುಂಪಿನ ಪ್ರತಿ ಸದಸ್ಯರು ಚೆಂಡಿನಿಂದ ಹೊಡೆದು ವೃತ್ತದಲ್ಲಿ ಜೋಡಿಸಿರುವ ಕಲ್ಲುಗಳನ್ನು ಉರುಳಿಸಬೇಕು. ಒಬ್ಬರಿಗೆ ಮೂರು ಅವಕಾಶಗಳಿರುತ್ತವೆ. ಹಾಗೆ ಹೊಡೆದಾಗ ಕಲ್ಲುಗಳು ಉರುಳಿದರೆ ಅದೇ ತಂಡದವರು ಕಲ್ಲುಗಳನ್ನು ಪುನಃ ಜೋಡಿಸಬೇಕು. ಹಾಗೆ ಜೋಡಿಸಿದರೆ ತಂಡಕ್ಕೆ ಒಂದು ಅಂಕ ದೊರೆಯುತ್ತದೆ.<br>• ಕಲ್ಲುಗಳನ್ನು ಜೋಡಿಸುವುದಕ್ಕಿಂತ ಮೊದಲು ಇನ್ನೊಂದು ತಂಡದವರು ಕಲ್ಲು ಉರುಳಿಸಿದ ತಂಡದವರಿಗೆ ಚೆಂಡಿನಿಂದ ಹೊಡೆಯಬೇಕು. ಹಾಗೆ ಹೊಡೆದ ಚೆಂಡು ಅವರಿಗೆ ತಾಕಿದರೆ ಆ ತಂಡ ಔಟ್ ಆದಂತೆ. ನಂತರ ಎದುರಿನ ತಂಡ ಆಡಬೇಕು.<br>• ಯಾವ ತಂಡ ಹೆಚ್ಚು ಸಲ ಕಲ್ಲನ್ನು ಉರುಳಿಸಿ , ಚೆಂಡು ತಾಗದಂತೆ ಎಚ್ಚರ ವಹಿಸಿ, ಕಲ್ಲನ್ನು ಜೋಡಿಸುತ್ತಾರೆಯೋ ಆ ತಂಡ ಆಟದಲ್ಲಿ ಗೆದ್ದಂತೆ.<br>• **ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೂ ಈ ಆಟವನ್ನೇ ಮುಂದುವರೆಸಿ ಆಡಿಸುವುದು.** |
| | **ಕಥಾ ಸಮಯ** | **ವಿಧಾನ :**<br>➢ ಮೊದಲ ದಿನದ ಉದ್ದೇಶದಂತೆ ಕಥಾ ಸಮಯವು ಮುಂದುವರೆಯುತ್ತದೆ.<br>➢ ಶಿಕ್ಷಕರು ಕಥೆಯನ್ನು ನಿರೂಪಿಸುವುದರ ಜೊತೆಗೆ ಮಕ್ಕಳ ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು.<br>ಉದಾ : ವಸ್ತುವಿನ ಬಣ್ಣ ಯಾವುದು? ಮಗುವಿನ ಹೆಸರೇನು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಕನ್ನಡದಲ್ಲಿ ಸರಳ ಪ್ರಶ್ನೆಗಳನ್ನು ಕೇಳಿ.**<br>(ಕಥೆಯನ್ನು ಆನಂದಿಸುವುದರ ಜೊತೆಗೆ ಆಲಿಸುತ್ತಿದ್ದಾರೆ ಎನ್ನುವುದನ್ನು ಖಚಿತಪಡಿಸಿ ಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–3** **ದಿನ–15 (ಬುಧವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 15 | **ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ** 1. ಪ್ರತಿ ಮಗುವನ್ನು ಅವನ/ ಅವಳ ಹೆಸರಿನಿಂದ ಕರೆದು **"Good morning, welcome "** **"Have a wonderful Wednesday"** ಎಂದು ಹೇಳುವ ಮೂಲಕ ಮಕ್ಕಳನ್ನು ಸ್ವಾಗತಿಸಿ. ಅವರು **"Good morning, Thank you. Same to you"**ಎಂದು ಉತ್ತರಿಸಲಿ.<br>**ಚಟುವಟಿಕೆ 2**<br>ದಿನ–13 ರಲ್ಲಿ ಉಲ್ಲೇಖಿಸಲಾದ ಶುಭಾಶಯ ವಿನಿಮಯ ಚಟುವಟಿಕೆ ಪುನರಾವರ್ತಿಸಿ |
| | **ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ*** | ಚಟುವಟಿಕೆ : ನಿಮ್ಮನ್ನು ನೀವು ತಿಳಿದುಕೊಳ್ಳಿ<br>ಸಾಮಗ್ರಿಗಳು: ವಿವಿಧ ದೇಹದ ಭಾಗಗಳ ಫ್ಲ್ಯಾಶ್ ಕಾರ್ಡ್ ಗಳು, ಚೆಂಡು, ಸಂಗೀತ ಪ್ಲೇಯರ್.<br>ವಿಧಾನ:<br>1. ಮಕ್ಕಳನ್ನು ವೃತ್ತದಲ್ಲಿ ಕೂರಿಸಿ ಮತ್ತು ಫ್ಲ್ಯಾಶ್ ಕಾರ್ಡ್ ಗಳನ್ನು ಮಧ್ಯದಲ್ಲಿ ಇರಿಸಿ.<br>2. ಪಾಸಿಂಗ್ ದ ಬಾಲ್ ಆಟವನ್ನು ಆಡಿಸಿ. |

DRAFT 22.02.22

| | | |
|---|---|---|
| | ***ಚಟುವಟಿಕೆ)*** | 3. ಸಂಗೀತ ನಿಂತಾಗ ಯಾವ ಮಗುವಿನ ಕೈಯಲ್ಲಿ ಚೆಂಡು ಉಳಿಯುವುದೊ ಆ ಮಗು ಫ್ಲ್ಯಾಶ್ ಕಾರ್ಡ್ ಅನ್ನು ಆರಿಸಿ ಮತ್ತು ಅದು ಯಾವ ಭಾಗಎಂದು ಹೇಳಬೇಕು ಮತ್ತು ಅವರ ದೇಹದ ಮೇಲೆ ತೋರಿಸುವ ಮೂಲಕ ಸೂಚಿಸಬೇಕು. ಉದಾಹರಣೆಗೆ ಅವನು/ಅವಳು ಕೈ ಯನ್ನು ಎತ್ತಿಕೊಂಡಿದ್ದರೆ, ಅವನು/ಅವಳು ಕೈಯನ್ನು ಮೇಲಕ್ಕೆತ್ತಿ ಜೋರಾಗಿ ಕೈ ಎಂದು ಹೇಳಬೇಕು. ದೇಹದ ಭಾಗಗಳ್ನು ಇಂಗ್ಲೀಷ್ ನಲ್ಲಿಯೂ ಪರಿಚಯಿಸಿ.<br>4. ಸಂಗೀತವನ್ನು ನುಡಿಸಿ ಮತ್ತು ಚಟುವಟಿಕೆಯನ್ನು ಪುನರಾವರ್ತಿಸಿ. ಎಲ್ಲರಿಗೂ ಅವಕಾಶ ಸಿಗುವುದನ್ನು ಖಚಿತಪಡಿಸಿಕೊಳ್ಳಿ<br>5. ದೇಹದ ವಿವಿಧ ಭಾಗಗಳ ಕೆಲಸ ಏನು ಎಂದು ಮಕ್ಕಳನ್ನು ಕೇಳಿ– ನಾನು ನನ್ನ ಬಾಯಿಯಿಂದ ಮಾತನಾಡುತ್ತೇನೆ, ಕಾಲುಗಳು – ನಾನು ನಡೆಯುತ್ತೇನೆ / ನೃತ್ಯ ಮಾಡುತ್ತೇನೆ / ಓಡುತ್ತೇನೆ / ಜಿಗಿಯುತ್ತೇನೆ, ಕೈಗಳು– ನಾನು ಬರೆಯುತ್ತೇನೆ / ಕೆಲಸ ಮಾಡುತ್ತೇನೆ / ನನ್ನ ಕೈಗಳಿಂದ ಆಡುತ್ತೇನೆ ಇತ್ಯಾದಿ.<br>(ಸೂಚನೆ: ಶಿಕ್ಷಕರು ತಮ್ಮದೇ ಆದ ಪ್ರಶ್ನೆಗಳನ್ನು ಸೇರಿಸಬಹುದು ಮತ್ತು ಮಕ್ಕಳು ತಮ್ಮ ಸ್ಥಳೀಯ ಭಾಷೆಯಲ್ಲಿಯೂ ಮಾತನಾಡಲು ಪ್ರೋತ್ಸಾಹಿಸಬಹುದು)<br>**ಚಟುವಟಿಕೆ: ರೈಮ್**<br>• Head, shoulders, knees and toes ರೈಮ್ ಅನ್ನು ಅಭಿನಯದೊಂದಿಗೆ ಮಕ್ಕಳಿಗೆ ಹೇಳಿ ಕೊಡಿ.<br>• ದೇಹದ ಭಾಗಗಳನ್ನು ಇಂಗ್ಲೀಷ್ ನಲ್ಲಿ ಪರಿಚಯಿಸಿ.<br>• ಸರಳ ಪ್ರಶ್ನೆಗಳನ್ನು ಕೇಳಿ. |

DRAFT 22.02.22

| | | |
|---|---|---|
| | **ನನ್ನ ಸಮಯ(Free Indore play)**<br>**('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು)** | ದಿನ – 15<br>**ಕಲಿಕಾ ಸಿದ್ಧತಾ ಭಾಗವಾಗಿ 8 ಮೂಲೆಗಳಲ್ಲಿ ಮೊದಲ ಹಂತದಲ್ಲಿ ನಿಗದಿಪಡಿಸಿರುವ ಮೂಲೆವಾರು ಚಟುವಟಿಕೆಗಳ ಬಗ್ಗೆ ಹಾಗೂ ಆಯಾ ಮೂಲೆಗಳ ಸಾಮಗ್ರಿಗಳನ್ನು ಬಳಸುವ ಬಗ್ಗೆ ಶಿಕ್ಷಕರು ಮಕ್ಕಳಿಗೆ ಪರಿಚಯ ಒದಗಿಸುವರು. ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತ ಅವರ ಅರ್ಥೈಸಿಕೊಳ್ಳುವಿಕೆಯನ್ನು ಖಾತ್ರಿ ಪಡಿಸಿಕೊಳ್ಳುತ್ತಾರೆ.**<br>**(* ಮೂಲೆವಾರು ಸಲಹಾತ್ಮಕ ಚಟುವಟಿಕೆಗಳನ್ನು ನೀಡಿದ್ದು, ಸಾಮರ್ಥ್ಯಗಳನ್ನು ಸಾಧಿಸಲು ಅನುಕೂಲವಾಗುವಂತೆ ಮಕ್ಕಳಿಗೆ ಹೆಚ್ಚುವರಿ ಚಟುವಟಿಕೆಗಳನ್ನು ಯೋಜಿಸಬಹುದಾಗಿದೆ.)**<br>******************************************************************************<br>**ಮೂಲೆ – ಬಿಲ್ಡಿಂಗ್ ಬ್ಲಾಕ್ಸ್ ಮೂಲೆ:–**<br>**ಸಾಮರ್ಥ್ಯ: ಕಣ್ಣು ಮತ್ತು ಕೈಗಳ ಸಂಯೋಜನೆಯನ್ನು ಸಾಧಿಸುವುದು.**<br>ಚಟುವಟಿಕೆ: ಗಾತ್ರದ ಆಧಾರದ ಮೇಲೆ ವಸ್ತುಗಳ ಜೋಡಣೆ<br><br>ಉದ್ದೇಶ : 4ರಿಂದ 5 ವಸ್ತು, ಬ್ಲಾಕ್ ಗಳನ್ನು ಜೋಡಿಸುತ್ತಾನೆ.<br>ಸಾಮಗ್ರಿ :– ಕಲಿಕಾ ಕಿಟ್ ನ ಬಿಲ್ಡಿಂಗ್ ಬ್ಲಾಕ್ಸ್<br>( ಲಭ್ಯವಿಲ್ಲದಿದ್ದಲ್ಲಿ ಸೋಪ್ ಬಾಕ್ಸ್ ಗಳು, ಬೆಂಕಿ ಪೊಟ್ಟಣಗಳು, ಪೇಸ್ಟ್ ಬಾಕ್ಸ್ ಗಳು, ವಿವಿಧ ಅಳತೆಯ ಪುಸ್ತಕಗಳು)<br>ವಿಧಾನ: ವಿದ್ಯಾ ಪ್ರವೇಶ (ವಿ.ಪ್ರ):<br>ಗಾತ್ರದ ಆಧಾರದ ಮೇಲೆ ಸಾಮಗ್ರಿಗಳನ್ನು ಒಂದರ ಮೇಲೊಂದರಂತೆ ಜೋಡಿಸುವುದು.<br>**2 ನೇ ತರಗತಿ &3 ನೇ ತರಗತಿ :**<br>ಗಾತ್ರದ ಆಧಾರದ ಮೇಲೆ 2 ವಿವಿಧ ಸಾಮಗ್ರಿಗಳನ್ನು ಒಂದರ ಮೇಲೊಂದರಂತೆ ಜೋಡಿಸಿ ಎಣಿಸುವುದರೊಂದಿಗೆ ಎತ್ತರದ ಹೋಲಿಕೆಯನ್ನು ಮಾಡುವುದು.<br>******************************************************************************<br>**ಮೂಲೆ – ಗಣಿತ ಮೂಲೆ:–**<br>**ಸಾಮರ್ಥ್ಯ: ವಸ್ತುಗಳ ಗಾತ್ರ, ಎತ್ತರ–ಗಿಡ್ಡ, ಭಾರ–ಹಗುರ, ಆಧಾರದ ಮೇಲೆ ವರ್ಗೀಕರಿಸುವುದು ಹಾಗೂ ಸಾಂಕೇತಿಕವಾಗಿ ಸಂಖ್ಯೆಗಳ ಹೋಲಿಕೆ ಮಾಡುವುದು.**<br>ಚಟುವಟಿಕೆ: ನಡೆ ...ನಡೆ....ನಡಿಗೆ ಉದ್ದೇಶ : ನಿರ್ದಿಷ್ಟ ನಿರ್ದೇಶನವನ್ನು ಪಾಲಿಸುತ್ತ ಸ್ವತಂತ್ರವಾಗಿ ಕಾರ್ಯೋನ್ಮುಖನಾಗುತ್ತಾನೆ.<br>ಸಾಮಗ್ರಿ :– ಚಾಕ್ ಪೀಸ್<br><br>ವಿಧಾನ: ವಿದ್ಯಾ ಪ್ರವೇಶ (ವಿ.ಪ್ರ):<br>ತರಗತಿ ಕೋಣೆಯೊಳಗೆ ವಕ್ರ, ನೇರ ರೇಖೆಗಳನ್ನು ಎಳೆದು ಅದರ ಮೇಲೆಯೆ ನಡೆಯುತ್ತ ಸಾಗುವುದು.<br>**2 ನೇ & 3 ನೇ ತರಗತಿ :**<br>ತಾವು ನಡೆದ ದೂರವನ್ನು ಹೆಜ್ಜೆಗಳಲ್ಲಿ ಎಣಿಸಿ ಹೇಳುವುದು.<br>**********************************************************************************<br>**ಅನ್ವೇಷಣೆ ಅಥವಾ ವಿಜ್ಞಾನ ಮೂಲೆ:**<br>**ಸಾಮರ್ಥ್ಯ: ವೈಜ್ಞಾನಿಕ, ಅನ್ವೇಷಣಾ ಹಾಗೂ ಚಿಂತನಾ ಮನೋಭಾವಗಳನ್ನು ಬೆಳೆಸುವುದು.**<br>ಚಟುವಟಿಕೆ: ಬಣ್ಣದ ಮೋಜಿನಾಟ (ಗುರಿ – 3)<br>ಉದ್ದೇಶ : ಬಣ್ಣಗಳನ್ನು ಸೇರಿಸುವ ಮೂಲಕ ಹೊಸ ಬಣ್ಣಗಳ ಸೃಷ್ಟಿಯ ಬಗ್ಗೆ **ತಿಳಿಯುವಳು/ನು.**<br>ಸಾಮಗ್ರಿ :– * ಪಾರದರ್ಶಕ ಪ್ಲಾಸ್ಟಿಕ್ ಲೋಟಗಳು<br>* ನೀರು<br>* ಬಣ್ಣಗಳು<br>ವಿಧಾನ: ವಿದ್ಯಾ ಪ್ರವೇಶ (ವಿ.ಪ್ರ):<br>ಮಕ್ಕಳು ನೀರಿನಲ್ಲಿ ಬಣ್ಣವನ್ನು ಬೆರೆಸುವುದರಿಂದ ಆಗುವ ಬದಲಾವಣೆಯನ್ನು ಗಮನಿಸುವುದು.<br>**2 & 3 ನೇ ತರಗತಿ :**<br>2 ಅಥವಾ ಹೆಚ್ಚು ಮೂಲಭೂತ ಬಣ್ಣಗಳನ್ನು ಬೆರೆಸಿದಾಗ ಉಂಟಾಗುವ ಹೊಸ ಬಣ್ಣವನ್ನು ಗಮನಿಸುವರು. |

DRAFT 22.02.22

**************************************************************************

**ಗೊಂಬೆಗಳ ಮೂಲೆ :**

**ಸಾಮರ್ಥ್ಯ: ಸೌಂದರ್ಯೋಪಾಸನೆ, ವೈಯಕ್ತಿಕ ಸ್ವಚ್ಛತೆ, ಅಭಿವ್ಯಕ್ತಿ ಕೌಶಲ್ಯ ಬೆಳೆಸುವುದು.**

ಚಟುವಟಿಕೆ: ಗೊಂಬೆ ಜೋಡಿಸು

ಉದ್ದೇಶ : ಗೊಂಬೆಗಳನ್ನು ವಿವಿಧ ಆಧಾರಗಳಲ್ಲಿ ವರ್ಗೀಕರಿಸುವರು.

ಸಾಮಗ್ರಿ :– ವಿವಿಧ ರೀತಿಯ ಗೊಂಬೆಗಳು.

( ವಿವಿಧ ಗಾತ್ರದ ಪ್ರಾಣಿ, ಪಕ್ಷಿ, ಮನುಷ್ಯ , ವಾಹನಗಳು.

ವಿಧಾನ: ವಿದ್ಯಾ ಪ್ರವೇಶ (ವಿ.ಪ್ರ): **2 ನೇ & 3 ನೇ ತರಗತಿ:–**

2 ಗೊಂಬೆಗಳ ಗುಂಪು ರಚನೆ ಮಾಡಿಸಿ. 3 ಗೊಂಬೆಗಳ ಗುಂಪು ರಚನೆ ಮಾಡಿಸಿ.

ತಮ್ಮದೇ ಆದ ಕಲ್ಪನೆಯಲ್ಲಿ ಮಕ್ಕಳು ಗೊಂಬೆಗಳನ್ನು ಜೋಡಿಸುತ್ತಾರೆ.

( ಗಾತ್ರದ ಆಧಾರದ ಮೇಲೆ, ಸಾಲಾಗಿ, ಪ್ರಾಣಿಗಳ, ಮನುಷ್ಯ ಗೊಂಬೆಗಳ, ಪ್ರಾಣಿಗಳ, ವಾಹನಗಳ ಗುಂಪಾಗಿ, ಮನುಷ್ಯನೊಂದಿಗೆ ನಾಯಿಯನ್ನು, ಪಕ್ಷಿಯೊಂದಿಗೆ ಮರವನ್ನು,)

ಮಕ್ಕಳು ಗುಂಪು ಮಾಡಿದ ಕಾರಣ ತಿಳಿಸಲು ಹೇಳುವುದು.

**************************************************************************

**ಓದುವ / ತರಗತಿ ಗ್ರಂಥಾಲಯ ಮೂಲೆ :**

**ಸಾಮರ್ಥ್ಯ: ಚಿತ್ರಗಳನ್ನು ಓದುವುದರೊಂದಿಗೆ ಅರ್ಥೈಸಿಕೊಳ್ಳುವುದು, ಕಲ್ಪನಾಶಕ್ತಿ, ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸುವುದು.**

ಚಟುವಟಿಕೆ: ಚಿತ್ರ ಓದು



ಉದ್ದೇಶ : ಚಿತ್ರ ಗುರುತಿಸುವುದರೊಂದಿಗೆ ಸ್ಪಷ್ಟವಾಗಿ ಓದುತ್ತಾನೆ / ಳೆ

ಸಾಮಗ್ರಿ :– ಕ್ರಿಯಾ ಪದಗಳನ್ನು ಬಿಂಬಿಸುವ ಚಿತ್ರಗಳು / ಚಾರ್ಟ್

ವಿದ್ಯಾ ಪ್ರವೇಶ (ವಿ.ಪ್ರ):

ಚಿತ್ರವನ್ನು ನೋಡಿ ಕ್ರಿಯಾಪದಗಳನ್ನು ಗುರುತಿಸುತ್ತಾನೆ./ಳೆ

**2 ನೇ & 3 ನೇ ತರಗತಿ :**

ಚಿತ್ರವನ್ನು ನೋಡಿ ಕ್ರಿಯಾಪದಗಳನ್ನು ಗುರುತಿಸುವುದರೊಂದಿಗೆ ಆಂಗಿಕ ಅಭಿನಯ ಮಾಡುವರು.

**************************************************************************

**ಕಲೆಗೊಂದು ನೆಲೆ/ಕರಕುಶಲ ಮೂಲೆ:**

**ಸಾಮರ್ಥ್ಯ: * ಸೂಕ್ಷ್ಮ ಸ್ನಾಯು ಬೆಳವಣಿಗೆಯೊಂದಿಗೆ ಸೌಂದರ್ಯೋಪಾಸನೆ, ಸೃಜನಶೀಲತೆಯನ್ನು ಬೆಳೆಸುವುದು.**

ಚಟುವಟಿಕೆ: ಹತ್ತಿ ಉಂಡೆ ಅಂಟಿಸುವುದು.

ಉದ್ದೇಶ : * ನೀಡಲಾದ ಮಾರ್ಗದರ್ಶನವನ್ನು ಅರ್ಥೈಸಿಕೊಂಡು ಕಾರ್ಯೋನ್ಮುಖನಾಗುವುದು.



ಸಾಮಗ್ರಿ :– ಹತ್ತಿ , ಗೊಂದು, ಡ್ರಾಯಿಂಗ್ ಶೀಟ್

ವಿದ್ಯಾ ಪ್ರವೇಶ (ವಿ.ಪ್ರ): **2 ನೇ & 3 ನೇ ತರಗತಿ :**

ಶಿಕ್ಷಕರು ಅಕ್ಷರ / ಆಕೃತಿ / ರೇಖಾ ಚಿತ್ರ ಬರೆದ ಡ್ರಾಯಿಂಗ್ ಶೀಟ್ ಒದಗಿಸಿ.

ಮಕ್ಕಳು ಅದರ ಮೇಲೆ ಹತ್ತಿ ಉಂಡೆಗಳನ್ನು ಗೆರೆಯ ಮೇಲೆಯೆ ಅಂಟಿಸುವುದು.

**2 ನೇ & 3 ನೇ ತರಗತಿ :**

**ಮೇಲಿನ ಚಟುವಟಿಕೆಯನ್ನು ಚಿತ್ರದಲ್ಲಿ ತೋರಿಸಸಿರುವಂತೆ ಮುಖದ ಭಾಗ ಬರೆದು ಅಂದಗೊಳಿಸುವುದು.**

**************************************************************************

**ಬರೆಯುವ ಮೂಲೆ :**

**ಸಾಮರ್ಥ್ಯ : ಬರವಣಿಗೆ ಸಿದ್ಧತಾ ಅಭ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಅಕ್ಷರಗಳ ವಿನ್ಯಾಸವನ್ನು ರಚಿಸುವುದು.**

ಚಟುವಟಿಕೆ: ಬರೆಯೋಣ ಬಾ (ಗುರಿ – 3)

ಉದ್ದೇಶ : * ಅಕ್ಷರ ರಚನಾ ವಿನ್ಯಾಸಕ್ಕೆ ಅಗತ್ಯ ಪೂರ್ವ ತಯಾರಿ


DRAFT 22.02.22

| | | |
|---|---|---|
| | | ಹೊಂದುವುದು.<br>ಸಾಮಗ್ರಿ :– ಸ್ಯಾಂಡ್ ಟ್ರೇ (ಮರಳಿನ ಹಲಗೆ)<br>ವಿದ್ಯಾ ಪ್ರವೇಶ (ವಿ.ಪ್ರ):<br><br>ಮರಳಿನ ಟ್ರೇ ಯಲ್ಲಿ ಮಗು ಕೈ ಬೆರಳನ್ನು ಬಳಸಿ ವಿವಿಧ ಅಕ್ಷರ ವಿನ್ಯಾಸ ಸಂಬಂಧಿತ ರೇಖಾಭ್ಯಾಸಗಳನ್ನು ಮಾಡುವುದು.<br>**2 ನೇ & 3 ನೇ ತರಗತಿ :**<br>ಮರಳಿನ ಟ್ರೇ ಯಲ್ಲಿ ಮಗು ಕೈ ಬೆರಳನ್ನು ಬಳಸಿ ವಿವಿಧ ಅಕ್ಷರಗಳನ್ನು ಬರೆಯುವುದು.<br>*****************************************************************************<br>**ಆಟಿಕೆ / ಮಾಡಿ ನೋಡು ಮೂಲೆ :**<br>**ಸಾಮರ್ಥ್ಯ: ಆಲೋಚನಾಶಕ್ತಿ, ಸೃಜನಶೀಲತೆ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು.**<br>ಚಟುವಟಿಕೆ: ಜೋಡಿಸಿ ನೋಡು.<br>ಉದ್ದೇಶ : * ವ್ಯವಸ್ಥಿತವಾಗಿ ಮತ್ತು ಕ್ರಮಬದ್ಧವಾಗಿ ವಸ್ತುಗಳ ಜೋಡಣೆ.<br><br>ಸಾಮಗ್ರಿ :– ಹುಣಸೆ ಬೀಜ, ಮುಚ್ಚಳಗಳು, ಗುಂಡಿಗಳು, ಮಣಿಗಳು.<br>ವಿಧಾನ :<br>ವಿದ್ಯಾ ಪ್ರವೇಶ (ವಿ.ಪ್ರ):<br><br>ಶಿಕ್ಷಕರು ರೇಖೆ, ವಕ್ರ ರೇಖೆ, ಆಕೃತಿಗಳನ್ನು ಬರೆದು ಅದರ ಮೇಲೆ ಮಕ್ಕಳು ಮೇಲ್ಕಂಡ ಸಾಮಗ್ರಿಗಳನ್ನು ಜೊಡಿಸುವುದು.<br>**2 ನೇ & 3 ನೇ ತರಗತಿ :**<br>ವಿದ್ಯಾರ್ಥಿಯು ಸ್ವಯಂ ಆಕೃತಿಗಳನ್ನು ರಚಿಸುವುದರೊಂದಿಗೆ ನೀಡಲಾದ ಚಟುವಟಿಕೆಯನ್ನು ನಿರ್ವಹಿಸುವುದು.<br>***************************************************************** |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿದೇ ೯ಶಿತ) ಚಟುವಟಿಕೆ)** | **ಸಾಮರ್ಥ್ಯ : ಗುರುತಿಸುವಿಕೆ, ಸ್ಮರಣೆ, ಪರಿಸರದ ಅರಿವು.**<br>**ಚಟುವಟಿಕೆ...16 ಗುಂಪಿಗೆ ಸೇರದ ವಸ್ತು ಗುರುತಿಸು. (ಗುರಿ 3)**<br>**ಉದ್ದೇಶ:– ಗುಂಪಿಗೆ ಸೇರದ ವಸ್ತುವನ್ನು ಗುರುತಿಸುವುದು.**<br>**ಅಗತ್ಯ ಸಾಮಗ್ರಿಗಳು : ಹಣ್ಣುಗಳು ಮತ್ತು ತರಕಾರಿಗಳ ಮಾದರಿಗಳ ಸೆಟ್, ಪೆನ್ಸಿಲ್ ಮತ್ತು ಪೆನ್ನುಗಳ ಸೆಟ್, ತ್ರಿಭುಜಾಕಾರದ ಆಕೃತಿಗಳ ಕಟೌಟ್ ಸೆಟ್ ಮತ್ತು ಒಂದು ವೃತ್ತ, ಪ್ರಾಣಿಗಳು ಮತ್ತು ಪಕ್ಷಿ ಚಿತ್ರಗಳ ಸೆಟ್ ( ಪ್ರತಿ ಸಾಮಗ್ರಿಗಳು 3 ಸೆಟ್ )**<br>**ವಿಧಾನ : ಪ್ರತಿ ಸೆಟ್‌ನಲ್ಲಿ ಮೂರು ಒಂದೇ ರೀತಿಯ ವಸ್ತುಗಳು ಮತ್ತು ಒಂದು ವಿಭಿನ್ನ ವಸ್ತು ಇರುವಂತೆ ಅನೇಕ ಸೆಟ್‌ಗಳನ್ನು ಸಿದ್ಧಪಡಿಸುವುದು. ಮಕ್ಕಳಿಗೆ ಗುಂಪಿನಲ್ಲಿ ಒಂದೊಂದು ಸೆಟ್ ನೀಡುವುದು. ನೀಡಿದ ನಾಲ್ಕು ವಸ್ತುಗಳನ್ನು ಸೂಕ್ಷ್ಮವಾಗಿ ನೋಡಲು ಹೇಳುವುದು. ವಿಭಿನ್ನವಾದ ಅಥವಾ ಗುಂಪಿಗೆ ಸೇರದ ಒಂದು ವಸ್ತುವನ್ನು ಗುರುತಿಸಿ ಅದಕ್ಕೆ ಕಾರಣ ಕೇಳುವುದು. ಪ್ರತಿ ಗುಂಪಿನ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸಿ ತಮಗೆ ನೀಡಿದ ವಸ್ತುಗಳಲ್ಲಿ ಗುಂಪಿಗೆ ಸೇರದ ವಸ್ತುವನ್ನು ಹೇಗೆ ಆಯ್ಕೆ ಮಾಡಿದರು ಎಂಬುದನ್ನು ವಿವರಿಸಲು ಹೇಳುವುದು.**<br>**ತರಗತಿ–2**<br>**1. ಸಾಮಗ್ರಿಗಳನ್ನು ನೀಡಿ ಗುಂಪಿಗೆ ಸೇರದ ವಸ್ತುಗಳನ್ನು ಗುರುತಿಸಿ ಹೇಳಲು ತಿಳಿಸುವುದು.**<br>**ತರಗತಿ–3**<br>**1 ಗುಂಪಿಗೆ ಸೇರದ ವಸ್ತುಗಳನ್ನು ಗುರುತಿಸುವುದು, ಹೇಳುವುದು ಮತ್ತು ಪಟ್ಟಿ ಮಾಡುವುದು.**<br><br>*** ಬಳಸಬೇಕಾದ ಅಭ್ಯಾಸ ಹಾಳೆಗಳು: I.L-13 ( 01, 02,03ನೇ ತರಗತಿ)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ,<br>ಚಟುವಟಿಕೆ –47 ಬ್ರಶ್ ನಿಂದ ಚಿತ್ರಕಲೆ. ಗುರಿ – 1 |

DRAFT 2022

| | | | |
|---|---|---|---|
| | ಕೌಶಲಗಳು (ಮಕ್ಕಳ ಚಟುವಟಿಕೆ) | | ಉದ್ದೇಶ;<br>• ಬ್ರಶ್ ನ್ನು ಹಿಡಿಯುವ ಮತ್ತು ಬಳಸುವ ವಿಧಾನವನ್ನು ತಿಳಿಯುವರು.<br>• ಕಣ್ಣು ಕೈಗಳ ನಡುವೆ ಸಮನ್ವಯತೆ ಬರುತ್ತದೆ<br>ಸಾಮಗ್ರಿಗಳು ; ಬ್ರಶ್, ಪೇಂಟ, ಈಸಲ್ ಬೋರ್ಡ[ಲಭ್ಯತೆ ಇದ್ದಲ್ಲಿ]<br>ವಿಧಾನ ;ಬಿಳಿಹಾಳೆಯ ಮೇಲೆ ಪೇಂಟ್ ಮತ್ತು ಬ್ರಶ್ ನ್ನು ಹೇಗೆ ಬಳಸಬೇಕೆಂದು ಮಕ್ಕಳಿಗೆ ತೋರಿಸುವುದು. ಮಕ್ಕಳು ತಮ್ಮ ಆಯ್ಕೆಯ ವಿವಿಧ ಚಿತ್ರಗಳನ್ನು ಚಿತ್ರಿಸಲು ಅವಕಾಶ ಮಾಡಿಕೊಡುವುದು. ಆ ಚಿತ್ರಕ್ಕೆ ಬ್ರಶ್‌ನಿಂದ ಬಣ್ಣ ತುಂಬಲು ಹೇಳಿ ಚಿತ್ರವನ್ನು ವಿವರಿಸಲು ತಿಳಿಸುವುದು.<br>ವಿವರ; 2ಮತ್ತು 3 ನೇ ತರಗತಿಗೆ ಪ್ರಕೃತಿಗೆ ಸಂಭಂದಿಸಿದ ಚಿತ್ರ ಬರೆದು ಬ್ರಶ್ ಬಳಸಿ ಬಣ್ಣ ತುಂಬಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ–ಚಿತ್ರ ಓದು<br>**ಚಟುವಟಿಕೆ–17 ಈ ಮುಖ ಏನನ್ನು ಹೇಳುತ್ತಿದೆ? (ಗುರಿ 2) ECL-9**<br>ಉದ್ದೇಶ :<br>* ಹೇಳಿದ ಪದಕ್ಕೆ ಸೂಕ್ತ ಭಾವನೆಗಳನ್ನು ಮುಖದಲ್ಲಿ ಪ್ರದರ್ಶಿಸುವುದು.<br>* ಆಂಗಿಕ ಅಭಿನಯದ ಮೂಲಕ ವಿವಿಧ ಭಾವನೆಗಳನ್ನು ಮುಖದಲ್ಲಿ ಅಭಿವ್ಯಕ್ತಿಸುವುದು.<br>ಅಗತ್ಯ ಸಾಮಾಗ್ರಿಗಳು–ಕಥಾ ಪುಸ್ತಕಗಳು/ಚಿತ್ರ ಪುಸ್ತಕಗಳು<br>ವಿಧಾನ: ವಿವಿಧ ಭಾವನೆಗಳನ್ನು ವ್ಯಕ್ತಪಡಿಸುತ್ತಿರುವ ಚಿತ್ರಗಳನ್ನು ಹೊಂದಿರುವ ಕಥಾ ಪುಸ್ತಕವನ್ನು ಆಯ್ಕೆಮಾಡಿಕೊಳ್ಳಿ. ಮಕ್ಕಳಿಗೆ ಚಿತ್ರವನ್ನು ತೋರಿಸುತ್ತಾ ಚಿತ್ರದಲ್ಲಿರುವ ವ್ಯಕ್ತಿಗಳು ಯಾವ ಭಾವನೆಯನ್ನು ವ್ಯಕ್ತಪಡಿಸುತ್ತಿರುವ ರು ಎಂಬುದನ್ನು ಗುರುತಿಸಲು ತಿಳಿಸಿ. ಉದಾಹರಣೆಗಾಗಿ–ಚಿತ್ರದಲ್ಲಿರುವ ಹುಡುಗಿ ಸಂತೋಷ ವಾಗಿದ್ದಾಳೆ. ಚಿತ್ರದಲ್ಲಿರುವ ಹುಡುಗ ದುಃಖಿತ ನಾಗಿದ್ದಾನೆ ಇತ್ಯಾದಿ. ಈ ಭಾವನೆಗಳನ್ನು<br>ಚಿತ್ರರೂಪದಲ್ಲಿ ಬಿಡಿಸಲು ಬೇರೆಬೇರೆ ಭಾವನೆಗಳನ್ನು ಮಕ್ಕಳು ಚಿತ್ರರೂಪದಲ್ಲಿ ಬಿಡಿಸಲು ಸಮರ್ಥ ರಾಗುವ ವರೆಗೂ ಈ ಚಟುವಟಿಕೆಯನ್ನು ಮುಂದುವರಿಸಿ. ನಂತರ ಕಥೆಯನ್ನು ಓದಿ ಹೇಳಿ ಅದರಲ್ಲಿ ಬಂದಿರುವ ವಿವಿಧ ಭಾವನೆಗಳಿಗೆ ಸಂಬಂಧಿಸಿದ ಪದಗಳನ್ನು ಗುರುತಿಸಲು ತಿಳಿಸಿ. ಕೊನೆಯಲ್ಲಿ ಕಥೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಿರಿ.<br>ಉದಾ____ಘಟನೆ ನಡೆದಾಗ__________ರಿಗೆ ಏನನ್ನಿಸಿತು?<br>*ಹೊಸ ಬಟ್ಟೆ ಧರಿಸಿದಾಗ________ಹೇಗೆ ಪ್ರತಿಕ್ರಿಯಿಸಿದಳು ಇತ್ಯಾದಿ.<br>ಮುಂದಿನ ಹಂತದಲ್ಲಿ ಮಕ್ಕಳು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಈ ಪ್ರಶ್ನೆಗಳಿಗೆ ಭಾವಾಭಿನಯದ ಮೂಲಕ ಉತ್ತರಿಸಲು ಹೇಳಿ.<br>ನಂತರದ ಹಂತದಲ್ಲಿ ಮುದ್ರಣದ ಪರಿಕಲ್ಪನೆ ಮೂಡಿಸಲು ಭಾವನೆಗಳ ಚಾರ್ಟನ್ನು ತಯಾರಿಸಲು ಮಾರ್ಗದರ್ಶಿಸಿ.<br>ವಿದ್ಯಾರ್ಥಿಗಳು ವಿವಿಧ ಭಾವನೆಗಳನ್ನು ವ್ಯಕ್ತಪಡಿಸುವ ಮುಖಗಳನ್ನು ಪೇಪರ್‌ನಲ್ಲಿ ಚಿತ್ರಿಸಲು ಅವಕಾಶ ಕಲ್ಪಿಸಿ.<br>ತರಗತಿಯ ವಿವರ: 2 ನೇ ತರಗತಿಯ ವಿದ್ಯಾರ್ಥಿಗಳು ಒಂದಾದ ನಂತರ 2–3 ಭಾವನೆಗಳನ್ನು ಅಭಿವ್ಯಕ್ತಿಸುವುದು. 3 ನೇ ತರಗತಿಯ ವಿದ್ಯಾರ್ಥಿಗಳು ಹೆಚ್ಚು ಮುಖಭಾವನೆಗಳನ್ನು ಅಭಿವ್ಯಕ್ತಿಸುವುದು.<br>**ಅಭ್ಯಾಸದ ಹಾಳೆಗಳು: EC-3 (ತರಗತಿ 1, 2, 3)** |
| | | ಅರ್ಥ ಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ : ಪದ ಗುರುತಿಸುವುದು, ಮುದ್ರಿತ ಪಠ್ಯದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ : 11 ಹೆಸರಿನ ಜಗತ್ತು (ಗುರಿ 2)<br>ಉದ್ದೇಶ: ಪರಿಚಿತ ಸನ್ನಿವೇಶದಲ್ಲಿನ ವಸ್ತುಗಳನ್ನು ಲಿಪಿಸಂಕೇತಗಳೊಂದಿಗೆ ಸಹ ಸಂಬಂಧಿಕರಿಸಿಕೊಳ್ಳುವುದು. ಸಾಹಿತ್ಯ ಮತ್ತು ವಸ್ತು ಒಂದೇ ಇದೆ ಎಂಬ ತೀರ್ಮಾನಕ್ಕೆ ಬಂದು ಓದುವಿಕೆಯಲ್ಲಿ ಆಸಕ್ತಿ ಬೆಳಸಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಚಾರ್ಟ್ ಪೇಪರ್, ಪೆನ್ಸಿಲ್, ಕ್ರೇಯಾನ್ಸ್, ನಮಗೆ ಕಣ್ಣಿಗೆ ಕಾಣುವ ಸುತ್ತಮುತ್ತಲಿನ ಸಾಮಾಗ್ರಿಗಳು<br>ವಿಧಾನ :<br>– ಮಕ್ಕಳ ಸಹಾಯದಿಂದ ತರಗತಿಯಲ್ಲಿರುವ ಸಾಮಾನ್ಯ/ಪರಿಚಿತ ವಸ್ತುಗಳ ಹೆಸರನ್ನು ಪಟ್ಟಿ ಮಾಡುವುದು.<br>ಉದಾ– ಮೇಜು, ಖುರ್ಚಿ, ಬಾಗಿಲು ಇತ್ಯಾದಿ.<br>– ಸಿದ್ಧಪಡಿಸಿದ ನಾಮ ಫಲಕಗಳನ್ನು ಆಯಾ ವಸ್ತುಗಳ ಮೇಲೆ ಅಂಟಿಸುವುದು.<br>– ಇನ್ನೊಂದು ಸೆಟ್ ನಾಮ ಫಲಕಗಳ ಮಿಂಚುಪಟ್ಟಿಗಳನ್ನು ತಯಾರಿಸಿಟ್ಟುಕೊಳ್ಳುವುದು. |

DRAFT 2022

| | | | |
|---|---|---|---|
| | | | – ಪದಗಳ ಮಿಂಚುಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುತ್ತಾ, ಮಕ್ಕಳಿಂದ ಗಟ್ಟಿಯಾಗಿ ಹೇಳಿಸುವುದು.<br>– ಪದ ಉಚ್ಚರಿಸುತ್ತಾ ಆ ವಸ್ತುವಿನ ಬಳಿಗೆ ಮಗು ಹೋಗಲು ತಿಳಿಸುವುದು.<br>– ಮಗು ಕನಿಷ್ಟ ನಾಲ್ಕೈದು ವಸ್ತುಗಳನ್ನಾದರೂ ಹೆಸರಿಸಲು ಅವಕಾಶ ಕಲ್ಪಿಸುವುದು..<br>– ಆ ಪದಗಳನ್ನು ಕಥೆಯಲ್ಲಿ ಗುರುತಿಸಲು ಅವಕಾಶ ಕಲ್ಪಿಸುವುದು.<br>– ಚಿತ್ರ ಸಹಿತ ನಾಮಫಲಕ/ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿ, ಚಟುವಟಿಕೆ ಸ್ಥಳದಲ್ಲಿ/ಸಮಯದಲ್ಲಿ ಮಕ್ಕಳಿಗೆ ಗುರುತಿಸಿ ಓದಲು (ಚಿತ್ರಗಳ ಸಹಾಯದಿಂದ) ಅವಕಾಶ ಕಲ್ಪಿಸುವುದು.<br>2ಮತ್ತು 3ನೇ ತರಗತಿ: ಕಥೆ/ಪಧ್ಯದಲ್ಲಿ ಬಂದಿರುವ ಮುಖ್ಯಪದಗಳ ಮಿಂಚುಪಟ್ಟಿ ತಯಾರಿಸಿಕೊಳ್ಳುವುದು<br>ಮಕ್ಕಳಿಗೆ ಶಿಕ್ಷಕರು ಕಥೆ/ಪಧ್ಯವನ್ನು ನೀಡಿ ಓದಲು ಅವಕಾಶ ಕಲ್ಪಿಸುವುದು.ನಂತರ ಮಿಂಚುಪಟ್ಟಿಯಲ್ಲಿರುವ ಪದಗಳನ್ನು ಕತೆಯಲ್ಲಿ ಹುಡುಕಲು ಸೂಚಿಸುವುದು.<br>ಗಮನಿಸಿ ; ಈ ಹಿಂದೆ ಈ ಚಟುವಟಿಕೆಗಳಲ್ಲಿ ಬಳಸಿದ ಪದಗಳನ್ನು ಹೊರತುಪಡಿಸಿ ಬೇರೆ ಬೇರೆ ಸ್ಥಳ, ಸನ್ನಿವೇಶದಲ್ಲಿ ಬರುವ ಪದಗಳನ್ನು<br>ಬಳಸಿ ಚಟುವಟಿಕೆಯನ್ನು ನಿರ್ವಹಿಸುವುದು.<br><br> |
| | | ಉದ್ದೇಶಿತ ಬರಹ | ಸಾಮರ್ಥ್ಯ: ಸೂಕ್ಷ್ಮ ಸ್ನಾಯು ಕೌಶಲಗಳ ಅಭಿವೃದ್ಧಿ, ಉದ್ದೇಶಿತ ಬರವಣಿಗೆ<br>ಚಟುವಟಿಕೆ: 37 ಚಿತ್ರಿಸುವುದು ಮತ್ತು ಹೆಸರಿಸುವುದು. (ಗುರಿ–2) **ECW-3**<br>ಉದ್ದೇಶಗಳು:<br>• ಸೂಕ್ಷ್ಮ ಸ್ನಾಯು ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಉದ್ದೇಶಿತ ಬರವಣಿಗೆಗೆ ಅಣಿಗೊಳಿಸುವುದು.<br>• ಆಯ್ಕೆಯ ಚಿತ್ರ ಬಿಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ , ಕ್ರೇಯಾನ್ಸ್, ಪೆನ್ಸಿಲ್<br>ವಿಧಾನ : ಮಕ್ಕಳು ತಮ್ಮ ಆಯ್ಕೆಯ ಹೂವು ಹಣ್ಣುಗಳ ಚಿತ್ರ ಬಿಡಿಸುವುದು.ಬರೆದ ಚಿತ್ರಕ್ಕೆ ಬಣ್ಣ ತುಂಬಿ ಹೆಸರಿಸಲು ತಿಳಿಸುವುದು<br>ತರಗತಿವಾರು ವಿವರ: 2 ಮತ್ತು 3ನೇ ತರಗತಿಯ ಮಕ್ಕಳು ತಮ್ಮ ಆಯ್ಕೆಯ ಹೂವು ಹಣ್ಣುಗಳ ಚಿತ್ರವನ್ನು ರಚಿಸಿ, ಹೆಸರಿಸಲು ತಿಳಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | **ಹೊರಾಂಗಣ ಆಟಗಳು** | Day 15:<br>ಚಟುವಟಿಕೆ: ಕುಂಟೆಬಿಲ್ಲೆ<br>ಸಾಮರ್ಥ್ಯ : ದೇಹದ ಸಮತೋಲನ ಬೆಳೆಸಲು.<br>ಸಾಮಗ್ರಿ : ಬಿಲ್ಲೆ , ಬಳಪ<br>ವಿಧಾನ : ನೆಲದಮೇಲೆ ಬಳಪದ ಸಹಾಯದಿಂದ ಆಟಕ್ಕೆ ಬೇಕಾದ ಚೌಕಗಳನ್ನು ಎಳೆಯುವುದು .<br>ಮಕ್ಕಳು ಚೌಕದ ಗೆರೆಯ ತುಳಿಯದಂತೆ ಬಿಲ್ಲೆಯನ್ನು ಕಾಲಿನಿಂದ ಚೌಕದಿಂದ ಚೌಕಕ್ಕೆ ದೂಡುತ್ತಾ ಆಟ ಆಡಲು ಸೂಚಿಸುವುದು.<br>**ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೂ ಈ ಆಟವನ್ನೇ ಮುಂದುವರೆಸಿ ಆಡಿಸುವುದು.** | |
| | **ಕಥಾ ಸಮಯ** | **ಶೀರ್ಷಿಕೆ :** ಸೋನಿ & ಟೊಮೆಟೋಸ್<br>**ಸಾಮಗ್ರಿಗಳು :** ಸಾಹಿತ್ಯ, ಚಿತ್ರಗಳು | |

| | | |
|---|---|---|
| | | **ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ **ಪದಸಂಪತ್ತನ್ನು ಹೆಚ್ಚಿಸುವುದು.**<br>**ವಿಧಾನ :**<br>➢ **ಸಾಹಿತ್ಯದಲ್ಲಿನ ಚಿತ್ರಗಳನ್ನು ಮಕ್ಕಳಿಗೆ ಪ್ರದರ್ಶಿಸಿ ಕಥೆಯ ಪಾತ್ರಗಳನ್ನು/ವಸ್ತುಗಳನ್ನು ಹೆಸರಿಸಲು ಸರಳ ಪ್ರಶ್ನೆಗಳನ್ನು ಕೇಳುತ್ತಾ ಕಥೆಯನ್ನು ಪುನಃ ಹೇಳುವುದು.**<br>➢ **ಕಥೆಯ ವಾಕ್ಯಗಳನ್ನು ಓದುವಾಗ ಕಥೆಯ ನಡುವೆ ಬರುವ ಸೋನಿ, ಟೊಮೆಟೋ ಇತ್ಯಾದಿ ಚಿತ್ರಗಳನ್ನು ಮಕ್ಕಳು ಹೆಸರಿಸುವಂತೆ ಪ್ರಶ್ನೆಗಳನ್ನು ಕೇಳುತ್ತ ಕಥೆಯನ್ನು ನಿರೂಪಿಸುವುದು.**<br>(ಕಥೆಯನ್ನು ಆನಂದಿಸುವುದರ ಜೊತೆಗೆ ಆಲಿಸುತ್ತಿದ್ದಾರೆ ಎನ್ನುವುದನ್ನು ಖಚಿತಪಡಿಸಿ ಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–3** **ದಿನ–16 (ಗುರುವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 16 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1**<br>ಪ್ರತಿ ಮಗುವನ್ನು ಅವನ/ ಅವಳ ಹೆಸರಿನಿಂದ ಕರೆದು **"Good morning, welcome " "Have a thrilling Thursday"** ಎಂದು ಹೇಳುವ ಮೂಲಕ ಮಕ್ಕಳನ್ನು ಸ್ವಾಗತಿಸಿ. ಅವರು **"Good morning, Thank you. Same to you"**ಎಂದು ಉತ್ತರಿಸಲಿ.<br>**ಚಟುವಟಿಕೆ 2**<br>ದಿನ–14 ರಲ್ಲಿ ಉಲ್ಲೇಖಿಸಲಾದ ಶುಭಾಶಯ ವಿನಿಮಯ ಚಟುವಟಿಕೆ ಪುನರಾವರ್ತಿಸಿ |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ಚಟುವಟಿಕೆ : ಮೋಜು ಮಾಡೋಣ<br>ಸಾಮಗ್ರಿಗಳು: ಸೀಮೆಸುಣ್ಣ / ಕೋಲು<br>ಕಾರ್ಯವಿಧಾನ:<br>1. ಮಕ್ಕಳನ್ನು ಶಾಲಾ ಮೈದಾನಕ್ಕೆ ಕರೆದೊಯ್ದು ವೃತ್ತಾಕಾರದಲ್ಲಿ ನಿಲ್ಲಿಸಿ.<br>2. ಪ್ರತಿ ಮಗುವಿಗೆ ಕೋಲು/ಚಾಕ್ ನೀಡಿ ಮತ್ತು ಅವರು ಕುಳಿತು ತಮ್ಮ ಕೈ/ ಪಾದಗಳನ್ನು ಕೋಲು/ಚಾಕ್ ನಿಂದ ರಚಿಸಲು ಮಾರ್ಗದರ್ಶನ ಮಾಡಿ.<br>4. ಅವರ ಕಾಲುಗಳು/ಕಾಲ್ಬೆರಳುಗಳು ಮತ್ತು ಕೈಗಳನ್ನು ಇತರರ ಕಾಲುಗಳು ಮತ್ತು ಕೈಗಳೊಂದಿಗೆ ಹೋಲಿಸಲು ಅವರಿಗೆ ತಿಳಿಸಿ ಮತ್ತು ಅದನ್ನು ಚಿತ್ರದ ನಂತರ ಅವರು ಗಾತ್ರ, ಆಕಾರ ಮತ್ತು ಹೇಗೆ ಭಾವಿಸುತ್ತಾರೆ ಎಂಬುದರ ಬಗ್ಗೆ ಮಾತನಾಡಲು ಬಿಡಿ.<br>ಚಟುವಟಿಕೆ: ರೈಮ್<br>• Head, shoulders, knees and toes ರೈಮ್ ಅನ್ನು ಈ ಕೆಳಕಂಡ ರೀತಿಯಲ್ಲಿ ಹಾಡಿಸಿ<br>• |

DRAFT 2022

| | | |
|---|---|---|
| | | Teacher: Head, shoulders,<br>Students: knees and toes<br>Teacher:Knees and toes,<br>Students: Knees and toes,<br>Teacher: Head, shoulders,<br>Students: knees and toes<br>Teacher: It's my body.<br>Students: It's my body.<br>Teacher: Eyes and ears and<br>Students: mouth and nose<br>Teacher: Mouth and nose,<br>Students: Mouth and nose,<br>Teacher: Eyes and ears and<br>Students: mouth and nose<br>Teacher: Eyes and ears and<br>Students: mouth and nose<br>Teacher: It's my body.<br>Students: It's my body. |
| | **ನನ್ನ ಸಮಯ(Free Indore play)**<br>('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು) | ದಿನ – 16<br>ಮಕ್ಕಳು ತಾವು ನಿರ್ವಹಿಸಲಿಚ್ಛಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ : ಬಣ್ಣ ಮತ್ತು ಆಕಾರಗಳ ಆಧಾರದ ಮೇಲೆ ವಿಂಗಡಣೆ ಮತ್ತು ಪರಿಸರದ ಅರಿವು**<br>**ಚಟುವಟಿಕೆ...31 ವಿಂಗಡಿಸುವುದು (ಗುರಿ 3)**<br>**ಉದ್ದೇಶ:– ಗುಣಲಕ್ಷಣಗಳ ಆಧಾರವಾಗಿ ವಿಂಗಡಿಸುವುದು.**<br>**ಅಗತ್ಯ ಸಾಮಗ್ರಿಗಳು : ಮಣ್ಣಿನ ಚೆಂಡುಗಳಂತಹ ವಸ್ತುಗಳು, ಬೆಣಚು ಕಲ್ಲುಗಳು, ಗುಂಡಿಗಳು, ಬೀಜಗಳು, ಉಂಗುರಗಳು**<br>**ವಿಧಾನ : ವಿವಿಧ ಬಣ್ಣ ಮತ್ತು ಆಕಾರಗಳುಳ್ಳ ವಸ್ತುಗಳನ್ನು ನೆಲದ ಮೇಲೆ ಹರಡಿ ಒಂದೇ ಬಣ್ಣ ಅಥವಾ ಆಕಾರದ ವಸ್ತುಗಳನ್ನು ವಿಂಗಡಿಸಿ ಪ್ರತ್ಯೇಕ ಗುಂಪು ಮಾಡಿಸುವುದು. ಒದಗಿಸಿದ ವಸ್ತುಗಳನ್ನು ಹೋಲಿಸಿ ಸಾಮ್ಯತೆ ಮತ್ತು ವ್ಯತ್ಯಾಸ ಗುರುತಿಸಲು ಸೂಚಿಸುವುದು. ಸಾಮ್ಯತೆ ಮತ್ತು ವ್ಯತ್ಯಾಸವನ್ನು ಯಾವ ಆಧಾರದ ಮೇಲೆ ಗುರುತಿಸಿದರು ಎಂಬುದನ್ನು ವಿವರಿಸಲು ಹೇಳುವುದು.**<br>**ತರಗತಿ–2**<br>**1. ಹಲವು ಬಣ್ಣ ಮತ್ತು ಆಕಾರದ ವಸ್ತುಗಳನ್ನು ವಿಂಗಡಿಸಿ ಗುಂಪು ಮಾಡಲು ಹೇಳುವುದು.**<br>**ತರಗತಿ–3**<br>**1 ಬಣ್ಣ ಮತ್ತು ಆಕಾರದ ವಸ್ತುಗಳನ್ನು ವಿಂಗಡಿಸಿ ಗುಂಪು ಮಾಡಿಸಿ ಹೇಳಿಸುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.<br>ಚಟುವಟಿಕೆ –34 ಆಕೃತಿಗಳನ್ನು ಅಂಟಿಸು. ಗುರಿ – 1<br>ಉದ್ದೇಶ;<br>• ವಿವಿಧ ಆಕೃತಿಗಳನ್ನು ಗುರುತಿಸುತ್ತಾರೆ.<br>• ಕತ್ತರಿಯನ್ನುಹಿಡಿದುಹಾಳೆಯನ್ನುಕತ್ತರಿಸಿಅಂಟಿಸುವವಿಧಾನವನ್ನು ತಿಳಿಯುತ್ತಾರೆ. |

DRAFT 22.02.22

| | | | |
|---|---|---|---|
| | | | • ಕೈ ಮತ್ತು ಬೆರಳುಗಳ ಕುಶಲತೆ ಹೆಚ್ಚುವುದರ ಜೊತೆಗೆ ಏಕಾಗ್ರತೆಬೆಳೆಸಿಕೊಳ್ಳುತ್ತಾರೆ.<br><br>ಸಾಮಗ್ರಿಗಳು ;ಬಣ್ಣದ ಹಾಳೆಗಳು, ಕತ್ತರಿ ಮತ್ತು ಅಂಟು.<br>ವಿಧಾನ ; ಬಿಳಿ ಪೇಪರಿನಲ್ಲಿ ವಿವಿಧ ಆಕೃತಿಗಳ[ ವೃತ್ತ, ತ್ರಿಭುಜ,ಚೌಕ ಮತ್ತು ಆಯತ] ಚಿತ್ರಗಳನ್ನು ಕತ್ತರಿಸಿ ಇನ್ನೊಂದು ಬಣ್ಣದ ಹಾಳೆಯ ಮೇಲೆ ಅಂಟಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ಇದೇ ಆಕೃತಿಗಳನ್ನು ಬಳಸಿ ವಿವಿಧ ಚಿತ್ರ ವಿನ್ಯಾಸ ರಚಿಸಿ ಬೇರೆ ಹಾಳೆಯಲ್ಲಿ ಅಂಟಿಸಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ,–ಪದ ಸಂಯೋಜನೆ<br>**ಚಟುವಟಿಕೆ 10 ಪದರಚನೆ (ಗುಂಪು–2) ECL-10**<br>ಉದ್ದೇಶ:<br>* ಪದ ರಚನಾ ಸಾಮರ್ಥ್ಯವನ್ನು ಹೆಚ್ಚಿಸುವುದು.<br>* ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದು.<br>ಸಾಮಗ್ರಿ–ಇಲ್ಲ<br>ಸಾಧನ–ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ ಸ್ಪಷ್ಟವಾದ ಸೂಚನೆಗಳನ್ನು ನೀಡಿ ಚಟುವಟಿಕೆಯನ್ನು ಆರಂಭಿಸಿ.<br>* ನಾನು ಹೇಳುವ ಅಕ್ಷರಗಳನ್ನು ಆಲಿಸಿ.<br>* ಅಕ್ಷರಗಳನ್ನು ಸೇರಿಸಿ ಪದ ರಚಿಸಿ ಹೇಳಿ.<br>ಉದಾಹರಣೆ–ಶಿಕ್ಷಕರು ಜೋರಾಗಿ ಸ(ವಿರಾಮ) ರ ಎಂದು ಉಚ್ಚರಿಸಿದಾಗ ಮಕ್ಕಳು ಅಕ್ಷರಗಳನ್ನು ಆಲಿಸಿ ಸರ ಎಂದು ಪದ ರಚಿಸಿ ಹೇಳಲಿ.<br>ಈ ಚಟುವಟಿಕೆಯಲ್ಲಿ ಶಿಕ್ಷಕರು ಹಂತ ಹಂತವಾಗಿ ಮೂರಕ್ಷರ ಹಾಗೂ ನಾಲ್ಕಕ್ಷರದ ಪದಗಳನ್ನು ಬಳಸಬಹುದಾಗಿದೆ.<br>ತರಗತಿಯ ವಿವರ : 2 ನೇ ತರಗತಿಯ ಮಕ್ಕಳು ಒಂದು ಅಕ್ಷರಕ್ಕೆ ಸಂಬಂಧಿಸಿದಂತೆ 2–3 ಪದಗಳನ್ನು ಹೇಳುವುದು. 3 ನೇ ತರಗತಿಯ ಮಕ್ಕಳು ಎರಡನೇ ತರಗತಿಯ ಮಕ್ಕಳು ಹೇಳಿದ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸುವುದು.<br>**ಅಭ್ಯಾಸದ ಹಾಳೆಗಳು: EC-4 (ತರಗತಿ 1, 2, 3)** |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಪದ ಸಂಪತ್ತು ಅಭಿವೃದ್ಧಿ, ಸ್ವಯಂ ಅಭಿವ್ಯಕ್ತಿ, ನಟನಾ ಓದು<br>ಚಟುವಟಿಕೆ: 1ಎ ಊಹಾತ್ಮಕ ಓದು (ಗುರಿ–2)<br>ಉದ್ದೇಶ : ಊಹಿಸಿ ಅರ್ಥೈಸಿಕೊಳ್ಳುವರು ಚಿತ್ರಗಳೊಂದಿಗೆ ಪಠ್ಯವನ್ನು ಸಂಬಂಧಿಕರಿಸುವರು.<br>ಅಗತ್ಯ ಸಾಮಗ್ರಿಗಳು: ಸಚಿತ್ರ ಕೋಶ,<br>ವಿಧಾನ: ಮಕ್ಕಳು ಚಿತ್ರಗಳನ್ನೊಳಗೊಂಡ ಪುಸ್ತಕಗಳನ್ನ ನೋಡಿ ಸ್ವತಃ ಊಹೆ ಮಾಡಿ ಓದುವುದು.<br>2 ಮತ್ತು 3ನೇ ತರಗತಿ : ಮಕ್ಕಳಿಗೆ ತಮಗಿಷ್ಟದ ಕಥೆಯನ್ನು ಹೇಳಲು ಮತ್ತು ಚಿತ್ರಗಳನ್ನು ಬರೆದು ಓದಲು ಅವಕಾಶ ಮಾಡಿಕೊಡುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ : ಮಕ್ಕಳೊಂದಿಗೆ ಬರವಣಿಗೆ, ಉದ್ದೇಶಿತ ಬರವಣಿಗೆ, ಅವಧಾನ ಮತ್ತು ಆಲಿಸುವುದು, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ ಸಂಖ್ಯೆ : 32 ಹಂಚಿತ ಬರೆಹ (ಗುರಿ : 2) **ECW-8**<br>ಉದ್ದೇಶಗಳು:<br>• ಹಂಚಿತ ಬರವಣಿಗೆಯನ್ನು ಪರಿಚಯಿಸುವುದು.<br>• ಉದ್ದೇಶಕ್ಕನುಸಾರವಾಗಿ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿಸುವುದು.<br>• ಅವಧಾನದೊಂದಿಗೆ ಉದ್ದೇಶಿತ ಬರೆಹದಲ್ಲಿ ತೊಡಗಿಸುವುದು.<br>• ಸೃಜನಾತ್ಮಕವಾಗಿ ಚಿಂತಿಸಿ ಅವುಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವುದು.<br>• ಪದ ಸಂಪತ್ತನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು: ಕಪ್ಪುಹಲಗೆ ಡ್ರಾಯಿಂಗ್ ಶೀಟ್ |

DRAFT 21.02.22

| | | |
|---|---|---|
| | | ವಿಧಾನ: ಹಂಚಿತ ಬರೆಹ ಚಟುವಟಿಕೆಗಳನ್ನು ತಿಂಗಳಿಗೆ ಎರಡು ಅಥವಾ ಮೂರು ಬಾರಿ ಆಯೋಜಿಸುವುದು. ಒಂದು ವಿಷಯವನ್ನು ನೀಡಿ ಆ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಕಥೆಯ ಮೂಲಕ ಅಥವಾ ಬರವಣಿಗೆ ಮೂಲಕ ಹಂಚಿಕೊಳ್ಳಲು ತಿಳಿಸುವುದು.<br>ಸಲಹಾತ್ಮಕ ಸೂಚಿತ ವಿಷಯ:– ನನ್ನ ಶಾಲೆ<br>ಗಮನಿಸಬೇಕಾದ ಅಂಶಗಳು:<br>• ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಾಕ್ಯಗಳನ್ನು ರಚಿಸಲು ಅಗತ್ಯ ಸುಳಿವುಗಳನ್ನು ನೀಡುವುದು. ಮಕ್ಕಳೊಂದಿಗೆ ಬರವಣಿಗೆಯಲ್ಲಿ ತೊಡಗಿಕೊಳ್ಳುವ ಮೂಲಕ ಬರವಣಿಗೆಯ ಪ್ರಾತ್ಯಕ್ಷಿಕೆ ನೀಡುವುದು<br>• ಶಿಕ್ಷಕರು ಮೊದಲನೇ ವಾಕ್ಯವನ್ನು ಬರೆದು ಓದುವುದು. ನಂತರ ಮಕ್ಕಳು ತಮ್ಮ ಸ್ವಂತ ವಾಕ್ಯವನ್ನು ಹೇಳಿ ಬರೆಯಲು ತಿಳಿಸುವುದು.<br>• ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಪ್ರತಿಕ್ರಿಯಿಸಲು ಅವಕಾಶ ಕಲ್ಪಿಸಬಹುದು. ಅಂತಹ ಸನ್ನಿವೇಶದಲ್ಲಿ ಶಿಕ್ಷಕರು ಅದನ್ನು ಶಾಲಾ ಭಾಷೆಯಲ್ಲಿ ಅನುವಾದಿಸಿ ಹೇಳುವುದು.<br>ತರಗತಿವಾರು ವಿವರ: 1ನೇ ತರಗತಿಯವರು ವಿವರಿಸಿದ ಅಂಶಗಳನ್ನು 2ನೇ ಹಾಗೂ 3ನೇ ತರಗತಿಯ ಮಕ್ಕಳು ಬರವಣಿಗೆ ಮೂಲಕ ಅಭಿವ್ಯಕ್ತಿಪಡಿಸಲು ತಿಳಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| | ಹೊರಾಂಗಣ ಆಟಗಳು | ಚಟುವಟಿಕೆ : ವಿಗ್ರಹದಂತೆ ನಿಲ್ಲು<br>ಸಾಮರ್ಥ್ಯ : ಏಕಾಗ್ರತೆ ಬೆಳೆಸುವುದು , ಸೂಚನೆ ಪಾಲನೆ , ಕಾಲುಗಳ ಚಲನೆ<br>ವಿಧಾನ: ಶಿಕ್ಷಕರು Fire in the mountain Run Run Run . ಎಂದಾಗ ಮಕ್ಕಳು ಓಡುತ್ತಿರಬೇಕು. ಮಧ್ಯದಲ್ಲೇ ಶಿಕ್ಷಕರು statue ಎಂದು ಹೇಳಿದಾಗ ಮಕ್ಕಳು ಓಡುವುದನ್ನು ನಿಲ್ಲಿಸಿ ವಿಗ್ರಹದಂತೆ ನಿಲ್ಲಬೇಕು. ಚಲನೆಯಲ್ಲಿ ಇರುವ ಮಕ್ಕಳು ಆಟದಿಂದ ಹೊರಗುಳಿಯುವರು.<br>**ಎರಡನೇ ಮಾತು ಮೂರನೇ ತರಗತಿಯ ಮಕ್ಕಳಿಗೆ ವಿವಿಧ ಯೋಗದ ಭಂಗಿಗಳಲ್ಲಿ ನಿಲ್ಲಲು ಸೂಚಿಸುವುದು.** |
| | ಕಥಾ ಸಮಯ | **ಶೀರ್ಷಿಕೆ :** ಸೋನಿ & ಟೊಮೆಟೋಸ್<br>**ಸಾಮಗ್ರಿಗಳು :** ಮುಖವಾಡಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಪದಸಂಪತ್ತನ್ನು ಹೆಚ್ಚಿಸುವುದು.<br>➢ ಕುತೂಹಲ ಪ್ರವೃತ್ತಿಯನ್ನು ಹೆಚ್ಚಿಸುವುದು<br>**ವಿಧಾನ :**<br>➢ ಕಥೆಯನ್ನು ಕನ್ನಡ ಮತ್ತು ಇಂಗ್ಲೀಷ ಭಾಷೆಯಲ್ಲಿ ಹೇಳುವುದು.<br>➢ ಪಾತ್ರಗಳಿಗೆ ತಕ್ಕಂತೆ ಸಿದ್ಧಪಡಿಸಿದ ಎಮುಖವಾಡಗಳನ್ನು ಧರಿಸಿ ಹೇಳುವುದು.<br>➢ ಹಿರಿಯ ವಿದ್ಯಾರ್ಥಿಗಳನ್ನು ಬಳಸಿಕೊಂಡು ಪಾತ್ರಗಳನ್ನು ಹಂಚಿಅಭಿನಯಿಸಲು ಸಹಕರಿಸಿ.<br>➢ ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು.<br>**ಕಥೆಯನ್ನು ಹೇಳಿದ ನಂತರ ಪ್ರಶ್ನೆಗಳನ್ನು ಕೇಳಿ.**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. "ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

DRAFT 22.02.22

# ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

## ವಾರ–3 ದಿನ–17 (ಶುಕ್ರವಾರ)

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 17 | **ಶುಭಾಶಯ ವಿನಿಮಯ**<br>*(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1**<br>ಪ್ರತಿ ಮಗುವನ್ನು ಅವನ/ ಅವಳ ಹೆಸರಿನಿಂದ ಕರೆದು **"Good morning, welcome " "Have a Funfilled Friday"** ಎಂದು ಹೇಳುವ ಮೂಲಕ ಮಕ್ಕಳನ್ನು ಸ್ವಾಗತಿಸಿ. ಅವರು **"Good morning, Thank you. Same to you"**ಎಂದು ಉತ್ತರಿಸಲಿ.<br>**ಚಟುವಟಿಕೆ 2**<br>ದಿನ–14 ರಲ್ಲಿ ಉಲ್ಲೇಖಿಸಲಾದ ಶುಭಾಶಯ ವಿನಿಮಯ ಚಟುವಟಿಕೆ ಪುನರಾವರ್ತಿಸಿ |
| | **ಮಾತು ಕತೆ**<br>***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ಚಟುವಟಿಕೆ : ವ್ಯತ್ಯಾಸವನ್ನು ಪತ್ತೆ ಹಚ್ಚಿ.<br>ಅಗತ್ಯವಿರುವ ಸಾಮಗ್ರಿಗಳು: ಮ್ಯೂಸಿಕ್ ಪ್ಲೇಯರ್ ಅಥವಾ ಮೊಬೈಲ್, ವಿವಿಧ ಪ್ರಾಣಿಗಳ ಫ್ಲ್ಯಾಶ್ ಕಾರ್ಡ್ ಗಳು<br>ಕಾರ್ಯವಿಧಾನ: 1. ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ.<br>2. ಅವರ ನೆಚ್ಚಿನ ಪ್ರಾಣಿಯ ಕುರಿತಾಗಿ ಮಾತನಾಡಲು ಪ್ರೋತ್ಸಾಹಿಸಿ.( ಸಾಕು ಪ್ರಾಣಿ ಅಥವಾ ಕಾಡು ಪ್ರಾಣಿ ) ಮಾದರಿಯಾಗಿ ಶಿಕ್ಷಕರೇ ಮೊದಲು ಪ್ರಾರಂಭಿಸಬಹುದು.<br>3. ಮಾತನಾಡಲು ಪ್ರತಿಯೊಬ್ಬರಿಗೂ ಅವಕಾಶ ಸಿಗುವುದನ್ನು ಖಚಿತಪಡಿಸಿಕೊಳ್ಳಿ.<br>4. 2 ಮತ್ತು 3 ನೇ ತರಗತಿಯ ಮಕ್ಕಳು ಅವರ ನೆಚ್ಚಿನ ಪ್ರಾಣಿ ಹೇಗೆ ವಿಶೇಷವಾಗಿದೆ ಎಂಬುದರ ಕುರಿತು ಮಾತನಾಡಲಿ.<br>(ಸೂಚನೆ: ಶಿಕ್ಷಕರು ತಮ್ಮದೇ ಆದ ಪ್ರಶ್ನೆಗಳನ್ನು ಸೇರಿಸಬಹುದು ಮತ್ತು ಮಕ್ಕಳು ತಮ್ಮ ಸ್ಥಳೀಯ ಭಾಷೆಯಲ್ಲಿಯೂ ಮಾತನಾಡಲು ಪ್ರೋತ್ಸಾಹಿಸಬಹುದು)<br>• Head, shoulders, knees and toes ರೈಮ್ ಅನ್ನು ಅಭಿನಯದೊಂದಿಗೆ ಮಕ್ಕಳಿಂದ ಹಾಡಿಸಿ. |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ ) ಚಟುವಟಿಕೆ)** | **ಸಾಮರ್ಥ್ಯ: ಶಬ್ದದ ಅರಿವು, ಸ್ಮರಣೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ...2 ಆಲಿಸಿ ಹೇಳು (ಗುರಿ 3)**<br>**ಉದ್ದೇಶಗಳು:– ಶಬ್ಧವನ್ನು ಆಲಿಸಿ ಗುರುತಿಸುವುದು.**<br>**ಅಗತ್ಯ ಸಾಮಗ್ರಿಗಳು : ಶ್ರವಣ ಉಪಕರಣ**<br>**ವಿಧಾನ : ಮಕ್ಕಳನ್ನು ವಿವಿಧ ಗುಂಪುಗಳಲ್ಲಿ ಕುಳಿತುಕೊಳ್ಳಲು ಹೇಳುವುದು. ಪ್ರತಿ ಗುಂಪಿನ ಮಕ್ಕಳು ಶ್ರವಣ ಉಪಕರಣದ ಸಹಾಯದಿಂದ ಪ್ರಾಣಿಗಳ ಧ್ವನಿಗಳನ್ನು ಆಲಿಸಿ, ಯಾವ ಪ್ರಾಣಿ ಎಂದು ಗುರುತಿಸುವುದು. ಪ್ರತಿ ಮಗುವಿಗೂ ಅವಕಾಶ ಸಿಗುವವರೆಗೆ ಚಟುವಟಿಕೆ ಮುಂದುವರೆಸುವುದು.**<br>**ತರಗತಿ–2**<br>**1. ಶಿಕ್ಷಕರು ಪ್ರಾಣಿ ಪಕ್ಷಿಗಳ ಧ್ವನಿಯ ಅನುಕರಣೆ ಮಾಡಿ, ಇದು ಯಾವ ಪ್ರಾಣಿ ಪಕ್ಷಿಯ ಕೂಗು ಎಂದು ಗುರುತಿಸಲು ಹೇಳುವುದು.**<br>**2. ಪ್ರಾಣಿ ಮತ್ತು ಪಕ್ಷಿಗಳ ಕೂಗುಗಳನ್ನು ಅನುಕರಿಸಲು ಹೇಳುವುದು.**<br>**ತರಗತಿ–3**<br>**1. ಪ್ರಾಣಿಗಳ ಶಬ್ದವನ್ನು ಆಲಿಸಿ ಪ್ರಾಣಿಗಳ ಹೆಸರುಗಳನ್ನು ಪಟ್ಟಿಮಾಡಿಸುವುದು.** |
| | **ಸೃಜನಶೀಲ ಕಲೆ ಹಾಗೂ** | ಸಾಮರ್ಥ್ಯ : ಸ್ವಯಂ ಮತ್ತು ಇತರರ ಬಗ್ಗೆ ಅರಿವು, ಮೌಖಿಕ ಭಾಷಾ ವಿಕಾಸ, ಪದ ಸಂಪತ್ತಿನ ಅಭಿವೃದ್ಧಿ. |

DRAFT 2022

| | | | |
|---|---|---|---|
| | ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಚಟುವಟಿಕೆ – 03 ಅಭಿನಯ ಗೀತೆಗಳು/ನಾಟಕಗಳು. ಗುರಿ – 1.<br>ರೇಲಾ ರೇಲಾ ರೇಲಾ ರೇಲಾ ರೇಲಾ ರೇಲಾ ರೇಲಾ....<br>ಅಡವಿ ತಾಯಿಗೆ ವಂದನೆ ನಮ್ಮ,<br>ತಾಯಿ ಅಡವಿಗೆ ವಂದನೆ.<br>ಅಡವಿ ಚೆನ್ನಾಗಿದ್ರೆ ಅನ್ನಕ್ಕೆ ಕೊರತೆಯಿಲ್ಲ,<br>ಬೆಳೆಯು ಹಟ್ಟಿಗೆ ಬಂದ್ರೆ ಹಬ್ಬ ಮಾಡೋಣ ಎಲ್ಲ ॥ಪ॥<br>ಉದ್ದೇಶ;<br>• ಶಾರೀರಿಕ ಬೆಳವಣಿಗೆಯ ವಿಕಾಸ ಹೊಂದುತ್ತಾರೆ.<br>• ಪದಸಂಪತ್ತು ಹೆಚ್ಚುವುದರೊಂದಿಗೆ ಪ್ರಾಸ, ಲಯ, ಸಂದರ್ಭ ಹಾಗೂ ಸ್ಪಷ್ಟ ಉಚ್ಚಾರಣೆ ಮಾಡುತ್ತಾರೆ.<br>• ಆಂಗಿಕ ಭಾವನೆಗಳನ್ನು ಗುರ್ತಿಸುತ್ತಾರೆ<br>ಸಾಮಗ್ರಿಗಳು; ಪ್ರಾಸಗೀತೆಗಳ ಪ್ರತಿ.<br>ವಿಧಾನ : ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು. ಸುಗಮಕಾರರು ಮಕ್ಕಳಿಗೆ ಗೊತ್ತಿರುವ ಪ್ರಾಸಗೀತೆಗಳನ್ನು ಹಾಡಲು ಅವಕಾಶ ಕಲ್ಪಿಸುವುದು. ಪ್ರಾಸಗೀತೆಗಳನ್ನು ಆಂಗಿಕ ಚಲನವಲನಗಳಿಂದ ಹಾಡಿಸುವುದು. ಪ್ರಾಸಗೀತೆಗಳಲ್ಲಿನ ಪ್ರಾಸ ಪದಗಳನ್ನು ಆಲಿಸಿ ಆನಂದಿಸಲು ಪ್ರೋತ್ಸಾಹ ನೀಡುವುದು.<br>ವಿವರ; 2ಮತ್ತು 3 ನೇ ತರಗತಿಗೆ ಅಭಿನಯ ಗೀತೆಯನ್ನು ಹಾಡಿಸಿದ ನಂತರ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>*** ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-4 ( 01, 02,03ನೇ ತರಗತಿ)** |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ : ಅವಧಾನ ಮತ್ತು ಆಲಿಸುವಿಕೆ, ಅನುಕ್ರಮ ಚಿಂತನೆ, ಸ್ಥೂಲ ಸ್ನಾಯು ಕೌಶಲಗಳ ಅಭಿವೃದ್ಧಿ.**<br>**ಚಟುವಟಿಕೆ ..19 ಧ್ವನಿ ವ್ಯತ್ಯಾಸಗಳನ್ನು ಗುರುತಿಸುವುದು.(ಗುರಿ–2) ECL-11**<br>**ಉದ್ದೇಶ :**<br>*** ಭಿನ್ನ ಪದಗಳನ್ನು ಆಲಿಸಿ ವ್ಯತ್ಯಾಸ ಗುರುತಿಸುವುದು.**<br>*** ಪದಗಳನ್ನು ಅನುಕ್ರಮವಾಗಿ ಹೇಳುವುದನ್ನು ರೂಢಿಸುವುದು.**<br>*** ಧ್ವನಿಗೆ ಸಂಬಂಧಿಸಿದಂತೆ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳನ್ನು ಅಭಿವೃದ್ಧಿಗೊಳಿಸುವುದು.**<br>**ಅಗತ್ಯ ಸಾಮಾಗ್ರಿಗಳು : ಸೀಮೆ ಸುಣ್ಣ, ಮಾರ್ಕರ್, ಕ್ರೇಯಾನ್ಸ್, ಕ್ರಮಸಂಖ್ಯೆ ಬರೆದಿರುವ ಚಾರ್ಟ್**<br>**ವಿಧಾನ : ಶಿಕ್ಷಕರು ನಾಲ್ಕು ಪದಗಳನ್ನು ಗಟ್ಟಿಯಾಗಿ ಹೇಳುವುದು ಅವುಗಳಲ್ಲಿ ಮೂರು ಪದಗಳು ಒಂದೇ ಆರಂಭಿಕ ಧ್ವನಿಯಿಂದ ಪ್ರಾರಂಭವಾಗಬೇಕು ಒಂದು ಪದ ವಿಭಿನ್ನ ಧ್ವನಿಯಿಂದ ಪ್ರಾರಂಭವಾಗಬೇಕು ಉದಾಹರಣೆ ಪಟ, ಪದಕ, ಚರಕ ಪುಸ್ತಕ ಇವುಗಳಲ್ಲಿ ವಿಭಿನ್ನ ಧ್ವನಿಯ ಪದ ಯಾವುದು? ಎಂದು ಕೇಳಿ ಗುರುತಿಸಲು ಹೇಳುವುದು.**<br>**ತರಗತಿವಾರು ವಿವರ : 2 ನೇ ತರಗತಿಯ ಮಕ್ಕಳಿಗೆ ಒತ್ತಕ್ಷರಗಳುಳ್ಳ ಪದಗಳನ್ನು ನೀಡುವುದು. 3ನೇ ತರಗತಿಯ ಮಕ್ಕಳು ತಾವೇ ಪದಗಳ ಗುಂಪನ್ನು ರಚಿಸಿ ಹೇಳುವುದು.** |
| | | **ಅರ್ಥಗ್ರಹಿಕೆಯೊಂದಿಗಿನ ಓದು** | **ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ....18**<br>**2. ಚಿತ್ರ ಸಂಪುಟ (ಗುರಿ–2) ವಿಷಯ: ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳು /ವಿಷಯಗಳು'**<br>**ಉದ್ಧೇಶ:**<br>**• ಚಿತ್ರ ಓದುವುದು ಮತ್ತು ಚರ್ಚಿಸಿ ಅರ್ಥಮಾಡಿಕೊಳ್ಳುವುದು.**<br>**• ಸಂತೋಷ ಮನೋರಂಜನೆ ಹಾಗೂ ಇತರೆ ಉದ್ದೇಶಗಳಿಗಾಗಿ ಸ್ವತಂತ್ರವಾಗಿ ಓದುವುದು.**<br>**ಅಗತ್ಯ ಸಾಮಗ್ರಿಗಳು : ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳಿಗೆ ಸಂಬಂಧಿಸಿದ ಚಿತ್ರಪಟ, ಇದಕ್ಕೆ ಪೂರಕವಾದ ಕಥನ/ಕವಿತೆ/ಹಾಡುಗಳ ಪಟ್ಟಿ.**<br>**ವಿಧಾನ :ಮಕ್ಕಳಿಗೆ ಪರಿಚಿತವಿರುವ ಹಾಡು ಮತ್ತು ಶಿಶುಗೀತೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಗುರುತಿಸುವುದು.**<br>*** ಹಾಡು/ಕಥೆಯಲ್ಲಿರುವ ವಿಶೇಷ ಪದಗಳನ್ನು ಗುರುತಿಸಿ ಹೆಸರಿಸುವುದು.**<br>*** ಹಾಡು/ಕಥೆಯಲ್ಲಿ ಬರುವ ಮುಖ್ಯ ಪಾತ್ರಗಳನ್ನು ಗುರುತಿಸುವುದು ಮತ್ತು ಪುನರಾವರ್ತಿತ ಪದ/ಸಾಲುಗಳನ್ನು** |

| | | | |
|---|---|---|---|
| | | | ಹೇಳುವುದು/ಬರೆಯುವುದು.<br>* ಮಾದರಿ ಚಿತ್ರಗಳನ್ನು (ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳಿಗೆ ಸಂಬಂಧಿಸಿದ) ಓದುವುದು ಮತ್ತು ಅದರ ಕುರಿತಾಗಿ ಪ್ರತಿಕ್ರಿಯಿಸುತ್ತಾ ಶಿಕ್ಷಕರೊಂದಿಗೆ ಚರ್ಚಿಸುವರು.<br>ವೈಯಕ್ತಿಕ ಚಿತ್ರ ಸಂಪುಟ.– ಕಥೆ ಅಥವಾ ಹಾಡುಗಳಲ್ಲಿ ಬರುವ ವಸ್ತುಗಳು ಅಥವಾ ವಿಶೇಷ ಪದಗಳನ್ನು ಪ್ರತಿ ಮಗು ಸನ್ನಿವೇಶ ಚಿತ್ರಗಳನ್ನು ಓದಿ ಗ್ರಹಿಸಿ ವೈಯಕ್ತಿಕವಾಗಿ ಚರ್ಚಿಸಲು ಅನುವು ಮಾಡಿಕೊಡುವುದು. ಆ ಚಿತ್ರದ ಓದಿನ ಗ್ರಹಿಕೆಗಳನ್ನು ಅಭಿವ್ಯಕ್ತಿಸುತ್ತಾರೆ.<br>ಉದಾ..ಚಂದ್ರ, ನಕ್ಷತ್ರಗಳು, ರಸ್ತೆ ದೀಪಗಳು ಇತ್ಯಾದಿ.. ಚಿತ್ರಗಳು/ವಿಡಿಯೋಗಳು<br>ಶಿಕ್ಷಕರು ಸುಗಮಕಾರಿಕೆಯಲ್ಲಿ ಬಳಸಬಹುದಾದ ಬೆಳವಣಿಗೆಯ ಪ್ರಶ್ನೆಗಳು:<br>• ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳು ಯಾವುವು?<br>• ಅವುಗಳಲ್ಲಿ ನಿನಗೆ ಇಷ್ಟವಾದ ವಸ್ತುಗಳು ಯಾವುವು?<br>ಹೀಗೆ ಶಿಕ್ಷಕರು ಪ್ರಶ್ನಾವಳಿಗಳನ್ನು ರೂಪಿಸಿಕೊಂಡು ತರಗತಿಯನ್ನು ಅನುಕೂಲಿಸುವುದು.<br>ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳ ಚಿತ್ರಗಳನ್ನು/ ಚಿತ್ರಪಟಗಳನ್ನು/ ವಿಡಿಯೋ/ ಹಾಡು/ಕಥೆಗಳನ್ನೂ ಬಳಸಿ ಅಥವಾ ಪ್ರದರ್ಶಿಸಿ ಮಕ್ಕಳೊಂದಿಗೆ ಚರ್ಚಿಸಬಹುದು.<br>ಸದರಿ ಸಂದರ್ಭದಲ್ಲಿ ಶಿಕ್ಷಕರು ಮಕ್ಕಳನ್ನು ಮುಕ್ತವಾಗಿ ಮಾತನಾಡಲು, ಪ್ರಶ್ನೆಗಳನ್ನು ಕೇಳಲು ಹಾಗೂ ತಮ್ಮ ಸಹಜ ಭಾಷೆಯಲ್ಲಿ ಚರ್ಚಿಸಲು ಅವಕಾಶಗಳನ್ನು ಮಾಡಿಕೊಡುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಚರ್ಚಿಸಲು ಸಹಾಯ ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು. ಜೊತೆಗೆ 2ನೇ ಮತ್ತು 3ನೇ ತರಗತಿಯ ಮಕ್ಕಳಿಗೂ ಅವರ ವಯೋಮಾನಕ್ಕನುಗುಣವಾದ ವಿಷಯ ವ್ಯಾಪ್ತಿಯ ಉನ್ನತ ಚಿಂತನೆಗಳು ಚರ್ಚೆಯಲ್ಲಿ ಬರುವಂತೆ ತರಗತಿಯನ್ನು ಅನುಕೂಲಿಸುವುದು.<br>*(ಸದರಿ ಚಟುವಟಿಕೆಯ ಮುಂದುವರೆದ ಭಾಗವು 23ನೇ ದಿನದಲ್ಲಿ ಮುಂದುವರೆಯುವುದು)* |
| | | ಉದ್ದೇಶಿತ ಬರಹ | ಸಾಮರ್ಥ್ಯ : ಬರವಣಿಗೆ ಕೌಶಲಗಳ ಅಭ್ಯಾಸ, ಪದಸಂಪತ್ತಿನ ಅಭಿವೃದ್ಧಿ, ಕೈ ಕಣ್ಣು ಸಂಯೋಜನೆ, ಸೃಜನ ಶೀಲತೆ.<br>ಚಟುವಟಿಕೆ ಸಂಖ್ಯೆ: 34 ಗುರಿ : 2<br>ಚಟುವಟಿಕೆ ಹೆಸರು : ಪುಸ್ತಕ ರಚನೆ **ECW-9**<br>ಉದ್ದೇಶಗಳು:<br>• ಮಕ್ಕಳ ಹಸ್ತಪತ್ರಿಕೆಯನ್ನು ಸಿದ್ಧಪಡಿಸುವುದು.<br>• ಮಕ್ಕಳ ಇಷ್ಟದ ಚಿತ್ರಗಳನ್ನು ಸಂಗ್ರಹಿಸಿ ಪುಸ್ತಕ ತಯಾರಿಸುವುದು.<br>• ಚಿತ್ರಗಳನ್ನು ಬಿಡಿಸುವ ಮತ್ತು ಸಂಗ್ರಹಿಸುವ ಹವ್ಯಾಸ ಬೆಳೆಸುವುದು.<br>ಅಗತ್ಯ ಸಾಮಗ್ರಿಗಳು: ಹಾಳೆಗಳು, ಬಣ್ಣಗಳು, ಚಾರ್ಟ್ ಪೇಪರ್<br>ವಿಧಾನ: ಶಿಕ್ಷಕರು ತರಗತಿ ನೋಟ್‌ಪುಸ್ತಕಗಳನ್ನು ತಯಾರಿಸಲು ಮಕ್ಕಳಿಗೆ ಸಹಾಯ ಮಾಡುವುದು.. ಇದರಲ್ಲಿ ಪ್ರತಿ ಮಗುವು ಒಂದು ಹಾಳೆಯಲ್ಲಿ ಸೂಚಿತ ವಿಷಯದ ಬಗ್ಗೆ ಚಿತ್ರ ಬಿಡಿಸಲು ಅಥವಾ ಬರೆಯಲು ತಿಳಿಸುವುದು. ನಂತರ ಆ ಹಾಳೆಯನ್ನು ತರಗತಿ ನೋಟ್‌ಪುಸ್ತಕಕ್ಕೆ ಸೇರಿಸಲು ನೀಡುವ ಮೂಲಕ ತನ್ನ ಕೊಡುಗೆಯನ್ನು ಸಲ್ಲಿಸಲು ಅವಕಾಶ ಕೊಡುವುದು. ಎಲ್ಲಾ ಮಕ್ಕಳ ಹಾಳೆಯನ್ನು ಸೇರಿಸಿ ತರಗತಿ ನೋಟ್‌ಪುಸ್ತಕವನ್ನು ರಚಿಸುವುದು.<br>ಸಲಹಾತ್ಮಕ ವಿಷಯ: ನನ್ನ ಇಷ್ಟದ ಆಟ<br>ತರಗತಿವಾರು ವಿವರ:<br>2 ಹಾಗೂ 3ನೇ ತರಗತಿಯ ಮಕ್ಕಳು ಪ್ರತ್ಯೇಕವಾಗಿ ತರಗತಿ ನೋಟ್‌ಪುಸ್ತಕವನ್ನು ರಚಿಸುವುದು.(31 ನೇ ದಿನಕ್ಕೆ ಮುಂದುವರಿದಿದೆ) |
| | **ಹೊರಾಂಗಣ ಆಟಗಳು** | | ಚಟುವಟಿಕೆ : ಎಷ್ಟಪ್ಪ ಎಷ್ಟು ನೀವು ಹೇಳಿದಷ್ಟು<br>ಸಾಮರ್ಥ್ಯ : ಸಂಖ್ಯಾ ಜ್ಞಾನ ಬೆಳೆಸುವುದು<br>ಸಾಮಗ್ರಿ:<br>ವಿಧಾನ : ಮಕ್ಕಳನ್ನು ವೃತಾಕಾರದಲ್ಲಿ ನಿಲ್ಲಿಸಿ ಶಿಕ್ಷಕರು ಎಷ್ಟಪ್ಪ ಎಷ್ಟು ಹೇಳಿದಾಗ ಮಕ್ಕಳು ನೀವು ಹೇಳಿದಷ್ಟು ಎಂದು ಉತ್ತರಿಸುವರು ಶಿಕ್ಷಕರು ಹೇಳಿದ ಸಂಖ್ಯೆಗೆ ಅನುಗುಣವಾಗಿ ಮಕ್ಕಳು ಗುಂಪುಗೂಡಬೇಕು ಎಂದು ಸೂಚಿಸುವುದು , ಸಂಖ್ಯೆಗೆ ಅನುಗುಣವಾಗಿರದ ಗುಂಪು ಆಟದಿಂದ ಹೊರಗುಳಿಯುವುದು. |

DRAFT 2022

| | | |
|---|---|---|
| | | **ಎರಡನೇ ತರಗತಿಯ ಮಕ್ಕಳಿಗೆ ಸರಿ ಸಂಖ್ಯೆಗಳನ್ನು ಮತ್ತು ಮೂರನೇ ತರಗತಿ ಮಕ್ಕಳಿಗೆ ಬೆಸ ಸಂಖ್ಯೆಗಳನ್ನು ಹೇಳುತಾ ಆಟವನ್ನು ಆಡಿಸುವುದು.** |
| | **ಕಥಾ ಸಮಯ** | **ಶೀರ್ಷಿಕೆ :** ಸೋನಿ & ಟೊಮೆಟೋಸ್<br>**ಸಾಮಗ್ರಿಗಳು :** ಸಾಹಿತ್ಯ, ಪಾತ್ರಗಳ ಚಿತ್ರಗಳು.<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಕುತೂಹಲ ಪ್ರವೃತ್ತಿಯನ್ನು ಹೆಚ್ಚಿಸುವುದು<br>➢ ಪದಸಂಪತ್ತನ್ನು ಹೆಚ್ಚಿಸುವುದು.<br>➢ **ಅಭಿನಯ ಕೌಶಲವನ್ನು ಬೆಳೆಸುವುದು.**<br>**ವಿಧಾನ :**<br>➢ ಕಥೆಯನ್ನು ಓದಿ ಪುನರಾವಲೋಕನ ಮಾಡಿಕೊಳ್ಳುವುದು.<br>➢ ಕಥೆಯ ಪಾತ್ರಗಳ ಹೆಸರುಗಳನ್ನು ಮಕ್ಕಳಿಂದ ಹೇಳಿಸುತ್ತಾ ನಿರೂಪಿಸುವುದು.<br>➢ ಇದೇ ರೀತಿಯ ಚಿಕ್ಕ ಕಥೆಗಳನ್ನು ಶಿಕ್ಷಕರು ಹೇಳುವುದು. |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>"ನೀನೇ ಮಾಡಿ ನೋಡು" ಚಟುವಟಿಕೆಯನ್ನು ಮಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಿ. |

DRAFT 22.02.22

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–3** **ದಿನ–18 (ಶನಿವಾರ)**

| | | | | |
|---|---|---|---|---|
| | ಪ್ರತಿಬಿಂಬ (ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | | |
| | ನನ್ನ ಸಾಧನೆ | ಗಳಿಸಿದ ಕಲಿಕಾ ಫಲಗಳು | | |
| | ಕಲಿಕಾಫಲಗಳು | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
| | ಶಾಲೆಯ ದಿನಚರಿಗೆ ಹೊಂದಿಕೊಳ್ಳುವರು. | | | |
| | ಸಂತೋಷದಿಂದ ಶಾಲೆಗೆ ಬರುವರು. | | | |
| | ಶಿಕ್ಷಕರಿಗೆ ಮತ್ತು ಸ್ನೇಹಿತರಿಗೆ ಶುಭ ಕೋರುವರು. | | | |
| | ಗುಂಪು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವರು. | | | |
| | ಸರಳ ಸೂಚನೆಗಳನ್ನು ಅನುಸರಿಸುವರು. | | | |
| | ತನ್ನ ಸುತ್ತಮುತ್ತಲಿನ ಪರಿಸರದ ಬಗ್ಗೆ ಕುತೂಹಲ ತೋರಿಸುವರು. | | | |

| | | | | |
|---|---|---|---|---|
| | ಜೇಡಿಮಣ್ಣು/ಹಿಟ್ಟಿನಿಂದ ಮಾದರಿ ತಯಾರಿಸುವುದನ್ನು ಆನಂದಿಸುವರು. | | | |
| | ಒಂದೇ ರೀತಿಯ ವಸ್ತುಗಳನ್ನು ಹೋಲಿಕೆ ಮಾಡುವರು. | | | |
| | ಇಂದ್ರಿಯಗಳ ಸಹಾಯದಿಂದ ವಸ್ತುಗಳನ್ನು ಗುರುತಿಸುವರು. | | | |
| | ಪ್ರಾಸಗೀತೆಗಳನ್ನು ಸಂತಸದಿಂದ ಹಾಡುವರು. | | | |
| | ಶಾಲೆಯ ದಿನಚರಿಗೆ ಹೊಂದಿಕೊಳ್ಳುವರು. | | | |
| | ಸಂತೋಷದಿಂದ ಶಾಲೆಗೆ ಬರುವರು. | | | |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–4** **ದಿನ–19 (ಸೋಮವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 19 | **ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:** ಐಸ್ ಬ್ರೇಕರ್<br>**ಸಾಮಗ್ರಿ:** ಡ್ರಮ್/ಟಾಂಬೂರಿನ್<br>**ವಿಧಾನ:**<br>1. ಮಕ್ಕಳು ಮಕ್ಕಳು ಮುಷ್ಟಿ ಮಾಡಿ ಕೈ ಎತ್ತಿ ಜೈ ಎನ್ನುತ್ತಾ ತರಗತಿಯನ್ನು ಪ್ರವೇಶಿಸಲಿ. "ಹಾಯ್ ಟೀಚರ್" ಎಂದು ಹೇಳಲು ಮಕ್ಕಳಿಗೆ ಸೂಚಿಸಿ.<br>2. ಮಗು ತರಗತಿಯನ್ನು ಪ್ರವೇಶಿಸುವಾಗ ಶಿಕ್ಷಕರು ಮಗುವಿಗೆ “ ನಮಸ್ತೆ, ಗುಡ್ ಮಾರ್ನಿಂಗ್” ಎಂದು ಗ್ರೀಟ್ ಮಾಡುವುದು.<br>3. ನಂತರ ಪ್ರತಿ ಮಗುವಿನ ಹೆಸರನ್ನು ಕರೆಯುತ್ತಾ "ನೀವು ಇಂದು ಹೇಗಿದ್ದೀರಿ?" ಎಂದು ಕೇಳಿ ಮತ್ತು "ನಾನು ಚೆನ್ನಾಗಿದ್ದೇನೆ, ಧನ್ಯವಾದಗಳು" ಎಂದು ಉತ್ತರಿಸಲು ಅವರನ್ನು ಪ್ರೋತ್ಸಾಹಿಸಿ.<br>4. ಮಕ್ಕಳನ್ನು ಕೇಳಿ, "ಇಂದು ಯಾವ ದಿನ?" ಮತ್ತು "ಇಂದು ಸೋಮವಾರ" ಎಂದು ಹೇಳುವ ಮೂಲಕ ಮಕ್ಕಳನ್ನು ಪ್ರತಿಕ್ರಿಯಿಸುವಂತೆ ಮಾಡಿ.<br>5, Left right left ಎಂದು ಹೇಳುತ್ತಾ ಮಾರ್ಚ್‌ಪಾಸ್ ಮಾಡುತ್ತಾ ತರಗತಿಯಲ್ಲಿ ವೃತ್ತವನ್ನು ರಚಿಸಲು ಮಕ್ಕಳಿಗೆ ತಿಳಿಸಿ. ಶಿಕ್ಷಕರು ಅದನ್ನು ಆಸಕ್ತಿದಾಯಕವಾಗಿಸಲು ಡ್ರಮ್‌ಅನ್ನು ಬಳಸಬಹುದು. (ಮಕ್ಕಳ ಮೊಣಕಾಲುಗಳು ಸರಿಯಾಗಿ ಬಾಗುವುದನ್ನು ಖಚಿತಪಡಿಸಿಕೊಳ್ಳಿ, ಮತ್ತು ಅವರ ಪಾದಗಳು ನೆಲವನ್ನು ಸ್ಪರ್ಶಿಸುವುದನ್ನು ಖಚಿತ ಪಡಿಸಿಕೊಳ್ಳಿ.) |
| | **ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | **ಚಟುವಟಿಕೆ–1: ಬಣ್ಣದೊಂದಿಗೆ ಬೆರೆಯೋಣ (ಗುರಿ–1)**<br>**ಸಾಮರ್ಥ್ಯ:** ಸ್ವಯಂ ಪ್ರಜ್ಞೆ, ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಗಳ ಅಭಿವೃದ್ಧಿ, ಆಲಿಸುವುದು ಮತ್ತು ಮಾತನಾಡುವುದು.<br>**ಉದ್ದೇಶ:** ತನ್ನ ಇಷ್ಟದ ವಿಷಯದ ಕುರಿತು ಮಾತನಾಡುವುದು.<br>**ಸಾಮಗ್ರಿ:** ಕಲರ್ ಪೆನ್ಸಿಲ್ ಗಳು, ಟ್ರೇ<br>**ವಿಧಾನ:**<br>1. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ.<br>2. ಮಕ್ಕಳೊಂದಿಗೆ ಸಹಜವಾಗಿ ಮಾತನಾಡುತ್ತಾ ಬಣ್ಣಗಳ ಕುರಿತು ಮಾತನಾಡಲು ಪ್ರೇರೇಪಿಸಿ.<br>( ನಿಮಗೆ ಯಾವ ಯಾವ ಬಣ್ಣಗಳು ಗೊತ್ತು ? )<br>3. ನಂತರ 2 ಮತ್ತು 3 ನೇ ತರಗತಿಯ ಮಕ್ಕಳನ್ನು "ನೀವು ಯಾವ ಬಣ್ಣವನ್ನುಇಷ್ಟಪಡುತ್ತೀರಿ?" ಎಂದು |




DRAFT 2022

| | | |
|---|---|---|
| | | ಕೇಳಿ. ("ನಾನು ಹಸಿರು / ಕೆಂಪು / ಹಳದಿ" ಇತ್ಯಾದಿಗಳನ್ನು ಇಷ್ಟಪಡುತ್ತೇನೆ ಎಂದು ಹೇಳಲು ಮಕ್ಕಳಿಗೆ ಪ್ರೋತ್ಸಾಹಿಸಿ.)<br>4. ಈಗ ವಿವಿಧ ಬಣ್ಣದ ಪೆನ್ಸಿಲ್‌ಗಳನ್ನು ಟ್ರೇನಲ್ಲಿ ಇರಿಸಿ.<br>(ತಮ್ಮ ಆಯ್ಕೆಯ ಬಣ್ಣದ ಪೆನ್ಸಿಲ್ ಅನ್ನು ಆರಿಸಲು ಮಕ್ಕಳನ್ನು ಒಬ್ಬೊಬ್ಬರಾಗಿ ಆಹ್ವಾನಿಸಿ.)<br>6. ಮಕ್ಕಳನ್ನು ಚರ್ಚೆಯಲ್ಲಿ ತೊಡಗಿಸಿಕೊಳ್ಳಿ ಮತ್ತು ಆ ನಿರ್ದಿಷ್ಟ ಬಣ್ಣದ ಪೆನ್ಸಿಲ್‌ಅನ್ನು ಅವನು/ಅವಳು ಏಕೆ ಆಯ್ಕೆ ಮಾಡುತ್ತಾನೆ ಎಂದು ಮಗುವನ್ನು ಕೇಳಿ. |
| | **ನನ್ನ ಸಮಯ(Free Indore play)** | ದಿನ – 19<br>ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಸ್ಪರ್ಶ ಸಂವೇದನೆ, ಪರಿಸರದ ಅರಿವು**<br>**ಚಟುವಟಿಕೆ...9 ಬಿ "ಸೂಚಿತ ಸಂಖ್ಯೆ"(ಅನುಕ್ರಮ ಜೋಡಣೆ) (ಗುರಿ 3)**<br>**ಉದ್ದೇಶ:– ಅನುಕ್ರಮವಾಗಿ ಜೋಡಿಸುವುದು.**<br>**ಅಗತ್ಯ ಸಾಮಗ್ರಿಗಳು : 1 ರಿಂದ 10 ರವರೆಗಿನ ಕಾರ್ಡುಗಳು (ಕಿಟ್‌ನಲ್ಲಿರುವ ಸಂಖ್ಯಾ ಕಾರ್ಡುಗಳನ್ನು ನೀಡುವುದು)**<br>**ವಿಧಾನ : ಮಕ್ಕಳನ್ನು ವೃತ್ತಾಕಾರದಲ್ಲಿ ಕುಳಿತುಕೊಳ್ಳಲು ತಿಳಿಸುವುದು. 1 ರಿಂದ 10 ರವರೆಗಿನ ಸಂಖ್ಯಾ ಕಾರ್ಡುಗಳನ್ನು ಒಂದು ಟ್ರೇನಲ್ಲಿ ಇರಿಸಿ ಅದರಲ್ಲಿಯ ಸೂಚಿತ ಸಂಖ್ಯೆಗಳ ಕಾರ್ಡುಗಳನ್ನು ಕ್ರಮವಾಗಿ ಜೋಡಿಸಲು ಮಕ್ಕಳಿಗೆ ಅವಕಾಶ ಮಾಡಿಕೊಡುವುದು.**<br>**ತರಗತಿ–2**<br>**1 ರಿಂದ 10ರ ವರೆಗಿನ ಸಂಖ್ಯೆಗಳನ್ನು ಹಿಮ್ಮುಖವಾಗಿ ಹೇಳಿ ಬರೆಯುವುದು.**<br>**ತರಗತಿ–3**<br>**ಅನುಕ್ರಮವಾಗಿ ಬರೆದ ಸಂಖ್ಯೆಗಳನ್ನು ಪದಗಳಲ್ಲಿ ಬರೆಸುವುದು.**<br><br>*** ಬಳಸಬೇಕಾದ ಅಭ್ಯಾಸ ಹಾಳೆಗಳು: I.L-14 ( 01, 02,03ನೇ ತರಗತಿ)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | .<br>ಸಾಮರ್ಥ್ಯ; ಸೂಕ್ಮ ಸ್ನಾಯುಗಳ ವಿಕಾಸ, ಸೃಜನಶೀಲತೆಯ ಅಭಿವೃದ್ಧಿ,ಕಣ್ಣು ಕೈಗಳ ನಡುವೆ ಸಮನ್ವಯತೆ. ಆಕಾರಗಳ ಪರಿಕಲ್ಪನೆಯ ವಿಕಾಸ.<br>ಚಟುವಟಿಕೆ; 33 ಮರಳಿನಲ್ಲಿ ತಿದ್ದುವುದು.<br>ಉದ್ದೇಶ;<br>• ಸೂಕ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಬರವಣಿಗೆಗೆ ಪೂರಕ ಚಟುವಟಿಕೆಯಾಗಿರುತ್ತದೆ<br>ಸಾಮಗ್ರಿ; ಮರಳು, ಕಡ್ಡಿ.<br>ವಿಧಾನ; ಮಕ್ಕಳಿಗೆ ಆಳವಾದ ಟ್ರೇನಲ್ಲಿ ಮರಳನ್ನು ತುಂಬಿ, ಚಿಕ್ಕದಾದ ಕಡ್ಡಿಯನ್ನು ಕೊಟ್ಟು ಮರಳಿನಲ್ಲಿ ತಿದ್ದಲು ತಿಳಿಸುವುದು.ಬೇರೆ ಬೇರೆ ಗೆರೆಗಳಾದ ಸರಳರೇಖೆ/ ವಕ್ರರೇಖೆ ಮತ್ತು ಆಕಾರಗಳನ್ನು ಬರೆಯಲು ಹೇಳುವುದು.ಸರಳ ಮತ್ತು ವಕ್ರರೇಖೆಗಳನ್ನು ಬಳಸಿ ವಿವಿಧ ಚಿತ್ರ ರಚಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ಸರಳರೇಖೆ ಮತ್ತು ವಕ್ರ ರೇಖೆಗಳನ್ನು ಬಳಸಿ ವಿವಿಧ ಆಕೃತಿಗಳ ಚಿತ್ರ ಬರೆಯಲು ಅವಕಾಶ ಮಾಡಿಕೊಡುವುದು |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ** — **ಆಲಿಸುವುದು ಮತ್ತು ಮಾತ** | **ಸಾಮರ್ಥ್ಯ: ಪದಸಂಪತ್ತಿನ ಅಭಿವೃದ್ಧಿ, ಊಹಿಸುವುದು, ತಂಡದ ಸದಸ್ಯರೊಂದಿಗೆ ಸಹಕಾರದಿಂದ ಕೆಲಸ ಮಾಡುವುದು.**<br>**ಚಟುವಟಿಕೆ....6 ಎ ನನ್ನನ್ನು ಹುಡುಕು. (ಗುರಿ–2) ECL-12**<br>**ಉದ್ದೇಶ:** |

DRAFT 22.02.22

| | | | |
|---|---|---|---|
| | ಸಾಕ್ಷರತೆ | ನಾಡುವುದು | * ಸೂಕ್ತ ಪದ ರಚಿಸುವುದು.<br>* ಸಾಂಘಿಕ ಮನೋಭಾವನೆ ಬೆಳೆಸುವುದು.<br>* ಸೂಚನೆಗಳನ್ನು ಎಚ್ಚರಿಕೆಯಿಂದ ಆಲಿಸಿ ಅನುಸರಿಸುವುದು.<br>* ಪದ ಸಂಪತ್ತಿನ್ನು ಅಭಿವೃದ್ಧಿ ಪಡಿಸುವುದು.<br>ಅಗತ್ಯ ಸಾಮಗ್ರಿಗಳು : ಪರಿಚಿತ ವಸ್ತು, ಪ್ರಾಣಿ, ಪಕ್ಷಿಗಳ ಚಿತ್ರಗಳು<br>ವಿಧಾನ: ಚಿತ್ರಗಳ ಮಿಂಚುಪಟ್ಟಿಗಳನ್ನು ಒಂದು ಬಾಕ್ಸ್ ನಲ್ಲಿ ಹಾಕಿ ಇಡುವುದು. ತರಗತಿಯಲ್ಲಿರುವ ಮಕ್ಕಳನ್ನು ಒಬ್ಬೊಬ್ಬರಾಗಿ ಕರೆದು ಬಾಕ್ಸ್ ನಲ್ಲಿರುವ ಚಿತ್ರಗಳಲ್ಲಿ ಒಂದನ್ನು ಎತ್ತಿಕೊಂಡು ಅದರ ಹೆಸರು ಹೇಳಲು ತಿಳಿಸುವುದು. ಮಕ್ಕಳು ಗುರುತಿಸಿದ ಚಿತ್ರಗಳ ಕುರಿತು ಅವರೊಂದಿಗೆ ಚರ್ಚಿಸುವುದು. ಇದೇ ರೀತಿ ಚಟುವಟಿಕೆಯನ್ನು ಮುಂದುವರೆಸುವುದು.<br>ತರಗತಿಯ ವಿವರ: 2 ನೇ ತರಗತಿಯ ಮಕ್ಕಳು ತಾವು ಗುರುತಿಸಿದ ಚಿತ್ರದ ಬಗ್ಗೆ 3–4 ವಾಕ್ಯಗಳಲ್ಲಿ ಮಾತನಾಡುವುದು. 3 ನೇ ತರಗತಿಯ ಮಕ್ಕಳು 2 ರಿಂದ 3 ನಿಮಿಷ ಆ ಚಿತ್ರದ ಬಗ್ಗೆ ಮಾತನಾಡುವುದು. |
| | | ಅರ್ಥ ಗ್ರಹಿಕೆಂಯೊಂದಿಗಿನ ಓದು | ಸಾಮರ್ಥ್ಯ: ಪದ ಗುರ್ತಿಸುವಿಕೆ, ಮುದ್ರಣದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತು ಅಭಿವೃದ್ಧಿ..<br>ಚಟುವಟಿಕೆ 11 ಎ : ನಾಮಫಲಕ(ಗುರಿ–2)<br>ಉದ್ದೇಶ : ನಾಮಫಲಕಗಳಲ್ಲಿಯ ಹೆಸರುಗಳನ್ನು ಚಿತ್ರಗಳ ಸಹಾಯದಿಂದ ಗುರುತಿಸುವರು ಮತ್ತು ಓದುವರು.<br>ಅಗತ್ಯ ಸಾಮಗ್ರಿಗಳು: ಮಿಂಚು ಪಟ್ಟಿ, ನೋಟ್ ಪುಸ್ತಕ, ಚಿತ್ರ ಪಟ.<br>ವಿಧಾನ: ಮಗುವಿನ ಹೆಸರಿನ ಪಕ್ಕದಲ್ಲಿ ಯಾವುದಾದರೂ ವಸ್ತು, ಪ್ರಾಣಿಗಳ ಚಿತ್ರ ಅಂಟಿಸಿ ನಾಮ ಫಲಕಗಳನ್ನು ರಚಿಸುವುದು. ನಂತರ ತನ್ನ ಹೆಸರನ್ನು ಗುರುತಿಸಲು ತಿಳಿಸುವುದು ಒಂದು ವೇಳೆ ಮಕ್ಕಳು ಹೆಸರುಗಳನ್ನು ಗುರ್ತಿಸಲು ವಿಫಲವಾದರೆ ಹೆಸರಿನ ಮುಂದೆ ಅಂಟಿಸಿರುವ ಚಿತ್ರಗಳ ಸಹಾಯದಿಂದ ತನ್ನ ಹೆಸರನ್ನು ತೋರಿಸಲು ನೆರವಾಗುವುದು.<br>2 ಮತ್ತು 3ನೇ ತರಗತಿ : ಶಿಕ್ಷಕರು ಮಕ್ಕಳಿಗೆ ಪದಗಳ ಪಟ್ಟಿಯ ಚಾರ್ಟ್ ಅನ್ನು ಪ್ರದರ್ಶಿಸುವುದು ಅಲ್ಲಿರುವ ಪದಗಳಲ್ಲಿ ಶಿಕ್ಷಕರು ಕೆಲವು ಪದಗಳನ್ನು ಗಟ್ಟಿಯಾಗಿ ಹೇಳುವರು ಮಕ್ಕಳು ಶಿಕ್ಷಕರು ಹೇಳಿದ ಪದಗಳನ್ನು ಗುರುತಿಸುವ ಮೂಲಕ ಚಾರ್ಟ್‌ನಲ್ಲಿ ತೊರಿಸುವರು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ, ಆಲಿಸಿ ಅರ್ಥ ಮಾಡಿಕೊಳ್ಳುವುದು, ಪರಿಸರದ ಅರಿವು.<br>ಚಟುವಟಿಕೆ....33 ಪಟ್ಟಿ ಮಾಡೋಣ (ಗುರಿ–2) **ECW-10**<br>ಉದ್ದೇಶಗಳು:<br>• ಉದ್ದೇಶಕ್ಕನುಸಾರವಾಗಿ ಬರವಣಿಗೆ ಮಾಡಲು ಅವಕಾಶ ನೀಡುವುದು.<br>• ಸೃಜನಶೀಲ ಚಿಂತನೆಯನ್ನು ಬೆಳೆಸುವುದು.<br>• ಪರಿಸರದ ಅರಿವು ಮೂಡಿಸುವುದು.<br>• ಪದಸಂಪತ್ತನ್ನು ಹೆಚ್ಚಿಸುವುದು.<br>• ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಕಾಗದ, ಕ್ರೇಯಾನ್ಸ್,<br>ವಿಧಾನ : ಮಕ್ಕಳ ಪದಸಂಪತ್ತನ್ನು ಹೆಚ್ಚಿಸಲು ಹಾಗೂ ಉದ್ದೇಶಿತ ಬರವಣಿಗೆಗೆ ಅವಕಾಶ ಕಲ್ಪಿಸಲು ಮಕ್ಕಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಲು ತಿಳಿಸಿ.<br>ಸೂಚಿತ ವಿಷಯ: ನಾವು ನೋಡಿದ ವಸ್ತುಗಳು<br>ಇಡೀ ತರಗತಿಯನ್ನು ಒಳಗೊಂಡಂತೆ ಒಂದು ಚಾರ್ಟ್‌ಪೇಪರ್‌ನಲ್ಲಿ ಪಟ್ಟಿ ಮಾಡುವ ಚಟುವಟಿಕೆಯನ್ನು ಆಯೋಜಿಸಬಹುದು. ಈ ಚಾರ್ಟ್‌ನಲ್ಲಿ ಬಳಸಬಹುದಾದ ಸಾಮಾನ್ಯ ಪದಗಳ ಪಟ್ಟಿಯನ್ನು ಶಿಕ್ಷಕರೇ ಸಿದ್ಧಪಡಿಸಿ, ಮಕ್ಕಳು ಇವುಗಳನ್ನು ನೋಡಲು ಹಾಗೂ ಓದಲು ಸಹಾಯಕವಾಗುವಂತೆ ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.<br>ತರಗತಿವಾರು ವಿವರ: 1ನೇ ತರಗತಿಯವರು ತಯಾರಿಸಿರುವ ಪಟ್ಟಿಗೆ 2ನೇ ತರಗತಿಯ ಮಕ್ಕಳು ಹೆಚ್ಚುವರಿಯಾಗಿ ಪದಗಳನ್ನು ಸೇರಿಸಲಿ. 3ನೇ ತರಗತಿಯವರು ಪಟ್ಟಿಯಲ್ಲಿರುವ ಪದಗಳಿಗೆ ಸ್ವಂತ ವಾಕ್ಯಗಳನ್ನು ರಚಿಸಲು ಅವಕಾಶ ಮಾಡಿಕೊಡಿ. |

DRAFT 2022

| | | |
|---|---|---|
| | | **ಬರವಣಿಗೆಯ ಮಾದರಿ:**<br>**ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.**<br>**ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.** |
| | **ಹೊರಾಂಗಣ ಆಟಗಳು** | Day 19<br>ಚಟುವಟಿಕೆ –17 ವಿವಿಧ ರೀತಿಯ ನಡಿಗೆ ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ<br>ಬೇಕಾಗುವ ಸಾಮಗ್ರಿ: ––––––<br><br><br>ವಿಧಾನ:<br>• ನೆಲದ ಮೇಲೆ ನೇರ ರೇಖೆಗಳನ್ನು ಎಳೆಯುವುದು.<br>• ಮಕ್ಕಳಿಗೆ ರೇಖೆಯ ಮೇಲೆ ನಡೆಯಲು ಸೂಚಿಸುವುದು.<br>• ಮಕ್ಕಳು ರೇಖೆಯ ಮೇಲೆ ನಿಧಾನವಾಗಿ ಅಥವಾ ವೇಗವಾಗಿ ಮುಂದಕ್ಕೆ ಅಥವಾ ಹಿಂದಕ್ಕೆ ನಡೆಯಲು ಸೂಚಿಸುವುದು.<br>• ಶೌಚಾಲಯವನ್ನು ಬಳಸಲು ಹೋಗುವಾಗ ಅಥವಾ ನೀರನ್ನು ಕುಡಿಯಲು ಹೋಗುವಾಗ ಸಾಲಿನಲ್ಲಿ ಹೋಗಲು ಸೂಚಿಸುವುದು.<br>**• ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೆ ವಿವಿಧ ರೀತಿಯ ರೇಖೆಗಳನ್ನು ಉದಾ : ವಕ್ರ , ಅಂಕುಡೊಂಕಾದ ಗೆರೆಗಳನ್ನು ನೆಲದ ಮೇಲೆ ಬರೆದು ಆ ಗೆರೆಗಳ ಮೇಲೆ ನಡೆಯಲು ಸೂಚಿಸುವುದು. ವೃತ್ತವನ್ನು ಬಿಡಿಸಿ ಮಕ್ಕಳು ವೃತ್ತದಲ್ಲಿ ಸಾಗುತ್ತ ಹಾಡು ಹಾಡಲು ಸೂಚಿಸುವುದು.** |
| | **ಕಥಾ ಸಮಯ** | **ಶೀರ್ಷಿಕೆ :** ತೆನಾಲಿರಾಮಕೃಷ್ಣ ಮತ್ತು ಮಡಕೆ<br>**ಸಾಮಗ್ರಿಗಳು :** ಕಥೆಯ ಸಾಹಿತ್ಯ<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>**ವಿಧಾನ :**<br>***ಕಥಾ ಸಾಹಿತ್ಯ ನಿರೂಪಣೆ***<br>➢ ಶಿಕ್ಷಕರು ಕಥೆ ಹೇಳುವ ಮುನ್ನಕಥೆಯನ್ನು ಓದಿ ಅರ್ಥೈಸಿಕೊಳ್ಳಬೇಕು.<br>➢ ಸೂಕ್ತ ಆಂಗಿಕ ಚಲನೆಯೊಂದಿಗೆ ಸರಳ ಭಾಷೆಯಲ್ಲಿಕಥೆಯನ್ನು ಹೇಳಬೇಕು.<br>➢ ಕಥೆ ಹೇಳುವಾಗ ಶಿಕ್ಷಕರು ಮಕ್ಕಳೊಂದಿಗೆ ವೃತ್ತದಲ್ಲಿ ಕುಳಿತುಕೊಳ್ಳಬೇಕು.<br>➢ ಸರಳ ಪ್ರಶ್ನೆಗಳ್ನು ಕೇಳಿ ಕಥೆಯನ್ನುಅರ್ಥೈಸಬೇಕು.<br>**ಕಥೆ :**<br>**ಒಮ್ಮೆಕೃಷ್ಣದೇವರಾಯನಆಸ್ಥಾನದಲ್ಲಿ ಮಂತ್ರಿಗಳು ಮತ್ತು ಸಭಿಕರು ನೆರೆದಿದ್ದರು. ಅದರಲ್ಲಿತೆನಾಲಿರಾಮಕೃಷ್ಣನೂ ಸಹ ಇದ್ದನು. ತೆನಾಲಿ ರಾಮನುತನ್ನ ಹಾಸ್ಯದಿಂದಯಾವಾಗಲೂರಾಜನನ್ನು ನಗಿಸುತ್ತಾ ಬಹುಮಾನಗಳನ್ನು ಪಡೆಯುತ್ತಿದ್ದನು. ಇದರಿಂದಇತರ ಮಂತ್ರಿಗಳಿಗೆ ಹೊಟ್ಟೆಕಿಚ್ಚು. ಹೇಗಾದರೂ ಮಾಡಿರಾಮಕೃಷ್ಣನನ್ನುಆಸ್ಥಾನದಿಂದ ಹೊರಹಾಕಿದರೆಎಲ್ಲಾ ಬಹುಮಾನಗಳನ್ನು ತಾವೇ ಪಡೆಯಬಹುದ ಯೋಚಿಸಿರು. ಅದಕ್ಕಾಗಿ ಸಮಯಕಾಯುತ್ತಿದ್ದರು. ಅಷ್ಟರಲ್ಲಿಪಂಡಿತನೊಬ್ಬನುದುಃಖಿಸುತ್ತಾಓಡೋಡಿ ಬಂದು ಮಹಾಪ್ರಭು,ತೆನಾಲಿ ರಾಮನಕಾಟದಿಂದ ನನಗೆ ತುಂಬಾತೊಂದರೆಯಾಗಿದೆ. ಅವನು ಪ್ರತಿ ದಿನ ಏನಾದರೂಕಾರಣ ಹುಡುಕಿ ನನಗೆ ತೊಂದರೆಕೊಡುತ್ತಿರುವನುಎಂದುತೆನಾಲಿ ರಾಮನ ಮೇಲೆ ದೂರು ಹೇಳಿದನು. ಈ ದೂರನ್ನು ಆಲಿಸಿದ ರಾಜನುಇತರ ಮಂತ್ರಿಗಳನ್ನು ವಿಚಾರಿಸಿದನು. ಅವರೆಲ್ಲರೂತೆನಾಲಿ ರಾಮನನ್ನುಆಸ್ಥಾನದಿಂದ ಹೊರಹಾಕಲುಇದೇ ಸೂಕ್ತ ಸಂದರ್ಭಎಂದು ತಿಳಿದು ಪಂಡಿತನು ಹೇಳುತ್ತಿರುವುದು ಸರಿಯಾಗಿಯೇಇದೆಎಂದು ಪಂಡಿತನ ಪರವಾಗಿ ದನಿಗೂಡಿಸಿದರು. ಇದರಿಂದ ಸಿಟ್ಟಾದ ರಾಜನುತೆನಾಲಿ ರಾಮನಿಗೆ ಮಾತನಾಡಲುಅವಕಾಶವನ್ನೇ ನೀಡದೇ "ರಾಮ, ನಿನ್ನ ಮುಖವನ್ನು ನನಗೆ ತೋರಿಸಬೇಡಾ,ಹೊರಟು ಹೋಗು" ಎಂದುಗದರಿದನು. ತೆನಾಲಿ ರಾಮನು ಏನೂ ಮಾತನಾಡದೇ ಹೊರಟು ಹೋದನು. ಇದರಿಂದ ಉಳಿದ ಮಂತ್ರಿಗಳಿಗೆ ಬಹಳ ಸಂತೋಷವಾಯಿತು. ಮರುದಿನ ಸಭೆಯು ಪ್ರಾರಂಭವಾಗುತ್ತಿದ್ದಂತೆಯೇಎಲ್ಲರೂ ಸೇರತೊಡಗಿದರು. ತೆನಾಲಿ ರಾಮನೂ ಸಹ ಸಭೆಗೆ ಬಂದನು. ಆದರೆಅವನನ್ನುಯಾರೂಗುರುತಿಸಲಿಲ್ಲ.ಏಕೆಂದರೆತೆನಾಲಿ ರಾಮನುತಲೆಗೆ ಮಡಕೆಯೊಂದನ್ನು ಹಾಕಿಕೊಂಡು ಬಂದಿದ್ದನು.**<br> |

DRAFT 22.02.22

| | | |
|---|---|---|
| | | ಎಲ್ಲರೂಆಶ್ಚರ್ಯಚಕಿತರಾಗಿ ನೋಡುತ್ತಿದ್ದರು. ಇದನ್ನು ಗಮನಿಸಿದ ರಾಜನು ಈ ಮಡಕೆವೇಷದಾರಿಯಾರು? ಇವರು ಏಕೆ ಬಂದಿದ್ದಾರೆ? ಎಂದು ಪ್ರಶ್ನಿಸಿದನು.ಅದಕ್ಕೆತೆನಾಲಿ ರಾಮನುಎದ್ದು ನಿಂತು"ಸ್ವಾಮಿ ನಾನು ತೆನಾಲಿ ರಾಮಕೃಷ್ಣ, ತಾವು ನನಗೆ ರಾಮ ನಿನ್ನ ಮುಖವನ್ನು ನನಗೆ ತೋರಿಸಬೇಡಾ ಹೊರಟು ಹೋಗು"ಎಂದುಹೇಳಿದ್ದಿರಿಅಲ್ಲವೇ,ಅದಕ್ಕೆ ನಿಮಗೆ ಮುಖ ತೋರಿಸಬಾರದೆಂದು ಈ ರೀತಿಯ ವೇಷಎಂದು ಹೇಳಿದನು. ಸಭೆಯು ನಗೆಯಲ್ಲಿತೇಲಿತು. ರಾಜನೂ ಸಹ ಜೋರಾಗಿ ನಗುತ್ತ, ತೆನಾಲಿರಾಮಕೃಷ್ಣನ ಬುದ್ಧಿವಂತಿಕೆಗೆತಲೆದೂಗಿ ಮತ್ತೊಂದು ಬಹುಮಾನವನ್ನುಕೊಟ್ಟು ಮಡಕೆಯನ್ನುತೆಗೆಯಲು ಹೇಳಿದನು. ಇದರಿಂದಇತರ ಮಂತ್ರಿಗಳು ನಾಚಿಕೆಯಿಂದತಲೆತಗ್ಗಿಸುವಂತಾಯಿತು.<br>ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.<br>7) ತೆನಾಲಿ ರಾಮಕೃಷ್ಣನು ಯಾರ ಆಸ್ಥಾನದಲ್ಲಿದ್ದನು?<br>8) ತೆನಾಲಿ ರಾಮಕೃಷ್ಣನ ಬಗ್ಗೆ ರಾಜನಿಗೆ ದೂರು ನೀಡಿದವರು ಯಾರು?<br>(ಕಥೆಯನ್ನು ಆನಂದಿಸುವುದರಜೊತೆಗೆ, ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ ಬೀಳ್ಕೊಡಿ.<br>• ಮುಂದಿನವಾರ "ಉದ್ಯಾನವನದ ಭೇಟಿಗಾಗಿ" ಯೋಜನೆ ರೂಪಿಸಿ ಮತ್ತು ಅದಕ್ಕೆ ತಕ್ಕಂತೆ ಚಟುವಟಿಕೆಗಳನ್ನು ಸಿದ್ಧಪಡಿಸಿಕೊಳ್ಳಿ.<br>• ಶಾಲೆಯಲ್ಲಿ "ಚಿಕ್ಕ ಪುಸ್ತಕ ಪ್ರದರ್ಶನ" ಆಯೋಜಿಸಿ, ಪೋಷಕರನ್ನು ಆಹ್ವಾನಿಸಲು ಯೋಜನೆ ಸಿದ್ಧಪಡಿಸಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–4** **ದಿನ–20 (ಮಂಗಳವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| | ಶುಭಾಶಯ ವಿನಿಮಯ | ದಿನ–19 ರಲ್ಲಿ ಉಲ್ಲೇಖಿಸಲಾದ ಶುಭಾಶಯ ವಿನಿಮಯ ನೀಡಲಾದ ಚಟುವಟಿಕೆ ಪುನರಾವರ್ತಿಸಿ |
| | ಮಾತು ಕತೆ | ದಿನ –14 ರ ಮಾತುಕತೆ ಚಟುವಟಿಕೆಯನ್ನು ಮಾಡಿಸಿ. |
| | ನನ್ನ ಸಮಯ(Free Indore play)<br>('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| 20 | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | ಸಾಮರ್ಥ್ಯ: ಪಜಲ್ (ಚಿತ್ರ) ಪೂರ್ಣಗೊಳಿಸುವಿಕೆ, ಸಮಸ್ಯೆ ಪರಿಹಾರ<br>ಚಟುವಟಿಕೆ...13 ಪೂರ್ಣ ಮತ್ತು ಅರ್ಧ (ಗುರಿ 3)<br>ಉದ್ದೇಶ:– ಪೂರ್ಣ ಮತ್ತು ಅರ್ಧದ ಕಲ್ಪನೆ ಮೂಡಿಸುವುದು.<br>ಅಗತ್ಯ ಸಾಮಗ್ರಿಗಳು : ಹಣ್ಣುಗಳು, ಪ್ರಾಣಿಗಳು, ಪಕ್ಷಿಗಳು ಮತ್ತು ಮೀನುಗಳ ಚಿತ್ರಗಳ ತುಣುಕುಗಳು<br>ವಿಧಾನ : ಒಂದು ಕಡೆ ಪೂರ್ಣ ಹಣ್ಣುಗಳ ಚಿತ್ರ ಮತ್ತು ಇನ್ನೊಂದು ಕಡೆ ಅರ್ಧ ಕತ್ತರಿಸಿದ ಹಣ್ಣುಗಳ ಚಿತ್ರಗಳನ್ನು ಪ್ರದರ್ಶಿಸುವುದು. ಒಂದು ಮಗು ಒಂದು ಹಣ್ಣಿನ ಅರ್ಧಭಾಗವನ್ನು ಆಯ್ದುಕೊಂಡು ಉಳಿದ ಮಕ್ಕಳಿಗೆ ತೋರಿಸಿ ಅದನ್ನು ಪೂರ್ಣ ಮಾಡಲು ಸೂಕ್ತ ಅರ್ಧಭಾಗವನ್ನು ಆರಿಸಿ ಜೋಡಿಸುವುದು.<br>ತರಗತಿ–2<br>ಪ್ರಾಣಿ/ಪಕ್ಷಿಗಳ ಅಪೂರ್ಣ ಚಿತ್ರದ ತುಣುಕುಗಳನ್ನು ಬಳಸಿ ಪೂರ್ಣಗೊಳಿಸುವುದು.<br>ತರಗತಿ–3<br>ಪ್ರಾಣಿ/ಪಕ್ಷಿಗಳ ಅಪೂರ್ಣ ಚಿತ್ರದ ತುಣುಕುಗಳನ್ನು ಬಳಸಿ ಪೂರ್ಣಗೊಳಿಸುವುದು ಮತ್ತು ಅವುಗಳ ಹೆಸರನ್ನು ಬರೆಯುವುದು. |

DRAFT 2022

| | | | |
|---|---|---|---|
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | .<br>ಸಾಮರ್ಥ್ಯ; ಚಿಕ್ಕ ಸ್ನಾಯುಗಳ ಚಲನಾ ಶಕ್ತಿಯ ವಿಕಾಸ.ಸೃಜನ ಶೀಲತೆಯ ಅಭಿವ್ಯಕ್ತಿ.<br>ಚಟುವಟಿಕೆ; 49 ಕತ್ತರಿಸುವುದು. ಗುರಿ–1<br>ಉದ್ದೇಶ;<br>• ಕತ್ತರಿಯನ್ನು ಹಿಡಿದು ಹಾಳೆಯನ್ನು ಕತ್ತರಿಸಿ ಅಂಟಿಸುವ ವಿಧಾನವನ್ನು ತಿಳಿಯುತ್ತಾರೆ.<br>• ಕೈ ಮತ್ತು ಬೆರಳುಗಳ ಕುಶಲತೆ ಹೆಚ್ಚುವುದರ ಜೊತೆಗೆ ಏಕಾಗ್ರತೆ ಬೆಳೆಸಿಕೊಳ್ಳುತ್ತಾರೆ.<br>ಸಾಮಗ್ರಿ; ಕತ್ತರಿ[ ಪ್ಲಾಸ್ಟಿಕ್ ಕತ್ತರಿ ಅಪೇಕ್ಷಿತ] ಬಣ್ಣದ ಪೇಪರ್ , ಅಂಟು.<br>ವಿಧಾನ; ಮಕ್ಕಳಿಗೆ ಒಂದು ಕೈಯಿಂದ ಕತ್ತರಿಯನ್ನು ಇನ್ನೊಂದು ಕೈಯಿಂದ ಪೇಪರನ್ನು ಹಿಡಿದುಕೊಳ್ಳುವುದನ್ನು ತೋರಿಸಿ , ಬೆರಳುಗಳಿಂದ ಗಟ್ಟಿಯಾಗಿ ಕತ್ತರಿಯನ್ನು ಹಿಡಿಯುವ ಅಭ್ಯಾಸ ಮಾಡಿಸುವುದು.ಪ್ರತಿಯೊಂದು ಮಗುವಿಗೂ ಒಂದು ಕತ್ತರಿ ಮತ್ತು ಒಂದು ಪೀಸ್ ಪೇಪರನ್ನು ಕೊಟ್ಟು ಬೇರೆ ಬೇರೆ ರೀತಿಯಲ್ಲಿ ಅಂದರೆ ನೇರವಾಗಿ, ಜಿಗ್ ಜಾಗ್ ಅಥವಾ ಬೇರೆ ಬೇರೆ ಆಕಾರದಲ್ಲಿ ಕತ್ತರಿಸಲು ಹೇಳುವುದು.ನಂತರ ಅವುಗಳನ್ನು ಒಂದು ಚಾರ್ಟ ಮೇಲೆ ಅಥವಾ ಖಾಲಿ ಹಾಳೆಯ ಮೇಲೆ ಅಂಟಿಸಿ ಕೊಲ್ಯಾಜ್ ವರ್ಕ ಮಾಡಿಸುವುದು.<br>ಸೂಚನೆ; ಮಕ್ಕಳು ಉಪಯೋಗಿಸಲು ಯೋಗ್ಯವಾದ [ ಚೂಪಾಗಿಲ್ಲದ] ಕತ್ತರಿಗಳನ್ನು ಬಳಸಬೇಕು.ಶಿಕ್ಷಕಿ ಎಚ್ಚರಿಕೆಯಿಂದ ಮಕ್ಕಳನ್ನು ಗಮನಿಸುತ್ತಿರಬೇಕು. ಮಕ್ಕಳು ತೆಗೆದುಕೊಳ್ಳಬೇಕಾದ ಎಚ್ಚರಿಕೆಯನ್ನು ಅವರಿಗೆ ಮನದಟ್ಟು ಮಾಡಬೇಕು.<br>ವಿವರ; 2ಮತ್ತು 3 ನೇ ತರಗತಿಗೆ ಜಿಗ್ ಜಾಗ್ ಅಥವಾ ಬೇರೆ ಬೇರೆ ಆಕಾರದಲ್ಲಿ ಕತ್ತರಿಸಲು ಹೇಳುವುದು.ನಂತರ ಅವುಗಳನ್ನು ಒಂದು ಚಾರ್ಟ ಮೇಲೆ ಅಥವಾ ಖಾಲಿ ಹಾಳೆಯ ಮೇಲೆ ಅಂಟಿಸಿ ಕೊಲ್ಯಾಜ್ ವರ್ಕ ಮಾಡಿಸುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸ ುವುದು ಮತ್ತು ಮಾತ ನಾಡು ವುದು | ಸಾಮರ್ಥ್ಯ,–ಪದ ಸಂಯೋಜನೆ<br>ಚಟುವಟಿಕೆ 10 ಪದರಚನೆ (ಗುಂಪು–2) **ECL-10**<br>ಉದ್ದೇಶ:<br>* ಪದ ರಚನಾ ಸಾಮರ್ಥ್ಯವನ್ನು ಹೆಚ್ಚಿಸುವುದು.<br>* ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದು.<br>ಸಾಮಗ್ರಿ–ಇಲ್ಲ<br>ಸಾಧನ–ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ ಸ್ಪಷ್ಟವಾದ ಸೂಚನೆಗಳನ್ನು ನೀಡಿ ಚಟುವಟಿಕೆಯನ್ನು ಆರಂಭಿಸಿ.<br>* ನಾನು ಹೇಳುವ ಅಕ್ಷರಗಳನ್ನು ಆಲಿಸಿ.<br>* ಅಕ್ಷರಗಳನ್ನು ಸೇರಿಸಿ ಪದ ರಚಿಸಿ ಹೇಳಿ.<br>ಉದಾಹರಣೆ–ಶಿಕ್ಷಕರು ಜೋರಾಗಿ ಸ(ವಿರಾಮ) ರ ಎಂದು ಉಚ್ಚರಿಸಿದಾಗ ಮಕ್ಕಳು ಅಕ್ಷರಗಳನ್ನು ಆಲಿಸಿ ಸರ ಎಂದು ಪದ ರಚಿಸಿ ಹೇಳಲಿ.<br>ಈ ಚಟುವಟಿಕೆಯಲ್ಲಿ ಶಿಕ್ಷಕರು ಹಂತ ಹಂತವಾಗಿ ಮೂರಕ್ಷರ ಹಾಗೂ ನಾಲ್ಕಕ್ಷರದ ಪದಗಳನ್ನು ಬಳಸಬಹುದಾಗಿದೆ.<br>ತರಗತಿಯ ವಿವರ : 2 ನೇ ತರಗತಿಯ ಮಕ್ಕಳು ಒಂದು ಅಕ್ಷರಕ್ಕೆ ಸಂಬಂಧಿಸಿದಂತೆ 2–3 ಪದಗಳನ್ನು ಹೇಳುವುದು. 3 ನೇ ತರಗತಿಯ ಮಕ್ಕಳು ಎರಡನೇ ತರಗತಿಯ ಮಕ್ಕಳು ಹೇಳಿದ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸುವುದು. |
| | | ಅರ್ಥ ಗ್ರಹಿಕೆ ಯೊಂ ದಿಗಿನ ಓದು | ಸಾಮರ್ಥ್ಯ: ಪದ ಗುರ್ತಿಸುವಿಕೆ, ಮುದ್ರಣದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತು ಅಭಿವೃದ್ಧಿ.<br>ಚಟುವಟಿಕೆ 11 ಬಿ : ಪುಸ್ತಕ ಮೇಳ (ಗುರಿ –2)<br>ಉದ್ದೇಶ : ಪುಸ್ತಕಗಳ ಮೇಲಿನ ಬಾಂಧವ್ಯವನ್ನು ವೃದ್ಧಿಸುವುದು.<br>ಅಗತ್ಯ ಸಾಮಗ್ರಿಗಳು: ವಿವಿಧ ರೀತಿಯ ಪುಸ್ತಕಗಳು<br>ವಿಧಾನ: ಶಾಲಾ ಆವರಣದಲ್ಲಿ ಪುಸ್ತಕ ಮೇಳವನ್ನು ಆಯೋಜಿಸಿ, ಮಕ್ಕಳು ಪುಸ್ತಕಗಳೆಡೆಗೆ ಒಲವು ಹೆಚ್ಚಿಸಿಕೊಳ್ಳುವಂತೆ ಮಾಡುವುದು. ಪುಸ್ತಕ ಮೇಳದಲ್ಲಿ ಪಾಲಕರು ಭಾಗವಹಿಸುವಂತೆ ಪ್ರೋತ್ಸಾಹಿಸುವುದು.<br>2 ಮತ್ತು 3ನೇ ತರಗತಿ : ಈ ಮಕ್ಕಳಿಗೆ ಪುಸ್ತಕ ಮೇಳದಲ್ಲಿ ವೀಕ್ಷಿಸಿದ ಪುಸ್ತಕಗಳ ಹೆಸರುಗಳನ್ನು ಪಟ್ಟಿ ಮಾಡಿಸುವುದು ಮತ್ತು ಆ ಪುಸ್ತಕಗಳ ಹೆಸರುಗಳನ್ನು ಓದಿಸುವುದು. |
| | | ಉದ್ದೇ ಶಿತ | ಸಾಮರ್ಥ್ಯ: ಕೈಕಣ್ಣು ಸಂಯೋಜನೆ, ಬರವಣಿಗೆ ಕೌಶಲಗಳ ಅಭ್ಯಾಸ, ಸೃಜನಶೀಲ ಅಭಿವ್ಯಕ್ತಿ.<br>ಚಟುವಟಿಕೆ....2 ಮುಕ್ತ ಚಿತ್ರ ರಚನೆ (ಗುರಿ–2) **ECW-6** |

DRAFT 22.02.22

| | | |
|---|---|---|
| | ಬರಹ | ಉದ್ದೇಶಗಳು:<br>• ಬರವಣಿಗೆಯ ಕೌಶಲಗಳನ್ನು ರೂಢಿಸುವುದು.<br>• ಕಣ್ಣು–ಕೈಗಳ ಸಮನ್ವಯ ಕೌಶಲವನ್ನು ಅಭಿವೃದ್ಧಿಪಡಿಸುವುದು.<br>• ಕ್ರಿಯಾತ್ಮಕ ಅಭಿವ್ಯಕ್ತಿಗೆ ಅವಕಾಶ ನೀಡುವುದು.<br>• ಸೃಜನಶೀಲ ಅಭಿವ್ಯಕ್ತಿಯನ್ನು ಪ್ರೋತ್ಸಾಹಿಸುವುದು.<br>ಅಗತ್ಯ ಸಾಮಗ್ರಿಗಳು: ಕ್ರೇಯಾನ್ಸ್, ಬಣ್ಣದ ಪೆನ್ಸಿಲ್‌ಗಳು, ಮಾರ್ಕರ್, ಬಿಳಿಯ ಹಾಳೆಗಳು<br>ವಿಧಾನ: ಕಾಗದದಲ್ಲಿ ಮುಕ್ತವಾಗಿ ಚಿತ್ರಿಸಲು/ ಬರೆಯಲು, ಅನಿಸಿದ್ದನ್ನು ಬಿಡಿಸಿ ಬಣ್ಣ ಹಾಕಲು ಅವಕಾಶ ಕಲ್ಪಿಸುವುದು. ಅವರ ಬರವಣಿಗೆ ಬಗ್ಗೆ ಮಾತನಾಡಲು ತಿಳಿಸುವುದು. ಸೂಕ್ತವಾದ ಪ್ರಶ್ನೆಗಳನ್ನು ಕೇಳುತ್ತಾ ಬರವಣಿಗೆ ಬಗ್ಗೆ ಮಾಹಿತಿ ಪಡೆಯುವುದು.<br>ತರಗತಿವಾರು ವಿವರ: 2 ಹಾಗೂ 3 ನೇ ತರಗತಿಯ ಮಕ್ಕಳು ತಮ್ಮ ಇಷ್ಟದ ಚಿತ್ರ/ ಸನ್ನಿವೇಶವನ್ನು ಚಿತ್ರಿಸಿ, ಅವುಗಳ ಬಗ್ಗೆ 4–5 ವಾಕ್ಯಗಳನ್ನು ಬರೆಯಲು ತಿಳಿಸಿ. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| | ಹೊರಾಂಗಣ ಆಟಗಳು | Day20<br>ಚಟುವಟಿಕೆ –18 ಜಿಗಿ ಮತ್ತು ನೆಗಿ ಗುರಿ–1<br>ಸಾಮರ್ಥ್ಯ: ದೊಡ್ಡ ಸ್ನಾಯು ಚಲನ ಕೌಶಲ ಬೆಳವಣಿಗೆ<br>ಬೇಕಾಗುವ ಸಾಮಗ್ರಿ: ಉದ್ದ ಕಡ್ಡಿಗಳು, ಹಗ್ಗ ,ಸ್ಕಿಪ್ಪಿಂಗ್ ರೋಪ್<br>ವಿಧಾನ:<br>•ನೆಲದ ಮೇಲೆ ಚಟುವಟಿಕೆಗಳನ್ನು ಆರಂಭಿಸುವ ಮತ್ತು ಮುಕ್ತಾಯಗೊಳಿಸುವ ಜಾಗಗಳನ್ನು ಗುರುತಿಸುವುದು.<br>•ಈ ಎರಡು ಜಾಗಗಳ ನಡುವೆ ಮಕ್ಕಳು ಸುಲಭವಾಗಿ ಜಿಗಿಯುವ ವಸ್ತುಗಳನ್ನು ನೆಲದ ಮೇಲೆ ಇರಿಸುವುದು. ಉದಾ : ಉದ್ದ ಕಡ್ಡಿಗಳು, ಹಗ್ಗ ,ಸ್ಕಿಪ್ಪಿಂಗ್ ರೋಪ್<br>•ಮಕ್ಕಳು ಈ ಎಲ್ಲ ಅಡೆತಡೆಗಳನ್ನು ಜಿಗಿಯುತ್ತಾ ಆರಂಭದ ತುದಿ ಇಂದ ಕೊನೆಯ ತುದಿವರೆಗೆ ತಮ್ಮ ಸಮತೋಲನ ತಪ್ಪದ ಹಾಗೆ ಕ್ರಮಿಸಬೇಕು.<br>**ಎರಡು ಮತ್ತು ಮೂರನೇ ತರಗತಿಯ ಮಕ್ಕಳಿಗೆ ಬ್ಯಾಲೆನ್ಸಿಂಗ್ ಮತ್ತು ಸಮನ್ವಯದ ಕೌಶಲ್ಯ ಹೆಚ್ಚಿಸಲು ಗೋಣಿಚೀಲ ಓಟ ಚಟುವಟಿಕೆಯನ್ನು ಬಳಸಬಹುದು.** |
| | ಕಥಾ ಸಮಯ | ಮೊದಲ ದಿನದಉದ್ದೇಶದಂತೆಕಥಾ ಸಮಯವು ಮುಂದುವರೆಯುತ್ತದೆ.<br>*ಕಥಾ ಸಾಹಿತ್ಯ ನಿರೂಪಣೆ*<br>ಶಿಕ್ಷಕರು ಕಥೆಯನ್ನು ನಿರೂಪಿಸುವುದರಜೊತೆಗೆ ಮಕ್ಕಳ ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು<br>ಉದಾ :ಇದಾದ ಮೇಲೆ ಏನಾಗಿತ್ತು? ನಂತರಯಾರು ಬಂದರು? ಇತ್ಯಾದಿ<br>ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.<br><br>9) ಪಂಡಿತನುರಾಜನಿಗೆ ಏನು ಹೇಳಿನು?<br>10) ಮಂತ್ರಿಗಳು ಯಾವ ಸಂದರ್ಭಕ್ಕಾಗಿಕಾಯುತ್ತಿದ್ದರು?<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ. |

DRAFT 22.02.22

| | | |
|---|---|---|
| | | • ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ ಬೀಳ್ಕೊಡಿ.<br>• ಮುಂದಿನವಾರ "ಉದ್ಯಾನವನದ ಭೇಟಿಗಾಗಿ" ಯೋಜನೆ ರೂಪಿಸಿ ಮತ್ತು ಅದಕ್ಕೆ ತಕ್ಕಂತೆ ಚಟುವಟಿಕೆಗಳನ್ನು ಸಿದ್ಧಪಡಿಸಿಕೊಳ್ಳಿ.<br>• ಶಾಲೆಯಲ್ಲಿ "ಚಿಕ್ಕ ಪುಸ್ತಕ ಪ್ರದರ್ಶನ" ಆಯೋಜಿಸಿ, ಪೋಷಕರನ್ನು ಆಹ್ವಾನಿಸಲು ಯೋಜನೆ ಸಿದ್ಧಪಡಿಸಿ. |

DRAFT 22.02.22

## ವಿದ್ಯಾ ಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–4** **ದಿನ–21 (ಬುಧವಾರ)**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 21 | **ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ** 1: ಐಸ್ ಬ್ರೇಕರ್<br>1. ಮಕ್ಕಳು ಹಲ್ಲುಜ್ಜುವ ಸನ್ನೆಯನ್ನು ಮಾಡುತ್ತಾ ತರಗತಿಯನ್ನು ಪ್ರವೇಶಿಸಲಿ. "ಹಾಯ್ ಟೀಚರ್" ಎಂದು ಹೇಳಲು ಮಕ್ಕಳಿಗೆ ಸೂಚಿಸಿ.<br>2. ಮಗು ತರಗತಿಯನ್ನು ಪ್ರವೇಶಿಸುವಾಗ ಶಿಕ್ಷಕರು ಮಗುವಿಗೆ " ನಮಸ್ತೆ, ಗುಡ್ ಮಾರ್ನಿಂಗ್" ಎಂದು ಗ್ರೀಟ್ ಮಾಡುವುದು.<br>3. ನಂತರ ಪ್ರತಿ ಮಗುವಿನ ಹೆಸರನ್ನು ಕರೆಯುತ್ತಾ "ನೀವು ಇಂದು ಹೇಗಿದ್ದೀರಿ?" ಎಂದು ಕೇಳಿ ಮತ್ತು "ನಾನು ಚೆನ್ನಾಗಿದ್ದೇನೆ, ಧನ್ಯವಾದಗಳು" ಎಂದು ಉತ್ತರಿಸಲು ಅವರನ್ನು ಪ್ರೋತ್ಸಾಹಿಸಿ.<br>4. ಮಕ್ಕಳನ್ನು ಕೇಳಿ, "ಇಂದು ಯಾವ ದಿನ?" ಮತ್ತು "ಇಂದು ಬುಧವಾರ" ಎಂದು ಹೇಳುವ ಮೂಲಕ ಮಕ್ಕಳನ್ನು ಪ್ರತಿಕ್ರಿಯಿಸುವಂತೆ ಮಾಡಿ.<br>5," ಪುಟ್ಟ ಮಗು ಪುಟ್ಟ ಮಗು" ಎಂದು ಹೇಳುತ್ತಾ ಮಾರ್ಚ್‌ಪಾಸ್ ಮಾಡುತ್ತಾ ತರಗತಿಯಲ್ಲಿ ವೃತ್ತವನ್ನು ರಚಿಸಲು ಮಕ್ಕಳಿಗೆ ತಿಳಿಸಿ. ಶಿಕ್ಷಕರು ಅದನ್ನು ಆಸಕ್ತಿದಾಯಕವಾಗಿಸಲು ಡ್ರಮ್‌ಅನ್ನು ಬಳಸಬಹುದು. (ಮಕ್ಕಳ ಮೊಣಕಾಲುಗಳು ಸರಿಯಾಗಿ ಬಾಗುವುದನ್ನು ಖಚಿತಪಡಿಸಿಕೊಳ್ಳಿ, ಮತ್ತು ಅವರ ಪಾದಗಳು ನೆಲವನ್ನು ಸ್ಪರ್ಶಿಸುವುದನ್ನು ಖಚಿತ ಪಡಿಸಿಕೊಳ್ಳಿ.) |
| | **ಮಾತು ಕತೆ** | ದಿನ –15 ರ ಮಾತುಕತೆ ಚಟುವಟಿಕೆಯನ್ನು ಮಾಡಿಸಿ. |
| | **ನನ್ನ ಸಮಯ(Free Indore play)** ('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿ** | **ಸಾಮರ್ಥ್ಯ : ವಾಸನೆಯ ಪ್ರಜ್ಞೆ, ಪರಿಸರದ ಅರಿವು**<br>**ಚಟುವಟಿಕೆ...4 ವಾಸನೆ ಊಹಿಸಿ (ಗುರಿ 3)**<br>**ಉದ್ದೇಶ:– ವಾಸನೆಗಳನ್ನು ಗುರುತಿಸುವುದು.**<br>**ಅಗತ್ಯ ಸಾಮಗ್ರಿಗಳು : ಈರುಳ್ಳಿ, ಬೆಳ್ಳುಳ್ಳಿ, ಅಗರಬತ್ತಿ, ಪುದೀನಾ, ತಾಜಾ ಮತ್ತು ಕೊಳೆತ ಹಣ್ಣುಗಳು, ಬಲವಾದ ವಾಸನೆಯುಳ್ಳ ವಸ್ತುಗಳು.**<br>**ವಿಧಾನ : ಮಕ್ಕಳು ವೃತ್ತಾಕಾರದಲ್ಲಿ ಅಥವಾ ಸಾಲಿನಲ್ಲಿ ಕುಳಿತುಕೊಳ್ಳುವುದು. ಈರುಳ್ಳಿ, ಬೆಳ್ಳುಳ್ಳಿ, ಅಗರಬತ್ತಿ, ಪುದೀನಾ,** |

| | | | |
|---|---|---|---|
| | ದರ್ಶಿತ) ಚಟುವಟಿಕೆ) | | ತಾಜಾ ಮತ್ತು ಕೊಳೆತ ಹಣ್ಣುಗಳು, ಬಲವಾದ ವಾಸನೆಯುಳ್ಳ ವಸ್ತುಗಳನ್ನು ನೀಡಿ ವಾಸನೆ ಗ್ರಹಿಸಲು ಹೇಳುವುದು. ನಂತರ ಒಂದೊಂದೆ ಮಗುವಿನ ಕಣ್ಣಿಗೆ ಪಟ್ಟಿ ಕಟ್ಟಿ ನೀಡಿದ ವಸ್ತು/ಹಣ್ಣಿನ ವಾಸನೆ ಗ್ರಹಿಸಿ ಅದರ ಹೆಸರು ಹೇಳುವುದು. ಪ್ರತಿ ಮಗುವಿಗೆ ಅವಕಾಶ ಕಲ್ಪಿಸುವುದು.<br>ತರಗತಿ–2<br>ಕಣ್ಣಿಗೆ ಪಟ್ಟಿ ಕಟ್ಟಿ ವಾಸನೆಭರಿತ ಹಲವು ವಸ್ತುಗಳನ್ನು ನೀಡಿ, ಕೇವಲ ವಾಸನೆ ಆಧರಿಸಿ ಅವುಗಳ ಹೆಸರು ಹೇಳಿಸುವುದು.<br>ತರಗತಿ–3<br>ವಾಸನೆ ಗ್ರಹಿಸಿ ವಸ್ತುಗಳನ್ನು ಕೊಳೆತ ಮತ್ತು ತಾಜಾ ಹಣ್ಣು/ತರಕಾರಿಗಳನ್ನು ಗುಂಪುಮಾಡಿಸುವುದು.<br><br>* ಬಳಸಬೇಕಾದ ಅಭ್ಯಾಸ ಹಾಳೆಗಳು: I.L-15 ( 01, 02,03ನೇ ತರಗತಿ) |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | .ಸಾಮರ್ಥ್ಯ; ಸೂಕ್ಮ ಸ್ನಾಯುಗಳ ಚಲನಾ ವಿಕಾಸ.<br>ಚಟುವಟಿಕೆ; 46ಪೇಪರ್ / ಬಟ್ಟೆ ಮಡಿಚುವುದು<br>ಉದ್ದೇಶ;<br>• ಸೂಕ್ಮ ಸ್ನಾಯುಗಳ ಅಭಿವೃದ್ದಿಯಾಗುತ್ತದೆ.<br>• ಬಟ್ಟೆ/ ಪೇಪರ್ ಮಡಚುವ ಕೌಶಲವನ್ನು ತಿಳಿಯುತ್ತದೆ.<br>ಸಾಮಗ್ರಿ; ಪೇಪರ್, ಬಟ್ಟೆ.<br>ವಿಧಾನ; ಪ್ರತಿಯೊಂದು ಮಗುವಿಗೂ ಪೇಪರ್ ಶೀಟು ಕೊಟ್ಟು ಬೇರೆ ಬೇರೆ ರೀತಿಯಾಗಿ ಮಡಿಸುವಂತೆ ಹೇಳುವುದು.[ ಮೂಲ ಮಡಿಕೆಗಳಾದ– ಚೌಕ,ತ್ರಿಕೋನ ಇತ್ಯಾದಿ ಮಡಿಕೆಗಳನ್ನು ಶಿಕ್ಷಕಿ ಮಾಡಿ ತೋರಿಸುವುದು.]ಇದಲ್ಲದೇ ಬೇರೆ ಬೇರೆ ಇನ್ಯಾವ ರೀತಿಯ ಮಡಿಕೆಗಳನ್ನು ಮಾಡಬಹುದೆಂದು ಮಕ್ಕಳಿಗೆ ಪ್ರೇರೆಪಿಸುವುದು.ಶಿಕ್ಷಕರು ಒಂದೆರಡು ತಾವು ಮಾಡಿದ ವಸ್ತುಗಳನ್ನು ತೋರಿಸುವುದು.ದೋಣಿ, ಮೀನು, ಫ್ಯಾನ್ ಇತ್ಯಾದಿ]ಪೇಪರಿಗೆ ಬದಲು ಬಟ್ಟೆಯನ್ನು ಬಳಸಬಹುದು.<br>ವಿವರ; 2ಮತ್ತು 3 ನೇ ತರಗತಿಗೆ ಪೇಪರ್ ಮಡಚಿ ತಮಗಿಷ್ಟವಾದ ಮಾದರಿಯನ್ನು ತಯಾರಿಸಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ–ಭಾಷಾ ಅಭಿವೃದ್ಧಿ, ಭಾಷೆಯ ಅರ್ಥಪೂರ್ಣ ಬಳಕೆ, ಅವಧಾನ ಹಾಗೂ ಆಲಿಸುವಿಕೆ, ಪರಿಸರದ ಅರಿವು<br>ಚಟುವಟಿಕೆ–12 ನಾನು ಹುಡುಕುವೆ.(ಗುರಿ–2) ECL-13<br>ಉದ್ದೇಶ:<br>* ಸುಳುಹುಗಳನ್ನು ಆಧರಿಸಿ ವಸ್ತುಗಳನ್ನು ಗುರುತಿಸುವುದು.<br>* ಪರಿಸರದ ಅಂಶಗಲ ಬಗ್ಗೆ ಅರಿವನ್ನು ಮೂಡಿಸುವುದು.<br>* ಕಲ್ಪನಾ ಶಕ್ತಿ ಹೆಚ್ಚಿಸುವುದು.<br>ಅಗತ್ಯ ಸಾಮಗ್ರಿಗಳು–ಯಾವುದು ಇಲ್ಲ<br>ವಿಧಾನ–ವಿದ್ಯಾರ್ಥಿಗಳನ್ನು ವೃತ್ತಾಕಾರದಲ್ಲಿ ಕೂರಿಸಿ ಶಿಕ್ಷಕರು ಹೇಳುವ ವಾಕ್ಯಗಳನ್ನು ಆಲಿಸಲು ನಂತರ ಈ ಸುಳಿವುಗಳನ್ನು ಆಧರಿಸಿ ಸಂಬಂಧಿಸಿದ ವಸ್ತುವಿನ ಹೆಸರನ್ನು ಪತ್ತೆಹಚ್ಚಲು ಉದಾ–* 4 ಕಾಲುಗಳಿರುವ ಜೋರಾಗಿ ಬೊಗಳುವ ಪ್ರಾಣಿಯನ್ನು ನಾನು ಹುಡುಕುವೆ ಎಂದು ಹೇಳಿದಾಗ ಮಕ್ಕಳು ನಾಯಿ ಎಂದು ಊಹಿಸಿ ಹೇಳುವುದು<br>* ಕರಿಹಲಗೆಯ ಮೇಲೆ ಬರೆಯಲು ಬಳಸುವ ಬಿಳಿ ಬಣ್ಣದ ವಸ್ತುವನ್ನು ನಾನು ಹುಡುಕುವೆ.ಎಂದು ಹೇಳಿದಾಗ ಮಕ್ಕಳು ಸೀಮೆ ಸುಣ್ಣ ಎಂದು ಊಹಿಸಿ ಹೇಳುವುದು ಇತ್ಯಾದಿ.<br>ಮಕ್ಕಳ ಸುತ್ತಲಿನ ಪರಿಸರದಲ್ಲಿ ಕಂಡುಬರುವ ವಸ್ತುಗಳ ಹೆಸರನ್ನೇ ಈ ಚಟುವಟಿಕೆಗಳಲ್ಲಿ ಬಳಸಿಕೊಳ್ಳುವುದು. ಮಕ್ಕಳು ಚಟುವಟಿಕೆಗೆ ಪರಿಚಿತರಾದ ನಂತರ ಇತರ ಮಕ್ಕಳು ವಸ್ತುವನ್ನು ಗುರುತಿಸಲು ಸುಳಿವುಗಳನ್ನು ನೀಡುವ ಮೂಲಕ ಸಹಾಯ ಮಾಡಲು ಉತ್ತೇಜಿಸುವುದು.<br>ತರಗತಿವಾರು ವಿವರ: 2 ತರಗತಿಯ ಮಕ್ಕಳು ಹೆಚ್ಚು ಪ್ರಶ್ನೆ ಅಪೇಕ್ಷಿಸುವ ವಸ್ತುಗಳನ್ನು ಊಹಿಸುವುದು. 3 ನೇ ತರಗತಿಯ ಮಕ್ಕಳು ತಾವೇ ಪ್ರಶ್ನೆಗಳನ್ನು ರಚಿಸಿ ವಸ್ತುಗಳನ್ನು ಊಹಿಸಲು ಹೇಳುವುದು. |
| | | ಅರ್ಥ ಗ್ರಹಿಕೆಯೊಂದಿಗಿನ | ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಅವಧಾನ ಮತ್ತು ಆಲಿಸುವಿಕೆ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ 21 ಪದ ಹುಡುಕು (ಗುರಿ–2)<br>ಉದ್ದೇಶ : ಕಥೆಗಳಲ್ಲಿಯ ಪದಗಳನ್ನು ಅದರಲ್ಲಿಯ ಧ್ವನಿಗಳನ್ನು ಗುರುತಿಸುವರು.<br>ಅಗತ್ಯ ಸಾಮಗ್ರಿಗಳು: ಮಿಂಚು ಪಟ್ಟಿ, ಕಪ್ಪು ಹಲಗೆ. |

| | | | |
|---|---|---|---|
| | | ಓದು | ವಿಧಾನ: ಶಿಕ್ಷಕರು ಯಾವುದಾದರೂ ಒಂದು ಪರಿಚಿತ ಕಥೆಯನ್ನು ಹೇಳುವುದು. ಅದರಲ್ಲಿ ಬರುವ ಪ್ರಮುಖ ಪದಗಳನ್ನು ಕಪ್ಪು ಹಲಗೆಯ ಮೇಲೆ / ಮಿಂಚು ಪಟ್ಟಿಯ ಮೇಲೆ ಬರೆದು, ಪ್ರದರ್ಶಿಸಿ ಒಂದು ವಾರದವರೆಗೆ ಮಗು ಅವುಗಳನ್ನು ನೋಡಲು ಅವಕಾಶ ಕಲ್ಪಿಸುವುದು. ಆ ಕಥೆ ಹೇಳುವಾಗ ಅಥವಾ ಬೇರೆ ಕಥೆ ಹೇಳುವಾಗ ಆ ಪದಗಳು ಬಂದಾಗಲೆಲ್ಲಾ ಪದ/ ಧ್ವನಿಗಳನ್ನು ಗುರುತಿಸಿ ತೋರಿಸುವುದು.<br>1 ಮತ್ತು 3ನೇ ತರಗತಿ :ಶಿಕ್ಷಕರು ಮಕ್ಕಳಿಗೆ ಕಪ್ಪು ಹಲಗೆ ಮೇಲೆ ಬರೆದಿರುವ ಪದಗಳನ್ನು ಕಥೆ ಪುಸ್ತಕ/ಕಾರ್ಡ್ ನಲ್ಲಿ ಗುರುತಿಸಲು ತಿಳಿಸುವುದು.<br>ಗಮನಿಸಿ : ಇದೇ ಕಥೆಯು ದಿನ 34ರಲ್ಲಿ ಪುನರಾವರ್ತನೆಯಾಗುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಸೂಕ್ಷ್ಮ ಸ್ನಾಯು ಕೌಶಲಗಳ ಅಭಿವೃದ್ಧಿ, ಉದ್ದೇಶಿತ ಬರವಣಿಗೆ<br>ಚಟುವಟಿಕೆ: 37 ಚಿತ್ರಿಸುವುದು ಮತ್ತು ಹೆಸರಿಸುವುದು. (ಗುರಿ–2) **ECW-3**<br>ಉದ್ದೇಶಗಳು:<br>• ಸೂಕ್ಷ್ಮ ಸ್ನಾಯು ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಉದ್ದೇಶಿತ ಬರವಣಿಗೆಗೆ ಅಣಿಗೊಳಿಸುವುದು.<br>• ಆಯ್ಕೆಯ ಚಿತ್ರ ಬಿಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ , ಕ್ರೇಯಾನ್ಸ್, ಪೆನ್ಸಿಲ್<br>ವಿಧಾನ : ಮಕ್ಕಳು ತಮ್ಮ ಆಯ್ಕೆಯ ವಾಹನಗಳ ಚಿತ್ರ ಬಿಡಿಸುವುದು.ಬರೆದ ಚಿತ್ರಕ್ಕೆ ಬಣ್ಣ ತುಂಬಿ ಹೆಸರಿಸಲು ತಿಳಿಸುವುದು<br>ತರಗತಿವಾರು ವಿವರ: 2 ಮತ್ತು 3ನೇ ತರಗತಿಯ ಮಕ್ಕಳು ತಮ್ಮ ಆಯ್ಕೆಯ ವಾಹನಗಳ ಚಿತ್ರವನ್ನು ರಚಿಸಿ, ಹೆಸರಿಸಲು ತಿಳಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | ಹೊರಾಂಗಣ ಆಟಗಳು | Day 21<br>ಚಟುವಟಿಕೆ –23 ಗುರಿ ಇಡುವುದು. ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ.<br>ಬೇಕಾಗುವ ಸಾಮಗ್ರಿ: ದೊಡ್ಡ ಚೆಂಡು, ಪೇಪರ್ ಲೋಟಗಳು<br>ವಿಧಾನ:<br>• ಪೇಪರ್ ಲೋಟಗಳನ್ನು ಬಳಸಿ ಪಿರಮಿಡ್ ರಚಿಸುವುದು .<br>• ಮಕ್ಕಳಿಗೆ ಚೆಂಡನ್ನು ಉರುಳಿಸಿ ದೂರದಲ್ಲಿರುವ ಪಿರಮಿಡ್ ಬೀಳಿಸಲು ಸೂಚಿಸುವುದು.<br>• **ಎರಡು ಮತ್ತು ಮೂರನೇ ತರಗತಿಯ ಮಕ್ಕಳಿಗೆ ಪಿರಮಿಡ್ ನ ದೂರವನ್ನು ಹೆಚ್ಚಿಸುತ ಹೋಗುವುದು .** | |
| | ಕಥಾ ಸಮಯ | ಶೀರ್ಷಿಕೆ :ತೆನಾಲಿರಾಮಕೃಷ್ಣ ಮತ್ತು ಮಡಕೆ<br>ಸಾಮಗ್ರಿಗಳು :ಚಿತ್ರಕಥೆ<br>ಉದ್ದೇಶ :<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವವುಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>ವಿಧಾನ :<br>***ಚಿತ್ರಕಥೆ ನಿರೂಪಣೆ***<br>ಚಿತ್ರಕಥೆಯನ್ನು ಪ್ರದರ್ಶಿಸುತ್ತ ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು. | |

DRAFT 22.02.22

| | | |
|---|---|---|
| | | (ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ ಬೀಳ್ಕೊಡಿ.<br>• ಮುಂದಿನವಾರ "ಉದ್ಯಾನವನದ ಭೇಟಿಗಾಗಿ" ಯೋಜನೆ ರೂಪಿಸಿ ಮತ್ತು ಅದಕ್ಕೆ ತಕ್ಕಂತೆ ಚಟುವಟಿಕೆಗಳನ್ನು ಸಿದ್ಧಪಡಿಸಿಕೊಳ್ಳಿ.<br>• ಶಾಲೆಯಲ್ಲಿ "ಚಿಕ್ಕ ಪುಸ್ತಕ ಪ್ರದರ್ಶನ" ಆಯೋಜಿಸಿ, ಪೋಷಕರನ್ನು ಆಹ್ವಾನಿಸಲು ಯೋಜನೆ ಸಿದ್ಧಪಡಿಸಿ. |

## ವಿದ್ಯಾ ಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–4** **ದಿನ–22 (ಗುರುವಾರ)**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 22 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1**<br>ದಿನ–21 ರಲ್ಲಿಉಲ್ಲೇಖಿಸಲಾದ ಶುಭಾಶಯ ವಿನಿಮಯ ನೀಡಲಾದ ಚಟುವಟಿಕೆ ಪುನರಾವರ್ತಿಸಿ<br>**ಚಟುವಟಿಕೆ 2**<br>• ಮಕ್ಕಳನ್ನು ವೃತ್ತದಲ್ಲಿ ನಿಲ್ಲುವಂತೆ ಮಾಡಿ ಮತ್ತು ಸ್ಪಷ್ಟವಾಗಿ ಸೂಚನೆಗಳನ್ನು ನೀಡಿ.<br>• ಶಿಕ್ಷಕರು "ಅಜ್ಜಿ ನಿಮ್ಮ ಹಲ್ಲನ್ನುಜ್ಜಿ ಅನ್ನುತಿದ್ದಾಳೆ " ಎಂದಾಗ , ಮಕ್ಕಳು ಹಲ್ಲುಜ್ಜುವ ಹಾಗೆ ವರ್ತಿಸಬೇಕು .<br>• ಶಿಕ್ಷಕರು "ಅಜ್ಜಿ ಹೇಳ್ತಾಳೆ " ಅಂತ ಹೇಳದೆ ಕೇವಲ "ಕೂದಲನ್ನು ಬಾಚಿ " ಅಥವಾ" ಹಲ್ಲನುಜ್ಜಿ" ಅಂದಾಗ ಮಕ್ಕಳು ಅದನ್ನು ಅನುಪಾಲಿಸಬಾರದು. ಅನುಪಾಲಿಸಿದರೆ ಚಟುವಟಿಕೆಯಿಂದ ಹೊರಗಾಗ್ತಾರೆ |
| | ಮಾತು ಕತೆ | ದಿನ –16 ರ ಮಾತುಕತೆ ಚಟುವಟಿಕೆಯನ್ನು ಮಾಡಿಸಿ. |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | **ಸಾಮರ್ಥ್ಯ: ಧ್ವನಿಯ ಅರಿಯು, ಇತರರೊಂದಿಗೆ ಸಂವೇದನಾ ಶೀಲತೆ, ಅನುಭೂತಿ**<br>**ಚಟುವಟಿಕೆ...3 ಧ್ವನಿಯನ್ನು ಊಹಿಸು.**<br>**ಉದ್ದೇಶ:– ವಿಭಿನ್ನ ಶಬ್ಧಗಳನ್ನು ಊಹಿಸಿ ಹೇಳುವುದು.**<br>**ಅಗತ್ಯ ಸಾಮಗ್ರಿಗಳು : ಸ್ಥಳೀಯವಾಗಿ ಲಭ್ಯವಿರುವ ಸಂಗೀತ ಸಾಧನಗಳು.**<br>**ವಿಧಾನ; ಮಕ್ಕಳನ್ನು ಹೊರಾಂಗಣಕ್ಕೆ ಕರೆದುಕೊಂಡು ಹೋಗುವುದು. ಮಕ್ಕಳಿಗೆ ಅವರ ಕಣ್ಣುಗಳನ್ನು ಮುಚ್ಚಿಕೊಳ್ಳಲು ಹೇಳುವುದು. ವಿವಿಧ ರೀತಿಯ ಸಾಧನ/ವಾದ್ಯಗಳನ್ನು ನುಡಿಸುವ ಮೂಲಕ ವಿಭಿನ್ನ ಶಬ್ದಗಳನ್ನು ಮಾಡುವುದು. ಅವರು ಕಣ್ಣುಗಳನ್ನು ಮುಚ್ಚಿಕೊಂಡೆ ಕೇಳಿಸಿಕೊಂಡ ಶಬ್ಧಗಳನ್ನು ಗುರುತಿಸಿ ಹೇಳಲು ಪ್ರೋತ್ಸಾಹಿಸುವುದು. ನಂತರ ಮಕ್ಕಳ ಅನುಭವಗಳನ್ನು ಚರ್ಚಿಸುವುದು. ಇದರ ಆಧಾರದಲ್ಲಿ ಕೆಲವು ಜನರು ಕಡಿಮೆ ಅಥವಾ ಯಾವುದೇ ಶಬ್ಧಜ್ಞಾನ ಹೊಂದಿರುವುದಿಲ್ಲ. ಇನ್ನೂ ಕೆಲವರು ತೀಕ್ಷ್ಣವಾದ ಶಬ್ದಜ್ಞಾನವನ್ನು ಹೊಂದಿರುತ್ತಾರೆ ಎಂಬ ಅಂಶವನ್ನು ಅವರಿಗೆ ತಿಳಿಸುತ್ತಾ ಅಂತಹವರ ಬಗ್ಗೆ ಅನುಭೂತಿ ಹೊಂದಲು ನೆರವಾಗುವುದು. ತಮ್ಮ ಕಿವಿಗಳ ಆರೈಕೆಯನ್ನು ಹೇಗೆ ಮಾಡಿಕೊಳ್ಳಬಹುದು ಎಂಬುದನ್ನು ಮಕ್ಕಳೊಂದಿಗೆ ಚರ್ಚಿಸುವುದು .ಅವರು ಸ್ನಾನದ ನಂತರ ತಕ್ಷಣವೇ ತಮ್ಮ ಕಿವಿಗಳನ್ನು ಸ್ವಚ್ಛಗೊಳಿಸಲು ತಮ್ಮ ಪೋಷಕರ ಸಹಾಯವನ್ನು ಪಡೆಯಬಹುದು ಮತ್ತು ಸ್ವಚ್ಛಗೊಳಿಸಲು ಕಿವಿಗಳಲ್ಲಿ** |

DRAFT 2022

| | | | |
|---|---|---|---|
| | | | ಯಾವುದೇ ಚೂಪಾದ/ಅಪಾಯಕಾರಿ ವಸ್ತುಗಳನ್ನು ಬಳಸಬಾರದು ಎಂಬ ಅರಿವನ್ನು ಮೂಡಿಸುವುದು.<br>**ತರಗತಿ–2**<br>**1. ಹಲವು ರೀತಿಯ ಶಬ್ದಗಳನ್ನು ಗುರುತಿಸಿ ಹೇಳಲು ತಿಳಿಸುವುದು.**<br>**ತರಗತಿ–3**<br>**1 ಶಬ್ದಗಳನು ಆಲಿಸಿ ವಾದ್ಯಗಳ ಹೆಸರುಗಳನ್ನು ಪಟ್ಟಿ ಮಾಡಿಸುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | .ಸಾಮರ್ಥ್ಯ; ಸೂಕ್ಷ್ಮ ಸ್ನಾಯುಗಳ ಚಲನಾ ಶಕ್ತಿಯ ವಿಕಾಸ ಮತ್ತು ಸೃಜನಶೀಲತೆಯ ಅಭಿವೃದ್ಧಿ.<br>ಚಟುವಟಿಕೆ; 52ಸ್ಲೇಟಿನ ಮೇಲೆ ಅಥವಾ ಬೋರ್ಡಿನ ಮೇಲೆ ಚಿತ್ರ ಬಿಡಿಸುವುದು<br>ಉದ್ದೇಶ;<br>• ಸ್ಲೇಟ್ ಮೇಲೆ ಬಳಪ ಹಿಡಿಯುವ ಕೌಶಲ ಬೆಳೆಯುತ್ತದೆ.<br>• ಬರೆಯುವ ಮತ್ತು ಚಿತ್ರ ಬಿಡಿಸಿ ಬಣ್ಣ ತುಂಬುವ ಕೌಶಲ ಬೆಳೆಯುತ್ತದೆ.<br>ಸಾಮಗ್ರಿ; ಸ್ಲೇಟ್/ ಬೋರ್ಡ್, ಚಾಕಪೀಸ್.<br>ವಿಧಾನ; ಬೋರ್ಡ ಮತ್ತು ಬಣ್ಣದ ಚಾಕ್ಪೀಸ್ ಕೊಟ್ಟು ಬೇರೆ ಬೇರೆ ಆಕಾರಗಳು ಮತ್ತು ಚಿತ್ರವನ್ನು ಬರೆಯುವಂತೆ ಹೇಳುವುದು.ಅವರಿಗಿಷ್ಟಬಂದಂತೆ ಚಿತ್ರಗಳನ್ನು ಬರೆಯಬಹುದು.ಶಿಕ್ಷಕರು ತಮ್ಮ ಅಭಿಪ್ರಾಯದಂತೆ ಯಾವುದೇ ಚಿತ್ರ ಬರೆಯಲು ಒತ್ತಡ ಹೇರಬಾರದು. ಮಕ್ಕಳು ತಮಗಿಷ್ಟಬಂದಂತೆ ಚಿತ್ರ ಬರೆದು, ಅವರಿಷ್ಟದ ಬಣ್ಣ ತುಂಬಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ತಮ್ಮ ವಾಲ್ ಸ್ಲೇಟ್ ಗಳಲ್ಲಿ ತಮಗಿಷ್ಟವಾದ ಚಿತ್ರ ಬರೆದು ಬಣ್ಣ ತುಂಬಲು ಹೇಳುವುದು.<br>*** ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-5 ( 01, 02,03ನೇ ತರಗತಿ)** |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ:– ಧ್ವನಿ ಸಂಕೇತಗಳ ಅರಿವು, ಅಕ್ಷರ ಶಬ್ದ ಸಹ ಸಂಬಂಧ.**<br>**ಚಟುವಟಿಕೆ–20 ಹೆಸರಿನ ಆರಂಭಿಕ ಅಕ್ಷರದಿಂದ ವಸ್ತುವನ್ನು ಪತ್ತೆ ಹಚ್ಚುವುದು (ಗುರಿ–2) ECL-2 (10 ನೇ ದಿನದಿಂದ ಮುಂದುವರೆದಿದೆ.)**<br>**ಉದ್ದೇಶಗಳು:–**<br>*** ಧ್ವನಿ ಸಂಕೇತಗಳ ಅರಿವು ಮೂಡಿಸುವುದು.**<br>*** ಅಕ್ಷರಗಳು ಮತ್ತು ಪದಗಳ ನಡುವಿನ ಸಹಸಂಬಂಧವನ್ನು ಗ್ರಹಿಸುವುದು.**<br>*** ಪದಗಳನ್ನು ಗ್ರಹಿಸಿ ಗುರುತಿಸುವುದು.**<br>*** ಅಂತ್ಯಾಕ್ಷರಿ ಪದಗಳನ್ನು ಬರೆಯುವುದು.**<br>**ಅಗತ್ಯ ಸಾಮಗ್ರಿಗಳು– ಇಲ್ಲ**<br>**ಸಲಹಾತ್ಮಕ ವಿಷಯ : ಪರಿಸರದ ವಸ್ತುಗಳು**<br>**ವಿಧಾನ:– ಸುಳಿವುಗಳ ಮೂಲಕ ತರಗತಿ ಹೊರಗಿನ ಪರಿಸರದಲ್ಲಿರುವ ವಸ್ತುಗಳ ಹೆಸರನ್ನು ಊಹಿಸಿ ಹೇಳುವ ಚಟುವಟಿಕೆಯನ್ನು ಆಯೋಜಿಸಿ. ಉದಾಹರಣೆಗಾಗಿ ಶಿಕ್ಷಕರು 'ನನ್ನ ಮನಸ್ಸಿನಲ್ಲಿರುವ ವಸ್ತು ಹಸಿರು ಬಣ್ಣವನ್ನು ಹೊಂದಿದ್ದು ಅದರ ಹೆಸರು ಎ ಅಕ್ಷರದಿಂದ ಪ್ರಾರಂಭವಾಗುತ್ತದೆ ಎಂದು ಹೇಳಿದಾಗ ಮಕ್ಕಳು ಎಲೆ ಎಂದು ಗುರುತಿಸುವುದು. ಹೀಗೆಯೇ ವಿವಿಧ ಉದಾಹರಣೆಗಳನ್ನು ನೀಡುವುದು.**<br>**ತರಗತಿವಾರು ವಿವರ: 2ನೇ ಮತ್ತು 3ನೇ ತರಗತಿ ಮಕ್ಕಳಿಗೆ ಪದಗಳ ಮುಂದುವರೆದ ಭಾಗವಾಗಿ ವಾಕ್ಯಗಳನ್ನು ರಚಿಸುವಂತೆ ಹಾಗೂ ಸರಳ ವಾಕ್ಯಗುಚ್ಛಗಳನ್ನು ರಚಿಸುವಂತೆ ಚಟುವಟಿಕೆಗಳನ್ನು ಮುಂದುವರೆಸುವುದು..( 40 ನೇ ದಿನಕ್ಕೆ ಮುಂದುವರೆದಿದೆ)**<br>**ಅಭ್ಯಾಸದ ಹಾಳೆಗಳು: EC-5 (ತರಗತಿ 1, 2, 3)** |
| | | **ಅರ್ಥಗ್ರಹಿಕೆಂಯೊಂದಿಗಿನ ಓದು** | **ಸಾಮರ್ಥ್ಯ: ಪದ ಗುರ್ತಿಸುವಿಕೆ, ಮುದ್ರಣದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತು ಅಭಿವೃದ್ಧಿ.**<br>**ಚಟುವಟಿಕೆ 11 ಸಿ ನನ್ನ ಮೊದಲ ಪದ ಪೆಟ್ಟಿಗೆ (ಗುರಿ–2)**<br>**ಉದ್ದೇಶ : ಪರಿಚಿತ ವಸ್ತು ವಿಷಗಳನ್ನು ಆಧರಿಸಿ ಪದಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸುವರು ಮತ್ತು ಚಿತ್ರಗ್ರಹಿಸಿ ಪದಗಳನ್ನು ಓದುವರು.**<br>**ಅಗತ್ಯ ಸಾಮಗ್ರಿಗಳು: ಮಿಂಚು ಪಟ್ಟಿ, ನೋಟ್ ಪುಸ್ತಕ, ಚಿತ್ರ ಪಟ** |

DRAFT 2022

ವಿಧಾನ: ಮಕ್ಕಳು ಹಳೆಯ ನಿಯತಕಾಲಿಕಗಳಿಂದ ಹಾಗೂ ಕಥೆ ಪುಸ್ತಕಗಳಿಂದ 3–4 ಅಕ್ಷರಗಳ ಪದಗಳನ್ನು ಕತ್ತರಿಸಿ ಒಂದು ಪೆಟ್ಟಿಗೆಯಲ್ಲಿ ಸಂಗ್ರಹಿಸುವುದು. ನಂತರ ಅವುಗಳನ್ನು ಕಾಗದದ ಮೇಲೆ ಅಂಟಿಸಿ, ಪ್ರತಿ ಪದಕ್ಕೂ ಚಿತ್ರ ಬಿಡಿಸಲು ಪ್ರಯತ್ನಿಸುವುದು.

2 ಮತ್ತು 3ನೇ ತರಗತಿ : ಮಕ್ಕಳಿಗೆ ಸರಳ ವಾಕ್ಯಗಳನ್ನು ಬರೆದು ಒಂದು ಪೆಟ್ಟಿಗೆಯಲ್ಲಿ ಸಂಗ್ರಹಿಸುವುದು ನಂತರ ಅವುಗಳನ್ನು ಕಾಗದದ ಮೇಲೆ ಅಂಟಿಸಿ ವಾಕ್ಯಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಲು ಸೂಚಿಸುವುದು.

**ಉದ್ದೇಶಿತ ಬರಹ**

ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ, ಆಲಿಸಿ ಅರ್ಥ ಮಾಡಿಕೊಳ್ಳುವುದು, ಪರಿಸರದ ಅರಿವು.

ಚಟುವಟಿಕೆ....33 ಪಟ್ಟಿ ಮಾಡೋಣ (ಗುರಿ–2) **ECW-10**

ಉದ್ದೇಶಗಳು:

- ಉದ್ದೇಶಕ್ಕನುಸಾರವಾಗಿ ಬರವಣಿಗೆ ಮಾಡಲು ಅವಕಾಶ ನೀಡುವುದು.
- ಸೃಜನಶೀಲ ಚಿಂತನೆಯನ್ನು ಬೆಳೆಸುವುದು.
- ಪರಿಸರದ ಅರಿವು ಮೂಡಿಸುವುದು.
- ಪದಸಂಪತ್ತನ್ನು ಹೆಚ್ಚಿಸುವುದು.
- ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.

ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಕಾಗದ, ಕ್ರೇಯಾನ್ಸ್,

ವಿಧಾನ : ಮಕ್ಕಳ ಪದಸಂಪತ್ತನ್ನು ಹೆಚ್ಚಿಸಲು ಹಾಗೂ ಉದ್ದೇಶಿತ ಬರವಣಿಗೆಗೆ ಅವಕಾಶ ಕಲ್ಪಿಸಲು ಮಕ್ಕಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಲು ತಿಳಿಸಿ.

ಸೂಚಿತ ವಿಷಯ: ಬಣ್ಣಗಳು

ಇಡೀ ತರಗತಿಯನ್ನು ಒಳಗೊಂಡಂತೆ ಒಂದು ಚಾರ್ಟ್‌ಪೇಪರ್‌ನಲ್ಲಿ ಪಟ್ಟಿ ಮಾಡುವ ಚಟುವಟಿಕೆಯನ್ನು ಆಯೋಜಿಸಬಹುದು. ಈ ಚಾರ್ಟ್‌ನಲ್ಲಿ ಬಳಸಬಹುದಾದ ಸಾಮಾನ್ಯ ಪದಗಳ ಪಟ್ಟಿಯನ್ನು ಶಿಕ್ಷಕರೇ ಸಿದ್ಧಪಡಿಸಿ, ಮಕ್ಕಳು ಇವುಗಳನ್ನು ನೋಡಲು ಹಾಗೂ ಓದಲು ಸಹಾಯಕವಾಗುವಂತೆ ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.

ತರಗತಿವಾರು ವಿವರ: 1ನೇ ತರಗತಿಯವರು ತಯಾರಿಸಿರುವ ಪಟ್ಟಿಗೆ 2ನೇ ತರಗತಿಯ ಮಕ್ಕಳು ಹೆಚ್ಚುವರಿಯಾಗಿ ಪದಗಳನ್ನು ಸೇರಿಸಲಿ. 3ನೇ ತರಗತಿಯವರು ಪಟ್ಟಿಯಲ್ಲಿರುವ ಪದಗಳಿಗೆ ಸ್ವಂತ ವಾಕ್ಯಗಳನ್ನು ರಚಿಸಲು ಅವಕಾಶ ಮಾಡಿಕೊಡಿ.

ಬರವಣಿಗೆಯ ಮಾದರಿ:

ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.

ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.

**ಹೊರಾಂಗಣ ಆಟಗಳು**

Day 22

ಚಟುವಟಿಕೆ –29 ರೋಲಿಂಗ್(ಉರುಳಿಸು) ಗುರಿ–1



ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ

ಬೇಕಾಗುವ ಸಾಮಗ್ರಿ: ರಿಂಗ್

ವಿಧಾನ:
- ನೆಲದ ಮೇಲೆ ನೇರ ಗೆರೆಯನ್ನು ಎಳೆಯಿರಿ.
- ಮಕ್ಕಳು ಸರದಿಯಲ್ಲಿ ರಿಂಗನ್ನು ಕೈಯಲ್ಲೇ ಹಿಡಿದುಕೊಂಡು ಆ ಗೆರೆಯ ಮೇಲೆ ಉರುಳಿಸಲು ಸೂಚಿಸುವುದು.

**ಎರಡು ಮತ್ತು ಮೂರನೇ ತರಗತಿಯ ಮಕ್ಕಳಿಗೆ ವಕ್ರ ಗೆರೆಯ ಮೇಲೆ ರಿಂಗನ್ನು ಉರುಳಿಸಲು ಸೂಚಿಸುವುದು.**

**ಕಥಾ ಸಮಯ**

**ಶೀರ್ಷಿಕೆ** :ತೆನಾಲಿರಾಮಕೃಷ್ಣ ಮತ್ತು ಮಡಕೆ

**ಸಾಮಗ್ರಿಗಳು** :ಕಡ್ಡಿ ಚಿತ್ರಗಳು

**ಉದ್ದೇಶ :**

- ಆಲಿಸುವ ಸಾಮರ್ಥ್ಯ ಬೆಳೆಸುವುದು.
- ಊಹಿಸುವ ಕೌಶಲವನ್ನು ಹೆಚ್ಚಿಸುವುದು

DRAFT 2022.22

| | | |
|---|---|---|
| | | ➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>➢ **ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವ ಆಸಕ್ತಿಯನ್ನು ಬೆಳೆಸುವುದು.**<br>➢ **ಪ್ರಶ್ನಿಸುವ ಮನೋಭಾವಉಂಟುಮಾಡುವುದು.**<br>**ವಿಧಾನ :**<br>***ಕಡ್ಡಿ ಚಿತ್ರಗಳು***<br>ಕಡ್ಡಿಚಿತ್ರಗಳನ್ನು ಬಳಸಿ ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು. ಹಿರಿಯ ವಿದ್ಯಾರ್ಥಿಗಳನ್ನು ಬಳಸಿಕೊಂಡು ಪಾತ್ರಗಳನ್ನು ಹಂಚಿಅಭಿನಯಿಸಲು ಸಹಕರಿಸಿ.<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>1) **ರಾಜನುತೆನಾಲಿ ರಾಮನಿಗೆ ಮುಖ ತೋರಿಸಬೇಡ ಹೊರಟು ಹೋಗು ಎಂದು ಏಕೆ ಹೇಳಿದನು?**<br>2) **ತೆನಾಲಿ ರಾಮನು ಹೂಡಿದಉಪಾಯವೇನು?**<br>(ಕಥೆಯನ್ನು ಆನಂದಿಸುವುದರಜೊತೆಗೆ, ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ ಬೀಳ್ಕೊಡಿ.<br>• ಮುಂದಿನವಾರ "ಉದ್ಯಾನವನದ ಭೇಟಿಗಾಗಿ" ಯೋಜನೆ ರೂಪಿಸಿ ಮತ್ತು ಅದಕ್ಕೆ ತಕ್ಕಂತೆ ಚಟುವಟಿಕೆಗಳನ್ನು ಸಿದ್ಧಪಡಿಸಿಕೊಳ್ಳಿ.<br>• ಶಾಲೆಯಲ್ಲಿ "ಚಿಕ್ಕ ಪುಸ್ತಕ ಪ್ರದರ್ಶನ" ಆಯೋಜಿಸಿ, ಪೋಷಕರನ್ನು ಆಹ್ವಾನಿಸಲು ಯೋಜನೆ ಸಿದ್ಧಪಡಿಸಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–4** **ದಿನ–23 (ಶುಕ್ರವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| **23** | **ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1**<br>ದಿನ–21 ರಲ್ಲಿ ಉಲ್ಲೇಖಿಸಲಾದ ಶುಭಾಶಯ ವಿನಿಮಯ ನೀಡಲಾದ ಚಟುವಟಿಕೆ ಪುನರಾವರ್ತಿಸಿ<br>**ಚಟುವಟಿಕೆ 2:** ಬಲೂನ್ ಟೈಮ್<br><br>ವಿಧಾನ:<br>1. ಮಕ್ಕಳನ್ನು 4 ಅಥವಾ 5 ಗುಂಪುಗಳಾಗಿ ವಿಂಗಡಿಸಿ.<br>2. ಪ್ರತಿ ಗುಂಪಿಗೆ ಒಂದು ಬಲೂನ್ ಅನ್ನು ಒದಗಿಸಿ.<br>3. ಬಲೂನನ್ನು ಊದಿ ಗಾಳಿಯಲ್ಲಿ ಎಸೆಯಲು ಹೇಳಿ.<br>4. ಬಲೂನ್ ನೆಲವನ್ನು ಮುಟ್ಟಬಾರದು ಎಂದು ಮಕ್ಕಳಿಗೆ ಸೂಚಿಸಿ.<br>5. ಬಲೂನ್ ಅನ್ನು ತೇಲುವಂತೆ ಇರಿಸಿಕೊಳ್ಳಲು ಮಕ್ಕಳನ್ನು ಸೂಚಿಸಿ.<br>6. ಬಲೂನ್ ನೆಲವನ್ನು ಮುಟ್ಟಿದರೆ ಆ ಗುಂಪು ಆಟದಿಂದ ಔಟ್ ಆಗ್ತಾರೆ. |
| | **ಮಾತು ಕತೆ *(ಶಿಕ್ಷಕರು – ಮಕ್ಕಳೊಂದಿಗಿನ*** | **ಚಟುವಟಿಕೆ–1: ಊಹಿಸುವ ಆಟ (ಗುರಿ–1)**<br>**ಸಾಮರ್ಥ್ಯ:** ಸ್ವಯಂ ಪ್ರಜ್ಞೆ, ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಗಳ ಅಭಿವೃದ್ಧಿ, ಆಲಿಸುವುದು ಮತ್ತು ಮಾತನಾಡುವುದು.<br>**ಉದ್ದೇಶ:** ಇಷ್ಟದ ವಿಷಯದ ಕುರಿತು ಮಾತನಾಡುವುದು |

DRAFT 22.02.22

| | | |
|---|---|---|
| | *ಬೆಳಗಿನ ಸಾಮೂಹಿಕ ಚಟುವಟಿಕೆ)* | **ಸಾಮಗ್ರಿ:** ಸ್ಥಳೀಯ ಆಹಾರ ಪದಾರ್ಥಗಳ ಫ್ಲ್ಯಾಶ್‌ಕಾರ್ಡ್ ಗಳು / ಚಿತ್ರಕಾರ್ಡ್ ಗಳು, ಲಕೋಟೆಗಳು.<br>**ವಿಧಾನ:**<br>1. ಆಹಾರ ಪದಾರ್ಥಗಳ ಫ್ಲ್ಯಾಶ್‌ಕಾರ್ಡ್‌ಅನ್ನುಎತ್ತಿ ಹಿಡಿದುಕೊಳ್ಳಿ ಮತ್ತು ಇಂದು ನಾವು ನಮ್ಮ ನೆಚ್ಚಿನಆಹಾರ ಪದಾರ್ಥಗಳ ಬಗ್ಗೆ ಮಾತನಾಡುತ್ತೇವೆ ಎಂದು ಹೇಳಿ.<br>2. ಆಹಾರ ಪದಾರ್ಥಗಳ ಚಿತ್ರಕಾರ್ಡ್ ಗಳನ್ನು ಲಕೋಟೆಯಲ್ಲಿ ಹಾಕಿ. ನಿಧಾನವಾಗಿ ಚಿತ್ರಕಾರ್ಡ್ ಅನ್ನು ಸ್ವಲ್ಪ ಭಾಗವೇ ಕಾಣುವಂತೆ ಎಳೆಯಿರಿ ಮತ್ತು ಅದರ ಹೆಸರನ್ನು ಊಹಿಸಲು ಮಕ್ಕಳಿಗೆ ಹೇಳಿ.<br>3. ಮಕ್ಕಳ ಊಹೆಗಳನ್ನು ಸ್ವೀಕರಿಸಿ ಮತ್ತು "ಒಳ್ಳೆಯ ಊಹೆ, /ಹೌದು, ಇರಬಹುದು!" ಎಂದು ಹೇಳುವ ಮೂಲಕ ಪ್ರೋತ್ಸಾಹಿಸಿ.<br>4. ಕ್ರಮೇಣ ಚಿತ್ರವನ್ನು ಸಂಪೂರ್ಣವಾಗಿ ತೋರಿಸಿ. ಮಕ್ಕಳು ಅದನ್ನು ಗುರುತಿಸುತ್ತಿದ್ದಂತೆ, ಅದರ ಹೆಸರನ್ನು ಹೇಳಿ ಮತ್ತು ಮಕ್ಕಳನ್ನು ಕೇಳಿ, "ನಿಮಗೆ ಈ ಆಹಾರ ಇಷ್ಟವೇ? (ಐಸ್‌ಕ್ರೀಮ್/ದೋಸಾ-ಚಟ್ನಿ/ ವಡಾ/ಅಕ್ಕಿ ಇತ್ಯಾದಿ)<br>5. "ಹೌದು, ನಾನು ಇಷ್ಟಪಡುತ್ತೇನೆ..... /ಇಲ್ಲ ನನಗೆ ಇಷ್ಟವಿಲ್ಲ ......" ಎಂದು ಹೇಳುವ ಮೂಲಕ ಮಕ್ಕಳು ತಮ್ಮಇಷ್ಟ/ಇಷ್ಟ ಇಲ್ಲದವುಗಳನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಿ.<br>6. ಕೆಲವು ಸಮಯ ಚಟುವಟಿಕೆಯನ್ನು ಪುನರಾವರ್ತಿಸಿ.<br>7. ನಂತರ ಮಕ್ಕಳನ್ನು ಕೇಳಿ, "ನಿಮಗೆ ಯಾವಆಹಾರ ಪದಾರ್ಥಇಷ್ಟ?"<br>8. "ನನಗೆ ರೊಟ್ಟಿ /ಹಾಲು/ ಇತ್ಯಾದಿ ಇಷ್ಟ" ಎಂದು ಹೇಳುವ ಮೂಲಕ ಮಕ್ಕಳಿಂದ ಉತ್ತರಗಳನ್ನು ಪಡೆಯಿರಿ<br>9. ಪ್ರತಿಯೊಂದು ಮಗುವು ತನ್ನ ಇಷ್ಟಗಳನ್ನು ಹೇಳಲು ಸಮರ್ಥವಾಗಿದೆಎಂದು ಖಚಿತಪಡಿಸಿಕೊಳ್ಳಿ. |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ ) ಚಟುವಟಿಕೆ)** | **ಸಾಮರ್ಥ್ಯ: ಹೋಲಿಕೆ, ಹೊಂದಾಣಿಕೆ, ವಿಂಗಡಣೆ, ಗಾತ್ರ/ಪ್ರಮಾಣದ ಪರಿಕಲ್ಪನೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ...18 ಹೋಲಿಕೆ ಮಾಡೋಣ (ಗುರಿ 3)**<br>**ಉದ್ದೇಶ:- ಗಾತ್ರ ಮತ್ತು ಪ್ರಮಾಣವನ್ನು ಆಧರಿಸಿ ಹೋಲಿಕೆ ಮಾಡುವುದು.**<br>**ಅಗತ್ಯ ಸಾಮಗ್ರಿಗಳು : ಪೆನ್ಸಿಲ್‌ಗಳು, ಮಾಪಕಗಳು, ಹಣ್ಣುಗಳು (ಸೇಬು,ಕಿತ್ತಳೆ), ತರಕಾರಿಗಳು(ಆಲೂಗಡ್ಡೆ/ಈರುಳ್ಳಿ), ಪಾತ್ರೆಗಳು(ಚಮಚ,ಬಟ್ಟಲುಗಳು,ತಟ್ಟೆಗಳು), ವಿಭಿನ್ನ ಗಾತ್ರದ ಇತರೆ ವಸ್ತುಗಳು.**<br>**ವಿಧಾನ : ಸರಳವಾದ ಹೋಲಿಕೆ ಕಾರ್ಯವನ್ನು ಮೊದಲು ಸ್ಟ್ರಾಗಳು,ಪೆನ್ಸಿಲ್ ಗಳು, ಹಣ್ಣುಗಳು, ತರಕಾರಿಗಳು ಮತ್ತು ಲಭ್ಯವಿರುವ ಇತರೆ ವಸ್ತುಗಳನ್ನು ಬಳಸಿ ಮಾಡುವುದು.**<br>* **ಗಾತ್ರ ಮತ್ತು ಪ್ರಮಾಣವನ್ನು ಆಧರಿಸಿ ಹೋಲಿಕೆ ಮಾಡುವುದು.**<br>**ಗಾತ್ರದ ಆಧರಿಸಿ ವಸ್ತುಗಳ ಗುಂಪಿನಿಂದ ಅತಿ ದೊಡ್ಡ ವಸ್ತು, ಮಕ್ಕಳ ಗುಂಪಿನಿಂದ ಅತಿ ಎತ್ತರವಾದ ಹುಡುಗ, ಅತಿ ಉದ್ದವಾದ ಕೋಲು/ಚಾಕಪೀಸ್ ಆರಿಸಲು ಹೇಳುವುದು.**<br>* **ಹೋಲಿಕೆಯು ಒಂದೇ ವಿಧದ ವಸ್ತುಗಳೊಂದಿಗೆ ಆಗಬೇಕು. ಹೋಲಿಸುವ ಚಟುವಟಿಕೆಯನ್ನು ಮಿಶ್ರ ಗುಂಪಿನಲ್ಲಿ ನಡೆಸಬಾರದು. ಉದಾ: ಆಯತಾಕಾರದ ವಸ್ತುವನ್ನು ವೃತ್ತಾಕಾರದ ವಸ್ತುವಿನೊಂದಿಗೆ ಅಥವಾ ಚೆಂಡನ್ನು ಸೇಬು ಹಣ್ಣಿನೊಂದಿಗೆ ಹೋಲಿಸಬಾರದು.**<br>* **ಅದೇ ರೀತಿ ಪ್ರಮಾಣವನ್ನು ಹೋಲಿಸುವಾಗ ಒಂದೇ ರೀತಿಯ ವಸ್ತುಗಳಿರುವ ಯಾವ ಗುಂಪಿನಲ್ಲಿ ವಸ್ತುಗಳು ಹೆಚ್ಚು ಇವೆ ಎಂದು ಹೋಲಿಸಿ ಹೇಳುವುದು.**<br>**ತರಗತಿ-2**<br>**1. ಉದ್ದ-ಗಿಡ್ಡ ಮೇಲಿನಂತೆ ದೊಡ್ಡ-ಸಣ್ಣ ಇದಕ್ಕೆ ಪೂರಕ ವಸ್ತುಗಳನ್ನು ನೀಡಿ ಹೋಲಿಕೆ ಮಾಡಿಸಿ ಹೇಳಿಸುವುದು.**<br>**ತರಗತಿ-3**<br>**ಹೋಲಿಕೆ ಮಾಡಿಸುವುದು. ನಂತರ ವಿಂಗಡಿಸಿ ಪ್ರಮಾಣದ ಪರಿಕಲ್ಪನೆಯನ್ನು ಹೇಳಿಸುವುದು ಮತ್ತು ಬರೆಯಲು ತಿಳಿಸುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | .<br>ಸಾಮರ್ಥ್ಯ; ಸ್ವಯಂ ಮತ್ತು ಇತರರ ಬಗ್ಗೆ ಅರಿವು, ಮೌಖಿಕ ಭಾಷಾ ವಿಕಾಸ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ; ಅಭಿನಯ ಗೀತೆ. [ ನನ್ನ ಕುಟುಂಬ ]<br>ಅಪ್ಪನ ಅಪ್ಪ ಅಜ್ಜ<br>ಅಜ್ಜನ ಹೆಂಡತಿ ಅಜ್ಜಿ |

DRAFT 22.02.22

| | | | |
|---|---|---|---|
| | | | ಅಜ್ಜಿಯ ಮೊಮ್ಮಗ ನಾನು<br>ಎಲ್ಲರ ಕಣ್ಮಣಿ ನಾನು ॥<br>ಅಪ್ಪನ ತಮ್ಮ ಚಿಕ್ಕಪ್ಪ<br>ಅಪ್ಪನ ತಂಗಿ ಅತ್ತೆ<br>ಅಮ್ಮನ ತಂಗಿ ಚಿಕ್ಕಮ್ಮ<br>ಎಲ್ಲರ ಕಣ್ಮಣಿ ನಾನು ॥<br>ಉದ್ದೇಶ;<br>• ಶಾರೀರಿಕ ಬೆಳವಣಿಗೆಯ ವಿಕಾಸ ಹೊಂದುತ್ತಾರೆ.<br>• ಪದಸಂಪತ್ತು ಹೆಚ್ಚುವುದರೊಂದಿಗೆ ಪ್ರಾಸ, ಲಯ, ಸಂದರ್ಭ ಹಾಗೂ ಸ್ಪಷ್ಟ ಉಚ್ಚಾರಣೆ ಮಾಡುತ್ತಾರೆ.<br>• ಆಂಗಿಕ ಭಾವನೆಗಳನ್ನು ಗುರ್ತಿಸುತ್ತಾರೆ<br>ಸಾಮಗ್ರಿಗಳು; ಪ್ರಾಸಗೀತೆಗಳ ಪ್ರತಿ.<br>ವಿಧಾನ : ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು. ಸುಗಮಕಾರರು ಮಕ್ಕಳಿಗೆ ಗೊತ್ತಿರುವ ಪ್ರಾಸಗೀತೆಗಳನ್ನು ಹಾಡಲು ಅವಕಾಶ ಕಲ್ಪಿಸುವುದು. ಪ್ರಾಸಗೀತೆಗಳನ್ನು ಆಂಗಿಕ ಚಲನವಲನಗಳಿಂದ ಹಾಡಿಸುವುದು.<br>ವಿವರ; 2ಮತ್ತು 3 ನೇ ತರಗತಿಗೆ ಅಭಿನಯ ಗೀತೆಯನ್ನು ಹಾಡಿಸಿದ ನಂತರ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>*** ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-6 ( 01, 02,03ನೇ ತರಗತಿ)** |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಪದಸಂಪತ್ತಿನ ಅಭಿವೃದ್ಧಿ, ಊಹಿಸುವುದು, ತಂಡದ ಸದಸ್ಯರೊಂದಿಗೆ ಸಹಕಾರದಿಂದ ಕೆಲಸ ಮಾಡುವುದು.<br>ಚಟುವಟಿಕೆ....6 ಎ ನನ್ನನ್ನು ಹುಡುಕು. (ಗುರಿ–2) ECL-12<br>ಉದ್ದೇಶ:<br>* ಸೂಕ್ತ ಪದ ರಚಿಸುವುದು.<br>* ಸಾಂಘಿಕ ಮನೋಭಾವನೆ ಬೆಳೆಸುವುದು.<br>* ಸೂಚನೆಗಳನ್ನು ಎಚ್ಚರಿಕೆಯಿಂದ ಆಲಿಸಿ ಅನುಸರಿಸುವುದು.<br>* ಪದ ಸಂಪತ್ತಿನ್ನು ಅಭಿವೃದ್ಧಿ ಪಡಿಸುವುದು.<br>ಅಗತ್ಯ ಸಾಮಗ್ರಿಗಳು : ಪರಿಚಿತ ವಸ್ತು, ಪ್ರಾಣಿ, ಪಕ್ಷಿಗಳ ಚಿತ್ರಗಳು<br>ವಿಧಾನ: ಚಿತ್ರಗಳ ಮಿಂಚುಪಟ್ಟಿಗಳನ್ನು ಒಂದು ಬಾಕ್ಸ್ ನಲ್ಲಿ ಹಾಕಿ ಇಡುವುದು. ತರಗತಿಯಲ್ಲಿರುವ ಮಕ್ಕಳನ್ನು ಒಬ್ಬೊಬ್ಬರಾಗಿ ಕರೆದು ಬಾಕ್ಸ್ ನಲ್ಲಿರುವ ಚಿತ್ರಗಳಲ್ಲಿ ಒಂದನ್ನು ಎತ್ತಿಕೊಂಡು ಅದರ ಹೆಸರು ಹೇಳಲು ತಿಳಿಸುವುದು. ಮಕ್ಕಳು ಗುರುತಿಸಿದ ಚಿತ್ರಗಳ ಕುರಿತು ಅವರೊಂದಿಗೆ ಚರ್ಚಿಸುವುದು. ಇದೇ ರೀತಿ ಚಟುವಟಿಕೆಯನ್ನು ಮುಂದುವರೆಸುವುದು.<br>ತರಗತಿಯ ವಿವರ: 2 ನೇ ತರಗತಿಯ ಮಕ್ಕಳು ತಾವು ಗುರುತಿಸಿದ ಚಿತ್ರದ ಬಗ್ಗೆ 3–4 ವಾಕ್ಯಗಳಲ್ಲಿ ಮಾತನಾಡುವುದು.<br>3 ನೇ ತರಗತಿಯ ಮಕ್ಕಳು 2 ರಿಂದ 3 ನಿಮಿಷ ಆ ಚಿತ್ರದ ಬಗ್ಗೆ ಮಾತನಾಡುವುದು.** |
| | | **ಅರ್ಥಗ್ರಹಿಕೆಯೊಂದಿಗಿನ ಓದು** | **ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>ಚಟುವಟಿಕೆ....18<br>• ಚಿತ್ರ ಸಂಪುಟ (ಗುರಿ–2) ವಿಷಯ: 'ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳು',**<br>ಉದ್ದೇಶ:<br>**• ಮಕ್ಕಳು ಚಿತ್ರ ಓದುವುದು ಮತ್ತು ಚರ್ಚಿಸಿ ಅರ್ಥ ಮಾಡಿಕೊಳ್ಳುವುದು ಮತ್ತು ವೈಯಕ್ತಿಕ ಚಿತ್ರ ಸಂಪುಟಗಳನ್ನು ರಚಿಸುವರು.<br>• ಅನುಭವ ಮತ್ತು ಪೂರ್ವಜ್ಞಾನದ ಆಧಾರದ ಮೇಲೆ ಊಹಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ, ಕ್ರೇಯಾನ್ಸ್, ಅಂಟು, ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳ ಚಿತ್ರಗಳು, ಅವುಗಳ ಕುರಿತ ಕಥನ/ಕವಿತೆ/ಹಾಡುಗಳ ಪಟ್ಟಿ.<br>ವಿಧಾನ : ಮಕ್ಕಳಿಗೆ ಪರಿಚಿತವಿರುವ ಹಾಡು ಮತ್ತು ಶಿಶುಗೀತೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಗುರುತಿಸುವುದು.** |

DRAFT 22.02.22

* ಹಾಡು/ಕಥೆಯಲ್ಲಿರುವ ವಿಶೇಷ ಪದಗಳನ್ನು ಗುರುತಿಸಿ ಹೆಸರಿಸುವುದು ಶಿಕ್ಷಕರು ಮಕ್ಕಳು ಗ್ರಹಿಸಿ ಹೇಳಿದ ಪದಗಳನ್ನು ಕಪ್ಪುಹಲಗೆಯ ಮೇಲೆ ಬರೆಯುವುದು ಆ ಪದಗಳ ಕುರಿತು ಚರ್ಚಿಸುವರು ಹಾಗೂ ಆಯಾ ಪರಿಚಿತ ಪದಗಳ ಆಧಾರದಲ್ಲಿ ಪದಜಾಲಗಳನ್ನು ಕಪ್ಪುಹಲಗೆ ಅಥವಾ ಚಾರ್ಟಗಳಲ್ಲಿ ಬರೆದು ಚರ್ಚಿಸುವರು.

*ಮಕ್ಕಳಿಗೆ ಹಾಳೆ ಕ್ರೇಯಾನ್ಸ್ ಇನಿತರ ಸಾಮಗ್ರಿಗಳನ್ನು ನೀಡಿ ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳ ಚಿತ್ರ ನೋಡಿ ಸ್ವತಃ ಆ ಚಿತ್ರಗಳನ್ನು ಬರೆಯಲು ಮತ್ತು ಬಣ್ಣ ಹಚ್ಚಲು ಅವಕಾಶ ನಿಡುವುದು.

ವೈಯಕ್ತಿಕ ಚಿತ್ರ ಸಂಪುಟ.–ಮಕ್ಕಳು ರಚಿಸಿದ ಚಿತ್ರಗಳನ್ನು ತಮ್ಮ ಕೃತಿ ಸಂಪುಟದಲ್ಲಿ ಸಂಗ್ರಹಿಸಲು ತಿಳಿಸುವುದು ಮತ್ತು ಅವುಗಳನ್ನು ಮುಂದಿನ 25ನೇ ದಿನದಲ್ಲಿ ಚರ್ಚಿಸುವುದಾಗಿ ತಿಳಿಸುವುದು.

ಉದಾ..ಆಕಾಶ, ಚಂದ್ರ, ನಕ್ಷತ್ರಗಳು, ರಾತ್ರಿಯಲ್ಲಿ ಚಲಿಸುವ ವಾಹನಗಳು, ದೀಪಸ್ಥಂಭಗಳು ಇತ್ಯಾದಿ.. ಚಿತ್ರಗಳು/ವಿಡಿಯೋಗಳು/ಅನುಭವದ ಆಧಾರದ ಮೇಲೆ ಮಕ್ಕಳು ವೈಯಕ್ತಿಕವಾಗಿ ಚಿತ್ರಬರೆಯಲು ಅವಕಾಶವಿರುವಂತೆ ನೋಡಿಕೊಳ್ಳುವುದು.

ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಸಹಾಯ ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು. ಜೊತೆಗೆ 2ನೇ ಮತ್ತು 3ನೇ ತರಗತಿಯ ಮಕ್ಕಳಿಗೂ ಸ್ವತಂತ್ರವಾಗಿ ಚಿತ್ರಬರೆಯಲು ಮತ್ತು ಬಣ್ಣಹಾಕಲು ಅವಕಾಶ ನೀಡಿ ಅವರೂ ಸಹ ತಮ್ಮ ಕೃತಿಸಂಪುಟಗಳಲ್ಲಿ ಸಂಗ್ರಹಿಸಲು ಅವಕಾಶ ನೀಡುವುದು.

*(ಸದರಿ ಚಟುವಟಿಕೆಯ ಮುಂದುವರೆದ ಭಾಗವು 25 ನೇ ದಿನದಲ್ಲಿ ಮುಂದುವರೆಯುವುದು)*

**ಉದ್ದೇಶಿತ ಬರಹ**

ಸಾಮರ್ಥ್ಯ: ದೃಶ್ಯೀಕರಿಸುವುದು, ಸೃಜನಶೀಲ ಚಿಂತನೆ, ಬಣ್ಣಗಳ ಪರಿಕಲ್ಪನೆ, ಗಾತ್ರ ಮತ್ತು ಆಕಾರಗಳ ಕಲ್ಪನೆ.

ಚಟುವಟಿಕೆ: 22 ಆಲಿಸು–ಚಿತ್ರಿಸು (ಗುರಿ–2) **ECW-11**

ಉದ್ದೇಶಗಳು:

- ಆಲಿಸಿದ ವಿಷಯಗಳನ್ನು ಕಲ್ಪನೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು.
- ಸೃಜನಶೀಲ ಚಿಂತನಾ ಕೌಶಲವನ್ನು ಉತ್ತೇಜಿಸುವುದು.
- ಬಣ್ಣಗಳು, ಗಾತ್ರ ಮತ್ತು ಆಕಾರಗಳ ಪರಿಕಲ್ಪನೆ ಮೂಡಿಸುವುದು.

ಅಗತ್ಯ ಸಾಮಗ್ರಿ: ಖಾಲಿ ಹಾಳೆಗಳು, ಪೆನ್ಸಿಲ್‌ಗಳು, ಕ್ರೆಯಾನ್ಸ್.

ವಿಧಾನ: ಸಾಕಷ್ಟು ವಿವರಣಾತ್ಮಕ ಪದಗಳನ್ನು ಹೊಂದಿರುವ ಕಥಾ ಪುಸ್ತಕವನ್ನು ಜೋರಾಗಿ ಓದಿ. ಉದಾ: ಸತ್ಯಳಿಗೆ ದೊಡ್ಡದಾದ ಕಣ್ಣುಗಳು ಹಾಗೂ ಗುಂಗುರು ಕೂದಲುಗಳಿವೆ. ಸುಮಳ ಶಾಲೆಯಲ್ಲಿ ಬಹಳಷ್ಟು ಮರಗಳಿವೆ.

ಕಥೆಯನ್ನು ಓದಿದ ನಂತರ ಮಕ್ಕಳಿಗೆ ಕ್ರೆಯಾನ್ಸ್‌ಗಳನ್ನು ಹಾಗೂ ಖಾಲಿ ಹಾಳೆಗಳನ್ನು ನೀಡುವುದು. ಕಥೆಯಲ್ಲಿನ ನಿರ್ದಿಷ್ಟ ವಾಕ್ಯವನ್ನು ಪುನಃ ಓದಿ, ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.

- ಸತ್ಯಳ ಮುಖವನ್ನು ನೀನು ಬಿಡಿಸಬಲ್ಲೆಯಾ?
- ಸುಮಳ ಶಾಲೆಯ ಚಿತ್ರವನ್ನು ನೀನು ಬಿಡಿಸಬಲ್ಲೆಯಾ?

ಪ್ರಶ್ನೆಗಳನ್ನು ಕೇಳಿದ ನಂತರ ಮಕ್ಕಳಿಗೆ ಕಲಿಕಾ ಹಾಳೆಯ **EC 1.19** ರಲ್ಲಿ ಚಿತ್ರ ಬಿಡಿಸಲು ಅವಕಾಶ ನೀಡುವುದು.

ತರಗತಿವಾರು ವಿವರ:

2 ನೇ ತರಗತಿಯ ಮಕ್ಕಳಿಗೆ **EC 2.19** ರಲ್ಲಿ ಹಾಗೂ 3 ನೇ ತರಗತಿಯ ಮಕ್ಕಳಿಗೆ **EC 3.19** ರಲ್ಲಿ ಆಲಿಸಿದ ಕಥಾ ಸನ್ನಿವೇಶವನ್ನು ಚಿತ್ರಿಸಿ ಬರೆಯಲು ಅವಕಾಶ ನೀಡುವುದು.

**ಅಭ್ಯಾಸದ ಹಾಳೆಗಳು: EC-6 (ತರಗತಿ 1, 2, 3)**

ಬರವಣಿಗೆಯ ಮಾದರಿ:

ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.

ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.

**ಹೊರಾಂಗಣ ಆಟಗಳು**

Day 23


ಚಟುವಟಿಕೆ –20 ಚೆಂಡನ್ನು ಹಿಡಿ. ಗುರಿ–1

DRAFT 2022





| | | |
|---|---|---|
| | | ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ. ತೋಳು ಮತ್ತು ಕಾಲಿನ ಶಕ್ತಿ ಅಭಿವೃದ್ಧಿ<br>ಬೇಕಾಗುವ ಸಾಮಗ್ರಿ: ಫುಟ್ಬಾಲ್<br>ವಿಧಾನ:<br>• ಇಬ್ಬರು ಮಕ್ಕಳನ್ನು ಬೆನ್ನಿಗೆ ಬೆನ್ನು ತಾಗುವಹಾಗೆ ನಿಲ್ಲಿಸುವುದು.<br>• ಒಂದು ಫುಟ್ಬಾಲ್ಲನ್ನು ಒಬ್ಬರಿಗೊಬ್ಬರು ಪಾಸ್ ಮಾಡುವಹಾಗೆ ಸೂಚಿಸುವುದು.<br>• **ಎರಡು ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಆಟವನ್ನು ಆಡಿಸುವುದು.** |
| | **ಕಥಾ ಸಮಯ** | **ಶೀರ್ಷಿಕೆ :**ತೆನಾಲಿರಾಮಕೃಷ್ಣ ಮತ್ತು ಮಡಕೆ<br>**ಸಾಮಗ್ರಿಗಳು :**ಪಪೆಟ್ ಸಾಮಗ್ರಿಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>➢ ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವ ಆಸಕ್ತಿಯನ್ನು ಬೆಳೆಸುವುದು.<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ **ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು.**<br>➢ **ನಿರರ್ಗಳವಾಗಿ ಮಾತನಾಡುವ ಕೌಶಲವನ್ನುರೂಢಿಸುವುದು.**<br>**ವಿಧಾನ :**<br>***ಪಪೆಟ್ ಪ್ರದರ್ಶನ***<br>➢ ಕಥೆಯನ್ನು ಪುನರಾವಲೋಕನ ಮಾಡಿಕೊಳ್ಳುವುದು.<br>➢ ಮಕ್ಕಳಿಗೆ ಸಂಭಾಷಣೆಯ ತುಣುಕುಗಳನ್ನು ನೀಡುವುದು.<br>➢ ಪಪೆಟ್ ಪ್ರದರ್ಶನಕ್ಕೆಎರಡು ಮತ್ತು ಮೂರನೇತರಗತಿಯ ಮಕ್ಕಳಿಗೆ ಸಹಕರಿಸುವುದು.<br>(ಕಥೆಯನ್ನು ಆನಂದಿಸುವುದರಜೊತೆಗೆ, ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ<br>• ಮುಂದಿನವಾರ "ಉದ್ಯಾನವನದ ಭೇಟಿಗಾಗಿ" ಯೋಜನೆ ರೂಪಿಸಿ ಮತ್ತು ಅದಕ್ಕೆ ತಕ್ಕಂತೆ ಚಟುವಟಿಕೆಗಳನ್ನು<br>• ಶಾಲೆಯಲ್ಲಿ "ಚಿಕ್ಕ ಪುಸ್ತಕ ಪ್ರದರ್ಶನ" ಆಯೋಜಿಸಿ, ಪೋಷಕರನ್ನು ಆಹ್ವಾನಿಸಲು ಯೋಜನೆ ಸಿದ್ಧಪಡಿಸಿ. |



## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–4** **ದಿನ–24 (ಶನಿವಾರ)**

| | | | |
|---|---|---|---|
| | ಪ್ರತಿಬಿಂಬ<br>(ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | |
| | ನನ್ನ ಸಾಧನೆ | | ಗಳಿಸಿದ ಕಲಿಕಾ ಫಲಗಳು |

DRAFT 22.02.22

| | ಕಲಿಕಾಫಲಗಳು | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
|---|---|---|---|---|
| | ಶಾಲೆಯ ದಿನಚರಿಗೆ ಹೊಂದಿಕೊಳ್ಳುವರು. | | | |
| | ಸಂತೋಷದಿಂದ ಶಾಲೆಗೆ ಬರುವರು. | | | |
| | ಶಿಕ್ಷಕರಿಗೆ ಮತ್ತು ಸ್ನೇಹಿತರಿಗೆ ಶುಭ ಕೋರುವರು. | | | |
| | ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸುವರು. | | | |
| | ಸರಳ ಸೂಚನೆಗಳನ್ನು ಅನುಸರಿಸುವರು. | | | |
| | ತನ್ನ ಸುತ್ತಮುತ್ತಲಿನ ಪರಿಸರದ ಬಗ್ಗೆ ಕುತೂಹಲ ತೋರಿಸುವರು. | | | |
| | ಜೇಡಿಮಣ್ಣು/ಹಿಟ್ಟಿನಿಂದ ಮಾದರಿ ತಯಾರಿಸುವುದನ್ನು ಆನಂದಿಸುವರು. | | | |
| | ಒಂದೇ ರೀತಿಯ ವಸ್ತುಗಳನ್ನು ಹೋಲಿಕೆ ಮಾಡುವರು. | | | |
| | ಇಂದ್ರಿಯಗಳ ಸಹಾಯದಿಂದ ವಸ್ತುಗಳನ್ನು ಗುರುತಿಸುವರು. | | | |
| | ಪ್ರಾಸಗೀತೆಗಳನ್ನು ಸಂತಸದಿಂದ ಹಾಡುವರು. | | | |
| | ಬಣ್ಣಗಳನ್ನು ಗುರುತಿಸುವರು, ಹೆಸರಿಸುವರು, ಹೋಲಿಸುವರು ಮತ್ತು ಗುಂಪು ಮಾಡುವರು. | | | |
| | ಪೂರ್ಣ ವಾಕ್ಯಗಳಲ್ಲಿ ಸ್ಪಷ್ಟವಾಗಿ ಮಾತನಾಡುವರು. | | | |

DRAFT 22.02.22

# 4.2. ತಿಂಗಳುವಾರು ಮೌಲ್ಯಮಾಪನ ಮಾರ್ಗಸೂಚಿ

(ಶಾಲೆಗಾಗಿ ವಿದ್ಯಾರ್ಥಿಗಳ ಪೂರ್ವಸಿದ್ಧತೆಯನ್ನು ಅನುಪಾಲಿಸುವುದು)

## ಮೊದಲ ತಿಂಗಳು

**ಉದ್ದೇಶಗಳು:** ಶಾಲಾ ಕಾರ್ಯಕ್ರಮಗಳಲ್ಲಿ ಆಸಕ್ತಿಯನ್ನು ಬೆಳೆಸುವುದು ಮತ್ತು ಶಾಲಾ ಪರಿಸರದಲ್ಲಿ ಮತ್ತು ಕಲಿಕೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡುವುದು.

| | | | | | |
|---|---|---|---|---|---|
| ವಿದ್ಯಾರ್ಥಿ ಹೆಸರು | | | ತರಗತಿ | | |
| ಎತ್ತರ ಮತ್ತು ತೂಕದ ಅಳತೆ | | | | | |
| ತೂಕ: | | | ಎತ್ತರ: | | |
| ವೈಯುಕ್ತಿಕ ಸ್ವಚ್ಛತೆ (ಸಂಬಂಧಿಸಿದ ಕಾಲಂ ಅಲ್ಲಿ ✓ ಗುರುತು ಹಾಕಿ) | | | | | |
| | ಸ್ವಚ್ಛವಾಗಿದೆ | ಸುಧಾರಿಸಬೇಕಿದೆ | | ಸ್ವಚ್ಛವಾಗಿದೆ | ಸುಧಾರಿಸಬೇಕಿದೆ |
| ಬಟ್ಟೆ: | | | ಉಗುರುಗಳು: | | |
| ಹಲ್ಲುಗಳು: | | | ಕಣ್ಣುಗಳು: | | |
| ಕಿವಿಗಳು: | | | ಮೂಗು: | | |
| ಕೂದಲು | | | | | |

**ಈ ಕೆಳಗಿನ ಚಟುವಟಿಕೆಗಳಲ್ಲಿ ಇಡೀ ತಿಂಗಳು ಮಕ್ಕಳ ಪ್ರಗತಿಯನ್ನು ಕ್ರೋಢೀಕರಿಸಿ ಸಂಬಂಧಿಸಿದ ಕಾಲಂ ಅಲ್ಲಿ ✓ ಗುರುತು ಹಾಕುವುದು.**

| ದೈನಂದಿನ ಚಟುವಟಿಕೆಗಳ ಹೊಂದಾಣಿಕೆ ಮತ್ತು ಅನುಸರಿಸುವಿಕೆ | ಅಪರೂಪಕ್ಕೆ | ಕೆಲವು ಸಲ | ಯಾವಾಗಲೂ |
|---|---|---|---|
| ಶಾಲೆಗೆ ಸಂತಸದಿಂದ ಬರುತ್ತಾನೆ/ಳೆ. | | | |
| ಶಿಕ್ಷಕರನ್ನು ಹಾಗೂ ಸಹಪಾಠಿಗಳನ್ನು ವಂದಿಸುತ್ತಾನೆ/ಳೆ. | | | |
| ತನ್ನ ಹಾಗೂ ಇತರರ ವಸ್ತುಗಳ ಕುರಿತು ಕಾಳಜಿ ಹೊಂದಿದ್ದಾನೆ/ಳೆ. | | | |
| ಇತರರೊಂದಿಗೆ ವಸ್ತುಗಳನ್ನು ಹಂಚಿಕೊಳ್ಳುತ್ತಾನೆ/ಳೆ. | | | |
| ಇತರರಿಗೆ ಸಹಾಯ ಮಾಡುತ್ತಾನೆ/ಳೆ. | | | |
| ಇತರರ ಹಾಗೂ ಪರಿಸರದ ಕುರಿತು ಕಾಳಜಿ ಹೊಂದಿದ್ದಾನೆ/ಳೆ. | | | |
| ತನ್ನ ಸರದಿಗಾಗಿ ಕಾಯುತ್ತಾನೆ/ಳೆ. | | | |
| ಗುಂಪು ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳುತ್ತಾನೆ/ಳೆ. | | | |
| ವಸ್ತುಗಳ ಜೊತೆ ಹಾಗೂ ಸಹಪಾಠಿಗಳೊಂದಿಗೆ ಆಡಲು ಇಷ್ಟಪಡುತ್ತಾನೆ/ಳೆ. | | | |
| ಅವನ/ಳ ಭಾವನೆಗಳನ್ನು ಹಂಚಿಕೊಳ್ಳುತ್ತಾನೆ/ಳೆ. | | | |
| ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಾನೆ/ಳೆ. | | | |
| ನೃತ್ಯಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ/ಳೆ. | | | |
| ಆಟ ಹಾಗೂ ದೈನಂದಿನ ಚಟುವಟಿಕೆಗಳ ನಿಯಮಗಳನ್ನು ಪಾಲಿಸುತ್ತಾನೆ/ಳೆ. | | | |
| ಸರಳ ಸೂಚನೆಗಳನ್ನು ಪಾಲಿಸುತ್ತಾನೆ/ಳೆ. | | | |
| **ಹೊರಾಂಗಣ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ** | **ಸಹಾಯದ ಅವಶ್ಯಕತೆ ಇದೆ** | **ಕಷ್ಟ ಪಟ್ಟುಮಾಡುತ್ತಾನೆ/ಳೆ** | **ಮಾಡುತ್ತಾನೆ/ಳೆ** |
| ತನ್ನನ್ನು ತಾನು ಮರಳು ಮತ್ತು ನೀರಿನ ಆಟಗಳಲ್ಲಿ ತೊಡಗಿಸಿಕೊಳ್ಳುತ್ತಾನೆ/ಳೆ. | | | |
| ದೇಹದ ಸಮತೋಲನ ಕಾಪಾಡಿಕೊಳ್ಳುವಿಕೆ (ವಕ್ರ ಗೆರೆಗಳ ಮೇಲೆ ಮುಂದಕ್ಕೆ ಮತ್ತು ಹಿಂದಕ್ಕೆ ಚಲಿಸುವುದು) | | | |
| ಅವಶ್ಯಕತೆಗೆ ತಕ್ಕಂತೆ ವೇಗವಾಗಿ ಮತ್ತು ನಿಧಾನವಾಗಿ ಓಡುತ್ತಾನೆ/ಳೆ. | | | |
| ಎರಡೂ ಕೈಗಳಿಂದ ಚೆಂಡುಗಳನ್ನು ಹಿಡಿಯುತ್ತಾನೆ/ಳೆ ಮತ್ತು ಎಸೆಯುತ್ತಾನೆ/ಳೆ. | | | |
| ಅಡೆ ತಡೆ(ಹರ್ಡಲ್ಸ್) ಗಳ ಮೇಲೆ ಜಿಗಿಯುತ್ತಾನೆ/ಳೆ. | | | |
| **ಸೃಜನಾತ್ಮಕತೆ, ಸೌಂದರ್ಯ ಪ್ರಜ್ಞೆ ಹಾಗು ಸ್ನಾಯು ಚಲನಾ ಅಭಿವೃದ್ಧಿಗಾಗಿ ಕಲಾ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ** | **ಸಹಾಯದ ಅವಶ್ಯಕತೆ ಇದೆ** | **ಕಷ್ಟ ಪಟ್ಟುಮಾಡುತ್ತಾನೆ/ಳೆ** | **ಮಾಡುತ್ತಾನೆ** |
| ಮರಳಿನಲ್ಲಿ ವಕ್ರ ರೇಖೆಗಳನ್ನು ಬರೆಯುತ್ತಾನೆ/ಳೆ. | | | |

DRAFT 2022

| | | | |
|---|---|---|---|
| ಉಬ್ಬು ಚಿತ್ರಗಳನ್ನುಬಳಸಿ ಸುಲಭವಾಗಿ ಮುದ್ರಿಸುತ್ತಾನೆ/ಳೆ. | | | |
| ಮಣಿಗಳನ್ನು ಬಣ್ಣ ಹಾಗೂ ಅನುಕ್ರಮಣಿಕೆಗೆ ತಕ್ಕಂತೆ ದಾರಕ್ಕೆ ಪೋಣಿಸುತ್ತಾನೆ/ಳೆ. | | | |
| ರೇಖಾ ಚಿತ್ರಗಳನ್ನು ತುಂಬಾ ಸುಲಭವಾಗಿ ಮಾಡುತ್ತಾನೆ/ಳೆ. | | | |
| ಕತ್ತರಿಸುವುದನ್ನು ಮತ್ತು ಅಂಟಿಸುವುದನ್ನು ಮಾಡುತ್ತಾನೆ/ಳೆ. | | | |
| ಜೇಡಿ ಮಣ್ಣಿನಿಂದ ಅಥವಾ ಹಿಟ್ಟಿನಿಂದ ಅಚ್ಚುಗಳನ್ನು ಮಾಡುತ್ತಾನೆ/ಳೆ. | | | |
| **ಸಂಖ್ಯಾ ಜ್ಞಾನ ಹಾಗೂ ಪರಿಸರ ಪ್ರಜ್ಞೆಯ ಪ್ರದರ್ಶಿಸುವಿಕೆ** | | | |
| ಪರಿಸರದಲ್ಲಿನ ವಿಷಯಗಳನ್ನು ಅನ್ವೇಷಿಸಲು ಕುತೂಹಲ ಮತ್ತು ಚೈತನ್ಯವನ್ನು ತೋರಿಸುತ್ತಾನೆ/ಳೆ. | | | |
| ಇಂದ್ರಿಯಗಳನ್ನು ಬಳಸಿಕೊಂಡು ವಸ್ತುಗಳನ್ನು ಗುರುತಿಸುತ್ತಾನೆ/ಳೆ. (ಸ್ಪರ್ಶ, ವಾಸನೆ, ರುಚಿ, ದೃಷ್ಟಿ ಮತ್ತು ಧ್ವನಿ) | | | |
| ಒಂದು ಗುಣಲಕ್ಷಣದೊಂದಿಗೆ ವಸ್ತುಗಳನ್ನು ಹೊಂದಿಕೆ ಮಾಡುತ್ತಾನೆ/ಳೆ. (ಆಕಾರ/ಬಣ್ಣ/ಗಾತ್ರ) | | | |
| ಎರಡು ಚಿತ್ರಗಳನ್ನು ಹೋಲಿಸಿ ವ್ಯತ್ಯಾಸಗಳನ್ನು ಕಂಡುಕೊಳ್ಳುತ್ತಾನೆ/ಳೆ. | | | |
| ಮೂಲಭೂತ ಬಣ್ಣಗಳನ್ನು ಹೊಂದಿಸುತ್ತಾನೆ/ಳೆ, ಗುರುತಿಸುತ್ತಾನೆ/ಳೆ", ಹೆಸರಿಸುತ್ತಾನೆ/ಳೆ ಮತ್ತು ವಿಂಗಡಿಸುತ್ತಾನೆ/ಳೆ. | | | |
| ಭಾಗ ಮತ್ತು ಸಂಪೂರ್ಣ ಸಂಬಂಧದ ತಿಳುವಳಿಕೆಯನ್ನು ಪ್ರದರ್ಶಿಸುತ್ತಾನೆ/ಳೆ. | | | |
| ಖಾಲಿ ಮತ್ತು ಪೂರ್ಣ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುತ್ತದೆ | | | |
| **ಮೌಖಿಕ ಅಭಿವ್ಯಕ್ತಿಯ ಪ್ರದರ್ಶನ** | **ಅಪರೂಪಕ್ಕೆ** | **ಕೆಲವು ಸಲ** | **ಯಾವಾಗಲೂ** |
| ವಯಸ್ಕರು ಮತ್ತು ಮಕ್ಕಳೊಂದಿಗೆ ಮುಕ್ತವಾಗಿ ಮಾತನಾಡುತ್ತಾನೆ/ಳೆ. | | | |
| ಭಾವನೆಗಳನ್ನು, ಅಗತ್ಯಗಳನ್ನು ವ್ಯಕ್ತಪಡಿಸುತ್ತಾನೆ/ಳೆ ಮತ್ತು ಆಸಕ್ತಿಯನ್ನು ತೋರಿಸುತ್ತಾನೆ/ಳೆ. (ಶಾಬ್ದಿಕ ಅಶಾಬ್ದಿಕ ಪ್ರತಿಕ್ರಿಯೆಗಳ ಮೂಲಕ) | | | |
| ಸಂಪೂರ್ಣ ವಾಕ್ಯಗಳಲ್ಲಿ ಸ್ಪಷ್ಟವಾಗಿ ಮಾತನಾಡುತ್ತಾನೆ/ಳೆ. | | | |
| ಕಥೆಗಳು ಮತ್ತು ಪ್ರಾಸಗಳನ್ನು ಗಮನವಿಟ್ಟು ಆಲಿಸುತ್ತಾನೆ/ಳೆ. | | | |
| ಪ್ರಾಸಗಳು/ಹಾಡುಗಳನ್ನು ಹಾಡುವುದನ್ನು ಆನಂದಿಸುತ್ತಾನೆ/ಳೆ. | | | |
| **ಪ್ರಾರಂಭಿಕ ಓದುವ ಕೌಶಲ್ಯಗಳ ಪ್ರದರ್ಶಿಸುವಿಕೆ** | **ಅಪರೂಪಕ್ಕೆ** | **ಕೆಲವು ಸಲ** | **ಯಾವಾಗಲೂ** |
| ಚಿತ್ರಗಳು, ಪುಸ್ತಕಗಳು ಮತ್ತು ಇತರ ಮುದ್ರಣ ಸಾಮಗ್ರಿಗಳೊಂದಿಗೆ ಅನ್ವೇಷಿಸುತ್ತಾನೆ/ಳೆ ಮತ್ತು ತೊಡಗಿಸಿಕೊಳ್ಳುತ್ತಾನೆ/ಳೆ. | | | |
| ಕಥೆಗಳು ಮತ್ತು ಪ್ರಾಸಗಳನ್ನು ಗಮನವಿಟ್ಟು ಕೇಳುತ್ತಾನೆ/ಳೆ. | | | |
| ಚಿತ್ರದಲ್ಲಿನ ವಸ್ತುಗಳನ್ನು ಹೆಸರಿಸುತ್ತಾನೆ/ಳೆ. | | | |
| ವಾಕ್ಯದಲ್ಲಿ ಪದಗಳನ್ನು ಗುರುತಿಸುತ್ತಾನೆ/ಳೆ. | | | |
| ಪ್ರಾಸ ಪದಗಳನ್ನು ಗುರುತಿಸುತ್ತಾನೆ/ಳೆ. | | | |
| **ಪ್ರಾರಂಭಿಕ ಬರವಣಿಗೆಯ ಕೌಶಲ್ಯಗಳ ಪ್ರದರ್ಶನ** | **ಅಪರೂಪಕ್ಕೆ** | **ಕೆಲವು ಸಲ** | **ಯಾವಾಗಲೂ** |
| ಪೆನ್ಸಿಲ್ ಅನ್ನು ಸರಿಯಾಗಿ ಹಿಡಿಕೊಳ್ಳುತ್ತಾನೆ/ಳೆ. | | | |
| ಮರಳು/ಗಾಳಿಯಲ್ಲಿ ತಿದ್ದುತ್ತಾನೆ/ಳೆ. | | | |
| ಆಲೋಚನೆಗಳು, ಸನ್ನಿವೇಶಗಳು, ಘಟನೆಗಳು ಇತ್ಯಾದಿಗಳನ್ನು ಪ್ರತಿನಿಧಿಸಲು ಚಿತ್ರವನ್ನು ಬಿಡಿಸುತ್ತಾನೆ/ಳೆ. | | | |

| | | |
|---|---|---|
| ➢ **ಮಗುವಿನ ವೈಶಿಷ್ಟ್ಯತೆಗಳು:** | ವಿಶೇಷ ಆಸಕ್ತಿಗಳು | |
| | ಮಗುವಿನ ಪ್ರತಿಭೆಗಳು | |
| | ಸಾಮರ್ಥ್ಯ | |

DRAFT 22.02.22

| | | | | |
|---|---|---|---|---|
| | | | | |
| **ಹಾಜರಾತಿ:** | ನಿಯಮಿತ | ಹೌದು/ಇಲ್ಲ | **ಸಮಯ ಪಾಲನೆ** | ಇದೆ /ಇಲ್ಲ |
| **ಸಾಮಾನ್ಯ ಟಿಪ್ಪಣಿಗಳು (ರಿಮಾರ್ಕ್ಸ್)** | | | | |
| ಮುಖ್ಯ ಶಿಕ್ಷಕರ ಸಹಿ ದಿನಾಂಕದೊಂದಿಗೆ | | | ಶಿಕ್ಷಕರ ಸಹಿ ದಿನಾಂಕದೊಂದಿಗೆ | |
| ಪಾಲಕರ ಸಹಿ ದಿನಾಂಕದೊಂದಿಗೆ | | | | |

DRAFT 22.02.22

# ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–5** **ದಿನ–25 (ಸೋಮವಾರ)**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 25 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1**<br>: ನನ್ನ ಒಳ್ಳೆಯ ಅಭ್ಯಾಸಗಳು<br>ಸಾಮಗ್ರಿಗಳು: ಕೂದಲನ್ನು ಬಾಚಿಕೊಳ್ಳುವುದು, ಹಲ್ಲುಜ್ಜುವುದು, ಕೈಗಳನ್ನು ತೊಳೆಯುವುದು, ಉಗುರುಗಳನ್ನು ಕತ್ತರಿಸುವುದು ಇತ್ಯಾದಿಗಳ ಚಿತ್ರಗಳು.<br>ಕಾರ್ಯವಿಧಾನ:<br>• ಮಕ್ಕಳನ್ನು ತರಗತಿಯ ಹೊರಗೆ ಒಂದು ಸಾಲಿನಲ್ಲಿ ನಿಲ್ಲುವಂತೆ ಮಾಡಿ. (ಸುರಕ್ಷತಾ ಕ್ರಮಗಳನ್ನು ಗಮನಿಸಿ)<br>• ಒಳ್ಳೆಯ ಅಭ್ಯಾಸಗಳ ಚಿತ್ರಗಳನ್ನು ಒಂದೊಂದಾಗಿ ತೋರಿಸಿ. (ಶಿಕ್ಷಕರು ತರಗತಿಯ ಬಾಗಿಲಲ್ಲಿ ನಿಲ್ಲಬೇಕು. )<br>• ತೋರಿಸಿದ ಚಿತ್ರಗಳಲ್ಲಿರುವಂತೆ ನಟಿಸುತ್ತಾ ಮಕ್ಕಳು ತರಗತಿಯನ್ನು ಪ್ರವೇಶಿಸಲು ಸೂಚಿಸುವುದು.<br>• ತರಗತಿ ಪ್ರವೇಶಿಸಿದ ನಂತರ ವೃತ್ತಾಕಾರವಾಗಿ ನಿಲ್ಲುವಂತೆ ಸೂಚಿಸಿ.<br>• ಮಕ್ಕಳನ್ನು ಸ್ವಾಗತಿಸಿ "ಇವತ್ತು ಯಾವ ವಾರ?" ಎಂದು ಪ್ರಶ್ನಿಸಿ "ಇಂದು __ವಾರ" ಎಂದು ಮಗು ಉತ್ತರಿಸಲು ಪ್ರೋತ್ಸಾಹಿಸಿ.<br>**ಚಟುವಟಿಕೆ 2**<br>• ಹವಾಮಾನ ಕಾರ್ಡ್ ಮಾಡಿಸಿ. (ನಲಿ–ಕಲಿಯನ್ನು ನೋಡಿ.)<br>• ಹವಾಮಾನದ ಬಗ್ಗೆ ಮಕ್ಕಳನ್ನು ಪ್ರಶ್ನಿಸಿ : "ಇಂದಿನ ಹವಾಮಾನ ಹೇಗಿದೆ? "ಇಂದು ಬಹಳ ಬಿಸಿಲು", "ಇದು ಮೋಡಕವಿದ ದಿನ", "ಮಳೆ ಬರುತ್ತಿದೆ" ಉತ್ತರಿಸಲು ಅವರನ್ನು ಪ್ರೋತ್ಸಾಹಿಸಿ.<br>• ಹವಾಮಾನ ಕಾರ್ಡ್ ನಲ್ಲಿ ಗುರುತು ಮಾಡಲು ಅವರಿಗೆ ತಿಳಿಸಿ. |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ಚಟುವಟಿಕೆ: ಬಣ್ಣದ ಬಟ್ಟೆ<br>ಅಗತ್ಯವಿರುವ ಸಾಮಗ್ರಿಗಳು: ವರ್ಣರಂಜಿತ ವಿಭಿನ್ನ ಉಡುಪುಗಳ / ವಿವಿಧ ರೀತಿಯ ಡ್ರೆಸ್ ಗಳ ಚಿತ್ರ ಕಾರ್ಡ್ ಗಳು.<br>ಕಾರ್ಯವಿಧಾನ: ( ಚಟುವಟಿಕೆಗಾಗಿ ತಮ್ಮ ಆಯ್ಕೆಯ ಬಣ್ಣದ ಡ್ರೆಸ್ ನಲ್ಲಿ ಬರುವಂತೆ ಮಗುವಿಗೆ ಹೇಳಿ).<br>ಎಂದಿನಂತೆ ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಹೇಳಿ. ಶಿಕ್ಷಕರು ನೀರಿನ ಬಾಟಲಿಯನ್ನು ವೃತ್ತದ ಮಧ್ಯದಲ್ಲಿ ತಿರುಗಿಸುವ ಮೂಲಕ ಮಗುವನ್ನು ಮಾತನಾಡಲು ಆಯ್ಕೆ ಮಾಡಬೇಕು.<br>ಅವನು / ಅವಳು ಅವನ ಸರದಿಯನ್ನು ಪಡೆದಾಗ, ಅವನು / ಅವಳು ಹೇಳಬೇಕು<br>1. ಯಾವ ಬಣ್ಣದ ಉಡುಪು ನಿನಗೆ ಇಷ್ಟ?<br>2. ಈ ಉಡುಪನ್ನು ಧರಿಸಲು ನೀನು ಇಷ್ಟಪಡುತ್ತೀಯಾ / ಇಷ್ಟಪಡುವುದಿಲ್ಲ, ಎಲ್ಲಾ ಮಕ್ಕಳು ತಮ್ಮ ಸರದಿಯನ್ನು ಪಡೆಯುವವರೆಗೂ ಇದು ಮುಂದುವರಿಯುತ್ತದೆ.<br>ಸೂಚನೆ: ಪ್ರತಿ ಮಗುವು ಇತರರ ಮಾತುಗಳನ್ನು ಕೇಳುವ ಮೂಲಕ ಈ ಚಟುವಟಿಕೆಯಲ್ಲಿ ಭಾಗಿಯಾಗಿದೆಯೇ ಎಂದು ಶಿಕ್ಷಕರು ಖಚಿತಪಡಿಸಿಕೊಳ್ಳಬೇಕು.<br><br>ಮೇಲಿನ 2 ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಮೇಲಿನ ಚಟುವಟಿಕೆಯನ್ನು ಮುಂದುವರಿಸಲಾಗುತ್ತದೆ ಮತ್ತು ಅದೇ ಮಗುವು ವೃತ್ತದ ಮಧ್ಯದಲ್ಲಿ ಹರಡಿರುವ ಚಿತ್ರ ಕಾರ್ಡ್ ಅನ್ನು ಆರಿಸಬೇಕು ಮತ್ತು ಕೆಳಗಿನ ಅಂಶಗಳಿಗೆ ಸಂಬಂಧಿಸಿದ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬೇಕು.<br>(ಸಾಮಾನ್ಯ ಉಡುಪುಗಳಿಗೆ ಸಂಬಂಧಿಸಿದ ಚಿತ್ರ)<br>1. ಈ ಉಡುಪನ್ನು ಯಾರು ಧರಿಸುತ್ತಾರೆ? |

DRAFT 22.02.22

| | | | |
|---|---|---|---|
| | | | 2. ಅವರು ಈ ಉಡುಪುಗಳನ್ನು ಯಾವಾಗ ಧರಿಸುತ್ತಾರೆ?<br>3. ಅವರು ಏಕೆ ಧರಿಸುತ್ತಾರೆ? |
| | **ನನ್ನ ಸಮಯ(Free Indore play)**<br>**('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು)** | | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | | **ಸಾಮರ್ಥ್ಯ: ಸ್ಪರ್ಶ ಸಂವೇದನೆ, ಪರಿಸರದ ಅರಿವು**<br>**ಚಟುವಟಿಕೆ...9 ಬಿ "ಸೂಚಿತ ಸಂಖ್ಯೆ"(ಅನುಕ್ರಮಜೋಡಣೆ) (ಗುರಿ 3)**<br>**ಉದ್ದೇಶ:– ಅನುಕ್ರಮವಾಗಿ ಜೋಡಿಸುವುದು.**<br>**ಅಗತ್ಯ ಸಾಮಗ್ರಿಗಳು : 1 ರಿಂದ 10 ರವರೆಗಿನ ಕಾರ್ಡುಗಳು (ಕಿಟ್‌ನಲ್ಲಿರುವ ಸಂಖ್ಯಾ ಕಾರ್ಡುಗಳನ್ನು ನೀಡುವುದು)**<br>**ವಿಧಾನ : ಮಕ್ಕಳನ್ನು ವೃತ್ತಾಕಾರದಲ್ಲಿ ಕುಳಿತುಕೊಳ್ಳಲು ತಿಳಿಸುವುದು. 1 ರಿಂದ 10 ರವರೆಗಿನ ಸಂಖ್ಯಾ ಕಾರ್ಡುಗಳನ್ನು ಒಂದು ಟ್ರೇನಲ್ಲಿ ಇರಿಸಿ ಅದರಲ್ಲಿಯ ಸೂಚಿತ ಸಂಖ್ಯೆಗಳ ಕಾರ್ಡುಗಳನ್ನು ಕ್ರಮವಾಗಿ ಜೋಡಿಸಲು ಮಕ್ಕಳಿಗೆ ಅವಕಾಶ ಮಾಡಿಕೊಡುವುದು.**<br>**ತರಗತಿ–2**<br>**1 ರಿಂದ 10ರ ವರೆಗಿನ ಸಂಖ್ಯೆಗಳನ್ನು ಹಿಮ್ಮುಖವಾಗಿ ಹೇಳಿಸಿ ಬರೆಸುವುದು.**<br>**.( 10, 9, 8, 7, 6, 5, 4, 3, 2, 1)**<br>**ತರಗತಿ–3**<br>**ಅನುಕ್ರಮವಾಗಿ ಬರೆದ ಸಂಖ್ಯೆಗಳನ್ನು ಪದಗಳಲ್ಲಿ ಬರೆಸುವುದು.**<br><br>*** ಬಳಸಬೇಕಾದ ಅಭ್ಯಾಸ ಹಾಳೆಗಳು: I.L-16 ( 01, 02,03ನೇ ತರಗತಿ)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ; ಸೂಕ್ಷ್ಮ ಸ್ನಾಯುಗಳ ವಿಕಾಸ, ಸೃಜನ ಶೀಲತೆಯ ಅಭಿವ್ಯಕ್ತಿ, ಕಣ್ಣು ಕೈಗಳ ನಡುವೆ ಸಮನ್ವಯತೆ, ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಮರಳಿನಲ್ಲಿ ತಿದ್ದುವುದು<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br><br>ಸಾಮಗ್ರಿಗಳು; ಮರಳು. ಕಡ್ಡಿ<br>ವಿಧಾನ; ಮಕ್ಕಳಿಗೆ ಆಳವಾದ ಟ್ರೇನಲ್ಲಿ ಮರಳನ್ನು ತುಂಬಿ, ಚಿಕ್ಕದಾದ ಕಡ್ಡಿಯನ್ನು ಕೊಟ್ಟು ಮರಳಿನಲ್ಲಿ ತಿದ್ದಲು ತಿಳಿಸುವುದು. ಬೇರೆ ಬೇರೆ ಗೆರೆಗಳಾದ ಸರಳರೇಖೆ , ವಕ್ರರೇಖೆ ಮತ್ತು ಆಕಾರಗಳನ್ನು ಬರೆಯಲು ಹೇಳುವುದು. ಸರಳ ರೇಖೆ ಮತ್ತು ವಕ್ರ ರೇಖೆಗಳನ್ನು ಬಳಸಿ ತಮಗೆ ಇಷ್ಟವಾದ ಚಿತ್ರ ಬರೆಯಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ರೇಖಾಕೃತಿಗಳನ್ನು ಬಳಸಿ [ವೃತ್ತ, ತ್ರಿಭುಜ,ಆಯತ ಮತ್ತು ಚೌಕ] ಚಿತ್ರ ಬರೆಯಲು ಹೇಳುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಸಾಮಾಜಿಕ ಪರ ವರ್ತನೆಯ ಅಭಿವೃದ್ಧಿ. ಇತರರ ಭಾವನೆ ಮತ್ತು ಹಕ್ಕುಗಳ ಬಗ್ಗೆ ಗೌರವ.**<br>**ಚಟುವಟಿಕೆ 7 ಸಿ . "ಸಮುದಾಯ ಸಹಾಯಕರಂತೆ ಅಭಿನಯ" (ಗುರಿ –1 ) ECL-14**<br>**ಉದ್ದೇಶ:**<br>*** ಸಾಮಾಜಿಕ ವರ್ತನಾ ಬೆಳವಣಿಗೆಯನ್ನು ಅಭಿವೃದ್ಧಿಗೊಳಿಸುವುದು.**<br>*** ಇತರರ ಭಾವನೆ ಮತ್ತು ಹಕ್ಕುಗಳನ್ನು ಗೌರವಿಸುವುದು.**<br>*** ಶ್ರಮ ಗೌರವವನ್ನು ಬೆಳೆಸುವುದು.** |

DRAFT 22.02.22

| | | | |
|---|---|---|---|
| | | | ಸಾಮಗ್ರಿಗಳು: ಸಮುದಾಯದಲ್ಲಿ ವಿವಿಧ ವೃತ್ತಿಗಳ ಮಿಂಚು ಪಟ್ಟಿಗಳು<br>ವಿಧಾನ: ಮಗುವು ಚಿತ್ರ ಕಾರ್ಡ್ ಅನ್ನು ತೆಗೆದುಕೊಂಡು ಆ ಕಾರ್ಡ್‌ನಲ್ಲಿರುವ ಸಮುದಾಯ ಸಹಾಯಕರ ಕುರಿತು ಮಾತನಾಡಲಿ. ಉಳಿದ ಮಕ್ಕಳು ಆ ಸಮುದಾಯ ಸಹಾಯಕರನ್ನು ಗುರುತಿಸಲಿ.<br>ತರಗತಿವಾರು ವಿವರ : 2 ನೇ ತರಗತಿ ಮಕ್ಕಳು ತಮಗಿಷ್ಟವಾದ ಸಮುದಾಯ ಸಹಾಯಕರಂತೆ ಅಭಿನಯಿಸುವುದು.<br>3 ನೇ ತರಗತಿ ಮಕ್ಕಳು ಸೂಚಿಸಿದ ಸಮುದಾಯ ಸಹಾಯಕರನ್ನು ಅಭಿನಯಿಸುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>ಚಟುವಟಿಕೆ....18<br>• ಚಿತ್ರ ಸಂಪುಟ (ಗುರಿ–2) ವಿಷಯ: ' ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳು ',<br>ಉದ್ದೇಶ:<br>• ಚಿತ್ರದಲ್ಲಿನ ವಸ್ತು/ವ್ಯಕ್ತಿ/ಘಟನೆಗಳನ್ನು ಹೆಸರಿಸುವುದು ಊಹಿಸಿ ಅರ್ಥೈಸಿಕೊಳ್ಳಲು ಚಿತ್ರದೊಂದಿಗೆ ಪಠ್ಯವನ್ನು ಸಂಬಂಧಿಕರಿಸುವುದು.<br>• ಮಕ್ಕಳು ಚಿತ್ರಓದುವುದು ಮತ್ತು ಚರ್ಚಿಸಿ ಅರ್ಥಮಾಡಿಕೊಳ್ಳುವುದು ಮತ್ತು ವೈಯಕ್ತಿಕಚಿತ್ರ ಸಂಪುಟಗಳನ್ನು ರಚಿಸಿ ವೈಯಕ್ತಿಕವಾಗಿ ಮತ್ತು ಗುಂಪುಗಳಲ್ಲಿ ಮಂಡಿಸುವುದು ಮತ್ತು ಗುಂಪಿನಲ್ಲಿ ಕುಳಿತು ಗೋಡೆ ಪತ್ರಿಕೆಗಳನ್ನು ರಚಿಸುವುದು.<br>ಅಗತ್ಯ ಸಾಮಗ್ರಿಗಳು : ಮಕ್ಕಳು ರಚಿಸಿದ ಚಿತ್ರಗಳು<br>ವಿಧಾನ : ' ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳು ಸಂಬಂಧಿಸಿದಂತೆ ಮಕ್ಕಳು ಬರೆದ ಚಿತ್ರಗಳನ್ನು ಕೃತಿಸಂಪುಟದಿಂದ ತೆಗೆದು ಅದರ ಬಗ್ಗೆ ಸಹಜವಾಗಿ ಮಾತನಾಡಲು ಪ್ರೋತ್ಸಾಹಿಸುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಸಹಾಯ ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು ಜೊತೆಗೆ 2ನೇ ಮತ್ತು 3ನೇತರಗತಿಯ ಮಕ್ಕಳಿಗೂ ಸ್ವತಂತ್ರವಾಗಿ ಮಾತನಾಡಲು ಅವಕಾಶ ನೀಡುವುದು.<br>*(ಸದರಿ ಚಟುವಟಿಕೆಯ ಮುಂದುವರೆದ ಭಾಗವು 29ನೇ ದಿನದಲ್ಲಿ ಮುಂದುವರೆಯುವುದು)* |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಚಲನ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಾತ್ಮಕ ಚಿಂತನೆ.<br>ಚಟುವಟಿಕೆ 38. "ಶುಭಾಶಯ ಪತ್ರಗಳ ತಯಾರಿಕೆ (ಗುರಿ –2) **ECW-12**<br>ಉದ್ದೇಶಗಳು:<br>• ಉದ್ದೇಶಕ್ಕನುಗುಣವಾಗಿ ಬರೆಯುವ ಕೌಶಲವನ್ನು ಬೆಳೆಸುವುದು.<br>• ಚಲನ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಸೃಜನಾತ್ಮಕ ಚಿಂತನೆಯನ್ನು ಉತ್ತೇಜಿಸುವುದು.<br>• ಶುಭಾಶಯ ಪತ್ರಗಳನ್ನು ರಚಿಸಲು ಅವಕಾಶ ನೀಡುವುದು.<br>ಸಾಮಗ್ರಿಗಳು: ಹಾಳೆ, ಕ್ರೇಯಾನ್ಸ್<br>ವಿಧಾನ:<br>ಮಕ್ಕಳು ತಮ್ಮ ಆಯ್ಕೆಯ ಚಿತ್ರಗಳನ್ನು ಬರೆದು ಬಣ್ಣ ಹಚ್ಚಿ, ತಮ್ಮ ಹೆಸರು ಮತ್ತು ಯಾರಿಗೆ ಶುಭಾಶಯಗಳನ್ನು ಹೇಳಲು ಬಯಸುತ್ತಾರೋ ಅವರ ಹೆಸರು ಬರೆಯಲಿ. *(ಶಿಕ್ಷಕರು ಮಕ್ಕಳು ಸೂಚಿಸಿದ ವ್ಯಕ್ತಿಗಳ ಹೆಸರನ್ನು ಬರೆಯಲು ಸಹಾಯ ಮಾಡುವುದು)* ಈ ಚಟುವಟಿಕೆಯನ್ನು ರಾಷ್ಟ್ರೀಯ ಮತ್ತು ಸ್ಥಳೀಯ ಹಬ್ಬಗಳು/ ಹುಟ್ಟುಹಬ್ಬದ ಆಚರಣೆಗಳು ಇತ್ಯಾದಿ ಸಂದರ್ಭಗಳಲ್ಲಿಯೂ ಮಾಡಬಹುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ಶುಭಾಶಯದ ಸಂದೇಶಗಳನ್ನು ಪಟ್ಟಿಮಾಡಲು ತಿಳಿಸಿ. ಉದಾ: ಶುಭೋದಯ, ಹುಟ್ಟು ಹಬ್ಬದ ಶುಭಾಶಯಗಳು..<br>3ನೇ ತರಗತಿಯ ಮಕ್ಕಳು ಆ ಸಂದೇಶಗಳಿಗೆ ಶುಭಾಶಯ ಪತ್ರಗಳನ್ನು ತಯಾರಿಸುವಂತೆ ಮಾಡಿ. (26 ನೇ ದಿನಕ್ಕೆ ಮುಂದುವರೆದಿದೆ)<br>(26ನೇ ದಿನಕ್ಕೂ ಈ ಚಟುವಟಿಕೆಯನ್ನು ಮುಂದುವರಿಸಿ.) |

DRAFT 2022

| | | |
|---|---|---|
| | | **ಬರವಣಿಗೆಯ ಮಾದರಿ:**<br>**ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.**<br>**ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.** |
| | **ಹೊರಾಂಗಣ ಆಟಗಳು** | Day 25:<br>ಚಟುವಟಿಕೆ : ಧ್ಯಾನ<br>ಸಾಮರ್ಥ್ಯ : ಏಕಾಗ್ರತೆ ಬೆಳೆಸುವುದು <br>ಸಾಮಗ್ರಿ :<br>ವಿಧಾನ : ಮಕ್ಕಳಿಗೆ ಸರಳ ಸೂಚನೆಗಳನು ನೀಡುವುದು.<br>ಕಣ್ಣನ್ನು ಮುಚ್ಚಿ ಬೆನ್ನನ್ನು ನೇರ ಮಾಡಿ ಕುಳಿತುಕೊಳ್ಳಲು ತಿಳಿಸುವುದು.. ಎರಡು ಕೈಗಳನ್ನು ಸರಳ ಮುದ್ರೆಯನ್ನು ಬಳಸಿ ತೊಡೆಯ ಮೇಲೆ ಇರಿಸಿ ಶಾಂತಿ ಮಂತ್ರ ಹೇಳಿಸುವುದು .<br>**ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೂ ಈ ಧ್ಯಾನವನ್ನೇ ಮುಂದುವರಿಸುವುದು.** |
| | **ಕಥಾ ಸಮಯ** | **ಶೀರ್ಷಿಕೆ :** ಸಹಜ ಸೌಂದರ್ಯ<br>**ಸಾಮಗ್ರಿಗಳು** :ಕಥೆಯ ಸಾಹಿತ್ಯ<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>**ವಿಧಾನ :** ***ಕಥಾ ಸಾಹಿತ್ಯ ನಿರೂಪಣೆ***<br>➢ ಶಿಕ್ಷಕರು ಕಥೆ ಹೇಳುವ ಮುನ್ನಕಥೆಯನ್ನು ಓದಿ ಅಭ್ಯಾಸಮಾಡಿಕೊಳ್ಳಬೇಕು.<br>➢ ಸೂಕ್ತ ಆಂಗಿಕ ಚಲನೆಯೊಂದಿಗೆ ಸರಳ ಭಾಷೆಯಲ್ಲಿಕಥೆಯನ್ನು ಹೇಳಬೇಕು.<br>➢ ಕಥೆ ಹೇಳುವಾಗ ಶಿಕ್ಷಕರು ಮಕ್ಕಳೊಂದಿಗೆ ವೃತ್ತದಲ್ಲಿ ಕುಳಿತುಕೊಳ್ಳಬೇಕು.<br>➢ ಸರಳ ಪ್ರಶ್ನೆಗಳ್ನು ಕೇಳಿ ಕಥೆಯನ್ನುಅರ್ಥೈಸಬೇಕು.<br>**ಕಥೆ :**<br>**ಒಮ್ಮೆಒಂದುಕಾಡಿನಲ್ಲಿಎಲ್ಲಾ ಪಕ್ಷಿಗಳು ಸೇರಿ ಹಬ್ಬ ಆಚರಿಸಿದವು. ಅಲ್ಲಿ ಸೇರಿದಎಲ್ಲಾ ಪಕ್ಷಿಗಳು ನಾನು ಚೆನ್ನಾಗಿದ್ದೇನೆ ನಾನು ಚೆನ್ನಾಗಿದ್ದೇನೆಎಂದು ಬೀಗುತ್ತಿದ್ದವು. ಹಾಗಾದರೆಯಾರುಚೆನ್ನಾಗಿದ್ದಾರೆ ನೋಡೋಣವೆಂದುಒಂದೊಂದೆ ವೇದಿಕೆಗೆ ಬಂದವು. ಕಾಗೆ ಬಿಳಿಯ ಕೋಟನ್ನು ಧರಿಸಿ ಬಂದಿತು, ಕೋಗಿಲೆ ಕೆಂಪು ಅಂಗಿಯನ್ನು ಹಾಕಿತು. ಗುಬ್ಬಿ ಹಸಿರು ಚಡ್ಡಿಯನ್ನು, ಗಿಳಿಯು ಕೆಂಪು ಕುಪ್ಪಸವನ್ನು ಧರಿಸಿದವು. ಪಾರಿವಾಳ ಛತ್ರಿಯನ್ನು ಹಿಡಿದು ವೈಯಾರತೋರಿತು. ಕೊಕ್ಕರೆ ಪೈಜಾಮ ಧರಿಸಿ, ಟೋಪಿಯನ್ನು ಹಾಕಿತು. ಯಾವುದೇರೀತಿಯ ವೇಷಭೂಷಣಧರಿಸದ ನವಿಲು ತನ್ನ ಸುಂದರವಾದ ಗರಿಗಳನ್ನು ಬಿಚ್ಚಿ ನೃತ್ಯವನ್ನು ಮಾಡಿತು. ಎಲ್ಲಾ ಪಕ್ಷಿಗಳು ಚಪ್ಪಾಳೆ ತಟ್ಟಿಕುಣಿದಾಡಿದವು ನವಿಲೆ ಸುಂದರಎಂದು ಘೋಷಿಸಿ ಬಹುಮಾನಕೊಟ್ಟವು.**<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>11) **ಕಥೆಯಲ್ಲಿರುವ ಪಕ್ಷಿಗಳನ್ನು ಹೆಸರಿಸು?**<br>12) **ಗಿಳಿಯು ಯಾವ ಬಟ್ಟೆಯನ್ನು ಧರಿಸಿತ್ತು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |


DRAFT 22.02.22

# ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

## ವಾರ–5 ದಿನ–26 (ಮಂಗಳವಾರ)

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 26 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:** ನನ್ನ ಒಳ್ಳೆಯ ಅಭ್ಯಾಸಗಳು (ಮುಂದುವರಿದ ಚಟುವಟಿಕೆ)<br>ಸಾಮಗ್ರಿಗಳು: ಕೂದಲನ್ನು ಬಾಚಿಕೊಳ್ಳುವುದು, ಹಲ್ಲುಜ್ಜುವುದು, ಕೈಗಳನ್ನು ತೊಳೆಯುವುದು, ಉಗುರುಗಳನ್ನು ಕತ್ತರಿಸುವುದು ಇತ್ಯಾದಿಗಳ ಚಿತ್ರಗಳು.<br>ಸಮಯ: 5 ನಿಮಿಷಗಳು<br>ಕಾರ್ಯವಿಧಾನ:<br>ದಿನ–25 ರ ಸೂಚನೆಗಳನ್ನು ಅನುಸರಿಸಿ. ಮತ್ತು ಹವಾಮಾನ ಚಟುವಟಿಕೆಯ ಬಗ್ಗೆ ಮಕ್ಕಳನ್ನು ಕೇಳಿ ಮತ್ತು ಅದನ್ನು ಹವಾಮಾನ ಕಾರ್ಡ್ ನಲ್ಲಿ ಗುರುತಿಸಲು ಅವರಿಗೆ ಸೂಚನೆ ಮಾಡಿ.<br><br>**ಚಟುವಟಿಕೆ 2: ನನ್ನ ಪ್ಲೇಟ್‌ನಲ್ಲಿ ಏನಿದೆ? ( ಕೆರೆ–ದಂಡೆ ಆಟದ ಮಾದರಿ )**<br>ಸಾಮಗ್ರಿಗಳು: ಯಾವುದೂ ಇಲ್ಲ<br>ಸಮಯ: 5 ನಿಮಿಷಗಳು<br>ಕಾರ್ಯವಿಧಾನ:<br>• ತರಗತಿಯಲ್ಲಿ ನೆಲದ ಮೇಲೆ ದೊಡ್ಡ ವೃತ್ತವನ್ನು ಎಳೆಯಿರಿ (ಮಕ್ಕಳ ಸಂಖ್ಯೆಗೆ ಅನುಗುಣವಾಗಿ)<br>• ಮಕ್ಕಳನ್ನು ವೃತ್ತದ ಸಾಲಿನ ಹೊರಗೆ ನಿಲ್ಲುವಂತೆ ಮಾಡಿ.<br>• ಶಿಕ್ಷಕರು ತರಕಾರಿಗಳ ಹೆಸರುಗಳನ್ನು ಹೇಳಿದರೆ, ಮಕ್ಕಳು ವೃತ್ತದ ಒಳಗೆ ಜಿಗಿಯಬೇಕು ಮತ್ತು ಹಣ್ಣುಗಳ ಹೆಸರುಗಳನ್ನು ಹೇಳಿದರೆ ಅವರು ವೃತ್ತದ ಹೊರಗೆ ಜಿಗಿಯಬೇಕು ಮತ್ತು ಯಾರಾದರೂ ತಪ್ಪು ಮಾಡಿದರೆ, ಅವನು /ಅವಳು ಆಟದಿಂದ ಔಟ್ ಆಗುತ್ತಾರೆ.. |
| | **ಮಾತು ಕತೆ** | ದಿನ 25 ರ ಚಟುವಟಿಕೆಯನ್ನು ಮುಂದುವರೆಸಿ. |
| | **ನನ್ನ ಸಮಯ(Free Indore play)** **('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು)** | ದಿನ – 26<br>* ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು.<br>* ಮಗು ಎಲ್ಲಾ ಮೂಲೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದನ್ನು ಹಾಗೂ ಸೂಕ್ತವಾಗಿ ಪೂರ್ಣಗೊಳಿಸಿರುವುದನ್ನು ಖಚಿತ ಪಡಿಸಿಕೊಳ್ಳುವುದು.<br>* ಅಪೂರ್ಣಗೊಳಿಸಿರುವ ಚಟುವಟಿಕೆಗಳನ್ನು ಮಗು ಪೂರ್ಣಗೊಳಿಸಲು ಸಹಕರಿಸುವುದು.<br>* ಮುಂದಿನ ದಿನಗಳಲ್ಲಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಯಾವ ಮಕ್ಕಳ ಕಡೆಗೆ ಹೆಚ್ಚು ಗಮನಹರಿಸಬೇಕೆಂಬ ಬಗ್ಗೆ ಶಿಕ್ಷಕರು ಮಾನಸಿಕವಾಗಿ ಸಿದ್ಧರಾಗುವುದು.<br>* ದಿನದ ಅಂತ್ಯಕ್ಕೆ ಕಲಿಕಾ ಮೂಲೆಗಳಲ್ಲಿ ಮುಂದಿನ ಹಂತಕ್ಕೆ ಹೊಂದಿಸಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ** | **ಸಾಮರ್ಥ್ಯ: ವಿನ್ಯಾಸಗಳನ್ನು ಗುರ್ತಿಸಿ ಪೂರ್ಣಗೊಳಿಸುವುದು. ಪರಿಸರದ ಅರಿವು.**<br>**ಚಟುವಟಿಕೆ 10 ."ವಿನ್ಯಾಸಗಳನ್ನು ಪೂರ್ಣಗೊಳಿಸುವುದು" (ಗುರಿ –3)**<br>**ಉದ್ದೇಶ:– ವಿನ್ಯಾಸವನ್ನು ಪೂರ್ಣಗೊಳಿಸುವುದು.**<br>**ಸಾಮಗ್ರಿಗಳು: ಪೆನ್ಸಿಲ್, ಅಳಿಸುವ ರಬ್ಬರ್, ಮೆಂಡರ್, ಅಥವಾ ಸೇಬು. ಬಾಳೆಹಣ್ಣು, ಕಿತ್ತಳೇ ಹಣ್ಣು, ಪೇರಳೆ ಮತ್ತು ವಿವಿಧ ಹಣ್ಣುಗಳ ಮಿಂಚು ಪಟ್ಟಿಗಳು, ಚೌಕ, ಆಯತ, ವೃತ್ತವಾಗಿ ಕತ್ತರಿಸಿದ ಆಕೃತಿಗಳು.**<br>**ವಿಧಾನ : ಹಣ್ಣುಗಳನ್ನು ತೆಗೆದುಕೊಳ್ಳುವುದು. ಒಂದು ಸಾಲಿನಲ್ಲಿ ಪರ್ಯಾಯವಾಗಿರುವಂತೆ ಜೋಡಿಸುವುದು.** |

DRAFT 22.02.22

| | | | |
|---|---|---|---|
| | **ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | | **ಜೋಡಿಸುವ ಕ್ರಮ ಹೀಗಿರಲಿ. ಬಾಳೆಹಣ್ಣು, ಸೇಬು, ಬಾಳೆಹಣ್ಣು, ಸೇಬು, ಬಾಳೆಹಣ್ಣು, ಸೇಬು ಅಥವಾ ಸೇಬು, ಸೇಬು, ಬಾಳೆಹಣ್ಣು, ಸೇಬು, ಸೇಬು, ಬಾಳೆಹಣ್ಣು. ಮಕ್ಕಳಿಗೆ ಹಣ್ಣುಗಳನ್ನು ಜೋಡಿಸಿರುವ ವಿನ್ಯಾಸವನ್ನು ಗುರುತಿಸಲು ಪ್ರೋತ್ಸಾಹಿಸುವುದು. ಮಕ್ಕಳು ಇದೇ ವಿನ್ಯಾಸವನ್ನು ಅನುಸರಿಸಿ ಹಣ್ಣುಗಳನ್ನು ಜೋಡಿಸಲು ತಿಳಿಸುವುದು. ಹೀಗೆಯೇ ತ್ರಿಕೋನ, ವೃತ್ತ, ಚೌಕದಂತಹ ಆಕೃತಿಗಳನ್ನು ಬಳಸಿ ಸರಳ ಮಾದರಿಯನ್ನು ಅನುಸರಿಸಿ ವಿನ್ಯಾಸ ರಚಿಸಲು ಹೇಳುವುದು. ಹೀಗೆಯೇ ಹೂವುಗಳು, ಎಲೆಗಳು, ಕೊಂಬೆಗಳು, ಬೆಣಚು ಕಲ್ಲುಗಳು, ಬೀಜಗಳನ್ನು ಬಳಸಿ ವಿನ್ಯಾಸ ರೂಪಿಸುವುದು.**<br>**ತರಗತಿ–2**<br>**ವಿವಿಧ ರೀತಿಯ ಆಕೃತಿಗಳ ಚಿತ್ರಗಳನ್ನು ನೀಡಿ ಮುಂದಿನ ಚಿತ್ರಗಳನ್ನು ಪೂರ್ಣಗೊಳಿಸುವುದು.**<br> **----, ------**<br>**ತರಗತಿ–3**<br>**ಸಂಖ್ಯಾವಿನ್ಯಾಸಗಳನ್ನು ಪೂರ್ಣಗೊಳಿಸಲು ಹೇಳುವುದು.**<br>**ಉದಾ:–1, 2, 1, 2, ---------**<br>* **ಬಳಸಬೇಕಾದ ಅಭ್ಯಾಸ ಹಾಳೆಗಳು: I.L- 17,18,19,20 ( 01, 02,03ನೇ ತರಗತಿ)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ; ಸಮಾಜಮುಖಿ ನಡವಳಿಕೆಯ ವಿಕಾಸ, ಇತರರ ಭಾವನೆಗಳನ್ನು, ಹಕ್ಕುಗಳನ್ನು ಗೌರವಿಸುವುದು. ಸೃಜನಶೀಲತೆಯ ಹಾಗೂ ಸೌಂದರ್ಯ ಪ್ರಜ್ಞೆಯ ವಿಕಾಸ ಗಮನಿಸುವುದು, ಕಲ್ಪನಾ ಶಕ್ತಿಯ ವಿಕಾಸ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ; 10 ಬಿ ಹಬ್ಬಗಳ ಹಾಡುಗಳನ್ನು ಹೇಳುವುದು.<br>ಬಂದ ಬಂದ ಗಣಪ ಬಂದ<br>ಮೋದಕವನ್ನು ಗಬಗಬ ತಿಂದ<br>ಸೊಂಡಿಲನೆತ್ತಿ ಆಡಿಸೆ ಚೆಂದ<br>ಎಲ್ಲರ ಕಣ್ಮಣಿಯಾಗಿ ನಿಂದ<br>ಭಕ್ತರ ಹರಸುತ ಹರುಷವ ತಂದ<br>ಬಲು ಚತುರ ಈ ಪಾರ್ವತಿ ಕಂದ<br>ಉದ್ದೇಶ;<br>• ಮಕ್ಕಳಿಗೆ ನಮ್ಮ ಸಂಸ್ಕೃತಿಯಲ್ಲಿರುವ ಅನೇಕ ವಿಷಯಗಳ ಅರಿವಾಗುತ್ತದೆ.<br>• ಸೌಂದರ್ಯ ಪ್ರಜ್ಞೆಯ ವಿಕಾಸವಾಗುತ್ತದೆ.<br>• ಹಬ್ಬಗಳಿಗೆ ಸಂಭಂದಿಸಿದ ಹಾಡುಗಳನ್ನು ಕಲಿಯುವುದರೊಂದಿಗೆ ಹಬ್ಬಗಳ ವಿಶೇಷತೆಯನ್ನು ತಿಳಿಯುತ್ತಾರೆ.<br>ಸಾಮಗ್ರಿಗಳು; ಹಬ್ಬಗಳ ಮಿಂಚುಪಟ್ಟಿಗಳು, ಚಿತ್ರಗಳು.<br>ವಿಧಾನ; ಪ್ರಮುಖ ಹಬ್ಬಗಳಾದ ಸಾಂಸ್ಕೃತಿಕ ಮತ್ತು ರಾಷ್ಟ್ರೀಯ ಹಬ್ಬಗಳ ಪರಿಚಯ ಮಾಡಿ ಕೊಡುವುದು. ಹಬ್ಬಗಳನ್ನು ಆಚರಿಸುವ ವಿಧಾನ ತಿಳಿಸುವುದು. ಸ್ವತಂತ್ರ ದಿನಾಚರಣೆ , ಗಣರಾಜ್ಯೋತ್ಸವ , ಸಂಕ್ರಾಂತಿ, ದೀಪಾವಳಿ, ಹೋಲಿ, ಕ್ರಿಸ್‌ಮಸ್, ಈದ್ ಮಿಲಾದ್, ಗುರುಪೂರ್ಣಿಮಾ ಮುಂತಾದ ಹಬ್ಬಗಳ ಬಗ್ಗೆ ವಿವರಿಸುವುದು. ಭಾರತದಲ್ಲಿ ಈ ಹಬ್ಬಗಳ ಆಚರಣೆ ಹೇಗೆ ಎಂಬುದನ್ನು ತಿಳಿಸುವುದು.<br>ನಿರ್ದಿಷ್ಟ ಹಬ್ಬಗಳ ಕುರಿತು ಹಾಡು,ನೃತ್ಯ, ಕಲೆ, ಸೃಜನಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವುದು.<br>ವಿವರ; 2ಮತ್ತು 3 ನೇ ತರಗತಿಯವರು ಹಬ್ಬಕ್ಕೆ ಸಂಭಂದಿಸಿದ ಹಾಡಿನಲ್ಲಿರುವ ವಿಶೇಷತೆಯನ್ನು ಹೇಳುತ್ತಾರೆ. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು** | **ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಪದ ಸಂಪತ್ತಿನ ಅಭಿವೃದ್ಧಿ, ಚಾಲನಾ ಕೌಶಲಗಳ ಅಭಿವೃದ್ಧಿ.**<br>**ಚಟುವಟಿಕೆ: 15 ಪ್ರಾಸ ಪದಗಳನ್ನು ಆಲಿಸುವುದು (ಗುರಿ–02) ECL-4 ( 14ನೇ ದಿನದಿಂದ ಮುಂದುವರೆದಿದೆ)**<br>**ಉದ್ದೇಶಗಳು:**<br>* **ಧ್ವನಿ ವಿಜ್ಞಾನದ ಅರಿವನ್ನು ಹೊಂದುವಂತೆ ಮಾಡುವುದು.**<br>* **ಪ್ರಾಸಪದಗಳ ಮೂಲಕ ಪದಸಂಪತ್ತನ್ನು ಹೆಚ್ಚಿಸುವುದು.** |

DRAFT 2022

| | | | |
|---|---|---|---|
| | | ಮಾತನಾಡುವುದು | * ಸ್ಥೂಲ ಹಾಗೂ ಸೂಕ್ಷ್ಮ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು:– ಇಲ್ಲ<br>ವಿಧಾನ:<br>* ಮಕ್ಕಳಿಗೆ ಹೊಸ ಪ್ರಾಸ ಗೀತೆಯನ್ನು ಹೇಳುವುದು.<br>* ಹಾಡು ಹೇಳುವಾಗ ಪ್ರಾಸ ಪದಗಳನ್ನು ಸ್ವಲ್ಪ ಒತ್ತಿ ಹೇಳುವುದು.<br>* ಪ್ರಾಸ ಗೀತೆಗೆ ತಕ್ಕಂತೆ ಅಭಿನಯಿಸಲು ತಿಳಿಸುವುದು.<br>* ಒತ್ತಿ ಹೇಳಿದ ಪದಗಳನ್ನು ಪ್ರತ್ಯೇಕವಾಗಿ ಹೇಳಿಸುವುದು.<br>* ಪ್ರಾಸಗೀತೆಯಲ್ಲಿಯ ಪ್ರಾಸ ಪದಗಳನ್ನು ಪರಿಚಯಿಸಿ ಅದಕ್ಕೆ ಮತ್ತೆ ಇನ್ನೊಂದು ಪ್ರಾಸ ಪದ ಸೇರಿಸುವುದು.<br>ತರಗತಿವಾರು ವಿವರ: 2 ನೇ ತರಗತಿ ಮಕ್ಕಳು ಪ್ರಾಸ ಪದಕ್ಕೆ ಇನ್ನೂ ಎರಡೆರಡು ಪ್ರಾಸಪದಗಳನ್ನು ಸೇರಿಸಲು ಪ್ರಯತ್ನಿಸುವುದು. 3 ನೇ ತರಗತಿ ಮಕ್ಕಳು ಗುರುತಿಸಿದ ಪದಗಳನ್ನು ತಮ್ಮ ವಾಕ್ಯದಲ್ಲಿ ಬಳಸುವುದು.. (32 ನೇ ದಿನಕ್ಕೆ ಮುಂದುವರೆದಿದೆ) |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಪದ ಗುರ್ತಿಸುವಿಕೆ, ಮುದ್ರಣದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತು ಅಭಿವೃದ್ಧಿ..<br>ಚಟುವಟಿಕೆ 11 ಎ : ನಾಮಫಲಕ(ಗುರಿ–2)<br>ಉದ್ದೇಶ : ನಾಮಫಲಕಗಳಲ್ಲಿಯ ಹೆಸರುಗಳನ್ನು ಚಿತ್ರಗಳ ಸಹಾಯದಿಂದ ಗುರುತಿಸುವರು ಮತ್ತು ಓದುವರು ಮತ್ತು ಕಥೆಯಲ್ಲಿ ಬರುವ ಮುಖ್ಯ ಪಾತ್ರಗಳನ್ನು ಗುರುತಿಸುವರು.<br>ಅಗತ್ಯ ಸಾಮಗ್ರಿಗಳು: ಮಿಂಚು ಪಟ್ಟಿ, ನೋಟ್ ಪುಸ್ತಕ, ಚಿತ್ರ ಪಟ. ಕಥಾ ಪುಸ್ತಕ.<br>ವಿಧಾನ: ಮಗುವಿನ ಸ್ನೇಹಿತರ ಹೆಸರಿನ ಪಕ್ಕದಲ್ಲಿ ಯಾವುದಾದರೂ ವಸ್ತು, ಪ್ರಾಣಿಗಳ ಚಿತ್ರ ಅಂಟಿಸಿ ನಾಮ ಫಲಕಗಳನ್ನು ರಚಿಸುವುದು. ನಂತರ ತನ್ನ ಸ್ನೇಹಿತರ ಹೆಸರನ್ನು ಗುರುತಿಸಲು ತಿಳಿಸುವುದು ಒಂದು ವೇಳೆ ಮಕ್ಕಳು ಹೆಸರುಗಳನ್ನು ಗುರ್ತಿಸಲು ವಿಫಲವಾದರೆ ಹೆಸರಿನ ಮುಂದೆ ಅಂಟಿಸಿರುವ ಚಿತ್ರಗಳ ಸಹಾಯದಿಂದ ತನ್ನ ಹೆಸರನ್ನು ತೋರಿಸಲು ನೆರವಾಗುವುದು.<br>2 ಮತ್ತು 3ನೇ ತರಗತಿ : ಶಿಕ್ಷಕರು ಮಕ್ಕಳಿಗೆ ವಿವಿಧ ಕಥಾ ಪುಸ್ತಕಗಳನ್ನು ನೀಡುವುದು ಅ ಕಥೆಯಲ್ಲಿ ಬಂದಿರುವ ಮುಖ್ಯ ಪಾತ್ರಗಳು ವಸ್ತುಗಳ ಹೆಸರುಗಳನ್ನು ಗುರುತಿಸಲು ಸೂಚಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಚಲನ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಾತ್ಮಕ ಚಿಂತನೆ.<br>ಚಟುವಟಿಕೆ 38. "ಶುಭಾಶಯ ಪತ್ರಗಳ ತಯಾರಿಕೆ (ಗುರಿ –2) **ECW-12** ( 25 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>• ಉದ್ದೇಶಕ್ಕನುಗುಣವಾಗಿ ಬರೆಯುವ ಕೌಶಲವನ್ನು ಬೆಳೆಸುವುದು.<br>• ಚಲನ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಸೃಜನಾತ್ಮಕ ಚಿಂತನೆಯನ್ನು ಉತ್ತೇಜಿಸುವುದು.<br>• ಶುಭಾಶಯ ಪತ್ರಗಳನ್ನು ರಚಿಸಲು ಅವಕಾಶ ನೀಡುವುದು.<br>ಸಾಮಗ್ರಿಗಳು: ಹಾಳೆ, ಕ್ರೇಯಾನ್ಸ್<br>ವಿಧಾನ:<br>ಮಕ್ಕಳು ತಮ್ಮ ಆಯ್ಕೆಯ ಚಿತ್ರಗಳನ್ನು ಬರೆದು ಬಣ್ಣ ಹಚ್ಚಿ, ತಮ್ಮ ಹೆಸರು ಮತ್ತು ಯಾರಿಗೆ ಶುಭಾಶಯಗಳನ್ನು ಹೇಳಲು ಬಯಸುತ್ತಾರೋ ಅವರ ಹೆಸರು ಬರೆಯಲಿ. *(ಶಿಕ್ಷಕರು ಮಕ್ಕಳು ಸೂಚಿಸಿದ ವ್ಯಕ್ತಿಗಳ ಹೆಸರನ್ನು ಬರೆಯಲು ಸಹಾಯ ಮಾಡುವುದು)* ಈ ಚಟುವಟಿಕೆಯನ್ನು ರಾಷ್ಟ್ರೀಯ ಮತ್ತು ಸ್ಥಳೀಯ ಹಬ್ಬಗಳು/ ಹುಟ್ಟುಹಬ್ಬದ ಆಚರಣೆಗಳು ಇತ್ಯಾದಿ ಸಂದರ್ಭಗಳಲ್ಲಿಯೂ ಮಾಡಬಹುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ಶುಭಾಶಯದ ಸಂದೇಶಗಳನ್ನು ಪಟ್ಟಿಮಾಡಲು ತಿಳಿಸಿ. ಉದಾ: ಶುಭೋದಯ, ಹುಟ್ಟು ಹಬ್ಬದ ಶುಭಾಶಯಗಳು..<br>3ನೇ ತರಗತಿಯ ಮಕ್ಕಳು ಆ ಸಂದೇಶಗಳಿಗೆ ಶುಭಾಶಯ ಪತ್ರಗಳನ್ನು ತಯಾರಿಸುವಂತೆ ಮಾಡಿ. |
| | | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು. |

DRAFT 2022

| | | |
|---|---|---|
| | | **ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.** |
| | **ಹೊರಾಂಗಣ ಆಟಗಳು** | ಚಟುವಟಿಕೆ : ಸರಳ ವ್ಯಾಯಾಮ<br>ಸಾಮರ್ಥ್ಯ : ಕೈ ಕಾಲುಗಳ ಸ್ನಾಯುಗಳ ಚಲನೆ.<br>ವಿಧಾನ : ತರಗತಿ ಕೊಠಡಿ ಒಳಗೆ ಸರಳ ಸೂಚನೆಗಳನ್ನು ನೀಡಿ ವ್ಯಾಯಾಮ ಮಾಡಿಸುವುದು.<br>ಎರಡು ಕೈಗಳನ್ನು ಮೇಲಕ್ಕೆ ಎತ್ತಿ , ಎರಡು ಕೈಗಳನ್ನು ಭುಜದ ಪಕ್ಕಕ್ಕೆ ತನ್ನಿ<br>**ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೆ ಹೆಚ್ಚಿನ ವ್ಯಾಯಾಮಗಳನ್ನೂ ನೀಡುವುದು.** |
| | **ಕಥಾ ಸಮಯ** | ಮೊದಲ ದಿನದಉದ್ದೇಶದಂತೆಕಥಾ ಸಮಯವು ಮುಂದುವರೆಯುತ್ತದೆ.<br>***ಕಥಾ ಸಾಹಿತ್ಯ ನಿರೂಪಣೆ***<br>ಶಿಕ್ಷಕರು ಕಥೆಯನ್ನು ನಿರೂಪಿಸುವುದರಜೊತೆಗೆ ಮಕ್ಕಳ ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣಗೊಳಿಸುವುದು<br>ಉದಾ :ಇದಾದ ಮೇಲೆ ಏನಾಗಿತ್ತು? ನಂತರಯಾರು ಬಂದರು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>**1) ಬಿಳಿಯ ಕೋಟನ್ನು ಹಾಕಿಕೊಂಡು ನಡೆದ ಪಕ್ಷಿ ಯಾವುದು?**<br>**2) ವೈಯಾರ ತೋರಿದ ಪಕ್ಷಿ ಯಾವುದು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–5** **ದಿನ–27 (ಬುಧವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 27 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1: ನಾನು ತರಕಾರಿ**<br>ಅಗತ್ಯವಿರುವ ಸಾಮಗ್ರಿಗಳು: ವಿವಿಧ ರೀತಿಯ ತರಕಾರಿಗಳ ಚಿತ್ರ ಕಾರ್ಡ್ ಗಳು.<br>ಸಮಯ: 5 ನಿಮಿಷಗಳು<br>ಕಾರ್ಯವಿಧಾನ:<br>• ವಿವಿಧ ರೀತಿಯ ತರಕಾರಿಗಳ ಚಿತ್ರಗಳನ್ನು ಒಂದೊಂದಾಗಿ ತೋರಿಸಿ.<br>• ತೋರಿಸಿದ ಚಿತ್ರಗಳನ್ನು ನೋಡಲು ಮಕ್ಕಳಿಗೆ ತಿಳಿಸಿ ಮತ್ತು ತರಕಾರಿಯ ಹೆಸರು ಮತ್ತು ಅದರ ಬಣ್ಣವನ್ನು ಹೇಳುವ ಮೂಲಕ ತರಗತಿಗೆ ಪ್ರವೇಶಿಸಲು ಅವರಿಗೆ ತಿಳಿಸಿ.<br>ಉದಾಹರಣೆಗೆ: ನಾನು ಕ್ಯಾರೆಟ್. ಕಿತ್ತಳೆ ಬಣ್ಣದ ಕ್ಯಾರೆಟ್.<br>**ಚಟುವಟಿಕೆ 2**<br>• ತರಗತಿ ಪ್ರವೇಶಿಸಿದ ನಂತರ ವೃತ್ತಾಕಾರವಾಗಿ ನಿಲ್ಲುವಂತೆ ಸೂಚಿಸಿ.<br>• ಮಕ್ಕಳನ್ನು ಸ್ವಾಗತಿಸಿ "ಇವತ್ತು ಯಾವ ವಾರ?" ಎಂದು ಮಕ್ಕಳನ್ನು ಕೇಳಿ ಮತ್ತು "ಇವತ್ತು ___ ವಾರ ಎಂಬ ಉತ್ತರ ನೀಡಲು ಪ್ರೋತ್ಸಾಹಿಸಿ. |

DRAFT 22.02.22

| | | |
|---|---|---|
| | | • ಹವಾಮಾನದ ಬಗ್ಗೆ ಮಕ್ಕಳನ್ನು ಕೇಳಿ.<br>• ಹವಾಮಾನ ಕಾರ್ಡ್ ನಲ್ಲಿ ಮಾರ್ಕ್ ಮಾಡಲು ಅವರಿಗೆ ತಿಳಿಸಿ. |
| | **ಮಾತು ಕತೆ** | ಚಟುವಟಿಕೆ : ಋತುಮಾನದ ಮಾತು<br>ಅಗತ್ಯವಿರುವ ಸಾಮಗ್ರಿಗಳು: ಋತುಮಾನದ ಉಡುಪುಗಳಿಗೆ ಸಂಬಂಧಿಸಿದ ಫ್ಲಾಶ್ ಕಾರ್ಡ್ ಗಳು.( ಹತ್ತಿ ಉಡುಪುಗಳು, ಸ್ವೆಟರ್ ಗಳು, ಟೋಪಿ, ಸಾಕ್ಸ್, ಮಳೆ ಕೋಟುಗಳು, ಕ್ರಾಫ್ ಗಳು, ಮಂಕಿ ಕ್ಯಾಪ್ ಗಳು)<br>ಕಾರ್ಯವಿಧಾನ:<br>ರಿಮೋಟ್ ಆಟವನ್ನು ನಡೆಸಿ ಅಂದರೆ, ವೃತ್ತದ ಮಧ್ಯದಲ್ಲಿ ಒದಗಿಸಲಾದ ಫ್ಲಾಶ್ ಕಾರ್ಡ್ ಗಳನ್ನು ಆರಿಸಲು ಮಗುವಿಗೆ ತನ್ನ ಸರದಿಯನ್ನು ನೀಡಲು ಟಿವಿ ರಿಮೋಟ್ ಬಳಸಿ. ಅವನು / ಅವಳು ಕೆಳಗಿನ ರಚನೆಯ ಮೂಲಕ ಮಾತನಾಡಬೇಕಾದ ಅವಕಾಶವನ್ನು ಯಾರು ಪಡೆಯುತ್ತಾರೆ.<br>1. ನಾನು ಈ ಉಡುಪನ್ನು _____<br>2. ನಾನು ಈ ಸೀಸನ್ ನಲ್ಲಿ __<br>3. ಈ ಋತುವಿನಲ್ಲಿ ಇದು ತುಂಬಾ ಬಿಸಿ / ಶೀತ / ಚಳಿ / ಮಳೆಗಾಲವಾಗಿರುತ್ತದೆ.<br>4. ನಾನು ಈ ಉಡುಪನ್ನು ಏಕೆ ಧರಿಸುತ್ತೇನೆ?<br>• ಎಲ್ಲಾ ಮಕ್ಕಳು ಅವನ ಸರದಿಯನ್ನು ಪಡೆಯುವವರೆಗೂ ಚಟುವಟಿಕೆ ಮುಂದುವರಿಯುತ್ತದೆ. |
| | **ನನ್ನ ಸಮಯ(Free Indore play) ('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು)** | ದಿನ – 27<br>**ಕಲಿಕಾ ಸಿದ್ಧತಾ ಭಾಗವಾಗಿ 8 ಮೂಲೆಗಳಲ್ಲಿ ಮೊದಲ ಹಂತದಲ್ಲಿ ನಿಗದಿಪಡಿಸಿರುವ ಮೂಲೆವಾರು ಚಟುವಟಿಕೆಗಳ ಬಗ್ಗೆ ಹಾಗೂ ಆಯಾ ಮೂಲೆಗಳ ಸಾಮಗ್ರಿಗಳನ್ನು ಬಳಸುವ ಬಗ್ಗೆ ಶಿಕ್ಷಕರು ಮಕ್ಕಳಿಗೆ ಪರಿಚಯ ಒದಗಿಸುವರು. ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತ ಅವರ ಅರ್ಥೈಸಿಕೊಳ್ಳುವಿಕೆಯನ್ನು ಖಾತ್ರಿ ಪಡಿಸಿಕೊಳ್ಳುತ್ತಾರೆ.**<br>**(* ಮೂಲೆವಾರು ಸಲಹಾತ್ಮಕ ಚಟುವಟಿಕೆಗಳನ್ನು ನೀಡಿದ್ದು, ಸಾಮರ್ಥ್ಯಗಳನ್ನು ಸಾಧಿಸಲು ಅನುಕೂಲವಾಗುವಂತೆ ಮಕ್ಕಳಿಗೆ ಹೆಚ್ಚುವರಿ ಚಟುವಟಿಕೆಗಳನ್ನು ಯೋಜಿಸಬಹುದಾಗಿದೆ.)**<br>**********************************************************************<br>**<u>ಮೂಲೆ – ಬಿಲ್ಡಿಂಗ್ ಬ್ಲಾಕ್ಸ್ ಮೂಲೆ:–</u>**<br>**ಸಾಮರ್ಥ್ಯ: ಕಣ್ಣು ಮತ್ತು ಕೈಗಳ ಸಂಯೋಜನೆಯನ್ನು ಸಾಧಿಸುವುದು.**<br>ಚಟುವಟಿಕೆ: **ರೈಲಿನ ಮಾದರಿ ರಚನೆ**<br>ಉದ್ದೇಶ :ಬ್ಲಾಕ್ ಗಳನ್ನು ನಿರ್ದೇಶನದಂತೆ ವ್ಯವಸ್ಥಿತವಾಗಿ ಜೋಡಿಸುವ ಕೌಶಲ್ಯ ಗಳಿಸುವುದು.<br>ಸಾಮಗ್ರಿ :– ಕಲಿಕಾ ಕಿಟ್ ನ ಬಿಲ್ಡಿಂಗ್ ಬ್ಲಾಕ್ಸ್<br>( ಲಭ್ಯವಿಲ್ಲದಿದ್ದಲ್ಲಿ ಸೋಪ್ ಬಾಕ್ಸ್ ಗಳು, ಬೆಂಕಿ ಪೊಟ್ಟಣಗಳು, ಪೇಸ್ಟ್ ಬಾಕ್ಸ್ ಗಳು, ವಿವಿಧ ಅಳತೆಯ ಪುಸ್ತಕಗಳು)<br>ವಿಧಾನ:<br>ವಿದ್ಯಾ ಪ್ರವೇಶ (ವಿ.ಪ್ರ):**ಲಭ್ಯಬ್ಲಾಕ್ಸ್ ಗಳನ್ನು ರೈಲಿನ ಮಾದರಿಯಲ್ಲಿ ಜೋಡಿಸುವುದು**<br><br>**2 ನೇ ತರಗತಿ &3 ನೇ ತರಗತಿ :**<br>ಟ್ರಕ್, ಮೆಟ್ಟಿಲು, ಕಮಾನು ಹೀಗೆ ವಿವಿಧ ಮಾದರಿಯಲ್ಲಿ ಬ್ಲಾಕ್ಸ್ ಗಳನ್ನು ಜೋಡಿಸುವುದು.<br>***************************************************************************<br>**<u>ಮೂಲೆ – ಗಣಿತ ಮೂಲೆ:–</u>**<br>**ಸಾಮರ್ಥ್ಯ: ವಸ್ತುಗಳ ಗಾತ್ರ, ಎತ್ತರ–ಗಿಡ್ಡ, ಭಾರ–ಹಗುರ, ಆಧಾರದ ಮೇಲೆ ವರ್ಗೀಕರಿಸುವುದು ಹಾಗೂ ಸಾಂಕೇತಿಕವಾಗಿ ಸಂಖ್ಯೆಗಳ ಹೋಲಿಕೆ ಮಾಡುವುದು.**<br>ಉದ್ದೇಶ: ಭಾರ ಹಾಗೂ ಹಗುರ ವಸ್ತುಗಳನ್ನು ವರ್ಗೀಕರಿಸುವುದು.<br>ಸಾಮಗ್ರಿ :–ಪ್ಲಾಸ್ಟಿಕ್ ಚೆಂಡು, ರಬ್ಬರ್ ಚೆಂಡು, ರಟ್ಟುಗಳು,ನಾಣ್ಯ, ಹತ್ತಿ ಈ ರೀತಿಯ ವಿವಿಧ ತೂಕದ ವಸ್ತುಗಳು<br>ವಿಧಾನ:<br>ವಿದ್ಯಾ ಪ್ರವೇಶ (ವಿ.ಪ್ರ):<br>* ನೀಡಲಾಗಿರುವ ಸಾಮಗ್ರಿಗಳನ್ನು ನೋಡಿ ಅನುಭವ ಹೊಂದಿದ ನಂತರ ಭಾರ – ಹಗುರ ವಸ್ತುಗಳಾಗಿ |

DRAFT 2022

ವಿಂಗಡಿಸುವನು/ಳು.

**2 ನೇ & 3 ನೇ ತರಗತಿ :**

ವಿದ್ಯಾರ್ಥಿಯು ಮೇಲಿನ ಚಟುವಟಿಕೆ ಪೂರ್ಣಗೊಳಿಸಿದ ನಂತರ ತನ್ನ ಪರಿಸರದಲ್ಲಿರುವ ಭಾರ ಮತ್ತು ಹಗುರ ವಸ್ತುಗಳನ್ನು ಹೆಸರಿಸುವನು.

**************************************************************************************

**ಅನ್ವೇಷಣೆ ಅಥವಾ ವಿಜ್ಞಾನ ಮೂಲೆ:**

**ಸಾಮರ್ಥ್ಯ: ವೈಜ್ಞಾನಿಕ, ಅನ್ವೇಷಣಾ ಮನೋಭಾವ ಹಾಗೂ ಚಿಂತನಾ ಮನೋಭಾವಗಳನ್ನು ಬೆಳೆಸುವುದು.**

ಚಟುವಟಿಕೆ: ನೀರಿನಲ್ಲಿ ಕರಗು

ಉದ್ದೇಶ :ನೀರಿನಲ್ಲಿ ಕರಗುವ/ಕರಗದ ವಸ್ತುಗಳನ್ನು ಗುರುತಿಸುವುದು.

ಸಾಮಗ್ರಿ :– ಪಾರದರ್ಶಕ ಪ್ಲಾಸ್ಟಿಕ್ ಲೋಟಗಳು, ನೀರು, ಮರಳು, ಉಪ್ಪು, ಹರಳು, ಬಣ್ಣ ಇತ್ಯಾದಿ.

ವಿಧಾನ :(ವಿ.ಪ್ರ ಹಾಗೂ **2 & 3 ನೇ ತರಗತಿ)**

ಪಾರದರ್ಶಕವಾದ ಎರಡು ಪ್ಲಾಸ್ಟಿಕ್ ಲೋಟಗಳಲ್ಲಿ ಅರ್ಧದಷ್ಟು ನೀರನ್ನು ತುಂಬುವುದು.ಒಂದು ಲೋಟಕ್ಕೆ ಉಪ್ಪು ಹಾಗೂ ಇನ್ನೊಂದಕ್ಕೆ ಮರಳನ್ನು ಸೇರಿಸಿ ಕಲಕುವುದು. ಕೆಲವು ಕ್ಷಣಗಳ ನಂತರ ನೀರಿನಲ್ಲಿ ಕಾಣುವ ಬದಲಾವಣೆಗಳನ್ನು ಗಮನಿಸುವುದು.

**************************************************************************************

**ಗೊಂಬೆಗಳ ಮೂಲೆ :**

**ಸಾಮರ್ಥ್ಯ: ಸೌಂದರ್ಯೋಪಾಸನೆ, ವೈಯಕಿಕ ಸ್ವಚ್ಛತೆ, ಅಭಿವ್ಯಕ್ತಿ ಕೌಶಲ್ಯ ಬೆಳೆಸುವುದು.**

ಚಟುವಟಿಕೆ: ನಾನು ನನ್ನ ಗೊಂಬೆಯ ಸ್ವಚ್ಛತೆ.

ಉದ್ದೇಶ :ಸ್ವಚ್ಛತೆಯ ಅರಿವು ಹೊಂದುವುದರೊಂದಿಗೆ ಒಳ್ಳೆಯ ಅಭ್ಯಾಸಗಳನ್ನು ಪ್ರದರ್ಶಿಸುವುದು.

ಸಾಮಗ್ರಿ :– ಗೊಂಬೆ, ಕರವಸ್ತ್ರ, ಟವೆಲ್, ನೈಲ್ ಕಟ್ಟರ್, ಆಟಿಕೆ ಪ್ಲೇಟ್, ಬಾಚಣಿಗೆ, ನ್ಯಾಪ್ಕಿನ್ (ಹೊದಿಕೆಯಂತೆ ಬಳಸಲು)

ವಿಧಾನ:


ವಿದ್ಯಾ ಪ್ರವೇಶ (ವಿ.ಪ್ರ): **2 ನೇ & 3 ನೇ ತರಗತಿ:–**

ಮಗು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಅನುಸರಿಸುವ ಸ್ವಚ್ಛತಾ ಅಭ್ಯಾಸಗಳನ್ನು ಗೊಂಬೆಯೊಂದಿಗೆ ನಿರ್ವಹಿಸಲು ( ಹಲ್ಲುಜ್ಜುವಿಕೆ, ಮುಖ ತೊಳೆಯುವಿಕೆ, ಉಗುರು ಕತ್ತರಿಸುವಿಕೆ, ತಿಂಡಿ ತಿನ್ನುವುದು, ಮಲಗುವುದು) ಈ ರೀತಿಯ ದೈನಂದಿನ ಒಳ್ಳೆಯ ಅಭ್ಯಾಸಗಳನ್ನು ಗೊಂಬೆಯೊಂದಿಗೆ ಪ್ರದರ್ಶಿಸುವುದು.

**************************************************************************************

**ಓದುವ / ತರಗತಿ ಗ್ರಂಥಾಲಯ ಮೂಲೆ :**

**ಸಾಮರ್ಥ್ಯ: ಚಿತ್ರಗಳನ್ನು ಓದುವುದರೊಂದಿಗೆ ಅರ್ಥೈಸಿಕೊಳ್ಳುವುದು, ಕಲ್ಪನಾಶಕ್ತಿ, ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸುವುದು.**



ಚಟುವಟಿಕೆ: **“ಚಿತ್ರ ಓದು”**

ಉದ್ದೇಶ : ಭಿನ್ನತೆಯನ್ನು ಅರಿಯುವುದು ಮತ್ತು ಅಭಿವ್ಯಕ್ತಿಸುವುದು.


ಸಾಮಗ್ರಿಗಳು: ವ್ಯತ್ಯಾಸಗಳನ್ನು ಹೊಂದಿರುವ ಎರಡು ಚಿತ್ರಗಳು

ವಿಧಾನ : (ವಿ.ಪ್ರ ಹಾಗೂ 2&3 ನೇ ತರಗತಿ)

ಮೂರರಿಂದ ನಾಲ್ಕು ವ್ಯತ್ಯಾಸಗಳಿರುವ ಎರಡು ಚಿತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಅವುಗಳಲ್ಲಿನ ವ್ಯತ್ಯಾಸಗಳನ್ನು ಮಾತಿನ ಮೂಲಕ ಅಭಿವ್ಯಕ್ತಿಸಲು ತಿಳಿಸುವುದು.

**************************************************************************************

DRAFT 2022

| | | |
|---|---|---|
| | | **ಕರಕುಶಲ / ಕಲೆಗೊಂದು ನೆಲೆ :**<br>ಚಟುವಟಿಕೆ: "ಹಸ್ತ ಚಿತ್ರ"<br><br>ಉದ್ದೇಶ : ಕಣ್ಣು–ಕೈಗಳ ಸಹಸಂಬಂಧ ಅರಿಯುವುದು<br>ಸಾಮಗ್ರಿಗಳು: ಬಿಳಿಹಾಳೆ, ಪೆನ್ಸಿಲ್ , ಕ್ರೇಯಾನ್ಸ್<br>ವಿಧಾನ : (ವಿ.ಪ್ರ)<br>ಬಿಳಿಹಾಳೆಯ ಮೇಲೆ ಹಸ್ತವನ್ನು ತೆರೆದಿಟ್ಟು ಪೆನ್ಸಿಲ್ ನ ಸಹಾಯದಿಂದ ಬೆರಳುಗಳ ಅಂಚುಗಳ ಮೇಲೆ ಹಸ್ತದ ಆಕೃತಿಯನ್ನು ಮೂಡಿಸುವುದು, ಬಣ್ಣ ತುಂಬುವುದು.<br>***************************************************************************************<br>**ಬರೆಯುವ ಮೂಲೆ :**<br>**ಸಾಮರ್ಥ್ಯ : ಬರವಣಿಗೆ ಸಿದ್ಧತಾ ಅಭ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಅಕ್ಷರಗಳ ವಿನ್ಯಾಸವನ್ನು ರಚಿಸುವುದು.**<br>ಚಟುವಟಿಕೆ: ರೇಖಾ ಚಿತ್ರ<br>ಉದ್ದೇಶ : * ಬರವಣಿಗೆ ಅಗತ್ಯವಾದ ಪುರ್ವ ಸಿದ್ಧತಾ ಕೌಶಲಗಳ ಬೆಳವಣಿಗೆ.<br>ಸಾಮಗ್ರಿ :– ಡ್ರಾಯಿಂಗ್ ಶೀಟ್, ವೈಟ್ ಶೀಟ್ಸ್, ಪೆನ್ಸಿಲ್, ಬಳೆ, ನಾಣ್ಯ, ಮುಚ್ಚಳಗಳು, ಬೆಂಕಿ ಪೊಟ್ಟಣ<br>ವಿದ್ಯಾ ಪ್ರವೇಶ (ವಿ.ಪ್ರ):<br>ಹಾಳೆಯ ಮೇಲೆ ಸಾಮಗ್ರಿಗಳನ್ನು ಬಳಸಿ ಅವುಗಳ ಆಕೃತಿಗಳನ್ನು ರಚಿಸುವುದು.<br>**2 ನೇ & 3 ನೇ ತರಗತಿ :**<br>ಮೂರ್ತ ರೂಪದ ವಸ್ತುಗಳನ್ನು ನೋಡಿ ಅದರಂತೆಯೇ ರೇಖಾ ಚಿತ್ರಗಳನ್ನು ಬರೆಯಲು ಪ್ರಯತ್ನಿಸುವರು.<br>*************************************************************************<br>**ಆಟಿಕೆ / ಮಾಡಿ ನೋಡು ಮೂಲೆ :**<br>**ಸಾಮರ್ಥ್ಯ: ಆಲೋಚನಾಶಕ್ತಿ, ಸೃಜನಶೀಲತೆ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು.**<br>ಚಟುವಟಿಕೆ: ಓರೆಗಾಮಿ ಚಟುವಟಿಕೆ<br><br>ಉದ್ದೇಶ : * ವ್ಯವಸ್ಥಿತವಾಗಿ ಮತ್ತು ಕ್ರಮಬದ್ಧವಾಗಿ ನೀಡಿದ ನಿರ್ದೇಶನಗಳ ಪಾಲಿಸುವಿಕೆ.<br>ಸಾಮಗ್ರಿ :– ಬಣ್ಣ ಬಣ್ಣದ ಕಾಗದಗಳು.<br>ವಿಧಾನ :<br>ವಿದ್ಯಾ ಪ್ರವೇಶ (ವಿ.ಪ್ರ):**2 ನೇ & 3 ನೇ ತರಗತಿ :**<br>ಚಿತ್ರದಲ್ಲಿ ಒದಗಿಸಿರುವ ಸೂಚನೆಗಳಂತೆ ಮಕ್ಕಳು ಓರೆಗಾಮಿ ಚಟುವಟಿಕೆಯನ್ನು ನಿರ್ವಹಿಸುವುದು. ( ಶಿಕ್ಷಕರು ಈ ಚಟುವಟಿಕೆ ನಿರ್ವಹಿಸುವ ಮೊದಲು ಮಕ್ಕಳಿಗೆ ಒಂದೇರಡು ಬಾರಿ ಮಾದರಿಯಾಗಿ ಮಾಡಿ ತೋರಿಸುವುದು. ಮಕ್ಕಳಿಗೆ ಅಗತ್ಯವಿರುವಲ್ಲಿ ಸಹಕರಿಸುವುದು.)<br>**2 ನೇ & 3 ನೇ ತರಗತಿ :**<br>ವಿದ್ಯಾರ್ಥಿಯು ಸ್ವಯಂ ಆಕೃತಿಗಳನ್ನು ರಚಿಸುವುದರೊಂದಿಗೆ ನೀಡಲಾದ ಚಟುವಟಿಕೆಯನ್ನು ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ : ಹೋಲಿಸುವುದು, ಪರಿಸರ ಅರಿವು, ಬಣ್ಣ, ಆಕಾರ ಮತ್ತು ಗಾತ್ರಗಳ ಕಲ್ಪನೆ.**<br>**ಚಟುವಟಿಕೆ : 12 ಎ "ಸ್ಪರ್ಶ ಮಾಡು ಎಣಿಸಿ ನೋಡು" (ಗುರಿ –3)**<br>**ಉದ್ದೇಶ : ಸ್ಪರ್ಶಿಸಿ ಎಣಿಸಿ ಹೇಳುವುದು.**<br>**ಸಾಮಗ್ರಿಗಳು: ಬ್ಲಾಕ್ಸ್, ಬಳಪ, ಹರಳುಗಳು, ಬಾಟಲ್ ಮುಚ್ಚಳ, ಚೆಂಡುಗಳು, ಕಾಳುಗಳು.**<br>**ವಿಧಾನ:**<br>**ಐದು ಅಥವಾ ಐದಕ್ಕಿಂತ ಹೆಚ್ಚು ವಸ್ತುಗಳನ್ನು ಸಾಲಿನಲ್ಲಿ ಇಡುವುದು( ಬ್ಲಾಕ್‌ಗಳು, ಸೀಮೆಸುಣ್ಣ, ಬಾಟಲ್ ಮುಚ್ಚಳ ಚೆಂಡುಗಳು) ಪ್ರತಿಯೊಂದು ವಸ್ತುವನ್ನು ಸ್ಪರ್ಶಿಸಲು ಮತ್ತು ಎಣಿಸಲು ಹೇಳುವುದು.**<br>**ತರಗತಿ–2**<br>**5ಕ್ಕಿಂತ ಹೆಚ್ಚು ವಸ್ತುಗಳನ್ನು ಸ್ಪರ್ಶಿಸಿ ಎಣಿಸಲು ಹೇಳುವುದು.** |

DRAFT 22.02.22

| | | | |
|---|---|---|---|
| | | | ತರಗತಿ–3<br>ಗುಂಪುಗಳಲ್ಲಿನ ವಸ್ತುಗಳನ್ನು ಯಾವ ಗುಣಲಕ್ಷಣಗಳ ಆಧಾರದ ಮೇಲೆ ವಿಂಗಡಿಸಲಾಯಿತು ? ಎಂಬ ಪ್ರಶ್ನೆಗೆ ಉತ್ತರ ಪಡೆಯುವುದು.<br><br>*** ಬಳಸಬೇಕಾದ ಅಭ್ಯಾಸ ಹಾಳೆಗಳು: I.L-21, 22 ( 01, 02,03ನೇ ತರಗತಿ)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ; ಸಮಾಜಮುಖಿ ವರ್ತನೆಗಳನ್ನು ರೂಢಿಸಿಕೊಳ್ಳುವುದು, ಬೇರೆಯವರ ಭಾವನೆಗಳನ್ನು ಮತ್ತು ಹಕ್ಕುಗಳನ್ನು ಗೌರವಿಸಿ ಸಮುದಾಯದಲ್ಲಿ ಸಹಾಯ ಮಾಡುವ, ಬೇರೆ ಬೇರೆ ವೃತ್ತಿಗಳನ್ನು ಗೌರವಿಸುವುದು.<br>ಚಟುವಟಿಕೆ; 7 ಎ. ನನ್ನ ಸಮುದಾಯದ ಸಹಾಯಕರು<br>ಉದ್ದೇಶ;<br>• ಗ್ರಹಣ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾರೆ.<br>• ಸಮುದಾಯದ ಸಹಾಯಕರ ಪಾತ್ರಗಳನ್ನು ಗುರ್ತಿಸುತ್ತಾರೆ.<br>ಸಾಮಗ್ರಿ; ವಿವಿಧ ವೃತ್ತಿಯ ಮಿಂಚುಪಟ್ಟಿಗಳು.<br>ವಿಧಾನ; ಮಕ್ಕಳು ಸಮುದಾಯದ ಸಹಾಯಕರಂತೆ ಮೂಕಾಭಿನಯ ಮಾಡುವುದು ಉಳಿದ ಮಕ್ಕಳು ಅವರು ಯಾರೆಂದು ಊಹಿಸಿ ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ಸ್ಥಳೀಯ ಸಮುದಾಯದಲ್ಲಿನ ಸಹಾಯಕರನ್ನು ಗುರ್ತಿಸಿ ಅವರಂತೆ ನಟಿಸಲು ಹೇಳುವುದು.<br>*** ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-7 ( 01, 02,03ನೇ ತರಗತಿ)** |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಕ್ರಿಯಾತ್ಮಕ ಸ್ವ ಅಭಿವ್ಯಕ್ತಿ, ಧ್ವನಿ ಸಂಕೇತ ಹಾಗೂ ಪ್ರಾಸದ ಅರಿವು, ಪರಿಸರ ಪ್ರಜ್ಞೆ, ಪದಸಂಪತ್ತಿನ ಬೆಳವಣಿಗೆ<br>ಚಟುವಟಿಕೆ 3 ಹಾಡು, ಪ್ರಾಸಗೀತೆ, ಪದ್ಯ/ನಾಟಕ. (ಗುರಿ–2) ECL-3 ( 9 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶ:<br>* ಧ್ವನಿ ಸಂಕೇತಗಳ ಅರಿವನ್ನು ಮೂಡಿಸುವುದು.<br>* ಪ್ರಾಸಗಳ ಅರಿವನ್ನು ಉಂಟು ಮಾಡುವುದು.<br>* ಕ್ರಿಯಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.<br>* ತನ್ನ ಸುತ್ತಲಿನ ಪರಿಸರದೊಂದಿಗೆ ಸಂಬಂಧೀಕರಿಸುವುದು.<br>ಅಗತ್ಯ ಸಾಮಗ್ರಿಗಳು– ಇಲ್ಲ<br>ವಿಧಾನ: ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ. ಶಿಕ್ಷಕರು ಮಕ್ಕಳಿಗೆ 3 ನೇ ದಿನದದಂದು ಪರಿಚಯಿಸಿದ ಪ್ರಾಸಗೀತೆಯನ್ನೇ ಅಭಿನಯದೊಂದಿಗೆ ಹಾಡಿ ತೋರಿಸಲಿ. ಶಿಕ್ಷಕರನ್ನು ಅನುಕರಿಸುತ್ತಾ ಮಕ್ಕಳು ಹಾಡನ್ನು ಪುನರುಚ್ಚರಿಸಲು ತಿಳಿಸಿ.<br>ನೆನಪಿಡಬೇಕಾದ ಅಂಶಗಳು:<br>* ಮಕ್ಕಳು ಹಾಡನ್ನು ಆನಂದಿಸಲು ಸೂಕ್ತ ಅಭಿನಯ ಹಾಗೂ ಉತ್ಸಾಹದಿಂದ ಹಾಡಿ.<br>* ಮಗುವಿಗೆ ತಿಳಿದಿರುವ ಹಾಡನ್ನು ಹೇಳಲು ಉತ್ತೇಜಿಸಿ.<br>ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಪ್ರಾಸಗೀತೆಯಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸುವುದು. ನೇ ತರಗತಿ ಮಕ್ಕಳು ಆ ಪ್ರಾಸ ಪದಗಳಿಗೆ ಇನ್ನಷ್ಟು ಪದಗಳನ್ನು ಸೇರಿಸುವುದು..** |
| | | **ಅರ್ಥ ಗ್ರಹಿಕೆಯೊಂದಿಗಿನ ಓದು** | **ಸಾಮರ್ಥ್ಯ: ಪದ ಗುರ್ತಿಸುವಿಕೆ, ಮುದ್ರಣದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತು ಅಭಿವೃದ್ಧಿ.<br>ಚಟುವಟಿಕೆ 11 ಬಿ : ಪುಸ್ತಕ ಮೇಳ (ಗುರಿ –2)<br>ಉದ್ದೇಶ : ಪುಸ್ತಕಗಳ ಮೇಲಿನ ಬಾಂಧವ್ಯವನ್ನು ವೃದ್ಧಿಸುವುದು.<br>ಅಗತ್ಯ ಸಾಮಗ್ರಿಗಳು: ವಿವಿಧ ರೀತಿಯ ಪುಸ್ತಕಗಳು<br>ವಿಧಾನ: ಶಾಲಾ ಆವರಣದಲ್ಲಿ ಪುಸ್ತಕ ಮೇಳವನ್ನು ಆಯೋಜಿಸಿ, ಮಕ್ಕಳು ಪುಸ್ತಕಗಳೆಡೆಗೆ ಒಲವು ಹೆಚ್ಚಿಸಿಕೊಳ್ಳುವಂತೆ ಮಾಡುವುದು. ಪುಸ್ತಕ ಮೇಳದಲ್ಲಿ ಪಾಲಕರು ಭಾಗವಹಿಸುವಂತೆ ಪ್ರೋತ್ಸಾಹಿಸುವುದು.<br>2 ಮತ್ತು 3ನೇ ತರಗತಿ : ಈ ಮಕ್ಕಳಿಗೆ ತನ್ನ ಬಳಿಯಿರುವ ಪುಸ್ತಕಗಳು ಮತ್ತು ಗ್ರಂಥಾಲಯದಲ್ಲಿ ತನಗಿಷ್ಟದ ಪುಸ್ತಕಗಳನ್ನು ಅಯ್ಕೆ ಮಾಡಿಕೊಂಡು ಪುಸ್ತಕ ಮೇಳವನ್ನು ಆಯೋಜಿಸುವುದು** |

DRAFT 22.02.22

| | | |
|---|---|---|
| | ಉದ್ದೇಶಿತ ಬರಹ | ಸಾಮರ್ಥ್ಯ: ಪದ ಗುರ್ತಿಸುವಿಕೆ, ಮುದ್ರಣದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತು ಅಭಿವೃದ್ಧಿ.<br>ಚಟುವಟಿಕೆ 11 ಬಿ "ಪುಸ್ತಕ ಮೇಳ "(ಗುರಿ –2 ) **ECW-13**<br>ಉದ್ದೇಶಗಳು:<br>• ಪುಸ್ತಕಗಳ ಹೆಸರನ್ನು ಗುರುತಿಸುವುದು.<br>• ಮುದ್ರಣದ ಪರಿಕಲ್ಪನೆಯನ್ನು ಮೂಡಿಸುವುದು.<br>• ಓದಿನೆಡೆಗೆ ಒಲವು ಬೆಳೆಸುವುದು.<br>• ಪುಸ್ತಕಗಳನ್ನು ಅರ್ಥಗ್ರಹಿಕೆಯೊಂದಿಗೆ ಓದುವುದು.<br>• ಪದಸಂಪತ್ತನ್ನು ಹೆಚ್ಚಿಸಿಕೊಳ್ಳುವುದು.<br>ಸಾಮಗ್ರಿಗಳು: ಗ್ರಂಥಾಲಯದ ಪುಸ್ತಕಗಳು, ನೋಟ್ ಬುಕ್<br>ವಿಧಾನ:<br>ಶಾಲಾ ಆವರಣದಲ್ಲಿ ಪುಸ್ತಕ ಮೇಳವನ್ನು ಆಯೋಜಿಸಿ ಮಕ್ಕಳು ವೈವಿಧ್ಯಮಯವಾದ ಪುಸ್ತಕಗಳನ್ನು ಪರಿಚಯಿಸಿಕೊಳ್ಳಲು ಅವಕಾಶ ಕಲ್ಪಿಸುವುದು. ಆ ಮೂಲಕ ಪುಸ್ತಕಗಳೆಡೆಗೆ ಒಲವು ಬೆಳೆಸಿಕೊಳ್ಳುವಂತೆ ಮಾಡುವುದು. ತಾನು ನೋಡಿದ ಪುಸ್ತಕಗಳನ್ನು ಹೆಸರಿಸಲು ತಿಳಿಸುವುದು. ಪುಸ್ತಕ ಮೇಳದಲ್ಲಿ ಪಾಲಕರು ಭಾಗವಹಿಸಲು ಪ್ರೋತ್ಸಾಹಿಸುವುದು.<br>ತರಗತಿವಾರು ವಿವರ:<br>2ನೇ ತರಗತಿಯ ಮಕ್ಕಳು ತಾವು ನೋಡಿದ ಪುಸ್ತಕಗಳ ಹೆಸರನ್ನು ಪಟ್ಟಿಮಾಡಲು ತಿಳಿಸಿ ಹಾಗೂ 3ನೇ ತರಗತಿಯ ಮಕ್ಕಳು ಪುಸ್ತಕ ಮೇಳದಲ್ಲಿ ತಾನು ನೋಡಿದ ಪುಸ್ತಕಗಳ ಬಗ್ಗೆ 4–5 ವಾಕ್ಯಗಳನ್ನು ಬರೆಯಲು ಅವಕಾಶ ನೀಡಿ. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| ಹೊರಾಂಗಣ ಆಟಗಳು | | Day 27:<br>ಚಟುವಟಿಕೆ : ಸರಳ ಉಸಿರಾಟದ ಚಟುವಟಿಕೆಗಳು Breathing Exercise<br>ಸಾಮರ್ಥ್ಯ : ಏಕಾಗ್ರತೆ ಬೆಳೆಸುವುದು<br>ಸಾಮಗ್ರಿ :<br>ವಿಧಾನ : ಮಕ್ಕಳಿಗೆ ಸರಳ ಸೂಚನೆಗಳನ್ನು ನೀಡುವುದು<br>ಕಣ್ಣನ್ನು ಮುಚ್ಚಿ ಬೆನ್ನನ್ನು ನೇರ ಮಾಡಿ ಕುಳಿತುಕೊಳ್ಳಲು ತಿಳಿಸುವುದು.. ಎರಡು ಕೈಗಳನ್ನು ಸರಳ ಮುದ್ರೆಯನ್ನು ಬಳಸಿ ತೊಡೆಯ ಮೇಲೆ ಇರಿಸಿ ಉಸಿರನ್ನು ನಿಧಾನವಾಗಿ ತೆಗೆದುಕೊಳ್ಳಲು ಹಾಗೂ ಹೊರಬಿಡಲು ಸೂಚಿಸುವುದು.<br>**ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೆ ಹೆಚ್ಚಿನ ಉಸಿರಾಟದ ಚಟುವಟಿಕೆಗಳನ್ನು ನೀಡುವುದು.** |
| ಕಥಾ ಸಮಯ | | **ಕಥೆಯ ಶೀರ್ಷಿಕೆ :** ಸಹಜ ಸೌಂದರ್ಯ<br>**ಸಾಮಗ್ರಿಗಳು :** ಸರಣಿ ಚಿತ್ರಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>ವಿಧಾನ :<br>***ಸರಣಿ ಚಿತ್ರಗಳು***<br>ಸರಣಿ ಚಿತ್ರಗಳನ್ನು ವಿವಿಧ ಕಾಯ್ತಂತ್ರಗಳ ಅಡಿಯಲ್ಲಿಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು. |

DRAFT 22.02.22

| | | |
|---|---|---|
| | | (ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

## ವಾರ–5 ದಿನ–28 (ಗುರುವಾರ)

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 28 | ಶುಭಾಶಯ ವಿನಿಮಯ<br>*(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1**<br>ದಿನ–27 ರ ಸೂಚನೆಗಳನ್ನು ಅನುಸರಿಸಿ. ಮತ್ತು ಹವಾಮಾನ ಚಟುವಟಿಕೆಯ ಬಗ್ಗೆ ಮಕ್ಕಳನ್ನು ಕೇಳಿ ಮತ್ತು ಅದನ್ನು ಹವಾಮಾನ ಕಾರ್ಡ್ ನಲ್ಲಿ ಗುರುತಿಸಲು ಅವರಿಗೆ ಸೂಚನೆ ಮಾಡಿ.<br>**ಚಟುವಟಿಕೆ 2**: ಕೋತಿಯನ್ನು ಎಚ್ಚರಿಸಬೇಡಿ.<br>ಅಗತ್ಯವಿರುವ ಸಾಮಗ್ರಿಗಳು: ಗಂಟೆ<br>ಕಾರ್ಯವಿಧಾನ:<br>1. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ.<br>2. ಒಬ್ಬ ವಿದ್ಯಾರ್ಥಿಯನ್ನು ಕೋತಿಯಂತೆ ನಟಿಸಲು ಸೂಚಿಸಿ. ( ಕೋತಿಯು ವೃತ್ತದ ಮಲಗಿರುವಂತೆ ನಟಿಸಬೇಕು.)<br>3. ಉಳಿದ ಮಕ್ಕಳು ಗಂಟೆಯನ್ನು ಒಬ್ಬರಿಂದೊಬ್ಬರಿಗೆ ಪಾಸ್ ಮಾಡಬೇಕು. ಹಾಗೆ ಪಾಸ್ ಮಾಡುವಾಗ ಗಂಟೆಯ ಶಬ್ದ ಆಗಬಾರದು.<br>4. ಗಂಟೆ ಶಬ್ದ ಮಾಡಿದರೆ ಯಾವ ಮಗುವಿನ ಕೈಯಲ್ಲಿ ಗಂಟೆ ಇರುವುದೋ ಕೋತಿ ಆ ಮಗುವಿನ ಜಾಗದಲ್ಲಿ ಕೂರುತ್ತದೆ.<br>5. ಆ ಮಗು ಮುಂದಿನ ಕೋತಿಯಾಗಬೇಕು. ಇದು ಮುಂದುವರಿಯುತ್ತದೆ |
| | ಮಾತು ಕತೆ<br>*( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | **ಚಟುವಟಿಕೆ : ನನ್ನ ನೆಚ್ಚಿನ ಗೊಂಬೆ**<br>ಸಾಮಗ್ರಿಗಳು: ವಿವಿಧ ರೀತಿಯ ಗೊಂಬೆಗಳು. (ಕಾಗದದ ಗೊಂಬೆ, ಬೊಂಬೆಗಳು, ಮರದ ಗೊಂಬೆಗಳು, ಉಣ್ಣೆಯ ಗೊಂಬೆಗಳು, ಬಟ್ಟೆಯ ಗೊಂಬೆಗಳು, ಕೋಲುಗಳಿಂದ ಮಾಡಿದ ಗೊಂಬೆಗಳು, ಸ್ಥಳೀಯ ಲಭ್ಯವಿರುವ ಗೊಂಬೆಗಳು, ಇತ್ಯಾದಿ)<br>ವಿಧಾನ: 1. ಮಕ್ಕಳನ್ನು ಅರ್ಧವೃತ್ತದಲ್ಲಿ ಕೂರಿಸಿ.<br>2. ವಿವಿಧ ರೀತಿಯ ಗೊಂಬೆಗಳನ್ನು ಟ್ರೇನಲ್ಲಿ ಇರಿಸಿ.<br>3. ಮಕ್ಕಳನ್ನು ಒಂದೊಂದಾಗಿ ಕರೆ ಮಾಡಿ ಮತ್ತು ಟ್ರೇನಿಂದ ಗೊಂಬೆಯನ್ನು ಆಯ್ಕೆ ಮಾಡಲು ಹೇಳಿ. (ಅವರ ಆಯ್ಕೆ)<br>4. ಮಗುವಿಗೆ ಅವನು / ಅವಳು ಆಯ್ಕೆ ಮಾಡಿದ ಗೊಂಬೆಯ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿ<br>ಉದಾಹರಣೆಗೆ:<br>ನೀವು ಈ ಗೊಂಬೆಯನ್ನು ಏಕೆ ಆರಿಸಿದ್ದೀರಿ?<br>ನೀವು ಎಂದಾದರೂ ಈ ಗೊಂಬೆಯೊಂದಿಗೆ ಆಡಿದ್ದೀರಾ? ನೀವು ಗೊಂಬೆಯನ್ನು ಇಷ್ಟಪಡುತ್ತೀರಾ?<br>ನೀವು ಗೊಂಬೆಯನ್ನು ಏಕೆ ಇಷ್ಟಪಡುತ್ತೀರಿ?<br>ನೀವು ಗೊಂಬೆಯನ್ನು ಏಕೆ ಇಷ್ಟಪಡುವುದಿಲ್ಲ?<br>ಒಂದು ಮಗು ಉತ್ತರಿಸುವಾಗ , ಇತರ ಮಕ್ಕಳು ಅವನ /ಅವಳ ಮಾತನ್ನು ಆಲಿಸಬೇಕಾಗಿ ತಿಳಿಸುವುದು. |

DRAFT 2022

| | | | |
|---|---|---|---|
| | ನನ್ನ ಸಮಯ(Free Indore play) | | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | | **ಸಾಮರ್ಥ್ಯ : ವಾಸನೆಯ ಪ್ರಜ್ಞೆ, ಪರಿಸರದ ಅರಿವು**<br>**ಚಟುವಟಿಕೆ...4 ವಾಸನೆ ಊಹಿಸಿ (ಗುರಿ 3)**<br>**ಉದ್ದೇಶ:– ವಾಸನೆಗಳನ್ನು ಗುರುತಿಸುವುದು.**<br>**ಅಗತ್ಯ ಸಾಮಗ್ರಿಗಳು : ಈರುಳ್ಳಿ, ಬೆಳ್ಳುಳ್ಳಿ, ಅಗರಬತ್ತಿ, ಪುದೀನಾ, ತಾಜಾ ಮತ್ತು ಕೊಳೆತ ಹಣ್ಣುಗಳು, ಬಲವಾದ ವಾಸನೆಯುಳ್ಳ ವಸ್ತುಗಳು.**<br>**ವಿಧಾನ : ಮಕ್ಕಳು ವೃತ್ತಾಕಾರದಲ್ಲಿ ಅಥವಾ ಸಾಲಿನಲ್ಲಿ ಕುಳಿತುಕೊಳ್ಳುವುದು. ಈರುಳ್ಳಿ, ಬೆಳ್ಳುಳ್ಳಿ, ಅಗರಬತ್ತಿ, ಪುದೀನಾ, ತಾಜಾ ಮತ್ತು ಕೊಳೆತ ಹಣ್ಣುಗಳು, ಬಲವಾದ ವಾಸನೆಯುಳ್ಳ ವಸ್ತುಗಳನ್ನು ನೀಡಿ ವಾಸನೆ ಗ್ರಹಿಸಲು ಹೇಳುವುದು. ನಂತರ ಒಂದೊಂದೆ ಮಗುವಿನ ಕಣ್ಣಿಗೆ ಪಟ್ಟಿ ಕಟ್ಟಿ ನೀಡಿದ ವಸ್ತು/ಹಣ್ಣಿನ ವಾಸನೆ ಗ್ರಹಿಸಿ ಅದರ ಹೆಸರು ಹೇಳುವುದು. ಪ್ರತಿ ಮಗುವಿಗೆ ಅವಕಾಶ ಕಲ್ಪಿಸುವುದು.**<br>**ತರಗತಿ–2**<br>**ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ಹಿತಕರ ಮತ್ತು ಅಹಿತಕರ ವಾಸನೆಯ ಅನುಭವಗಳನ್ನು ಹಂಚಿಕೊಳ್ಳುವಂತೆ ತಿಳಿಸುವುದು.**<br>**ತರಗತಿ–3**<br>**ವಾಸನೆ ಇರುವ ಹಣ್ಣು, ತರಕಾರಿ, ಸೊಪ್ಪುಗಳನ್ನು ಪಟ್ಟಿ ಮಾಡಲು ಹೇಳುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ; ಸಮಾಜಮುಖಿ ವರ್ತನೆಗಳನ್ನು ರೂಢಿಸಿಕೊಳ್ಳುವುದು.ಬೇರೆಯವರ ಭಾವನೆಗಳನ್ನು ಮತ್ತು ಹಕ್ಕುಗಳನ್ನು ಗೌರವಿಸಿ ಸಮುದಾಯದಲ್ಲಿ ಸಹಾಯಮಾಡುವ ಬೇರೆ ಬೇರೆ ವೃತ್ತಿಗಳನ್ನು ಗೌರವಿಸುವುದು.<br>ಚಟುವಟಿಕೆ; 7 ಎ ನನ್ನ ಸಮುದಾಯದ ಸಹಾಯಕರು<br>ಉದ್ದೇಶ;<br>• ಗ್ರಹಣ ಶಕ್ತಿಯನ್ನು ಹೆಚ್ಚಿಸಿಕೊಳ್ಳುವರು.<br>• ಸಮುದಾಯದಲ್ಲಿನ ವಿವಿಧ ಸಹಾಯಕರನ್ನು ಗುರ್ತಿಸುತ್ತಾರೆ.<br><br>ಸಾಮಗ್ರಿಗಳು; ಸಮುದಾಯದ ಸಹಾಯಕರ ಮಿಂಚುಪಟ್ಟಿಗಳು.<br>ವಿಧಾನ; ಸಮುದಾಯದಲ್ಲಿ ನಮಗೆ ಸಹಾಯಮಾಡುವ ಬೇರೆ ಬೇರೆ ವೃತ್ತಿಯಲ್ಲಿರುವ ವ್ಯಕ್ತಿಗಳ ಪಾತ್ರಗಳನ್ನು ಮಕ್ಕಳಿಗೆ ಪರಿಚಯಿಸುವುದು. ಉದಾ; ವೈದ್ಯ, ಪೋಲಿಸ್, ಶಿಕ್ಷಕಿ ಇಂತಹ ವ್ಯಕ್ತಿಗಳನ್ನು ಮಕ್ಕಳು ಸಮುದಾಯದಲ್ಲಿ ಕಂಡಿದ್ದಾರೆಯೇ ಎಂಬುದನ್ನು ತಿಳಿದುಕೊಳ್ಳುವುದು. ಇವರೆಲ್ಲಾ ಹೇಗೆ ನಮ್ಮ ಬದುಕಿನಲ್ಲಿ ಸಹಾಯ ಮಾಡುತ್ತಾರೆ ಎಂಬುದನ್ನು ಚರ್ಚಿಸುವಂತೆ ಪ್ರೇರೆಪಿಸುವುದು.ಅವರ ಪಾತ್ರಗಳನ್ನು ಮೂಕಾಭಿನಯ ಮಾಡುವಂತೆ ಮಕ್ಕಳಿಗೆ ಹೇಳುವುದು. ಒಂದು ಮಗು ಪಾತ್ರ ಮಾಡಿದರೆ ಉಳಿದವರು ಅದು ಯಾರ ಪಾತ್ರವೆಂದು ಊಹಿಸಿ ಗುರ್ತಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆಸ್ಥಳೀಯ ಸಮುದಾಯದಲ್ಲಿನ ವಿವಿಧ ಸಹಾಯಕರನ್ನು ಗುರ್ತಿಸಿ ಅವರಂತೆ ನಟಿಸಲು ಹೇಳುವುದು.<br>*** ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-8 ( 01, 02,03ನೇ ತರಗತಿ)** |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಸೃಜನಾತ್ಮಕ ಸ್ವ–ಅಭಿವ್ಯಕ್ತಿ, ಪದ ಸಂಪತ್ತು ಬೆಳವಣಿಗೆ, ಊಹಿಸಿ ಓದುವುದು**<br>**ಚಟುವಟಿಕೆ 1 ಸಿ . "ನನ್ನ ನೋಡು ಮಾತನಾಡು" (ಗುರಿ –2) ECL-15**<br>**ಉದ್ದೇಶ:**<br>*** ಸೂಚಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತನ್ನದೇ ಮಾತುಗಳಲ್ಲಿ ಹೇಳುವುದು.**<br>*** ಹೊಸ ಪದಗಳನ್ನು ಸೇರಿಸುತ್ತಾ ಪದ ಸಂಪತ್ತನ್ನು ವೃದ್ಧಿಸಿಕೊಳ್ಳುವುದು.**<br>**ಸಾಮಗ್ರಿಗಳು: ಮಿಂಚು ಪಟ್ಟಿಗಳು**<br>**ವಿಧಾನ: ಪ್ಯಾನಲ್ ಬೋರ್ಡ್ ಮೇಲೆ ವಾರಕ್ಕೊಮ್ಮೆ ಸಸ್ಯ, ಪ್ರಾಣಿ, ಮೃಗಾಲಯದ ಚಿತ್ರ ಮತ್ತು ಹಬ್ಬ ಆಚರಿಸುವ ವಿವಿಧ ಚಿತ್ರಗಳನ್ನು ಅಂಟಿಸಿ ಮಕ್ಕಳು ಅದನ್ನು ನೋಡಿ ಅದರ ಬಗ್ಗೆ ಮಾತನಾಡಲು ಪ್ರೋತ್ಸಾಹಿಸುವುದು.**<br>**ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ತಮ್ಮ ವಿಷಯದ ಬಗ್ಗೆ ಇನ್ನೂ ವಿಸ್ತಾರವಾಗಿ ಮಾತನಾಡಲು** |

DRAFT 22.02.22

| | | | |
|---|---|---|---|
| | | | ತಿಳಿಸುವುದು. 3 ನೇ ತರಗತಿಯ ಮಕ್ಕಳು 3 ನಿಮಿಷ ನಿರರ್ಗಳವಾಗಿ ಮಾತನಾಡಲು ತಿಳಿಸುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಪದ ಗುರ್ತಿಸುವಿಕೆ, ಮುದ್ರಣದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತು ಅಭಿವೃದ್ಧಿ.<br>ಚಟುವಟಿಕೆ 11 ಸಿ ನನ್ನ ಮೊದಲ ಪದ ಪೆಟ್ಟಿಗೆ (ಗುರಿ–2)<br>ಉದ್ದೇಶ : ಪರಿಚಿತ ವಸ್ತು ವಿಷಗಳನ್ನು ಆಧರಿಸಿ ಪದಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸುವರು ಮತ್ತು ಚಿತ್ರಗ್ರಹಿಸಿ ಪದಗಳನ್ನು ಓದುವರು.<br>ಅಗತ್ಯ ಸಾಮಗ್ರಿಗಳು: ಮಿಂಚು ಪಟ್ಟಿ, ನೋಟ್ ಪುಸ್ತಕ, ಚಿತ್ರ ಪಟ<br>ವಿಧಾನ: ಮಕ್ಕಳು ಹಳೆಯ ನಿಯತಕಾಲಿಕಗಳಿಂದ ಹಾಗೂ ಕಥೆ ಪುಸ್ತಕಗಳಿಂದ 3–4 ಅಕ್ಷರಗಳ ಪದಗಳನ್ನು ಕತ್ತರಿಸಿ ಒಂದು ಪೆಟ್ಟಿಗೆಯಲ್ಲಿ ಸಂಗ್ರಹಿಸುವುದು. ನಂತರ ಅವುಗಳನ್ನು ಕಾಗದದ ಮೇಲೆ ಅಂಟಿಸಿ, ಪ್ರತಿ ಪದಕ್ಕೂ ಚಿತ್ರ ಬಿಡಿಸಲು ಪ್ರಯತ್ನಿಸುವುದು.<br>2 ಮತ್ತು 3ನೇ ತರಗತಿ : ಮಕ್ಕಳಿಗೆ ಸರಳ ವಾಕ್ಯಗಳನ್ನು ಬರೆದು ಒಂದು ಪೆಟ್ಟಿಗೆಯಲ್ಲಿ ಸಂಗ್ರಹಿಸುವುದು ನಂತರ ಅವುಗಳನ್ನು ಕಾಗದದ ಮೇಲೆ ಅಂಟಿಸಿ ವಾಕ್ಯಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಲು ಸೂಚಿಸುವುದು.<br>ಗಮನಿಸಿ : ಈ ಮೊದಲು ಈ ಚಟುವಟಿಕೆಯನ್ನು ನಿರ್ವಹಿಸಿದಾಗ ಬಳಸಿದ ಪದ ಮತ್ತು ವಾಕ್ಯಗಳನ್ನು ಹೊರತುಪಡಿಸಿ ಹೊಸ ಪದ,ವಾಕ್ಯಗಳನ್ನು ಬಳಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಸ್ವಯಂ ನಿಯಂತ್ರಣ, ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಗಳ ಅಭಿವೃದ್ಧಿ, ಮತ್ತು ಇತರರ ಭಾವನೆ ಹಾಗು ಹಕ್ಕುಗಳ ಕುರಿತು ಗೌರವ.<br>ಚಟುವಟಿಕೆ 6 ಸಿ "ಉದ್ಯಾನವನದ ಚಿತ್ರ ಬಿಡಿಸೋಣ" (ಗುರಿ –2) **ECW-14**<br>ಉದ್ದೇಶಗಳು:<br>• ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸುವುದು.<br>• ಇತರರ ಭಾವನೆ ಹಾಗೂ ಹಕ್ಕುಗಳ ಬಗ್ಗೆ ಗೌರವ ಬೆಳೆಸುವುದು.<br>• ತನ್ನ ಭಾವನೆಗಳನ್ನು ನಿಯಂತ್ರಿಸುವ ಸಾಮರ್ಥ್ಯ ಬೆಳೆಸುವುದು.<br>ಸಾಮಗ್ರಿಗಳು: ಹಾಳೆ, ಬಣ್ಣ, ಪೆನ್ಸಿಲ್, ಕ್ರೆಯಾನ್ಸ್<br>ವಿಧಾನ: ಮಕ್ಕಳಿಗೆ ಕಲಿಕಾ ಹಾಳೆಯ EC 1.20 ರಲ್ಲಿ ಉದ್ಯಾನವನದ ಚಿತ್ರ ಬಿಡಿಸಲು ತಿಳಿಸುವುದು ಮತ್ತು ಅವರು ನೋಡಿರುವ ಉದ್ಯಾನವನದ ಬಗ್ಗೆ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಅವಕಾಶ ನೀಡುವುದು.<br>ತರಗತಿವಾರು ವಿವರ:<br>2 ನೇ ತರಗತಿಯ ಮಕ್ಕಳು ಕಲಿಕಾ ಹಾಳೆ EC 2.20 ರಲ್ಲಿ ಉದ್ಯಾನವನದ ಚಿತ್ರ ಬಿಡಿಸಿ ಅವುಗಳ ಕುರಿತು ಮಾತನಾಡುವುದು, 3 ನೇ ತರಗತಿಯ ಮಕ್ಕಳು ಕಲಿಕಾ ಹಾಳೆ EC 3.20 ರಲ್ಲಿ ಉದ್ಯಾನವನದ ಚಿತ್ರ ಬರೆದು ಸಂಬಂಧಿಸಿದ ಪದಗಳನ್ನು ಪಟ್ಟಿ ಮಾಡುವುದು.<br><br>**ಅಭ್ಯಾಸದ ಹಾಳೆಗಳು: EC-7 (ತರಗತಿ 1, 2, 3)** |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | **ಹೊರಾಂಗಣ ಆಟಗಳು** | Day 28:<br>ಚಟುವಟಿಕೆ : ವಜ್ರಾಸನ Vajrasana<br><br>ಸಾಮರ್ಥ್ಯ : ಏಕಾಗ್ರತೆ ಬೆಳೆಸುವುದು, ಸ್ನಾಯುಗಳ ಬಲವರ್ಧನೆ ಮಾಡುವುದು.<br>ಸಾಮಗ್ರಿ :<br>ವಿಧಾನ : ಮಕ್ಕಳಿಗೆ ಸರಳ ಸೂಚನೆಗಳನು ನೀಡುವುದು<br>ಕಣ್ಣನ್ನು ಮುಚ್ಚಿ ಬೆನ್ನನ್ನು ನೇರ ಮಾಡಿ ವಜ್ರಾಸನದಲ್ಲಿ ಕುಳಿತುಕೊಳ್ಳಲು ತಿಳಿಸುವುದು. ಎರಡು ಕೈಗಳನ್ನು ಸರಳ ಮುದ್ರೆಯನ್ನು ಬಳಸಿ ತೊಡೆಯ ಮೇಲೆ ಇರಿಸಿಕೊಳ್ಳಲು ಸೂಚಿಸುವುದು. | |

DRAFT 2022

| | | |
|---|---|---|
| | | **ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೆ ಹೆಚ್ಚಿನ ಸಮಯ ಕುಳಿತುಕೊಳ್ಳಲು ಪ್ರೋತ್ಸಾಹಿಸುವುದು.** |
| | **ಕಥಾ ಸಮಯ** | **ಶೀರ್ಷಿಕೆ :** ಸಹಜ ಸೌಂದರ್ಯ<br>**ಸಾಮಗ್ರಿಗಳು :** ಮುಖವಾಡಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>➢ **ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವ ಆಸಕ್ತಿಯನ್ನು ಬೆಳೆಸುವುದು.**<br>➢ **ಪ್ರಶ್ನಿಸುವ ಮನೋಭಾವಉಂಟುಮಾಡುವುದು.**<br><br>**ವಿಧಾನ :**<br>***ಮುಖವಾಡಗಳು***<br>ಮುಖವಾಡಗಳನ್ನು ಬಳಸಿ ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು. ಹಿರಿಯ ವಿದ್ಯಾರ್ಥಿಗಳನ್ನು ಬಳಸಿಕೊಂಡು ಪಾತ್ರಗಳನ್ನು ಹಂಚಿಅಭಿನಯಿಸಲು ಸಹಕರಿಸಿ.<br>**ಕಥೆಯನ್ನು ಹೇಳಿದ ನಂತರ ಈ ರೀತಿಯ ಸರಳ ಪ್ರಶ್ನೆಗಳನ್ನು ಕೇಳಿ.**<br><br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆವನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–5** **ದಿನ–29 (ಶುಕ್ರವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| **29** | **ಶುಭಾಶಯ ವಿನಿಮಯ**<br>***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:** ನಾನು ರುಚಿಯಾದ ಹಣ್ಣು<br>ಸಾಮಗ್ರಿಗಳು: ವಿವಿಧ ರೀತಿಯ ಹಣ್ಣುಗಳ ಚಿತ್ರ ಕಾರ್ಡ್ ಗಳು.<br>ಕಾರ್ಯವಿಧಾನ:<br>• ವಿವಿಧ ರೀತಿಯ ಹಣ್ಣುಗಳ ಚಿತ್ರಗಳನ್ನು ಒಂದೊಂದಾಗಿ ತೋರಿಸಿ.<br>• ಹಣ್ಣಿನ ಹೆಸರು ಮತ್ತು ಅದರ ಬಣ್ಣವನ್ನು ಹೇಳುವ ಮೂಲಕ ತರಗತಿಗೆ ಪ್ರವೇಶಿಸಲು ಅವರಿಗೆ ತಿಳಿಸಿ. ಉದಾಹರಣೆಗೆ: ನಾನು ಪೇರಲೆ. ಹಸಿರು ಬಣ್ಣದ ಪೇರಳೆ .<br>• ತರಗತಿ ಪ್ರವೇಶಿಸಿದ ನಂತರ ವೃತ್ತಾಕಾರವಾಗಿ ನಿಲ್ಲುವಂತೆ ಸೂಚಿಸಿ<br>• ಮಕ್ಕಳನ್ನು ಸ್ವಾಗತಿಸಿ<br>• ಹವಾಮಾನ ಚಟುವಟಿಕೆಯ ಬಗ್ಗೆ ಮಕ್ಕಳನ್ನು ಕೇಳಿ ಮತ್ತು ಅದನ್ನು ಹವಾಮಾನ ಕಾರ್ಡ್ ನಲ್ಲಿ ಗುರುತಿಸಲು ಅವರಿಗೆ ಸೂಚನೆ ಮಾಡಿ. |

DRAFT 22.02.22

| | | |
|---|---|---|
| | | **ಚಟುವಟಿಕೆ 2:** ಕೋತಿ ಮತ್ತು ಬಾಳೆಹಣ್ಣು.<br>ಕಾರ್ಯವಿಧಾನ:<br>1. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ. ಒಬ್ಬ ವಿದ್ಯಾರ್ಥಿಯ ಕಣ್ಣಿಗೆ ಬಟ್ಟೆ ಕಟ್ಟಿ. ವೃತ್ತದ ಮಧ್ಯದಲ್ಲಿ ಕೂರಿಸಿ.<br>2. ಚೆಂಡನ್ನು ಪಾಸ್ ಮಾಡಲು ಮಕ್ಕಳಿಗೆ ಹೇಳಿ. ಸಂಗೀತವನ್ನು ಪ್ಲೇ ಮಾಡಿ ಮತ್ತು ನಡುವೆ ಸಂಗೀತವನ್ನು ನಿಲ್ಲಿಸಿ.<br>4. ಚೆಂಡನ್ನು ಹೊಂದಿರುವ ಮಗು ಯಾವುದಾದರೂ ಒಂದು ಹಣ್ಣಿನ ಹೆಸರನ್ನು ಹೇಳಬೇಕು.<br>5. ಕಣ್ಣಿಗೆ ಬಟ್ಟೆ ಕಟ್ಟಿದ ಮಗು ಹಣ್ಣಿನ ಹೆಸರು ಹೇಳಿದ ಮಗುವನ್ನು ಗುರುತು ಹಿಡಿಯಬೇಕು.<br>6. ಅವನು/ಅವಳು ಸರಿಯಾದ ಮಗುವನ್ನು ಕಂಡುಕೊಂಡರೆ, ಸಿಕ್ಕಿಬಿದ್ದ ಮಗು ಕೋತಿಯ ಸ್ಥಾನವನ್ನು ಪಡೆಯುತ್ತದೆ. ಅದು ಮುಂದುವರಿಯುತ್ತದೆ. |
| | **ಮಾತು ಕತೆ** | **ದಿನ 28 ರ ಚಟುವಟಿಕೆ ಪುನರಾವರ್ತಿಸುವುದು.** |
| | **ನನ್ನ ಸಮಯ(Free Indore play)**<br>**('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಸಮಸ್ಯಾ ಪರಿಹಾರ, ತಾರ್ಕಿಕತೆ.**<br>**ಚಟುವಟಿಕೆ 11 ಮತ್ತು 11 ಎ ." ಯೋಚನಾ ಪೆಟ್ಟಿಗೆ" (ಗುರಿ –3)**<br>**ಉದ್ದೇಶ:– ಅನುಕ್ರಮವಾಗಿ ಜೋಡಿಸುವುದು.**<br>**ಸಾಮಗ್ರಿಗಳು: ಆಮೆ ಮತ್ತು ನರಿಯ ಚಿತ್ರ ಕಾರ್ಡುಗಳು**<br>**ವಿಧಾನ: ನರಿ ಮತ್ತು ಆಮೆಯ ಕಥೆ.**<br>**ಒಂದು ಮುಂಜಾನೆ, ನರಿಯು ತುಂಬಾ ಹಸಿದಿತ್ತು, ಅದು ಕಾಡಿನಲ್ಲಿ ಆಹಾರವನ್ನು ಹುಡುಕಲು ಪ್ರಾರಂಭಿಸಿತು. ಇದ್ದಕ್ಕಿದ್ದಂತೆ, ನರಿ ಆಮೆ ತಿರುಗಾಡುವುದನ್ನು ನೋಡಿತು. ನರಿಯು ಆಮೆಯನ್ನು ತಿನ್ನಲು ಯೋಚಿಸಿತು. ನರಿ ಓಡಿ ಬಂದು ಆಮೆಯನ್ನು ಹಿಡಿದುಕೊಂಡಿತು. ಆಮೆಯನ್ನು ತಿನ್ನಲು, ನರಿಯು ಆಮೆಯ ಗಟ್ಟಿಯಾದ ಚಿಪ್ಪನ್ನು ಮುರಿಯಲು ತನ್ನ ಕೈಲಾದಷ್ಟು ಪ್ರಯತ್ನಿಸಿತು ಆದರೆ ಸಾಧ್ಯವಾಗಲಿಲ್ಲ. ಆಮೆ ಬಹಳ ಬುದ್ಧಿವಂತವಾಗಿತ್ತು. ಅದು ನರಿಗೆ ಹೇಳಿತು – "ಪ್ರಿಯ ನರಿಯೇ! ನೀನು ನನ್ನನ್ನುತಿನ್ನಲು ಬಯಸುತ್ತೀಯಾ? , ನೀವು ನನ್ನನ್ನು ತಿನ್ನುವುದಾದರೆ ಮೊದಲು ನನ್ನನ್ನು ಕೊಳದಲ್ಲಿ ಇರಿಸಬೇಕು ಇದರಿಂದ ನನ್ನ ಚಿಪ್ಪು ಮೃದುವಾಗುತ್ತದೆ ಆಗ ನೀವು ಅದನ್ನು ಸುಲಭವಾಗಿ ಒಡೆದು ತಿನ್ನಬಹುದು". ಮೂರ್ಖ ನರಿಯು ಆಮೆಯನ್ನು ಹತ್ತಿರದ ಕೊಳದಲ್ಲಿ ಮುಳುಗಿಸಿತು. ಆಮೆಯನ್ನು ಕೊಳದಲ್ಲಿ ಹಾಕಿದ ತಕ್ಷಣ, ಆಮೆ ವೇಗವಾಗಿ ಈಜಿ ನರಿಯಿಂದ ತಪ್ಪಿಸಿಕೊಂಡು ನರಿಯನ್ನು ನೋಡಿ ನಕ್ಕಿತು.**<br>**ಈಗ, ಪ್ರಶ್ನೆಗಳನ್ನು ಕೇಳಿ ಮತ್ತು ಆಮೆ ಹೇಗೆ ತಪ್ಪಿಸಿಕೊಂಡಿದೆ ಎಂಬುದರ ಕುರಿತು ಕಥೆಯನ್ನು ವಿವರಿಸಿದ ನಂತರ ಚರ್ಚಿಸಿ. ಮಕ್ಕಳು ಸಮಸ್ಯೆಯನ್ನು ಪರಿಹರಿಸುವ ತಮ್ಮ ಸ್ವಂತ ಅನುಭವಗಳನ್ನು ಹಂಚಿಕೊಳ್ಳಲಿ.**<br>**ಚಟುವಟಿಕೆ: 11 ಎ "ಕ್ರಮವಾಗಿಜೋಡಿಸು"**<br>**ಮಕ್ಕಳಿಗೆ ಚಿತ್ರಕಥೆ ಕಾರ್ಡುಗಳನ್ನು ಅನುಕ್ರಮವಾಗಿ ಜೋಡಿಸಲು ತಿಳಿಸಿ ವಿವರಿಸಲು ಹೇಳುವುದು.**<br>**ತರಗತಿ–2**<br>**ಕಥೆಯನ್ನು ಆಲಿಸಿದ ನಂತರ ಸರಳ ಪ್ರಶ್ನೆಗಳನ್ನು ಕೇಳುವುದು.**<br>**ಉದಾ:– ಈ ಕಥೆಯಲ್ಲಿ ಬರುವ ಪ್ರಾಣಿಗಳ ಹೆಸರು ಹೇಳಿರಿ**<br>**ತರಗತಿ–3**<br>**ಇದೇ ಕಥೆಯನ್ನು ಸ್ವತಂತ್ರವಾಗಿ/ಮುಕ್ತವಾಗಿ ಹೇಳಲು ಮಕ್ಕಳಿಗೆ ಅವಕಾಶ ಮಾಡಿಕೊಡುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ; ಸಮಾಜಮುಖಿ ನಡವಳಿಕೆಯ ವಿಕಾಸ, ಇತರರ ಭಾವನೆಗಳನ್ನು , ಹಕ್ಕುಗಳನ್ನು ಗೌರವಿಸುವುದು.<br>ಸೃಜನಶೀಲತೆಯ ಹಾಗೂ ಸೌಂದರ್ಯ ಪ್ರಜ್ಞೆಯ ವಿಕಾಸ ಗಮನಿಸುವಿಕೆ, ಕಲ್ಪನಾ ಶಕ್ತಿಯ ವಿಕಾಸ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ;10 ಸಿ ಹಬ್ಬಕ್ಕಾಗಿ ತರಗತಿಯ ಅಲಂಕಾರ<br>ಉದ್ದೇಶ;<br>• ಮಕ್ಕಳಿಗೆ ನಮ್ಮ ಸಂಸ್ಕೃತಿಯಲ್ಲಿರುವ ಅನೇಕ ವಿಷಯಗಳ ಅರಿವಾಗುತ್ತದೆ. |

DRAFT 22.02.22

| | | | |
|---|---|---|---|
| | | | • ಸೌಂದರ್ಯ ಪ್ರಜ್ಞೆಯ ವಿಕಾಸವಾಗುತ್ತದೆ.<br>• ಶಾಲೆಯಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳ ಸಂದರ್ಭದಲ್ಲಿ ಅಲಂಕರಿಸುವುದನ್ನು ಕಲಿಯುತ್ತಾರೆ.<br><br>ಸಾಮಗ್ರಿಗಳು;ಅಲಂಕಾರಕ್ಕೆ ಬೇಕಾಗುವ ವಿವಿಧ ವಸ್ತುಗಳು.<br>ವಿಧಾನ; ಪ್ರಮುಖ ಹಬ್ಬಗಳಾದ ಸಾಂಸ್ಕೃತಿಕ ಮತ್ತು ರಾಷ್ಟ್ರೀಯ ಹಬ್ಬಗಳ ಪರಿಚಯ ಮಾಡಿ ಕೊಡುವುದು. ಹಬ್ಬಗಳನ್ನು ಆಚರಿಸುವ ವಿಧಾನ ತಿಳಿಸುವುದು. ಸ್ವತಂತ್ರ ದಿನಾಚರಣೆ , ಗಣರಾಜ್ಯೋತ್ಸವ , ಸಂಕ್ರಾಂತಿ, ದೀಪಾವಳಿ, ಹೋಲಿ, ಕ್ರಿಸ್‌ಮಸ್, ಈದ್ಮಿಲಾದ್ ಗುರುಪೂರ್ಣಿಮಾ ಮುಂತಾದ ಹಬ್ಬಗಳ ಬಗ್ಗೆ ವಿವರಿಸುವುದು. ಭಾರತದಲ್ಲಿ ಈ ಹಬ್ಬಗಳ ಆಚರಣೆ ಹೇಗೆ ಎಂಬುದನ್ನು ತಿಳಿಸುವುದು.<br>ವಿವಿಧ ಹಬ್ಬಗಳಿಗೆ ಅನುಗುಣವಾಗಿ ಶಾಲೆಯನ್ನು ಅಲಂಕರಿಸುವಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ಹಬ್ಬಕ್ಕಾಗಿ ಬಂಟಿಂಗ್ಸ್ ತಯಾರಿಸಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | **ಸಾಮರ್ಥ್ಯ: ಆಲಿಸುವುದು, ಸೃಜನಾತ್ಮಕ ಚಿಂತನೆ, ತಾರ್ಕಿಕತೆ, ಪರಿಸರ ಅರಿವು.**<br>**ಚಟುವಟಿಕೆ 5 ಎ . " ಪ್ರಾಸದ ಒಗಟು" (ಗುರಿ –1) ECL-16**<br>**ಉದ್ದೇಶ:**<br>*** ಪ್ರಶ್ನೆಗಳನ್ನು ಕೇಳುವ ಮೂಲಕ ಮಕ್ಕಳಲ್ಲಿ ಆಲಿಸುವ ಸಾಮರ್ಥ್ಯ ಹೆಚ್ಚಿಸುವುದು.**<br>*** ಸೃಜನಶೀಲ ಆಲೋಚನೆಯ ಮೂಲಕ ಮಾತನಾಡಲು ಅವಕಾಶ ಕಲ್ಪಿಸುವುದು.**<br>*** ತಮ್ಮ ಸುತ್ತಲಿನ ಪರಿಸರದ ಬಗೆಗಿನ ಅರಿವನ್ನು ಪಡೆದು ಕೊಳ್ಳುವುದು.**<br>**ಸಾಮಗ್ರಿಗಳು: ಒಗಟಿನ ಪುಸ್ತಕ**<br>**ವಿಧಾನ: ಮಕ್ಕಳಿಗೆ ಕೆಲವು ಒಗಟುಗಳನ್ನು ನೀಡಿ ಅದಕ್ಕೆ ಸರಿಯಾದ ಪ್ರಾಸ ಪದಗಳನ್ನು ಹೇಳಲು ತಿಳಿಸುವುದು. ಉದಾ: " ನಾನು 'ದೊರೆ' ಎಂಬ ಪದದ ರೀತಿಯ ಕೆಲವು ಪದಗಳನ್ನು ಯೋಚಿಸುತ್ತಿದ್ದೇನೆ. ( ನಿರೀಕ್ಷಿತ ಉತ್ತರಗಳು ತೊರೆ, ಹೊರೆ, ಮೊರೆ..)**<br>**ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಪ್ರತಿ ಪದಕ್ಕೆ ಕನಿಷ್ಟ 4 ಪ್ರಾಸ ಪದಗಳನ್ನು ಹೇಳುವುದು. 3 ನೇ ತರಗತಿಯ ಮಕ್ಕಳು 4 ಕ್ಕಿಂತ ಹೆಚ್ಚು ಪದಗಳನ್ನು ಹೇಳುವುದು** |
| | | ಅರ್ಥಗ್ರಹಿಕೆಯೊಂದಿಗಿನ ಓದು | **ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ….18**<br>• **ಚಿತ್ರ ಸಂಪುಟ (ಗುರಿ–2) ವಿಷಯ: ' ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳು ',**<br>**ಉದ್ದೇಶ:**<br>• **ಮಕ್ಕಳು ಗುಂಪಿನಲ್ಲಿ ಕುಳಿತು ತಯಾರಿಸಿದ ಗೋಡೆ ಪತ್ರಿಕೆಗಳನ್ನು ರಚಿಸಿ ಮಂಡಿಸುವುದು**<br>**ಅಗತ್ಯ ಸಾಮಗ್ರಿಗಳು : ಚಾರ್ಟಗಳು, ಸ್ವರಚಿತ ಚಿತ್ರಗಳು, ಕ್ರೇಯಾನ್ಸ್, ಅಂಟು, ಇಂಚುಪಟ್ಟಿ, ಟ್ಯಾಗ್**<br>**ವಿಧಾನ : ಮಕ್ಕಳು ಗುಂಪುಗಳಲ್ಲಿ ಅಗತ್ಯ ಸಾಮಗ್ರಿ ಬಳಸಿ ರಾತ್ರಿಯಲ್ಲಿ ಮಾತ್ರ ನೋಡಬಹುದಾದ ವಸ್ತುಗಳ ಬಗ್ಗೆ ಗೋಡೆ ಪತ್ರಿಕೆ ತಯಾರಿಸಲು ಅಗತ್ಯ ಸಹಾಯ ನೀಡುವುದು. ರಚಿಸಿದ ಗೋಡೆ ಪತ್ರಿಕೆಯನ್ನು ತರಗತಿಯಲ್ಲಿ ಮಂಡಿಸಲು ಅವಕಾಶ ನೀಡುವುದು.**<br>**ಸಿದ್ಧವಾದ ಗೋಡೆಪತ್ರಿಕೆಗಳನ್ನು ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.**<br>**ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳಿಗೆ ಸಹಾಯ ಒದಗಿಸಿ ಗುಂಪುಗಳಲ್ಲಿ ಯೋಜನಾಕಾರ್ಯಗಳನ್ನು ಮಾಡಲು ತಿಳಿಸುವುದು.** |
| | | ಉದ್ದೇಶಿತ ಬರಹ | **ಸಾಮರ್ಥ್ಯ: ಸ್ವಯಂ ನಿಯಂತ್ರಣ, ಧನಾತ್ಮಕ ವೈಯಕ್ತಿಕ ಪರಿಕಲ್ಪನೆಗಳ ಅಭಿವೃದ್ಧಿ, ಮತ್ತು ಇತರರ ಭಾವನೆ ಹಾಗು ಹಕ್ಕುಗಳ ಕುರಿತು ಗೌರವ.**<br>**ಚಟುವಟಿಕೆ 6 ಡಿ "ಚುಕ್ಕಿ ಸೇರಿಸು" (ಗುರಿ –2) ECW-15**<br>**ಉದ್ದೇಶಗಳು:**<br>• **ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸುವುದು.**<br>• **ಇತರರ ಭಾವನೆ ಹಾಗೂ ಹಕ್ಕುಗಳ ಬಗ್ಗೆ ಗೌರವ ಬೆಳೆಸುವುದು.**<br>• **ತನ್ನ ಭಾವನೆಗಳನ್ನು ನಿಯಂತ್ರಿಸುವ ಸಾಮರ್ಥ್ಯ ಬೆಳೆಸುವುದು.** |

DRAFT 22.02.22

| | | |
|---|---|---|
| | | • **ಚುಕ್ಕಿ ಚಿತ್ರಗಳನ್ನು ಪೂರ್ಣಗೊಳಿಸುವುದು.**<br>**ಸಾಮಗ್ರಿಗಳು: ಚುಕ್ಕಿ ಚಿತ್ರಗಳು.**<br>**ವಿಧಾನ: ಮಕ್ಕಳಿಗೆ ಚುಕ್ಕಿ ಚಿತ್ರಗಳನ್ನು ನೀಡಿ ಚುಕ್ಕಿಗಳನ್ನು ಸೇರಿಸಿ ಚಿತ್ರವನ್ನು ಪೂರ್ಣಗೊಳಿಸಲು ಹೇಳುವುದು.**<br>**ತರಗತಿವಾರು ವಿವರ: 1ನೇ ತರಗತಿಯ ಮಕ್ಕಳು ರಚಿಸಿದ ಚುಕ್ಕಿ ಚಿತ್ರಗಳ ಬಗ್ಗೆ 2ನೇ ತರಗತಿಯ ಮಕ್ಕಳು ಹೆಸರಿಸಿ, ಅದರ ಬಗ್ಗೆ ಮಾತನಾಡಲು ಹೇಳಿ. 3ನೇ ತರಗತಿಯ ಮಕ್ಕಳು ಈ ಚಿತ್ರಗಳ ಬಗ್ಗೆ 3–4 ವಾಕ್ಯಗಳನ್ನು ಬರೆಯಲು ತಿಳಿಸಿ.** |
| | | **ಬರವಣಿಗೆಯ ಮಾದರಿ:**<br>**ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.**<br>**ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.** |
| | **ಹೊರಾಂಗಣ ಆಟಗಳು** | ಚಟುವಟಿಕೆ : ಯೋಗಾಸನ Yoga poses<br>ಸಾಮರ್ಥ್ಯ : ಏಕಾಗ್ರತೆ ಬೆಳೆಸುವುದು, ಸ್ನಾಯುಗಳ ಬಲವರ್ಧನೆ ಮಾಡುವುದು.<br>ಸಾಮಗ್ರಿ :<br>ವಿಧಾನ : ಮಕ್ಕಳಿಗೆ ಸರಳ ಸೂಚನೆಗಳನು ನೀಡುವುದು<br>ಮಕ್ಕಳಿಗೆ ಅವರ ವಯಸ್ಸಿಗೆ ಅನುಗುಣವಾದ ಸರಳ ಯೋಗಾಸನಗಳನ್ನು ಹೇಳಿಕೊಡುವುದು.<br>ಉದಾ: 1. ವೃಕ್ಷಾಸನ<br>2. ತಾಡಾಸನ<br>3. ಉತ್ಥಾನಾಸನ<br>4. ಉತ್ಕಾಟಾಸನ ಇತ್ಯಾದಿ<br>**ಎರಡನೇ ಹಾಗು ಮೂರನೇ ತರಗತಿಯ ಮಕ್ಕಳಿಗೆ ಸ್ವಲ್ಪ ಕಠಿಣ ಯೋಗಾಸನಗಳನ್ನು ಮಾಡಲು ಪ್ರೋತ್ಸಾಹಿಸುವುದು.** |
| | **ಕಥಾ ಸಮಯ** | **ಶೀರ್ಷಿಕೆ :** ಸಹಜ ಸೌಂದರ್ಯ<br>**ಸಾಮಗ್ರಿಗಳು** :ಸಂಭಾಷಣೆಇರುವ ಮಿಂಚಪಟ್ಟಿಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವುದು.<br>➢ ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವ ಆಸಕ್ತಿಯನ್ನು ಬೆಳೆಸುವುದು.<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ **ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು.**<br>➢ **ನಿರರ್ಗಳವಾಗಿ ಮಾತನಾಡುವ ಕೌಶಲವನ್ನುರೂಢಿಸುವುದು.**<br>**ವಿಧಾನ :**<br>***ಪಾತ್ರಾಭಿನಯ***<br>➢ ಕಥೆಯನ್ನು ಪುನರಾವಲೋಕನ ಮಾಡಿಕೊಳ್ಳುವುದು.<br>➢ ಕಥೆಯ ನಿರೂಪಣೆಯನ್ನುಮಾಡಲುಎರಡು ಮತ್ತು ಮೂರನೇತರಗತಿಯ ಮಕ್ಕಳಿಗೆ ಸಹಕರಿಸುವುದು.<br>➢ ಮಕ್ಕಳು ತಪ್ಪಾಗಿ ಹೇಳಿದರೂ ತಕ್ಷಣವೇತಿದ್ದದೇ ಸಕಾರಾತ್ಮಕವಾಗಿ ಸ್ವೀಕರಿಸಿ ಆ ನಂತರ ಸರಿಪಡಿಸಿಕಥೆಯನ್ನು ಮುಂದುವರೆಸಲುಹೇಳುವುದು.<br>➢ ಮಿಂಚುಪಟ್ಟಿಗಳಲ್ಲಿ ಪಾತ್ರಗಳ ಸಂಭಾಷಣೆಯನ್ನುಚಿಕ್ಕಚಿಕ್ಕದಾಗಿ ಬರೆದು ನೀಡುವುದು. |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ. |

DRAFT 22.02.22

| | | |
|---|---|---|
| | | • ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–5** **ದಿನ–30 (ಶನಿವಾರ)**

| | | | | |
|---|---|---|---|---|
| | ಪ್ರತಿಬಿಂಬ<br>(ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | | |
| | ನನ್ನ ಸಾಧನೆ | | | |
| | ಕಲಿಕಾಫಲಗಳು | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
| | ಪ್ರಾಸಪದ್ಯಗಳನ್ನು ಅಥವಾ ಹಾಡುಗಳನ್ನು ಹಾಡುತ್ತ ಆನಂದಿಸುವರು. | | | |
| | ಆರೋಗ್ಯಕರ ಆಹಾರ ಪದ್ಧತಿಗಳನ್ನು ಅನುಸರಿಸುವರು. | | | |
| | ಆರೋಗ್ಯ & ನೈರ್ಮಲ್ಯ ಅಭ್ಯಾಸಗಳನ್ನು ಅನುಸರಿಸುವರು. | | | |
| | ತರಗತಿಯ ಜವಾಬ್ದಾರಿಗಳು ಮತ್ತು ಚಟುವಟಿಕೆಗಳನ್ನು ಸ್ವತಂತ್ರವಾಗಿ ನಿರ್ವಹಿಸುವರು. | | | |
| | 2 ರಿಂದ 4 ಅಡತಡೆಗಳಿರುವ ಪಜಲ್/ಮಾಯಾಜಾಲ ಸಮಸ್ಯೆಗಳನ್ನು ಪರಿಹರಿಸುವರು. | | | |
| | ವಿವಿಧ ವಸ್ತುಗಳ ಉದ್ದವನ್ನು ಹೋಲಿಸುವರು. | | | |
| | ಮಾರ್ಗದರ್ಶನ ನೀಡಿದರೆ ಸರಳ ನೈಸರ್ಗಿಕ ವಿದ್ಯಮಾನಗಳನ್ನು ವೀಕ್ಷಿಸುವರು/ಅನ್ವೇಷಿಸುವರು. | | | |
| | ಒಂದಕ್ಕಿಂತ ಹೆಚ್ಚು ಗುಣಲಕ್ಷಣಗಳ ಆಧಾರದ ಮೇಲೆ ವಸ್ತುಗಳನ್ನು ವಿಂಗಡಿಸುವರು (ಬಣ್ಣ, ಆಕಾರ, ಗಾತ್ರ) | | | |
| | ಪ್ರಾಸಬದ್ಧ ಪದಗಳನ್ನು ಗುರುತಿಸುವರು. | | | |
| | ಪ್ರಾಸಪದ್ಯಗಳನ್ನು ಅಥವಾ ಹಾಡುಗಳನ್ನು ಹಾಡುತ್ತ ಆನಂದಿಸುವರು. | | | |
| | ಆರೋಗ್ಯಕರ ಆಹಾರ ಪದ್ಧತಿಗಳನ್ನು ಅನುಸರಿಸುವರು. | | | |
| | ಆರೋಗ್ಯ & ನೈರ್ಮಲ್ಯ ಅಭ್ಯಾಸಗಳನ್ನು ಅನುಸರಿಸುವರು. | | | |
| | ತರಗತಿಯ ಜವಾಬ್ದಾರಿಗಳು ಮತ್ತು ಚಟುವಟಿಕೆಗಳನ್ನು ಸ್ವತಂತ್ರವಾಗಿ ನಿರ್ವಹಿಸುವರು. | | | |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–6** **ದಿನ–31 (ಸೋಮವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 31 | ಶುಭಾಶಯ ವಿನಿಮಯ<br>*(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1:** sun moon star<br>**ಸಾಮಗ್ರಿಗಳು:** ನಕ್ಷತ್ರಗಳು, ಚಂದ್ರ ಮತ್ತು ಸೂರ್ಯನ ಚಿತ್ರಗಳು<br>**ವಿಧಾನ:**<br>• ಮಕ್ಕಳನ್ನು ತರಗತಿಯ ಹೊರಗೆ ಒಂದು ಸಾಲಿನಲ್ಲಿ ನಿಲ್ಲುವಂತೆ ಮಾಡಿ.<br>• ನಕ್ಷತ್ರ, ಚಂದ್ರ ಮತ್ತು ಸೂರ್ಯನ ಚಿತ್ರಗಳನ್ನು ಒಂದೊಂದಾಗಿ ತೋರಿಸಿ. (ಶಿಕ್ಷಕರು ತರಗತಿಯ ಬಾಗಿಲಲ್ಲಿ ನಿಲ್ಲಬೇಕು. )<br>• ತೋರಿಸಿದ ಚಿತ್ರಗಳನ್ನು ನೋಡಲು ಮಕ್ಕಳಿಗೆ ತಿಳಿಸಿ ಮತ್ತು ಸೂಚನೆಯಂತೆ ಚಪ್ಪಾಳೆ ತಟ್ಟುವ ಮೂಲಕ ತರಗತಿಗೆ ಪ್ರವೇಶಿಸಲು ಸೂಚನೆ ನೀಡಿದರು.<br>Star: ಒಮ್ಮೆ ಚಪ್ಪಾಳೆ ತಟ್ಟಿ<br>Moon: ಎರಡು ಬಾರಿ ಚಪ್ಪಾಳೆ ತಟ್ಟಿ<br>Sun: ಮೂರು ಬಾರಿ ಚಪ್ಪಾಳೆ ತಟ್ಟಿ<br>• ತರಗತಿ ಪ್ರವೇಶಿಸಿದ ನಂತರ ವೃತ್ತಾಕಾರವಾಗಿ ನಿಲ್ಲುವಂತೆ ಸೂಚನೆ ನೀಡಿ.<br>• "What day is today? (ಇಂದು ಯಾವ ದಿನ?)" ಎಂದು ಮಕ್ಕಳನ್ನು ಕೇಳಿ ಮತ್ತು Today is ________("ಇಂದು __) ಎಂಬ ಉತ್ತರ ಪಡೆಯಿರಿ.<br>• ಹವಾಮಾನ ನಕ್ಷೆ ಮಾಡಿಸಿ. |
| | ಮಾತು ಕತೆ<br>*( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | ಚಟುವಟಿಕೆ : ನನ್ನ ಸಸ್ಯ ನನ್ನ ಮರ<br>ಸಾಮಗ್ರಿಗಳು: ವಿವಿಧ ರೀತಿಯ ಸಸ್ಯ/ಮರಗಳ ಚಿತ್ರ ಕಾರ್ಡ್ ಗಳು<br>ವಿಧಾನ:<br>1. ಮಕ್ಕಳನ್ನು ಅರ್ಧ ವೃತ್ತದಲ್ಲಿ ಕೂರಿಸಿ.<br>2. ಎಲ್ಲಾ ಕಾರ್ಡ್ ಗಳನ್ನು ವೃತ್ತದ ಮಧ್ಯದಲ್ಲಿ ಇರಿಸಿ.<br>3. ಒಬ್ಬೊಬ್ಬರಾಗಿ ಮಕ್ಕಳಿಗೆ ಕರೆದು ಅವರ ಆಯ್ಕೆಯ ಕಾರ್ಡ್ ತೆಗೆದುಕೊಳ್ಳಲು ಹೇಳಿ.<br>4. ಆಯ್ಕೆ ಮಾಡಿದ ಕಾರ್ಡ್‌ನಲ್ಲಿನ ಚಿತ್ರದ ಕುರಿತಾಗಿ ಪ್ರಶ್ನೆಗಳನ್ನು ಕೇಳಿ ಉತ್ತರ ನನೀಡಲು ಮಗುವನ್ನು ಪ್ರೋತ್ಸಾಹಿಸಿ.<br>ಪ್ರಶ್ನೆಗಳು: ಇದು ಯಾವ ಸಸ್ಯ/ಮರ? ನೀನು ಈ ಚಿತ್ರವನ್ನೇ ಏಕೆ ಆರಿಸಿಕೊಂಡೆ? ನೀವು ಎಂದಾದರೂ ಒಂದು ಸಸ್ಯವನ್ನು ನೆಟ್ಟಿದ್ದೀರಾ? ನೀವು ಯಾವ ಸಸ್ಯವನ್ನು ನೆಟ್ಟಿದ್ದೀರಿ?<br>**ವರ್ಗ–2 ಮತ್ತು 3 ಕ್ಕೆ**<br>ನೀಡಲಾದ ಪ್ರಶ್ನಾವಳಿಯ ಜೊತೆಗೆ, ಈ ಪ್ರಶ್ನೆಗಳನ್ನು ಬಳಸಬಹುದು.<br>• ನೀವು ಸಸ್ಯಗಳನ್ನು ನೆಡಲು ಇಷ್ಟಪಡುತ್ತೀರಾ?<br>• ನೀವು ಅದನ್ನು ಏಕೆ ಇಷ್ಟಪಡುತ್ತೀರಿ?<br>• ನಾವು ಏಕೆ ಹೆಚ್ಚು ಸಸ್ಯಗಳನ್ನು ನೆಡಬೇಕು?<br>• ಸಸ್ಯಗಳನ್ನು ಹೇಗೆ ಕಾಪಾಡಿಕೊಳ್ಳಬೇಕು? |
| | **ನನ್ನ ಸಮಯ(Free Indore play)**<br>('ನನ್ನ ಸಮಯ'ದಲ್ಲಿ ಮಗು | ಮಕ್ಕಳು ತಾವು ನಿರ್ವಹಿಸಲಿಚ್ಛಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |


DRAFT 22.02.22

| | | | |
|---|---|---|---|
| | ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು) | | |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | | **ಸಾಮರ್ಥ್ಯ: ಹೊಂದಿಸುವುದು, ಪರಿಸರದ ಅರಿವು, ಬಣ್ಣ, ಆಕಾರ, ಗಾತ್ರಗಳ ಪರಿಕಲ್ಪನೆ**<br>**ಚಟುವಟಿಕೆ...12 ಎ ಮುಟ್ಟಿ ಎಣಿಸು (ಗುರಿ 3)**<br>**ಉದ್ದೇಶ:– ಮೂರ್ತ ವಸ್ತುಗಳನ್ನು ಸ್ಪರ್ಶಿಸಿ ಎಣಿಸುವುದು.**<br>**ಅಗತ್ಯ ಸಾಮಗ್ರಿಗಳು : ಸುತ್ತಲಿನ ವಿವಿಧ ವಸ್ತುಗಳು**<br>**ವಿಧಾನ : ಒಂದು ಸಾಲಿನಲ್ಲಿ ಕೆಲವು ವಸ್ತುಗಳನ್ನು ಇಡುವುದು. ಮಕ್ಕಳು ಪ್ರತಿ ವಸ್ತುವನ್ನು ಸ್ಪರ್ಶಿಸಿ ಅನುಭವವನ್ನು ಪಡೆದುಕೊಳ್ಳುವಂತೆ ಹೇಳುವುದು. ಎರಡು ವಸ್ತುಗಳನ್ನು ಹೋಲಿಸಿ ವ್ಯತ್ಯಾಸವನ್ನು ಗುರುತಿಸಿ ಹೇಳುವುದು. ನಂತರ ಮೂರ್ತವಸ್ತುಗಳನ್ನು ಎಣಿಸಿ ಹೇಳುವುದು.**<br>**ತರಗತಿ–2**<br>**ಬಣ್ಣ, ಆಕಾರ, ಗಾತ್ರಕ್ಕೆ ಸಂಬಂಧಿಸಿದ 10 ವಸ್ತುಗಳನ್ನು ಇಟ್ಟು ಸ್ಪರ್ಶಿಸಿ ಎಣಿಸುವುದು.**<br>**ತರಗತಿ–3**<br>**ಕೊಟ್ಟಿರುವ 20 ವಸ್ತುಗಳನ್ನು ಎಣಿಸಿ ನಂತರ ವಸ್ತುಗಳ ಹೆಸರುಗಳನ್ನು ಪಟ್ಟಿಮಾಡಲು ತಿಳಿಸುವುದು.**<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC I. L. -23 (ತರಗತಿ 1, 2, 3)** |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ;ಧನಾತ್ಮಕ ಸ್ವಯಂ ಪರಿಕಲ್ಪನೆಯ ವಿಕಾಸ, ಇತರರ ಹಕ್ಕು ಮತ್ತು ಭಾವನೆಗಳನ್ನು ಗೌರವಿಸುವುದು.<br>ಚಟುವಟಿಕೆ; 6 ಡಿ. ಚುಕ್ಕಿ ಸೇರಿಸಿ ಚಿತ್ರ ಮಾಡು<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಬೆಳವಣಿಗೆಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯತೆ ಬರುತ್ತದೆ.<br><br>ಸಾಮಗ್ರಿಗಳು; ಚುಕ್ಕಿಗಳಿರುವ ವಿವಿಧ ಚಿತ್ರಗಳು.<br>ವಿಧಾನ; ಮಕ್ಕಳನ್ನು ತೋಟಕ್ಕೆ ಕರೆದೊಯ್ದು ಅಲ್ಲಿರುವ ಗಿಡ, ಮರ, ಪಕ್ಷಿಗಳನ್ನು ತೋರಿಸುತ್ತಾ ಅವುಗಳಿಂದ ನಮಗಾಗುವ ಪ್ರಯೋಜನಗಳನ್ನು ತಿಳಿಸುವುದು. ಅದರೊಂದಿಗೆ ಗಿಡಗಳು ಮತ್ತು ಪ್ರಾಣಿಗಳ ಬಗ್ಗೆ ಅನುಕಂಪ, ಪಕ್ಷಿಗಳಿಗೆ ನೀರು ಮತ್ತು ಆಹಾರ ನೀಡುವುದು ಮುಂತಾದ ಚಟುವಟಿಕೆಗಳ ಮೂಲಕ ವಿಕಲ ಚೇತನರು ಮತ್ತು ಹಿರಿಯರ ಬಗ್ಗೆ ಗೌರವ ಭಾವನೆಯಿಂದ ಇರುವುದನ್ನು ಕಲಿಸುವುದು.<br>ಪ್ರಕೃತಿಗೆ ಸಂಭಂದಿಸಿದ ಚುಕ್ಕಿ ಚಿತ್ರಗಳನ್ನು ನೀಡಿ ಕ್ರಮವಾಗಿ ಚುಕ್ಕಿಗಳನ್ನು ಸೇರಿಸಿ ಸುಂದರವಾದ ಚಿತ್ರ ರಚಿಸಲು ಅವಕಾಶ ಕಲ್ಪಿಸುವುದು.ಕೈತೋಟದ ಚಿತ್ರ ಬಿಡಿಸುವಂತೆ ಮಕ್ಕಳಿಗೆ ತಿಳಿಸಿ ತಾವು ನೋಡಿದ ಕೈತೋಟದ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ನೀಡುವುದು.<br><br>ವಿವರ; 2ಮತ್ತು 3 ನೇ ತರಗತಿಗೆ ಗಿಡ, ಮರ,ಪ್ರಾಣಿ ಮತ್ತು ಪಕ್ಷಿಗಳ ಚಿತ್ರಗಳನ್ನು ಬರೆದು ಬಣ್ಣ ಹಾಕಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | **ಸಾಮರ್ಥ್ಯ–ಆಲಿಸುವ ಕೌಶಲ, ಕ್ರಿಯಾತ್ಮಕ ಸ್ವ ಅಭಿವ್ಯಕ್ತಿ, ಔಪಚಾರಿಕ ಮಾತುಕತೆ, ಬಣ್ಣಗಳ ಕಲ್ಪನೆ**<br>**ಚಟುವಟಿಕೆ 8A ನೋಡಿ ಹೇಳು ( ಗುರಿ–2) ECL-8**<br>**ಉದ್ದೇಶ:**<br>*** ಆಯ್ದುಕೊಂಡ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡುವುದು.**<br>*** ಔಪಚಾರಿಕ ಮಾತುಗಾರಿಕೆಯ ಕೌಶಲವನ್ನು ಬೆಳೆಸುವುದು.**<br>*** ಆಲಿಸಿದ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳುವುದು.**<br>*** ಸೃಜನಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.**<br>**ಸಾಮಗ್ರಿ–ಪ್ರಾಣಿ, ಪಕ್ಷಿ, ವಾಹನಗಳು ಇತ್ಯಾದಿಗಳು ಚಿತ್ರ/ಆಟಿಕೆ**<br>**ವಿಧಾನ–ಪ್ರಾಣಿ/ಪಕ್ಷಿ/ವಾಹನಗಳು ಇತ್ಯಾದಿಗಳ ಆಟಿಕೆ/ಚಿತ್ರಗಳನ್ನು ಚೀಲದಲ್ಲಿ ರಿಸಿ.. ಮಕ್ಕಳನ್ನು ಒಬ್ಬೊಬ್ಬರನ್ನಾಗಿ ಕರೆದು ಚೀಲದಿಂದ ಯಾವುದಾದರೂ ಒಂದು ಚಿತ್ರ/ಆಟಿಕೆಯನ್ನು ತೆಗೆದುಕೊಂಡು ಅದರ ಆಕಾರ, ಬಣ್ಣ, ಉಪಯೋಗ, ಲಕ್ಷಣಗಳ ಬಗ್ಗೆ ಮಾತನಾಡಲು ತಿಳಿಸಿ.** |

DRAFT 22.02.22

| | | | |
|---|---|---|---|
| | | | ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಆಯ್ಕೆ ಮಾಡಿಕೊಂಡ ವಿಷಯದ ಕುರಿತು 2 ರಿಂದ 3 ನಿಮಿಷಗಳ ಕಾಲ ಮಾತನಾಡುವುದು.. 3ನೇ ತರಗತಿಯ ಮಕ್ಕಳು ವಿಷಯದ ದೈನಂದಿನ ಬಳಕೆ ಅಥವಾ ಅನ್ವಯಿಕ ಅಂಶಗಳ ಬಗ್ಗೆ ಮಾತನಾಡುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ:ಆರಂಭಿಕ ಹಾಗೂ ಅಂತ್ಯದ ಧ್ವನಿ ಗುರುತಿಸುವಿಕೆ<br>ಚಟುವಟಿಕೆ 10ಡಿ : ಪದ ಹುಡುಕು (ಗುರಿ–1)<br>ಉದ್ದೇಶ : ಆರಂಭಿಕ ಮತ್ತು ಅಂತ್ಯದ ಅಕ್ಷರಗಳು ಮತ್ತು ಧ್ವನಿ ಗುರುತಿಸುವುದು.<br>ಅಗತ್ಯ ಸಾಮಗ್ರಿಗಳು:ವಿವಿಧ ತಿನಿಸುಗಳು/ ಚಿತ್ರಗಳು<br>ವಿಧಾನ: ಮಕ್ಕಳಿಗೆ ಹಬ್ಬ/ಸಮಾರಂಭಗಳಲ್ಲಿ ಮಾಡುವ ಸಿಹಿ ತಿಂಡಿಗಳಲ್ಲಿ ತನಗೆ ಇಷ್ಟವಾದ ತಿಂಡಿಯ ಮೊದಲ ಹಾಗೂ ಕೊನೆಯ ಅಕ್ಷರವನ್ನು ಹೇಳಲು ಹೇಳುವುದು.<br>ಉದಾ: ಪಾಯಸ ಎಂಬ ಪದವನ್ನು ಮಗು ಪಾ...ಸ ಎಂದು ಹೇಳಬೇಕು.<br>2 ಮತ್ತು 3ನೇ ತರಗತಿ : ವಿವಿಧ ತಿನಿಸುಗಳ ಹೆಸರುಗಳನ್ನು ರಚಿಸಲು ಸಹಾಯಕವಾಗುಂತೆ ಅಕ್ಷರಗಳ ಮಿಂಚುಪಟ್ಟಿಗಳನ್ನು ತಯಾರಿಸಿ ಅ ಅಕ್ಷರಗಳನ್ನು ಬಳಸಿ ತಿನಿಸುಗಳ ಹೆಸರು ರಚಿಸಿ ಓದಿಸುವುದು ಮತ್ತು ಪಟ್ಟಿ ಮಾಡಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ : ಬರವಣಿಗೆ ಕೌಶಲಗಳ ಅಭ್ಯಾಸ, ಪದಸಂಪತ್ತಿನ ಅಭಿವೃದ್ಧಿ, ಕೈ ಕಣ್ಣು ಸಂಯೋಜನೆ, ಸೃಜನ ಶೀಲತೆ.<br>ಚಟುವಟಿಕೆ ಸಂಖ್ಯೆ: 34 ಗುರಿ : 2<br>ಚಟುವಟಿಕೆ ಹೆಸರು : ಪುಸ್ತಕ ರಚನೆ ( 17 ನೇ ದಿನದಿಂದ ಮುಂದುವರೆದಿದೆ) **ECW-9**<br>ಉದ್ದೇಶಗಳು:<br>• ಮಕ್ಕಳ ಹಸ್ತಪತ್ರಿಕೆಯನ್ನು ಸಿದ್ಧಪಡಿಸುವುದು.<br>• ಮಕ್ಕಳ ಇಷ್ಟದ ಚಿತ್ರಗಳನ್ನು ಸಂಗ್ರಹಿಸಿ ಪುಸ್ತಕ ತಯಾರಿಸುವುದು.<br>• ಚಿತ್ರಗಳನ್ನು ಬಿಡಿಸುವ ಮತ್ತು ಸಂಗ್ರಹಿಸುವ ಹವ್ಯಾಸ ಬೆಳೆಸುವುದು.<br>ಅಗತ್ಯ ಸಾಮಗ್ರಿಗಳು: ಹಾಳೆಗಳು, ಬಣ್ಣಗಳು, ಚಾರ್ಟ್ ಪೇಪರ್<br>ವಿಧಾನ: ಶಿಕ್ಷಕರು ತರಗತಿ ನೋಟ್‌ಪುಸ್ತಕಗಳನ್ನು ತಯಾರಿಸಲು ಮಕ್ಕಳಿಗೆ ಸಹಾಯ ಮಾಡುವುದು.. ಇದರಲ್ಲಿ ಪ್ರತಿ ಮಗುವು ಒಂದು ಹಾಳೆಯಲ್ಲಿ ಸೂಚಿತ ವಿಷಯದ ಬಗ್ಗೆ ಚಿತ್ರ ಬಿಡಿಸಲು ಅಥವಾ ಬರೆಯಲು ತಿಳಿಸುವುದು. ನಂತರ ಆ ಹಾಳೆಯನ್ನು ತರಗತಿ ನೋಟ್‌ಪುಸ್ತಕಕ್ಕೆ ಸೇರಿಸಲು ನೀಡುವ ಮೂಲಕ ತನ್ನ ಕೊಡುಗೆಯನ್ನು ಸಲ್ಲಿಸಲು ಅವಕಾಶ ಕೊಡುವುದು. ಎಲ್ಲಾ ಮಕ್ಕಳ ಹಾಳೆಯನ್ನು ಸೇರಿಸಿ ತರಗತಿ ನೋಟ್‌ಪುಸ್ತಕವನ್ನು ರಚಿಸುವುದು.<br>ಸಲಹಾತ್ಮಕ ವಿಷಯ: ಹಣ್ಣುಗಳು<br>ತರಗತಿವಾರು ವಿವರ:<br>2 ಹಾಗೂ 3ನೇ ತರಗತಿಯ ಮಕ್ಕಳು ಪ್ರತ್ಯೇಕವಾಗಿ ತರಗತಿ ನೋಟ್‌ಪುಸ್ತಕವನ್ನು ರಚಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | ಹೊರಾಂಗಣ ಆಟಗಳು | Day 31<br>ಚಟುವಟಿಕೆ –26 ಮೊಲ ಜಿಗಿತ ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ<br>ಬೇಕಾಗುವ ಸಾಮಗ್ರಿ: ಬಾಕ್ಸ್ , ಸ್ಕಿಪ್ಪಿಂಗ್ ರೋಪ್ಸ್.<br>ವಿಧಾನ:<br>• ಮಕ್ಕಳಿಗೆ ಓಟವನ್ನು ಆಯೋಜಿಸುವುದು.<br>• ಓಟದ ಹಾದಿಯಲ್ಲಿ ಕೆಲವೊಂದು ವಸ್ತುಗಳನ್ನು ಅಡೆತಡೆಯಾಗಿ ಉಪಯೋಗಿಸುವುದು.<br>• ಮಕ್ಕಳು ಮೊಲದ ಹಾಗೆ ಜಿಗಿಯುತ್ತಾ ಈ ಎಲ್ಲ ಅಡೆತಡೆಗಳನ್ನು ದಾಟುತ್ತಾ ಓಟವನ್ನು ಪೂರ್ಣಗೊಳಿಸುವಂತೆ ಸೂಚಿಸುವುದು. | |

DRAFT 2022

<table>
<tr><td></td><td></td><td>ಎರಡನೇ ಮತ್ತು ಮೂರನೇ ತರಗತಿಯ  ಮಕ್ಕಳಿಗೆ ಕಪ್ಪೆ ಆಟವನ್ನು ಆಡಿಸುವುದು.</td></tr>
<tr><td></td><td>ಕಥಾ ಸಮಯ</td><td>ಶೀರ್ಷಿಕೆ : ಮೈ ರೀಡಿಂಗ್ ಪಾರ್ಟ್ನರ್<br>ಸಾಮಗ್ರಿಗಳು : ಸಾಹಿತ್ಯ<br>ಉದ್ದೇಶ :<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಮಾತನಾಡುವ ಸಾಮರ್ಥ್ಯವನ್ನು ಬೆಳೆಸುವುದು.<br>ವಿಧಾನ :<br>➢ ಶಿಕ್ಷಕರು ಕಥೆಯ ರಚನಾ ಶೈಲಿಯನ್ನು ಅರ್ಥಮಾಡಿಕೊಂಡು ಓದಿಕೊಳ್ಳುವುದು.<br>➢ ಕಥೆಯ ಪಾತ್ರಗಳನ್ನು/ವಸ್ತುಗಳನ್ನು ಮಕ್ಕಳಿಗೆ ಅರ್ಥ ಮಾಡಿಸುವುದು.<br>➢ ಮೊದಲು ಕಥೆಯನ್ನು ಕನ್ನಡದಲ್ಲಿಯೇ ಹೇಳುವುದು.<br>➢ ನಂತರವೂ ಕಥೆಯನ್ನು ಕನ್ನಡದಲ್ಲಿ ಹೇಳುತ್ತ ನಡು ನಡುವೆ ಕಥೆಯ ಪಾತ್ರಗಳನ್ನು/ವಸ್ತುಗಳನ್ನು ಇಂಗ್ಲೀಷನಲ್ಲಿ ಪರಿಚಯಿಸುವುದು.<br>➢ ಆಯ್ದ ಪದಗಳನ್ನು ಪುನರುಚ್ಚರಿಸಲು ಮಕ್ಕಳಿಗೆ ಹೇಳುವುದು.<br>ಕಥೆ :<br>
<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು)</td></tr>
<tr><td></td><td>ಮತ್ತೆ ಸಿಗೋಣ</td><td>• ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.</td></tr>
</table>

# ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

## ವಾರ–6 ದಿನ–32 (ಮಂಗಳವಾರ)

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 32 | **ಶುಭಾಶಯ ವಿನಿಮಯ** *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1**<br>sun moon star (ಮುಂದುವರಿದ ಚಟುವಟಿಕೆ)<br>ಸಾಮಗ್ರಿಗಳು: ನಕ್ಷತ್ರಗಳು, ಚಂದ್ರ ಮತ್ತು ಸೂರ್ಯನ ಚಿತ್ರಗಳು<br>ವಿಧಾನ:<br>(ವಾರ 6) ದಿನ–1 ಸೂಚನೆಗಳನ್ನು ಅನುಸರಿಸಿ.<br>**ಚಟುವಟಿಕೆ 1**<br>ಹವಾಮಾನ ನಕ್ಷೆ ಮಾಡಿಸಿ. |
| | **ಮಾತು ಕತೆ** *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | **ಚಟುವಟಿಕೆ–5:** ನನ್ನ ಜವಾಬ್ದಾರಿಗಳು ( ಶಾಲಾ ಸಂಸತ್ತು) ಗುರಿ –1<br>**ಸಾಮರ್ಥ್ಯ: ಸ್ಮರಣೆ, ಚಿಂತನೆ,** ಸ್ವಯಂ ಶಿಸ್ತು, ಸಮಾಜ ಪರ ವರ್ತನೆ.<br>**ಸಾಮಗ್ರಿ:** ವಿದ್ಯಾರ್ಥಿಗಳ ಹೆಸರು ಮತ್ತು ಅವರ ಜವಾಬ್ದಾರಿಗಳ ಬರೆಯಲು ಚಾರ್ಟ್, ಸ್ಕೆಚ್ ಪೆನ್,<br>**ವಿಧಾನ:** ವಿದ್ಯಾರ್ಥಿಗಳು ಪ್ರತಿದಿನ ಮಾಡುವಂತಹ ಸರಳ ಕಾರ್ಯ ಹಾಗು ಜವಾಬ್ದಾರಿಗಳ ಕುರಿತಾಗಿ ಒಂದು ಪಟ್ಟಿ ಮಾಡುವುದು. ಉದಾ: ಗ್ರಂಥಾಲಯ ಮಂತ್ರಿ, ಆಹಾರ ಮಂತ್ರಿ, ಸ್ವಚ್ಛತಾ ಮಂತ್ರಿ, ಆಟಗಳ ಮಂತ್ರಿ, ಶೌಚಾಲಯ ಮಂತ್ರಿ, ಇತ್ಯಾದಿ. ಇಂತಹ ಜವಾಬ್ದಾರಿಗಳು ಹಾಗೂ ಅವುಗಳನ್ನು ನಿರ್ವಹಿಸುವ ಮಕ್ಕಳ ಹೆಸರುಗಳನ್ನು ಬರೆದ ಚಾರ್ಟ್ ಸಿದ್ಧಪಡಿಸುವುದು. ಪ್ರತಿ ಜವಾಬ್ದಾರಿಗಳಿಗೆ ಸಂಬಂಧಿಸಿದಂತೆ ಚಿತ್ರಗಳಿರುವ ಬ್ಯಾಡ್ಜ್‌ಗಳನ್ನು ತಯಾರಿಸಿ. ಅವುಗಳನ್ನು ಆಯಾ ಮಂತ್ರಿಗಳು ಧರಿಸಲು ತಿಳಿಸುವುದು. ತರಗತಿಯ ಪ್ರತಿ ಮಕ್ಕಳಿಗೂ ಅವಕಾಶ ಸಿಗುವಂತೆ ನೋಡಿಕೊಳ್ಳಿ. ಮಕ್ಕಳ ಸ್ವತಂತ್ರವಾಗಿ ತಮಗೆ ವಹಿಸಿದ ಕಾರ್ಯವನ್ನು ಮಾಡುತ್ತಿದ್ದಾರೆಯೇ ಎಂದು ಗಮನಿಸಿ. ಹೆಚ್ಚು ಹೆಚ್ಚು ಜವಾಬ್ದಾರಿಗಳನ್ನು ನಿರ್ವಹಿಸಲು ಪ್ರೋತ್ಸಾಹಿಸಿ.<br><br>**ಚಟುವಟಿಕೆ 2**: ನನ್ನ ಸಸ್ಯ ನನ್ನ ಮರ (ಮುಂದುವರಿದ ಚಟುವಟಿಕೆ)<br>ಸಾಮಗ್ರಿಗಳು: ವಿವಿಧ ರೀತಿಯ ಸಸ್ಯಗಳ ಚಿತ್ರ ಕಾರ್ಡ್ ಗಳು<br>ವಿಧಾನ:<br>ದಿನ–31ರ **ಮಾತು ಕತೆ** ಚಟುವಟಿಕೆಯನ್ನು ಅನುಸರಿಸಿ. |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಹೊಂದಿಸುವುದು, ಪರಿಸರಜಾಗೃತಿ ಬಣ್ಣ, ಆಕಾರ, ಗಾತ್ರಗಳ ಪರಿಕಲ್ಪನೆ, ಪರಿಸರದ ಅರಿವು.**<br>**ಚಟುವಟಿಕೆ...12 ಬಿ ಮುಟ್ಟಿ ಎಣಿಸು (ಗುರಿ 3)**<br>**ಉದ್ದೇಶ:– ಮೂರ್ತ ವಸ್ತುಗಳನ್ನು ಸ್ಪರ್ಶಿಸಿ ಎಣಿಸುವುದು.**<br>**ಅಗತ್ಯ ಸಾಮಗ್ರಿಗಳು : ಸುತ್ತಲಿನ ವಿವಿಧ ವಸ್ತುಗಳು**<br>**ವಿಧಾನ : ಒಂದು ಸಾಲಿನಲ್ಲಿ 10 ವಸ್ತುಗಳನ್ನು ಇಡುವುದು. ಮಕ್ಕಳು ಪ್ರತಿ ವಸ್ತುವನ್ನು ಸ್ಪರ್ಶಿಸಿ ಎಣಿಸುವುದು. ನಂತರ ತಮ್ಮ ತರಗತಿಯ ಮಕ್ಕಳನ್ನು ಎಣಿಸುವುದು. ವಸ್ತು/ಮಕ್ಕಳನ್ನು ಎಣಿಸುವಾಗ ಪ್ರತಿ ಬಾರಿಯೂ ಚಪ್ಪಾಳೆ ತಟ್ಟಿ ಗಟ್ಟಿಯಾಗಿ ಸಂಖ್ಯೆಯನ್ನು ಹೇಳುವುದು.**<br>**ತರಗತಿ–2**<br>*** ಒಂದು ಸಾಲಿನಲ್ಲಿ 15 ವಸ್ತುಗಳನ್ನು ಇಟ್ಟು ಎಣಿಸಲು ಹೇಳುವುದು.** |

DRAFT 2022

| | | | |
|---|---|---|---|
| | | | * ತರಗತಿ–3<br>* ಕೊಟ್ಟಿರುವ 20 ವಸ್ತುಗಳನ್ನು ಎಣಿಸಿ ಹೇಳುವುದು.<br>* ತರಗತಿಯಲ್ಲಿರುವ ಮಕ್ಕಳನ್ನು ಎಣಿಸಲು ಹೇಳುವುದು. ಹೇಳಿದ ಸಂಖ್ಯೆಯಷ್ಟು ಬಾರಿ ಚಪ್ಪಾಳೆ ತಟ್ಟಲು ಹೇಳುವುದು. |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ; ಸಣ್ಣ ಸ್ನಾಯುಗಳ ಚಲನಾ ಕೌಶಲಗಳ ವಿಕಾಸ ಮತ್ತು ಸೃಜನಶೀಲತೆಯ ಅಭಿವೃದ್ಧಿ.<br>ಚಟುವಟಿಕೆ; ಮಾಡಿನೋಡು.<br>ಉದ್ದೇಶ;<br>• ಸಣ್ಣ ಸ್ನಾಯುಗಳ ಚಲನಾ ಕೌಶಲಗಳು ಅಭಿವೃದ್ಧಿಯಾಗುವುದು.<br>• ಬೆರಳುಗಳ ಕುಶಲತೆ ಹೆಚ್ಚುವುದು ಮತ್ತು ಏಕಾಗ್ರತೆ ಬೆಳೆಯುವುದು.<br>• ಅಂಟಿಸುವ ಸಮಯದಲ್ಲಿ ಸ್ವಚ್ಛತೆಯ ಬಗ್ಗೆ ತಿಳಿಯುವುದು.<br>ಸಾಮಗ್ರಿಗಳು; ಕತ್ತರಿ , ವರ್ಣಮಯ ಚಿತ್ರಗಳು, ಅಂಟು.<br>ವಿಧಾನ; ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು.ಹಳೆಯ ದಿನಪತ್ರಿಕೆಯಲ್ಲಿನ ಹೂ/ ಪ್ರಾಣಿ/ ಪಕ್ಷಿ/ಮನೆ ಇತ್ಯಾದಿಗಳ ಚಿತ್ರವನ್ನು ಕತ್ತರಿಸಿ ಅದನ್ನು ರಟ್ಟಿನ ಮೇಲೆ ಅಂಟಿಸಲು ಹೇಳುವುದು.ನಂತರ ಅದನ್ನು ಬೇರೆ ಬೇರೆ ಆಕಾರದ 6–7 ತುಂಡುಗಳಾಗಿ ಕತ್ತರಿಸುವುದು. [ಟ್ಯಾನ್ ಗ್ರಾಂ ಮಾದರಿಯಲ್ಲಿ] ಕತ್ತರಿಸಿದ ತುಂಡುಗಳನ್ನು ಮತ್ತೆ ಮೊದಲಿನ ಚಿತ್ರ ಬರುವಂತೆ ಜೋಡಿಸಲು ಹೇಳುವುದು.ಇದರಿಂದ ಅಲ್ಪವೆಚ್ಚದ ಸಾಮಗ್ರಿಗಳನ್ನು ಬಳಸಿ ಮಗುವಿನ ಸೃಜನ ಶೀಲತೆಗೆ ಪ್ರೋತ್ಸಾಹ ನೀಡಿದಂತೆ ಆಗುವುದು.<br>ವಿವರ; 2ಮತ್ತು 3 ನೇ ತರಗತಿಗೆ ಕತ್ತರಿಸಿದ ತುಂಡುಗಳನ್ನು ಬಳಸಿ ವಿವಿಧ ಪ್ರಾಣಿ ಮತ್ತು ಪಕ್ಷಿಗಳನ್ನು ಮಾಡಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಪದ ಸಂಪತ್ತಿನ ಅಭಿವೃದ್ಧಿ, ಚಾಲನಾ ಕೌಶಲಗಳ ಅಭಿವೃದ್ಧಿ.<br>ಚಟುವಟಿಕೆ: 15 ಪ್ರಾಸ ಪದಗಳನ್ನು ಆಲಿಸುವುದು (ಗುರಿ–02) ECL-4 (26 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>* ಧ್ವನಿ ವಿಜ್ಞಾನದ ಅರಿವನ್ನು ಹೊಂದುವಂತೆ ಮಾಡುವುದು.<br>* ಪ್ರಾಸಪದಗಳ ಮೂಲಕ ಪದಸಂಪತ್ತನ್ನು ಹೆಚ್ಚಿಸುವುದು.<br>* ಸ್ಥೂಲ ಹಾಗೂ ಸೂಕ್ಷ್ಮ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು:– ಇಲ್ಲ<br>ವಿಧಾನ:<br>* ಮಕ್ಕಳಿಗೆ 26 ನೇ ದಿನದಲ್ಲಿ ಹೇಳಿದ ಪ್ರಾಸ ಗೀತೆಯನ್ನೇ ಹೇಳುವುದು.<br>* ಹಾಡು ಹೇಳುವಾಗ ಪ್ರಾಸ ಪದಗಳನ್ನು ಸ್ವಲ್ಪ ಒತ್ತಿ ಹೇಳುವುದು.<br>* ಪ್ರಾಸ ಗೀತೆಗೆ ತಕ್ಕಂತೆ ಅಭಿನಯಿಸಲು ತಿಳಿಸುವುದು.<br>* ಒತ್ತಿ ಹೇಳಿದ ಪದಗಳನ್ನು ಪ್ರತ್ಯೇಕವಾಗಿ ಹೇಳಿಸುವುದು.<br>* ಪ್ರಾಸಗೀತೆಯಲ್ಲಿಯ ಪ್ರಾಸ ಪದಗಳನ್ನು ಪರಿಚಯಿಸಿ ಅದಕ್ಕೆ ಮತ್ತೆ ಇನ್ನೊಂದು ಪ್ರಾಸ ಪದ ಸೇರಿಸುವುದು.<br>ತರಗತಿವಾರು ವಿವರ: 2 ನೇ ತರಗತಿ ಮಕ್ಕಳು ಪ್ರಾಸ ಪದಕ್ಕೆ ಇನ್ನೂ ಎರಡೆರಡು ಪ್ರಾಸಪದಗಳನ್ನು ಸೇರಿಸಲು ಪ್ರಯತ್ನಿಸುವುದು. 3 ನೇ ತರಗತಿ ಮಕ್ಕಳು ಗುರುತಿಸಿದ ಪದಗಳನ್ನು ತಮ್ಮ ವಾಕ್ಯದಲ್ಲಿ ಬಳಸುವುದು.. (38 ನೇ ದಿನಕ್ಕೆ ಮುಂದುವರೆದಿದೆ) |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ:ಸ್ವಯಂ ಅರಿವು, ಧನಾತ್ಮಕ ಸ್ವ ಅರಿವಿನ ಅಭಿವೃದ್ಧಿ, ಆಲಿಸುವುದು ಹಾಗೂ ಮಾತನಾಡುವ ಕೌಶಲ ಅಭಿವೃದ್ಧಿ<br>ಚಟುವಟಿಕೆ 1 : ನನ್ನ ವಿವರ (ಗುರಿ–1)<br>ಉದ್ದೇಶ: ತನಗೆ ಇಷ್ಟವಾದ ಮತ್ತು ಇಷ್ಟವಲ್ಲದ ಅಂಶಗಳನ್ನು ಅಭಿವ್ಯಕ್ತಿಗೊಳಿಸುವುದು.<br>ಅಗತ್ಯ ಸಾಮಗ್ರಿಗಳು:ಪೆನ್, ಪೆನ್ಸಿಲ್, ಕ್ರೇಯಾನ್ಸ್<br>ವಿಧಾನ: ಶಿಕ್ಷಕರು ಮೊದಲು ತನಗೆ ಇಷ್ಟವಾದ ಅಂಶಗಳು, ಇಷ್ಟವಾಗದ ಅಂಶಗಳನ್ನು ಮಕ್ಕಳ ಜೊತೆ ಹಂಚಿಕೊಳ್ಳಬೇಕು. ನಂತರ ಪ್ರತಿ ಮಗುವಿಗೆ ತನಗೆ ಇಷ್ಟವಾದ, ಇಷ್ಟವಾಗದ ಅಂಶಗಳ ಬಗ್ಗೆ ಯೋಚಿಸಿ ಮುಕ್ತವಾಗಿ |

DRAFT 2022

| | | |
|---|---|---|
| | ಮಾತನಾಡಲು ಅವಕಾಶ ನೀಡುವುದು..<br>ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸುವುದರ ಜೊತೆ ಕೆಲವೊಂದು ಜವಬ್ದಾರಿ ತೆಗೆದುಕೊಳ್ಳುವಂತೆ ಪ್ರೇರೇಪಿಸುವುದು. ಬಿಳಿ ಹಾಳೆಯನ್ನು ನೀಡಿ ತನಗೆ ಇಷ್ಟವಾದ ತಿಂಡಿ, ಗೊಂಬೆ, ಪ್ರಾಣಿ, ಪಕ್ಷಿ, ವ್ಯಕ್ತಿ, ಹೂ, ಇತ್ಯಾದಿ ಚಿತ್ರಗಳನ್ನು ಬರೆದು ಬಣ್ಣ ತುಂಬಿ ಹೆಸರಿಸಲು ಹೇಳುವುದು<br>2 ಮತ್ತು 3ನೇ ತರಗತಿ : ತನ್ನಿಷ್ಟದ ಮತ್ತು ಇಷ್ಟವಲ್ಲದ ಅಂಶಗಳ ಬಗ್ಗೆ ಸಹಜವಾಗಿ ಮಾತನಾಡಲು ಅವಕಾಶ ನೀಡುವುದು.<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC -8 (ತರಗತಿ 1, 2, 3)** |
| | ಉದ್ದೇಶಿತ ಬರಹ | ಸಾಮರ್ಥ್ಯ : ಬರವಣಿಗೆ ಕೌಶಲಗಳ ಅಭ್ಯಾಸ, ಪದಸಂಪತ್ತಿನ ಅಭಿವೃದ್ಧಿ, ಕೈ ಕಣ್ಣು ಸಂಯೋಜನೆ, ಸೃಜನ ಶೀಲತೆ.<br>ಚಟುವಟಿಕೆ ಹೆಸರು : 34 ಪುಸ್ತಕ ರಚನೆ (ಗುರಿ : 2) **ECW-9**<br>ಉದ್ದೇಶಗಳು:<br>• ಮಕ್ಕಳ ಹಸ್ತಪತ್ರಿಕೆಯನ್ನು ಸಿದ್ಧಪಡಿಸುವುದು.<br>• ಮಕ್ಕಳ ಇಷ್ಟದ ಚಿತ್ರಗಳನ್ನು ಸಂಗ್ರಹಿಸಿ ಪುಸ್ತಕ ತಯಾರಿಸುವುದು.<br>• ಚಿತ್ರಗಳನ್ನು ಬಿಡಿಸುವ ಮತ್ತು ಸಂಗ್ರಹಿಸುವ ಹವ್ಯಾಸ ಬೆಳೆಸುವುದು.<br>ಅಗತ್ಯ ಸಾಮಗ್ರಿಗಳು: ಹಾಳೆಗಳು, ಬಣ್ಣಗಳು, ಚಾರ್ಟ್ ಪೇಪರ್<br>ವಿಧಾನ: ಶಿಕ್ಷಕರು . 2 ಎ4 ಅಳತೆಯ ಹಾಳೆಗಳನ್ನು ಮಡಚಿ ಪಿನ್ ಮಾಡುವ ಮೂಲಕ ಪ್ರತಿ ಮಗುವಿಗೂ ತನ್ನದೇ ಆದ ಪುಟ್ಟ ನೋಟ್‌ಪುಸ್ತಕವನ್ನು ಒದಗಿಸುವುದು. ಇದರಲ್ಲಿ ಮಕ್ಕಳು ಸೂಚಿತ ವಿಷಯದ ಬಗ್ಗೆ ಚಿತ್ರ ಬಿಡಿಸಲು ಅಥವಾ ಬರೆಯಲು ತಿಳಿಸುವುದು.<br>ಸಲಹಾತ್ಮಕ ವಿಷಯ: ನನ್ನ ಆಟಿಕೆಗಳು<br>ತರಗತಿವಾರು ವಿವರ: 2 ಹಾಗೂ 3ನೇ ತರಗತಿಯ ಮಕ್ಕಳು ವೈಯಕ್ತಿಕ ನೋಟ್‌ಪುಸ್ತಕವನ್ನು ರಚಿಸುವುದು. ( 38 ನೇ ದಿನಕ್ಕೆ ಮುಂದುವರೆದಿದೆ) |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| | **ಹೊರಾಂಗಣ ಆಟಗಳು** | Day 32<br>ಚಟುವಟಿಕೆ –27 ಕ್ಲೈಂಬಿಂಗ್ (ಹತ್ತುವುದು) ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ<br>ಬೇಕಾಗುವ ಸಾಮಗ್ರಿ: ಹಗ್ಗ ,ಏಣಿ ಅಥವಾ ಮೆಟ್ಟಿಲುಗಳು<br>ವಿಧಾನ:<br>• ಮೆಟ್ಟಿಲುಗಳಿರುವ ಯಾವುದಾದರು ಪ್ರದೇಶದಲ್ಲಿ ಮಕ್ಕಳು ಮೆಟ್ಟಿಲುಗಳನ್ನು ಹತ್ತಲು ಹಾಗು ಇಳಿಯಲು ಸೂಚಿಸುವುದು<br>• **ಎರಡು ಮತ್ತು ಮೂರನೇ ತರಗತಿಯ ಮಕ್ಕಳಿಗೆ ಇದೆ ಆಟವನ್ನು ಮುಂದುವರೆಸುವುದು .**<br>ಗಟ್ಟಿ ಮುಟ್ಟಾದ ಹಗ್ಗ ಮತ್ತು ಮರದ ಅಥವಾ ಬಿದಿರಿನ ಪಟ್ಟಿಗಳನ್ನು ಬಳಸಿ ಹಗ್ಗ-ಏಣಿಯಂತಹ ಯಾವುದೇ ಕ್ಲೈಂಬಿಂಗ್ ಫ್ರೇಮ್ ಮಕ್ಕಳಿಗೆ ಈ ಕೌಶಲ್ಯದಲ್ಲಿ ಅಭ್ಯಾಸವನ್ನು ನೀಡುತ್ತದೆ. |
| | **ಕಥಾ ಸಮಯ** | ವಿಧಾನ :<br>➢ ಮೊದಲ ದಿನದ ಉದ್ದೇಶದಂತೆ ಕಥಾ ಸಮಯವು ಮುಂದುವರೆಯುತ್ತದೆ.<br>➢ ಶಿಕ್ಷಕರು ಕಥೆಯನ್ನು ನಿರೂಪಿಸುವುದರ ಜೊತೆಗೆ ಮಕ್ಕಳ ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು.<br>ಉದಾ : ಮುಂದೇನಾಯಿತು? ಎಲ್ಲಿಂದ ಪುಸ್ತಕ ಬಂತು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಕನ್ನಡದಲ್ಲಿ ಸರಳ ಪ್ರಶ್ನೆಗಳನ್ನು ಕೇಳಿ.** |

DRAFT 22.02.22

| | | |
|---|---|---|
| | | (ಕಥೆಯನ್ನು ಆನಂದಿಸುವುದರ ಜೊತೆಗೆ ಆಲಿಸುತ್ತಿದ್ದಾರೆ ಎನ್ನುವುದನ್ನು ಖಚಿತಪಡಿಸಿ ಕೊಳ್ಳುವುದು) |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

## ವಾರ–6 ದಿನ–33 (ಬುಧವಾರ)

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 33 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:** ಗಾಡಿ ಬಿಡು<br>ಸಾಮಗ್ರಿಗಳು: ವಿವಿಧ ವಾಹನಗಳ ಚಿತ್ರಗಳು .<br>ವಿಧಾನ:<br>•ಮಕ್ಕಳು ತರಗತಿ ಪ್ರವೇಶಿಸುವಾಗ ವಿವಿಧ ವಾಹನಗಳ ಚಿತ್ರಗಳನ್ನು ತೋರಿಸಿ.<br>•ಮಗು ತನಗೆ ಇಷ್ಟವಾದ ವಾಹನವನ್ನು ಚಲಾಯಿಸುವಂತೆ ನಟಿಸುತ್ತಾ ತರಗತಿಯನ್ನು ಪ್ರವೇಶಿಸಬೇಕು.<br>•ತರಗತಿ ಪ್ರವೇಶಿಸಿದ ನಂತರ ವೃತ್ತಾಕಾರವಾಗಿ ನಿಲ್ಲುವಂತೆ ಸೂಚಿಸಿ. "What day is today?(ಇಂದು ಯಾವ ದಿನ?)" ಎಂದು ಮಕ್ಕಳನ್ನು ಕೇಳಿ ಮತ್ತು Today is ________("ಇಂದು __) ಎಂಬ ಉತ್ತರ ಪಡೆಯಿರಿ.<br>•ಹವಾಮಾನ ನಕ್ಷೆ ಮಾಡಿಸಿ. |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | **ಚಟುವಟಿಕೆ: ಸರಿ /ತಪ್ಪು**<br>ಸಾಮಗ್ರಿಗಳು: ಚಿತ್ರ ಕಾರ್ಡ್ ಗಳು (ಸ್ನಾನಕ್ಕಾಗಿ ಬಕೆಟ್ ಮತ್ತು ಮಗ್ ಬಳಸುವುದು, ಸ್ನಾನಕ್ಕಾಗಿ ಶವರ್ ಬಳಸುವುದು, ನೀರನ್ನು ಮರುಬಳಕೆ ಮಾಡುವುದು, ನೀರನ್ನು ವ್ಯರ್ಥ ಮಾಡುವುದು, ನಲ್ಲಿಯ ಮೇಲೆ, ನಲ್ಲಿಗಳನ್ನು ಮುಚ್ಚುವುದು, ಸಸ್ಯಗಳಿಗೆ ನಿಯಮಿತವಾಗಿ ನೀರು ಹಾಕುವುದು, ಮರಗಳನ್ನು ನೆಡುವುದು ಇತ್ಯಾದಿ. )<br>ವಿಧಾನ:<br>1. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ.<br>2. ಚಿತ್ರ ಕಾರ್ಡ್ ಗಳನ್ನು ಚೀಲದಲ್ಲಿ ಇರಿಸಿ. ಚೀಲವನ್ನು ಪಾಸ್ ಮಾಡಿ ಮತ್ತು ಪಾಸಿಂಗ್ ದಿ ಪಾರ್ಸಲ್ ಚಟುವಟಿಕೆ ಮಾಡಿಸಿ.<br>3. ಚೀಲವನ್ನು ಹೊಂದಿರುವ ಮಗುವು ಚೀಲದಿಂದ ಒಂದು ಕಾರ್ಡ್ ಆಯ್ಕೆ ಮಾಡಿ ಚಿತ್ರದ ಕುರಿತು ಮಾತನಾಡಲು ಪ್ರೋತ್ಸಾಹಿಸಿ.<br>ಪ್ರಶ್ನೆಗಳು: ಚಿತ್ರ ಯಾವುದು? ನೀವು ಆ ಪರಿಸ್ಥಿತಿಯಲ್ಲಿದ್ದರೆ ನೀವು ಏನು ಮಾಡುತ್ತೀರಿ? ನೀವು ಇದನ್ನು ಏಕೆ ಮಾಡುತ್ತೀರಿ? ನೀರನ್ನು ಉಳಿಸಲು/ ಮರಗಳನ್ನು ಉಳಿಸಲು ನಾವು ಏನು ಮಾಡಬೇಕು? |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ** | **ಸಾಮರ್ಥ್ಯ: ಸ್ಪರ್ಶ ಸಂವೇದನೆ, ಪರಿಸರದ ಅರಿವು**<br>**ಚಟುವಟಿಕೆ...9 ಬಿ "ಸೂಚಿತ ಸಂಖ್ಯೆ"(ಅನುಕ್ರಮಜೋಡಣೆ) (ಗುರಿ 3)**<br>**ಉದ್ದೇಶ:– ಅನುಕ್ರಮವಾಗಿ ಜೋಡಿಸುವುದು.** |

DRAFT 22.02.22

| | | | |
|---|---|---|---|
| | ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | | ಅಗತ್ಯ ಸಾಮಗ್ರಿಗಳು : 1 ರಿಂದ 10 ರವರೆಗಿನ ಕಾರ್ಡುಗಳು (ಕಿಟ್‌ನಲ್ಲಿರುವ ಸಂಖ್ಯಾ ಕಾರ್ಡುಗಳನ್ನು ನೀಡುವುದು)<br>ವಿಧಾನ : ಮಕ್ಕಳನ್ನು ವೃತ್ತಾಕಾರದಲ್ಲಿ ಕುಳಿತುಕೊಳ್ಳಲು ತಿಳಿಸುವುದು. 1 ರಿಂದ 10 ರವರೆಗಿನ ಸಂಖ್ಯಾ ಕಾರ್ಡುಗಳನ್ನು ಒಂದು ಟ್ರೇನಲ್ಲಿ ಇರಿಸಿ ಅದರಲ್ಲಿಯ ಸೂಚಿತ ಸಂಖ್ಯೆಗಳ ಕಾರ್ಡುಗಳನ್ನು ಕ್ರಮವಾಗಿ ಜೋಡಿಸಲು ಮಕ್ಕಳಿಗೆ ಅವಕಾಶ ಮಾಡಿಕೊಡುವುದು.<br>ತರಗತಿ–2<br>1 ರಿಂದ 10ರ ವರೆಗಿನ ಸಂಖ್ಯೆಗಳನ್ನು ಹಿಮ್ಮುಖವಾಗಿ ಹೇಳಿ ಬರೆಸುವುದು.<br>ತರಗತಿ–3<br>ಅನುಕ್ರಮವಾಗಿ ಬರೆದ ಸಂಖ್ಯೆಗಳನ್ನು ಪದಗಳಲ್ಲಿ ಬರೆಸುವುದು.<br>* ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-9 ( 01, 02,03ನೇ ತರಗತಿ) |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ; ಸಣ್ಣ ಸ್ನಾಯುಗಳ ಚಲನಾ ಶಕ್ತಿಯ ವಿಕಾಸ ಮತ್ತು ಸೃಜನ ಶೀಲತೆಯ ಅಭಿವೃದ್ಧಿ.<br>ಚಟುವಟಿಕೆ; ಮಾಡಿ ನೋಡು<br>ಉದ್ದೇಶ;<br>• ಸಣ್ಣ ಸ್ನಾಯುಗಳ ಚಲನಾ ಕೌಶಲಗಳು ಅಭಿವೃದ್ಧಿಯಾಗುವುದು.<br>• ಬೆರಳುಗಳ ಕುಶಲತೆ ಹೆಚ್ಚುವುದು ಮತ್ತು ಏಕಾಗ್ರತೆ ಬೆಳೆಯುವುದು.<br>• ಅಂಟಿಸುವ ಸಮಯದಲ್ಲಿ ಸ್ವಚ್ಛತೆಯ ಬಗ್ಗೆ ತಿಳಿಯುವುದು.<br>ಸಾಮಗ್ರಿಗಳು; ಕತ್ತರಿ, ವರ್ಣಮಯ ನಕಾಶಗಳ ಚಿತ್ರ ಅಂಟು.<br>ವಿಧಾನ;ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು.ಮಕ್ಕಳಿಗೆ ವಿವಿಧ ನಕ್ಷೆ[ತಾಲ್ಲೂಕು,ಜಿಲ್ಲೆ]ಗಳ ಚಿತ್ರವನ್ನು ಕತ್ತರಿಸಿ ಅದನ್ನು ರಟ್ಟಿನ ಮೇಲೆ ಅಂಟಿಸಲು ಹೇಳುವುದು. ನಂತರ ಅದನ್ನು ಬೇರೆ ಬೇರೆ ಆಕಾರದ 6–7 ತುಂಡುಗಳಾಗಿ ಕತ್ತರಿಸುವುದು[ ಟ್ಯಾನ್ ಗ್ರಾಂ ಮಾದರಿಯಲ್ಲಿ]. ಕತ್ತರಿಸಿದ ತುಂಡುಗಳನ್ನು ಮತ್ತೆ ಮೊದಲಿನ ನಕ್ಷಾ ಚಿತ್ರ ಬರುವಂತೆ ಜೋಡಿಸಲು ಹೇಳುವುದು<br>ವಿವರ; 2ಮತ್ತು 3 ನೇ ತರಗತಿಗೆ ಟ್ಯಾನ್ ಗ್ರಾಂ ಮಾದರಿಯಲ್ಲಿ ತಾಲ್ಲೂಕು, ಜಿಲ್ಲೆ, ರಾಜ್ಯದ ನಕ್ಷಾ ಚಿತ್ರಗಳನ್ನು ಜೋಡಿಸಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ: ಪದ ಗುರುತಿಸುವಿಕೆ, ಪದ ಸಂಪತ್ತಿನ ಅಭಿವೃದ್ಧಿ, ಮುದ್ರಣದ ಅರಿವು ಹಾಗೂ ಅರ್ಥೈಸುವಿಕೆ.<br>ಚಟುವಟಿಕೆ....11 A ನಾಮ ಫಲಕ (ಗುರಿ–20) ECL-17<br>ಉದ್ದೇಶ :<br>* ಚಿತ್ರದ ಸಹಾಯದಿಂದ ಪದ ಗುರುತಿಸುವುದು,<br>* ಮುದ್ರಿತ ಪದಗಳನ್ನು ಗಟ್ಟಿಯಾಗಿ ಉಚ್ಚರಿಸುವುದು.<br>ಅಗತ್ಯ ಸಾಮಗ್ರಿಗಳು : ಕಥಾ ಕಾರ್ಡಗಳು, ಸುಳಿವು ಚಿತ್ರಗಳು, (ಕಥೆಯಲ್ಲಿ ಬರುವ ಸನ್ನಿವೇಶ/ಘಟನಾವಳಿ ಚಿತ್ರಗಳು.)<br>ವಿಧಾನಪ್ರತಿ ಮಗುವಿನ ಹೆಸರಿನ ಮುಂದೆ ಒಂದು ಚಿತ್ರವನ್ನು ಅಂಟಿಸುವುದು. ತನ್ನ ಹೆಸರನ್ನು ಓದಲು ಸಾಧ್ಯವಾಗದ ಮಗು ಚಿತ್ರದ ಮೂಲಕ ತನ್ನನ್ನು ಗುರುತಿಸಿಕೊಳ್ಳುವುದು.<br>ಉದಾ: ರಮೇಶ ಎಂಬ ಮಗುವಿನ ಹೆಸರಿನ ಮುಂದೆ ಮರದ ಚಿತ್ರವನ್ನು ಅಂಟಿಸುವುದು. ರಮೇಶ ಎಂದು ಓದಲು ಸಾಧ್ಯವಾಗ ಇದ್ದಾಗ ಚಿತ್ರದ ಮೂಲಕ ತನ್ನನ್ನು ಗುರುತಿಸಿಕೊಳ್ಳುವುದು.<br>ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಮುದ್ರಿತ ಪತ್ಯವನ್ನು ಗಟ್ಟಿಯಾಗಿ ಉಚ್ಚರಿಸುವುದು. 3 ನೇ ತರಗತಿಯ ಮಕ್ಕಳು ಚಿತ್ರದ ಸಹಾಯವಿಲ್ಲದೇ ಪದಗಳನ್ನು ಗುರುತಿಸಿ ಅರ್ಥೈಸಿಕೊಳ್ಳುವುದು. |
| | | ಅರ್ಥಗ್ರಹಿಕೆಂ ಸೊಂದಿಗಿನ ಓದು | ಸಾಮರ್ಥ್ಯ: ಅವಧಾನ ಮತ್ತು ಆಲಿಸುವಿಕೆ, ಪದ ಸಂಪತ್ತಿನ ಅಭಿವೃದ್ಧಿ, ಅನುಕ್ರಮ ಆಲೋಚನೆ, ಸ್ಮರಣ ಶಕ್ತಿ ಬೆಳವಣಿಗೆ<br>ಚಟುವಟಿಕೆ....16 ಮುಂದೇನು..?(ಗುರಿ–2)<br>ಉದ್ದೇಶ : ಅನುಭವ ಮತ್ತು ಪೂರ್ವಜ್ಞಾನದ ಆಧಾರದ ಮೇಲೆ ಊಹಿಸುವುದು ಮತ್ತು ಸಹಸಂಬಂಧೀಕರಿಸುವುದು.<br>ಅಗತ್ಯ ಸಾಮಗ್ರಿಗಳು : ಕಥಾ ಕಾರ್ಡಗಳು, ಸುಳಿವು ಚಿತ್ರಗಳು, (ಕಥೆಯಲ್ಲಿ ಬರುವ ಸನ್ನಿವೇಶ/ಘಟನಾವಳಿ |

DRAFT 2022

| | | | |
|---|---|---|---|
| | | | ಚಿತ್ರಗಳು.)<br>ವಿಧಾನ : ಶಿಕ್ಷಕರು ತರಗತಿ ಪ್ರವೇಶ ಮಾಡಿದಾಗ ಮಕ್ಕಳ ಕುಶಲೋಪರಿ ವಿಚಾರಿಸುತ್ತಿರುವಾಗ, "ಮೊದಲು" "ನಂತರ" "ಆಮೇಲೆ", "ಅದಕ್ಕಿಂತ ಮೊದಲು" ಇತ್ಯಾದಿ ಪದಗಳನ್ನು ಬಳಸಿ ಅರ್ಥೈಸಬೇಕು.<br>ಉದಾಹರಣೆ : ತಿಂಡಿ ತಿನ್ನುವ ಮೊದಲು ಏನು ಮಾಡಿದೆ? ತಿಂದ ನಂತರ ಏನು ಮಾಡಿದೆ?....... ಹೀಗೆ ಸಂದರ್ಭೋಚಿತವಾಗಿ ಪದಗಳನ್ನು ಬಳಸಿ ಅರ್ಥೈಸಬೇಕು.<br>* ನಂತರ ಶಿಕ್ಷಕರು ಗಟ್ಟಿ ಧ್ವನಿಯಲ್ಲಿ ಧ್ವನಿಯ ಏರಿಳಿತದೊಂದಿಗೆ, ಮಕ್ಕಳಿಗೆ ಪರಿಚಿತವಿರುವ ಕಥೆಗಳನ್ನು ಹೇಳಬೇಕು.<br>* ಮಕ್ಕಳು ಕಥೆಯನ್ನು ಆಲಿಸಿದ ನಂತರ ಕಥೆಗೆ ಸಂಬಂಧಿಸಿದಂತೆ, ಮೊದಲು ಏನಾಗಿತ್ತು? ಅದಕ್ಕಿಂತ ಮೊದಲು ಏನಾಗಿತ್ತು? ಅದಾದ ನಂತರ ಏನಾಯಿತು? ಘಟನೆ ನಡೆಯದಿದ್ದರೆ ಏನಾಗಬಹುದಿತ್ತು? ಆಮೇಲೆ ಏನಾಯಿತು? ಹೀಗೆ .. ಸಂದರ್ಭೋಚಿತವಾಗಿ ಪದ/ವಾಕ್ಯಗಳನ್ನು ಬಳಸಿ ಅವಧಾನವನ್ನು ಕೇಂದ್ರಿಕರಿಸಿಕೊಂಡು ಆಲೋಚನೆ ಮಾಡುವ, ಸ್ಮರಣಶಕ್ತಿಯನ್ನು ವೃದ್ಧಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು.<br>ಉದಾಹರಣೆಗೆ : (ಕಥಾವಾಚನೆ) ಒಮ್ಮೆ ರಾಮಣ್ಣ ಎಂಬ ರೈತ ತನ್ನ ಗದ್ದೆಯಿಂದ ಭತ್ತದ ಮೂಟೆಗಳನ್ನು ತನ್ನ ಎತ್ತಿನ ಗಾಡಿಯಲ್ಲಿ ಮನೆಗೆ ತರುತ್ತಿದ್ದಾಗ ಜೋರಾಗಿ ಮಳೆ ಬಂದು ಗಾಡಿಯ ಚಕ್ರ ಕೆಸರಲ್ಲಿ ಸಿಕ್ಕಿ ಹಾಕಿಕೊಂಡಿತು. ಎಷ್ಟೆ ಶ್ರಮವಹಿಸಿದರು ಗಾಡಿ ಕೆಸರಿನಿಂದ ಆಚೆ ಬರಲಿಲ್ಲ. ನಂತರ ಅಕ್ಕಪಕ್ಕದಲ್ಲಿದ್ದ ಜನರ ಸಹಾಯದಿಂದ ಗಾಡಿಯಲ್ಲಿದ ಮೂಟೆಗಳನ್ನು ಇಳಿಸಿ. ಗಾಡಿಯನ್ನು ಎತ್ತುಗಳ ಹಾಗೂ ಜನರ ಸಹಾಯದಿಂದ ಕೆಸರಿನಿಂದ ಹೊರತಂದನು. ನಂತರ ಮೂಟೆಯನ್ನು ಗಾಡಿಯಲ್ಲಿ ತುಂಬಿಕೊಂಡು ಮನೆಯನ್ನು ತಲುಪಿದನು.<br>ಕೇಳಬಹುದಾದ ಪ್ರಶ್ನೆಗಳು<br>1. ರಾಮಣ್ಣ ಯಾರು?<br>2. ಅವನು ಏನು ಬೆಳೆದಿದ್ದ?<br>3. ಭತ್ತದ ಮೂಟೆಯನ್ನು ಮನೆಗೆ ತರುವಾಗ ಏನಾಯಿತು?<br>4. ಮಳೆ ಬಂದ ನಂತರ ಏನಾಯಿತು?<br>5. ಮಳೆ ಬಾರದಿದ್ದಲ್ಲಿ ಏನಾಗುತ್ತಿತ್ತು?<br>6. ಗದ್ದೆಯ ಅಕ್ಕಪಕ್ಕದಲ್ಲಿ ಜನರು ಇಲ್ಲದಿದ್ದರೆ ಏನಾಗುತಿತ್ತು?<br>2 ಮತ್ತು 3ನೇ ತರಗತಿ : ಮಕ್ಕಳ ವಯೋಮಾನಗಳಿಗೆ ಅನುಗುಣವಾಗಿ ಉತ್ತರಗಳಿಗೆ ಮರು ಪ್ರಶ್ನೆಗಳನ್ನು ಕೇಳುವ ಮೂಲಕ ಚಟುವಟಿಕೆ ಮುಂದುವರೆಸುವುದು.<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC-9 (ತರಗತಿ 1, 2, 3)** |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ವೀಕ್ಷಣೆ, ಕಲ್ಪನೆ, ಸೃಜನಶೀಲ ಚಿಂತನೆ, ಪರಿಸರ ಪ್ರಜ್ಞೆ<br>ಚಟುವಟಿಕೆ: 35 ಹವಾಮಾನ ನಕ್ಷೆ (ಗುರಿ–2) **ECW-16**<br>ಉದ್ದೇಶಗಳು:<br>• ಉದ್ದೇಶಿತ ಬರವಣಿಗೆಯನ್ನು ರೂಢಿಸುವುದು.<br>• ವೀಕ್ಷಣಾ ಕೌಶಲವನ್ನು ಬೆಳೆಸುವುದು.<br>• ಸೃಜನಶೀಲ ಚಿಂತನೆಯನ್ನು ಉತ್ತೇಜಿಸುವುದು.<br>• ಪರಿಸರ ಪ್ರಜ್ಞೆ ಮೂಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ/ ಹಾಳೆಗಳು, ಪೆನ್ಸಿಲ್<br>ವಿಧಾನ :<br>* ವಾರದ ದಿನಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>* ವಾರದ ದಿನಗಳ ಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>* ಹವಾಮಾನದ ಅಂಶಗಳಾದ ಮೋಡ, ಮಳೆ, ಬಿಸಿಲು, ಚಳಿ, ಬಿರುಗಾಳಿ ಇತ್ಯಾದಿ ಅಂಶಗಳನ್ನು ತರಗತಿಯ ಹವಾಮಾನ ನಕ್ಷೆಯ ಸಹಾಯದಿಂದ ಪರಿಚಯಿಸುವುದು. |

DRAFT 2022

| | | | |
|---|---|---|---|
| | | | *** ಗುಂಪು ಚಟುವಟಿಕೆಯ ಸಮಯದಲ್ಲಿ ಆ ದಿನದ ಹವಾಮಾನವನ್ನು ಗಮನಿಸಿ ಗುರುತಿಸಲು ತಿಳಿಸುವುದು. ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ದಿನದ ಹವಾಮಾನವನ್ನು ತಮ್ಮ ಪುಸ್ತಕದಲ್ಲಿ ದಾಖಲಿಸುವಂತೆಯೂ 3ನೇ ತರಗತಿಯ ಮಕ್ಕಳು ತರಗತಿ ಹವಾಮಾನ ನಕ್ಷೆಯಲ್ಲಿ ದಿನದ ಹವಾಮಾನವನ್ನು ದಾಖಲಿಸಲು ತಿಳಿಸುವುದು. (40 ನೇ ದಿನಕ್ಕೆ ಮುಂದುವರೆದಿದೆ)** |
| | | **ಬರವಣಿಗೆಯ ಮಾದರಿ:**<br>**ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.**<br>**ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.** | |
| | **ಹೊರಾಂಗಣ ಆಟಗಳು** | ಚಟುವಟಿಕೆ –28 ಸಣ್ಣ ಟೈರುಗಳು / ಬ್ಯಾರೆಲ್ಗಳನ್ನು ತಳ್ಳಿರಿ ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ<br>ಬೇಕಾಗುವ ಸಾಮಗ್ರಿ: ಟೈರುಗಳು / ಬ್ಯಾರೆಲ್ಗಳು<br>**ವಿಧಾನ:**<br>• ಶಿಕ್ಷಕರು ಪ್ರತಿ ಮಗುವಿಗೆ ಸಣ್ಣ ಟೈರ್ ಅಥವಾ ಸಣ್ಣ ಬ್ಯಾರೆಲ್ ಅನ್ನು ತಳ್ಳಲು ಸೂಚಿಸುವುದು.<br>• ಮಕ್ಕಳಿಗೆ ಟೈಯರ್ ಅಥ ಬ್ಯಾರೆಲ್ ಅನ್ನು ತಳ್ಳಬಹುದು ಅಥವಾ ಎಳೆಯಬಹುದು ಎಂದು ಸೂಚಿಸುವುದು.<br>**ಎರಡು ಮತ್ತೆ ಮೂರನೇ ತರಗತಿಯ ಮಕ್ಕಳಿಗೆ ಇದೇ ಆಟವನ್ನು ಆಡಿಸುವುದು .** | |
| | **ಕಥಾ ಸಮಯ** | **ಶೀರ್ಷಿಕೆ :** ಮೈ ರೀಡಿಂಗ್ ಪಾರ್ಟ್ನರ್<br>**ಸಾಮಗ್ರಿಗಳು :** ಸಾಹಿತ್ಯ, ಚಿತ್ರಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಪದ ಸಂಪತ್ತನ್ನು ಹೆಚ್ಚಿಸುವುದು.<br>➢ ಏಕಾಗ್ರತೆಯನ್ನು **ಹೆಚ್ಚಿಸುವುದು.**<br>**ವಿಧಾನ :**<br>**➢ ಸಾಹಿತ್ಯದಲ್ಲಿನ ಚಿತ್ರಗಳನ್ನು ಮಕ್ಕಳಿಗೆ ಪ್ರದರ್ಶಿಸಿ ಕಥೆಯ ಪಾತ್ರಗಳನ್ನು/ವಸ್ತುಗಳನ್ನು ಹೆಸರಿಸಲು ಸರಳ ಪ್ರಶ್ನೆಗಳನ್ನು ಕೇಳುತ್ತಾ ಕಥೆಯನ್ನು ಪುನಃ ಹೇಳುವುದು.**<br>**➢ ಕಥೆಯ ವಾಕ್ಯಗಳನ್ನು ಓದುವಾಗ ಕಥೆಯ ನಡುವೆ ಬರುವ ಮಂಗ, ಪುಸ್ತಕ ಇತ್ಯಾದಿ ಚಿತ್ರಗಳನ್ನು ಮಕ್ಕಳು ಹೆಸರಿಸುವಂತೆ ಪ್ರಶ್ನೆಗಳನ್ನು ಕೇಳುತ್ತಾ ಕಥೆಯನ್ನು ನಿರೂಪಿಸುವುದು.**<br>(ಕಥೆಯನ್ನು ಆನಂದಿಸುವುದರ ಜೊತೆಗೆ ಆಲಿಸುತ್ತಿದ್ದಾರೆ ಎನ್ನುವುದನ್ನು ಖಚಿತಪಡಿಸಿ ಕೊಳ್ಳುವುದು) | |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. | |

DRAFT 22.02.22

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–6** **ದಿನ–34 (ಗುರುವಾರ)**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 34 | ಶುಭಾಶಯ ವಿನಿಮಯ<br>*(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1**<br>ದಿನ–33 ಸೂಚನೆಗಳನ್ನು ಅನುಸರಿಸಿ. ಮತ್ತು ಹವಾಮಾನ ಚಟುವಟಿಕೆಯ ಬಗ್ಗೆ ಮಕ್ಕಳನ್ನು ಕೇಳಿ ಮತ್ತು ಅದನ್ನು ಹವಾಮಾನ ಕಾರ್ಡ್ ನಲ್ಲಿ ಗುರುತಿಸಲು ಅವರಿಗೆ ಸೂಚನೆ ಮಾಡಿ. |
| | ಮಾತು ಕತೆ<br>*( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ ಅಭಿನಯದೊಂದಿಗೆ ರೈಮ್ ಹೇಳಿಕೊಡಿ.<br>This is the way I clap my hands,<br>clap my hands,<br>clap my hands,<br>Clap, clap, clap.<br>This is the way I tap my feet,<br>Tap my feet,<br>Tap my feet<br>Tap, tap, tap.<br>This is the way I shake my head,<br>Shake my head,<br>Shake my head.<br>Shake, shake, shake. |
| | ನನ್ನ ಸಮಯ(**Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಆರೋಗ್ಯಕರ ಅಭ್ಯಾಸಗಳ ಅಭಿವೃದ್ಧಿ, ನೈರ್ಮಲ್ಯ ಮತ್ತು ಸ್ವಯಂ ರಕ್ಷಣೆಯ ಅರಿವು, ಸಮಾಜಮುಖಿ ಗುಣಗಳಾದ ಕಾಳಜಿ ಮಾಡುವುದು, ಹಂಚಿಕೊಳ್ಳುವುದು, ಸಹಯೋಗ, ಸಹಾನುಭೂತಿ ಬೆಳೆಸಿಕೊಳ್ಳುವುದು.**<br>**ಚಟುವಟಿಕೆ...12 ಎ ಕೈ ತೊಳೆಯುವ ಹಂತಗಳ ಚಿತ್ರಗಳು (ಗುರಿ 1)**<br>**ಉದ್ದೇಶ:– ಆರೋಗ್ಯಕರ ಅಭ್ಯಾಸ ಬೆಳೆಸಿಕೊಳ್ಳುವುದು.**<br>**ಅಗತ್ಯ ಸಾಮಗ್ರಿಗಳು : ಕೈ ತೊಳೆಯುವ ಹಂತಗಳ ಚಿತ್ರಗಳು**<br>**ವಿಧಾನ : ಕೈ ತೊಳೆಯುವ ಹಂತಗಳ ಚಿತ್ರಗಳನ್ನು ಸಿದ್ಧಪಡಿಸುವುದು. ಮಕ್ಕಳಿಗೆ ಈ ಚಿತ್ರಗಳನ್ನು ನೀಡಿ ಹಂತಗಳನ್ನು ಕ್ರಮವಾಗಿ ಜೋಡಿಸುವುದು. ಕೈ ತೊಳೆಯುವ ಮಹತ್ವದ ಬಗ್ಗೆ ಮಕ್ಕಳು ಮಾತನಾಡುವುದು.**<br>**ತರಗತಿ–2**<br>*** ಕೈತೊಳೆಯುವ ಹಂತಗಳನ್ನು ಕ್ರಮವಾಗಿ ಹೇಳಲು ತಿಳಿಸುವುದು.**<br>**ತರಗತಿ–3**<br>**ಈ ರೀತಿಯ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.**<br>*** ಕೈ ತೊಳೆಯಲು ಬಳಸುವ ವಸ್ತುಗಳು ಯಾವುವು?**<br>*** ಕೈ ತೊಳೆಯದೇ ಇದ್ದರೆ ಆಗುವ ತೊಂದರೆ ಏನು?** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ; ತನ್ನನ್ನು ತಾನು ಅರಿತುಕೊಳ್ಳುವುದು,ಮತ್ತು ಇತರರ ಬಗ್ಗೆ ಅರಿವು ಮೂಡಿಸಿಕೊಳ್ಳುವುದು , ಭಾಷಾ ವಿಕಾಸ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ; 2 ಹಾಡು |

| | | | |
|---|---|---|---|
| | | | **ಉದ್ದೇಶ;**<br>• ಶಾರೀರಿಕ ಬೆಳವಣಿಗೆಯ ವಿಕಾಸ ಹೊಂದುತ್ತಾರೆ.<br>• ಪದಸಂಪತ್ತು ಹೆಚ್ಚುವುದರೊಂದಿಗೆ ಪ್ರಾಸ, ಲಯ, ಸಂದರ್ಭ ಹಾಗೂ ಸ್ಪಷ್ಟ ಉಚ್ಚಾರಣೆ ಮಾಡುತ್ತಾರೆ.<br>• ಆಂಗಿಕ ಭಾವನೆಗಳನ್ನು ಗುರ್ತಿಸುತ್ತಾರೆ.<br>ಸಾಮಗ್ರಿ; ಶಿಶು ಗೀತೆಗಳು ಮತ್ತು ಚಿಕ್ಕ ಚಿಕ್ಕ ನಾಟಕಗಳ ಸಂಗ್ರಹ.<br>ವಿಧಾನ; ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು.ಸುಗಮಕಾರರು ತಾಳ ಬದ್ಧ ಚಟುವಟಿಕೆಗಳನ್ನು ನಡೆಸಲು ಮಕ್ಕಳಿಗೆ ಅವಕಾಶ ಕಲ್ಪಿಸುವುದು. ಅಭಿನಯ ಗೀತೆಗಳು / ಹಾಡುಗಳಿಗೆ ಪರಿಕರಗಳನ್ನು ಉಪಯೋಗಿಸಿ ಅಥವಾ ಆಂಗಿಕ ಚಲನವಲನಗಳಿಂದ ಹಾಡಿಸುವುದು. ಉದಾ. ದೇಹದ ಅಂಗಾಂಗಗಳನ್ನು ಪರಿಚಯಿಸಲು ತಲೆ , ಭುಜ, ಮಂಡಿ ಮತ್ತು ಬೆರಳುಗಳನ್ನು ತೋರಿಸುತ್ತಾ ಅಭಿನಯ ಗೀತೆ /ಹಾಡುಗಳನ್ನು ಹಾಡಿಸುವುದು.<br>ವಿವರ; 2ಮತ್ತು 3 ನೇ ತರಗತಿ ಮಕ್ಕಳಿಗೆ ಹಾಡಿಗೆ ಸಂಭಂದಿಸಿದ ಪ್ರಶ್ನೆಗಳನ್ನು ಕೇಳಿ ಉತ್ತರಪಡೆಯುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಅಕ್ಷರ ಮತ್ತು ಧ್ವನಿಗಳ ಸಹಸಂಬಂಧ**<br>**ಚಟುವಟಿಕೆ: 20 ಬಿ ಅಂತ್ಯಾಕ್ಷರಿ (ಗುರಿ–2) ECL-18**<br>**ಉದ್ದೇಶ :**<br>*** ಅಂತ್ಯಾಕ್ಷರಗಳ ಮೂಲಕ ಅಕ್ಷರಗಳ ಸ್ಪಷ್ಟವಾದ ಧ್ವನಿಯನ್ನು ಗುರುತಿಸುವುದು.**<br>*** ಅಕ್ಷರಗಳಿಗೂ ಧ್ವನಿಗೂ ಇರುವ ಸಹ ಸಂಬಂಧವನ್ನು ಗುರುತಿಸುವುದು.**<br>**ಬೇಕಾಗುವ ಸಾಮಗ್ರಿಗಳು: ಇಲ್ಲ**<br>**ವಿಧಾನ: ಮಕ್ಕಳು ತಮಗೆ ಗೊತ್ತಿರುವ ಶಬ್ಧಗಳ ಅನುಗುಣವಾಗಿ ಅಂತ್ಯಾಕ್ಷರಿ ಆಟವನ್ನು ಆಡುವುದು. ಉದಾ: ಕಮಲ ಎಂಬ ಶಬ್ಧ ಬಂದಾಗ ಕೊನೆಯ ಅಕ್ಷರವಾದ ಲ ದಿಂದ ಪ್ರಾರಂಭವಾಗುವ ಶಬ್ಧವನ್ನು ಹೇಳುವುದು.**<br>**ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ತಾವು ಹೇಳಿದ ಪದವನ್ನು ಬಳಸಿ ವಾಕ್ಯ ಮಾಡುವುದು. ೩ ನೇ ತರಗತಿಯ ಮಕ್ಕಳು ತಾವು ಹೇಳಿದ ಪದಕ್ಕೆ ಸಮಾನಾರ್ಥಕ ಪದಗಳನ್ನು ನೀಡುವುದು.** |
| | | **ಅರ್ಥಗ್ರಹಿಕೆಯೊಂದಿಗಿನ ಓದು** | **ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಅವಧಾನ ಮತ್ತು ಆಲಿಸುವಿಕೆ, ಪದ ಸಂಪತ್ತಿನ ಅಭಿವೃದ್ಧಿ.**<br>**ಚಟುವಟಿಕೆ 21 ಪದ ಹುಡುಕು (ಗುರಿ–2)**<br>**ಉದ್ದೇಶ : ಕಥೆಗಳಲ್ಲಿಯ ಪದಗಳನ್ನು ಅದರಲ್ಲಿಯ ಧ್ವನಿಗಳನ್ನು ಗುರುತಿಸುವರು.**<br>**ಅಗತ್ಯ ಸಾಮಗ್ರಿಗಳು: ಮಿಂಚು ಪಟ್ಟಿ, ಕಪ್ಪು ಹಲಗೆ.**<br>**ವಿಧಾನ: ದಿನ 21ರಲ್ಲಿ ಹೇಳಿದ ಕಥೆ ಪುನರಾವರ್ತನೆ ಮಾಡುವುದು.**<br>**ಹೀಗಾಗಲೇ ಪರಿಚಿತವಾಗಿರುವ ಕಥೆಯನ್ನು ಹೇಳುವುದು. ಅದರಲ್ಲಿ ಬರುವ ಪ್ರಮುಖ ಪದಗಳನ್ನು ಕಪ್ಪು ಹಲಗೆಯ ಮೇಲೆ / ಮಿಂಚು ಪಟ್ಟಿಯ ಮೇಲೆ ಬರೆದು, ಪ್ರದರ್ಶಿಸಿ ಒಂದು ವಾರದವರೆಗೆ ಮಗು ಅವುಗಳನ್ನು ನೋಡಲು ಅವಕಾಶ ಕಲ್ಪಿಸುವುದು. ಆ ಕಥೆ ಹೇಳುವಾಗ ಅಥವಾ ಬೇರೆ ಕಥೆ ಹೇಳುವಾಗ ಆ ಪದಗಳು ಬಂದಾಗಲೆಲ್ಲಾ ಪದ/ ಧ್ವನಿಗಳನ್ನು ಗುರುತಿಸಿ ತೋರಿಸುವುದು.**<br>**1 ಮತ್ತು 3ನೇ ತರಗತಿ :ಶಿಕ್ಷಕರು ಮಕ್ಕಳಿಗೆ ಕಪ್ಪು ಹಲಗೆ ಮೇಲೆ ಬರೆದಿರುವ ಪದಗಳನ್ನು ಕಥೆ ಪುಸ್ತಕ/ಕಾರ್ಡ್ ನಲ್ಲಿ ಗುರುತಿಸಲು ತಿಳಿಸುವುದು.** |
| | | **ಉದ್ದೇಶಿತ ಬರಹ** | **ಸಾಮರ್ಥ್ಯ: ಕೈಕಣ್ಣು ಸಂಯೋಜನೆ, ಬರವಣಿಗೆ ಕೌಶಲಗಳ ಅಭ್ಯಾಸ, ಸೃಜನಶೀಲ ಅಭಿವ್ಯಕ್ತಿ.**<br>**ಚಟುವಟಿಕೆ....2 ಮುಕ್ತ ಚಿತ್ರ ರಚನೆ (ಗುರಿ–2) ECW-6**<br>**ಉದ್ದೇಶಗಳು:**<br>• **ಬರವಣಿಗೆಯ ಕೌಶಲಗಳನ್ನು ರೂಢಿಸುವುದು.**<br>• **ಕಣ್ಣು–ಕೈಗಳ ಸಮನ್ವಯ ಕೌಶಲವನ್ನು ಅಭಿವೃದ್ಧಿಪಡಿಸುವುದು.**<br>• **ಕ್ರಿಯಾತ್ಮಕ ಅಭಿವ್ಯಕ್ತಿಗೆ ಅವಕಾಶ ನೀಡುವುದು.**<br>• **ಸೃಜನಶೀಲ ಅಭಿವ್ಯಕ್ತಿಯನ್ನು ಪ್ರೋತ್ಸಾಹಿಸುವುದು.**<br>**ಅಗತ್ಯ ಸಾಮಗ್ರಿಗಳು: ಕ್ರೇಯಾನ್ಸ್, ಬಣ್ಣದ ಪೆನ್ಸಿಲ್‌ಗಳು, ಮಾರ್ಕರ್, ಬಿಳಿಯ ಹಾಳೆಗಳು** |

DRAFT 22.02.22

| | | | |
|---|---|---|---|
| | | | **ವಿಧಾನ: ಕಾಗದದಲ್ಲಿ ಮುಕ್ತವಾಗಿ ಚಿತ್ರಿಸಲು/ ಬರೆಯಲು, ಅನಿಸಿದ್ದನ್ನು ಬಿಡಿಸಿ ಬಣ್ಣ ಹಾಕಲು ಅವಕಾಶ ಕಲ್ಪಿಸುವುದು. ಅವರ ಬರವಣಿಗೆ ಬಗ್ಗೆ ಮಾತನಾಡಲು ತಿಳಿಸುವುದು. ಸೂಕ್ತವಾದ ಪ್ರಶ್ನೆಗಳನ್ನು ಕೇಳುತ್ತಾ ಬರವಣಿಗೆ ಬಗ್ಗೆ ಮಾಹಿತಿ ಪಡೆಯುವುದು.**<br>**ತರಗತಿವಾರು ವಿವರ: 2 ಹಾಗೂ 3 ನೇ ತರಗತಿಯ ಮಕ್ಕಳು ತಮ್ಮ ಇಷ್ಟದ ಚಿತ್ರ/ ಸನ್ನಿವೇಶವನ್ನು ಚಿತ್ರಿಸಿ, ಅವುಗಳ ಬಗ್ಗೆ 4–5 ವಾಕ್ಯಗಳನ್ನು ಬರೆಯಲು ತಿಳಿಸಿ.** |
| | | **ಬರವಣಿಗೆಯ ಮಾದರಿ:**<br>**ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.**<br>**ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.** | |
| | **ಹೊರಾಂಗಣ ಆಟಗಳು** | ಚಟುವಟಿಕೆ –29 ರೋಲಿಂಗ್(ಉರುಳಿಸು) ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ<br>ಬೇಕಾಗುವ ಸಾಮಗ್ರಿ: ಫುಟ್ಬಾಲ್<br>ವಿಧಾನ:<br>• ನೆಲದಮೇಲೆ ಸಣ್ಣದಾದ ವೃತ್ತವನ್ನು ಬಿಡಿಸುವುದು .<br>• ಮಕ್ಕಳು ಫುಟ್ಬಾಲ್ ಅನ್ನು ಈ ವೃತದ ಮೇಲೆ ಉರುಳಿಸಬೇಕು ಎಂದು ಸೂಚಿಸುವುದು .<br>• **ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೂ ಇದೇ ಆಟವನ್ನು ಮುಂದುವರೆಸುವುದು.** | |
| | **ಕಥಾ ಸಮಯ** | **ಶೀರ್ಷಿಕೆ :** ಮೈ ರೀಡಿಂಗ್ ಪಾರ್ಟ್ನರ್<br>**ಸಾಮಗ್ರಿಗಳು :** ಪಪೆಟ್, ಸ್ಕ್ರೀನ್<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಪದಸಂಪತ್ತನ್ನು ಹೆಚ್ಚಿಸುವುದು.<br>➢ **ಸಂಭಾಷಣೆಯ ಕೌಶಲ ರೂಢಿಸುವುದು.**<br>**ವಿಧಾನ :**<br>➢ ಕಥೆಯನ್ನು ಕನ್ನಡ ಮತ್ತು ಇಂಗ್ಲೀಷ ಭಾಷೆಯಲ್ಲಿ ಹೇಳುವುದು.<br>➢ ಸಿದ್ಧಪಡಿಸಿದ ಪಪೆಟ್ ಮತ್ತು ಸ್ಕ್ರೀನನ್ನು ಬಳಸಿ, ಹಿರಿಯ ವಿದ್ಯಾರ್ಥಿಗಳಿಗೆ ಪಾತ್ರಗಳನ್ನು ಹಂಚಿ ಸಂಭಾಷಣೆಯನ್ನು ಶಿಕ್ಷಕರು ಹೇಳಿಕೊಟ್ಟಂತೆ ಕನ್ನಡ ಮತ್ತು ಇಂಗ್ಲೀಷ ಭಾಷೆಯಲ್ಲಿ ಪುನರುಚ್ಚರಿಸಲು ಸಹಕರಿಸಿ.<br>➢ ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು.<br>**ಕಥೆಯನ್ನು ಹೇಳಿದ ನಂತರ ಪ್ರಶ್ನೆಗಳನ್ನು ಕೇಳಿ.**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) | |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. | |

DRAFT 22.02.22

# ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–6** **ದಿನ–35 (ಶುಕ್ರವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 35 | ಶುಭಾಶಯ ವಿನಿಮಯ<br>*(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1:** My choice<br>ಅಗತ್ಯವಿರುವ ಸಾಮಗ್ರಿಗಳು: ಚಾರ್ಟ್<br>ವಿಧಾನ: ಮಕ್ಕಳು ತರಗತಿಯನ್ನು ಪ್ರವೇಶಿಸುವಾಗ ಚಾರ್ಟ್ ನಲ್ಲಿ ನೀಡಿರುವ ಯಾವುದಾದರೊಂದು ಸಂಕೇತವನ್ನು ಆಯ್ಕೆ ಮಾಡುವಂತೆ ಹೇಳಿ.<br><br><br>• ಮಗುವಿನ ಆಯ್ಕೆಯ ಅನುಸಾರ ಶಿಕ್ಷಕರು ಮಗುವನ್ನು ಸ್ವಾಗತಿಸ ಬೇಕು. ಉದಾ: ಮಗುವು ಹೈ ಫೈ ಆಯ್ಕೆ ಮಾಡಿದರೆ ಶಿಕ್ಷಕರು ಮಗುವಿಗೆ ಹೈ ಫೈ ನೀಡುವುದು.<br>• "ಇಂದು ಯಾವ ದಿನ?" ಎಂದು ಮಕ್ಕಳನ್ನು ಕೇಳಿ ಮತ್ತು "ಇಂದು __<br>• ಹವಾಮಾನ ನಕ್ಷೆ ಮಾಡಿಸಿ. |
| | ಮಾತು ಕತೆ<br>*( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ ಅಭಿನಯದೊಂದಿಗೆ ರೈಮ್ ಹೇಳಿಕೊಡಿ.<br>ಶಿಕ್ಷಕರು ಮೊದಲ ಸಾಲನ್ನು ಹೇಳಿದರೆ ಮಕ್ಕಳು ಎರಡನೇ ಸಾಲನ್ನು ಹಾಡುವುದು.<br>ಹೀಗೆಯೇ ಮುಂದುವರೆಸುವುದು.<br>Teacher :This is the way I clap my hands,<br>Students :clap my hands,<br>Teacher : clap my hands,<br>Students : Clap, clap, clap.<br>Teacher :This is the way I tap my feet,<br>Students : Tap my feet,<br>Teacher: Tap my feet<br>Students :Tap, tap, tap.<br>Teacher :This is the way I shake my head,<br>Students :Shake my head,<br>Teacher :Shake my head.<br>Students :Shake, shake, shake. |
| | ನನ್ನ ಸಮಯ(**Free Indore play)**<br>('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು) | ಮಕ್ಕಳು ತಾವು ನಿರ್ವಹಿಸಲಿಚ್ಛಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ | **ಸಾಮರ್ಥ್ಯ : ಹೋಲಿಕೆ, ಹೊಂದಾಣಿಕೆ, ವಿಂಗಡಣೆ, ಗಾತ್ರ/ಪ್ರಮಾಣದ ಪರಿಕಲ್ಪನೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ...18 ಹೋಲಿಕೆ ಮಾಡೋಣ (ಗುರಿ 3)**<br>**ಉದ್ದೇಶ:– ವಸ್ತುಗಳ ಗಾತ್ರ ಮತ್ತು ಪ್ರಮಾಣವನ್ನು ಆಧರಿಸಿ ಹೋಲಿಸಿ ವಿಂಗಡಿಸುವುದು.**<br>**ಅಗತ್ಯ ಸಾಮಗ್ರಿಗಳು : ಪೆನ್ಸಿಲ್‌ಗಳು, ಮಾಪಕಗಳು, ಹಣ್ಣುಗಳು (ಸೇಬು,ಕಿತ್ತಳೆ), ತರಕಾರಿಗಳು(ಆಲೂಗಡ್ಡೆ/ಈರುಳ್ಳಿ), ಪಾತ್ರೆಗಳು(ಚಮಚ,ಬಟ್ಟಲುಗಳು,ತಟ್ಟೆಗಳು), ವಿಭಿನ್ನ ಗಾತ್ರದ ಇತರೆ ವಸ್ತುಗಳು.** |

| | | | |
|---|---|---|---|
| | (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | | ವಿಧಾನ : ಸರಳವಾದ ಹೋಲಿಕೆ ಕಾರ್ಯವನ್ನು ಮೊದಲು ಸ್ಟ್ರಾಗಳು, ಪೆನ್ಸಿಲ್‌ಗಳು, ಹಣ್ಣುಗಳು, ತರಕಾರಿಗಳು ಮತ್ತು ಲಭ್ಯವಿರುವ ಇತರೆ ವಸ್ತುಗಳನ್ನು ಬಳಸಿ ಮಾಡುವುದು.<br>* ಗಾತ್ರ ಮತ್ತು ಪ್ರಮಾಣವನ್ನು ಆಧರಿಸಿ ಹೋಲಿಕೆ ಮಾಡುವುದು. ಗಾತ್ರದ ಆಧರಿಸಿ ವಸ್ತುಗಳ ಗುಂಪಿನಿಂದ ಅತಿ ದೊಡ್ಡ ವಸ್ತು, ಮಕ್ಕಳ ಗುಂಪಿನಿಂದ ಅತಿ ಎತ್ತರವಾದ ಹುಡುಗ, ಅತಿ ಉದ್ದವಾದ ಕೋಲು/ಚಾಕಪೀಸ್ ಆರಿಸಲು ಹೇಳುವುದು.<br>* ಹೋಲಿಕೆಯು ಒಂದೇ ವಿಧದ ವಸ್ತುಗಳೊಂದಿಗೆ ಆಗಬೇಕು. ಹೋಲಿಸುವ ಚಟುವಟಿಕೆಯನ್ನು ಮಿಶ್ರ ಗುಂಪಿನಲ್ಲಿ ನಡೆಸಬಾರದು. ಉದಾ: ಆಯತಾಕಾರದ ವಸ್ತುವನ್ನು ವೃತ್ತಾಕಾರದ ವಸ್ತುವಿನೊಂದಿಗೆ ಅಥವಾ ಚೆಂಡನ್ನು ಸೇಬು ಹಣ್ಣಿನೊಂದಿಗೆ ಹೋಲಿಸಬಾರದು.<br>* ಅದೇ ರೀತಿ ಪ್ರಮಾಣವನ್ನು ಹೋಲಿಸುವಾಗ ಒಂದೇ ರೀತಿಯ ವಸ್ತುಗಳಿರುವ ಯಾವ ಗುಂಪಿನಲ್ಲಿ ವಸ್ತುಗಳು ಹೆಚ್ಚು ಇವೆ ಎಂದು ಹೋಲಿಸಿ ಹೇಳುವುದು.<br>ತರಗತಿ–2<br>1. ಕುಂಬಳಕಾಯಿ ಮತ್ತು ಆಲುಗಡ್ಡೆ ಇವುಗಳಲ್ಲಿ ಭಾರ ಮತ್ತು ಹಗುರದ ವ್ಯತ್ಯಾಸವನ್ನು ಗುರುತಿಸಲು ತಿಳಿಸುವುದು.<br>2. ಮೂಲಂಗಿ ಮತ್ತು ನುಗ್ಗೆಕಾಯಿ ಇವುಗಳಲ್ಲಿ ಎತ್ತರ ಮತ್ತು ಗಿಡ್ಡ ಹೋಲಿಕೆಯನ್ನು ಗುರುತಿಸಲು ಹೇಳುವುದು.<br>ತರಗತಿ–3<br>ದಪ್ಪ–ಸಣ್ಣ, ಉದ್ದ–ಗಿಡ್ಡ, ಭಾರ–ಹಗುರ ಇವುಗಳಿಗೆ ಉದಾಹರಣೆಯನ್ನು ಹೇಳಿ ಬರೆಯಲು ಹೇಳುವುದು. |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ; ಸೂಕ್ಷ್ಮ ಸ್ನಾಯುಗಳ ಕೌಶಲ ವಿಕಾಸ, ಕಣ್ಣು ಕೈಗಳ ನಡುವೆ ಸಮನ್ವಯ, ಸೃಜನ ಶೀಲತೆಯ ವಿಕಾಸ<br>ಚಟುವಟಿಕೆ;41. ರಂಗೋಲಿ ಬಿಡಿಸುವುದು.<br>ಉದ್ದೇಶ;<br>• ಸೂಕ್ಮ ಸ್ನಾಯುಗಳ ಬೆಳವಣಿಗೆಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯತೆ ಬರುತ್ತದೆ.<br>• ಸೌಂದರ್ಯೋಪಾಸನೆ ವಿಕಾಸವಾಗುತ್ತದೆ.<br>• ಮೇಲ್ಮೈ [ ಒರಟು, ಮೆದು] ರಚನೆಯೊಂದಿಗೆ ಕಾರ್ಯ ನಿರ್ವಹಿಸುತ್ತಾರೆ.<br>• ವಿವಿಧ ವಸ್ತುಗಳ ಉಪಯೋಗದ ಜೊತೆಗೆ ಬಳಕೆಯ ವಿಧಾನವನ್ನು ಅರಿಯುತ್ತಾರೆ.<br><br>ಸಾಮಗ್ರಿಗಳು; ರಂಗೋಲಿ, ಅಂಟು, ಪೇಪರ್ , ಪೆನ್ಸಿಲ್ ಮತ್ತು ಬ್ರಶ್.<br>ವಿಧಾನ; ಸರಳ ರೇಖಾ ಚಿತ್ರಗಳನ್ನು ಅಥವಾ ಮಕ್ಕಳೇ ಚಿತ್ರಗಳನ್ನು ಬರೆಯಬಹುದು.ಅದನ್ನು ಮಕ್ಕಳಿಗೆ ಒದಗಿಸುವುದು.ಒಂದು ಚಿಕ್ಕ ಲೋಟದಲ್ಲಿ ಅಂಟನ್ನು ಇನ್ನೊಂದರಲ್ಲಿ ಬಣ್ಣದ ರಂಗೋಲಿ ಪುಡಿಯನ್ನು ಕೊಡುವುದು.ಮಕ್ಕಳು ಬ್ರಶ್‌ನಿಂದ ಚಿತ್ರದ ಮೇಲೆ ಅಂಟನ್ನು ಸವರಬೇಕು.ನಂತರ ಬೆರಳುಗಳಲ್ಲಿ ರಂಗೋಲಿ ಪುಡಿ ತೆಗೆದುಕೊಂಡು ಅದರ ಮೇಲೆ ಉದುರಿಸುವುದು.ನಂತರ ರಂಗೋಲಿ ಪುಡಿಯನ್ನು ಉದುರಿಸಲು ಪೇಪರನ್ನಾಗಲಿ ತಟ್ಟೆಯನ್ನಾಗಲಿ ಕೊಡಬೇಕು. ಹಾಗೆ ಉದುರಿಸಿದ ಮೇಲೆ ಮಕ್ಕಳಿಗೆ ಪೇಪರಿನಲ್ಲಿ ಮೂಡಿದ ಚಿತ್ರವನ್ನು ನೋಡಿ ಸಂತೋಷವುಂಟಾಗುತ್ತದೆ. ಮಕ್ಕಳಿಗೆ ಇಷ್ಟವಾಗುವಂತಹ ಪರಿಚಿತ ಚಿತ್ರಗಳನ್ನು ಕೊಡಬೇಕು. ಅಥವಾ ಮಕ್ಕಳೇ ಹೂವು , ಮನೆ ಮುಂತಾದ ಚಿತ್ರಗಳನ್ನು ಬರೆಯಲಿ.<br>ವಿವರ; 2ಮತ್ತು 3 ನೇ ತರಗತಿ ಮಕ್ಕಳಿಗೆ ರಂಗೋಲಿಯಿಂದ ವಿವಿಧ ಸರಳ ರೇಖಾ ಚಿತ್ರಗಳನ್ನು ಬಿಡಿಸಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ–ಪದ ಸಂಯೋಜನೆ<br>ಚಟುವಟಿಕೆ 10 ಪದರಚನೆ (ಗುಂಪು–2) ECL-10<br>ಉದ್ದೇಶ:<br>* ಪದ ರಚನಾ ಸಾಮರ್ಥ್ಯವನ್ನು ಹೆಚ್ಚಿಸುವುದು.<br>* ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದು.<br>ಸಾಮಗ್ರಿ–ಇಲ್ಲ<br>ಸಾಧನ–ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ ಸ್ಪಷ್ಟವಾದ ಸೂಚನೆಗಳನ್ನು ನೀಡಿ ಚಟುವಟಿಕೆಯನ್ನು ಆರಂಭಿಸಿ.<br>* ನಾನು ಹೇಳುವ ಅಕ್ಷರಗಳನ್ನು ಆಲಿಸಿ. |

DRAFT 22.02.22

| | | | |
|---|---|---|---|
| | | | * ಅಕ್ಷರಗಳನ್ನು ಸೇರಿಸಿ ಪದ ರಚಿಸಿ ಹೇಳಿ.<br>ಉದಾಹರಣೆ–ಶಿಕ್ಷಕರು ಜೋರಾಗಿ ಸ(ವಿರಾಮ) ರ ಎಂದು ಉಚ್ಚರಿಸಿದಾಗ ಮಕ್ಕಳು ಅಕ್ಷರಗಳನ್ನು ಆಲಿಸಿ ಸರ ಎಂದು ಪದ ರಚಿಸಿ ಹೇಳಲಿ.<br>ಈ ಚಟುವಟಿಕೆಯಲ್ಲಿ ಶಿಕ್ಷಕರು ಹಂತ ಹಂತವಾಗಿ ಮೂರಕ್ಷರ ಹಾಗೂ ನಾಲ್ಕಕ್ಷರದ ಪದಗಳನ್ನು ಬಳಸಬಹುದಾಗಿದೆ.<br>ತರಗತಿಯ ವಿವರ : 2 ನೇ ತರಗತಿಯ ಮಕ್ಕಳು ಒಂದು ಅಕ್ಷರಕ್ಕೆ ಸಂಬಂಧಿಸಿದಂತೆ 2–3 ಪದಗಳನ್ನು ಹೇಳುವುದು. 3 ನೇ ತರಗತಿಯ ಮಕ್ಕಳು ಎರಡನೇ ತರಗತಿಯ ಮಕ್ಕಳು ಹೇಳಿದ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸುವುದು. |
| | | ಅರ್ಥ ಗ್ರಹಿಕೆ ಯೊಂದಿಗಿನ ಓದು | ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>ಚಟುವಟಿಕೆ....18<br>3. ಚಿತ್ರ ಸಂಪುಟ (ಗುರಿ–2) ವಿಷಯ:'ಪ್ರಾಣಿ ಸಂಗ್ರಹಾಲಯದಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳು'<br>ಉದ್ದೇಶ:<br>• ಚಿತ್ರ ಓದುವುದು ಮತ್ತು ಚರ್ಚಿಸಿ ಅರ್ಥಮಾಡಿಕೊಳ್ಳುವುದು.<br>• ಸಂತೋಷ ಮನೋರಂಜನೆ ಹಾಗೂ ಇತರೆ ಉದ್ದೇಶಗಳಿಗಾಗಿ ಸ್ವತಂತ್ರವಾಗಿ ಓದುವುದು.<br>ಅಗತ್ಯ ಸಾಮಗ್ರಿಗಳು : ಪ್ರಾಣಿ ಸಂಗ್ರಹಾಲಯಕ್ಕೆ ಸಂಬಂಧಿಸಿದ ಚಿತ್ರಗಳು, ಪ್ರಾಣಿ ಸಂಗ್ರಹಾಲಯದಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳ ಕುರಿತ ಕಥನ/ಕವಿತೆ/ ಹಾಡುಗಳ ಪಟ್ಟಿ.<br>ವಿಧಾನ : ಮಕ್ಕಳಿಗೆ ಪರಿಚಿತವಿರುವ ಹಾಡು ಮತ್ತು ಶಿಶುಗೀತೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಗುರುತಿಸುವುದು.<br>* ಹಾಡು/ಕಥೆಯಲ್ಲಿರುವ ವಿಶೇಷ ಪದಗಳನ್ನು ಗುರುತಿಸಿ ಹೆಸರಿಸುವುದು.<br>* ಹಾಡು/ಕಥೆಯಲ್ಲಿ ಬರುವ ಮುಖ್ಯ ಪಾತ್ರಗಳನ್ನು ಗುರುತಿಸುವುದು ಮತ್ತು ಪುನರಾವರ್ತಿತ ಪದ/ಸಾಲುಗಳನ್ನು ಹೇಳುವುದು/ಬರೆಯುವುದು.<br>* ಮಾದರಿ ಚಿತ್ರಗಳನ್ನು (ಪ್ರಾಣಿಸಂಗ್ರಹಾಲಯಕ್ಕೆ ಸಂಬಂಧಿಸಿದ) ಓದುವುದು ಮತ್ತು ಅದರ ಕುರಿತಾಗಿ ಪ್ರತಿಕ್ರಿಯಿಸುತ್ತಾ ಶಿಕ್ಷಕರೊಂದಿಗೆ ಚರ್ಚಿಸುವರು.<br>ವೈಯಕ್ತಿಕ ಚಿತ್ರ ಸಂಪುಟ.– ಕಥೆ ಅಥವಾ ಹಾಡುಗಳಲ್ಲಿ ಬರುವ ವಸ್ತುಗಳು ಅಥವಾ ವಿಶೇಷ ಪದಗಳನ್ನು ಪ್ರತಿ ಮಗು ಸನ್ನಿವೇಶ ಚಿತ್ರಗಳನ್ನು ಓದಿ ಗ್ರಹಿಸಿ ವೈಯಕ್ತಿಕವಾಗಿ ಚರ್ಚಿಸಲು ಅನುವು ಮಾಡಿಕೊಡುವುದು. ಆ ಚಿತ್ರ ಓದಿನ ಗ್ರಹಿಕೆಗಳನ್ನು ಅಭಿವ್ಯಕ್ತಿಸುವುದನ್ನು ಖಾತ್ರಿಮಾಡಿಕೊಳ್ಳುವುದು.<br>ಉದಾ..ಪ್ರಾಣಿಗಳ, ಮರಗಳು, ಪಕ್ಷಿಗಳು, ಪಂಜರಗಳು, ಕುಳಿತುಕೊಳ್ಳುವ ಆಸನಗಳು ಇತ್ಯಾದಿ.. ಚಿತ್ರಗಳು/ವಿಡಿಯೋಗಳು/ಪ್ರಾಣಿ ಸಂಗ್ರಹಾಲಯಕ್ಕೆ ಭೇಟಿ.<br>ಶಿಕ್ಷಕರು ಸುಗಮಕಾರಿಕೆಯಲ್ಲಿ ಬಳಸಬಹುದಾದ ಬೆಳವಣಿಗೆಯ ಪ್ರಶ್ನೆಗಳು:<br>• ಪ್ರಾಣಿಸಂಗ್ರಹಾಲಯವನ್ನು ನೋಡಿರುವಿರಾ?<br>• ನೀವು ಪ್ರಾಣಿಸಂಗ್ರಹಾಲಯದಲ್ಲಿ ಏನೇನು ನೋಡಿರುವಿರಿ?<br>• ನಿಮಗೆ ಇಷ್ಟವಾದ ಪ್ರಾಣಿ, ಪಕ್ಷಿ ಯಾವುದು?<br>• ನೀವು ನೋಡಿರುವ ಪ್ರಾಣಿ ಮತ್ತು ಪಕ್ಷಿಗಳನ್ನು ಹೇಳಿರಿ<br>• ನಿಮ್ಮ ಶಾಲೆಯಲ್ಲಿ ಸುಂದರ ಪಕ್ಷಿಧಾಮ ಮಾಡಿದರೆ ನಿರ್ಮಾಣ ಮಾಡುವುದಾದರೆ ನೀನು ಏನೇನು ಜವಾಬ್ದಾರಿ ತೆಗೆದುಕೊಳ್ಳುವೆ?<br>• ಪಕ್ಷಿಧಾಮ ನಿರ್ಮಾಣ ಮಾಡುವುದದಕ್ಕೆ ಯಾವೆಲ್ಲ ಸಾಮಗ್ರಿಗಳ ಅವಶ್ಯಕತೆ ಇದೆ? ಇತ್ಯಾದಿ<br>ಹೀಗೆ ಶಿಕ್ಷಕರು ತಮ್ಮ ಸ್ಥಳೀಯ ಸಂದರ್ಭಕ್ಕನುಗುಣವಾದ ಪ್ರಶ್ನಾವಳಿಗಳನ್ನು ರೂಪಿಸಿಕೊಂಡು ತರಗತಿಯನ್ನು ಅನುಕೂಲಿಸುವುದು.<br>ಪ್ರಾಣಿಸಂಗ್ರಹಾಲಯಕ್ಕೆ ಸಂಬಂಧಿಸಿದ ಚಿತ್ರಗಳನ್ನು/ ಚಿತ್ರಪಟಗಳನ್ನು/ ವಿಡಿಯೋ/ ಹಾಡು/ಕಥೆಗಳನ್ನೂ ಬಳಸಿ ಅಥವಾ ಪ್ರದರ್ಶಿಸಿ ಮಕ್ಕಳೊಂದಿಗೆ ಚರ್ಚಿಸಬಹುದು.<br>ಸದರಿ ಸಂದರ್ಭದಲ್ಲಿ ಶಿಕ್ಷಕರು ಮಕ್ಕಳನ್ನು ಮುಕ್ತವಾಗಿ ಮಾತನಾಡಲು, ಪ್ರಶ್ನೆಗಳನ್ನು ಕೇಳಲು ಹಾಗೂ ತಮ್ಮ ಸಹಜ ಭಾಷೆಯಲ್ಲಿ ಚರ್ಚಿಸಲು ಅವಕಾಶಗಳನ್ನು ಮಾಡಿಕೊಡುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಚರ್ಚಿಸಲು ಸಹಾಯ |

DRAFT 2022

| | | | |
|---|---|---|---|
| | | | ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು. ಜೊತೆಗೆ 2ನೇ ಮತ್ತು 3ನೇ ತರಗತಿಯ ಮಕ್ಕಳಿಗೂ ಅವರ ವಯೋಮಾನಕ್ಕನುಗುಣವಾದ ವಿಷಯ ವ್ಯಾಪ್ತಿಯ ಉನ್ನತ ಚಿಂತನೆಗಳು ಚರ್ಚೆಯಲ್ಲಿ ಬರುವಂತೆ ತರಗತಿಯನ್ನು ಅನುಕೂಲಿಸುವುದು.<br>*(ಸದರಿ ಚಟುವಟಿಕೆಯ ಮುಂದುವರೆದ ಭಾಗವು 37 ನೇ ದಿನದಲ್ಲಿ ಮುಂದುವರೆಯುವುದು)* |
| | | ಉದ್ದೇಶಿತ ಬರಹ | **ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ, ಆಲಿಸಿ ಅರ್ಥ ಮಾಡಿಕೊಳ್ಳುವುದು, ಪರಿಸರದ ಅರಿವು.**<br>**ಚಟುವಟಿಕೆ....33 ಪಟ್ಟಿ ಮಾಡೋಣ (ಗುರಿ–2) ECW-10**<br>**ಉದ್ದೇಶಗಳು:**<br>– ಉದ್ದೇಶಕ್ಕನುಸಾರವಾಗಿ ಬರವಣಿಗೆ ಮಾಡಲು ಅವಕಾಶ ನೀಡುವುದು.<br>– ಸೃಜನಶೀಲ ಚಿಂತನೆಯನ್ನು ಬೆಳೆಸುವುದು.<br>– ಪರಿಸರದ ಅರಿವು ಮೂಡಿಸುವುದು.<br>– ಪದಸಂಪತ್ತನ್ನು ಹೆಚ್ಚಿಸುವುದು.<br>– ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>**ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಕಾಗದ, ಕ್ರೇಯಾನ್ಸ್,**<br>**ವಿಧಾನ :** ಮಕ್ಕಳ ಪದಸಂಪತ್ತನ್ನು ಹೆಚ್ಚಿಸಲು ಹಾಗೂ ಉದ್ದೇಶಿತ ಬರವಣಿಗೆಗೆ ಅವಕಾಶ ಕಲ್ಪಿಸಲು ಮಕ್ಕಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಲು ತಿಳಿಸಿ.<br>**ಸೂಚಿತ ವಿಷಯ: ನಮ್ಮ ಉಡುಪುಗಳು**<br>ಇಡೀ ತರಗತಿಯನ್ನು ಒಳಗೊಂಡಂತೆ ಒಂದು ಚಾರ್ಟ್‌ಪೇಪರ್‌ನಲ್ಲಿ ಪಟ್ಟಿ ಮಾಡುವ ಚಟುವಟಿಕೆಯನ್ನು ಆಯೋಜಿಸಬಹುದು. ಈ ಚಾರ್ಟ್‌ನಲ್ಲಿ ಬಳಸಬಹುದಾದ ಸಾಮಾನ್ಯ ಪದಗಳ ಪಟ್ಟಿಯನ್ನು ಶಿಕ್ಷಕರೇ ಸಿದ್ಧಪಡಿಸಿ, ಮಕ್ಕಳು ಇವುಗಳನ್ನು ನೋಡಲು ಹಾಗೂ ಓದಲು ಸಹಾಯಕವಾಗುವಂತೆ ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.<br>– ತರಗತಿವಾರು ವಿವರ: 1ನೇ ತರಗತಿಯವರು ತಯಾರಿಸಿರುವ ಪಟ್ಟಿಗೆ 2ನೇ ತರಗತಿಯ ಮಕ್ಕಳು ಹೆಚ್ಚುವರಿಯಾಗಿ ಪದಗಳನ್ನು ಸೇರಿಸಲಿ. 3ನೇ ತರಗತಿಯವರು ಪಟ್ಟಿಯಲ್ಲಿರುವ ಪದಗಳಿಗೆ ಸ್ವಂತ ವಾಕ್ಯಗಳನ್ನು ರಚಿಸಲು ಅವಕಾಶ ಮಾಡಿಕೊಡಿ. |
| | | **ಬರವಣಿಗೆಯ ಮಾದರಿ:**<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | **ಹೊರಾಂಗಣ ಆಟಗಳು** | | Day 35<br>ಚಟುವಟಿಕೆ –31 ನೃತ್ಯ ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ<br>ಬೇಕಾಗುವ ಸಾಮಗ್ರಿ: ಡ್ರಮ್ / ಸಂಗೀತ<br>ವಿಧಾನ: ಡ್ರಮ್ ಅಥವಾ ಸಂಗೀತ ನುಡಿಸುವ ಮೂಲಕ ಮಕ್ಕಳು ರಾಗ ತಾಳಕ್ಕೆ ಹೆಜ್ಜೆ ಹಾಕುವ ಹಾಗೆ ಸೂಚಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೂ ಇದೆ ಚಟುವಟಿಕೆಯನ್ನೇ ಮುಂದುವರೆಸುವುದು.** |
| | **ಕಥಾ ಸಮಯ** | | **ಶೀರ್ಷಿಕೆ :** ಮೈ ರೀಡಿಂಗ್ ಪಾರ್ಟ್ನರ್<br>**ಸಾಮಗ್ರಿಗಳು :** ಸಾಹಿತ್ಯ, ಪಾತ್ರಗಳ ಚಿತ್ರಗಳು.<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಕುತೂಹಲ ಪ್ರವೃತ್ತಿಯನ್ನು ಹೆಚ್ಚಿಸುವುದು<br>➢ ಪದಸಂಪತ್ತನ್ನು ಹೆಚ್ಚಿಸುವುದು.<br>**ವಿಧಾನ :**<br>➢ ಕಥೆಯನ್ನು ಓದಿ ಪುನರಾವಲೋಕನ ಮಾಡಿಕೊಳ್ಳುವುದು. |

DRAFT 2022

| | | |
|---|---|---|
| | | ➢ ಕಥೆಯ ಪಾತ್ರಗಳ ಹೆಸರುಗಳನ್ನು ಮಕ್ಕಳಿಂದ ಹೇಳಿಸುತ್ತಾ ನಿರೂಪಿಸುವುದು.<br>➢ ಶಿಕ್ಷಕರು ಕಥೆಯ ಸಂಭಾಷಣೆಯನ್ನು ಹಾವ ಭಾವದೊಂದಿಗೆ ಹೇಳುವುದನ್ನು ಗಮನಿಸಲು ಮಕ್ಕಳಿಗೆ ತಿಳಿಸುವುದು. ನಂತರ ಮಕ್ಕಳು ಅನುಕರಿಸಲು ಪ್ರೇರೇಪಿಸುವುದು.<br>➢ ಇದೇ ರೀತಿಯ ಚಿಕ್ಕ ಕಥೆಗಳನ್ನು ಶಿಕ್ಷಕರು ಹೇಳುವುದು. |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–6** **ದಿನ–36 (ಶನಿವಾರ)**

| | | | | |
|---|---|---|---|---|
| | ಪ್ರತಿಬಿಂಬ (ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | | |
| | ನನ್ನ ಸಾಧನೆ | | | |
| | ಕಲಿಕಾಫಲಗಳು | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
| | ಸರಿಯಾದ ಆರೋಗ್ಯ ಮತ್ತು ನೈರ್ಮಲ್ಯವನ್ನು ನಿರ್ವಹಿಸುವರು. | | | |
| | ಆರೋಗ್ಯಕರ ಆಹಾರ ಅಭ್ಯಾಸಗಳನ್ನು ಅನುಸರಿಸುವರು. | | | |
| | ನೃತ್ಯ ಮತ್ತು ನಾಟಕದಲ್ಲಿ ತೊಡಗಿಸಿಕೊಳ್ಳುವರು. | | | |
| | ಪ್ರಾಸ ಮತ್ತು ಹಾಡುಗಳನ್ನು ಹಾಡುವುದನ್ನು ಆನಂದಿಸುವರು. | | | |
| | ಪೇಪರ್‌ಗಳನ್ನು ಸರಳ ಅಥವಾ ಓರೆಗಾಮಿಯಾಗಿ ಮಡಚುವರು. | | | |
| | ಆರೋಗ್ಯಕರ ನೈರ್ಮಲ್ಯ ಅಭ್ಯಾಸಗಳನ್ನು ಪಾಲಿಸುವರು. | | | |
| | ಇತರರೊಂದಿಗೆ ಸಾಮಾಜಿಕ ಸಂಬಂಧವನ್ನು ವ್ಯಕ್ತಪಡಿಸುವರು. | | | |
| | ಸಂದರ್ಭಗಳಿಗೆ ತಕ್ಕಂತೆ ಭಾವನೆಗಳನ್ನು ವ್ಯಕ್ತಪಡಿಸುವರು. | | | |
| | ಯಾವುದೇ ಘಟನೆಯನ್ನು/ದೃಶ್ಯವನ್ನು ಸಣ್ಣ ವಾಕ್ಯಗಳಲ್ಲಿ ವಿವರಿಸುವರು ಮತ್ತು ಪುನ: ಹೇಳುವರು. | | | |
| | ಸಾಮಾನ್ಯ ಪದಗಳ ಆರಂಭದ & ಅಂತ್ಯದ ಅಕ್ಷರಗಳನ್ನು ಗುರುತಿಸುವರು. | | | |

DRAFT 2021-22

| | | | | |
|---|---|---|---|---|
| | ಸಿಲೆಬಲ್ ಗಳನ್ನು ಗುರುತಿಸುವರು, ಕೂಡಿಸುವರು ಮತ್ತು ವಿಭಾಗಿಸುವರು. | | | |
| | ಬರೆಯುವ ಉಪಕರಣಗಳನ್ನು ಸರಿಯಾಗಿ ಬಳಸುವರು. | | | |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–7** **ದಿನ–37 (ಸೋಮವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 37 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:**<br>ಸಾಮಗ್ರಿಗಳು: ಪ್ರಾಣಿಗಳ ಚಿತ್ರಗಳು/ ಆಟಿಕೆಗಳು<br>ಸಮಯ: 5 ನಿಮಿಷಗಳು<br>ವಿಧಾನ:<br>• ಮಕ್ಕಳನ್ನು ತರಗತಿಯ ಹೊರಗೆ ಒಂದು ಸಾಲಿನಲ್ಲಿ ನಿಲ್ಲುವಂತೆ ಮಾಡಿ. (ಸುರಕ್ಷತಾ ಕ್ರಮಗಳನ್ನು ಗಮನಿಸಿ)<br>• ಪ್ರಾಣಿಗಳ ಚಿತ್ರಗಳನ್ನು ಒಂದೊಂದಾಗಿ ತೋರಿಸಿ. (ಶಿಕ್ಷಕರು ತರಗತಿಯ ಬಾಗಿಲಲ್ಲಿ ನಿಲ್ಲಬೇಕು. ) ಚಿತ್ರ ನೋಡಿ ಆ ಪ್ರಾಣಿಯ ಹೆಸರು ಮತ್ತು ಕೂಗುವ ರೀತಿಯಲ್ಲಿ ತರಗತಿ ಪ್ರವೇಶಿಸಲು ಸೂಚಿಸುವುದು ಉದಾಹರಣೆಗೆ: ನಾನು ಸಿಂಹ. ನಾನು ಘರ್ಜಿಸಬಹುದು.<br>• ಮಕ್ಕಳು ತರಗತಿಯನ್ನು ಪ್ರವೇಶಿಸುವಾಗ ಶಿಕ್ಷಕರು ಮಕ್ಕಳಿಗೆ " ನಮಸ್ತೆ, ಗುಡ್ ಮಾರ್ನಿಂಗ್" ಎಂದು ಗ್ರೀಟ್ ಮಾಡುವುದು.<br>• ಮಕ್ಕಳನ್ನು ಕೇಳಿ, "ಇಂದು ಯಾವ ದಿನ?" ಮತ್ತು "ಇಂದು ....................." ಎಂದು ಹೇಳುವ ಮೂಲಕ ಮಕ್ಕಳನ್ನು ಪ್ರತಿಕ್ರಿಯಿಸುವಂತೆ ಮಾಡಿ.<br>• ಹವಾಮಾನ ನಕ್ಷೆಯ ಚಟುವಟಿಕೆ ಮಾಡಿಸುವುದು .<br><br>**ಚಟುವಟಿಕೆ 2:** TPR<br>• ವಿಧಾನ:<br>• ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಮಾಡಿ ಮತ್ತು ಸೂಚನೆಗಳನ್ನು ಕೇಳಲು ಮತ್ತು ಅನುಸರಿಸಲು ಅವರಿಗೆ ತಿಳಿಸಿ.<br>• ಸರಳ TPR ಸೂಚನೆಗಳನ್ನು ಕೊಡಿ<br>• ಉದಾ : ನಿಮ್ಮ ಕೈಗಳನ್ನು ಮೇಲೆತ್ತಿ ಬೀಸಿ<br>• ಪಾದಗಳನ್ನು ತಟ್ಟಿ<br>• ತಲೆಯನ್ನು ಆಡಿಸಿ |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ*** | ಚಟುವಟಿಕೆ : ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ<br>ಸಾಮರ್ಥ್ಯ: ಸ್ವಯಂ ಅರಿವು, ವೈಯಕ್ತಿಕ ನೈರ್ಮಲ್ಯ ಮತ್ತು ಸಂವಹನ ಕೌಶಲ್ಯಗಳ ಅಭಿವೃದ್ಧಿ.<br>ಅಗತ್ಯ ಸಾಮಗ್ರಿಗಳು : ಟಿಶ್ಯೂ ಪೇಪರ್<br>ವಿಧಾನ: |

DRAFT 22.02.22

| | | |
|---|---|---|
| | ***ಚಟುವಟಿಕೆ)*** | • ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ.<br>• ಮಕ್ಕಳಿಗೆ ಅವರ ಕೈಗಳನ್ನು ನೋಡಿ ಅವು ಸ್ವಚ್ಛವಾಗಿವೆಯೇ ಎಂದು ತಿಳಿಸಲು ಹೇಳಿ .<br>• ಮಕ್ಕಳಿಗೆ ತರಗತಿಯೊಳಗಿರುವ ಬೀರು, ಕಪಾಟುಗಳು, ಆಟಿಕೆಗಳು, ಚಾರ್ಟುಗಳು ಮುಂತಾದ ವಸ್ತುಗಳನ್ನು ಸ್ಪರ್ಶಿಸಲು ಸೂಚಿಸಿ. ನಂತರ ಮಕ್ಕಳನ್ನು ಅವರ ಸ್ಥಳಗಳಲ್ಲಿ ಕುಳಿತುಕೊಳ್ಳಲು ಹೇಳಿ.<br>• ಮತ್ತೊಮ್ಮೆ ಮಕ್ಕಳಿಗೆ ಅವರ ಕೈಗಳನ್ನು ನೋಡಿ ಅವು ಸ್ವಚ್ಛವಾಗಿವೆಯೇ ಎಂದು ತಿಳಿಸಲು ಹೇಳಿ . ಬಹುತೇಕ ಮಕ್ಕಳು ತಮ್ಮ ಕೈಗಳು ಇನ್ನೂ ಸ್ವಚ್ಛವಾಗಿ ಕಾಣುತ್ತವೆ ಎಂದು ಒಪ್ಪಿಕೊಳ್ಳುತ್ತಾರೆ.<br>• ಈಗ ಅವರಿಗೆ ಟಿಶ್ಯೂ ಪೇಪರ್‌ಗಳನ್ನು ನೀಡಿ ಮತ್ತು ಅವರ ಕೈಗಳನ್ನು ನಿಧಾನವಾಗಿ ಒರೆಸಲು ಹೇಳಿ. ಕಂದು ಬಣ್ಣಕ್ಕೆ ತಿರುಗಿರುವ ಟಿಶ್ಯೂ ಪೇಪರ್ ಅನ್ನು ಗಮನಿಸಲು ಹೇಳಿ.<br>• ಅದು ಅವರ ಕೈಗಳಿಗೆ ಅಂಟಿಕೊಂಡಿದ್ದ ಕೀಟಾಣುಗಳು /ಕೊಳಕು ಎಂದು ತಿಳಿಸಿ.<br>• ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ<br>ಮಕ್ಕಳನ್ನು ಗುಂಪು ಚರ್ಚೆಗೆ ಒಳಗೊಳ್ಳುವಂತೆ ಸರಳವಾದ ಪ್ರಶ್ನೆಗಳನ್ನು ಕೇಳಿ.<br>• ನೀವು ನಿಮ್ಮ ಕೈಗಳನ್ನು ತೊಳೆಯುತ್ತೀರಾ?<br>• ನೀವು ಯಾವಾಗ ನಿಮ್ಮ ಕೈಗಳನ್ನು ತೊಳೆಯುತ್ತೀರಿ?<br>• ಕೈ ತೊಳೆಯಲು ನೀವು ಏನು ಬಳಸುತ್ತೀರಿ?<br>• ನಾವು ನಮ್ಮ ಕೈಗಳನ್ನು ಏಕೆ ತೊಳೆಯಬೇಕು?<br>• ನಾವು ಕೈ ತೊಳೆಯದಿದ್ದರೆ ಏನಾಗುತ್ತದೆ? ಇತ್ಯಾದಿ<br>ಎಲ್ಲಾ ಮಕ್ಕಳು ಗುಂಪು ಚರ್ಚೆಯಲ್ಲಿ ಭಾಗವಹಿಸುವುದನ್ನು ಶಿಕ್ಷಕರು ಖಚಿತಪಡಿಸಿಕೊಳ್ಳಬೇಕು |
| | **ನನ್ನ ಸಮಯ(Free Indore play)**<br>**('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಸ್ಪರ್ಶ ಸಂವೇದನೆ, ಪರಿಸರದ ಅರಿವು**<br>**ಚಟುವಟಿಕೆ...9 ಬಿ "ಸೂಚಿತ ಸಂಖ್ಯೆ"(ಅನುಕ್ರಮ ಜೋಡಣೆ) (ಗುರಿ 3)**<br>**ಉದ್ದೇಶ:– ಅನುಕ್ರಮವಾಗಿ ಜೋಡಿಸುವುದು.**<br>**ಅಗತ್ಯ ಸಾಮಗ್ರಿಗಳು : 1 ರಿಂದ 10 ರವರೆಗಿನ ಸಂಖ್ಯಾ ಕಾರ್ಡುಗಳು/ರಬ್ಬರ್ ಅಂಕಿಗಳು (ಕಿಟ್‌ನಲ್ಲಿರುವ ಸಂಖ್ಯಾ ಕಾರ್ಡುಗಳನ್ನು ನೀಡುವುದು)**<br>**ವಿಧಾನ : ಮಕ್ಕಳನ್ನು ವೃತ್ತಾಕಾರದಲ್ಲಿ ಕುಳಿತುಕೊಳ್ಳಲು ತಿಳಿಸುವುದು. 1 ರಿಂದ 10 ರವರೆಗಿನ ಸಂಖ್ಯಾ ಕಾರ್ಡುಗಳನ್ನು/ರಬ್ಬರ್ ಅಂಕಿಗಳನ್ನು ಒಂದು ಟ್ರೇನಲ್ಲಿ ಇರಿಸಿ ಅದರಲ್ಲಿಯ ಸೂಚಿತ ಸಂಖ್ಯೆಗಳ ಕಾರ್ಡುಗಳನ್ನು/ರಬ್ಬರ್ ಅಂಕಿಗಳನ್ನು ಕ್ರಮವಾಗಿ ಜೋಡಿಸಲು ಮಕ್ಕಳಿಗೆ ಅವಕಾಶ ಮಾಡಿಕೊಡುವುದು.**<br>**ತರಗತಿ–2**<br>**1 ರಿಂದ 20ರ ವರೆಗಿನ ಸಂಖ್ಯಾ ಕಾರ್ಡ್‌ಗಳನ್ನು/ ರಬ್ಬರ್ ಅಂಕಿಗಳನ್ನು ಅನುಕ್ರಮವಾಗಿ ಜೋಡಿಸಿ ಹೇಳಲು ತಿಳಿಸುವುದು.**<br>**ತರಗತಿ–3**<br>**1 ರಿಂದ 20ರ ವರೆಗಿನ ಸಂಖ್ಯೆಗಳನ್ನು ಅನುಕ್ರಮವಾಗಿ ಮತ್ತು ಹಿಮ್ಮುಖವಾಗಿ ಹೇಳುತ್ತಾ ಬರೆಯಲು ತಿಳಿಸುವುದು.**<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: I. L. -24 (ತರಗತಿ 1, 2, 3)** |
| | **ಸೃಜನಶೀಲ ಕಲೆ** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ |

DRAFT 22.02.22

| | | | |
|---|---|---|---|
| | ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಟ್ರೇಸ್ ಮಾಡುವುದು.[ ಮರಳು] ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ದಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಬರವಣಿಗೆಗೆ ಪೂರಕ ಚಟುವಟಿಕೆಯಾಗಿರುತ್ತದೆ.<br>ಸಾಮಗ್ರಿಗಳು : ಮರಳು.<br>ವಿಧಾನ : ಮಕ್ಕಳಿಗೆ ಒಂದು ಟ್ರೇನಲ್ಲಿ ಮರಳನ್ನು ನೀಡುವುದು ಮತ್ತು ಅವರಿಗೆ ಮರಳಿನ ಮೇಲೆ ಬರೆಯಲು ಸಣ್ಣ ಕಡ್ಡಿಯನ್ನು ಕೊಡುವುದು.ಮರಳಿನ ಮೇಲೆ ವಿವಿಧ ವಕ್ರಾಕೃತಿ ರೇಖೆಗಳನ್ನು ಮಾಡಲು ಹೇಳುವುದು.<br>ಮಕ್ಕಳಿಗೆ ಮರಳಿನಲ್ಲಿ ಸರಳ ರೇಖಾಕೃತಿಗಳನ್ನು [ ವೃತ್ತ, ತ್ರಿಭುಜ, ಆಯತ ಮತ್ತು ಚೌಕ] ಬರೆಯಲು ಹೇಳುವುದು/ ರೇಖಾಕೃತಿಗಳನ್ನು ಬಳಸಿ ಚಿತ್ರ ರಚಿಸಲು ಪ್ರೋತ್ಸಾಹಿಸುವುದು. ಉದಾ; ವೃತ್ತದಿಂದ ಚಕ್ರ, ಚೌಕದಿಂದ ಮನೆ , ಇತ್ಯಾದಿ.<br>ವಿವರ; 2 ಮತ್ತು 3 ನೇ ತರಗತಿಗೆ ವಿವಿಧ ರೇಖಾಕೃತಿಗಳನ್ನು ಬಳಸಿ ಚಿತ್ರ ರಚಿಸಲು ಹೇಳುವುದು.<br>*** ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-10 ( 01, 02,03ನೇ ತರಗತಿ)** |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ : ಆಲಿಸುವಿಕೆ, ಸೃಜನಾತ್ಮಕ, ಸ್ವ– ಅಭಿವ್ಯಕ್ತಿ, ಔಪಚಾರಿಕ ಮಾತುಗಾರಿಕೆ,<br>ಚಟುವಟಿಕೆ: 8. ಆಶುಭಾಷಣ (ಗುರಿ–2) **ECL-6**<br>ಉದ್ದೇಶ :<br>* ಆಯ್ದುಕೊಂಡ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡುವುದು.<br>* ಔಪಚಾರಿಕ ಮಾತುಗಾರಿಕೆಯ ಕೌಶಲವನ್ನು ಬೆಳೆಸುವುದು.<br>* ಆಲಿಸಿದ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳುವುದು.<br>* ಸೃಜನಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.<br>ಸಾಮಗ್ರಿ : ಪ್ರಾಣಿ, ಪಕ್ಷಿ, ವಾಹನಗಳ ಚಿತ್ರಗಳ ಮಿಂಚುಪಟ್ಟಿಗಳು<br>ವಿಧಾನ : ಡಬ್ಬದಲ್ಲಿ ಪ್ರಾಣಿ, ಪಕ್ಷಿ, ವಿವಿಧ ವಾಹನಗಳ ಚಿತ್ರಗಳ ಮಿಂಚುಪಟ್ಟಿಗಳನ್ನು ಹಾಕುವುದು, . ಮಕ್ಕಳಿಗೆ ಡಬ್ಬದಲ್ಲಿ ಕೈ ಹಾಕಿ ಯಾವುದಾದರೂ ಒಂದು ಮಿಂಚುಪಟ್ಟಿಯನ್ನು ತೆಗೆದುಕೊಂಡು ಅದರಲ್ಲಿರುವ ಚಿತ್ರದ ಬಗ್ಗೆ ತಮ್ಮದೇ ಮಾತುಗಳಲ್ಲಿ ಹೇಳಲು ಅವಕಾಶ ನೀಡುವುದು.<br>ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಆಯ್ಕೆ ಮಾಡಿಕೊಂಡ ವಿಷಯದ ಕುರಿತು 2 ರಿಂದ 3 ನಿಮಿಷಗಳ ಕಾಲ ಮಾತನಾಡುವುದು.. 3ನೇ ತರಗತಿಯ ಮಕ್ಕಳು ವಿಷಯದ ದೈನಂದಿನ ಬಳಕೆ ಅಥವಾ ಅನ್ವಯಿಕ ಅಂಶಗಳ ಬಗ್ಗೆ ಮಾತನಾಡುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>ಚಟುವಟಿಕೆ....18<br>• ಚಿತ್ರ ಸಂಪುಟ (ಗುರಿ–2) ವಿಷಯ: 'ಪ್ರಾಣಿ ಸಂಗ್ರಹಾಲಯದಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳು'<br>ಉದ್ದೇಶ:<br>• ಮಕ್ಕಳು ಚಿತ್ರ ಓದುವುದು ಮತ್ತು ಚರ್ಚಿಸಿ ಅರ್ಥ ಮಾಡಿಕೊಳ್ಳುವುದು ಮತ್ತು ವೈಯಕ್ತಿಕ ಚಿತ್ರ ಸಂಪುಟಗಳನ್ನು ರಚಿಸುವರು.<br>• ಅನುಭವ ಮತ್ತು ಪೂರ್ವಜ್ಞಾನದ ಆಧಾರದ ಮೇಲೆ ಊಹಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ, ಕ್ರೇಯಾನ್ಸ್, ಅಂಟು, ಪ್ರಾಣಿ ಸಂಗ್ರಹಾಲಯದಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳ ಚಿತ್ರಗಳು<br>ವಿಧಾನ : .<br>* ಹಾಡು ಮತ್ತು ಶಿಶುಗೀತೆಗಳಲ್ಲಿ ಪ್ರಾಣಿ ಸಂಗ್ರಹಾಲಯಕ್ಕೆ ಸಂಬಂಧಿಸಿದ ಚಿತ್ರಗಳನ್ನು ಗುರುತಿಸುವುದು. |

DRAFT 2022

| | | | |
|---|---|---|---|
| | | | * ಹಾಡು/ಕಥೆಯಲ್ಲಿರುವ ವಿಶೇಷ ಪದಗಳನ್ನು ಗುರುತಿಸಿ ಹೆಸರಿಸುವುದು ಶಿಕ್ಷಕರು ಮಕ್ಕಳು ಗ್ರಹಿಸಿ ಹೇಳಿದ ಪದಗಳನ್ನು ಕಪ್ಪುಹಲಗೆಯ ಮೇಲೆ ಬರೆಯುವುದು ಆ ಪದಗಳ ಕುರಿತು ಚರ್ಚಿಸುವರು ಹಾಗೂ ಆಯಾ ಪರಿಚಿತ ಪದಗಳ ಆಧಾರದಲ್ಲಿ ಪದಜಾಲಗಳನ್ನು ಕಪ್ಪುಹಲಗೆ ಅಥವಾ ಚಾರ್ಟ್‌ಗಳಲ್ಲಿ ಬರೆದು ಚರ್ಚಿಸುವರು.<br>*ಮಕ್ಕಳಿಗೆ ಹಾಳೆ ಕ್ರೇಯಾನ್ಸ್ ಇನಿತರ ಸಾಮಗ್ರಿಗಳನ್ನು ನೀಡಿ ಪ್ರಾಣಿ ಸಂಗ್ರಹಾಲಯದಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳ ಚಿತ್ರ ನೋಡಿ ಸ್ವತಃ ಆ ಚಿತ್ರಗಳನ್ನು ಬರೆಯಲು ಮತ್ತು ಬಣ್ಣ ಹಚ್ಚಲು ಅವಕಾಶ ನಿಡುವುದು.<br>ವೈಯಕ್ತಿಕ ಚಿತ್ರ ಸಂಪುಟ.–ಮಕ್ಕಳು ರಚಿಸಿದ ಚಿತ್ರಗಳನ್ನು ತಮ್ಮ ಕೃತಿ ಸಂಪುಟದಲ್ಲಿ ಸಂಗ್ರಹಿಸಲು ತಿಳಿಸುವುದು ಮತ್ತು ಅವುಗಳನ್ನು ಮುಂದಿನ 41ನೇ ದಿನದಲ್ಲಿ ಚರ್ಚಿಸುವುದಾಗಿ ತಿಳಿಸುವುದು.<br>ಉದಾ: ಪ್ರಾಣಿಗಳು, ಪಕ್ಷಿಗಳು, ಕುಳಿತುಕೊಳ್ಳುವ ಆಸನಗಳು, ಪಂಜರಗಳು ಇತ್ಯಾದಿ.. ಚಿತ್ರಗಳು/ವಿಡಿಯೋಗಳು/ಅನುಭವದ ಆಧಾರದ ಮೇಲೆ ಮಕ್ಕಳು ವೈಯಕ್ತಿಕವಾಗಿ ಚಿತ್ರಬರೆಯಲು ಅವಕಾಶವಿರುವಂತೆ ನೋಡಿಕೊಳ್ಳುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಸಹಾಯ ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು. ಜೊತೆಗೆ 2ನೇ ಮತ್ತು 3ನೇ ತರಗತಿಯ ಮಕ್ಕಳಿಗೂ ಸ್ವತಂತ್ರವಾಗಿ ಚಿತ್ರಬರೆಯಲು ಮತ್ತು ಬಣ್ಣಹಾಕಲು ಅವಕಾಶ ನೀಡಿ ಅವರೂ ಸಹ ತಮ್ಮ ಕೃತಿಸಂಪುಟಗಳಲ್ಲಿ ಸಂಗ್ರಹಿಸಲು ಅವಕಾಶ ನೀಡುವುದು.<br>*(ಸದರಿ ಚಟುವಟಿಕೆಯ ಮುಂದುವರೆದ ಭಾಗವು 41 ನೇ ದಿನದಲ್ಲಿ ಮುಂದುವರೆಯುವುದು)* |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ, ಆಲಿಸಿ ಅರ್ಥ ಮಾಡಿಕೊಳ್ಳುವುದು, ಪರಿಸರದ ಅರಿವು.<br>ಚಟುವಟಿಕೆ....33 ಪಟ್ಟಿ ಮಾಡೋಣ (ಗುರಿ–2) **ECW-10**<br>ಉದ್ದೇಶಗಳು:<br>– ಉದ್ದೇಶಕ್ಕನುಸಾರವಾಗಿ ಬರವಣಿಗೆ ಮಾಡಲು ಅವಕಾಶ ನೀಡುವುದು.<br>– ಸೃಜನಶೀಲ ಚಿಂತನೆಯನ್ನು ಬೆಳೆಸುವುದು.<br>– ಪರಿಸರದ ಅರಿವು ಮೂಡಿಸುವುದು.<br>– ಪದಸಂಪತ್ತನ್ನು ಹೆಚ್ಚಿಸುವುದು.<br>– ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಕಾಗದ, ಕ್ರೇಯಾನ್ಸ್,<br>ವಿಧಾನ : ಮಕ್ಕಳ ಪದಸಂಪತ್ತನ್ನು ಹೆಚ್ಚಿಸಲು ಹಾಗೂ ಉದ್ದೇಶಿತ ಬರವಣಿಗೆಗೆ ಅವಕಾಶ ಕಲ್ಪಿಸಲು ಮಕ್ಕಳಿಗೆ ವಿವಿಧ ವಿಷಯುಗಳಿಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಲು ತಿಳಿಸಿ.<br>ಸೂಚಿತ ವಿಷಯ: ಹೂವುಗಳು<br>ಇಡೀ ತರಗತಿಯನ್ನು ಒಳಗೊಂಡಂತೆ ಒಂದು ಚಾರ್ಟ್‌ಪೇಪರ್‌ನಲ್ಲಿ ಪಟ್ಟಿ ಮಾಡುವ ಚಟುವಟಿಕೆಯನ್ನು ಆಯೋಜಿಸಬಹುದು. ಈ ಚಾರ್ಟ್‌ನಲ್ಲಿ ಬಳಸಬಹುದಾದ ಸಾಮಾನ್ಯ ಪದಗಳ ಪಟ್ಟಿಯನ್ನು ಶಿಕ್ಷಕರೇ ಸಿದ್ಧಪಡಿಸಿ, ಮಕ್ಕಳು ಇವುಗಳನ್ನು ನೋಡಲು ಹಾಗೂ ಓದಲು ಸಹಾಯಕವಾಗುವಂತೆ ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.<br>– ತರಗತಿವಾರು ವಿವರ: 1ನೇ ತರಗತಿಯವರು ತಯಾರಿಸಿರುವ ಪಟ್ಟಿಗೆ 2ನೇ ತರಗತಿಯ ಮಕ್ಕಳು ಹೆಚ್ಚುವರಿಯಾಗಿ ಪದಗಳನ್ನು ಸೇರಿಸಲಿ. 3ನೇ ತರಗತಿಯವರು ಪಟ್ಟಿಯಲ್ಲಿರುವ ಪದಗಳಿಗೆ ಸ್ವಂತ ವಾಕ್ಯಗಳನ್ನು ರಚಿಸಲು ಅವಕಾಶ ಮಾಡಿಕೊಡಿ. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | ಹೊರಾಂಗಣ ಆಟಗಳು | ಚಟುವಟಿಕೆ –19 ಜಿಗಿಯುವುದು, ಕುಪ್ಪಳಿಸುವುದು, ತಿರುಗುವುದು ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ವಿನ್ಯಾಸದ ಅರಿವು, ದೇಹದ ಸಮತೋಲನ ,ಕಾಲುಗಳ ಹೊಂದಾಣಿಕೆ | |

| | | |
|---|---|---|
| | | ಬೇಕಾಗುವ ಸಾಮಗ್ರಿ: -------<br>ವಿಧಾನ:<br>• ಮಕ್ಕಳನ್ನು ವೃತ್ತದಲ್ಲಿ  ನಿಲ್ಲಲು ಸೂಚಿಸುವುದು.<br>• ಶಿಕ್ಷಕರು ವೃತ್ತದ ಮಧ್ಯದಲ್ಲಿ ನಿಲ್ಲಬೇಕು. ಶಿಕ್ಷಕರು ಜಿಗಿಯೋದು, ಕುಪ್ಪಳಿಸೋದು, ತಿರುಗುವ ಕ್ರಿಯೆಗಳನ್ನು ವಿವರಿಸಿ ಮತ್ತು ಪ್ರದರ್ಶಿಸಬೇಕು.<br>• ಒಂದು ವಿನ್ಯಾಸವನ್ನು ಹೇಳುವ ಮೂಲಕ ಆಟವನ್ನು ಪ್ರಾರಂಭಿಸುವುದು . ಉದಾ :"ಜಂಪ್-ಸ್ಕಿಪ್, ಜಂಪ್-ಸ್ಕಿಪ್", ಇತ್ಯಾದಿ.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ"ಜಂಪ್- ಜಂಪ್-ಸ್ಕಿಪ್, ಜಂಪ್-ಜಂಪ್-ಸ್ಕಿಪ್' ಇತ್ಯಾದಿ ವಿನ್ಯಾಸಗಳನ್ನು ಹೆಚ್ಚುಸುತ್ತ ಹೋಗುವುದು.** |
| | **ಕಥಾ ಸಮಯ** | **ಶೀರ್ಷಿಕೆ :** ನೀಲಿ ಬಣ್ಣದ ನರಿ<br>**ಸಾಮಗ್ರಿಗಳು :** ಕಥೆಯ ಸಾಹಿತ್ಯ<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಏಕಾಗ್ರತೆಯನ್ನು ಹೆಚ್ಚಿಸುವುದು.<br>➢ ನಿರರ್ಗಳವಾಗಿ ಮಾತನಾಡುವ ಕೌಶಲ ರೂಢಿಸುವುದು.<br>**ವಿಧಾನ :**<br>***ಕಥಾ ಸಾಹಿತ್ಯ ನಿರೂಪಣೆ***<br>➢ ಶಿಕ್ಷಕರು ಕಥೆ ಹೇಳುವ ಮುನ್ನಕಥೆಯನ್ನು ಓದಿ ಅಧ್ಯಯಿಸಿಕೊಳ್ಳಬೇಕು.<br>➢ ಸೂಕ್ತ ಆಂಗಿಕ ಚಲನೆಯೊಂದಿಗೆ ಸರಳ ಭಾಷೆಯಲ್ಲಿಕಥೆಯನ್ನು ಹೇಳಬೇಕು.<br>➢ ಕಥೆ ಹೇಳುವಾಗ ಶಿಕ್ಷಕರು ಮಕ್ಕಳೊಂದಿಗೆ ವೃತ್ತದಲ್ಲಿ ಕುಳಿತುಕೊಳ್ಳಬೇಕು.<br>➢ ಸರಳ ಪ್ರಶ್ನೆಗಳ್ನು ಕೇಳಿ ಕಥೆಯನ್ನುಅರ್ಥೈಸಬೇಕು.<br>**ಕಥೆ :**<br>**ಒಂದುಕಾಡಿನಲ್ಲಿ ಸಿಂಹ, ಹುಲಿ, ಕರಡಿ, ಜಿಂಕೆ, ನರಿ, ಚಿರತೆ, ಆನೆ, ಮೊಲ ಇತ್ಯಾದಿ ಪ್ರಾಣಿಗಳು ವಾಸಿಸುತ್ತಿದ್ದವು. ಒಂದು ದಿನ ಬೇಟೆಗಾರನು ಬೇಟೆಯಾಡಲುಕಾಡಿಗೆ ಬಂದನು. ಆ ಸಮಯದಲ್ಲಿ ಬೇಟೆಗಾರನಕಣ್ಣಿಗೆ ನರಿಯು ಬಿದ್ದಿತು. ಬೇಟೆಗಾರನಿಂದ ತಪ್ಪಿಸಿಕೊಳ್ಳಲು ನರಿಯುಕಾಡಿನಿಂದ ಊರಿನೊಳಗೆ ಓಡಿಬಂದಿತು. ಓಡುವರಭಸದಲ್ಲಿ ನೀಲಿ ಬಣ್ಣದ ನೀರಿನ ತೊಟ್ಟಿಗೆಯೊಳಗೆ ನರಿಯು ಬಿದ್ದಿತು. ತೊಟ್ಟಿಯಿಂದ ಮೇಲೆ ಬಂದ ನರಿಯುತನ್ನ ನೀಲಿ ಬಣ್ಣದ ಮೈಯನ್ನು ನೋಡಿಗಾಬರಿಗೊಂಡಿತು. ತನಗೆತಾನೇಒಂದು ವಿಶೇಷ ಪ್ರಾಣಿಯೆನ್ನುವಂತೆ ಕಲ್ಪಿಸಿಕೊಂಡು ಕಾಡಿನೊಳಗೆ ಬಂದಿತು. ಕಾಡಿನೊಳಗಿದ್ದ ಎಲ್ಲಾ ಪ್ರಾಣಿಗಳನ್ನು ಒಂದೆಡೆ ಸೇರಿಸಿ, ನಾನು ನಿಮಗೆಲ್ಲ ವಿಶೇಷ ನಾದವನು. ನನಗೆ ದೇವರು ನಿಮ್ಮರಕ್ಷಣೆಗಾಗಿ ಕಳುಹಿಸಿದ್ದಾನೆ. ಈಗ ನಾನೇ ಈ ಕಾಡಿನರಾಜನು. ನಾನು ಹೇಳಿದಂತೆ ನೀವೆಲ್ಲ ಕೇಳಬೇಕು ಹಾಗೂ ನನಗೆ ಸರದಿಯಂತೆ ಸಮಯಕಕೆ ಸರಿಯಾಗಆಹಾರವನ್ನುತಂದುಕೊಡಬೇಕು. ಇಲ್ಲವಾದಲ್ಲಿ ನಾನು ಎಲ್ಲಾ ಪ್ರಾಣಗಳನ್ನು ಕೊಂದುತಿನ್ನಬೇಕಾಗುತ್ತದೆಎಂದು ಗದರಿಸಿತು. ಎಲಾ ಪ್ರಾಣಿಗಳು ನರಿಯ ವಿಶೇಷತೆಯನ್ನು ಗಮನಿಸಿ, ವಿಧಿಯಿಲ್ಲದೇಒಪ್ಪಿಕೊಂಡವು. ಹೀಗೆ ಪ್ರಾಣಿಗಳು ನರಿಗೆ ಹೆದರಿ ಸರದಿಯಂತೆಆಹಾರಒದಗಿಸುತ್ತಾ ಬಂದವು. ನರಿಯುಚೆನ್ನಾಗಿತಿಂದುಕೊಬ್ಬಿತು. ಕೆಲವು ದಿನಗಳ ನಂತರ ಮಳೆಗಾಲ ಪ್ರಾರಂಭವಾಯಿತು. ಜೋರಾದ ಮಳೆಯ ನೀರಿಗೆ ನರಿಯ ನೀಲಿ ಬಣ್ಣ ಮಾಯವಾಗಿ ನರಿಯ ಮೊದಲಿನ ಬಣ್ಣ ಮೂಡತೊಡಗಿತು. ಎಲ್ಲಾ ಪ್ರಾಣಿಗಳಿಗೂ ನರಿಯ ನಿಜ ಬಣ್ಣ ತಿಳಿಯಿತು. ನರಿಯುತಮಗೆ ಮಾಡಿದ ಮೋಸವನ್ನು ಸಹಿಸಿಕೊಳ್ಳಲಾಗದೇ ನರಿಯನ್ನುಕೊಂದವು.**<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ಬಣ್ಣದ ನೀರಿನ ತೊಟ್ಟಿಯಲ್ಲಿ ಯಾರು ಬಿದ್ದರು?**<br>• **ನರಿಯು ಏಕೆ ವಿಶೇಷ ಪ್ರಾಣಿಯಂತೆ ಕಂಡಿತು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

DRAFT 2022

# ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–7** **ದಿನ–38 (ಮಂಗಳವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 38 | **ಶುಭಾಶಯ ವಿನಿಮಯ**<br>***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1**<br>ದಿನ–37 ರಲ್ಲಿ ಉಲ್ಲೇಖಿಸಲಾದ ಶುಭಾಶಯ ವಿನಿಮಯ ಚಟುವಟಿಕೆ 1 ಅನ್ನು ಪುನರಾವರ್ತಿಸಿ<br>ಚಟುವಟಿಕೆ 2: TPR<br>**ಚಟುವಟಿಕೆ 2**<br>• ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಮಾಡಿ ಮತ್ತು ಸೂಚನೆಗಳನ್ನು ಕೇಳಲು ಮತ್ತು ಅನುಸರಿಸಲು ಅವರಿಗೆ ತಿಳಿಸಿ.<br>• ಸರಳ TPR ಸೂಚನೆಗಳನ್ನು ಕೊಡಿ<br>• ಉದಾ : ಮೇಲಕ್ಕೆ ಜಿಗಿ<br>• ಮೊಣಕಾಲನ್ನು ತಟ್ಟು<br>• ನೆಲವನ್ನು ಮುಟ್ಟು |
| | **ಮಾತು ಕತೆ**<br>***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ಚಟುವಟಿಕೆ–2: ಪುಟ್ಟ ಮಗು ಪುಟ್ಟ ಮಗು<br>ಸಾಮರ್ಥ್ಯ: ಸ್ವಯಂ ಪ್ರಜ್ಞೆ, ಮೌಖಿಕ ಭಾಷೆಅಭಿವೃದ್ಧಿ, ಪದ ಸಂಪತ್ತು ಬೆಳವಣಿಗೆ.<br>ಸಾಮಗ್ರಿ: ರೈಮ್ ಚಾರ್ಟ್<br>ವಿಧಾನ: ಲಯಬದ್ಧ ಚಲನೆಗಳನ್ನು ಮಾಡಲು ಮಕ್ಕಳಿಗೆ ಅವಕಾಶಗಳು ಮತ್ತು ಅನುಭವಗಳನ್ನು ಒದಗಿಸಿ. “ಪುಟ್ಟ ಮಗು ಪುಟ್ಟಮಗು” ಪ್ರಾಸವನ್ನು ಹಾಡಿಸಿ. ಹಾಡಿದ ನಂತರ ಪದ್ಯದ’ ಕುರಿತು ಪ್ರಶ್ನೆಗಳನ್ನು ಕೇಳಿ.<br><br>ಪುಟ್ಟ ಮಗು ಪುಟ್ಟ ಮಗು ಇಲ್ಲಿ ಬಾ ಬಾ<br>ಗುಟ್ಟನೊಂದ ಹೇಳುವೆ ಓಡಿ ಬಾ ಬಾ<br>ಕೈ ತೊಳೆದು ಊಟ ಮಾಡು ಹಲ್ಲನುಜ್ಜಿ ಮಲಗಿಕೋ ಇದೇಗುಟ್ಟು ಅರಿತುಕೋ<br>ಬಾಳ ಹಸನು ಮಾಡಿಕೊ<br>ರಲ್ಲಿ ಉಲ್ಲೇಖಿಸಲಾದ ಹಾಡನ್ನು ಹಾಡಿಸಿ ಈ ಕೆಳಕಂಡ ರೀತಿಯ ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಉತ್ತರವನ್ನು ಪಡೆಯುವುದು.<br><br>ಮಕ್ಕಳಿಗೆ ಕೇಳಬಹುದಾದ ಪ್ರಶ್ನೆಗಳು:<br>1. ಊಟದ ಮೊದಲುಯಾಕೆ ಕೈ ತೊಳೆಯ ಬೇಕು?<br>2. ದಿನಕ್ಕೆ ಎಷ್ಟು ಬಾರಿ ಹಲ್ಲುಜ್ಜ ಬೇಕು?<br>3. ನೀನು ಯಾವಯಾವ ಸಂದರ್ಭದಲ್ಲಿ ಕೈ ತೊಳೆಯುವೆ?<br>4. ದಿನಕ್ಕೆ ಎಷ್ಟು ಬಾರಿ ಕೈ ತೊಳೆದು ಕೊಳ್ಳುವೆ? |
| | **ನನ್ನ ಸಮಯ(Free Indore play)**<br>**(’ನನ್ನ ಸಮಯ’ದಲ್ಲಿ ಮಗು ತನ್ನ ಆದ್ಯತೆಯ** | * ಮಗು ಎಲ್ಲಾ ಮೂಲೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದನ್ನು ಹಾಗೂ ಸೂಕ್ತವಾಗಿ ಪೂರ್ಣಗೊಳಿಸಿರುವುದನ್ನು ಖಚಿತ ಪಡಿಸಿಕೊಳ್ಳುವುದು.<br>* ಅಪೂರ್ಣಗೊಳಿಸಿರುವ ಚಟುವಟಿಕೆಗಳನ್ನು ಮಗು ಪೂರ್ಣಗೊಳಿಸಲು ಸಹಕರಿಸುವುದು.<br>* ಮುಂದಿನ ದಿನಗಳಲ್ಲಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಯಾವ ಮಕ್ಕಳ ಕಡೆಗೆ ಹೆಚ್ಚು |

DRAFT 22.02.22

| | | | |
|---|---|---|---|
| | ಚಟುವಟಿಕೆಯನ್ನು ನಡೆಸುವುದು) | | ಗಮನಹರಿಸಬೇಕೆಂಬ ಬಗ್ಗೆ ಶಿಕ್ಷಕರು ಮಾನಸಿಕವಾಗಿ ಸಿದ್ಧರಾಗುವುದು.<br>* ದಿನದ ಅಂತ್ಯಕ್ಕೆ ಕಲಿಕಾ ಮೂಲೆಗಳಲ್ಲಿ ಮುಂದಿನ ಹಂತಕ್ಕೆ ಹೊಂದಿಸಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | | **ಸಾಮರ್ಥ್ಯ: ವಿನ್ಯಾಸವನ್ನು ಗುರುತಿಸುವುದು ಮತ್ತು ಪೂರ್ಣಗೊಳಿಸುವುದು, ಪರಿಸರದ ಅರಿವು.**<br>**ಚಟುವಟಿಕೆ.: 10 (ಎ) ವಿನ್ಯಾಸವನ್ನು ಅನುಸರಿಸು**<br>**ಉದ್ದೇಶ:– ವಿನ್ಯಾಸವನ್ನು ಪೂರ್ಣಗೊಳೊಸುವುದು.**<br>**ಅಗತ್ಯ ಸಾಮಗ್ರಿಗಳು : ಪೆನ್ಸಿಲ್, ಎರೆಸರ್, ಶಾರ್ಪನರ್ ಇತ್ಯಾದಿ ವಸ್ತುಗಳು. ಸೇಬು, ಸೀಬೆ(ಪೇರಳೆ), ಬಾಳೆಹಣ್ಣು, ಕಿತ್ತಳೆ ಹಣ್ಣುಗಳ ಚಿತ್ರ. ಚೌಕ, ತ್ರಿಭುಜ, ವೃತ್ತ ಇತ್ಯಾದಿ ಆಕೃತಿಗಳ ಕತ್ತರಿಸಿದ ಚಿತ್ರಗಳು.**<br>**ವಿಧಾನ : ಹಣ್ಣುಗಳನ್ನು ತೆಗೆದುಕೊಳ್ಳುವುದು. ಒಂದು ಸಾಲಿನಲ್ಲಿ ಪರ್ಯಾಯವಾಗಿರುವಂತೆ ಜೋಡಿಸುವುದು. ಜೋಡಿಸುವ ಕ್ರಮ ಹೀಗಿರಲಿ. ಬಾಳೆಹಣ್ಣು, ಸೇಬು, ಬಾಳೆಹಣ್ಣು, ಸೇಬು, ಬಾಳೆಹಣ್ಣು, ಸೇಬು ಅಥವಾ ಸೇಬು, ಸೇಬು, ಬಾಳೆಹಣ್ಣು, ಸೇಬು, ಸೇಬು, ಬಾಳೆಹಣ್ಣು. ಮಕ್ಕಳಿಗೆ ಹಣ್ಣುಗಳನ್ನು ಜೋಡಿಸಿರುವ ವಿನ್ಯಾಸವನ್ನು ಗುರುತಿಸಲು ಪ್ರೋತ್ಸಾಹಿಸುವುದು. ಮಕ್ಕಳು ಇದೇ ವಿನ್ಯಾಸವನ್ನು ಅನುಸರಿಸಿ ಹಣ್ಣುಗಳನ್ನು ಜೋಡಿಸಲು ತಿಳಿಸುವುದು. ಹೀಗೆಯೇ ತ್ರಿಕೋನ, ವೃತ್ತ, ಚೌಕದಂತಹ ಆಕೃತಿಗಳನ್ನು ಬಳಸಿ ಸರಳ ಮಾದರಿಯನ್ನು ಅನುಸರಿಸಿ ವಿನ್ಯಾಸ ರಚಿಸಲು ಹೇಳುವುದು. ಹೀಗೆಯೇ ಹೂವುಗಳು, ಎಲೆಗಳು, ಕೊಂಬೆಗಳು, ಬೆಣಚು ಕಲ್ಲುಗಳು, ಬೀಜಗಳನ್ನು ಬಳಸಿ ವಿನ್ಯಾಸ ರೂಪಿಸುವುದು.**<br>**2 ಮತ್ತು 3ನೇ ತರಗತಿಗಳಿಗೆ ಈ ಮೇಲಿನ ಚಟುವಟಿಕೆಯನ್ನು ನಿರ್ವಹಿಸಲು ತಿಳಿಸುವುದು.**<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: I. L. -25 (ತರಗತಿ 1, 2, 3)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ,ಗಣಿತ ಮತ್ತು ವಿಜ್ಞಾನ ಪರಿಕಲ್ಪನೆಯ ಅಭಿವೃದ್ಧಿ.<br>ಚಟುವಟಿಕೆ; 22. ಮರಳು ಮತ್ತು ನೀರಿನ ಆಟ. ಗುರಿ – 1<br>ಉದ್ದೇಶ;<br>• ಸ್ಥೂಲ ಮತ್ತು ಸೂಕ್ಷ್ಮ ಸ್ನಾಯುಗಳ ಬೆಳವಣಿಗೆಗೆ ಸಹಾಯಕಾರಿಯಾಗುತ್ತದೆ.<br>• ಅಚ್ಚಿನಿಂದ ಮಾದರಿಗಳನ್ನು ತಯಾರಿಸುವಾಗ ಗಣಿತ/ವಿಜ್ಞಾನದ ಪರಿಕಲ್ಪನೆಯನ್ನು ಬೆಳೆಸಿಕೊಳ್ಳುವಲ್ಲಿ ಸಹಕಾರಿಯಾಗುತ್ತದೆ.<br>• ನಿರ್ಮಾಣಶಕ್ತಿ ಮತ್ತು ಕಲ್ಪನಾಶಕ್ತಿಯ ವಿಕಾಸವಾಗುತ್ತದೆ<br><br>ಸಾಮಗ್ರಿಗಳು : ಮರಳು, ನೀರು ಆಟಿಕೆಗಳು ಮತ್ತು ಅಚ್ಚು.<br>ವಿಧಾನ : ಸುಗಮಕಾರರು ಮಕ್ಕಳನ್ನು ಮರಳಿನ ರಾಶಿಯ ಬಳಿ ಕರೆದುಕೊಂಡು ಹೋಗುವುದು.ಮರಳಿನಲ್ಲಿ ಆಟವಾಡಲು ಮಕ್ಕಳಿಗೆ ಪ್ರೋತ್ಸಾಹಿಸುವುದು. ಹೀಗೆ ಎರಡು ವಾರಗಳಿಗೆ ಒಮ್ಮೆಯಾದರೂ ಸುಗಮಕಾರರು ಮಕ್ಕಳಿಗೆ ಮರಳು ಮತ್ತು ನೀರಿನ ಆಟವನ್ನು ಆಡಿಸಬೇಕು.ಆಟವಾಡಲು ಅಗತ್ಯವಾದ ಅಚ್ಚುಗಳನ್ನು ಹೊಂದಿಸಿ ಇಟ್ಟುಕೊಳ್ಳಬೇಕು . ಮಕ್ಕಳು ಅಚ್ಚುಗಳ ಒಳಗೆ ನೀರು ಮಿಶ್ರಿತ ಮರಳನ್ನು ತುಂಬುವುದು ಮತ್ತು ಅದನ್ನು ಖಾಲಿ ಮಾಡುವುದು. ಇದರಿಂದ ತುಂಬ–ಖಾಲಿ, ಹೆಚ್ಚು –ಕಡಿಮೆ ಮುಂತಾದ ಪರಿಕಲ್ಪನೆಗಳ ವಿಕಾಸ ಹೊಂದಲು ಸಾಧ್ಯವಾಗುತ್ತದೆ.<br>ವಿವರ;2 ಮತ್ತು 3 ನೇ ತರಗತಿಯವರು ಹೆಚ್ಚು ಮತ್ತು ಕಡಿಮೆಗೆ ಸಂಭಂದಿಸಿದಂತೆ ವಿವಿಧ ಅಚ್ಚುಗಳಿಂದ ಗುಂಪು ಮಾಡುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಪದ ಸಂಪತ್ತಿನ ಅಭಿವೃದ್ಧಿ, ಚಾಲನಾ ಕೌಶಲಗಳ ಅಭಿವೃದ್ಧಿ.**<br>**ಚಟುವಟಿಕೆ: 15 ಪ್ರಾಸ ಪದಗಳನ್ನು ಆಲಿಸುವುದು (ಗುರಿ–02) ECL-4 ( 32 ನೇ ದಿನದಿಂದ ಮುಂದುವರೆದಿದೆ)**<br>**ಉದ್ದೇಶಗಳು:**<br>*** ಧ್ವನಿ ವಿಜ್ಞಾನದ ಅರಿವನ್ನು ಹೊಂದುವಂತೆ ಮಾಡುವುದು.** |

DRAFT 2022

| | | | |
|---|---|---|---|
| | | | * ಪ್ರಾಸಪದಗಳ ಮೂಲಕ ಪದಸಂಪತ್ತನ್ನು ಹೆಚ್ಚಿಸುವುದು.<br>* ಸ್ಥೂಲ ಹಾಗೂ ಸೂಕ್ಷ್ಮ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು:– ಕರಿ ಹಲಗೆ, ಸೀಮೆ ಸುಣ್ಣ<br>ವಿಧಾನ:<br>* ಪ್ರಾಸ ಪ್ರಾಸಪದಗಳ ವಿವಿಧ ಗುಂಪುಗಳನ್ನು. ಸಿದ್ಧಪಡಿಸಿಕೊಳ್ಳುವುದು.<br>* ಮಕ್ಕಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೆ ಒಂದೊಂದು ಪ್ರಾಸ ಪದಗಳ ಗುಂಪನ್ನು ನೀಡುವುದು.<br>* ಪ್ರಾಸ ಪದಗಳನ್ನು ಒಳಗೊಂಡಂತೆ ಶಿಕ್ಷಕರ ಸಹಾಯದಿಂದ ವಿವಿಧ ವಾಕ್ಯಗಳನ್ನು ರಚಿಸುವುದು.<br>ತರಗತಿವಾರು ವಿವರ: 2 ನೇ ತರಗತಿ ಮಕ್ಕಳು ಪ್ರಾಸ ಪದಗಳ ಗುಂಪಿನ ಪದಗಳಿಂದ ಸ್ವತಂತ್ರವಾಗಿ ವಾಕ್ಯಗಳನ್ನು ರಚಿಸುವುದು.. 3 ನೇ ತರಗತಿ ಮಕ್ಕಳು ಪ್ರಾಸ ಪದಗಳ ಗುಂಪಿನ ಪದಗಳಿಂದ ಸ್ವತಂತ್ರವಾಗಿ ವಾಕ್ಯಗಳನ್ನು ರಚಿಸುವುದು.. (44 ನೇ ದಿನಕ್ಕೆ ಮುಂದುವರೆದಿದೆ) |
| | | ಅರ್ಥಗ್ರಹಿಕೆಯೊಂದಿಗಿನ ಓದು | **ಸಾಮರ್ಥ್ಯ: ಪದ ಸಂಪತ್ತಿನ ಅಭಿವೃದ್ಧಿ, ಸ್ವಯಂ ಅಭಿವ್ಯಕ್ತಿ, ನಟನಾ ಓದು.**<br>**ಚಟುವಟಿಕೆ 1: ಚಿತ್ರ ಓದು (ಗುರಿ–2)**<br>**ಉದ್ದೇಶ: ವಿವಿಧ ಘಟನೆ/ಸನ್ನಿವೇಶಗಳ ಚಿತ್ರಗಳನ್ನು ನೋಡುವುದರ ಮೂಲಕ ಘಟನೆಗಳನ್ನು ಅರ್ಥಮಾಡಿಕೊಳ್ಳುವುದು.**<br>ಅಗತ್ಯ ಸಾಮಾಗ್ರಿಗಳು: ವಿವಿಧ ಘಟನೆ/ ಸ್ಥಳ/ ಜಾತ್ರೆ/ ಮೇಳಗಳ ಚಿತ್ರಗಳು/ ಉದ್ಯಾನವನ/ ಪೇಟೆ/ ಶಾಲೆ/ ಪ್ರಾಣಿ ಸಂಗ್ರಹಾಲಯ/ ಹಬ್ಬ / ಜಾತ್ರೆಯ ಇತ್ಯಾದಿಗಳ ಚಿತ್ರಗಳು<br>ವಿಧಾನ: ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸುವುದು ಶಿಕ್ಷಕರು ವಿವಿಧ ದಿನ ಪತ್ರಿಕೆ, ಪುಸ್ತಕ, ನಿಯತ ಕಾಲಿಕೆ ಮುಂತಾದವುಗಳಲ್ಲಿಯ ಚಿತ್ರಗಳನ್ನು ವೀಕ್ಷಿಸಲು ತಿಳಿಸುವುದು ಅವುಗಳಲ್ಲಿ ಒಂದು ಸನ್ನಿವೇಶ/ಘಟನೆಯ ಚಿತ್ರವನ್ನು ಆಯ್ಕೆ ಮಾಡಿಕೊಂಡು ಶಿಕ್ಷಕರು ಆಸನ್ನಿವೇಶದ ವಿವರಣೆಯನ್ನು ನೀಡುವುದು.<br>2ಮತ್ತು 3ನೇ ತರಗತಿಗೆ: ಶಿಕ್ಷಕರು ಸನ್ನಿವೇಶದ ಕುರಿತು ವಿವರಣೆ ನೀಡುವಾಗ 2ಮತ್ತು 3ನೇ ತರಗತಿಯ ವಯಸ್ಸು ಮತ್ತು ಅಗತ್ಯತೆಯನ್ನು ಗಮನಿಸುವುದು<br>ವಿಶೇಷ ಸೂಚನೆ: ಇದೆ ಚಟುವಟಿಕೆಯನ್ನು 8ನೇ ವಾರದ 44ನೇ ದಿನದಂದು ಮುಂದುವರೆದಿದೆ |
| | | ಉದ್ದೇಶಿತ ಬರಹ | ಸಾಮರ್ಥ್ಯ : ಬರವಣಿಗೆ ಕೌಶಲಗಳ ಅಭ್ಯಾಸ, ಪದಸಂಪತ್ತಿನ ಅಭಿವೃದ್ಧಿ, ಕೈ ಕಣ್ಣು ಸಂಯೋಜನೆ, ಸೃಜನ ಶೀಲತೆ.<br>ಚಟುವಟಿಕೆ ಹೆಸರು : 34 ಪುಸ್ತಕ ರಚನೆ (ಗುರಿ : 2) **ECW-9** ( 32 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>• ಮಕ್ಕಳ ಹಸ್ತಪತ್ರಿಕೆಯನ್ನು ಸಿದ್ಧಪಡಿಸುವುದು.<br>• ಮಕ್ಕಳ ಇಷ್ಟದ ಚಿತ್ರಗಳನ್ನು ಸಂಗ್ರಹಿಸಿ ಪುಸ್ತಕ ತಯಾರಿಸುವುದು.<br>• ಚಿತ್ರಗಳನ್ನು ಬಿಡಿಸುವ ಮತ್ತು ಸಂಗ್ರಹಿಸುವ ಹವ್ಯಾಸ ಬೆಳೆಸುವುದು.<br>ಅಗತ್ಯ ಸಾಮಗ್ರಿಗಳು: ಹಾಳೆಗಳು, ಬಣ್ಣಗಳು, ಚಾರ್ಟ್ ಪೇಪರ್<br>ವಿಧಾನ: ಶಿಕ್ಷಕರು . 2 ಎ4 ಅಳತೆಯ ಹಾಳೆಗಳನ್ನು ಮಡಚಿ ಪಿನ್ ಮಾಡುವ ಮೂಲಕ ಪ್ರತಿ ಮಗುವಿಗೂ ತನ್ನದೇ ಆದ ಪುಟ್ಟ ನೋಟ್‌ಪುಸ್ತಕವನ್ನು ಒದಗಿಸುವುದು. ಇದರಲ್ಲಿ ಮಕ್ಕಳು ಸೂಚಿತ ವಿಷಯದ ಬಗ್ಗೆ ಚಿತ್ರ ಬಿಡಿಸಲು ಅಥವಾ ಬರೆಯಲು ತಿಳಿಸುವುದು.<br>ಸಲಹಾತ್ಮಕ ವಿಷಯ: ನನ್ನ ಆಟಿಕೆಗಳು<br>ತರಗತಿವಾರು ವಿವರ: 2 ಹಾಗೂ 3ನೇ ತರಗತಿಯ ಮಕ್ಕಳು ವೈಯಕ್ತಿಕ ನೋಟ್‌ಪುಸ್ತಕವನ್ನು ರಚಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು. | |

DRAFT 2022

| | | |
|---|---|---|
| | | **ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.** |
| | **ಹೊರಾಂಗಣ ಆಟಗಳು** | ಚಟುವಟಿಕೆ –19 ಜಿಗಿಯುವುದು, ಕುಪ್ಪಳಿಸುವುದು, ತಿರುಗುವುದು<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ವಿನ್ಯಾಸದ ಅರಿವು, ದೇಹದ ಸಮತೋಲನ ,ಕಾಲುಗಳ ಹೊಂದಾಣಿಕೆ<br>ಬೇಕಾಗುವ ಸಾಮಗ್ರಿ: ––––––<br>ವಿಧಾನ:<br>• ನೆಲದ ಮೇಲೆ ಗೆರೆಯನ್ನು ಎಳೆಯುವುದು.<br>• ಮಕ್ಕಳು ಗೆರೆಯ ಮೇಲೆ ಜಿಗಿಯುತಾ ಹೋಗಲು ಸೂಚಿಸುವುದು.<br>**ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೂ ಇದೆ ಚಟುವಟಿಕೆ ಮುಂದುವರೆಸುವುದು** |
| | **ಕಥಾ ಸಮಯ** | ಮೊದಲ ದಿನದಉದ್ದೇಶದಂತೆಕಥಾ ಸಮಯವು ಮುಂದುವರೆಯುತ್ತದೆ.<br>***ಕಥಾ ಸಾಹಿತ್ಯ***<br>ಶಿಕ್ಷಕರು ಕಥೆಯನ್ನು ನಿರೂಪಿಸುವುದು ... ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು<br>ಉದಾ :ಇದಾದ ಮೇಲೆ ಏನಾಗಿತ್ತು? ನಂತರಯಾರು ಬಂದರು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ಪ್ರಾಣಿಗಳ ಸಭೆಯನ್ನು ಕರೆದು ನರಿಯು ಏನು ಹೇಳಿತು?**<br>• **ಪ್ರಾಣಿಗಳು ನರಿಯ ಮಾತನ್ನು ನಂಬಲು ಕಾರಣವೇನು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು)<br>• ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲ<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–7** **ದಿನ–39 (ಬುಧವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| **39** | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1**<br>ಸಾಮಗ್ರಿಗಳು: ಪಕ್ಷಿಗಳ ಚಿತ್ರಗಳು/ ಆಟಿಕೆಗಳು<br>ವಿಧಾನ:<br>• ಮಕ್ಕಳನ್ನು ತರಗತಿಯ ಹೊರಗೆ ಒಂದು ಸಾಲಿನಲ್ಲಿ ನಿಲ್ಲುವಂತೆ ಮಾಡಿ. (ಸುರಕ್ಷತಾ ಕ್ರಮಗಳನ್ನು ಗಮನಿಸಿ)<br>• ಪಕ್ಷಿ ಗಳ ಚಿತ್ರಗಳನ್ನು ಒಂದೊಂದಾಗಿ ತೋರಿಸಿ. (ಶಿಕ್ಷಕರು ತರಗತಿಯ ಬಾಗಿಲಲ್ಲಿ ನಿಲ್ಲಬೇಕು. ) ಚಿತ್ರ ನೋಡಿ ಆ ಪಕ್ಷಿ ಯ ಹೆಸರು ಮತ್ತು ಕೂಗುವ ರೀತಿಯಲ್ಲಿ ತರಗತಿ ಪ್ರವೇಶಿಸಲು ಸೂಚಿಸುವುದು ಉದಾಹರಣೆಗೆ: ನಾನು ನವಿಲು. |

DRAFT 2022

| | | |
|---|---|---|
| | | • ತರಗತಿ ಪ್ರವೇಶಿಸಿದ ನಂತರ ವೃತ್ತಾಕಾರವಾಗಿ ನಿಲ್ಲುವಂತೆ ಸೂಚನೆ.<br>• ಮಕ್ಕಳು ತರಗತಿಯನ್ನು ಪ್ರವೇಶಿಸುವಾಗ ಶಿಕ್ಷಕರು ಮಕ್ಕಳಿಗೆ" " ನಮಸ್ತೆ, ಗುಡ್ ಮಾರ್ನಿಂಗ್" ಎಂದು ಗ್ರೀಟ್ ಮಾಡುವುದು.<br>• ಮಕ್ಕಳನ್ನು ಕೇಳಿ, "ಇಂದು ಯಾವ ದಿನ?" ಮತ್ತು "ಇಂದು ...................." ಎಂದು ಹೇಳುವ ಮೂಲಕ ಮಕ್ಕಳನ್ನು ಪ್ರತಿಕ್ರಿಯಿಸುವಂತೆ ಮಾಡಿ.<br>• ಹವಾಮಾನ ನಕ್ಷೆಯ ಚಟುವಟಿಕೆ ಮಾಡಿಸುವುದು .<br>•<br>**ಚಟುವಟಿಕೆ 2:** TPR<br>• ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಮಾಡಿ ಮತ್ತು ಸೂಚನೆಗಳನ್ನು ಕೇಳಲು ಮತ್ತು ಅನುಸರಿಸಲು ಅವರಿಗೆ ತಿಳಿಸಿ.<br>• ಸರಳ TPR ಸೂಚನೆಗಳನ್ನು ಕೊಡಿ<br>• ಉದಾ : ಹಕ್ಕಿಯ ಹಾಗೆ ಹಾರು<br>• ಮೊಲದ ಹಾಗೆ ಜಿಗಿ<br>• ಕಪ್ಪೆಯ ಹಾಗೆ ಕುಪ್ಪಳಿಸು |
| | **ಮಾತು ಕತೆ**<br>***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | **ಚಟುವಟಿಕೆ : Sneeze and cough**<br>• ಅಗತ್ಯವಿರುವ ಸಾಮಗ್ರಿಗಳು: ಹ್ಯಾಂಡ್ ಕರ್ಚೀಫ್, ಸ್ಯಾನಿಟೈಸರ್.<br>ವಿಧಾನ:<br>• ಮಕ್ಕಳನ್ನು ವೃತ್ತದಲ್ಲಿ ನಿಲ್ಲುವಂತೆ ಮಾಡಿ .<br>• ಸೀನುವಾಗ ಕರವಸ್ತ್ರವನ್ನು ಹೇಗೆ ಬಳಸಬೇಕೆಂದು ತಿಳಿಸಿ.<br>• ಅದನ್ನು ಅನುಕರಿಸಲು ಮಕ್ಕಳನ್ನು ಹೇಳಿ.<br>• ಈಗ ಕೈ ಹಿಡಿದುಕೊಂಡು ಕೆಮ್ಮುವುದು ಹೇಗೆ ಎಂದು ತೋರಿಸಿ ಮತ್ತು ಅದನ್ನು ಅನುಕರಿಸಲು ಮಕ್ಕಳಿಗೆ ಹೇಳಿ.<br>• ಸ್ಯಾನಿಟೈಸರ್ ಬಳಕೆಯ ಬಗ್ಗೆ ಕೇಳಿ ಮತ್ತು ವಿವರಿಸಿ<br>• ಮಕ್ಕಳು ಈ ಕ್ರಿಯೆಗಳನ್ನು ಬಳಸಲು ಕಲಿಯುವವರೆಗೆ ಮತ್ತೆ ಹಂತಗಳನ್ನು ಪುನರಾವರ್ತಿಸಿ.<br><br>ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ.ಮಕ್ಕಳನ್ನು ಗುಂಪು ಚರ್ಚೆ ಒಳಗೊಳ್ಳುವಂತೆ ಸರಳವಾದ ಪ್ರಶ್ನೆಗಳನ್ನು ಕೇಳು<br>• ನಾವು ಯಾವಾಗ ಸೀನುತ್ತೇವೆ?<br>• ಸೀನಲು ನಾವು ಏನು ಬಳಸಬೇಕು?<br>• ಇತರರ ಮುಂದೆ ಸೀನಿದರೆ ಏನಾಗುತ್ತದೆ?<br>• ನಾವು ಹೇಗೆ ಕೆಮ್ಮಬೇಕು?<br>• ಮಾಸ್ಕ್ ಬಳಸುವುದರ ಮುಖ್ಯ ಉದ್ದೇಶವೇನು? ಇತ್ಯಾದಿ.<br>ಎಲ್ಲಾ ಮಕ್ಕಳು ಗುಂಪು ರ್ಚೆಯಲ್ಲಿ ಭಾಗವಹಿಸುವುದನ್ನು ಶಿಕ್ಷಕರು ಖಚಿತಪಡಿಸಿಕೊಳ್ಳಬೇಕು |
| | **ನನ್ನ ಸಮಯ(Free Indore play)**<br>('ನನ್ನ ಸಮಯ'ದಲ್ಲಿ ಮಗು ತನ್ನ | ದಿನ – 39<br>**ಕಲಿಕಾ ಸಿದ್ಧತಾ ಭಾಗವಾಗಿ 8 ಮೂಲೆಗಳಲ್ಲಿ ಮೊದಲ ಹಂತದಲ್ಲಿ ನಿಗದಿಪಡಿಸಿರುವ ಮೂಲೆವಾರು ಚಟುವಟಿಕೆಗಳ ಬಗ್ಗೆ ಹಾಗೂ ಆಯಾ ಮೂಲೆಗಳ ಸಾಮಗ್ರಿಗಳನ್ನು ಬಳಸುವ ಬಗ್ಗೆ ಶಿಕ್ಷಕರು ಮಕ್ಕಳಿಗೆ ಪರಿಚಯ ಒದಗಿಸುವರು. ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತ ಅವರ ಅರ್ಥೈಸಿಕೊಳ್ಳುವಿಕೆಯನ್ನು ಖಾತ್ರಿ ಪಡಿಸಿಕೊಳ್ಳುತ್ತಾರೆ.**<br>**(* ಮೂಲೆವಾರು ಸಲಹಾತ್ಮಕ ಚಟುವಟಿಕೆಗಳನ್ನು ನೀಡಿದ್ದು, ಸಾಮರ್ಥ್ಯಗಳನ್ನು ಸಾಧಿಸಲು ಅನುಕೂಲವಾಗುವಂತೆ ಮಕ್ಕಳಿಗೆ ಹೆಚ್ಚುವರಿ ಚಟುವಟಿಕೆಗಳನ್ನು ಯೋಜಿಸಬಹುದಾಗಿದೆ.)** |

DRAFT 22.02.22

ಆದ್ಯತೆಯ ಚಟುವಟಿಕೆಯನ್ನು ನಡೆಸುವುದು)

****************************************************************************

**ಮೂಲೆ – ಬಿಲ್ಡಿಂಗ್ ಬ್ಲಾಕ್ಸ್ ಮೂಲೆ:–**

**ಸಾಮರ್ಥ್ಯ: ಕಣ್ಣು ಮತ್ತು ಕೈಗಳ ಸಂಯೋಜನೆಯನ್ನು ಸಾಧಿಸುವುದು.**

ಚಟುವಟಿಕೆ: "ಗೆರೆ ಮೇಲೆ ಜೋಡಿಸು"

ಉದ್ದೇಶ :ವಸ್ತುಗಳನ್ನು ನಿರ್ದಿಷ್ಟವಾಗಿ ಜೋಡಿಸುವ ಕೌಶಲ್ಯ ಬೆಳೆಸುವುದು, ಏಕಾಗ್ರತೆ,ಸೌಂದರ್ಯಪ್ರಜ್ಞೆ ಹಾಗೂ ಆತ್ಮವಿಶ್ವಾಸ ಬೆಳೆಸುವುದು.

ಸಾಮಗ್ರಿಗಳು: ಬೀಜ, ಹರಳು,ಬ್ಲಾಕ್ ಗಳು

ವಿಧಾನ : ಶಿಕ್ಷಕರು ನೆಲದ ಮೇಲೆ ಸರಳ/ವಕ್ರ ರೇಖೆಗಳನ್ನು ಸೀಮೆಸುಣ್ಣದಿಂದ ಎಳೆಯುವರು, ಆ ಗೆರೆಗಳ ಮೇಲೆ ಬೀಜ, ಹರಳು,ಬ್ಲಾಕ್ ಗಳನ್ನು ಅನುಕ್ರಮವಾಗಿ ಜೋಡಿಸುವುದು.

2 & 3 ನೇ ತರಗತಿ:

ಮಕ್ಕಳೇ ನೆಲದ ಮೇಲೆ ಸೀಮೆಸುಣ್ಣದಿಂದ ಆಕೃತಿಗಳನ್ನು ಬರೆದು ಗೆರೆಗಳ ಮೇಲೆ ಬೀಜ, ಹರಳು,ಬ್ಲಾಕ್ ಗಳನ್ನು ಅನುಕ್ರಮವಾಗಿ ಜೋಡಿಸುವುದು.

****************************************************************************

**ಮೂಲೆ – ಗಣಿತ ಮೂಲೆ:–**

**ಸಾಮರ್ಥ್ಯ: ವಸ್ತುಗಳ ಗಾತ್ರ, ಎತ್ತರ–ಗಿಡ್ಡ, ಭಾರ–ಹಗುರ, ಆಧಾರದ ಮೇಲೆ ವರ್ಗೀಕರಿಸುವುದು ಹಾಗೂ ಸಾಂಕೇತಿಕವಾಗಿ ಸಂಖ್ಯೆಗಳ ಹೋಲಿಕೆ ಮಾಡುವುದು.**

ಉದ್ದೇಶ : ವಸ್ತು/ಬ್ಲಾಕ್ ಗಳನ್ನು ಎತ್ತರ/ಗಿಡ್ಡ ಆಧಾರವಾಗಿ ವರ್ಗೀಕರಿಸುವುದು.

ಸಾಮಗ್ರಿಗಳು: ಬ್ಲಾಕ್ ಗಳು, ಖಾಲಿ ಬೆಂಕಿ ಪೊಟ್ಟಣ/ಸೋಪ್ ಬಾಕ್ಸ್/ಟೂಥ್ ಪೇಸ್ಟ್ ಬಾಕ್ಸ, ಎತ್ತರ/ಗಿಡ್ಡ ಬಿಂಬಿಸುವ ಸಾಮಗ್ರಿಗಳು

ವಿಧಾನ : (ವಿ.ಪ್ರ)

* ಲಭ್ಯ ಬ್ಲಾಕ್/ ಸಾಮಗ್ರಿಗಳಲ್ಲಿ ವಸ್ತುಗಳ ಎತ್ತರ ಗಿಡ್ಡವನ್ನು ಆಧರಿಸಿ ವರ್ಗೀಕರಿಸುವುದು
* ತನಗಿಂತ ಎತ್ತರವಾದ ಹಾಗೂ ಗಿಡ್ಡವಿರುವ ವಸ್ತುಗಳನ್ನು ಹೆಸರಿಸುವುದು.

(2&3 ನೇ ತರಗತಿ)

*ಪರಿಸರದಲ್ಲಿ ಕಾಣಸಿಗುವ ಎತ್ತರ/ಗಿಡ್ಡವಾದ ಮರ, ಮನೆ, ಪ್ರಾಣಿ ಇತ್ಯಾದಿಗಳನ್ನು ಹೆಸರಿಸುವುದು

****************************************************************************

**ಅನ್ವೇಷಣೆ ಅಥವಾ ವಿಜ್ಞಾನ ಮೂಲೆ:**

**ಸಾಮರ್ಥ್ಯ: ವೈಜ್ಞಾನಿಕ, ಅನ್ವೇಷಣಾ ಮನೋಭಾವ ಹಾಗೂ ಚಿಂತನಾ ಮನೋಭಾವಗಳನ್ನು ಬೆಳೆಸುವುದು.**



ಚಟುವಟಿಕೆ: ತೇಲು – ಮುಳುಗು (ಗುರಿ – 3)

ಉದ್ದೇಶ : ತೇಲುವ ಹಾಗೂ ಮುಳುಗುವ ವಸ್ತುಗಳ ವರ್ಗೀಕರಣ

ಸಾಮಗ್ರಿ :– ನೀರು, ಟಬ್, ಪ್ಲಾಸ್ಟಿಕ್ ಚೆಂಡು, ಮುಚ್ಚಳ, ಐಸ್ ಕ್ರೀಂ ಕಡ್ಡಿ, ಮರದ ತುಂಡು, ನಾಣ್ಯ, ತೇಲುವ–ಮುಳುಗುವ ವಸ್ತುಗಳು.

ವಿಧಾನ:

ವಿದ್ಯಾ ಪ್ರವೇಶ (ವಿ.ಪ್ರ):

ಮಕ್ಕಳು ಟಬ್ ನ ನೀರಿನಲ್ಲಿ ವಸ್ತುಗಳನ್ನು ಹಾಕುವ ಮೂಲಕ ಯಾವ ವಸ್ತುಗಳು ತೇಲುತ್ತವೆ ಮುಳುಗುತ್ತವೆ ಎಮಬ ಆಧಾರದ ಮೇಲೆ ಅವುಗಳನ್ನು 2 ಗುಂಪುಗಳಾಗಿ ವಿಂಗಡಿಸುತ್ತಾನೆ.

**2 & 3 ನೇ ತರಗತಿ :**

ಮೇಲಿನ ಚಟುವಟಿಕೆಗಳ ಜೊತೆಗೆ ತನ್ನ ಅನುಭವಕ್ಕೆ ಬಂದಿರುವ ವಸ್ತು ಗಳನ್ನು ( ತೇಲುವ/ಮುಳುಗುವ) ಹೆಸರಿಸುತ್ತಾನೆ.

****************************************************************************

**ಗೊಂಬೆಗಳ ಮೂಲೆ :**

**ಸಾಮರ್ಥ್ಯ: ಸೌಂದರ್ಯೋಪಾಸನೆ, ವೈಯಕಿಕ ಸ್ವಚ್ಛತೆ, ಅಭಿವ್ಯಕ್ತಿ ಕೌಶಲ್ಯ ಬೆಳೆಸುವುದು.**

DRAFT 22.02.22

ಚಟುವಟಿಕೆ: ನೋಡು ನನ್ನ ಗೊಂಬೆ

ಉದ್ದೇಶ: ನಿರ್ದಿಷ್ಟ ವಿಷಯದ ಕುರಿತು ಅಭಿವ್ಯಕ್ತಿ ಬೆಳೆಸುವುದು.

ಸಾಮಗ್ರಿ :– ಹಸು, ಹುಲಿ, ಆನೆ, ನವಿಲು, ಕೋಳಿ, ಪಾರಿವಾಳ, ಹಾಗೂ ಇತರೆ ಪ್ರಾಣಿ–ಪಕ್ಷಿಗಳ ಗೊಂಬೆಗಳು.

ವಿಧಾನ:

ವಿದ್ಯಾ ಪ್ರವೇಶ (ವಿ.ಪ್ರ):

ಮೂಲೆಯಲ್ಲಿ ಲಭ್ಯವಿರುವ ಗೊಂಬೆಗಳಲ್ಲಿ ತಾನೇ 2–3 ಗೊಂಬೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ.

ಆಯ್ಕೆ ಮಾಡಿಕೊಂಡ ಗೊಂಬೆಗಳ ಬಗ್ಗೆ 2–3 ವಾಕ್ಯಗಳನ್ನು ಹೇಳುವನು.

**2 ನೇ & 3 ನೇ ತರಗತಿ:–**

ಮೂಲೆಯಲ್ಲಿ ಲಭ್ಯವಿರುವ ಗೊಂಬೆಗಳಲ್ಲಿ ತಾನೇ ತನ್ನ ಸ್ನೇಹಿತನ ಜೊತೆಗೂಡಿ ಗೊಂಬೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ತಮ್ಮ ತಮ್ಮ ಗೊಂಬೆಗಳ ಬಗ್ಗೆ ಇಬ್ಬರೂ ಮಾತುಗಳನ್ನು ಆಡುತ್ತಾರೆ.

**************************************************************************

**ಓದುವ / ತರಗತಿ ಗ್ರಂಥಾಲಯ ಮೂಲೆ :**

**ಸಾಮರ್ಥ್ಯ: ಚಿತ್ರಗಳನ್ನು ಓದುವುದರೊಂದಿಗೆ ಅರ್ಥೈಸಿಕೊಳ್ಳುವುದು, ಕಲ್ಪನಾಶಕ್ತಿ, ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸುವುದು.**

ಚಟುವಟಿಕೆ: ಚಿತ್ರ ಓದು (ಗುರಿ – 1)

ಉದ್ದೇಶ : * ಚಿತ್ರ ಗುರುತಿಸುವುದರೊಂದಿಗೆ ಸ್ಪಷ್ಟವಾಗಿ ಅದರ ಬಗ್ಗೆ ಮಾತನಾಡುತ್ತಾನೆ / ಳೆ.

**(ಕಲಿಕಾ ಫಲ–ಇ.ಸಿ.ಎಲ್. 3.5ಬಿ )**

ಸಾಮಗ್ರಿ :– ಸನ್ನಿವೇಶ ಬಿಂಬಿತ ಚಿತ್ರಗಳು. (ಮನೆ, ಆಸ್ಪತ್ರೆ, ಶಾಲೆ, ಸಹಾಯ ಮಾಡುವಿಕೆ, ಅಪಘಾತ ಸನ್ನಿವೇಶ, ಆರೋಗ್ಯಕರ ಅಭ್ಯಾಸಗಳು)

ವಿದ್ಯಾ ಪ್ರವೇಶ (ವಿ.ಪ್ರ):

ಓದಿನ ಮೂಲೆಯಲ್ಲಿ ಲಭ್ಯವಿರುವ ವಿಭಿನ್ನ ಸನ್ನಿವೇಶಗಳ ಚಿತ್ರ ಕಾರ್ಡ್‌ಗಳನ್ನು ಓದಿ ತನ್ನದೆ ರೀತಿಯಲ್ಲಿ ವಿವರಿಸುತ್ತಾನೆ.

**2 ನೇ & 3 ನೇ ತರಗತಿ :**

ಸನ್ನಿವೇಶ ಆಧಾರಿತ ಚಿತ್ರಗಳ ಮೇಲೆ ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವರು.

- ನಿಮ್ಮ ಮನೆಯಲ್ಲಿ ನಿನಗೆ ಇಷ್ಟವಾದ ಸದಸ್ಯರು ಯಾರು?
- ಆಸ್ಪತ್ರೆಯಲ್ಲಿ ನೀನು ನೋಡಬಹುದಾದ ವಸ್ತು/ವ್ಯಕ್ತಿಗಳನ್ನು ಹೆಸರಿಸು?

*********************************************************************

**ಕಲೆಗೊಂದು ನೆಲೆ/ಕರಕುಶಲ ಮೂಲೆ:**

**ಸಾಮರ್ಥ್ಯ: ಸೂಕ್ಷ್ಮ ಸ್ನಾಯು ಬೆಳವಣಿಗೆಯೊಂದಿಗೆ ಸೌಂದರ್ಯೋಪಾಸನೆ, ಸೃಜನಶೀಲತೆಯನ್ನು ಬೆಳೆಸುವುದು.**



ಚಟುವಟಿಕೆ: ಟೋಪಿ ಬೇಕಾ ಟೋಪಿ (ಟೋಪಿ ತಯಾರಿಕೆ)

ಉದ್ದೇಶ : * ನೀಡಲಾದ ಮಾರ್ಗದರ್ಶನವನ್ನು ಅರ್ಥೈಸಿಕೊಂಡು ಕಾರ್ಯೋನ್ಮುಖನಾಗುವುದು.

ಸಾಮಗ್ರಿ :– ನಿಯತ ಕಾಲಿಕೆಗಳ – ಪತ್ರಿಕೆಗಳ ಪುಟಗಳು, ಬಣ್ಣದ ಹಾಳೆಗಳು

ವಿದ್ಯಾ ಪ್ರವೇಶ (ವಿ.ಪ್ರ):**2 ನೇ & 3 ನೇ ತರಗತಿ :**

ಮೊದಲಿಗೆ ಪತ್ರಿಕೆ ಪುಟಗಳನ್ನು ತೆಗೆದುಕೊಂಡು ಪೊಟ್ಟಣದ ರೀತಿಯಲ್ಲಿ ಮಡಚುವ ಅಭ್ಯಾಸ ಮಾಡಿಸುವುದು. ಮಕ್ಕಳು ಪೊಟ್ಟಣ ಕಟ್ಟುವುದನ್ನು ಕಲಿತಿರುವುದನ್ನು ಖಚಿತ ಪಡಿಸಿಕೊಂಡ ನಂತರ ಬಣ್ಣದ ಕಾಗದ ನೀಡಿ ಟೋಪಿ ತಯಾರಿಕೆ ಮಾಡಿಸುವುದು.

***********************************************************************

**ಬರೆಯುವ ಮೂಲೆ :**

**ಸಾಮರ್ಥ್ಯ : ಬರವಣಿಗೆ ಸಿದ್ಧತಾ ಅಭ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಅಕ್ಷರಗಳ ವಿನ್ಯಾಸವನ್ನು ರಚಿಸುವುದು.**


ಚಟುವಟಿಕೆ: ಗೆರೆಗಳನ್ನು ರಚಿಸು

| | | |
|---|---|---|
| | | ಉದ್ದೇಶ : ಬರವಣಿಗೆ ಪೂರ್ವ ಸಿದ್ಧತೆಗಾಗಿ ವಿವಿಧ ರೀತಿಯಲ್ಲಿ ರೇಖೆಗಳನ್ನು ರಚಿಸುವುದು.<br>ಸಾಮಗ್ರಿ :– ಪೇಪರ್, ಪೆನ್ಸಿಲ್, ಎರೈಸರ್, ಸ್ಕೇಲ್<br>ವಿದ್ಯಾ ಪ್ರವೇಶ (ವಿ.ಪ್ರ):**2 ನೇ & 3 ನೇ ತರಗತಿ :**<br>ಮಕ್ಕಳಿಗೆ ಶಿಕ್ಷಕರು ತಾವು ನೀಡುವ ವಿವರಣೆಯನ್ನು ಸ್ಪಷ್ಟವಾಗಿ ಕೇಳಿಸಿಕೊಳ್ಳುವಂತೆ ತಿಳಿಸುವುದು.<br>ಚೆಂಡನ್ನು ಗೋಡೆಗೆ ಎಸೆದಾಗ, ಹಾವು ನೆಲದ ಮೇಲೆ ಹರಿಯುವುದು, ವಿಮಾನ ಹಾರುವುದು, ಹೂವಿನಿಂದ ಹೂವಿಗೆ ಹಾರುವ ಚಿಟ್ಟೆ ಈ ರೀತಿಯ ಸಂದರ್ಭಗಳ ವಿವರಣೆಗೆ ಹೋಲುವ ರೇಖೆಗಳನ್ನು ಎಳೆಯುವಂತೆ ಮಕ್ಕಳಿಗೆ ತಿಳಿಸಿ, ಮಕ್ಕಳ ಚಟುವಟಿಕೆ ನಿರ್ವಹಣೆ ಬಗ್ಗೆ ಗಮನಿಸುವುದು. ಮಕ್ಕಳು ರೇಖೆಗಳನ್ನು ರಚಿಸುವ ಮೊದಲು ಒಂದೆರಡು ಬಾರಿ ಈ ರೇಖೆಗಳ ರಚನೆಯನ್ನು ಶಿಕ್ಷಕರು ಬರೆದು ತೋರಿಸುವುದು.<br>**********************************************************************<br>**ಆಟಿಕೆ / ಮಾಡಿ ನೋಡು ಮೂಲೆ :**<br>**ಸಾಮರ್ಥ್ಯ: ಆಲೋಚನಾಶಕ್ತಿ, ಸೃಜನಶೀಲತೆ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು.**<br>ಚಟುವಟಿಕೆ: “ಚಿತ್ರ ಚಿತ್ತಾರ”<br>ಉದ್ದೇಶ : ಕಲೋಪಾಸನೆಯನ್ನು ಗುರುತಿಸುವುದು ಮತ್ತು ಪ್ರೋತ್ಸಾಹಿಸುವುದು.<br>ಸಾಮಗ್ರಿಗಳು: ಬಿಳಿಹಾಳೆ, ಅಂಟು, ಬಣ್ಣ, ಪೆನ್ಸಿಲ್ ನ್ನು ಶಾರ್ಪನರ್ ನಿಂದ ಹೆರೆದಾಗ ಸಿಗುವ ಕಸದ ತುಂಡುಗಳು<br>ವಿಧಾನ : (ವಿ.ಪ್ರ)<br>ಶಾರ್ಪನರ್ ನಿಂದ ಪೆನ್ಸಿಲ್ ಹೆರೆದಾಗ ಸಿಗುವ ಕಸದ ತುಂಡುಗಳನ್ನು ಹೂವಿನಾಕಾರದಲ್ಲಿ ಜೋಡಿಸಿ ಅಂಟಿಸುವುದು, ಬಣ್ಣ ತುಂಬುವುದು, ತೊಟ್ಟು–ಎಲೆಗಳನ್ನು ಚಿತ್ರಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಹೋಲಿಸುವುದು, ಪರಿಸರ ಅರಿವು, ಬಣ್ಣಗಳ ಕಲ್ಪನೆ, ಆಕಾರ ಮತ್ತು ಗಾತ್ರ.**<br>**ಚಟುವಟಿಕೆ 12 ಎ .“ ಸ್ಪರ್ಶ ಮಾಡು ಎಣಿಸಿ ನೋಡು” (ಗುರಿ –3)**<br>**ಉದ್ದೇಶ:– ಸ್ಪರ್ಶಿಸಿ ಎಣಿಸಿ ಹೇಳುವುದು.**<br>**ಸಾಮಗ್ರಿಗಳು: ಬ್ಲಾಕ್, ಬಳಪ, ಹರಳುಗಳು, ಬಾಟಲ್ ಮುಚ್ಚಳ, ಬಾಲು, ಕಾಳುಗಳು.**<br>**ವಿಧಾನ: ಐದು ಅಥವಾ ಐದಕ್ಕಿಂತ ಹೆಚ್ಚು ವಸ್ತುಗಳನ್ನು ಇರಿಸುವುದು ( ಬ್ಲಾಕ್‌ಗಳು, ಸೀಮೆಸುಣ್ಣ, ಬಾಟಲ್ ಮುಚ್ಚಳ ಬಾಲಗಳು) ಪ್ರತಿಯೊಂದು ವಸ್ತುವನ್ನು ಸ್ಪರ್ಶಿಸಲು ಮತ್ತು ಎಣಿಸಲು ಹೇಳುವುದು. ಗುಣಲಕ್ಷಣಗಳ ಆಧಾರದಲ್ಲಿ ಹೊಂದಿಸುವುದು. ವಿಭಿನ್ನ ರೀತಿಯ ವಸ್ತುಗಳನ್ನು ನೀಡಿ ಒಂದಕ್ಕಿಂತ ಒಂದು ಹೇಗೆ ಭಿನ್ನವಾಗಿವೆ ಎಂಬುದನ್ನು ತಿಳಿಸಲು ಹೇಳುವುದು.**<br>**2ನೇ ತರಗತಿ**<br>**ಕನಿಷ್ಠ 10 ವಸ್ತುಗಳನ್ನು ನೀಡಿ ಅವುಗಳ ಗುಣಲಕ್ಷಣಗಳ ಆಧಾರದ ಮೇಲೆ ವಿಂಗಡಿಸಿ ಎಣಿಸಲು ತಿಳಿಸುವುದು.**<br>**3ನೇ ತರಗತಿ**<br>**ಕನಿಷ್ಠ 20 ವಸ್ತುಗಳನ್ನು ನೀಡಿ ಅವುಗಳ ಗುಣಲಕ್ಷಣಗಳ ಆಧಾರದ ಮೇಲೆ ವಿಂಗಡಿಸಿ ಎಣಿಸಲು ತಿಳಿಸುವುದು.**<br>**ವಿಂಗಡಿಸಿದ ವಸ್ತುಗಳ ಗುಣಲಕ್ಷಣಗಳನ್ನು ವ್ಯಕ್ತಪಡಿಸಲು ಹೇಳುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸ್ಥೂಲ ಮತ್ತು ಸೂಕ್ಷ್ಮ ಸ್ನಾಯುಗಳ ಚಲನಾ ಕೌಶಲಗಳ ಅಭಿವೃದ್ಧಿ, ಸೃಜನಶೀಲತೆ ಮತ್ತು ಸೌಂದರ್ಯ ಪ್ರಜ್ಞೆಯ ವಿಕಾಸ.<br>ಚಟುವಟಿಕೆ; 21. ಯೋಗ, ನೃತ್ಯ ಮತ್ತು ವ್ಯಾಯಾಮ. ಗುರಿ – 1<br>ಉದ್ದೇಶ:<br>• ಸ್ಥೂಲ ಮತ್ತು ಸೂಕ್ಷ್ಮ ಸ್ನಾಯುಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ.<br>• ಸೃಜನಶೀಲತೆಯನ್ನು ಅಭಿವ್ಯಕ್ತಿಗೊಳಿಸಲು ಸಹಕಾರಿಯಾಗುತ್ತದೆ.<br>• ಮಕ್ಕಳ ಸಮಗ್ರ ವಿಕಾಸ ಮತ್ತು ಆರೋಗ್ಯಕ್ಕೆ ಸಹಕಾರಿಯಾಗುತ್ತದೆ.<br>• ಉತ್ತಮ ಭಂಗಿಗಳನ್ನು ಕಲಿಯಲಾಗುತ್ತದೆ.[ನಿಲ್ಲುವುದು, ಕುಳಿತುಕೊಳ್ಳುವುದು, ನಡೆಯುವುದು]<br>ಸಾಮಗ್ರಿಗಳು : ಸ್ಕಾರ್ಫ್/ದುಪಟ್ಟ ಯಾವುದಾದರು ಸಂಗೀತ ವಾದ್ಯ. |

DRAFT 2022

| | | | |
|---|---|---|---|
| | | |  <br>ವಿಧಾನ : ಚಟುವಟಿಕೆಗೆ ಹೊಂದುವಂತಹ ಯಾವುದಾದರು ಜನಪ್ರಿಯ ಅಥವಾ ಸಾಂಪ್ರದಾಯಿಕ ಸಂಗೀತವನ್ನು ಹಾಕುವುದು. ಮಕ್ಕಳಿಗೆ ಸಂಗೀತಕ್ಕೆ ಸರಿಯಾಗಿ ದುಪಟ್ಟ ಹಿಡಿದು ಚಲಿಸಲು ಹೇಳುವುದು ಅಥವಾ ಚಿತ್ರದಲ್ಲಿ ತೋರಿಸಿರುವಂತೆ ಯೋಗಾಸನದ ವಿವಿಧ ಭಂಗಿಗಳನ್ನು ಮಕ್ಕಳು ಪ್ರಯತ್ನಿಸಬಹುದು. ಯೋಗಾಸನ, ನೃತ್ಯ, ವ್ಯಯಾಮ ಮುಂತಾದ ಚಟುವಟಿಕೆಗಳು ಮಕ್ಕಳ ಸಮಗ್ರ ವಿಕಾಸ ಮತ್ತು ಆರೋಗ್ಯಕ್ಕೆ ಸಹಕಾರಿಯಾಗಿದೆ. ಇದರಿಂದ ಮಕ್ಕಳು ದೈಹಿಕವಾಗಿ ಸಮರ್ಥರಾಗುತ್ತಾರೆ, ಮಾನಸಿಕವಾಗಿ ಜಾಗೃತರಾಗುತ್ತಾರೆ ಮತ್ತು ಭಾವನೆಗಳ ಸಮತೋಲನ ಉಂಟಾಗುತ್ತದೆ. ಆದ್ದರಿಂದ ಸುಗಮಕಾರರು ಈ ಚಟುವಟಿಕೆಗಳನ್ನು ದಿನನಿತ್ಯದ ಮಕ್ಕಳ ಪಠ್ಯಕ್ರಮದ ಚಟುವಟಿಕೆಗಳನ್ನಾಗಿ ರೂಢಿಸಿಕೊಳ್ಳುವುದು.<br><br>ವಿವರ; 2 ಮತ್ತು 3ನೇ ತರಗತಿಯವರು ಮೇಲ್ಕಂಡ ಚಟುವಟಿಕೆಯಲ್ಲಿ ಭಾಗವಹಿಸುವುದರ ಜೊತೆಗೆ ಯೋಗಾಸನದ ವಿವಿಧ ಭಂಗಿಗಳನ್ನು ಮಾಡಲು ಪ್ರೋತ್ಸಾಹಿಸುವುದು.<br>*** ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-11 ( 01, 02,03ನೇ ತರಗತಿ)** |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | **ಸಾಮರ್ಥ್ಯ: ಕ್ರಿಯಾತ್ಮಕ ಸ್ವ ಅಭಿವ್ಯಕ್ತಿ, ಧ್ವನಿ ಸಂಕೇತ ಹಾಗೂ ಪ್ರಾಸದ ಅರಿವು, ಪರಿಸರ ಪ್ರಜ್ಞೆ, ಪದಸಂಪತ್ತಿನ ಬೆಳವಣಿಗೆ**<br>**ಚಟುವಟಿಕೆ 3 ಹಾಡು, ಪ್ರಾಸಗೀತೆ, ಪದ್ಯ/ನಾಟಕ. (ಗುರಿ–2) ECL-3**<br>**ಉದ್ದೇಶ:**<br>*** ಧ್ವನಿ ಸಂಕೇತಗಳ ಅರಿವನ್ನು ಮೂಡಿಸುವುದು.**<br>*** ಪ್ರಾಸಗಳ ಅರಿವನ್ನು ಉಂಟು ಮಾಡುವುದು.**<br>*** ಕ್ರಿಯಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.**<br>*** ತನ್ನ ಸುತ್ತಲಿನ ಪರಿಸರದೊಂದಿಗೆ ಸಂಬಂಧೀಕರಿಸುವುದು.**<br>**ಅಗತ್ಯ ಸಾಮಗ್ರಿಗಳು– ಇಲ್ಲ**<br>**ವಿಧಾನ: ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ. ಶಿಕ್ಷಕರು ಮಕ್ಕಳಿಗೆ ಹೊಸ ಪ್ರಾಸಗೀತೆಯನ್ನು ಅಭಿನಯದೊಂದಿಗೆ ಹಾಡಿ ತೋರಿಸಲಿ. ಶಿಕ್ಷಕರನ್ನು ಅನುಕರಿಸುತ್ತಾ ಮಕ್ಕಳು ಹಾಡನ್ನು ಪುನರುಚ್ಚರಿಸಲು ತಿಳಿಸಿ.**<br>**ನೆನಪಿಡಬೇಕಾದ ಅಂಶಗಳು:**<br>*** ಮಕ್ಕಳು ಹಾಡನ್ನು ಆನಂದಿಸಲು ಸೂಕ್ತ ಅಭಿನಯ ಹಾಗೂ ಉತ್ಸಾಹದಿಂದ ಹಾಡಿ.**<br>*** ಮಕ್ಕಳು ಗೀತೆಯಲ್ಲಿರುವ ಪ್ರಾಸ ಪದಗಳನ್ನು ಶಿಕ್ಷಕರ ಸಹಾಯದಿಂದ ಗುರುತಿಸಲಿ.**<br>**ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಪ್ರಾಸಗೀತೆಯಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸುವುದು. ನೇ ತರಗತಿ ಮಕ್ಕಳು ಆ ಪ್ರಾಸ ಪದಗಳಿಗೆ ಇನ್ನಷ್ಟು ಪದಗಳನ್ನು ಸೇರಿಸುವುದು.( 45 ನೇ ದಿನಕ್ಕೆ ಮುಂದುವರೆದಿದೆ)** |
| | | **ಅರ್ಥಗ್ರಹಿಕೆಯೊಂದಿಗಿನ ಓದು** | **ಸಾಮರ್ಥ್ಯ : ಪದ ಗುರುತಿಸುವುದು, ಮುದ್ರಿತ ಪಠ್ಯದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತಿನ ಅಭಿವೃದ್ಧಿ.**<br>**ಚಟುವಟಿಕೆ : 11 ಹೆಸರಿನ ಜಗತ್ತು (ಗುರಿ 2)**<br>**ಉದ್ದೇಶ: ಪರಿಚಿತ ಸನ್ನಿವೇಶದಲ್ಲಿನ ವಸ್ತುಗಳನ್ನು ಲಿಪಿಸಂಕೇತಗಳೊಂದಿಗೆ ಸಹ ಸಂಬಂಧಿಕರಿಸಿಕೊಳ್ಳುವುದು. ಸಾಹಿತ್ಯ ಮತ್ತು ವಸ್ತು ಒಂದೇ ಇದೆ ಎಂಬ ತೀರ್ಮಾನಕ್ಕೆ ಬಂದು ಓದುವಿಕೆಯಲ್ಲಿ ಆಸಕ್ತಿ ಬೆಳಸಿಕೊಳ್ಳುವುದು.**<br>**ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಚಾರ್ಟ್ ಪೇಪರ್, ಪೆನ್ಸಿಲ್, ಕ್ರೇಯಾನ್ಸ್, ನಮಗೆ ಕಣ್ಣಿಗೆ ಕಾಣುವ ಸುತ್ತಮುತ್ತಲಿನ ಸಾಮಾಗ್ರಿಗಳು**<br>**ವಿಧಾನ :**<br>**– ಮಕ್ಕಳ ಸಹಾಯದಿಂದ ತರಗತಿಯಲ್ಲಿರುವ ಸಾಮಾನ್ಯ/ಪರಿಚಿತ ವಸ್ತುಗಳ ಹೆಸರನ್ನು ಪಟ್ಟಿ ಮಾಡುವುದು.**<br>**ಉದಾ– ಮೇಜು, ಖುರ್ಚಿ, ಬಾಗಿಲು ಇತ್ಯಾದಿ.**<br>**– ಸಿದ್ಧಪಡಿಸಿದ ನಾಮ ಫಲಕಗಳನ್ನು ಆಯಾ ವಸ್ತುಗಳ ಮೇಲೆ ಅಂಟಿಸುವುದು.**<br>**– ಇನ್ನೊಂದು ಸೆಟ್ ನಾಮ ಫಲಕಗಳ ಮಿಂಚುಪಟ್ಟಿಗಳನ್ನು ತಯಾರಿಸಿಟ್ಟುಕೊಳ್ಳುವುದು.**<br>**– ಪದಗಳ ಮಿಂಚುಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುತ್ತಾ, ಮಕ್ಕಳಿಂದ ಗಟ್ಟಿಯಾಗಿ ಹೇಳಿಸುವುದು.** |

DRAFT 22.02.22

| | | |
|---|---|---|
| | | – ಪದ ಉಚ್ಚರಿಸುತ್ತಾ ಆ ವಸ್ತುವಿನ ಬಳಿಗೆ ಮಗು ಹೋಗಲು ತಿಳಿಸುವುದು.<br>– ಮಗು ಕನಿಷ್ಟ ನಾಲ್ಕೈದು ವಸ್ತುಗಳನ್ನಾದರೂ ಹೆಸರಿಸಲು ಅವಕಾಶ ಕಲ್ಪಿಸುವುದು..<br>– ಆ ಪದಗಳನ್ನು ಕಥೆಯಲ್ಲಿ ಗುರುತಿಸಲು ಅವಕಾಶ ಕಲ್ಪಿಸುವುದು.<br>– ಚಿತ್ರ ಸಹಿತ ನಾಮಫಲಕ/ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿ, ಚಟುವಟಿಕೆ ಸ್ಥಳದಲ್ಲಿ/ಸಮಯದಲ್ಲಿ ಮಕ್ಕಳಿಗೆ ಗುರುತಿಸಿ ಓದಲು (ಚಿತ್ರಗಳ ಸಹಾಯದಿಂದ) ಅವಕಾಶ ಕಲ್ಪಿಸುವುದು.<br>2ಮತ್ತು 3ನೇ ತರಗತಿ: ಕಥೆ/ಪದ್ಯದಲ್ಲಿ ಬಂದಿರುವ ಮುಖ್ಯಪದಗಳ ಮಿಂಚುಪಟ್ಟಿ ತಯಾರಿಸಿಕೊಳ್ಳುವುದು ಮಕ್ಕಳಿಗೆ ಶಿಕ್ಷಕರು ಕಥೆ/ಪದ್ಯವನ್ನು ನೀಡಿ ಓದಲು ಅವಕಾಶ ಕಲ್ಪಿಸುವುದು.ನಂತರ ಮಿಂಚುಪಟ್ಟಿಯಲ್ಲಿರುವ ಪದಗಳನ್ನು ಕತೆಯಲ್ಲಿ ಹುಡುಕಲು ಸೂಚಿಸುವುದು.<br>ಗಮನಿಸಿ ; ಈ ಹಿಂದೆ ಈ ಚಟುವಟಿಕೆಗಳಲ್ಲಿ ಬಳಸಿದ ಪದಗಳನ್ನು ಹೊರತುಪಡಿಸಿ ಬೇರೆ ಬೇರೆ ಸ್ಥಳ, ಸನ್ನಿವೇಶದಲ್ಲಿ ಬರುವ ಪದಗಳನ್ನು<br>ಬಳಸಿ ಚಟುವಟಿಕೆಯನ್ನು ನಿರ್ವಹಿಸುವುದು.<br><br> |
| | ಉದ್ದೇಶಿತ ಬರಹ | ಸಾಮರ್ಥ್ಯ : ಸೂಕ್ಷ್ಮ ಸ್ನಾಯು ಚಲನಾ ಕೌಶಲಾಭಿವೃದ್ಧಿ. ಅಕ್ಷರಗಳನ್ನು ಗುರುತಿಸುವುದು.<br>ಚಟುವಟಿಕೆ: 36, ಚುಕ್ಕಿ ಸೇರಿಸು –ಅಕ್ಷರ ಬರೆ (ಗುರಿ: 2 ) **ECW-17**<br>ಉದ್ದೇಶ :<br>• ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಅಕ್ಷರಗಳನ್ನು ಗುರುತಿಸುವುದು.<br>• ಚುಕ್ಕಿಗಳಿಂದ ಅಕ್ಷರಗಳನ್ನು ರಚಿಸುವುದು<br>ಅಗತ್ಯ ಸಾಮಗ್ರಿ : ನೋಟ್ ಪುಸ್ತಕ, ಪೆನ್ಸಿಲ್, ಕರಿ ಹಲಗೆ, ಸೀಮೆ ಸುಣ್ಣ<br>ವಿಧಾನ :<br>– ಮಕ್ಕಳಿಗೆ ಚುಕ್ಕಿ ಬಳಸಿ ರ, ಗ, ಸ, ದ, ಅ ಅಕ್ಷರಗಳನ್ನು ಬರೆಯುವ ವಿಧಾನವನ್ನು ಬರೆದು ತೋರಿಸುವುದು,<br>– ಮಕ್ಕಳು ರ, ಗ, ಸ, ದ, ಅ ಅಕ್ಷರಗಳ ಚುಕ್ಕಿಗಳನ್ನು ಸೇರಿಸಲು ಹೇಳುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ವರ್ಣಮಾಲೆಯ ಯಾವುದಾದರೂ 5 ಅಕ್ಷರಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. 3ನೇ ತರಗತಿ ಮಕ್ಕಳು ತಮಗೆ ತಿಳಿದ 5 ಪದಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. (45 ನೇ ದಿನಕ್ಕೆ ಮುಂದುವರೆದಿದೆ) |
| | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು. ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| ಹೊರಾಂಗಣ ಆಟಗಳು | ಚಟುವಟಿಕೆ –19 ಜಿಗಿಯುವುದು, ಕುಪ್ಪಳಿಸುವುದು, ತಿರುಗುವುದು<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ವಿನ್ಯಾಸದ ಅರಿವು, ದೇಹದ ಸಮತೋಲನ ,ಕಾಲುಗಳ ಹೊಂದಾಣಿಕೆ<br>ಬೇಕಾಗುವ ಸಾಮಗ್ರಿ: –––––––<br>ವಿಧಾನ:<br>• ನೆಲದ ಮೇಲೆ ಗೆರೆಯನ್ನು ಎಳೆಯುವುದು..<br>• ಮಕ್ಕಳಿಗೆ ಒಂದು ವಿನ್ಯಾಸವನ್ನು ಶಿಕ್ಷಕರು ಪ್ರದರ್ಶಿಸುವುದು ಉದಾ : ರನ್ ಜಂಪ್ . ಈ ವಿನ್ಯಾಸವನ್ನು ಹೇಳುತಾ ಆಟವನ್ನು ಪ್ರಾರಂಭಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ರನ್ ರನ್ ಜಂಪ್ ಎಂಬ ವಿನ್ಯಾಸವನ್ನು ಹೇಳುತಾ ಆಟವನ್ನು ಆಡಿಸುವುದು** | |
| ಕಥಾ ಸಮಯ | ಶೀರ್ಷಿಕೆ : ನೀಲಿ ಬಣ್ಣದ ನರಿ<br>ಸಾಮಗ್ರಿಗಳು : ಕಾಡು ಪ್ರಾಣಿಗಳ ಚಿತ್ರಗಳ ಚಾರ್ಟ್, ಸಾಹಿತ್ಯ<br>ಉದ್ದೇಶ : | |

DRAFT 2.02

| | | |
|---|---|---|
| | | ➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಏಕಾಗ್ರತೆಯನ್ನು ಹೆಚ್ಚಿಸುವುದು.<br>➢ ನಿರರ್ಗಳವಾಗಿ ಮಾತನಾಡುವ ಕೌಶಲ ರೂಢಿಸುವುದು.<br>➢ **ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು.**<br>➢ **ಪ್ರಶ್ನಿಸುವ ಮನೋಭಾವಉಂಟುಮಾಡುವುದು.**<br>➢ **ಸೃಜನಶೀಲತೆಯನ್ನು ಅಭಿವೃದ್ಧಿ ಪಡಿಸುವುದು.**<br><br>**ವಿಧಾನ :**<br>***ಚಿತ್ರ ಕಥೆ ಚಾರ್ಟ್ ಪ್ರದರ್ಶನ***<br><br>ನೀಲಿ ಬಣ್ಣದ ಚಿತ್ರಕಥೆ ಚಾರ್ಟನ್ನು ಪ್ರದರ್ಶಿಸಿ ಕಥೆಯನ್ನು ನಿರೂಪಿಸುವುದು. ಇಲ್ಲಿ ಚಿತ್ರವನ್ನು ನೋಡಿ ಒಂದೊಂದು ಸಾಲನ್ನು ಒಬ್ಬೊಬ್ಬ ವಿದ್ಯಾರ್ಥಿ ಪ್ರೇರೇಪಿಸುವುದು. ಶಿಕ್ಷಕರು ಕಥೆಯನ್ನು ಮತ್ತೊಮ್ಮೆ ನಿರೂಪಿಸುವುದು.<br><br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು)<br><br>• ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೊ<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

## ವಾರ–7 ದಿನ–40 (ಗುರುವಾರ)

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| **40** | **ಶುಭಾಶಯ ವಿನಿಮಯ**<br>***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:**<br>ಸಾಮಗ್ರಿಗಳು: ಪಕ್ಷಿಗಳ ಚಿತ್ರಗಳು/ ಆಟಿಕೆಗಳು<br>ವಿಧಾನ: ದಿನ–39 ರಲ್ಲಿ ಉಲ್ಲೇಖಿಸಲಾದ ಶುಭಾಶಯ ವಿನಿಮಯ ಚಟುವಟಿಕೆ 1 ನ್ನು ಪುನರಾವರ್ತಿಸಿ<br>**ಚಟುವಟಿಕೆ 2:** TPR<br>• ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಮಾಡಿ ಮತ್ತು ಸೂಚನೆಗಳನ್ನು ಕೇಳಲು ಮತ್ತು ಅನುಸರಿಸಲು ಅವರಿಗೆ ತಿಳಿಸಿ.<br>• ಸರಳ TPR ಸೂಚನೆಗಳನ್ನು ಕೊಡಿ<br>ಉದಾ : ಕುದುರೆಯಂತೆ ಓಡು<br>ನವಿಲಿನ ಹಾಗೆ ಕುಣಿ<br>ಜಿಂಕೆ ಯಂತೆ ನೆಗೆ |
| | **ಮಾತು ಕತೆ**<br>***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ*** | ಚಟುವಟಿಕೆ : Hygiene Charades<br>ಸಾಮರ್ಥ್ಯ: ಸ್ವಯಂ ಪ್ರಜ್ಞೆ, ಮೌಖಿಕ ಭಾಷೆಅಭಿವೃದ್ಧಿ, ಪದ ಸಂಪತ್ತು ಬೆಳವಣಿಗೆ.<br>ಸಾಮಗ್ರಿ: ದೈನಂದಿನ ದಿನಚರಿಗಳ ಚಿತ್ರ ಕಾರ್ಡ್‌ಗಳು |

DRAFT 22.02.22

| | | | |
|---|---|---|---|
| | ಸಾಮೂಹಿಕ ಚಟುವಟಿಕೆ) | | • ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ.<br>• ಹಲ್ಲುಜ್ಜುವುದು, ಕೈ ತೊಳೆಯುವುದು ಇತ್ಯಾದಿ ಆರೋಗ್ಯಕರ ಅಭ್ಯಾಸಗಳ ಚಿತ್ರ ಕಾರ್ಡ್‌ಗಳನ್ನು ಹರಡಿ.<br>• ಮಕ್ಕಳನ್ನು ಒಂದೊಂದಾಗಿ ಆಹ್ವಾನಿಸಿ ಮತ್ತು ಚಿತ್ರ ಕಾರ್ಡ್‌ಗಳಲ್ಲಿ ಒಂದನ್ನು ತೆಗೆದುಕೊಳ್ಳಲು ಹೇಳಿ.<br>• ಯಾವುದೇ ಪದವನ್ನು ಬಳಸದೆ ಕಾರ್ಡುಗಳಲ್ಲಿರುವ ನೈರ್ಮಲ್ಯ ಅಭ್ಯಾಸವನ್ನು ಅಭಿನಯಿಸಲು ಹೇಳಿ<br>.• ಯಾವ ಕ್ರಿಯೆಯನ್ನು ಅಭಿನಯಿಸಲಾಗುತ್ತಿದೆ ಎಂಬುದನ್ನು ಇತರ ಮಕ್ಕಳು ಊಹಿಸಬೇಕು<br>• ನಂತರ ಅಭಿನಯಿಸಿದ ಮಗು ಆ ನಿರ್ದಿಷ್ಟ ನೈರ್ಮಲ್ಯ ಅಭ್ಯಾಸದ ಬಗ್ಗೆ ಮಾತನಾಡಬೇಕು.<br>• ಉದಾಹರಣೆಗೆ: ಹಲ್ಲುಜ್ಜುವುದು ಹೇಗೆ? ಕೈ ತೊಳೆಯುವುದು ಹೇಗೆ?ಇತ್ಯಾದಿ<br>• ಎಲ್ಲಾ ಮಕ್ಕಳಿಗೆ ಮಾತನಾಡಲು ಅವಕಾಶ ನೀಡಿ ಮತ್ತು ಸುಳಿವುಗಳನ್ನು ನೀಡುವ ಮೂಲಕ ಉತ್ತರವನ್ನು ಪಡೆದುಕೊಳ್ಳಿ. |
| | **ನನ್ನ ಸಮಯ(Free Indore play)** | | ಮಕ್ಕಳು ತಾವು ನಿರ್ವಹಿಸಲಿಚ್ಛಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | | **ಸಾಮರ್ಥ್ಯ: ಹಣ್ಣುಗಳ ಬಗ್ಗೆ ಅರಿವು ಬೆಳೆಸಿಕೊಳ್ಳುವುದು, ಆರೋಗ್ಯಕರ ಆಹಾರ ಅಭ್ಯಾಸ**<br>**ಚಟುವಟಿಕೆ : 39 ಹಣ್ಣುಗಳ ಬಗ್ಗೆ ತಿಳಿಯೋಣ. (ಗುರಿ–3)**<br>**ಉದ್ದೇಶ:– ಆರೋಗ್ಯಕರ ಆಹಾರ ಅಭ್ಯಾಸದಲ್ಲಿ ಹಣ್ಣುಗಳ ಮಹತ್ವವನ್ನು ತಿಳಿಯುವುದು.**<br>**ಅಗತ್ಯ ಸಾಮಗ್ರಿಗಳು : ವಿವಿಧ ಬಣ್ಣಗಳ ಹಾಳೆಗಳು, ಕತ್ತರಿ**<br>**ವಿಧಾನ : ಹಣ್ಣುಗಳ ಬಗ್ಗೆ ಕೆಲವು ಪ್ರಶ್ನೆ ಕೇಳುವುದರ ಮೂಲಕ ತರಗತಿಯನ್ನು ಪ್ರಾರಂಭಿಸುವುದು. ಉದಾ: ನೀವು ತಿನ್ನುವ ಹಣ್ಣುಗಳ ಹೆಸರು ಹೇಳಿ.**<br>* **ನಿಮ್ಮ ಇಷ್ಟದ ಹಣ್ಣು ಯಾವುದು?**<br>* **ಮಕ್ಕಳು ತಮಗೆ ಇಷ್ಟವಾದ ಚಿತ್ರ ಬಿಡಿಸಿ ಬಣ್ಣ ತುಂಬುವುದು. ಕತ್ತರಿಯ ಸಹಾಯದಿಂದ ಹಣ್ಣಿನ ಚಿತ್ರವನ್ನು ಕತ್ತರಿಸಿ ಕಟೌಟ್ ಸಿದ್ಧಪಡಿಸುವುದು. ಮಕ್ಕಳ ತಲೆಯ ಸುತ್ತ ಹಾಳೆಯ ಪಟ್ಟಿ ಧರಿಸುವುದು. ಕತ್ತರಿಸಿದ ಹಣ್ಣಿನ ಚಿತ್ರವನ್ನು ತಲೆಯ ಸುತ್ತ ಧರಿಸಿದ ಹಾಳೆಗೆ ಅಂಟಿಸಿ ಕಿರೀಟವಾಗಿ ಬಳಸುವುದು.**<br>* **ಹಣ್ಣುಗಳನ್ನು ಮತ್ತು ಹಸಿರು ತರಕಾರಿಗಳನ್ನು ಹೆಚ್ಚು ಸೇವಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದು.**<br>**2ನೇ ತರಗತಿ**<br>**ಹಣ್ಣುಗಳ ಚಿತ್ರ ಬರೆದು ಬಣ್ಣ ತುಂಬಿರಿ ( ನಿನಗೆ ಇಷ್ಟವಾದ ಹಣ್ಣು)**<br>**3ನೇ ತರಗತಿ**<br>**ನಿನಗೆ ಇಷ್ಟವಾದ ಹಣ್ಣಿನ ಬಗ್ಗೆ ಮಾತನಾಡು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸ್ಥೂಲ ಚಲನಾ ಕೌಶಲಗಳ ಅಭಿವೃದ್ಧಿ.<br>ಚಟುವಟಿಕೆ; 31 ನೃತ್ಯ ಗುರಿ – 1<br>ಸಾಮಗ್ರಿಗಳು : ಸಂಗೀತ/ ಸಂಗೀತ ವಾದ್ಯಗಳು.<br>ಉದ್ದೇಶ:<br>• ಸ್ಥೂಲ ಮತ್ತು ಸೂಕ್ಷ್ಮ ಸ್ನಾಯುಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ.<br>• ಸಂಗೀತ ವಾದ್ಯಗಳ ಪರಿಚಯವಾಗುತ್ತದೆ.<br>• ಸೌಂದರ್ಯೋಪಾಸನೆ ವಿಕಾಸವಾಗುವುದರ ಜೊತೆಗೆ ಏಕಾಗ್ರತೆ ಬೆಳೆಯುತ್ತದೆ.<br>ವಿಧಾನ : ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು. ಸಂಗೀತಕ್ಕೆ ತಕ್ಕ ಹಾಗೆ ನೃತ್ಯ ಮಾಡಲು ತಿಳಿಸುವುದು.<br>ವಿವರ; 2 ಮತ್ತು 3ನೇ ತರಗತಿಯವರು ಮೇಲ್ಕಂಡ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ:– ಧ್ವನಿ ಸಂಕೇತಗಳ ಅರಿವು, ಅಕ್ಷರ ಶಬ್ದ ಸಹ ಸಂಬಂಧ.**<br>**ಚಟುವಟಿಕೆ–20 ಹೆಸರಿನ ಆರಂಭಿಕ ಅಕ್ಷರದಿಂದ ವಸ್ತುವನ್ನು ಪತ್ತೆ ಹಚ್ಚುವುದು (ಗುರಿ–2) ECL-2 (22 ನೇ ದಿನದಿಂದ ಮುಂದುವರೆದಿದೆ.)**<br>**ಉದ್ದೇಶಗಳು:–**<br>* **ಧ್ವನಿ ಸಂಕೇತಗಳ ಅರಿವು ಮೂಡಿಸುವುದು.** |

DRAFT 2022

| | | | |
|---|---|---|---|
| | | | * ಅಕ್ಷರಗಳು ಮತ್ತು ಪದಗಳ ನಡುವಿನ ಸಹಸಂಬಂಧವನ್ನು ಗ್ರಹಿಸುವುದು.<br>* ಪದಗಳನ್ನು ಗ್ರಹಿಸಿ ಗುರುತಿಸುವುದು.<br>* ಅಂತ್ಯಾಕ್ಷರಿ ಪದಗಳನ್ನು ಬರೆಯುವುದು.<br>ಅಗತ್ಯ ಸಾಮಗ್ರಿಗಳು– ಇಲ್ಲ<br>ಸಲಹಾತ್ಮಕ ವಿಷಯ : ತರಕಾರಿಗಳು<br>ವಿಧಾನ:– ಸುಳಿವುಗಳ ಮೂಲಕ ತರಕಾರಿಗಳ ಹೆಸರನ್ನು ಊಹಿಸಿ ಹೇಳುವ ಚಟುವಟಿಕೆಯನ್ನು ಆಯೋಜಿಸಿ. ಉದಾಹರಣೆಗಾಗಿ ಶಿಕ್ಷಕರು 'ನನ್ನ ಮನಸ್ಸಿನಲ್ಲಿರುವ ತರಕಾರಿ ನೇರಳೆ ಬಣ್ಣವನ್ನು ಹೊಂದಿದ್ದು ಅದರ ಹೆಸರು ಬ ಅಕ್ಷರದಿಂದ ಪ್ರಾರಂಭವಾಗುತ್ತದೆ ಎಂದು ಹೇಳಿದಾಗ ಮಕ್ಕಳು ಬದನೆ ಎಂದು ಗುರುತಿಸುವುದು. ಹೀಗೆಯೇ ವಿವಿಧ ಉದಾಹರಣೆಗಳನ್ನು ನೀಡುವುದು.<br>ತರಗತಿವಾರು ವಿವರ: 2ನೇ ಮತ್ತು 3ನೇ ತರಗತಿ ಮಕ್ಕಳಿಗೆ ಪದಗಳ ಮುಂದುವರೆದ ಭಾಗವಾಗಿ ವಾಕ್ಯಗಳನ್ನು ರಚಿಸುವಂತೆ ಹಾಗೂ ಸರಳ ವಾಕ್ಯಗುಚ್ಚಗಳನ್ನು ರಚಿಸುವಂತೆ ಚಟುವಟಿಕೆಗಳನ್ನು ಮುಂದುವರೆಸುವುದು..( 46 ನೇ ದಿನಕ್ಕೆ ಮುಂದುವರೆದಿದೆ)<br><br>**ಅಭ್ಯಾಸದ ಹಾಳೆಗಳು: EC-10 (ತರಗತಿ 1, 2, 3)** |
| | | ಅರ್ಥಗ್ರಹಿ ಕೆಯೊಂದಿಗಿನ ಓದು | ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಅವಧಾನ ಮತ್ತು ಆಲಿಸುವಿಕೆ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ 21 ಪದ ಹುಡುಕು (ಗುರಿ–2)<br>ಉದ್ದೇಶ : ಕಥೆಗಳಲ್ಲಿಯ ಪದಗಳನ್ನು ಅದರಲ್ಲಿಯ ಧ್ವನಿಗಳನ್ನು ಗುರುತಿಸುವರು.<br>ಅಗತ್ಯ ಸಾಮಗ್ರಿಗಳು: ಮಿಂಚು ಪಟ್ಟಿ, ಕಪ್ಪು ಹಲಗೆ.<br>ವಿಧಾನ: ಶಿಕ್ಷಕರು ಯಾವುದಾದರೂ ಒಂದು ಕಥೆಯನ್ನು ಹೇಳುವುದು. ಅದರಲ್ಲಿ ಬರುವ ಪ್ರಮುಖ ಪದಗಳನ್ನು ಕಪ್ಪು ಹಲಗೆಯ ಮೇಲೆ / ಮಿಂಚು ಪಟ್ಟಿಯ ಮೇಲೆ ಬರೆದು, ಪ್ರದರ್ಶಿಸಿ ಒಂದು ವಾರದವರೆಗೆ ಮಗು ಅವುಗಳನ್ನು ನೋಡಲು ಅವಕಾಶ ಕಲ್ಪಿಸುವುದು. ಆ ಕಥೆ ಹೇಳುವಾಗ ಅಥವಾ ಬೇರೆ ಕಥೆ ಹೇಳುವಾಗ ಆ ಪದಗಳು ಬಂದಾಗಲೆಲ್ಲಾ ಪದ/ ಧ್ವನಿಗಳನ್ನು ಗುರುತಿಸಿ ತೋರಿಸುವುದು.<br>2 ಮತ್ತು 3ನೇ ತರಗತಿ :ಶಿಕ್ಷಕರು ಮಕ್ಕಳಿಗೆ ಕಥೆಯಲ್ಲಿ ಬಂದಿರುವ ಗುಣಿತಾಕ್ಷರ ಮತ್ತು ಒತ್ತಕ್ಷರ ಪದಗಳನ್ನು ಚಾರ್ಟ್‌ನಲ್ಲಿ ಬರೆದು ಪ್ರದರ್ಶಿಸುವುದು ಶಿಕ್ಷಕರು ಸೂಚಿಸಿದ ಪದಗಳನ್ನು ಚಾರ್ಟ್ ನಲ್ಲಿ ಗುರುತಿಸಲು ತಿಳಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ವೀಕ್ಷಣೆ, ಕಲ್ಪನೆ, ಸೃಜನಶೀಲ ಚಿಂತನೆ, ಪರಿಸರ ಪ್ರಜ್ಞೆ.<br>ಚಟುವಟಿಕೆ: 35 ಹವಾಮಾನ ನಕ್ಷೆ (ಗುರಿ–2) **ECW-16** (33 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>• ಉದ್ದೇಶಿತ ಬರವಣಿಗೆಯನ್ನು ರೂಢಿಸುವುದು.<br>• ವೀಕ್ಷಣಾ ಕೌಶಲವನ್ನು ಬೆಳೆಸುವುದು.<br>• ಸೃಜನಶೀಲ ಚಿಂತನೆಯನ್ನು ಉತ್ತೇಜಿಸುವುದು.<br>• ಪರಿಸರ ಪ್ರಜ್ಞೆ ಮೂಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ/ ಹಾಳೆಗಳು, ಪೆನ್ಸಿಲ್<br>ವಿಧಾನ :<br>* ವಾರದ ದಿನಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>* ವಾರದ ದಿನಗಳ ಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>* ಹವಾಮಾನದ ಅಂಶಗಳಾದ ಮೋಡ, ಮಳೆ, ಬಿಸಿಲು, ಚಳಿ, ಬಿರುಗಾಳಿ ಇತ್ಯಾದಿ ಅಂಶಗಳನ್ನು ತರಗತಿಯ ಹವಾಮಾನ ನಕ್ಷೆಯ ಸಹಾಯದಿಂದ ಪರಿಚಯಿಸುವುದು.<br>* ಗುಂಪು ಚಟುವಟಿಕೆಯ ಸಮಯದಲ್ಲಿ ಆ ದಿನದ ಹವಾಮಾನವನ್ನು ಗಮನಿಸಿ ಗುರುತಿಸಲು ತಿಳಿಸುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ದಿನದ ಹವಾಮಾನವನ್ನು ತಮ್ಮ ಪುಸ್ತಕದಲ್ಲಿ ದಾಖಲಿಸುವಂತೆಯೂ 3ನೇ ತರಗತಿಯ ಮಕ್ಕಳು ತರಗತಿ ಹವಾಮಾನ ನಕ್ಷೆಯಲ್ಲಿ ದಿನದ ಹವಾಮಾನವನ್ನು ದಾಖಲಿಸಲು ತಿಳಿಸುವುದು. (46 ನೇ ದಿನಕ್ಕೆ ಮುಂದುವರೆದಿದೆ) |

DRAFT 2022

| | | |
|---|---|---|
| | | **ಬರವಣಿಗೆಯ ಮಾದರಿ:**<br>**ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.**<br>**ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.** |
| | **ಹೊರಾಂಗಣ ಆಟಗಳು** | ಚಟುವಟಿಕೆ –19 ಜಿಗಿಯುವುದು, ಕುಪ್ಪಳಿಸುವುದು, ತಿರುಗುವುದು<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ವಿನ್ಯಾಸದ ಅರಿವು, ದೇಹದ ಸಮತೋಲನ ,ಕಾಲುಗಳ ಹೊಂದಾಣಿಕೆ<br>ಬೇಕಾಗುವ ಸಾಮಗ್ರಿ: ––––––<br>ವಿಧಾನ:<br>• ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸುವುದು .<br>• ಶಿಕ್ಷಕರು ಒಂದು ವಿನ್ಯಾಸವನ್ನು ಮಕ್ಕಳಿಗೆ ಪ್ರದರ್ಶಿಸುವುದು . ಉದಾ : ಸ್ಕಿಪ್ …ಟರ್ನ್ .<br>• ಈ ವಿನ್ಯಾಸವನ್ನು ಹೇಳುತ್ತಾ ಆಟವನ್ನು ಪ್ರಾರಂಭಿಸುವುದು .<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಲಿಗೆ ಸ್ಕಿಪ್ .. ಸ್ಕಿಪ್.. ಟರ್ನ್ ಎಂಬ ವಿನ್ಯಾಸದಿಂದ ಆಟವನ್ನು ಪ್ರಾರಂಭಿಸುವುದು .** |
| | **ಕಥಾ ಸಮಯ** | **ಶೀರ್ಷಿಕೆ :** ನೀಲಿ ಬಣ್ಣದ ನರಿ<br>**ಸಾಮಗ್ರಿಗಳು :** ಮುಖವಾಡಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಏಕಾಗ್ರತೆಯನ್ನು ಹೆಚ್ಚಿಸುವುದು.<br>➢ ನಿರರ್ಗಳವಾಗಿ ಮಾತನಾಡುವ ಕೌಶಲ ರೂಢಿಸುವುದು.<br>➢ ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು.<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ ಸೃಜನಶೀಲತೆಯನ್ನು ಅಭಿವೃದ್ಧಿ ಪಡಿಸುವುದು.<br>➢ **ಹಾಗಾದರೆ, ಹಾಗಾಗದಿದ್ದರೆ ಇತ್ಯಾದಿ ಸಂದರ್ಭಗಳಿಗೆ ಹೋಲಿಸುವ ಕೌಶಲ ಬೆಳೆಸುವುದು.**<br>➢ **ಮೌಲ್ಯಗಳನ್ನು ರೂಢಿಸುವುದು.**<br>**ವಿಧಾನ :**<br>***ಮುಖವಾಡಗಳು***<br>ಕಥೆಗೆ ಸಂಬಂಧಿಸಿದ ಮುಖವಾಡಗಳನ್ನು ಬಳಸಿ ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು. ಹಿರಿಯವಿದ್ಯಾರ್ಥಿಗಳನ್ನು ಬಳಸಿಕೊಂಡು ಪಾತ್ರಗಳನ್ನು ಹಂಚಿ ಅಭಿನಯಿಸಲು ಪ್ರೇರೇಪಿಸಿ.<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ನೀಲಿ ಬಣ್ಣದ ನರಿಯನ್ನು ಮೊದಲೇ ಇತರ ಪ್ರಾಣಿಗಳು ಗುರುತಿಸಿದ್ದರೆ ಏನಾಗುತ್ತಿತ್ತು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–7** **ದಿನ–41 (ಶುಕ್ರವಾರ)**

| ದಿನಗ | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|

DRAFT 22.02.22

| ಘು | | |
|---|---|---|
| 41 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:**<br>ಸಾಮಗ್ರಿಗಳು: ಹಣ್ಣುಗಳ ಚಿತ್ರಗಳು/ ಆಟಿಕೆಗಳು<br>ಸಮಯ: 5 ನಿಮಿಷಗಳು<br>• ವಿಧಾನ: ಮಕ್ಕಳನ್ನು ತರಗತಿಯ ಹೊರಗೆ ಒಂದು ಸಾಲಿನಲ್ಲಿ ನಿಲ್ಲುವಂತೆ ಮಾಡಿ. (ಸುರಕ್ಷತಾ ಕ್ರಮಗಳನ್ನು ಗಮನಿಸಿ)<br>• ಹಣ್ಣುಗಳ ಚಿತ್ರಗಳನ್ನು ಒಂದೊಂದಾಗಿ ತೋರಿಸಿ. (ಶಿಕ್ಷಕರು ತರಗತಿಯ ಬಾಗಿಲಲ್ಲಿ ನಿಲ್ಲಬೇಕು. )<br>ಚಿತ್ರ ನೋಡಿ ಆ ಹಣ್ಣಿನ ಹೆಸರು ಮತ್ತು ಬಣ್ಣವನ್ನು ಹೇಳುತಾ ತರಗತಿ ಪ್ರವೇಶಿಸಲು ಸೂಚಿಸುವುದು<br>ಉದಾಹರಣೆಗೆ: ನಾನು ನಾನು ಸೇಬಿನ ಹಣ್ಣು .ಕೆಂಪಾದ ಸೇಬಿನ ಹಣ್ಣು<br>ತರಗತಿ ಪ್ರವೇಶಿಸಿದ ನಂತರ ವೃತ್ತಾಕಾರವಾಗಿ ನಿಲ್ಲುವಂತೆ ಸೂಚಿಸಿ<br>• ಮಕ್ಕಳು ತರಗತಿಯನ್ನು ಪ್ರವೇಶಿಸುವಾಗ ಶಿಕ್ಷಕರು ಮಕ್ಕಳಿಗೆ " ನಮಸ್ತೆ, ಗುಡ್ ಮಾರ್ನಿಂಗ್" ಎಂದು ಗ್ರೀಟ್ ಮಾಡುವುದು.<br>• ಮಕ್ಕಳನ್ನು ಕೇಳಿ, "ಇಂದು ಯಾವ ದಿನ?" ಮತ್ತು "ಇಂದು ...................." ಎಂದು ಹೇಳುವ ಮೂಲಕ ಮಕ್ಕಳನ್ನು ಪ್ರತಿಕ್ರಿಯಿಸುವಂತೆ ಮಾಡಿ.<br>**ಚಟುವಟಿಕೆ 2**<br>• ಹವಾಮಾನ ನಕ್ಷೆಯ ಚಟುವಟಿಕೆ ಮಾಡಿಸುವುದು . |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ಚಟುವಟಿಕೆ : Story Talk<br>ಸಾಮರ್ಥ್ಯ: ಸ್ವಯಂ ಪ್ರಜ್ಞೆ, ಮೌಖಿಕ ಭಾಷೆಅಭಿವೃದ್ಧಿ, ಪದ ಸಂಪತ್ತು ಬೆಳವಣಿಗೆ.<br>ಸಾಮಗ್ರಿ: ದೈನಂದಿನ ದಿನಚರಿಗಳ ಚಿತ್ರ ಕಾರ್ಡ್‌ಗಳು<br>ವಿಧಾನ:<br>• ಚಿತ್ರ ಕಾರ್ಡ್‌ಗಳನ್ನು ಒಂದರ ನಂತರ ಒಂದರಂತೆ ಹಿಡಿದುಕೊಳ್ಳಿ ಮತ್ತು " ರೀನಾಳ ದೈನಂದಿನ ದಿನಚರಿ" ಕುರಿತು ಕಥೆಯನ್ನು ಹೇಳಿ<br>• ಉದಾಹರಣೆಗೆ: ರೀನಾ ಬೆಳಿಗ್ಗೆ ಬೇಗ ಎದ್ದು ಹಲ್ಲುಜ್ಜುತ್ತಾಳೆ ನಂತರ ಸ್ನಾನ ಮಾಡುತ್ತಾಳೆ........<br>ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ.ಮಕ್ಕಳನ್ನು ಗುಂಪು ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಸರಳವಾದ ಪ್ರಶ್ನೆಗಳನ್ನು ಕೇಳಿ.<br>ನೀವು ಎದ್ದಾಗ ನೀವು ಮೊದಲು ಏನು ಮಾಡುತ್ತೀರಿ?<br>ನಿಮ್ಮ ಮುಂದಿನ ಚಟುವಟಿಕೆ ಯಾವುದು? ಇತ್ಯಾದಿ<br>ಮತ್ತು ಮಕ್ಕಳು ತಮ್ಮ ದೈನಂದಿನ ದಿನಚರಿಗಳನ್ನು ಮೌಖಿಕವಾಗಿ ಪಟ್ಟಿ ಮಾಡಲು ಸಹಾಯ ಮಾಡಿ. ನಮ್ಮ ದಿನಚರಿಯು ನಮ್ಮನ್ನು ಬಲವಾಗಿ ಮತ್ತು ಆರೋಗ್ಯಕರವಾಗಿಡಲು ಬಹಳ ಮುಖ್ಯ ಎಂದು ವಿವರಿಸಿ.<br>ಎಲ್ಲಾ ಮಕ್ಕಳು ಗುಂಪು ಚರ್ಚೆಲ್ಲಿ ಭಾಗವಹಿಸುವುದನ್ನು ಶಿಕ್ಷಕರು ಖಚಿತಪಡಿಸಿಕೊಳ್ಳಬೇಕು |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಸಮಸ್ಯಾ ಪರಿಹಾರ, ತಾರ್ಕಿಕತೆ.**<br>**ಚಟುವಟಿಕೆ 11 ಮತ್ತು 11 ಎ ." ಯೋಚನಾ ಪೆಟ್ಟಿಗೆ" (ಗುರಿ –3)**<br>**ಉದ್ದೇಶ:– ಅನುಕ್ರಮವಾಗಿ ಜೋಡಿಸುವುದು.**<br>**ಸಾಮಗ್ರಿಗಳು: ಆಮೆ ಮತ್ತು ನರಿಯ ಚಿತ್ರ ಕಾರ್ಡುಗಳು**<br>**ವಿಧಾನ: ನರಿ ಮತ್ತು ಆಮೆಯ ಕಥೆ.**<br>**ಒಂದು ಮುಂಜಾನೆ, ನರಿಯು ತುಂಬಾ ಹಸಿದಿತ್ತು, ಅದು ಕಾಡಿನಲ್ಲಿ ಆಹಾರವನ್ನು ಹುಡುಕಲು ಪ್ರಾರಂಭಿಸಿತು. ಇದ್ದಕ್ಕಿದ್ದಂತೆ, ನರಿ ಆಮೆ ತಿರುಗಾಡುವುದನ್ನು ನೋಡಿತು. ನರಿಯು ಆಮೆಯನ್ನು ತಿನ್ನಲು ಯೋಚಿಸಿತು. ನರಿ ಓಡಿ ಬಂದು ಆಮೆಯನ್ನು ಹಿಡಿದುಕೊಂಡಿತು. ಆಮೆಯನ್ನು ತಿನ್ನಲು, ನರಿಯು ಆಮೆಯ ಗಟ್ಟಿಯಾದ ಚಿಪ್ಪನ್ನು ಮುರಿಯಲು ತನ್ನ ಕೈಲಾದಷ್ಟು ಪ್ರಯತ್ನಿಸಿತು ಆದರೆ ಸಾಧ್ಯವಾಗಲಿಲ್ಲ. ಆಮೆ ಬಹಳ ಬುದ್ಧಿವಂತವಾಗಿತ್ತು. ಅದು ನರಿಗೆ ಹೇಳಿತು –** |

DRAFT 22.02.22

| | | | |
|---|---|---|---|
| | | | "ಪ್ರಿಯ ನರಿಯೇ! ನೀನು ನನ್ನನ್ನುತಿನ್ನಲು ಬಯಸುತ್ತೀಯಾ? , ನೀವು ನನ್ನನ್ನು ತಿನ್ನುವುದಾದರೆ ಮೊದಲು ನನ್ನನ್ನು ಕೊಳದಲ್ಲಿ ಇರಿಸಬೇಕು ಇದರಿಂದ ನನ್ನ ಚಿಪ್ಪು ಮೃದುವಾಗುತ್ತದೆ ಆಗ ನೀವು ಅದನ್ನು ಸುಲಭವಾಗಿ ಒಡೆದು ತಿನ್ನಬಹುದು". ಮೂರ್ಖ ನರಿಯು ಆಮೆಯನ್ನು ಹತ್ತಿರದ ಕೊಳದಲ್ಲಿ ಮುಳುಗಿಸಿತು. ಆಮೆಯನ್ನು ಕೊಳದಲ್ಲಿ ಹಾಕಿದ ತಕ್ಷಣ, ಆಮೆ ವೇಗವಾಗಿ ಈಜಿ ನರಿಯಿಂದ ತಪ್ಪಿಸಿಕೊಂಡು ನರಿಯನ್ನು ನೋಡಿ ನಕ್ಕಿತು.<br>ಈಗ, ಪ್ರಶ್ನೆಗಳನ್ನು ಕೇಳಿ ಮತ್ತು ಆಮೆ ಹೇಗೆ ತಪ್ಪಿಸಿಕೊಂಡಿದೆ ಎಂಬುದರ ಕುರಿತು ಕಥೆಯನ್ನು ವಿವರಿಸಿದ ನಂತರ ಚರ್ಚಿಸಿ. ಮಕ್ಕಳು ಸಮಸ್ಯೆಯನ್ನು ಪರಿಹರಿಸುವ ತಮ್ಮ ಸ್ವಂತ ಅನುಭವಗಳನ್ನು ಹಂಚಿಕೊಳ್ಳಲಿ.<br>**ಚಟುವಟಿಕೆ: 11 ಎ "ಕ್ರಮವಾಗಿಜೋಡಿಸು"**<br>ಮಕ್ಕಳಿಗೆ ಚಿತ್ರಕಥೆ ಕಾರ್ಡುಗಳನ್ನು ಅನುಕ್ರಮವಾಗಿ ಜೋಡಿಸಲು ತಿಳಿಸಿ ವಿವರಿಸಲು ಹೇಳುವುದು.<br>**2ನೇ ತರಗತಿ**<br>ಕಥೆಯನ್ನು ಆಲಿಸಿದ ನಂತರ ಸರಳ ಪ್ರಶ್ನೆಗಳನ್ನು ಕೇಳುವುದು.<br>ಉದಾ:– ಈ ಕಥೆಯಲ್ಲಿ ಬರುವ ಪ್ರಾಣಿಗಳ ಹೆಸರು ಹೇಳಿರಿ.<br>**3ನೇ ತರಗತಿ**<br>ಈ ಕಥೆಯಿಂದ ನಿನಗೆ ತಿಳಿದು ಬರುವ ಮೌಲ್ಯ (ನೀತಿ) ಯಾವುದು? |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.<br>ಚಟುವಟಿಕೆ; 35 ಕ್ಲೇ/ಮಣ್ಣು ಮತ್ತು ಕಲಸಿದ ಹಿಟ್ಟಿನಿಂದ ಅಚ್ಚು ತೆಗೆಯುವುದು. ಗುರಿ–1<br>ಉದ್ದೇಶ:<br>• ಸೂಕ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ತಮ್ಮ ಕಲ್ಪನೆಯ ಆಕೃತಿ ಮೂಡಿಸುವುದರ ಜೊತೆಗೆ ಸೃಜನ ಶೀಲತೆಯನ್ನು ಅಭಿವ್ಯಕ್ತಗೊಳಿಸಲು ಸಹಕಾರಿಯಾಗುತ್ತದೆ.<br>ಸಾಮಗ್ರಿಗಳು : : ಕ್ಲೇ ಅಥವಾ ಕಲಸಿದ ಹಿಟ್ಟು.<br>ವಿಧಾನ : ಮಕ್ಕಳಿಗೆ ಕ್ಲೇ/ಮಣ್ಣು ಅಥವಾ ಕಲಸಿದ ಹಿಟ್ಟನ್ನು ನೀಡಿ ಅದರೊಂದಿಗೆ ತಮ್ಮ ಆಯ್ಕೆಯ ಮಾದರಿಗಳನ್ನು ಮಾಡಲು ಹೇಳುವುದು. ಹಬ್ಬಗಳಲ್ಲಿ ಉಪಯೋಗಿಸುವ ವಸ್ತುಗಳಾದ ಹಣತೆ ಮುಂತಾದವುಗಳನ್ನು ಮಾಡಲು ಹೇಳುವುದು. ನಂತರ ಅವುಗಳಿಗೆ ಬಣ್ಣ ಹಚ್ಚಲು ಹೇಳುವುದು. ಮಕ್ಕಳು ಕ್ಲೇ ಅಥವಾ ಹಿಟ್ಟಿನಲ್ಲಿ ಮಾದರಿಗಳನ್ನು ತಯಾರಿಸುವಾಗ ಸುಗಮಕಾರರು ಗಮನಿಸುತ್ತಿರಬೇಕು. ಚಟುವಟಿಕೆ ಮುಗಿದ ಮೇಲೆ ಮಕ್ಕಳು ತಯಾರಿಸಿದ ಮಾದರಿಯನ್ನು ವಿವರಿಸಲು ಹೇಳುವುದು. ಸುಗಮಕಾರರು ಮಕ್ಕಳಿಗೆ ವಿವಿಧ ಮಾದರಿಗಳನ್ನು ತಯಾರಿಸಲು ಸಣ್ಣ ಮೊಂಡಾದ ಪ್ಲಾಸ್ಟಿಕ್ ಚಾಕು , ಅಚ್ಚುಗಳನ್ನು ನೀಡಬಹುದು. ಮರದ ಚಿಕ್ಕ ಲಟ್ಟಣಿಗೆ , ಹೂ, ಗಿಡದ ಚಿಗುರು, ಬಣ್ಣ ಇತ್ಯಾದಿ. ಚಟುವಟಿಕೆಯಲ್ಲಿ ವಿವಿಧತೆಯನ್ನು ತರಲು ಕಡ್ಡಿಗಳು, ಸ್ಟ್ರಾ, ಕಲ್ಲುಗಳು, ಕಪ್ಪೆ ಚಿಪ್ಪು ಮುಂತಾದವುಗಳನ್ನು ಕೊಡಬಹುದು. ಚಟುವಟಿಕೆಯ ನಂತರ ಮಕ್ಕಳ ಕೈಗಳನ್ನು ತೊಳೆಸುವುದು.<br>ಸುಗಮಕಾರರು ಮಕ್ಕಳು ಚಟುವಟಿಕೆಯಲ್ಲಿ ತೊಡಗಿರುವಾಗ ಅವರ ಕಾರ್ಯ ವಿಧಾನ ಹಾಗೂ ಅವರು ಕೈಗೊಳ್ಳುವ ಸ್ವಚ್ಛತಾ ಕ್ರಮಗಳನ್ನು ಗಮನಿಸುವುದು.<br>ವಿವರ; 2 ಮತ್ತು 3 ನೇ ತರಗತಿಗೆ ವಿಷಯ [ ಹಬ್ಬ, ಸಮಾರಂಭ, ಅಡುಗೆ ಮನೆಯ ಪರಿಕರಗಳು] ವನ್ನು ನೀಡಿ ಅದಕ್ಕೆ ತಕ್ಕಹಾಗೆ ಮಾದರಿಗಳನ್ನು ತಯಾರಿಸಲು ಪ್ರೋತ್ಸಾಹ ನೀಡುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ : ಪದ ಸಂಪತ್ತಿನ ಅಭಿವೃದ್ಧಿ, ಊಹಿಸುವುದು, ತಂಡದ ಸದಸ್ಯರೊಂದಿಗೆ ಸಹಕಾರದಿಂದ ಕೆಲಸ. ಸೂಚನೆಗಳ ಪಾಲನೆ.**<br>**ಚಟುವಟಿಕೆ .6 ವಸ್ತುವನ್ನು ಊಹಿಸು (ಗುರಿ–2) ECL-7**<br>**ಉದ್ದೇಶಗಳು:**<br>* **ಸೂಕ್ತ ಪದ ರಚಿಸುವುದು.**<br>* **ಸಾಂಘಿಕ ಮನೋಭಾವನೆ ಬೆಳೆಸುವುದು.**<br>* **ಸೂಚನೆಗಳನ್ನು ಎಚ್ಚರಿಕೆಯಿಂದ ಆಲಿಸಿ ಅನುಸರಿಸುವುದು.**<br>* **ಪದ ಸಂಪತ್ತನ್ನು ಅಭಿವೃದ್ಧಿ ಪಡಿಸುವುದು.**<br>**ಅಗತ್ಯ ಸಾಮಗ್ರಿಗಳು : ಬ್ಯಾಗ್, ಲಭ್ಯ ವಸ್ತುಗಳು** |

DRAFT 22.02.22

| | | | |
|---|---|---|---|
| | | | ವಿಧಾನ : ತರಗತಿಯಲ್ಲಿರುವ ಸೀಮೆ ಸುಣ್ಣ, ರಬ್ಬರ್, ಡಸ್ಟರ್ , ಡೈಸ್ ಮೊದಲಾದ ವಸ್ತುಗಳನ್ನು ಒಂದು ಚೀಲದಲ್ಲಿ ಹಾಕಿ..<br>– ಮಕ್ಕಳನ್ನು ಒಬ್ಬೊಬ್ಬರಿಗಿ ಕರೆದು ಬ್ಯಾಗ್‌ನಲ್ಲಿರುವ ವಸ್ತುಗಳಲ್ಲಿ ಯಾವುದಾದರೂ ಒಂದು ವಸ್ತುವನ್ನು ಸ್ಪರ್ಶಿಸಿ, ಆ ವಸ್ತುಗಳನ್ನು ಊಹಿಸಲು ಹೇಳುವುದು. ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಕ್ಕಳು ವಸ್ತುವನ್ನು ಸರಿಯಾಗಿ ಗುರುತಿಸಲು ಸಹಾಯ ಮಾಡುವುದು.<br>ಉದಾಹರಣೆಗಾಗಿ:<br>• ನೀನು ಸ್ಪರ್ಶಿಸುತ್ತಿರುವ ವಸ್ತು ದೊಡ್ಡದೋ ಚಿಕ್ಕದೋ ?<br>• ನೀನು ಸ್ಪರ್ಶಿಸುತ್ತಿರುವ ವಸ್ತುವಿನ ಆಕಾರ ಹೇಗಿದೆ?<br>• ಯಾವ್ವದರಿಂದ ಆ ವಸ್ತು ಮಾಡಲ್ಪಟ್ಟಿದೆ?<br>• ನೀನು ಸ್ಪರ್ಶಿಸುತ್ತಿರುವ ವಸ್ತು ಗಟ್ಟಿಯಾಗಿದೆಯೇ? ಮೃದುವಾಗಿದೆಯೇ?<br>• ನೀನು ಸ್ಪರ್ಶಿಸುತ್ತಿರುವ ವಸ್ತು ಏನಿರಬಹುದು?<br>– ಮಕ್ಕಳು ಗುರುತಿಸಿದ ವಸ್ತುಗಳ ಕುರಿತು ಅವರೊಂದಿಗೆ ಚರ್ಚಿಸುವುದು.<br>ತರಗತಿಯ ವಿವರ: 2 ನೇ ತರಗತಿಯ ಮಕ್ಕಳು ತಾವು ಗುರುತಿಸಿದ ವಸ್ತುವಿನ ಬಗ್ಗೆ 3–4 ವಾಕ್ಯಗಳಲ್ಲಿ ಮಾತನಾಡುವುದು. 3 ನೇ ತರಗತಿಯ ಮಕ್ಕಳು 2 ರಿಂದ 3 ನಿಮಿಷ ಆ ವಸ್ತುವಿನ ಬಗ್ಗೆ ಮಾತನಾಡುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>ಚಟುವಟಿಕೆ....18<br>• ಚಿತ್ರ ಸಂಪುಟ (ಗುರಿ–2) ವಿಷಯ: ' ಪ್ರಾಣಿಸಂಗ್ರಹಾಲಯದಲ್ಲಿ ಮಾತ್ರ ನೋಡಬಹುದಾದ ವಸ್ತುಗಳು ',<br>ಉದ್ದೇಶ:<br>• ಚಿತ್ರದಲ್ಲಿನ ವಸ್ತು/ವ್ಯಕ್ತಿ/ಘಟನೆಗಳನ್ನು ಹೆಸರಿಸುವುದು ಊಹಿಸಿ ಅರ್ಥೈಸಿಕೊಳ್ಳಲು ಚಿತ್ರದೊಂದಿಗೆ ಪಠ್ಯವನ್ನು ಸಂಬಂಧಿಕರಿಸುವುದು.<br>• ಮಕ್ಕಳು ಚಿತ್ರಓದುವುದು ಮತ್ತು ಚರ್ಚಿಸಿ ಅರ್ಥಮಾಡಿಕೊಳ್ಳುವುದು ಮತ್ತು ವೈಯಕ್ತಿಕಚಿತ್ರ ಸಂಪುಟಗಳನ್ನು ರಚಿಸಿ ವೈಯಕ್ತಿಕವಾಗಿ ಮತ್ತು ಗುಂಪುಗಳಲ್ಲಿ ಮಂಡಿಸುವುದು ಮತ್ತು ಗುಂಪಿನಲ್ಲಿ ಕುಳಿತು ಗೋಡೆ ಪತ್ರಿಕೆಗಳನ್ನು ರಚಿಸುವುದು.<br>ಅಗತ್ಯ ಸಾಮಗ್ರಿಗಳು : ಮಕ್ಕಳು ರಚಿಸಿದ ಚಿತ್ರಗಳು<br>ವಿಧಾನ : ' ಪ್ರಾಣಿಸಂಗ್ರಹಾಲಯದಲ್ಲಿ ಮಾತ್ರ ನೋಡಬಹುದಾದ ವಸ್ತುಗಳು ಸಂಬಂಧಿಸಿದಂತೆ ಮಕ್ಕಳು ಬರೆದ ಚಿತ್ರಗಳನ್ನು ಕೃತಿಸಂಪುಟದಿಂದ ತೆಗೆದು ಅದರ ಬಗ್ಗೆ ಸಹಜವಾಗಿ ಮಾತನಾಡಲು ಪ್ರೋತ್ಸಾಹಿಸುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಸಹಾಯ ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು ಜೊತೆಗೆ 2ನೇ ಮತ್ತು 3ನೇತರಗತಿಯ ಮಕ್ಕಳಿಗೂ ಸ್ವತಂತ್ರವಾಗಿ ಮಾತನಾಡಲು ಅವಕಾಶ ನೀಡುವುದು.<br>*(ಸದರಿ ಚಟುವಟಿಕೆಯ ಮುಂದುವರೆದ ಭಾಗವು 43ನೇ ದಿನದಲ್ಲಿ ಮುಂದುವರೆಯುವುದು)*<br>**ಅಭ್ಯಾಸದ ಹಾಳೆಗಳು: EC-11 (ತರಗತಿ 1, 2, 3)** |
| | | ಉದ್ದೇಶಿತ ಬರಹ | ಸಾಮರ್ಥ್ಯ : ಮಕ್ಕಳೊಂದಿಗೆ ಬರವಣಿಗೆ, ಉದ್ದೇಶಿತ ಬರವಣಿಗೆ, ಅವಧಾನ ಮತ್ತು ಆಲಿಸುವುದು, ಸೃಜನಶೀಲ ಚಿಂತನೆ, ಪ<br>ಚಟುವಟಿಕೆ ಸಂಖ್ಯೆ : 32 ಹಂಚಿತ ಬರೆಹ (ಗುರಿ : 2) **ECW-8**<br>ಉದ್ದೇಶಗಳು:<br>• ಹಂಚಿತ ಬರವಣಿಗೆಯನ್ನು ಪರಿಚಯಿಸುವುದು.<br>• ಉದ್ದೇಶಕ್ಕನುಸಾರವಾಗಿ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿಸುವುದು.<br>• ಅವಧಾನದೊಂದಿಗೆ ಉದ್ದೇಶಿತ ಬರೆಹದಲ್ಲಿ ತೊಡಗಿಸುವುದು.<br>• ಸೃಜನಾತ್ಮಕವಾಗಿ ಚಿಂತಿಸಿ ಅವುಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವುದು. |

| | | |
|---|---|---|
| | | • ಪದ ಸಂಪತ್ತನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು: ಕಪ್ಪುಹಲಗೆ ಡ್ರಾಯಿಂಗ್ ಶೀಟ್<br>ವಿಧಾನ: ಹಂಚಿತ ಬರೆಹ ಚಟುವಟಿಕೆಗಳನ್ನು ತಿಂಗಳಿಗೆ ಎರಡು ಅಥವಾ ಮೂರು ಬಾರಿ ಆಯೋಜಿಸುವುದು. ಒಂದು ವಿಷಯವ<br>ಮೂಲಕ ಅಥವಾ ಬರವಣಿಗೆ ಮೂಲಕ ಹಂಚಿಕೊಳ್ಳಲು ತಿಳಿಸುವುದು.<br>ಸಲಹಾತ್ಮಕ ಸೂಚಿತ ವಿಷಯ:– ನಮ್ಮ ಊರು<br>ಗಮನಿಸಬೇಕಾದ ಅಂಶಗಳು:<br>• ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಾಕ್ಯಗಳನ್ನು ರಚಿಸಲು ಅಗತ್ಯ ಸುಳಿವುಗಳನ್ನು ನೀಡುವುದು. ಮಕ್ಕಳೊಂದಿಗೆ ಬರವಣಿಗೆಯ<br>• ಶಿಕ್ಷಕರು ಮೊದಲನೇ ವಾಕ್ಯವನ್ನು ಬರೆದು ಓದುವುದು. ನಂತರ ಮಕ್ಕಳು ತಮ್ಮ ಸ್ವಂತ ವಾಕ್ಯವನ್ನು ಹೇಳಿ ಬರೆಯಲು ತಿ ಸು<br>• ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಪ್ರತಿಕ್ರಿಯಿಸಲು ಅವಕಾಶ ಕಲ್ಪಿಸಬಹುದು. ಅಂತಹ ಸನ್ನಿವೇಶದಲ್ಲಿ ಶಿಕ್ಷಕರು ಅದನ್ನು ಕಲ<br>ತರಗತಿವಾರು ವಿವರ: 1ನೇ ತರಗತಿಯವರು ವಿವರಿ□ದ ಅಂಶಗಳನ್ನು 2ನೇ ಹಾಗೂ 3ನೇ□ತರಗತಿಯ ಮಕ್ಕಳು ಬರ□ಣಿ□ ಮೂ |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| | **ಹೊರಾಂ ಗಣ ಆಟಗಳು** | ಚಟುವಟಿಕೆ –19 ಜಿಗಿಯುವುದು, ಕುಪ್ಪಳಿಸುವುದು, ತಿರುಗುವುದು<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ವಿನ್ಯಾಸದ ಅರಿವು, ದೇಹದ ಸಮತೋಲನ ,ಕಾಲುಗಳ ಹೊಂದಾಣಿಕೆ<br>ವಿಧಾನ: *ನೆಲದ ಮೇಲೆ ವೃತ್ತವನ್ನು ಬಿಡಿಸುವುದು .<br>• ಶಿಕ್ಷಕರು ವೃತ್ತದ ಒಳಗೆ ಹಾಗು ಹೊರಗೆ ಜಿಗಿಯುವುದನ್ನು ಪ್ರದರ್ಶಿಸುವುದು .<br>• ಮಕ್ಕಳಿಗೆ ವೃತದ ಒಳಗೆ ಹಾಗೆ ಹೊರಗೆ ಜಿಗಿಯಲು ಸೂಚಿಸುವುದು .<br>**ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೂ ಇದೆ ಆಟವನ್ನು ಮುಂದುವರೆಸುವುದು.** |
| | **ಕಥಾ ಸಮಯ** | **ಶೀರ್ಷಿಕೆ :** ನೀಲಿ ಬಣ್ಣದ ನರಿ<br>**ಸಾಮಗ್ರಿಗಳು :**ಸಂಭಾಷಣೆಯ ಹಾಳೆಗಳು.<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು. * ಏಕಾಗ್ರತೆಯನ್ನು ಹೆಚ್ಚಿಸುವುದು.<br>➢ ನಿರರ್ಗಳವಾಗಿ ಮಾತನಾಡುವ ಕೌಶಲ ರೂಢಿಸುವುದು. * ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು.<br>➢ ಪ್ರಶ್ನಿಸುವ ಮನೋಭಾವವುಂಟುಮಾಡುವುದು. * ಸೃಜನಶೀಲತೆಯನ್ನು ಅಭಿವೃದ್ಧಿ ಪಡಿಸುವುದು.<br>➢ ಹಾಗಾದರೆ, ಹಾಗಾಗದಿದ್ದರೆ ಇತ್ಯಾದಿ ಸಂದರ್ಭಗಳಿಗೆ ಹೋಲಿಸುವ ಕೌಶಲ ಬೆಳೆಸುವುದು.<br>➢ ಮೌಲ್ಯಗಳನ್ನು ರೂಢಿಸುವುದು.<br>➢ **ಪದ ಸಂಪತ್ತನ್ನು ಹೆಚ್ಚಿಸುವುದು.**<br>➢ **ಊಹಿಸುವ ಕೌಶಲವನ್ನು ಹೆಚ್ಚಿಸುವುದು.**<br>**ವಿಧಾನ :**<br>***ಪಾತ್ರಾಭಿನಯ***<br>➢ ಕಥೆಯನ್ನು ಪುನರಾವಲೋಕನ ಮಾಡಿಕೊಳ್ಳುವುದು.<br>➢ ಕಥೆಯ ನಿರೂಪಣೆಯನ್ನುಮಾಡಲುಎರಡು ಮತ್ತು ಮೂರನೇತರಗತಿಯ ಮಕ್ಕಳಿಗೆ ಸಹಕರಿಸುವುದು.<br>➢ ಮಕ್ಕಳು ಸಂಭಾಷಣೆಯನ್ನು ಸ್ಪಷ್ಟವಾಗಿ ಹೇಳದಿದ್ದರೂ ಸಕಾರಾತ್ಮಕವಾಗಿ ಸ್ವೀಕರಿಸಿ ಆ ನಂತರ ಸರಿಪಡಿಸಿ ಕಥೆಯನ್ನು ಮುಂದುವರೆಸಲು ಹೇಳುವುದು. |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಒಮ್ಮೆ ಶೀಘ್ರವಾಗಿ ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

DRAFT 22.02.22

**ವಾರ–7** **ದಿನ–42 (ಶನಿವಾರ)**

| | | | | |
|---|---|---|---|---|
| | ಪ್ರತಿಬಿಂಬ (ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | | |
| | ನನ್ನ ಸಾಧನೆ | | | |
| | ಕಲಿಕಾಫಲಗಳು | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
| | ಆರೋಗ್ಯಕರ ನೈರ್ಮಲ್ಯ ಅಭ್ಯಾಸಗಳನ್ನು ಪಾಲಿಸುವರು. | | | |
| | ಗುಂಪು ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವರು. | | | |
| | ಚಟುವಟಿಕೆಗಳು ನಡೆಯುವಾಗ ಮುಂದಾಳತ್ವ ವಹಿಸುವರು. | | | |
| | ಶಿಶುಗೀತೆ/ಹಾಡುಗಳನ್ನು ಹಾಡುವುದನ್ನು ಆನಂದಿಸುವರು. | | | |
| | ಇತರರೊಂದಿಗೆ ಸಾಮಾಜಿಕ ಸಂಬಂಧವನ್ನು ಹೊಂದಲು ಪ್ರಯತ್ನಿಸುವರು. | | | |
| | ಮಾರ್ಗದರ್ಶನವಿದ್ದಾಗ ಸರಳ ನೈಸರ್ಗಿಕ ವಿದ್ಯಮಾನಗಳನ್ನು ಗಮನಿಸಿ ಅನ್ವೇಷಿಸುವರು. | | | |
| | ವಿವಿಧ ಆಕಾರಗಳನ್ನು ಗುರುತಿಸಿ ಹೆಸರಿಸುವರು. (ವೃತ್ತ, ತ್ರಿಭುಜ, ಚೌಕ ಮತ್ತು ಆಯತ) | | | |
| | 2 ರಿಂದ 4 ಅಡತಡೆಗಳು ಇರುವ ಪಜಲ್/ಮಾಯಾಜಾಲ ಸಮಸ್ಯೆಗಳನ್ನು ಪರಿಹರಿಸುವರು. | | | |
| | ತರಗತಿಯ ದಿನಚರಿಯನ್ನು ಹಾಗೂ ನಿಯಮಗಳನ್ನು ಅನುಸರಿಸುವರು. | | | |
| | ಪ್ರಾಸಪದಗಳನ್ನು ಗುರುತಿಸುವರು. | | | |
| | ಧ್ವನಿ–ಸಂಕೇತಗಳ ಸಂಯೋಜನೆಯನ್ನು ಗುರುತಿಸುವರು. | | | |
| | ಪದಗಳನ್ನು ಓದಲು ಪ್ರಯತ್ನಿಸುವರು. | | | |

DRAFT 22.02.22

**ವಾರ–8** **ದಿನ–43 (ಸೋಮವಾರ)**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 43 | ಶುಭಾಶಯ ವಿನಿಮಯ<br>*(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1:**<br>ಏಕ್– ದೋ –ಏಕ್ / 1–2–1–2 ಎಣಿಸುವ ಮೂಲಕ ಕದಮ್ ತಾಲ್ ಮಾಡುವ ಮೂಲಕ ಒಂದು ಸಾಲಿನಲ್ಲಿ ತರಗತಿಯನ್ನು ಪ್ರವೇಶಿಸಲು ಮಕ್ಕಳಿಗೆ ತಿಳಿಸಿ.<br>**ಚಟುವಟಿಕೆ 2:**<br>ಸಾಮಗ್ರಿಗಳು: . ಚಪ್ಪಾಳೆ ತಟ್ಟುವುದು, ಓಡುವುದು, ಜಿಗಿಯುವುದು, ಕುಳಿತುಕೊಳ್ಳುವುದು, ನಿಂತಿರುವುದು, ತಲೆದೂಗುವುದು ಇತ್ಯಾದಿ ಕ್ರಿಯೆಗಳನ್ನು ಹೊಂದಿರುವ ಕೆಲವು ಕಾರ್ಡ್‌ಗಳು<br>• ಸಮಯ: 5 ನಿಮಿಷಗಳು<br>• ವಿಧಾನ:<br>ಮಕ್ಕಳನ್ನು ಸಾಲಿನಲ್ಲಿ ನಿಲ್ಲುವಂತೆ ಮಾಡಿ<br>ಕಾರ್ಡ್‌ಗಳನ್ನು ಒಂದೊಂದಾಗಿ ತೋರಿಸಿ ಮತ್ತು ಕಾರ್ಡ್‌ಗಳ ಪ್ರಕಾರ ಕ್ರಿಯೆಗಳನ್ನು ಮಾಡಲು ಮಕ್ಕಳಿಗೆ ತಿಳಿಸಿ<br>• ಉದಾಹರಣೆಗೆ, ಶಿಕ್ಷಕರು ಚಪ್ಪಾಳೆ ತಟ್ಟುವ ಕಾರ್ಡ್ ತೋರಿಸಿದರೆ ಎಲ್ಲಾ ಮಕ್ಕಳು ಚಪ್ಪಾಳೆ ತಟ್ಟಬೇಕು<br>. ಇದೆ ರೀತಿ ಬೇರೆ ಕಾರ್ಡ್ಗಳನ್ನು ತೋರಿಸಿ ಚಟುವಟಿಕೆಯನ್ನು ಮುಂದುವರೆಸುವುದು |
| | ಮಾತು ಕತೆ<br>*( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | ಸೂಚನೆ: ಹೆಚ್ಚು ಸೂಚನೆಗಳನ್ನು ಬಳಸಬೇಡಿ.<br>**ಚಟುವಟಿಕೆ 2: ನನ್ನ ನೆಚ್ಚಿನ ಬೊಂಬೆ**<br>ಬೇಕಾಗುವ ಸಾಮಗ್ರಿಗಳು: ವಿವಿಧ ರೀತಿಯ ಗೊಂಬೆಗಳು. (ಕಾಗದದ ಬೊಂಬೆ, ಬೊಂಬೆಗಳು, ಮರದ ಬೊಂಬೆಗಳು, ಉಣ್ಣೆಯ ಬೊಂಬೆಗಳು, ಟೆಡ್ಡಿ ಬೇರ್, ಬಟ್ಟೆಗಳ ಬೊಂಬೆಗಳು, ಕೋಲುಗಳಿಂದ ತಯಾರಿಸಿದ ಬೊಂಬೆಗಳು, ಸ್ಥಳೀಯ ಲಭ್ಯವಿರುವ ಬೊಂಬೆಗಳು ಇತ್ಯಾದಿ.<br>ವಿಧಾನ:<br>1. ಮಕ್ಕಳನ್ನು ಅರ್ಧ ವೃತ್ತದಲ್ಲಿ ಕೂರಿಸಿ.<br>2.ವಿವಿಧ ರೀತಿಯ ಬೊಂಬೆಗಳನ್ನು ಟ್ರೇನಲ್ಲಿ ಇರಿಸಿ.<br>3. ಮಕ್ಕಳನ್ನು ಒಬ್ಬೊಬ್ಬರಾಗಿ ಕರೆದು ಟ್ರೇನಿಂದ ಬೊಂಬೆಯನ್ನು ಆರಿಸಲು ಹೇಳಿ. (ಅವರ ಆಯ್ಕೆಯ)<br>4.ನಂತರ ಆಯ್ಕೆ ಮಾಡಿದ ಆಟಿಕೆಗಳ ಬಗ್ಗೆ ಅವರ ಅಭಿಪ್ರಾಯವನ್ನು ಪಡೆಯಲು ಕೆಲವು ಪ್ರಶ್ನೆಗಳನ್ನು ಕೇಳಿ.<br>ಪ್ರಶ್ನೆಗಳು: ಅದು ಏನು? ನೀವು ಈ ಆಟಿಕೆಯನ್ನು ಏಕೆ ಆರಿಸಿಕೊಂಡಿದ್ದೀರಿ? ನೀವು ಎಂದಾದರೂ ಈ ಆಟಿಕೆಯೊಂದಿಗೆ ಆಡಿದ್ದೀರಾ? ನಿನಗೆ ಇದು ಇಷ್ಟಾನಾ? ನೀವು ಏಕೆ ಇಷ್ಟಪಡುತ್ತೀರಿ? ನಿಮಗೆ ಏಕೆ ಇಷ್ಟವಿಲ್ಲ?<br>5.ತಮ್ಮ ಮಾತೃ ಭಾಷೆಯಲ್ಲಿ ಉತ್ತರಿಸಲು ಮಕ್ಕಳನ್ನು ಪ್ರೋತ್ಸಾಹಿಸಿ.<br>ವ್ಯತ್ಯಾಸ: ವರ್ಗ–2 ಮತ್ತು 3 ಕ್ಕೆ<br>ನೀಡಲಾದ ಪ್ರಶ್ನಾವಳಿಯ ಜೊತೆಗೆ, ಈ ಪ್ರಶ್ನೆಗಳನ್ನು ಬಳಸಬಹುದು.<br>• ಆಯ್ಕೆ ಮಾಡಿದ ಆಟಿಕೆಯೊಂದಿಗೆ ನೀವು ಹೇಗೆ ಆಡುತ್ತೀರಿ?<br>• ನೀವು ನಿಮ್ಮ ಸ್ವಂತ ಆಟಿಕೆಯನ್ನು ಮಾಡುತ್ತೀರಾ?<br>• ನೀವು ಅದನ್ನು ಹೇಗೆ ಮಾಡುತ್ತೀರಿ?<br>• ನೀವು ಯಾರೊಂದಿಗೆ ಆಡಲು ಬಯಸುತ್ತೀರಿ? ಏಕೆ? |

DRAFT 22.02.22

| | | | |
|---|---|---|---|
| | ನನ್ನ ಸಮಯ(Free Indore play) | | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | | **ಸಾಮರ್ಥ್ಯ: ಸ್ಥಳಾವಕಾಶದ ಅರಿವು.**<br>**ಚಟುವಟಿಕೆ: 27 ಯಾರು ಎಲ್ಲಿದ್ದಾರೆ ? ( ಗುರಿ–3 )**<br>**ಉದ್ದೇಶ:– ಹತ್ತಿರ ದೂರ ಕಲ್ಪನೆ ಮೂಡಿಸುವುದು.**<br>**ಅಗತ್ಯ ಸಾಮಗ್ರಿಗಳು : ತರಗತಿಯಲ್ಲಿ ಲಭ್ಯವಿರುವ ವಸ್ತುಗಳು**<br>**ವಿಧಾನ : ಒಂದು ಮಗುವನ್ನು ತರಗತಿಯ ಕಪ್ಪು ಹಲಗೆಯ ಬಳಿ ನಿಲ್ಲುವಂತೆ ಹೇಳಿ ಮತ್ತೊಂದು ಮಗುವನ್ನು ಅವನ/ಅವಳ ಪಕ್ಕದಲ್ಲಿ ನಿಲ್ಲುವಂತೆ ಹೇಳುವುದು. (ಅವನನ್ನು ಎ ಎಂದು ಗುರುತಿಸುವುದು). ತರಗತಿಯ ಇನ್ನೊಂದು ತುದಿಯಲ್ಲಿ ಮತ್ತೊಂದು ಮಗುವನ್ನು ನಿಲ್ಲುವಂತೆ ಹೇಳುವುದು. ( ಅವನನ್ನು ಬಿ ಎಂದು ಗುರುತಿಸುವುದು). ಕಪ್ಪು ಹಲಗೆಯ ಬಳಿ ನಿಂತಿರುವ ಮಗುವಿಗೆ ಎ ಹತ್ತಿರದಲ್ಲಿದೆ, ಬಿ ದೂರದಲ್ಲಿದೆ ಎಂಬುದನ್ನು ವಿವರಿಸುವುದು. ಇದೇ ಚಟುವಟಿಕೆಯನ್ನು ಬೇರೆ ಬೇರೆ ಮಕ್ಕಳನ್ನು ಬಳಸಿ ಪುನರಾವರ್ತಿಸಿ, ವಿವಿಧ ಮಕ್ಕಳನ್ನು ಗುಂಪುಗಳಲ್ಲಿ ಮಾಡಿಸುವುದು. ಶಿಕ್ಷಕರು ಬೇರೆ ಬೇರೆ ಮಕ್ಕಳ ಹತ್ತಿರ ನಿಂತುಕೊಳ್ಳುವುದು. ಯಾರು ನನಗೆ ಹತ್ತಿರದಲ್ಲಿದ್ದಾರೆ? ಯಾರು ನನಗೆ ದೂರದಲ್ಲಿದ್ದಾರೆ ಎಂದು ಪ್ರಶ್ನಿಸಿ ಹತ್ತಿರ ದೂರ ಕಲ್ಪನೆ ಮೂಡಿಸುವುದು**<br>**ತರಗತಿ–2**<br>**4 ರಿಂದ 5 ಮಕ್ಕಳನ್ನು ನಿಲ್ಲಿಸಿ ಎ,ಬಿ,ಸಿ,ಡಿ,ಇ ಎಂದು ಹೆಸರು ನೀಡುವುದು.**<br>**ಪ್ರಶ್ನೆಗಳನ್ನು ಕೇಳಿ ಮಕ್ಕಳಿಗೆ ಹತ್ತಿರ–ದೂರದ ದೃಢೀಕರಣ ಮಾಡುವುದು.**<br>**ತರಗತಿ–3**<br>**ಶಾಲೆಯಲ್ಲಿರುವ ವಿವಿಧ ವಸ್ತುಗಳನ್ನು ತೋರಿಸಿ ದೂರ–ಹತ್ತಿರ ಯಾವುದು ಎಂದು ತಿಳಿಯುವುದು.**<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: I. L. -26,27,28 (ತರಗತಿ 1, 2, 3)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಎ ಅಕ್ಷರಗಳ ಮೇಲೆ ತಿದ್ದುವುದು.[ ಮರಳು] ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಕನ್ನಡ ಅಕ್ಷರಗಳನ್ನು ಬರೆಯುವ ಪೂರ್ವಭಾವಿ ಚಟುವಟಿಕೆಯಾಗುತ್ತದೆ.<br>ಸಾಮಗ್ರಿಗಳು : ಮರಳು ಮತ್ತು ಕಡ್ಡಿ.<br>ವಿಧಾನ : ಮಕ್ಕಳುಕನ್ನಡ ಅಕ್ಷರಗಳನ್ನು ಬರೆಯುವ ಕ್ರಮದಂತೆ ತಿದ್ದಿಸಿ ಆ ಅಕ್ಷರಕ್ಕೆ ಚಿತ್ರಗಳನ್ನು ರಚಿಸಲು ಹೇಳುವುದು. ಮಗು ತನಗೆ ಇಷ್ಟವಾದ/ ಬರುವ ಕನ್ನಡ ಅಕ್ಷರಗಳನ್ನು/ ತನ್ನ ಹೆಸರಿನ ಮೊದಲ ಅಕ್ಷರ/ ತನ್ನ ಹೆಸರಿನ ಅಕ್ಷರಗಳನ್ನು ಬರೆಯಲು ಪ್ರೋತ್ಸಾಹಿಸುವುದು.<br>ವಿವರ; 2 ನೇ ತರಗತಿಗೆ ಮಕ್ಕಳು ಕಲಿತಿರುವ/ತಿಳಿದಿರುವ ಕನ್ನಡ ಪದಗಳನ್ನು ಬರೆಯಲು ತಿಳಿಸುವುದು.<br>3 ನೇ ತರಗತಿಗೆ ಮಕ್ಕಳಗೆ ಯಾವುದಾದರೊಂದು ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಬರೆಯಲು ತಿಳಿಸುವುದು.<br>ಉದಾ: ಮ – ಮರ, ಮನೆ, ಮಗ ಇತ್ಯಾದಿ |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ : ಆಲಿಸುವಿಕೆ, ಸೃಜನಾತ್ಮಕ, ಸ್ವ– ಅಭಿವ್ಯಕ್ತಿ, ಔಪಚಾರಿಕ ಮಾತುಗಾರಿಕೆ,**<br>**ಚಟುವಟಿಕೆ: 8. ಆಶುಭಾಷಣ (ಗುರಿ–2) ECL-6**<br>**ಉದ್ದೇಶ :**<br>*** ಆಯ್ದುಕೊಂಡ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡುವುದು.**<br>*** ಔಪಚಾರಿಕ ಮಾತುಗಾರಿಕೆಯ ಕೌಶಲವನ್ನು ಬೆಳೆಸುವುದು.**<br>*** ಆಲಿಸಿದ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳುವುದು.** |

DRAFT 2022

| | | | |
|---|---|---|---|
| | | | * ಸೃಜನಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.<br>ಸಾಮಗ್ರಿ : ಪ್ರಾಣಿ, ಪಕ್ಷಿ, ವಾಹನಗಳ ಚಿತ್ರಗಳ ಮಿಂಚುಪಟ್ಟಿಗಳು<br>ವಿಧಾನ : ಡಬ್ಬದಲ್ಲಿ ಪ್ರಾಣಿ, ಪಕ್ಷಿ, ವಿವಿಧ ವಾಹನಗಳ ಚಿತ್ರಗಳ ಮಿಂಚುಪಟ್ಟಿಗಳನ್ನು ಹಾಕುವುದು, . ಮಕ್ಕಳಿಗೆ ಡಬ್ಬದಲ್ಲಿ ಕೈ ಹಾಕಿ ಯಾವುದಾದರೂ ಒಂದು ಮಿಂಚುಪಟ್ಟಿಯನ್ನು ತೆಗೆದುಕೊಂಡು ಅದರಲ್ಲಿರುವ ಚಿತ್ರದ ಬಗ್ಗೆ ತಮ್ಮದೇ ಮಾತುಗಳಲ್ಲಿ ಹೇಳಲು ಅವಕಾಶ ನೀಡುವುದು.<br>ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಆಯ್ಕೆ ಮಾಡಿಕೊಂಡ ವಿಷಯದ ಕುರಿತು 2 ರಿಂದ 3 ನಿಮಿಷಗಳ ಕಾಲ ಮಾತನಾಡುವುದು.. 3ನೇ ತರಗತಿಯ ಮಕ್ಕಳು ವಿಷಯದ ದೈನಂದಿನ ಬಳಕೆ ಅಥವಾ ಅನ್ವಯಿಕ ಅಂಶಗಳ ಬಗ್ಗೆ ಮಾತನಾಡುವುದು. |
| | | ಅರ್ಥಗ್ರಹಿಕೆ ಯೊಂದಿಗಿನ ಓದು | ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>ಚಟುವಟಿಕೆ....18<br>ಚಿತ್ರ ಸಂಪುಟ (ಗುರಿ–2) ವಿಷಯ: ' ಪ್ರಾಣಿಸಂಗ್ರಹಾಲಯದಲ್ಲಿ ಮಾತ್ರ ನೋಡಬಹುದಾದ ವಸ್ತುಗಳು ',<br>ದ್ದೇಶ:<br>ಮಕ್ಕಳು ಗುಂಪಿನಲ್ಲಿ ಕುಳಿತು ತಯಾರಿಸಿದ ಗೋಡೆ ಪತ್ರಿಕೆಗಳನ್ನು ರಚಿಸಿ ಮಂಡಿಸುವುದು<br>ಅಗತ್ಯ ಸಾಮಗ್ರಿಗಳು : ಚಾರ್ಟಗಳು, ಸ್ವರಚಿತ ಚಿತ್ರಗಳು, ಕ್ರೇಯಾನ್ಸ್, ಅಂಟು, ಇಂಚುಪಟ್ಟಿ, ಟ್ಯಾಗ್<br>ವಿಧಾನ : ಮಕ್ಕಳು ಗುಂಪುಗಳಲ್ಲಿ ಅಗತ್ಯ ಸಾಮಗ್ರಿ ಬಳಸಿ ಪ್ರಾಣಿಸಂಗ್ರಹಾಲಯದಲ್ಲಿ ಮಾತ್ರ ನೋಡಬಹುದಾದ ವಸ್ತುಗಳ ಬಗ್ಗೆ ಗೋಡೆ ಪತ್ರಿಕೆ ತಯಾರಿಸಲು ಅಗತ್ಯ ಸಹಾಯ ನೀಡುವುದು. ರಚಿಸಿದ ಗೋಡೆ ಪತ್ರಿಕೆಯನ್ನು ತರಗತಿಯಲ್ಲಿ ಮಂಡಿಸಲು ಅವಕಾಶ ನೀಡುವುದು.<br>ಸಿದ್ಧವಾದ ಗೋಡೆಪತ್ರಿಕೆಗಳನ್ನು ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳಿಗೆ ಸಹಾಯ ಒದಗಿಸಿ ಗುಂಪುಗಳಲ್ಲಿ ಯೋಜನಾಕಾರ್ಯಗಳನ್ನು ಮಾಡಲು ತಿಳಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ, ಆಲಿಸಿ ಅರ್ಥ ಮಾಡಿಕೊಳ್ಳುವುದು, ಪರಿಸರದ ಅರಿವು.<br>ಚಟುವಟಿಕೆ....33 ಪಟ್ಟಿ ಮಾಡೋಣ (ಗುರಿ–2) **ECW-10**<br>ಉದ್ದೇಶಗಳು:<br>• ಉದ್ದೇಶಕ್ಕನುಸಾರವಾಗಿ ಬರವಣಿಗೆ ಮಾಡಲು ಅವಕಾಶ ನೀಡುವುದು.<br>• ಸೃಜನಶೀಲ ಚಿಂತನೆಯನ್ನು ಬೆಳೆಸುವುದು.<br>• ಪರಿಸರದ ಅರಿವು ಮೂಡಿಸುವುದು.<br>• ಪದಸಂಪತ್ತನ್ನು ಹೆಚ್ಚಿಸುವುದು.<br>• ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಕಾಗದ, ಕ್ರೇಯಾನ್ಸ್,<br>ವಿಧಾನ : ಮಕ್ಕಳ ಪದಸಂಪತ್ತನ್ನು ಹೆಚ್ಚಿಸಲು ಹಾಗೂ ಉದ್ದೇಶಿತ ಬರವಣಿಗೆಗೆ ಅವಕಾಶ ಕಲ್ಪಿಸಲು ಮಕ್ಕಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಲು ತಿಳಿಸಿ.<br>ಸೂಚಿತ ವಿಷಯ: ಸಾಕು ಪ್ರಾಣಿಗಳು<br>ಇಡೀ ತರಗತಿಯನ್ನು ಒಳಗೊಂಡಂತೆ ಒಂದು ಚಾರ್ಟ್‌ಪೇಪರ್‌ನಲ್ಲಿ ಪಟ್ಟಿ ಮಾಡುವ ಚಟುವಟಿಕೆಯನ್ನು ಆಯೋಜಿಸಬಹುದು. ಈ ಚಾರ್ಟ್‌ನಲ್ಲಿ ಬಳಸಬಹುದಾದ ಸಾಮಾನ್ಯ ಪದಗಳ ಪಟ್ಟಿಯನ್ನು ಶಿಕ್ಷಕರೇ ಸಿದ್ಧಪಡಿಸಿ, ಮಕ್ಕಳು ಇವುಗಳನ್ನು ನೋಡಲು ಹಾಗೂ ಓದಲು ಸಹಾಯಕವಾಗುವಂತೆ ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.<br>ತರಗತಿವಾರು ವಿವರ: 1ನೇ ತರಗತಿಯವರು ತಯಾರಿಸಿರುವ ಪಟ್ಟಿಗೆ 2ನೇ ತರಗತಿಯ ಮಕ್ಕಳು ಹೆಚ್ಚುವರಿಯಾಗಿ ಪದಗಳನ್ನು ಸೇರಿಸಲಿ. 3ನೇ ತರಗತಿಯವರು ಪಟ್ಟಿಯಲ್ಲಿರುವ ಪದಗಳಿಗೆ ಸ್ವಂತ ವಾಕ್ಯಗಳನ್ನು ರಚಿಸಲು ಅವಕಾಶ ಮಾಡಿಕೊಡಿ. |

DRAFT 2022

| | | |
|---|---|---|
| | | **ಬರವಣಿಗೆಯ ಮಾದರಿ:**<br>**ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.**<br>**ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.** |
| | **ಹೊರಾಂಗಣ ಆಟಗಳು** | ಚಟುವಟಿಕೆ – ಚೆಂಡನ್ನು ಒದೆಯುವುದು<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ,ಚಲನೆಯ ಸಮತೋಲನವನ್ನು ಅಭಿವೃದ್ಧಿ ಪಡಿಸುವುದು ಚಲನೆಯ ಸಮತೋಲನವನ್ನು ಅಭಿವೃದ್ಧಿ ಪಡಿಸುವುದು.<br>ಬೇಕಾಗುವ ಸಾಮಗ್ರಿ: ಹಗುರವಾದ ದೊಡ್ಡ ಚೆಂಡು<br>ವಿಧಾನ:<br>• ನೆಲದಮೇಲೆ ನೇರವಾದ ಗೆರೆಯನ್ನು ಎಳೆಯಲು ಸೂಚಿಸುವುದು.<br>• ಮಕ್ಕಳನ್ನು ಸರತಿ ಸಾಲಿನಲ್ಲಿ ನಿಲ್ಲಲು ಸೂಚಿಸುವುದು.<br>• ಆಟ ಶುರುವಾದಾಗ ಮಕ್ಕಳು ತಮ್ಮ ಕಾಲಿನದಿಂದ ಚೆಂಡನ್ನು ನೇರ ಗೆರೆಯ ಮೇಲೆ ಒದೆಯಲು ಸೂಚಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೆ ಎಡ ಪದ ಹಾಗು ಬಲ ಪದ ಬಳಸಿ ಚೆಂಡನ್ನು ಒದೆಯಲು ಸೂಚಿಸುವುದು ಉದಾ :ಗೋಡೆಗೆ ಒದೆಯುವುದು.** |
| | **ಕಥಾ ಸಮಯ** | **ಶೀರ್ಷಿಕೆ :** ಕಾಗೆ ಮತ್ತು ಸಿಗ್ನಲ್ ದೀಪ<br>**ಸಾಮಗ್ರಿಗಳು :**ಕಥೆಯ ಸಾಹಿತ್ಯ<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು.<br>**ವಿಧಾನ :**<br>***ಕಥಾ ಸಾಹಿತ್ಯ ನಿರೂಪಣೆ***<br>➢ ಶಿಕ್ಷಕರು ಕಥೆ ಹೇಳುವ ಮುನ್ನಕಥೆಯನ್ನು ಓದಿ ಅಭ್ಯಸಿಕೊಳ್ಳಬೇಕು.<br>➢ ಸರಳ ಭಾಷೆಯಲ್ಲಿಕಥೆಯನ್ನು ಹೇಳಬೇಕು.<br>➢ ಕಥೆ ಹೇಳುವಾಗ ಶಿಕ್ಷಕರು ಮಕ್ಕಳೊಂದಿಗೆ ವೃತ್ತದಲ್ಲಿ ಕುಳಿತುಕೊಳ್ಳಬೇಕು.<br>➢ ಸರಳ ಪ್ರಶ್ನೆಗಳ್ನು ಕೇಳಿ ಕಥೆಯನ್ನುಅರ್ಥೈಸಬೇಕು.<br>**ಕಥೆ :**<br>**ಒಂದು ಸಿಗ್ನಲ್ ದೀಪದ ಬಳಿ ಒಂದು ಮರವಿತ್ತು. ಆ ಮರದಲ್ಲಿಕಾಗೆಯೊಂದು ವಾಸವಾಗಿತ್ತು. ಅದು ಪ್ರತಿ ದಿನವೂ ಸಿಗ್ನಲ್ ದೀಪವನ್ನು ಗಮನಿಸುತ್ತಿತ್ತು. ವಾಹನಗಳು ಬರುವುದು, ನಿಲ್ಲುವುದು ಹಾಗೂ ಹೋಗುವುದನ್ನು ನೋಡುತ್ತಿತು. ಒಂದು ದಿನ ಎಲ್ಲಾ ಸ್ನೇಹಿತರನ್ನುಕರೆಯಿತು. ಎಲ್ಲರಿಗೂ ನಾನೇ ರಾಜನೆಂದಿತು. "ರಾಜನಾಗಲು ನಿನಗೆ ಯಾವಅರ್ಹತೆಇದೆ?" ಎಂದುಎಲ್ಲಾ ಕಾಗೆಗಳು ಪ್ರಶ್ನಿಸಿದವು. ಅದಕ್ಕೆ ಆ ಕಾಗೆಯುತನ್ನಲ್ಲಿ ವಿಶೇಷ ಶಕ್ತಿ ಇರುವುದಾಗಿ ತಿಳಿಸಿತು. ಅದನ್ನುತೋರಿಸುವುದಾಗಿ ಹೇಳಿ ಮಂತ್ರವನ್ನು ಪಠಿಸುವಂತೆ ನಟಿಸಿತು. ಕೆಂಪು ಸಿಗ್ನಲ್ ದೀಪ ಬರುವುದನ್ನು ಗಮನಿಸಿ "ಎಲ್ಲಾ ವಾಹನಗಳು ನಿಲ್ಲಲಿ" ಎಂದಿತು. ಕೆಂಪು ದೀಪ ಬಂದಿದ್ದರಿಂದಎಲ್ಲಾ ವಾಹನಳು ನಿಂತವು. ಇದನ್ನು ಮನಿಸಿದ ಉಳಿದ ಕಾಗೆಗಳಿಗೆ ಆಶ್ಚರ್ಯವೆನಿಸಿತು. ಹಳದಿ ಬಣ್ಣದ ದೀಪ ಬಂದಕೂಡಲೇಕಾಗೆಯುಎಲ್ಲಾ ವಾಹನಗಳು ಹೊರಡಲು ಸಿದ್ಧರಾಗಿ ಎಂದಿತು. ಎಲ್ಲಾ ವಾಹನಗಳು "ಬುರ್ ಬುರ್<br>" ಎಂದು ಹೊರಡಲು ಸಿದ್ಧವಾದವು. ಹಸಿರು ದೀಪ ಬಂದಕೂಡಲೇಎಲ್ಲಾ ವಾಹನಗಳು ಹೊರಡಲಿ ಎಂದುಕಾಗೆಯುಕೂಗಿತು. ಎಲ್ಲಾ ವಾಹನಗಳು ಹೊರಟವು. ಇದನ್ನುಕಂಡಇತರ ಕಾಗೆಗಳು ಆಶ್ಚರ್ಯಗೊಂಡವು. ನಂತರಎಲ್ಲಾ ಕಾಗೆಗಳು ಸೇರಿ ಆ ಕಾಗೆಯನ್ನುತಮ್ಮರಾಜನನ್ನಾಗಿ ಮಾಡಿದವು.**<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>**13) ಕಾಗೆಗೆ ಎಂತಹ ಆಸೆ ಮೂಡಿತು?**<br>**14) ರಾಜನಾಗಲು ನಿನಗೆ ಇರುವ ಅರ್ಹತೆ ಏನು ಎಂದು ಯಾರು ಕೇಳಿದರು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ |

DRAFT 22.02.22

| | | |
|---|---|---|
| | | • ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• "ಸಿಪ್ಪೆ ಸುಲಿದು ನೇರವಾಗಿ ತಿನ್ನುವ ಹಣ್ಣುಗಳ ಬಗ್ಗೆ" ಮಕ್ಕಳು ತಮ್ಮ ಮನೆಗಳಲ್ಲಿ ಮಾಹಿತಿ ಸಂಗ್ರಹಿಸಿಕೊಂಡು ಬರಲಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–8** **ದಿನ–44 (ಮಂಗಳವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 44 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | 43 ನೇ ದಿನದ ಚಟುವಟಿಕೆ ಮಾಡಿಸುವುದು. |
| | ಮಾತು ಕತೆ | ದಿನ 43 ರ **ಚಟುವಟಿಕೆ 2: ನನ್ನ ನೆಚ್ಚಿನ ಬೊಂಬೆ ಯನ್ನು ಮಾಡಿಸಿ.** |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಆಕೃತಿಯ ಪರಿಕಲ್ಪನೆ**<br>**ಚಟುವಟಿಕೆ–26 "ಆಕೃತಿಗಳನ್ನು ಗುರುತಿಸು ಮತ್ತು ಹೆಸರಿಸು" ( ಗುರಿ –3)**<br>**ಉದ್ದೇಶ:– ವಿವಿಧ ಆಕೃತಿಗಳ ಬಗ್ಗೆ ತಿಳಿದುಕೊಳ್ಳುವುದು.**<br>**ಸಾಮಗ್ರಿಗಳು: ವಿವಿಧ ಆಕೃತಿಗಳು, ಫ್ಲಾಪ್ಲಿ, ಆಡಿಯೋ ಪ್ಲೇಯರ್, ಟಿ.ವಿ**<br>**ವಿಧಾನ: ವಿವಿಧ ಆಕೃತಿಗಳನ್ನು ಪ್ರತಿ ಮಗುವಿಗೆ ನೀಡಿರಿ. ಆಕೃತಿಗಳ ಬಗ್ಗೆ ಒಂದು ಹಾಡು/ಪದ್ಯವನ್ನು ಹಾಕಿರಿ ಅಥವಾ ಹಾಡಿಸಿರಿ. ಮಕ್ಕಳು ಹಾಡು/ಪದ್ಯದಲ್ಲಿ ಬರುವ ಆಕೃತಿಗಳನ್ನು ತೋರಿಸುತ್ತಾ ಹಾಡನ್ನು ಪುನರಾವರ್ತಿಸಲಿ. ಪ್ರತಿ ಮಗು ಹಾಡುವಾಗ ಪ್ರಸ್ತಾಪವಾಗುವ ಆಕೃತಿಯನ್ನು ಮುಟ್ಟಿ ನೋಡಲು ಪ್ರೋತ್ಸಾಹಿಸಿ. ನಂತರ ಮಕ್ಕಳಿಗೆ ಯಾವುದಾದರೂ ಆಕೃತಿಯ ಬಗ್ಗೆ ಮಾತನಾಡಲು ಪ್ರೇರೇಪಿಸಿ.**<br>**ತರಗತಿ–2**<br>**ವಿವಿಧ ಆಕೃತಿಗಳನ್ನು ನೀಡಿ ಅವುಗಳ ಹೆಸರನ್ನು ಹೇಳಲು ತಿಳಿಸುವುದು.**<br>**ತರಗತಿ–3**<br>**ಆಕೃತಿಗಳ ಚಿತ್ರ ಬರೆದು ಬಣ್ಣ ತುಂಬಲು ಹೇಳುವುದು.**<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: I. L. -29,30 (ತರಗತಿ 1, 2, 3)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಎ ಅಕ್ಷರಗಳ ಮೇಲೆ ತಿದ್ದುವುದು.[ ಮರಳು] ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಇಂಗ್ಲಿಷ್ ಅಕ್ಷರಗಳನ್ನು ಬರೆಯುವ ಕ್ರಮ ತಿಳಿಯುತ್ತಾರೆ.<br>ಸಾಮಗ್ರಿಗಳು : ಮರಳು ಮತ್ತು ಕಡ್ಡಿ.<br>ವಿಧಾನ : ಮಕ್ಕಳು ಇಂಗ್ಲಿಷ್ ಅಕ್ಷರಗಳನ್ನು ಬರೆಯುವ ಕ್ರಮದಂತೆ ತಿದ್ದಿಸಿ ಆ ಅಕ್ಷರಕ್ಕೆ ಚಿತ್ರಗಳನ್ನು ರಚಿಸಲು ಹೇಳುವುದು. ಮಗು ತನಗೆ ಇಷ್ಟವಾದ/ ಬರುವ ಇಂಗ್ಲಿಷ್ ಅಕ್ಷರಗಳನ್ನು/ ತನ್ನ ಹೆಸರಿನ ಮೊದಲ ಅಕ್ಷರ/ ತನ್ನ ಹೆಸರಿನ ಅಕ್ಷರಗಳನ್ನು ಬರೆಯಲು ಪ್ರೋತ್ಸಾಹಿಸುವುದು. |

DRAFT 2022

| | | | |
|---|---|---|---|
| | | | ವಿವರ; 2 ನೇ ತರಗತಿಗೆ ಮಕ್ಕಳು ಕಲಿತಿರುವ/ತಿಳಿದಿರುವ ಇಂಗ್ಲಿಷ್ ಪದಗಳನ್ನು ಬರೆಯಲು ತಿಳಿಸುವುದು.<br>3 ನೇ ತರಗತಿಗೆ ಮಕ್ಕಳಿಗೆ ಯಾವುದಾದರೊಂದು ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಬರೆಯಲು ತಿಳಿಸುವುದು.<br>ಉದಾ: M- Man, mango, monkey ಇತ್ಯಾದಿ |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಪದ ಸಂಪತ್ತಿನ ಅಭಿವೃದ್ಧಿ, ಚಾಲನಾ ಕೌಶಲಗಳ ಅಭಿವೃದ್ಧಿ.<br>ಚಟುವಟಿಕೆ: 15 ಪ್ರಾಸ ಪದಗಳನ್ನು ಆಲಿಸುವುದು (ಗುರಿ–02) ECL-4 ( 38 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>* ಧ್ವನಿ ವಿಜ್ಞಾನದ ಅರಿವನ್ನು ಹೊಂದುವಂತೆ ಮಾಡುವುದು.<br>* ಪ್ರಾಸಪದಗಳ ಮೂಲಕ ಪದಸಂಪತ್ತನ್ನು ಹೆಚ್ಚಿಸುವುದು.<br>* ಸ್ಥೂಲ ಹಾಗೂ ಸೂಕ್ಷ್ಮ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು:– ಕರಿ ಹಲಗೆ, ಸೀಮೆ ಸುಣ್ಣ<br>ವಿಧಾನ:<br>* ಪ್ರಾಸ ಪ್ರಾಸಪದಗಳ ವಿವಿಧ ಗುಂಪುಗಳನ್ನು. ಸಿದ್ಧಪಡಿಸಿಕೊಳ್ಳುವುದು.<br>* ಮಕ್ಕಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೆ ಒಂದೊಂದು ಪ್ರಾಸ ಪದಗಳ ಗುಂಪನ್ನು ನೀಡುವುದು.<br>* ಪ್ರಾಸ ಪದಗಳನ್ನು ಒಳಗೊಂಡಂತೆ ಶಿಕ್ಷಕರ ಸಹಾಯದಿಂದ ವಿವಿಧ ವಾಕ್ಯಗಳನ್ನು ರಚಿಸುವುದು.<br>ತರಗತಿವಾರು ವಿವರ: 2 ನೇ ತರಗತಿ ಮಕ್ಕಳು ಪ್ರಾಸ ಪದಗಳ ಗುಂಪಿನ ಪದಗಳಿಂದ ಸ್ವತಂತ್ರವಾಗಿ ವಾಕ್ಯಗಳನ್ನು ರಚಿಸುವುದು.. 3 ನೇ ತರಗತಿ ಮಕ್ಕಳು ಪ್ರಾಸ ಪದಗಳ ಗುಂಪಿನ ಪದಗಳಿಂದ ಸ್ವತಂತ್ರವಾಗಿ ವಾಕ್ಯಗಳನ್ನು ರಚಿಸುವುದು..<br>(56 ನೇ ದಿನಕ್ಕೆ ಮುಂದುವರೆದಿದೆ) |
| | | ಅರ್ಥಗ್ರಹಿಕೆಯೊಂದಿಗಿನ ಓದು | **ಚಟುವಟಿಕೆ: 1**<br>**ಚಿತ್ರ ಓದು (ಗುರಿ–2)**<br>ಸಾಮರ್ಥ್ಯ: ಪದ ಸಂಪತ್ತಿನ ಅಭಿವೃದ್ಧಿ, ಸ್ವಯಂ ಅಭಿವ್ಯಕ್ತಿ, ನಟನಾ ಓದು.<br>ಅಗತ್ಯ ಸಾಮಾಗ್ರಿಗಳು: ವಿವಿಧ ಘಟನೆ/ ಸ್ಥಳ/ ಜಾತ್ರೆ/ ಮೇಳಗಳ ಚಿತ್ರಗಳು/ ಉದ್ಯಾನವನ/ ಪೇಟೆ/ ಶಾಲೆ/ ಪ್ರಾಣಿ ಸಂಗ್ರಹಾಲಯ/ ಹಬ್ಬ / ಜಾತ್ರೆಯ ಇತ್ಯಾದಿಗಳ ಚಿತ್ರಗಳು<br>ವಿಧಾನ: ಮಕ್ಕಳನ್ನು ಒಂದು ದೊಡ್ಡ ಹಾಗೂ ಒಂದು ಚಿಕ್ಕ ಗುಂಪುಗಳಾಗಿ ವಿಂಗಡಿಸುವುದು. ಮಕ್ಕಳಿಗೆ ತಾವು ನೋಡಿರುವ ಚಿತ್ರಗಳನ್ನು ಅವಲೋಕಿಸಿ ಅದರ ಬಗ್ಗೆ ವಿವರಣೆ ನೀಡಲು ತಿಳಿಸುವುದು. ಶಿಕ್ಷಕರು ವಿವಿಧ ದಿನ ಪತ್ರಿಕೆ, ಪುಸ್ತಕ, ನಿಯತ ಕಾಲಿಕೆ ಮುಂತಾದವುಗಳನ್ನು ಬಳಸಿ ಅದರ ಕುರಿತು ವಿವರಣೆ ನೀಡುವುದು.. ವಿವರಣೆ ನೀಡುವಲ್ಲಿ ಮಕ್ಕಳ ವಯಸ್ಸು, ಅಭಿವೃದ್ಧಿಯ ಅಗತ್ಯಗಳು ಹಾಗೂ ಮಕ್ಕಳ ಸುತ್ತಲಿನ ಪರಿಸರವನ್ನು ಗಮನದಲ್ಲಿಡುವುದು. ಸನ್ನಿವೇಶ ಕುರಿತು ಪ್ರಶ್ನೆ ಕೇಳುವಾಗ ಅಥವಾ ವಿವರಣೆ ನೀಡುವಾಗ ಅವರ ಸ್ವಂತ ಅನುಭವಕ್ಕೆ ಹೊಂದಾಣಿಕೆ ಆಗುವಂತೆ ಸಂಬಂಧ ಕಲಿಸುವುದು.. ಪ್ರಶ್ನೆಗಳನ್ನು ಕೇಳುತ್ತಾ ಸಂಭಾಷಣೆಯಲ್ಲಿ ಮಕ್ಕಳನ್ನು ತೊಡಗಿಸುವುದು ನೀಡಿದ ವಿಷಯದ ಕುರಿತು ಮಕ್ಕಳು ಸವಿವರವಾಗಿ ಗಮನಿಸಲು ಮತ್ತು ತಮ್ಮ ಸ್ವಂತ ಅನುಭವಗಳನ್ನು ಇವುಗಳ ಜೊತೆ ಜೋಡಿಸಿ ಹೇಳಲು ಸಹಾಯ ಮಾಡುವುದು.. ಕೆಲವು ಘಟನೆಗಳನ್ನು ತೋರಿಸಿ ಶಿಕ್ಷಕರು ಸೂಕ್ತ ಪ್ರಶ್ನೆಗಳನ್ನು ಕೇಳುತ್ತಾ ಹುರಿದುಂಬಿಸುವುದು.<br>ಶಿಕ್ಷಕರು ಕೆಲವು ಘಟನೆಗಳನ್ನು ತೋರಿಸಿ ಅದರ ಬಗ್ಗೆ ಈ ರೀತಿಯ ಪ್ರಶ್ನೆಗಳನ್ನು ಕೇಳಬಹುದು.<br>*. ನೀವು ಎಂದಾದರು ಇಂತಹ ಸ್ಥಳಕ್ಕೆ ಹೋಗಿದ್ದೀರಾ?<br>* ಈ ಸನ್ನಿವೇಶವು ನಿಮಗೆ ಏನನ್ನು ನೆನಪಿಸುತ್ತಿದೆ?<br>* ಈ ಚಿತ್ರದಲ್ಲಿ ಇರುವ ಜನರು ಏನು ಆಡುತ್ತಿದದಾರೆ? |

DRAFT 22.02.22

| | | | |
|---|---|---|---|
| | | | * ಈ ಸನ್ನಿವೇಶದಲ್ಲಿ ಜನರು ಏನು ಮಾಡುತ್ತಿದ್ದಾರೆ? ಇತ್ಯಾದಿ |
| | | ಉದ್ದೇಶಿತ ಬರಹ | ಸಾಮರ್ಥ್ಯ: ಕೈಕಣ್ಣು ಸಂಯೋಜನೆ, ಬರವಣಿಗೆ ಕೌಶಲಗಳ ಅಭ್ಯಾಸ, ಸೃಜನಶೀಲ ಅಭಿವ್ಯಕ್ತಿ.<br>ಚಟುವಟಿಕೆ....2 ಮುಕ್ತ ಚಿತ್ರ ರಚನೆ (ಗುರಿ–2) **ECW-6**<br>ಉದ್ದೇಶಗಳು:<br>• ಬರವಣಿಗೆಯ ಕೌಶಲಗಳನ್ನು ರೂಢಿಸುವುದು.<br>• ಕಣ್ಣು–ಕೈಗಳ ಸಮನ್ವಯ ಕೌಶಲವನ್ನು ಅಭಿವೃದ್ಧಿಪಡಿಸುವುದು.<br>• ಕ್ರಿಯಾತ್ಮಕ ಅಭಿವ್ಯಕ್ತಿಗೆ ಅವಕಾಶ ನೀಡುವುದು.<br>• ಸೃಜನಶೀಲ ಅಭಿವ್ಯಕ್ತಿಯನ್ನು ಪ್ರೋತ್ಸಾಹಿಸುವುದು.<br>ಅಗತ್ಯ ಸಾಮಗ್ರಿಗಳು: ಕ್ರೇಯಾನ್ಸ್, ಬಣ್ಣದ ಪೆನ್ಸಿಲ್‌ಗಳು, ಮಾರ್ಕರ್, ಬಿಳಿಯ ಹಾಳೆಗಳು<br>ವಿಧಾನ: ಕಾಗದದಲ್ಲಿ ಮುಕ್ತವಾಗಿ ಚಿತ್ರಿಸಲು/ ಬರೆಯಲು, ಅನಿಸಿದ್ದನ್ನು ಬಿಡಿಸಿ ಬಣ್ಣ ಹಾಕಲು ಅವಕಾಶ ಕಲ್ಪಿಸುವುದು. ಅವರ ಬರವಣಿಗೆ ಬಗ್ಗೆ ಮಾತನಾಡಲು ತಿಳಿಸುವುದು. ಸೂಕ್ತವಾದ ಪ್ರಶ್ನೆಗಳನ್ನು ಕೇಳುತ್ತಾ ಬರವಣಿಗೆ ಬಗ್ಗೆ ಮಾಹಿತಿ ಪಡೆಯುವುದು.<br>ತರಗತಿವಾರು ವಿವರ: 2 ಹಾಗೂ 3 ನೇ ತರಗತಿಯ ಮಕ್ಕಳು ತಮ್ಮ ಇಷ್ಟದ ಚಿತ್ರ/ ಸನ್ನಿವೇಶವನ್ನು ಚಿತ್ರಿಸಿ, ಅವುಗಳ ಬಗ್ಗೆ 4–5 ವಾಕ್ಯಗಳನ್ನು ಬರೆಯಲು ತಿಳಿಸಿ. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | **ಹೊರಾಂಗಣ ಆಟಗಳು** | Day 44<br>ಚಟುವಟಿಕೆ –17 ವಿವಿಧ ರೀತಿಯ ನಡಿಗೆ ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ<br>ಬೇಕಾಗುವ ಸಾಮಗ್ರಿ: -------<br>ವಿಧಾನ:<br>• ನೆಲದ ಮೇಲೆ ವಿವಿಧ ರೀತಿಯ ಉದಾ : ನೇರ , ವಕ್ರ, ಅಂಕುಡೊಂಕಾದ. ರೇಖೆಗಳನ್ನು ಎಳೆಯುವುದು.<br>• ಮಕ್ಕಳಿಗೆ ರೇಖೆಯ ಮೇಲೆ ನಡೆಯಲು ಸೂಚಿಸುವುದು.<br>• ಮಕ್ಕಳು ರೇಖೆಯ ಮೇಲೆ ನಿಧಾನವಾಗಿ ಅಥವಾ ವೇಗವಾಗಿ ಮುಂದಕ್ಕೆ ಅಥವಾ ಹಿಂದಕ್ಕೆ ನಡೆಯಲು ಸೂಚಿಸುವುದು.<br>• ವೃತ್ತವನ್ನು ಬಿಡಿಸಿ ಮಕ್ಕಳು ವೃತ್ತದಲ್ಲಿ ಸಾಗುತ್ತ ಹಾಡು ಹಾಡಲು ಸೂಚಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಗಳನ್ನು ಮುಂದುವರೆಸುವುದು** | |
| | **ಕಥಾ ಸಮಯ** | ಮೊದಲ ದಿನದಉದ್ದೇಶದಂತೆಕಥಾ ಸಮಯವು ಮುಂದುವರೆಯುತ್ತದೆ.<br>***ಕಥಾ ಸಾಹಿತ್ಯ ನಿರೂಪಣೆ***<br>ಶಿಕ್ಷಕರು ಕಥೆಯನ್ನು ನಿರೂಪಿಸುವುದರಜೊತೆಗೆ ಮಕ್ಕಳ ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು<br>ಉದಾ : ಇದಾದ ಮೇಲೆ ಏನಾಗಿತ್ತು? ನಂತರ ಯಾರು ಏನು ಹೇಳಿದರು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ಸಿಗ್ನಲ್ ದೀಪವನ್ನು ನೋಡಿದ ಕಾಗೆ ಏನೆಂದು ಯೋಚಿಸಿತು?**<br>• **ಕೆಂಪು ದೀಪ ಬಂದಾಗ ಕಾಗೆ ಏನು ಹೇಳಿತು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) | |

DRAFT 2022

| | | |
|---|---|---|
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• "ಸಿಪ್ಪೆ ಸುಲಿದು ನೇರವಾಗಿ ತಿನ್ನುವ ಹಣ್ಣುಗಳ ಬಗ್ಗೆ" ಮಕ್ಕಳು ತಮ್ಮ ಮನೆಗಳಲ್ಲಿ ಮಾಹಿತಿ ಸಂಗ್ರಹಿಸಿಕೊಂಡು ಬರಲಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–8** **ದಿನ–45 (ಬುಧವಾರ)**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 45 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | 43 ನೇ ದಿನದ ಚಟುವಟಿಕೆ ಮಾಡಿಸುವುದು. |
| | **ಮಾತು ಕತೆ** | ದಿನ 43 ರ **ಚಟುವಟಿಕೆ 2: ನನ್ನ ನೆಚ್ಚಿನ ಬೊಂಬೆ ಯನ್ನು ಮಾಡಿಸಿ.** |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಅನುಕ್ರಮ ಚಿಂತನೆ, ಪರಿಸರದ ಅರಿವು.**<br>**ಚಟುವಟಿಕೆ: 22 ಅನುಕ್ರಮ ಜೋಡಣೆ ( ಗುರಿ –3)**<br>**ಉದ್ದೇಶ:– ಅನುಕ್ರಮವಾಗಿ ಜೋಡಿಸುವ ಕೌಶಲವನ್ನು ಬೆಳಿಸಿಕೊಳ್ಳುವುದು.**<br>**ಅಗತ್ಯ ಸಾಮಗ್ರಿಗಳು : ಗೋಲಿಗಳು, ಮೊಗ್ಗುಗಳು, ಹೂವುಗಳು, ಎಲೆಗಳು**<br>**ವಿಧಾನ : ಮಕ್ಕಳನ್ನು 4 ರಿಂದ 5ರ ಸಣ್ಣ ಗುಂಪುಗಳಲ್ಲಿ ಕುಳಿತುಕೊಳ್ಳುವಂತೆ ಮಾಡುವುದು.ಮಕ್ಕಳಿಗೆ ಮೊಗ್ಗುಗಳು , ಎಲೆಗಳು ಮತ್ತು ಹೂವುಗಳನ್ನು ವಿತರಿಸುವುದು. ಅನುಕ್ರಮವನ್ನು ಪೂರ್ಣಗೊಳಿಸಲು ಪ್ರೋತ್ಸಾಹಿಸುವುದು.**<br>**ಉದಾ: ಮೊದಲಿಗೆ ಎಲೆಯನ್ನು ಇಡುವುದು. ನಂತರ ಮೊಗ್ಗು ಅನಂತರದಲ್ಲಿ ಹೂವನ್ನು ಇಡುವುದು. ಮಕ್ಕಳಿಗೆ ಸಸ್ಯದ ಬೆಳವಣಿಗೆಯ ವಿವಿಧ ಹಂತಗಳನ್ನು ವಿವರಿಸುವುದು. ಸಸ್ಯದಲ್ಲಿ ಗಿಡ/ಸಸ್ಯಗಳಲ್ಲಿ ಮೊದಲಿಗೆ ಬೀಜ,ಮೊಳಕೆ,ಮೊಗ್ಗು ನಂತರದಲ್ಲಿ ಹೂವು ಅರಳುತ್ತದೆ. ಎಲೆ, ಹೂ, ಮೊಗ್ಗು, ಚಿಗುರು ಬಳಸಿ ಗ್ರೀಟಿಂಗ್ಸ್ ತಯಾರಿಸುವುದು.**<br>**ತರಗತಿ–2**<br>**ಮಕ್ಕಳಿಗೆ ಸಸ್ಯದ ಚಿತ್ರಗಳನ್ನು ತೋರಿಸಿ ಭಾಗಗಳನ್ನು ಹೆಸರಿಸಲು ತಿಳಿಸುವುದು.**<br>**ತರಗತಿ–3**<br>**ಮಕ್ಕಳಿಗೆ ಸಸ್ಯದ ಚಿತ್ರವನ್ನು ಬಿಡಿಸಿ ಬಣ್ಣ ಹಾಕುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ; ತನ್ನನ್ನು ತಾನು ಅರಿತುಕೊಳ್ಳುವುದು,ಮತ್ತು ಇತರರ ಬಗ್ಗೆ ಅರಿವು ಮೂಡಿಸಿಕೊಳ್ಳುವುದು , ಭಾಷಾ ವಿಕಾಸ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ; 2 ಹಾಡು<br>ಒಂದು ಕಾಡಿನ ಮಧ್ಯದೊಳಗೆ । ಎರಡು ಮರಗಳ ನಡುವೆ ಮಲಗಿ ।<br>ಮೂರು ಕರಡಿಗಳಾಡುತ್ತಿದ್ದವು । ನಾಲ್ಕು ಮರಿಗಳ ಸೇರಿಸಿ ।<br>ಐದು ಜನರ ಬೇಟೆಗಾರರು । ಆರು ಬಲೆಗಳ ಎಳೆದು ತಂದು ।<br>ಏಳು ಕರಡಿಯ ಹಿಡಿದು ನೋಡಿ । ಎಂಟು ಎಂದನು ಒಬ್ಬನು ।<br>ಒಂಭತ್ತೆಂದನು ಅದರಲ್ಲೊಬ್ಬ । ಹತ್ತು ಎಂದನು ಬೇರುಯವನು ।<br>ಎಣಿಸಿ ನೋಡಲು ಏಳೆ ಏಳು ಇಲ್ಲಿಗೇ ಕಥೆ ಮುಗಿಯಿತು.।<br>ಉದ್ದೇಶ; |


DRAFT 22.02.22

| | | | |
|---|---|---|---|
| | | | • ಶಾರೀರಿಕ ಬೆಳವಣಿಗೆಯ ವಿಕಾಸ ಹೊಂದುತ್ತಾರೆ.<br>• ಪದಸಂಪತ್ತು ಹೆಚ್ಚುವುದರೊಂದಿಗೆ ಪ್ರಾಸ, ಲಯ, ಸಂದರ್ಭ ಹಾಗೂ ಸ್ಪಷ್ಟ ಉಚ್ಚಾರಣೆ ಮಾಡುತ್ತಾರೆ.<br>• ಆಂಗಿಕ ಭಾವನೆಗಳನ್ನು ಗುರ್ತಿಸುತ್ತಾರೆ.<br>• ಸಂಖ್ಯೆಗಳ ಪರಿಕಲ್ಪನೆ ಮೂಡಿಸಿಕೊಳ್ಳುತ್ತಾರೆ.<br>ಸಾಮಗ್ರಿ; ಶಿಶು ಗೀತೆಗಳು ಮತ್ತು ಚಿಕ್ಕ ಚಕ್ಕ ನಾಟಕಗಳ ಸಂಗ್ರಹ.<br>ವಿಧಾನ; ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು.ಸುಗಮಕಾರರು ತಾಳ ಬದ್ಧ ಚಟುವಟಿಕೆಗಳನ್ನು ನಡೆಸಲು ಮಕ್ಕಳಿಗೆ ಅವಕಾಶ ಕಲ್ಪಿಸುವುದು. ಅಭಿನಯ ಗೀತೆಗಳು / ಹಾಡುಗಳಿಗೆ ಪರಿಕರಗಳನ್ನು ಉಪಯೋಗಿಸಿ ಅಥವಾ ಆಂಗಿಕ ಚಲನವಲನಗಳಿಂದ ಹಾಡಿಸುವುದು.<br>ವಿವರ; 2ಮತ್ತು 3 ನೇ ತರಗತಿ ಮಕ್ಕಳಿಗೆ ಹಾಡಿಗೆ ಸಂಭಂದಿಸಿದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | **ಸಾಮರ್ಥ್ಯ: ಕ್ರಿಯಾತ್ಮಕ ಸ್ವ ಅಭಿವ್ಯಕ್ತಿ, ಧ್ವನಿ ಸಂಕೇತ ಹಾಗೂ ಪ್ರಾಸದ ಅರಿವು, ಪರಿಸರ ಪ್ರಜ್ಞೆ, ಪದಸಂಪತ್ತಿನ ಬೆಳವಣಿಗೆ**<br>**ಚಟುವಟಿಕೆ 3 ಹಾಡು, ಪ್ರಾಸಗೀತೆ, ಪದ್ಯ/ನಾಟಕ. (ಗುರಿ–2) ECL-3 (39 ನೇ ದಿನದಿಂದ ಮುಂದುವರೆದಿದೆ)**<br>**ಉದ್ದೇಶ:**<br>*** ಧ್ವನಿ ಸಂಕೇತಗಳ ಅರಿವನ್ನು ಮೂಡಿಸುವುದು.**<br>*** ಪ್ರಾಸಗಳ ಅರಿವನ್ನು ಉಂಟು ಮಾಡುವುದು.**<br>*** ಕ್ರಿಯಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.**<br>*** ತನ್ನ ಸುತ್ತಲಿನ ಪರಿಸರದೊಂದಿಗೆ ಸಂಬಂಧೀಕರಿಸುವುದು.**<br>**ಅಗತ್ಯ ಸಾಮಗ್ರಿಗಳು– ಇಲ್ಲ**<br>**ವಿಧಾನ: ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ. ಶಿಕ್ಷಕರು ಮಕ್ಕಳಿಗೆ 39 ನೇ ದಿನ ಹೇಳಿಕೊಟ್ಟ ಪ್ರಾಸಗೀತೆಯನ್ನೇ ಅಭಿನಯದೊಂದಿಗೆ ಹಾಡಿ ತೋರಿಸಲಿ. ಶಿಕ್ಷಕರನ್ನು ಅನುಕರಿಸುತ್ತಾ ಮಕ್ಕಳು ಹಾಡನ್ನು ಪುನರುಚ್ಚರಿಸಲು ತಿಳಿಸಿ.**<br>**ನೆನಪಿಡಬೇಕಾದ ಅಂಶಗಳು:**<br>*** ಮಕ್ಕಳು ಹಾಡನ್ನು ಆನಂದಿಸಲು ಸೂಕ್ತ ಅಭಿನಯ ಹಾಗೂ ಉತ್ಸಾಹದಿಂದ ಹಾಡಿ.**<br>*** ಮಕ್ಕಳು ಗೀತೆಯಲ್ಲಿರುವ ಪ್ರಾಸ ಪದಗಳನ್ನು ಶಿಕ್ಷಕರ ಸಹಾಯದಿಂದ ಗುರುತಿಸಲಿ.**<br>**ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಪ್ರಾಸಗೀತೆಯಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸುವುದು. ನೇ ತರಗತಿ ಮಕ್ಕಳು ಆ ಪ್ರಾಸ ಪದಗಳಿಗೆ ಇನ್ನಷ್ಟು ಪದಗಳನ್ನು ಸೇರಿಸುವುದು.** |
| | | ಅರ್ಥಗ್ರಹಿಕೆಯೊಂದಿಗಿನ ಓದು | **ಸಾಮರ್ಥ್ಯ : ಪದ ಗುರುತಿಸುವುದು, ಮುದ್ರಿತ ಪಠ್ಯದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತಿನ ಅಭಿವೃದ್ಧಿ.**<br>**ಚಟುವಟಿಕೆ : 11 ಹೆಸರಿನ ಜಗತ್ತು (ಗುರಿ 2)**<br>**ಉದ್ದೇಶ: ಪರಿಚಿತ ಸನ್ನಿವೇಶದಲ್ಲಿನ ವಸ್ತುಗಳನ್ನು ಲಿಪಿಸಂಕೇತಗಳೊಂದಿಗೆ ಸಹ ಸಂಬಂಧಿಕರಿಸಿಕೊಳ್ಳುವುದು. ಸಾಹಿತ್ಯ ಮತ್ತು ವಸ್ತು ಒಂದೇ ಇದೆ ಎಂಬ ತೀರ್ಮಾನಕ್ಕೆ ಬಂದು ಓದುವಿಕೆಯಲ್ಲಿ ಆಸಕ್ತಿ ಬೆಳಸಿಕೊಳ್ಳುವುದು.**<br>**ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಚಾರ್ಟ್ ಪೇಪರ್, ಪೆನ್ಸಿಲ್, ಕ್ರೇಯಾನ್ಸ್, ನಮಗೆ ಕಣ್ಣಿಗೆ ಕಾಣುವ ಸುತ್ತಮುತ್ತಲಿನ ಸಾಮಾಗ್ರಿಗಳು**<br>**ವಿಧಾನ :**<br>**– ಮಕ್ಕಳ ಸಹಾಯದಿಂದ ತರಗತಿಯಲ್ಲಿರುವ ಸಾಮಾನ್ಯ/ಪರಿಚಿತ ವಸ್ತುಗಳ ಹೆಸರನ್ನು ಪಟ್ಟಿ ಮಾಡುವುದು.**<br>**ಉದಾ– ಮೇಜು, ಖುರ್ಚಿ, ಬಾಗಿಲು ಇತ್ಯಾದಿ.**<br>**– ಸಿದ್ಧಪಡಿಸಿದ ನಾಮ ಫಲಕಗಳನ್ನು ಆಯಾ ವಸ್ತುಗಳ ಮೇಲೆ ಅಂಟಿಸುವುದು.**<br>**– ಇನ್ನೊಂದು ಸೆಟ್ ನಾಮ ಫಲಕಗಳ ಮಿಂಚುಪಟ್ಟಿಗಳನ್ನು ತಯಾರಿಸಿಟ್ಟುಕೊಳ್ಳುವುದು.**<br>**– ಪದಗಳ ಮಿಂಚುಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುತ್ತಾ, ಮಕ್ಕಳಿಂದ ಗಟ್ಟಿಯಾಗಿ ಹೇಳಿಸುವುದು.**<br>**– ಪದ ಉಚ್ಚರಿಸುತ್ತಾ ಆ ವಸ್ತುವಿನ ಬಳಿಗೆ ಮಗು ಹೋಗಲು ತಿಳಿಸುವುದು.**<br>**_ ಮಗು ಕನಿಷ್ಠ ನಾಲ್ಕೈದು ವಸ್ತುಗಳನ್ನಾದರೂ ಹೆಸರಿಸಲು ಅವಕಾಶ ಕಲ್ಪಿಸುವುದು..**<br>**_ ಆ ಪದಗಳನ್ನು ಕಥೆಯಲ್ಲಿ ಗುರುತಿಸಲು ಅವಕಾಶ ಕಲ್ಪಿಸುವುದು.**<br>**– ಚಿತ್ರ ಸಹಿತ ನಾಮಫಲಕ/ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿ, ಚಟುವಟಿಕೆ ಸ್ಥಳದಲ್ಲಿ/ಸಮಯದಲ್ಲಿ ಮಕ್ಕಳಿಗೆ ಗುರುತಿಸಿ ಓದಲು (ಚಿತ್ರಗಳ ಸಹಾಯದಿಂದ) ಅವಕಾಶ ಕಲ್ಪಿಸುವುದು.**<br>**2ಮತ್ತು 3ನೇ ತರಗತಿ: ಕಥೆ/ಪಠ್ಯದಲ್ಲಿ ಬಂದಿರುವ ಮುಖ್ಯಪದಗಳ ಮಿಂಚುಪಟ್ಟಿ ತಯಾರಿಸಿಕೊಳ್ಳುವುದು** |

DRAFT 22.02.22

ಮಕ್ಕಳಿಗೆ ಶಿಕ್ಷಕರು ಕಥೆ/ಪಠ್ಯವನ್ನು ನೀಡಿ ಓದಲು ಅವಕಾಶ ಕಲ್ಪಿಸುವುದು.ನಂತರ ಮಿಂಚುಪಟ್ಟಿಯಲ್ಲಿರುವ ಪದಗಳನ್ನು ಕತೆಯಲ್ಲಿ ಹುಡುಕಲು ಸೂಚಿಸುವುದು.

ಗಮನಿಸಿ ; ಈ ಹಿಂದೆ ಈ ಚಟುವಟಿಕೆಗಳಲ್ಲಿ ಬಳಸಿದ ಪದಗಳನ್ನು ಹೊರತುಪಡಿಸಿ ಬೇರೆ ಬೇರೆ ಸ್ಥಳ, ಸನ್ನಿವೇಶದಲ್ಲಿ ಬರುವ ಪದಗಳನ್ನು




ಬಳಸಿ ಚಟುವಟಿಕೆಯನ್ನು ನಿರ್ವಹಿಸುವುದು.

**ಉದ್ದೇಶಿತ ಬರಹ**

ಸಾಮರ್ಥ್ಯ : ಸೂಕ್ಷ್ಮ ಸ್ನಾಯು ಚಲನಾ ಕೌಶಲಾಭಿವೃದ್ಧಿ. ಅಕ್ಷರಗಳನ್ನು ಗುರುತಿಸುವುದು.

ಚಟುವಟಿಕೆ: 36, ಚುಕ್ಕಿ ಸೇರಿಸು –ಅಕ್ಷರ ಬರೆ (ಗುರಿ: 2 ) ECW-17 (39 ನೇ ದಿನದಿಂದ ಮುಂದುವರೆದಿದೆ)

ಉದ್ದೇಶ :

- ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.
- ಅಕ್ಷರಗಳನ್ನು ಗುರುತಿಸುವುದು.
- ಚುಕ್ಕಿಗಳಿಂದ ಅಕ್ಷರಗಳನ್ನು ರಚಿಸುವುದು

ಅಗತ್ಯ ಸಾಮಗ್ರಿ : ನೋಟ್ ಪುಸ್ತಕ, ಪೆನ್ಸಿಲ್, ಕರಿ ಹಲಗೆ, ಸೀಮೆ ಸುಣ್ಣ

ವಿಧಾನ :

- ಮಕ್ಕಳಿಗೆ ಚುಕ್ಕಿ ಬಳಸಿ ರ, ಗ, ಸ, ದ, ಅ ಅಕ್ಷರಗಳನ್ನು ಬರೆಯುವ ವಿಧಾನವನ್ನು ಬರೆದು ತೋರಿಸುವುದು,
- ಮಕ್ಕಳು ರ, ಗ, ಸ, ದ, ಅ ಅಕ್ಷರಗಳ ಚುಕ್ಕಿಗಳನ್ನು ಸೇರಿಸಲು ಹೇಳುವುದು.

ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ವರ್ಣಮಾಲೆಯ ಯಾವುದಾದರೂ 5 ಅಕ್ಷರಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. 3ನೇ ತರಗತಿ ಮಕ್ಕಳು ತಮಗೆ ತಿಳಿದ 5 ಪದಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು.

ಬರವಣಿಗೆಯ ಮಾದರಿ:

ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.

ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.

**ಹೊರಾಂಗಣ ಆಟಗಳು**

ಚಟುವಟಿಕೆ –18 ಜಿಗಿಯ ಬಲ್ಲೆ , ನೆಗಿಯಬಲ್ಲೆ ಗುರಿ–1

ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ

ಬೇಕಾಗುವ ಸಾಮಗ್ರಿ: ಉದ್ದ ಕಡ್ಡಿಗಳು, ಹಗ್ಗ ,ಸ್ಕಿಪ್ಪಿಂಗ್ ರೋಪ್

ವಿಧಾನ:

- ನೆಲದ ಮೇಲೆ ಚಟುವಟಿಕೆಗಳನ್ನು ಆರಂಭಿಸುವ ಮತ್ತು ಮುಕ್ತಾಯಗೊಳಿಸುವ ಜಾಗಗಳನ್ನು ಗುರುತಿಸುವುದು.
- ಈ ಎರಡು ಬಿಂದುಗಳ ನಡುವೆ ಮಕ್ಕಳು ಸುಲಭವಾಗಿ ಜಿಗಿಯುವ ವಸ್ತುಗಳನ್ನು ನೆಲದಮೇಲೆ ಇರಿಸುವುದು .ಉದಾ : ಉದ್ದ ಕಡ್ಡಿಗಳು, ಹಗ್ಗ ,ಸ್ಕಿಪ್ಪಿಂಗ್ ರೋಪ್
- ಮಕ್ಕಳು ಈ ಎಲ್ಲ ಅಡೆತಡೆಗಳನ್ನು ಜಿಗಿಯುತ್ತಾ ಆರಂಭದ ತುದಿಯಿಂದ ಕೊನೆಯ ತುದಿಯವರೆಗೆ ತಮ್ಮ ಸಮತೋಲನ ತಪ್ಪದ ಹಾಗೆ ಕ್ರಮಿಸಬೇಕು.

**ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಆಟವನ್ನು ಮುಂದುವರೆಸುವುದು**

**ಕಥಾ ಸಮಯ**

ಮೊದಲ ದಿನದಉದ್ದೇಶದಂತೆಕಥಾ ಸಮಯವು ಮುಂದುವರೆಯುತ್ತದೆ.

***ಕಥಾ ಸಾಹಿತ್ಯ ನಿರೂಪಣೆ***

ಶಿಕ್ಷಕರು ಕಥೆಯನ್ನು ನಿರೂಪಿಸುವುದರಜೊತೆಗೆ ಮಕ್ಕಳ ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು

DRAFT 22.02.22

| | | |
|---|---|---|
| | | ಉದಾ : ಇದಾದ ಮೇಲೆ ಏನಾಗಿತ್ತು? ನಂತರ ಯಾರು ಏನು ಹೇಳಿದರು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ಸಿಗ್ನಲ್ ದೀಪವನ್ನು ನೋಡಿದ ಕಾಗೆ ಏನೆಂದು ಯೋಚಿಸಿತು?**<br>• **ಕೆಂಪು ದೀಪ ಬಂದಾಗ ಕಾಗೆ ಏನು ಹೇಳಿತು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• "ಸಿಪ್ಪೆ ಸುಲಿದು ನೇರವಾಗಿ ತಿನ್ನುವ ಹಣ್ಣುಗಳ ಬಗ್ಗೆ" ಮಕ್ಕಳು ತಮ್ಮ ಮನೆಗಳಲ್ಲಿ ಮಾಹಿತಿ ಸಂಗ್ರಹಿಸಿಕೊಂಡು ಬರಲಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

## ವಾರ–8 ದಿನ–46 (ಗುರುವಾರ)

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 46 | **ಶುಭಾಶಯ ವಿನಿಮಯ** | **35** ನೇ ದಿನದ ಚಟುವಟಿಕೆ ಮಾಡಿಸುವುದು. |
| | **ಮಾತು ಕತೆ** | ದಿನ 43 ರ **ಚಟುವಟಿಕೆ 2: ನನ್ನ ನೆಚ್ಚಿನ ಬೊಂಬೆ ಯನ್ನು ಮಾಡಿಸಿ.** |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಪ್ರಯೋಗ ಮತ್ತು ವೀಕ್ಷಿಸುವುದು**<br>**ಚಟುವಟಿಕೆ: 24 : ಗುಳ್ಳೆಗಳ ಆಟ (ಬಬಲ್ ಬ್ಲೋವರ್) ಮತ್ತು ಅನ್ವೇಷಣೆ ( ಗುರಿ –3)**<br>**ಉದ್ದೇಶ:– ಸರಳ ಪ್ರಯೋಗವನ್ನು ಮಾಡುವುದು.**<br>**ಅಗತ್ಯ ಸಾಮಗ್ರಿಗಳು :ಸೋಪು, ಡಿಟರ್ಜೆಂಟ್ ಪೌಡರ್/ಶ್ಯಾಂಪು, ಸ್ಟ್ರಾ/ ತಂತಿ**<br>**ವಿಧಾನ: ಸೋಪ್ / ಡಿಟರ್ಜೆಂಟ್ / ಶಾಂಪೂ ಮಿಶ್ರಣವನ್ನು ತಯಾರಿಸಿಕೊಳ್ಳುವುದು. ಸ್ಟ್ರಾ/ತಂತಿಯನ್ನು ಬಳಸಿ ಮಿಶ್ರಣದಲ್ಲಿ ಅದ್ದಿ ಗುಳ್ಳೆಗಳನ್ನು ರಚಿಸುವುದು. ಮಕ್ಕಳು ಗುಳ್ಳೆಯನ್ನು ಮುಟ್ಟಿದಾಗ ಏನಾಗುತ್ತದೆ ಎಂಬುದನ್ನು ಗಮನಿಸಲಿ. ಪಾಲಕರ ಮಾರ್ಗದರ್ಶನದಲ್ಲಿ ಮಕ್ಕಳು ಇದೇ ರೀತಿಯ ಗುಳ್ಳೆಗಳ ಆಟವನ್ನು (ಬಬಲ್ ಬ್ಲೋವರ್) ಮನೆಯಲ್ಲಿಯೇ ಮಾಡಲು ಪ್ರೇರೇಪಿಸುವುದು. ಮತ್ತು ಚಟುವಟಿಕೆಯ ಅನುಭವಗಳನ್ನು ಹೇಳಿಸುವುದು.**<br>**ತರಗತಿ–2 ಮತ್ತು 3**<br>**ಇದೇ ರೀತಿಯ ಸರಳ ಪ್ರಯೋಗಳನ್ನು ಮಾಡಿಸಿ ಮಕ್ಕಳಲ್ಲಿ ಆಸಕ್ತಿ ಮೂಡಿಸುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಬಿ ಅಕ್ಷರಗಳ ಆಕಾರದ ಒಳಗೆ ಬಣ್ಣ ತುಂಬುವುದು. ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ದಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಸ್ಥಳದ ಪರಿಕಲ್ಪನೆಯನ್ನು ತಿಳಿಯುತ್ತಾರೆ.<br>ಸಾಮಗ್ರಿಗಳು : ರಬ್ಬರ್ ಅಕ್ಷರಗಳು, ರಟ್ಟಿನಲ್ಲಿ ಕತ್ತರಿಸಿದ ಅಕ್ಷರಗಳು.<br>ವಿಧಾನ :<br>ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸುವುದು.ಬಿಳಿಹಾಳೆ ಮತ್ತು ರಬ್ಬರ್ ಅಕ್ಷರ/ರಟ್ಟಿನಲ್ಲಿ ಕತ್ತರಿಸಿದ ಅಕ್ಷರಗಳನ್ನು ನೀಡಿ ಅದರ ಆಕಾರದ ರೇಖಾ ಚಿತ್ರಗಳನ್ನುರಚಿಸಲು ಹೇಳುವುದು.ತಾವು ರಚಿಸಿದ ಚಿತ್ರಗಳಿಗೆ ತಮಗೆ ಇಷ್ಟಬಂದ ಬಣ್ಣ ತುಂಬಲು ಹೇಳುವುದು. |

DRAFT 2021-22

| | | | |
|---|---|---|---|
| | | | ವಿವರ; 2ಮತ್ತು 3 ನೇ ತರಗತಿಗೆ ಮಕ್ಕಳಿಗೆ ಇಷ್ಟವಾದ ರೇಖಾಚಿತ್ರಗಳನ್ನು ಬರೆದು/ ಟ್ರೇಸ್ ಮಾಡಿ ಬಣ್ಣ ತುಂಬಲು ಹೇಳುವುದು.<br>* **ಅಭ್ಯಾಸ ಹಾಳೆಗಳು: H.W.-12 ( 01, 02,03ನೇ ತರಗತಿ)** |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ:– ಧ್ವನಿ ಸಂಕೇತಗಳ ಅರಿವು, ಅಕ್ಷರ ಶಬ್ದ ಸಹ ಸಂಬಂಧ.<br>ಚಟುವಟಿಕೆ–20 ಹೆಸರಿನ ಆರಂಭಿಕ ಅಕ್ಷರದಿಂದ ವಸ್ತುವನ್ನು ಪತ್ತೆ ಹಚ್ಚುವುದು (ಗುರಿ–2) **ECL-2 (40** ನೇ ದಿನದಿಂದ ಮುಂದುವರೆದಿದೆ.)<br>ಉದ್ದೇಶಗಳು:–<br>* ಧ್ವನಿ ಸಂಕೇತಗಳ ಅರಿವು ಮೂಡಿಸುವುದು.<br>* ಅಕ್ಷರಗಳು ಮತ್ತು ಪದಗಳ ನಡುವಿನ ಸಹಸಂಬಂಧವನ್ನು ಗ್ರಹಿಸುವುದು.<br>* ಪದಗಳನ್ನು ಗ್ರಹಿಸಿ ಗುರುತಿಸುವುದು.<br>* ಅಂತ್ಯಾಕ್ಷರಿ ಪದಗಳನ್ನು ಬರೆಯುವುದು.<br>ಅಗತ್ಯ ಸಾಮಗ್ರಿಗಳು– ಇಲ್ಲ<br>ಸಲಹಾತ್ಮಕ ವಿಷಯ : ವಾಹನಗಳು<br>ವಿಧಾನ:– ಸುಳಿವುಗಳ ಮೂಲಕ ವಾಹನಗಳ ಹೆಸರನ್ನು ಊಹಿಸಿ ಹೇಳುವ ಚಟುವಟಿಕೆಯನ್ನು ಆಯೋಜಿಸಿ. ಉದಾಹರಣೆಗಾಗಿ ಶಿಕ್ಷಕರು 'ನನ್ನ ಮನಸ್ಸಿನಲ್ಲಿರುವ ವಾಹನ ನೀರಿನಲ್ಲಿ ತೇಲುತ್ತಾ ಹೋಗುವಂತಹದ್ದು.ಅದರ ಹೆಸರು ದೋ ಅಕ್ಷರದಿಂದ ಪ್ರಾರಂಭವಾಗುತ್ತದೆ ಎಂದು ಹೇಳಿದಾಗ ಮಕ್ಕಳು ದೋಣಿ ಎಂದು ಗುರುತಿಸುವುದು. ಹೀಗೆಯೇ ವಿವಿಧ ಉದಾಹರಣೆಗಳನ್ನು ನೀಡುವುದು.<br>ತರಗತಿವಾರು ವಿವರ: 2ನೇ ಮತ್ತು 3ನೇ ತರಗತಿ ಮಕ್ಕಳಿಗೆ ಪದಗಳ ಮುಂದುವರೆದ ಭಾಗವಾಗಿ ವಾಕ್ಯಗಳನ್ನು ರಚಿಸುವಂತೆ ಹಾಗೂ ಸರಳ ವಾಕ್ಯಗುಚ್ಛಗಳನ್ನು ರಚಿಸುವಂತೆ ಚಟುವಟಿಕೆಗಳನ್ನು ಮುಂದುವರೆಸುವುದು..( 52 ನೇ ದಿನಕ್ಕೆ ಮುಂದುವರೆದಿದೆ)<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC-12 (ತರಗತಿ 1, 2, 3)** |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಪದ ಸಂಪತ್ತು ಅಭಿವೃದ್ಧಿ ಸ್ವಯಂ ಅಭಿವ್ಯಕ್ತಿ ನಟನಾ ಓದು<br>ಚಟುವಟಿಕೆ 1 ಎ: ಊಹಾತ್ಮಕ ಓದು (ಗುರಿ–2)<br>ಉದ್ದೇಶ: ಮಕ್ಕಳು ಪುಸ್ತಕದಲ್ಲಿನ ಚಿತ್ರ ಸನ್ನಿವೇಶವನ್ನು ನೋಡುವುದರ ಮೂಲಕ ಚಿತ್ರಸಂಕೇತಗಳನ್ನು ಅರ್ಥಹಿಸಿಕೊಂಡು ಸಂಬಂಧೀಕರಿಸಿಕೊಂಡು ಅಭಿವ್ಯಕ್ತಿಸುವುದು.<br>ಅಗತ್ಯ ಸಾಮಗ್ರಿಗಳು: ಸಚಿತ್ರ ಕೋಶ, ಸರಣಿ ಚಿತ್ರ ಕಥೆ ಪುಸ್ತಕ<br>ವಿಧಾನ: ಮಕ್ಕಳು ಚಿತ್ರಗಳನ್ನೊಳಗೊಂಡ ಪುಸ್ತಕಗಳನ್ನ ಸಚಿತ್ರ ಕೋಶ, ಸರಣಿ ಚಿತ್ರ ಕಥೆ ಪುಸ್ತಕ ನೋಡಿ ಅಲ್ಲಿರುವ ಸನ್ನಿವೇಶ ವನ್ನು ಊಹೆ ಮಾಡಿ ಓದುವರು.<br>2ನೇ ಮತ್ತು 3ನೇ ತರಗತಿ: ಚಿತ್ರ ಸನ್ನಿವೇಶವನ್ನು ಸಾಹಿತ್ಯದೊಂದಿಗೆ ಸಹ ಸಂಬಂಧಿಕರಿಸಿಕೊಂಡು ಸರಳವಾಗಿ ಓದುವಿಕೆಯಲ್ಲಿ ತೊಡಗುತ್ತಾರೆ |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ವೀಕ್ಷಣೆ, ಕಲ್ಪನೆ, ಸೃಜನಶೀಲ ಚಿಂತನೆ, ಪರಿಸರ ಪ್ರಜ್ಞೆ,<br>ಚಟುವಟಿಕೆ: 35 ಹವಾಮಾನ ನಕ್ಷೆ (ಗುರಿ–2) **ECW-16** (40 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>• ಉದ್ದೇಶಿತ ಬರವಣಿಗೆಯನ್ನು ರೂಢಿಸುವುದು.<br>• ವೀಕ್ಷಣಾ ಕೌಶಲವನ್ನು ಬೆಳೆಸುವುದು.<br>• ಸೃಜನಶೀಲ ಚಿಂತನೆಯನ್ನು ಉತ್ತೇಜಿಸುವುದು.<br>• ಪರಿಸರ ಪ್ರಜ್ಞೆ ಮೂಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ/ ಹಾಳೆಗಳು, ಪೆನ್ಸಿಲ್ |

DRAFT 22.02.22

| | | |
|---|---|---|
| | | ವಿಧಾನ : ವಾರದ ದಿನಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>– ವಾರದ ದಿನಗಳ ಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>– ಗುಂಪು ಚಟುವಟಿಕೆಯ ಸಮಯದಲ್ಲಿ ಆ ದಿನದ ಹವಾಮಾನವನ್ನು ಗುರುತಿಸಲು ತಿಳಿಸುವುದು.<br>– ಇದರ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ ಖಾಲಿ ಹಾಳೆಗಳನ್ನ ನೀಡಿ ಆ ದಿನದ ಹವಾಮಾನದ ಚಿತ್ರವನ್ನು ಬರೆಯಲು ತಿಳಿಸುವುದು.<br>– ಮಕ್ಕಳ ಕಾರ್ಯಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ದಿನದ ಹವಾಮಾನವನ್ನು ತಮ್ಮ ಪುಸ್ತಕದಲ್ಲಿ ದಾಖಲಿಸುವಂತೆಯೂ 3ನೇ ತರಗತಿಯ ಮಕ್ಕಳು ತರಗತಿ ಹವಾಮಾನ ನಕ್ಷೆಯಲ್ಲಿ ದಿನದ ಹವಾಮಾನವನ್ನು ದಾಖಲಿಸಲು ತಿಳಿಸುವುದು.<br>(52 ನೇ ದಿನಕ್ಕೆ ಮುಂದುವರೆದಿದೆ) |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| | **ಹೊರಾಂಗಣ ಆಟಗಳು** | Day 46<br>ಚಟುವಟಿಕೆ –19 ಸಮತೋಲನ ಮತ್ತು ತೆವಳುವುದು ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ.<br>ಬೇಕಾಗುವ ಸಾಮಗ್ರಿ: ಪುಸ್ತಕ, ನೀರಿನ ಲೋಟ, ಹಗ್ಗ<br>ವಿಧಾನ:<br>• ಮಕ್ಕಳಿಗೆ ಓಟವನ್ನು ಆಯೋಜಿಸುವುದು .<br>• ಮಕ್ಕಳು ತಮ್ಮ ತಲೆಯ ಮೇಲೆ ಪುಸ್ತಕವನ್ನು ಬ್ಯಾಲೆನ್ಸ್ ಮಾಡುತ್ತ ಈ ಓಟವನ್ನು ಮುಗಿಸಬೇಕು ಎಂದು ಸೂಚಿಸುವುದು .<br>• ಯಾರು ಪುಸ್ತಕವನ್ನು ಬೀಳಿಸದೆ ಮುಕ್ತಾಯದ ಗೆರೆಗೆ ಮೊದಲು ತಲುಪುತ್ತಾರೋ ವಿಜೇತರಾಗುತ್ತಾರೆ .<br>• **ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೆ ಕೈಯಲ್ಲಿ ನೀರಿನ ಲೋಟವನ್ನು ಹಿಡಿದುಕೊಂಡು ಓದುವ ಆಟವನ್ನು ಆಡಿಸುವುದು .ಲೋಟದಲ್ಲಿನ ನೀರು ಚೆಲ್ಲದಹಾಗೆ ಯಾರು ಮುಕ್ತಾಯದ ಗೆರೆ ಯನ್ನು ತಲುಪುತ್ತಾರೋ ವಿಜೇತರಾಗುತ್ತಾರೆ .** |
| | **ಕಥಾ ಸಮಯ** | ಮೊದಲ ದಿನದಉದ್ದೇಶದಂತೆಕಥಾ ಸಮಯವು ಮುಂದುವರೆಯುತ್ತದೆ.<br>***ಕಥಾ ಸಾಹಿತ್ಯ ನಿರೂಪಣೆ***<br>ಶಿಕ್ಷಕರು ಕಥೆಯನ್ನು ನಿರೂಪಿಸುವುದರಜೊತೆಗೆ ಮಕ್ಕಳ ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು<br>ಉದಾ : ಇದಾದ ಮೇಲೆ ಏನಾಗಿತ್ತು? ನಂತರ ಯಾರು ಏನು ಹೇಳಿದರು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ಸಿಗ್ನಲ್ ದೀಪವನ್ನು ನೋಡಿದ ಕಾಗೆ ಏನೆಂದು ಯೋಚಿಸಿತು?**<br>• **ಕೆಂಪು ದೀಪ ಬಂದಾಗ ಕಾಗೆ ಏನು ಹೇಳಿತು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• "ಸಿಪ್ಪೆ ಸುಲಿದು ನೇರವಾಗಿ ತಿನ್ನುವ ಹಣ್ಣುಗಳ ಬಗ್ಗೆ" ಮಕ್ಕಳು ತಮ್ಮ ಮನೆಗಳಲ್ಲಿ ಮಾಹಿತಿ ಸಂಗ್ರಹಿಸಿಕೊಂಡು ಬರಲಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |
| | | |
| | | |

DRAFT 22.02.22

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–8** **ದಿನ–47 (ಶುಕ್ರವಾರ)**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 47 | ಶುಭಾಶಯ ವಿನಿಮಯ | 35 ನೇ ದಿನದ ಚಟುವಟಿಕೆ ಮಾಡಿಸುವುದು. |
| | ಮಾತು ಕತೆ<br>*( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | **ಚಟುವಟಿಕೆ 2: ನಾನು ತೋರಿಸಿದಾಗ ಬದಲಾವಣೆ!**<br>ಅಗತ್ಯವಿರುವ ಸಾಮಗ್ರಿಗಳು: ಕೆಲವು ಕ್ರಿಯೆಗಳನ್ನು ಹೊಂದಿರುವ ಕೆಲವು ಕಾರ್ಡ್ ಗಳು. ಚಪ್ಪಾಳೆ ತಟ್ಟುವುದು, ಓಡುವುದು, ಜಿಗಿಯುವುದು, ಜಿಗಿಯುವುದು, ಕುಳಿತುಕೊಳ್ಳುವುದು, ನಿಲ್ಲುವುದು, ತಲೆಯಾಡಿಸುವುದು ಇತ್ಯಾದಿ.<br>ವಿಧಾನ:<br>1. ಮಕ್ಕಳನ್ನು ಒಂದು ಸಾಲಿನಲ್ಲಿ ನಿಲ್ಲುವಂತೆ ಮಾಡಿ<br>2. ಕಾರ್ಡ್ ಗಳನ್ನು ಒಂದೊಂದಾಗಿ ತೋರಿಸಿ ಮತ್ತು ಕಾರ್ಡ್ ಗಳ ಪ್ರಕಾರ ಕ್ರಿಯೆಗಳನ್ನು ಮಾಡಲು ಮಕ್ಕಳಿಗೆ ಹೇಳಿ.<br>3. ಉದಾಹರಣೆಗೆ, ಶಿಕ್ಷಕರು ಚಪ್ಪಾಳೆ ಕಾರ್ಡ್ ತೋರಿಸಿದರೆ ಎಲ್ಲಾ ಮಕ್ಕಳು ಚಪ್ಪಾಳೆ ತಟ್ಟಬೇಕು. ಮುಂದೆ ಅವಳು ಕಾರ್ಡ್ ಬದಲಾಯಿಸಿದರೆ, ಕಾರ್ಡ್ ಪ್ರಕಾರ ಎಲ್ಲಾ ಮಕ್ಕಳು ತಮ್ಮ ಕ್ರಿಯೆಗಳನ್ನು ಬದಲಾಯಿಸಬೇಕು.<br>ಚಟುವಟಿಕೆ: ನನ್ನ ನೆಚ್ಚಿನ ಆಟ<br>ಅಗತ್ಯವಿರುವ ಸಾಮಗ್ರಿಗಳು: ವಿವಿಧ ರೀತಿಯ ಕ್ರೀಡೆಗಳು / ಆಟಗಳ ಸಾಮಗ್ರಿಗಳು<br>ದಿನ 43 ರ **ಚಟುವಟಿಕೆ 2: ನನ್ನ ನೆಚ್ಚಿನ ಬೊಂಬೆ ಯನ್ನು ಮಾಡಿಸಿ.** |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಪರಿಶೋಧಿಸುವುದು ಮತ್ತು ವಿವರಿಸುವುದು.**<br>**ಚಟುವಟಿಕೆ: 25 ಯಾವುದು ಕರಗುತ್ತದೆ ಮತ್ತು ಕರಗುವುದಿಲ್ಲ ನೋಡೋಣ. (ಗುರಿ –3)**<br>**ಉದ್ದೇಶ:– ಕರಗುವ ಮತ್ತು ಕರಗದ ವಸ್ತುಗಳ ಬಗ್ಗೆ ತಿಳಿದುಕೊಳ್ಳುವುದು.**<br>**ಅಗತ್ಯ ಸಾಮಗ್ರಿಗಳು : ಲೋಟ, ಉಪ್ಪು, ಸಕ್ಕರೆ, ಸೋಡಾ, ಮರಳು, ಹಿಟ್ಟು, ಎಣ್ಣೆ, ಪೆಟ್ರೋಲ್**<br>**ವಿಧಾನ : ಒಂದು ಲೋಟ ನೀರನ್ನು ತೆಗೆದುಕೊಳ್ಳುವುದು. ಉಪ್ಪು ಅಥವಾ ಸಕ್ಕರೆಯನ್ನು ಅದಕ್ಕೆ ಹಾಕಿ ಕಲಕುವುದು.ಮಕ್ಕಳು ಇದನ್ನು ಗಮನಿಸುವುದು. ನಂತರದಲ್ಲಿ ಮತ್ತೊಂದು ಲೋಟದಲ್ಲಿ ನೀರನ್ನು ತೆಗೆದುಕೊಂಡು ಕಲ್ಲು ಅಥವಾ ಮರಳನ್ನು ಹಾಕಿ ಕಲಕುವುದು. ಈಗ ಏನಾಯಿತು ? ಮಕ್ಕಳೊಂದಿಗೆ ಯಾವುದು ನೀರಿನಲ್ಲಿ ಕರಗುತ್ತದೆ, ಯಾವುದು ನೀರಿನಲ್ಲಿ ಕರಗುವುದಿಲ್ಲ ಎಂಬುವುದನ್ನು ಚರ್ಚಿಸುವುದು.**<br>**ತರಗತಿ–2**<br>**ಸೋಡಾ, ಎಣ್ಣೆ, ಸಕ್ಕರೆ, ಉಪ್ಪು, ಸುಣ್ಣ, ಮರಳು, ಕಲ್ಲು ಇವುಗಳಲ್ಲಿ ನೀರಿನಲ್ಲಿ ಯಾವುದು ಕರಗುತ್ತದೆ ಮತ್ತು ಯಾವುದು ಕರಗುವುದಿಲ್ಲ ಎಂದು ಕೇಳುವುದು.**<br>**ತರಗತಿ–3**<br>**ಲಭ್ಯ ವಸ್ತುಗಳನ್ನು ಬಳಸಿ ಅವುಗಳಲ್ಲಿ ನೀರಿನಲ್ಲಿ ಯಾವುದು ಕರಗುತ್ತದೆ ಮತ್ತು ಯಾವುದು ಕರಗುವುದಿಲ್ಲ ಎಂದು ಪ್ರಯೋಗ ಮಾಡಿಸಿ ವರ್ಗೀಕರಿಸುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 36 ಸಿ ಎಲೆಗಳು ಮತ್ತು ಹೂಗಳನ್ನು ವಿವಿಧ ವಿನ್ಯಾಸಗಳಲ್ಲಿ ಜೋಡಿಸುವುದು. ಗುರಿ – 1<br>ಉದ್ದೇಶ; |

DRAFT 2022

| | | | |
|---|---|---|---|
| | | | • ಸೂಕ್ಷ್ಮ ಸ್ನಾಯುಗಳ ಅಭಿವೃದ್ದಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಆಕಾರ ಮತ್ತು ಗಾತ್ರವನ್ನು ಗುರುತಿಸುವುದರ ಜೊತೆಗೆ ವಿವಿಧ ವಿನ್ಯಾಸಗಳನ್ನು ರಚಿಸುತ್ತಾರೆ.<br>ಸಾಮಗ್ರಿಗಳು : ಎಲೆಗಳು ಮತ್ತು ಹೂಗಳು.<br>ವಿಧಾನ : ಮಕ್ಕಳಿಗೆ ಎಲೆಗಳು ಮತ್ತು ಹೂಗಳನ್ನು ನೀಡಿ ವಿವಿಧ ವಿನ್ಯಾಸಗಳನ್ನು ರಚಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ಮೇಲ್ಕಂಡ ಚಟುವಟಿಕೆಯನ್ನು ಮಾಡಿಸುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | **ಸಾಮರ್ಥ್ಯ: ಪದಸಂಪತ್ತಿನ ಅಭಿವೃದ್ಧಿ, ಊಹಿಸುವುದು, ತಂಡದ ಸದಸ್ಯರೊಂದಿಗೆ ಸಹಕಾರದಿಂದ ಕೆಲಸ ಮಾಡುವುದು.**<br>**ಚಟುವಟಿಕೆ....6 ಎ ನನ್ನನ್ನು ಹುಡುಕು. (ಗುರಿ–2) ECL-12**<br>**ಉದ್ದೇಶ:**<br>*** ಸೂಕ್ತ ಪದ ರಚಿಸುವುದು.**<br>*** ಸಾಂಘಿಕ ಮನೋಭಾವನೆ ಬೆಳೆಸುವುದು.**<br>*** ಸೂಚನೆಗಳನ್ನು ಎಚ್ಚರಿಕೆಯಿಂದ ಆಲಿಸಿ ಅನುಸರಿಸುವುದು.**<br>*** ಪದ ಸಂಪತ್ತಿನ್ನು ಅಭಿವೃದ್ಧಿ ಪಡಿಸುವುದು.**<br>**ಅಗತ್ಯ ಸಾಮಗ್ರಿಗಳು : ಪರಿಚಿತ ವಸ್ತು, ಪ್ರಾಣಿ, ಪಕ್ಷಿಗಳ ಚಿತ್ರಗಳು**<br>**ವಿಧಾನ: ಚಿತ್ರಗಳ ಮಿಂಚುಪಟ್ಟಿಗಳನ್ನು ಒಂದು ಬಾಕ್ಸ್ ನಲ್ಲಿ ಹಾಕಿ ಇಡುವುದು. ತರಗತಿಯಲ್ಲಿರುವ ಮಕ್ಕಳನ್ನು ಒಬ್ಬೊಬ್ಬರಾಗಿ ಕರೆದು ಬಾಕ್ಸ್ ನಲ್ಲಿರುವ ಚಿತ್ರಗಳಲ್ಲಿ ಒಂದನ್ನು ಎತ್ತಿಕೊಂಡು ಅದರ ಹೆಸರು ಹೇಳಲು ತಿಳಿಸುವುದು. ಮಕ್ಕಳು ಗುರುತಿಸಿದ ಚಿತ್ರಗಳ ಕುರಿತು ಅವರೊಂದಿಗೆ ಚರ್ಚಿಸುವುದು. ಇದೇ ರೀತಿ ಚಟುವಟಿಕೆಯನ್ನು ಮುಂದುವರೆಸುವುದು.**<br>**ತರಗತಿಯ ವಿವರ: 2 ನೇ ತರಗತಿಯ ಮಕ್ಕಳು ತಾವು ಗುರುತಿಸಿದ ಚಿತ್ರದ ಬಗ್ಗೆ 3–4 ವಾಕ್ಯಗಳಲ್ಲಿ ಮಾತನಾಡುವುದು. 3 ನೇ ತರಗತಿಯ ಮಕ್ಕಳು 2 ರಿಂದ 3 ನಿಮಿಷ ಆ ಚಿತ್ರದ ಬಗ್ಗೆ ಮಾತನಾಡುವುದು.** |
| | | ಅರ್ಥಗ್ರಹಿಕೆಯೊಂದಿಗಿನ ಓದು | **ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ....18**<br>**4. ಚಿತ್ರ ಸಂಪುಟ (ಗುರಿ–2) ವಿಷಯ: 'ನೀರಿನ ಆಕರಗಳು ಮತ್ತು ಅವುಗಳಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳು' ಅವಧಿ 13**<br>**ಉದ್ದೇಶ:**<br>**• ಚಿತ್ರ ಓದುವುದು ಮತ್ತು ಚರ್ಚಿಸಿ ಅರ್ಥಮಾಡಿಕೊಳ್ಳುವುದು.**<br>**• ಸಂತೋಷ ಮನೋರಂಜನೆ ಹಾಗೂ ಇತರೆ ಉದ್ದೇಶಗಳಿಗಾಗಿ ಸ್ವತಂತ್ರವಾಗಿ ಓದುವುದು.**<br>**ಅಗತ್ಯ ಸಾಮಗ್ರಿಗಳು : ನೀರಿನ ಆಕರಗಳು ಮತ್ತು ಅವುಗಳಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳಿಗೆ ಸಂಬಂಧಿಸಿದ ಚಿತ್ರಗಳು, ಇವುಗಳ ಕುರಿತ ಕಥನ/ಕವಿತೆ/ ಹಾಡುಗಳ ಪಟ್ಟಿ.**<br>**ವಿಧಾನ : ಮಕ್ಕಳಿಗೆ ಪರಿಚಿತವಿರುವ ಹಾಡು ಮತ್ತು ಶಿಶುಗೀತೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಗುರುತಿಸುವುದು.**<br>*** ಹಾಡು/ಕಥೆಯಲ್ಲಿರುವ ವಿಶೇಷ ಪದಗಳನ್ನು ಗುರುತಿಸಿ ಹೆಸರಿಸುವುದು.**<br>*** ಹಾಡು/ಕಥೆಯಲ್ಲಿ ಬರುವ ಮುಖ್ಯ ಪಾತ್ರಗಳನ್ನು ಗುರುತಿಸುವುದು ಮತ್ತು ಪುನರಾವರ್ತಿತ ಪದ/ಸಾಲುಗಳನ್ನು ಹೇಳುವುದು/ಬರೆಯುವುದು.**<br>*** ಮಾದರಿ ಚಿತ್ರಗಳನ್ನು (ನೀರಿನ ಆಕರಗಳು ಮತ್ತು ಅವುಗಳಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳಿಗೆ ಸಂಬಂಧಿಸಿದ) ಓದುವುದು ಮತ್ತು ಅದರ ಕುರಿತಾಗಿ ಪ್ರತಿಕ್ರಿಯಿಸುತ್ತಾ ಶಿಕ್ಷಕರೊಂದಿಗೆ ಚರ್ಚಿಸುವರು.**<br>**ವೈಯಕ್ತಿಕ ಚಿತ್ರ ಸಂಪುಟ.– ಕಥೆ ಅಥವಾ ಹಾಡುಗಳಲ್ಲಿ ಬರುವ ವಸ್ತುಗಳು ಅಥವಾ ವಿಶೇಷ ಪದಗಳನ್ನು ಪ್ರತಿ ಮಗು ಸನ್ನಿವೇಶ ಚಿತ್ರಗಳನ್ನು ಓದಿ ಗ್ರಹಿಸಿ ವೈಯಕ್ತಿಕವಾಗಿ ಚರ್ಚಿಸಲು ಅನುವು ಮಾಡಿಕೊಡುವುದು. ಆ ಚಿತ್ರ ಓದಿನ ಗ್ರಹಿಕೆಗಳನ್ನು ಅಭಿವ್ಯಕ್ತಿಸುವುದನ್ನು ಖಾತ್ರಿಮಾಡಿಕೊಳ್ಳುವುದು.** |

DRAFT 22.02.22

| | | | |
|---|---|---|---|
| | | | ಉದಾ.. ನೀರಿನ ಆಕರಗಳು, ಜಲಚರಗಳು, ಉಭಯವಾಸಿಗಳು, ಪಕ್ಷಿಗಳು ಇತ್ಯಾದಿ.. ಚಿತ್ರಗಳು/ವಿಡಿಯೋಗಳು/ ಕ್ಷೇತ್ರ ಭೇಟಿ.<br>ಶಿಕ್ಷಕರು ಸುಗಮಕಾರಿಕೆಯಲ್ಲಿ ಬಳಸಬಹುದಾದ ಬೆಳವಣಿಗೆಯ ಪ್ರಶ್ನೆಗಳು:<br>• ನೀರಿನ ಆಕರಗಳನ್ನು ನೋಡಿರುವಿರಾ?<br>• ನಿಮ್ಮ ಊರಿನಲ್ಲಿರುವ ನೀರಿನ ಆಕರಗಳು ಯಾವುವು?<br>• ನೀರಿನ ಆಕರಗಲ್ಲಿ ಇರುವ ಜಲಚರ ಪ್ರಾಣಿಗಳು ಯಾವುವು?<br>• ನಿನಗೆ ಇಷ್ಟದ ಜಲಚರ ಯಾವುದು?<br>• ನಿಮ್ಮ ಶಾಲೆಯಲ್ಲಿ ಅಕ್ವೇರಿಯಂ ಮಾಡಿದರೆ ನಿರ್ಮಾಣ ಮಾಡುವುದಾದರೆ ನೀನು ಏನೇನು ಜವಾಬ್ದಾರಿ ತೆಗೆದುಕೊಳ್ಳುವೆ?<br>• ಅಕ್ವೇರಿಯಂ(ಮೀನು ಸಂಗ್ರಹಣೆ ತೊಟ್ಟಿ) ಮಾಡುವುದದಕ್ಕೆ ಯಾವೆಲ್ಲ ಸಾಮಗ್ರಿಗಳ ಅವಶ್ಯಕತೆ ಇದೆ? ಇತ್ಯಾದಿ<br>ಹೀಗೆ ಶಿಕ್ಷಕರು ತಮ್ಮ ಸ್ಥಳೀಯ ಸಂದರ್ಭಕ್ಕನುಗುಣವಾದ ಪ್ರಶ್ನಾವಳಿಗಳನ್ನು ರೂಪಿಸಿಕೊಂಡು ತರಗತಿಯನ್ನು ಅನುಕೂಲಿಸುವುದು.<br>ನೀರಿನ ಆಕರಗಳು ಮತ್ತು ಅವುಗಳಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳಿಗೆ ಸಂಬಂಧಿಸಿದ ಚಿತ್ರಗಳನ್ನು/ ಚಿತ್ರಪಟಗಳನ್ನು/ ವಿಡಿಯೋ/ ಹಾಡು/ಕಥೆಗಳನ್ನೂ ಬಳಸಿ ಅಥವಾ ಪ್ರದರ್ಶಿಸಿ ಮಕ್ಕಳೊಂದಿಗೆ ಚರ್ಚಿಸಬಹುದು.<br>ಸದರಿ ಸಂದರ್ಭದಲ್ಲಿ ಶಿಕ್ಷಕರು ಮಕ್ಕಳನ್ನು ಮುಕ್ತವಾಗಿ ಮಾತನಾಡಲು, ಪ್ರಶ್ನೆಗಳನ್ನು ಕೇಳಲು ಹಾಗೂ ತಮ್ಮ ಸಹಜ ಭಾಷೆಯಲ್ಲಿ ಚರ್ಚಿಸಲು ಅವಕಾಶಗಳನ್ನು ಮಾಡಿಕೊಡುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಚರ್ಚಿಸಲು ಸಹಾಯ ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು. ಜೊತೆಗೆ 2ನೇ ಮತ್ತು 3ನೇ ತರಗತಿಯ ಮಕ್ಕಳಿಗೂ ಅವರ ವಯೋಮಾನಕ್ಕನುಗುಣವಾದ ವಿಷಯ ವ್ಯಾಪ್ತಿಯ ಉನ್ನತ ಚಿಂತನೆಗಳು ಚರ್ಚೆಯಲ್ಲಿ ಬರುವಂತೆ ತರಗತಿಯನ್ನು ಅನುಕೂಲಿಸುವುದು.<br>*(ಸದರಿಚಟುವಟಿಕೆಯ ಮುಂದುವರೆದ ಭಾಗವು 49 ನೇ ದಿನದಲ್ಲಿ ಮುಂದುವರೆಯುವುದು)* |
| | | ಉದ್ದೇಶಿತ ಬರಹ | ಸಾಮರ್ಥ್ಯ : ಮಕ್ಕಳೊಂದಿಗೆ ಬರವಣಿಗೆ, ಉದ್ದೇಶಿತ ಬರವಣಿಗೆ, ಅವಧಾನ ಮತ್ತು ಆಲಿಸುವುದು, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ ಸಂಖ್ಯೆ : 32 ಹಂಚಿತ ಬರೆಹ (ಗುರಿ : 2) **ECW-8**<br>ಉದ್ದೇಶಗಳು:<br>• ಹಂಚಿತ ಬರವಣಿಗೆಯನ್ನು ಪರಿಚಯಿಸುವುದು.<br>• ಉದ್ದೇಶಕ್ಕನುಸಾರವಾಗಿ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿಸುವುದು.<br>• ಅವಧಾನದೊಂದಿಗೆ ಉದ್ದೇಶಿತ ಬರೆಹದಲ್ಲಿ ತೊಡಗಿಸುವುದು.<br>• ಸೃಜನಾತ್ಮಕವಾಗಿ ಚಿಂತಿಸಿ ಅವುಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವುದು.<br>• ಪದ ಸಂಪತ್ತನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು: ಕಪ್ಪುಹಲಗೆ ಡ್ರಾಯಿಂಗ್ ಶೀಟ್<br>ವಿಧಾನ: ಹಂಚಿತ ಬರೆಹ ಚಟುವಟಿಕೆಗಳನ್ನು ತಿಂಗಳಿಗೆ ಎರಡು ಅಥವಾ ಮೂರು ಬಾರಿ ಆಯೋಜಿಸುವುದು. ಒಂದು ವಿಷಯವನ್ನು ನೀಡಿ ಆ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಕಥೆಯ ಮೂಲಕ ಅಥವಾ ಬರವಣಿಗೆ ಮೂಲಕ ಹಂಚಿಕೊಳ್ಳಲು ತಿಳಿಸುವುದು.<br>ಸಲಹಾತ್ಮಕ ಸೂಚಿತ ವಿಷಯ:– ತರಕಾರಿಗಳು<br>ಗಮನಿಸಬೇಕಾದ ಅಂಶಗಳು:<br>• ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಾಕ್ಯಗಳನ್ನು ರಚಿಸಲು ಅಗತ್ಯ ಸುಳಿವುಗಳನ್ನು ನೀಡುವುದು. ಮಕ್ಕಳೊಂದಿಗೆ ಬರವಣಿಗೆಯಲ್ಲಿ ತೊಡಗಿಕೊಳ್ಳುವ ಮೂಲಕ ಬರವಣಿಗೆಯ ಪ್ರಾತ್ಯಕ್ಷಿಕೆ ನೀಡುವುದು |

DRAFT 2022

| | | |
|---|---|---|
| | | • ಶಿಕ್ಷಕರು ಮೊದಲನೇ ವಾಕ್ಯವನ್ನು ಬರೆದು ಓದುವುದು. ನಂತರ ಮಕ್ಕಳು ತಮ್ಮ ಸ್ವಂತ ವಾಕ್ಯವನ್ನು ಹೇಳಿ ಬರೆಯಲು ತಿಳಿಸುವುದು.<br>• ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಪ್ರತಿಕ್ರಿಯಿಸಲು ಅವಕಾಶ ಕಲ್ಪಿಸಬಹುದು. ಅಂತಹ ಸನ್ನಿವೇಶದಲ್ಲಿ ಶಿಕ್ಷಕರು ಅದನ್ನು ಶಾಲಾ ಭಾಷೆಯಲ್ಲಿ ಅನುವಾದಿಸಿ ಹೇಳುವುದು.<br>ತರಗತಿವಾರು ವಿವರ: 1ನೇ ತರಗತಿಯವರು ವಿವರಿಸಿದ ಅಂಶಗಳನ್ನು 2ನೇ ಹಾಗೂ 3ನೇ ತರಗತಿಯ ಮಕ್ಕಳು ಬರವಣಿಗೆ ಮೂಲಕ ಅಭಿವ್ಯಕ್ತಿಪಡಿಸಲು ತಿಳಿಸುವುದು. |
| | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| **ಹೊರಾಂಗಣ ಆಟಗಳು** | Day 47<br>ಚಟುವಟಿಕೆ –19 ತೆವಳುವುದು ಗುರಿ–1<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ.<br>ಬೇಕಾಗುವ ಸಾಮಗಿ: ಹಗ್ಗ<br>ವಿಧಾನ:<br>• ಇಬ್ಬರು ಮಕ್ಕಳು ಕಡಿಮೆ ಎತ್ತರದಲ್ಲಿ ಹಗ್ಗವನ್ನು ಹಿಡಿದುಕೊಂಡು ನಿಲ್ಲಲು ಸೂಚಿಸುವುದು.<br>• ಇತರ ಮಕ್ಕಳನ್ನು ಅದರ ಕೆಳಗೆ ಒಬ್ಬೊಬ್ಬರಾಗಿ ತೆವಳಿಕೊಂಡು ಹೋಗಲು ಸೂಚಿಸುವುದು ಹಾಗು ಹಿಂತಿರುಗುವಾಗ ಓಡುತ್ತ ಬರಲು ಸೂಚಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರೆಸುವುದು .** | |
| **ಕಥಾ ಸಮಯ** | **ಶೀರ್ಷಿಕೆ :** ಕಾಗೆ ಮತ್ತು ಸಿಗ್ನಲ್ ದೀಪ<br>**ಸಾಮಗ್ರಿಗಳು :** ಓದುವೆ ನಾನು ಕಾರ್ಡ್<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು.<br>➢ ಪದಸಂಪತ್ತನ್ನು ಹೆಚ್ಚಿಸುವುದು.<br>➢ ಪ್ರಶ್ನಿಸುವ ಮನೋಭಾವ ಬೆಳೆಸುವುದು.<br>➢ ಓದುವ ಹವ್ಯಾಸವನ್ನು ಬೆಳೆಸುವುದು.<br>➢ ಗ್ರಾಂಥಿಕ ಶಬ್ದಗಳನ್ನು ಪರಿಚಯಿಸುವುದು.<br>➢ **ಅಭಿನಯ ಕೌಶಲವನ್ನು ಬೆಳೆಸುವುದು.**<br>➢ **ನಿರರ್ಗಳವಾಗಿ ಮಾತನಾಡುವುದನ್ನು ರೂಢಿಸುವುದು.**<br>**ವಿಧಾನ :**<br>***ಪಾತ್ರಾಭಿನಯ***<br>➢ ಕಥೆಯನ್ನು ಪುನರಾವಲೋಕನ ಮಾಡಿಕೊಳ್ಳುವುದು.<br>➢ ಕಥೆಯ ನಿರೂಪಣೆಯನ್ನುಮಾಡಲುಎರಡು ಮತ್ತು ಮೂರನೇತರಗತಿಯ ಮಕ್ಕಳಿಗೆ ಸಹಕರಿಸುವುದು.<br>➢ ಮಕ್ಕಳು ತಪ್ಪಾಗಿ ಹೇಳಿದರೂ ತಕ್ಷಣವೇತಿದ್ದದೇ ಸಕಾರಾತ್ಮಕವಾಗಿ ಸ್ವೀಕರಿಸಿ ಆ ನಂತರ ಸರಿಪಡಿಸಿಕಥೆಯನ್ನು ಮುಂದುವರೆಸಲುಹೇಳುವುದು.<br>➢ ಮಿಂಚುಪಟ್ಟಿಗಳಲ್ಲಿ ಪಾತ್ರಗಳ ಸಂಭಾಷಣೆಯನ್ನುಚಿಕ್ಕಚಿಕ್ಕದಾಗಿ ಬರೆದು ನೀಡುವುದು. | |
| **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ. | |

DRAFT 22.02.22

| | | |
|---|---|---|
| | | • "ಸಿಪ್ಪೆ ಸುಲಿದು ನೇರವಾಗಿ ತಿನ್ನುವ ಹಣ್ಣುಗಳ ಬಗ್ಗೆ" ಮಕ್ಕಳು ತಮ್ಮ ಮನೆಗಳಲ್ಲಿ ಮಾಹಿತಿ ಸಂಗ್ರಹಿಸಿಕೊಂಡು ಬರಲಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–8** **ದಿನ–48 (ಶನಿವಾರ)**

| | | | | |
|---|---|---|---|---|
| | ಪ್ರತಿಬಿಂಬ (ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | | |
| | ನನ್ನ ಸಾಧನೆ | | | |
| | ಕಲಿಕಾಫಲಗಳು | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
| | ಸರಿಯಾದ ಆರೋಗ್ಯ ಮತ್ತು ನೈರ್ಮಲ್ಯವನ್ನು ನಿರ್ವಹಿಸುವರು. | | | |
| | ಆರೋಗ್ಯಕರ ಆಹಾರ ಪದ್ಧತಿಯನ್ನು ಅನುಸರಿಸುವರು. | | | |
| | ಆರೋಗ್ಯಕರ ನೈರ್ಮಲ್ಯ ಅಭ್ಯಾಸಗಳನ್ನು ಪಾಲಿಸುವರು. | | | |
| | ಗುಂಪು ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವರು. | | | |
| | ಒಂದಕ್ಕಿಂತ ಹೆಚ್ಚು ಗುಣಲಕ್ಷಣಗಳ ಆಧಾರದ ಮೇಲೆ ವಸ್ತುಗಳನ್ನು ವಿಂಗಡಿಸುವರು. (ಬಣ್ಣ, ಆಕಾರ, ಗಾತ್ರ) | | | |
| | ಸ್ಪರ್ಶಜ್ಞಾನವನ್ನು ಬಳಸಿಕೊಂಡು ವಿನ್ಯಾಸವನ್ನು ಗುರುತಿಸುವರು. | | | |
| | ಸಮಸ್ಯೆಗಳನ್ನು ಗುರುತಿಸುವರು ಮತ್ತು ಪರಿಹರಿಸುವರು. | | | |
| | ಸಣ್ಣ ಪಠ್ಯವನ್ನು ಆಲಿಸುವ ಮೂಲಕ ಗ್ರಹಿಸುವರು. | | | |
| | ಯಾವುದೇ ಘಟನೆ ಅಥವಾ ದೃಶ್ಯವನ್ನು ಚಿಕ್ಕ ವಾಕ್ಯಗಳಲ್ಲಿ ವಿವರಿಸುವರು ಮತ್ತು ಪುನ: ಹೇಳುವರು. | | | |
| | ಸೃಜನಾತ್ಮಕವಾಗಿ ಅಭಿವ್ಯಕ್ತಿಸುವರು/ಉತ್ತರಿಸುವರು. | | | |
| | ಬಿಡಿಸಿದ ಚಿತ್ರಗಳನ್ನು ನೋಡಿ ತಮ್ಮದೇ ಪದಗಳಲ್ಲಿ ಹೇಳುವರು. | | | |

DRAFT 22.02.22

# 4.3 ತಿಂಗಳುವಾರು ಮೌಲ್ಯಾಂಕನ ಚೌಕಟ್ಟು

## (ಶಾಲೆಗಾಗಿ ವಿದ್ಯಾರ್ಥಿಗಳ ಪೂರ್ವಸಿದ್ಧತೆಯನ್ನು ಅನುಪಾಲಿಸುವುದು)

## ಎರಡನೇ ತಿಂಗಳು

**ಉದ್ದೇಶಗಳು:** ಮೂಲಭೂತ ಕಲಿಕೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು

| | | | | | |
|---|---|---|---|---|---|
| ವಿದ್ಯಾರ್ಥಿ ಹೆಸರು | | | ತರಗತಿ | | |
| **ಎತ್ತರ ಮತ್ತು ತೂಕದ ಅಳತೆ** | | | | | |
| ತೂಕ: | | | ಎತ್ತರ: | | |
| **ವೈಯುಕ್ತಿಕ ಸ್ವಚ್ಛತೆ (ಸಂಬಂಧಿಸಿದ ಕಾಲಂ ಅಲ್ಲಿ ✓ ಗುರುತು ಹಾಕಿ)** | | | | | |
| | ಸ್ವಚ್ಛವಾಗಿದೆ | ಸುಧಾರಿಸಬೇಕಿದೆ | | ಸ್ವಚ್ಛವಾಗಿದೆ | ಸುಧಾರಿಸಬೇಕಿದೆ |
| ಬಟ್ಟೆ: | | | ಉಗುರುಗಳು: | | |
| ಹಲ್ಲುಗಳು: | | | ಕಣ್ಣುಗಳು: | | |
| ಕಿವಿಗಳು: | | | ಮೂಗು: | | |
| ಕೂದಲು | | | | | |

**ಈ ಕೆಳಗಿನ ಚಟುವಟಿಕೆಗಳಲ್ಲಿ ಇಡೀ ತಿಂಗಳು ಮಕ್ಕಳ ಪ್ರಗತಿಯನ್ನು ಕ್ರೋಡೀಕರಿಸಿ ಸಂಬಂಧಿಸಿದ ಕಾಲಂ ಅಲ್ಲಿ ✓ ಗುರುತು ಹಾಕುವುದು.**

| ದೈನಂದಿನ ಚಟುವಟಿಕೆಗಳ ಹೊಂದಾಣಿಕೆ ಮತ್ತು ಅನುಸರಿಸುವಿಕೆ | ಅಪರೂಪಕ್ಕೆ | ಕೆಲವು ಸಲ | ಯಾವಾಗಲೂ |
|---|---|---|---|
| ಸರಿಯಾದ ಆರೋಗ್ಯ ಮತ್ತು ನೈರ್ಮಲ್ಯವನ್ನು ನಿರ್ವಹಿಸುತ್ತಾನೆ/ಳೆ. | | | |
| ಆರೋಗ್ಯಕರ ಆಹಾರ ಪದ್ಧತಿಯನ್ನು ಅನುಸರಿಸುತ್ತಾನೆ/ಳೆ. | | | |
| ಆರೋಗ್ಯಕರ ನೈರ್ಮಲ್ಯ ಅಭ್ಯಾಸಗಳನ್ನು ಅನುಸರಿಸುತ್ತಾನೆ/ಳೆ. | | | |
| ಗುಂಪು ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳುತ್ತಾನೆ/ಳೆ. | | | |
| ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಾನೆ/ಳೆ. | | | |
| ಪರಿಸ್ಥಿತಿಗೆ ಸೂಕ್ತವಾದ ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ/ಳೆ. | | | |
| ಕಥೆಗಳು ಮತ್ತು ಚಿತ್ರಗಳಲ್ಲಿ ಇತರರ ಭಾವನೆಗಳನ್ನು ಗುರುತಿಸುತ್ತಾನೆ/ಳೆ. | | | |
| ಇತರರೊಂದಿಗೆ ಸಾಮಾಜಿಕ ಸಂಬಂಧವನ್ನು ಅನ್ವೇಷಿಸುತ್ತಾನೆ/ಳೆ. | | | |
| ಆಟ ನಿಯಮಗಳನ್ನು ಪಾಲಿಸುತ್ತಾನೆ/ಳೆ. | | | |
| ತರಗತಿಯ ನಡವಳಿಕೆ ಮತ್ತು ದೈನಂದಿನ ಚಟುವಟಿಕೆಗಳ ನಿಯಮಗಳನ್ನು ಅನುಸರಿಸುತ್ತಾನೆ/ಳೆ. | | | |
| ಬಹು ಹಂತದ ಸೂಚನೆಗಳನ್ನು ಅನುಸರಿಸುತ್ತಾನೆ/ಳೆ. | | | |
| ತರಗತಿಯ ಜವಾಬ್ದಾರಿಗಳು ಮತ್ತು ಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ಸ್ವಾತಂತ್ರ್ಯವನ್ನು ಪ್ರದರ್ಶಿಸುತ್ತಾನೆ/ಳೆ. | | | |
| ಕಾರ್ಯವನ್ನು ಪೂರ್ಣಗೊಳಿಸಲು ಹೆಚ್ಚಿದ ಗಮನ ಮತ್ತು ನಿರಂತರತೆಯನ್ನು ತೋರಿಸುತ್ತಾನೆ/ಳೆ. | | | |
| ನೃತ್ಯಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ/ಳೆ. | | | |
| **ಹೊರಾಂಗಣ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ** | **ಸಹಾಯದ ಅವಶ್ಯಕತೆ ಇದೆ** | **ಕಷ್ಟ ಪಟ್ಟುಮಾಡುತ್ತಾನೆ/ಳೆ** | **ಮಾಡುತ್ತಾನೆ** |
| ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಚೆಂಡನ್ನು ಎಸೆಯುತ್ತಾನೆ/ಳೆ. | | | |
| ಕಡಿಮೆ ದೂರದಿಂದ ಎಸೆದ ಚೆಂಡನ್ನು ಹಿಡಿಯುತ್ತಾನೆ/ಳೆ. | | | |
| ತನ್ನನ್ನು ತಾನು ಮರಳು ಮತ್ತು ನೀರಿನ ಆಟಗಳಲ್ಲಿ ತೊಡಗಿಸಿಕೊಳ್ಳುತ್ತಾನೆ/ಳೆ. | | | |
| ಗುರಿ ಅಥವಾ ದಿಕ್ಕಿನ ಕಡೆಗೆ ಚೆಂಡನ್ನು ಒದೆಯುತ್ತಾನೆ/ಳೆ. | | | |

DRAFT 2022

| | | | |
|---|---|---|---|
| ಯೋಗ ಸ್ಟೆಚಿಂಗ್ ವ್ಯಾಯಾಮ ಮತ್ತು ನೃತ್ಯದಲ್ಲಿ ಚುರುಕುತನವನ್ನು ತೋರಿಸುತ್ತಾನೆ/ಳೆ. | | | |
| ಮುಂದಕ್ಕೆ ಮತ್ತು ಹಿಂದಕ್ಕೆ ಜಿಗಿಯುತ್ತಾನೆ/ಳೆ. | | | |
| ಸರಾಗವಾಗಿ ಹರಿದಾಡುತ್ತಾನೆ/ಳೆ. | | | |
| **ಸೃಜನಾತ್ಮಕತೆ, ಸೌಂದರ್ಯ ಪ್ರಜ್ಞೆ ಹಾಗು ಸ್ನಾಯು ಚಲನಾ ಅಭಿವೃದ್ಧಿಗಾಗಿ ಕಲಾ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ** | **ಸಹಾಯದ ಅವಶ್ಯಕತೆ ಇದೆ** | **ಕಷ್ಟ ಪಟ್ಟುಮಾಡುತ್ತಾನೆ/ಳೆ** | **ಮಾಡುತ್ತಾನೆ** |
| ಸರಳ ಒರಿಗಾಮಿ ಅಥವಾ ಪೇಪರ್ ಫೋಲ್ಡಿಂಗ್ ಮಾಡುತ್ತಾನೆ/ಳೆ. | | | |
| ಅಡಿಣಟರಿಟಢ ಚಿಟಿಜ ರಿಛಿಣಾಢ | | | |
| ಸೂಕ್ಷ್ಮ ವಿವರಗಳೊಂದಿಗೆ ಚಿತ್ರಿಸುತ್ತಾನೆ/ಳೆ. | | | |
| ಸಣ್ಣ ಜಾಗದಲ್ಲಿ ಬಣ್ಣಗಳನ್ನು ಹಾಕುತ್ತಾನೆ/ಳೆ. | | | |
| ದಪ್ಪ ಕುಂಚಗಳೊಂದಿಗೆ ಬಣ್ಣ ಹಾಕುತ್ತಾನೆ/ಳೆ. | | | |
| ಬೆರಳುಗಳು ಮತ್ತು ಬ್ಲಾಕ್‌ಗಳು ಇತ್ಯಾದಿಗಳನ್ನು ಬಳಸಿ ಮುದ್ರಿಸುತ್ತಾನೆ/ಳೆ. | | | |
| ವಿವಿಧ ವಸ್ತುಗಳೊಂದಿಗೆ ಮುದ್ರಣವನ್ನು ಮಾಡುತ್ತದೆ | | | |
| ಜೇಡಿ ಮಣ್ಣಿನಿಂದ ಅಥವಾ ಹಿಟ್ಟಿನಿಂದ ಆಕಾರಗಳನ್ನು ಮಾಡುತ್ತಾನೆ/ಳೆ. | | | |
| **ಸಂಖ್ಯಾ ಜ್ಞಾನ ಹಾಗೂ ಪರಿಸರದ ಅರಿವು** | **ಸಹಾಯದ ಅವಶ್ಯಕತೆ ಇದೆ** | **ಕಷ್ಟ ಪಟ್ಟುಮಾಡುತ್ತಾನೆ/ಳೆ** | **ಮಾಡುತ್ತಾನೆ** |
| ವಿವಿಧ ವಸ್ತುಗಳ ಉದ್ದವನ್ನು ಹೋಲಿಸುತ್ತಾನೆ/ಳೆ. | | | |
| ಮಾರ್ಗದರ್ಶನದೊಂದಿಗೆ ಸರಳವಾದ ನೈಸರ್ಗಿಕ ವಿದ್ಯಮಾನಗಳನ್ನು ಗಮನಿಸುತ್ತಾನೆ/ಳೆ ಹಾಗೂ ಅನ್ವೇಷಿಸುತ್ತಾನೆ/ಳೆ | | | |
| ಒಂದಕ್ಕಿಂತ ಹೆಚ್ಚು ಗುಣಲಕ್ಷಣಗಳ ಆಧಾರದ ಮೇಲೆ ವಸ್ತುಗಳನ್ನು ವಿಂಗಡಿಸುತ್ತಾನೆ/ಳೆ.(ಆಕಾರ/ಬಣ್ಣ/ಗಾತ್ರ) | | | |
| ವಸ್ತುಗಳನ್ನು ಕ್ರಮವಾಗಿ ಜೋಡಿಸುತ್ತಾನೆ/ಳೆ. (ಗಾತ್ರ–ಉದ್ದ/ಎತ್ತರ) | | | |
| ಮಾದರಿಯನ್ನು ಗುರುತಿಸುತ್ತದೆ ಮತ್ತು ಪೂರ್ಣಗೊಳಿಸುತ್ತಾನೆ/ಳೆ. (○○,ಃಃ/○ಃ,○ಃ) | | | |
| ಆಕಾರಗಳನ್ನು ಗುರುತಿಸುತ್ತಾನೆ/ಳೆ ಮತ್ತು ಹೆಸರಿಸುತ್ತಾನೆ/ಳೆ. (ವೃತ್ತ, ಚೌಕ, ತ್ರಿಕೋನ, ಆಯತ) | | | |
| 2 ರಿಂದ 4 ಅಡೆತಡೆಗಳೊಂದಿಗೆ ಸಂಕೀರ್ಣ ಮೇಜ್ ಗಳನ್ನು ಪರಿಹರಿಸುತ್ತಾನೆ/ಳೆ. | | | |
| ಮರೆ ಮಾಡಿದ ಭಾಗದ ಕಾಣೆಯಾದ ಭಾಗ ಅಥವಾ ತಪ್ಪುಗಳನ್ನು ಗುರ್ತಿಸುತ್ತಾನೆ/ಳೆ. | | | |
| ಗಾತ್ರದ ಆಧಾರದ ಮೇಲೆ ವಸ್ತುಗಳನ್ನು ಕ್ರಮವಾಗಿ ಜೋಡಿಸುತ್ತಾನೆ/ಳೆ.(ಉದ್ದ ಮತ್ತು ಎತ್ತರ) | | | |
| ಸ್ವತಂತ್ರವಾಗಿ ಸರಳವಾದ ಅನೌಪಚಾರಿಕ ಮಾಪನ ಚಟುವಟಿಕೆಗಳನ್ನು ಮಾಡುತ್ತಾನೆ/ಳೆ. | | | |
| ಚಿಕ್ಕದಾದ, ಎತ್ತರದ, ದೊಡ್ಡದಾದ, ಚಿಕ್ಕದಾದ, ಭಾರವಾದ ಮತ್ತು ಹಗುರವಾದ ಎಂಬಂತಹ ಶಬ್ದಕೋಶವನ್ನು ಬಳಸುತ್ತಾನೆ/ಳೆ. | | | |
| ಇತರರೊಂದಿಗೆ ಸಾಮಾಜಿಕ ಸಂಬಂಧವನ್ನು ವ್ಯಕ್ತಪಡಿಸುತ್ತಾನೆ/ಳೆ. | | | |
| ಪರಿಸ್ಥಿತಿಗೆ ಸೂಕ್ತವಾದ ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ/ಳೆ. | | | |
| ಘಟನೆಗಳು, ಸ್ನೇಹಿತರು ಮತ್ತು ಹಬ್ಬಗಳ ಬಗ್ಗೆ ಮಾತನಾಡುತ್ತಾನೆ/ಳೆ. | | | |
| ಸ್ಪರ್ಶ ಜ್ಞಾನವನ್ನು ಬಳಸಿಕೊಂಡು ವಿನ್ಯಾಸವನ್ನು ಗುರುತಿಸುತ್ತಾನೆ/ಳೆ. | | | |
| ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುತ್ತಾನೆ/ಳೆ. | | | |
| **ಮೌಖಿಕ ಅಭಿವ್ಯಕ್ತಿಯ ಪ್ರದರ್ಶನ** | **ಅಪರೂಪಕ್ಕೆ** | **ಕೆಲವು ಸಲ** | **ಯಾವಾಗಲೂ** |
| ಆಲಿಸುವ ಮೂಲಕ ಸಣ್ಣ ಪಠ್ಯಗಳನ್ನು ಗ್ರಹಿಸುತ್ತಾನೆ/ಳೆ. | | | |
| ಸಣ್ಣ ವಾಕ್ಯಗಳಲ್ಲಿ ಯಾವುದೇ ಘಟನೆ ಅಥವಾ ದೃಶ್ಯವನ್ನು ವಿವರಿಸುತ್ತಾನೆ/ಳೆ ಮತ್ತು ಪುನಃ ಹೇಳುತ್ತಾನೆ/ಳೆ. | | | |
| ಉಚ್ಚಾರಾಂಶಗಳನ್ನು ಗುರುತಿಸುತ್ತದೆ, ಮಿಶ್ರಣ ಮಾಡುತ್ತದೆ ಮತ್ತು ವಿಭಾಗಿಸುತ್ತದೆ | | | |
| ಸಾಮಾನ್ಯ ಪದಗಳ ಆರಂಭ ಮತ್ತು ಅಂತ್ಯದ ಶಬ್ದಗಳನ್ನು(ಧ್ವನಿಯನ್ನು) ಗುರುತಿಸುತ್ತಾನೆ/ಳೆ. | | | |
| ಸೃಜನಾತ್ಮಕವಾಗಿ ವ್ಯಕ್ತಪಡಿಸುತ್ತಾನೆ/ಳೆ ಅಥವಾ ಉತ್ತರಿಸುತ್ತಾನೆ/ಳೆ. | | | |
| ಪ್ರಾಸಪದ್ಯಗಳನ್ನು/ಹಾಡುಗಳನ್ನು ಹಾಡುವುದನ್ನು ಆನಂದಿಸುತ್ತಾನೆ/ಳೆ. | | | |
| **ಪ್ರಾರಂಭಿಕ ಓದುವ ಕೌಶಲ್ಯಗಳ ಪ್ರದರ್ಶನ** | **ಅಪರೂಪಕ್ಕೆ** | **ಕೆಲವು ಸಲ** | **ಯಾವಾಗಲೂ** |
| ಪ್ರಾಸಬದ್ಧ ಪದಗಳನ್ನು ಗುರುತಿಸುತ್ತಾನೆ/ಳೆ. | | | |
| ಧ್ವನಿ–ಚಿಹ್ನೆಯ ಸಂಯೋಜನೆಯನ್ನು ಗುರುತಿಸುತ್ತಾನೆ/ಳೆ. | | | |

| | | | |
|---|---|---|---|
| ಪದಗಳನ್ನು ಓದುವ ಪ್ರಯತ್ನ ಮಾಡುತ್ತಾನೆ/ಳೆ. | | | |
| ಎಡದಿಂದ ಬಲಕ್ಕೆ ಬರವಣಿಗೆ, ಮೇಲಿನಿಂದ ಕೆಳಗಿನಿಂದ ಓದುವುದು ಮುಂತಾದ ಮುದ್ರಣದ ಸಂಪ್ರದಾಯಗಳನ್ನು ಗುರುತಿಸುತ್ತಾನೆ/ಳೆ. | | | |
| **ಪ್ರಾರಂಭಿಕ ಬರವಣಿಗೆಯ ಕೌಶಲ್ಯಗಳ ಪ್ರದರ್ಶನ** | **ಅಪರೂಪಕ್ಕೆ** | **ಕೆಲವು ಸಲ** | **ಯಾವಾಗಲೂ** |
| ಸರಿಯಾದ ಹಿಡಿತದೊಂದಿಗೆ ಬರವಣಿಗೆ ಅಥವಾ ಬಣ್ಣ ಉಪಕರಣಗಳನ್ನು ಬಳಸುತ್ತಾನೆ/ಳೆ. | | | |
| ಉಪಕರಣಗಳನ್ನು ಸರಿಯಾದ ರೀತಿಯಲ್ಲಿ ಬಳಸುತ್ತಾನೆ/ಳೆ. | | | |
| ಉಳಿದವರು ರಚಿಸಿದ ರೇಖಾಚಿತ್ರವನ್ನು ಓದುತ್ತಾನೆ/ಳೆ ಮತ್ತು ಸರಳ ಪದಗಳನ್ನು ಬಳಸಿ ವಿವರಿಸುತ್ತಾನೆ/ಳೆ. | | | |

| | | |
|---|---|---|
| **ಮಗುವಿನ ವೈಶಿಷ್ಟ್ಯತೆಗಳು:** | ವಿಶೇಷ ಆಸಕ್ತಿಗಳು | |
| | ಮಗುವಿನ ಪ್ರತಿಭೆಗಳು | |
| | ಸಾಮರ್ಥ್ಯ | |

| | | | | |
|---|---|---|---|---|
| **ಹಾಜರಾತಿ:** | ನಿಯಮಿತ | ಹೌದು/ಇಲ್ಲ | **ಸಮಯಪಾಲನೆ** | ಇದೆ /ಇಲ್ಲ |

| | |
|---|---|
| ಸಾಮಾನ್ಯ ಟಿಪ್ಪಣಿಗಳು (ರಿಮಾರ್ಕ್ಸ್) | |

| | |
|---|---|
| ಮುಖ್ಯ ಶಿಕ್ಷಕರ ಸಹಿ ದಿನಾಂಕದೊಂದಿಗೆ | ಶಿಕ್ಷಕರ ಸಹಿ ದಿನಾಂಕದೊಂದಿಗೆ |

ಪಾಲಕರ ಸಹಿ ದಿನಾಂಕದೊಂದಿಗೆ

DRAFT 22.02.22

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–9** **ದಿನ–49 (ಸೋಮವಾರ)**



| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 49 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1:**<br>ಏಕ್– ದೋ –ಏಕ್ / 1–2–1–2 ಎಣಿಸುವ ಮೂಲಕ ಕದಮ್ ತಾಲ್ ಮಾಡುವ ಮೂಲಕ ಒಂದು ಸಾಲಿನಲ್ಲಿ ತರಗತಿಯನ್ನು ಪ್ರವೇಶಿಸಲು ಮಕ್ಕಳಿಗೆ ತಿಳಿಸಿ.<br>**ಚಟುವಟಿಕೆ 2:**<br>1. ಮಳೆ ಚಪ್ಪಾಳೆ ಯನ್ನು ಹೇಳಿಕೊಡುವುದು.<br>2. ಮಕ್ಕಳು ಮಳೆ ಚಪ್ಪಾಳೆ ತಟ್ಟುತ್ತಾ ತರಗತಿಯಲ್ಲಿ ವೃತ್ತಾಕಾರವಾಗಿ ನಿಲ್ಲುವುದು. |
| | ಮಾತು ಕತೆ | **ಚಟುವಟಿಕೆ: ಪ್ರಕೃತಿ ನಡಿಗೆ**<br>**ವಿಧಾನ:** ಮಕ್ಕಳನ್ನು ಶಾಲಾ ಉದ್ಯಾನವನಕ್ಕೆ ಅಥವಾ ಹತ್ತಿರದ ಉದ್ಯಾನವನಕ್ಕೆ ಕರೆದುಕೊಂಡು ಹೋಗಿ. ಅವರು ವಿವಿಧ ರೀತಿಯ ಗಿಡ ಮರಗಳನ್ನು ನೋಡಲು/ ಅನ್ವೇಷಿಸಲು ಅವಕಾಶ ಮಾಡಿಕೊಡಿ. ಅವುಗಳ ಕುರಿತು ಮಾತನಾಡಲು ಅವಕಾಶ ನೀಡಿ. |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | **ಸಾಮರ್ಥ್ಯ: ವಿನ್ಯಾಸ, ಪರಿಸರದ ಅರಿವು ಮತ್ತು ಸೃಜನಾತ್ಮಕ ಚಿಂತನೆ**<br>**ಚಟುವಟಿಕೆ–20 : ವಿನ್ಯಾಸಗಳ ರಚನೆ ಮತ್ತು ವಿಸ್ತರಣೆ ( ಗುರಿ –3)**<br>**ಉದ್ದೇಶ:–ವಿವಿಧ ರೀತಿಯ ಮಾದರಿಯ ವಿನ್ಯಾಸಗಳನ್ನು ರಚಿಸುವುದು.**<br>**ಸಾಮಗ್ರಿಗಳು: ವಿವಿಧ ಮಾದರಿಯ ಎಲೆಗಳು, ಕೊಂಬೆಗಳು, ಬೆಣಚುಕಲ್ಲುಗಳು, ಬೆಂಕಿಕಡ್ಡಿಗಳು, ಬೀಜಗಳು**<br>**ವಿಧಾನ :**<br>**∗ ಮಕ್ಕಳಿಗೆ ಪರಿಚಿತವಿರುವ ಸರಳವಾದ ವಿನ್ಯಾಸಗಳನ್ನು ರಚಿಸುವುದು.**<br>**∗ ಎಲೆಗಳು, ಕೊಂಬೆಗಳು, ಬೆಣಚುಕಲ್ಲುಗಳು, ಬೆಂಕಿಕಡ್ಡಿಗಳು, ಬೀಜಗಳು ಇತ್ಯಾದಿಗಳ ಮೂಲಕ ಸರಳವಾದ ವಿನ್ಯಾಸಗಳನ್ನು ರಚಿಸುವುದು.**<br>**∗ ನಂತರ ಸಂಕೀರ್ಣತೆಯನ್ನು ಹೆಚ್ಚಿಸಿ (ಎರಡು ಬೀಜಗಳು –ಒಂದು ಬೆಣಚುಕಲ್ಲು, ಎರಡು ಬೀಜಗಳು –ಒಂದು ಎಲೆ, ಎರಡು ಕೊಂಬೆಗಳು –ಒಂದು ಎಲೆ, ಎರಡು ಲಂಬ ಬೆಂಕಿಕಡ್ಡಿಗಳು –ಒಂದು ಅಡ್ಡ ಬೆಂಕಿಕಡ್ಡಿ, ಎರಡು ಲಂಬ ಬೆಂಕಿಕಡ್ಡಿ–ಒಂದು ಅಡ್ಡ ಬೆಂಕಿಕಡ್ಡಿ) ಈ ಮಾದರಿಯಲ್ಲಿ ವಿವಿಧರೀತಿಯ ವಿನ್ಯಾಸಗಳನ್ನು ರಚಿಸಲು ಅವಕಾಶ ನೀಡುವುದು.**<br>**∗ ಪರಿಸರದಲ್ಲಿ ಸುಲಭವಾಗಿ ಸಿಗುವಂತಹ ವಸ್ತುಗಳು, ಎಲೆಗಳು, ಕಡ್ಡಿಗಳು, ಬೆಣಚುಕಲ್ಲುಗಳಿಂದ ಹೊಸ ಹೊಸ ವಿನ್ಯಾಸಗಳನ್ನು ರಚಿಸಲು ಅವಕಾಶ ಕಲ್ಪಿಸುವುದು.**<br>**∗ ಮನೆ ಮತ್ತು ತರಗತಿಯಲ್ಲಿ ವಿವಿಧರೀತಿಯ ಪರಿಶೋಧನೆಗಳಿಗೆ ಅವಕಾಶ ನೀಡುವುದು.**<br>**ಮಕ್ಕಳು ಎಲ್ಲಾ ರೀತಿಯ ವಿನ್ಯಾಸಗಳನ್ನು ಸಂಪೂರ್ಣಗೊಳಿಸಿದ ನಂತರ ಅವುಗಳನ್ನು ಗುರುತಿಸುವುದು. ಮರುಹೊಂದಿಸುವುದು, ವಿಸ್ತರಿಸುವುದು ಮತ್ತು ಹೊಸದಾಗಿ ಸೃಷ್ಟಿಸುವುದು ಮುಂತಾದ ಚಟುವಟಿಕೆಗಳಿಗೆ ಅವಕಾಶ ನೀಡಿ ಪ್ರೋತ್ಸಾಹಿಸುವುದು.**<br>**2ನೇ ಮತ್ತು 3ನೇ ತರಗತಿ**<br>**ವಿವಿಧ ರೀತಿಯ ವಿನ್ಯಾಸಗಳನ್ನು ರಚಿಸಲು ಪ್ರೋತ್ಸಾಹಿಸುವುದು.** |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಎ.ಟ್ರೇಸ್ ಮಾಡುವುದು. ಗುರಿ – 1 |

| | | | |
|---|---|---|---|
| | ಕೌಶಲಗಳು (ಮಕ್ಕಳ ಚಟುವಟಿಕೆ) | | ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಸ್ಥಳದ ಪರಿಕಲ್ಪನೆಯನ್ನು ತಿಳಿಯುತ್ತಾರೆ.<br>ಸಾಮಗ್ರಿಗಳು : ಮರಳು.<br>ವಿಧಾನ : ಅಂಕಿಗಳನ್ನು ಬರೆಯುವ ಕ್ರಮದಂತೆ ಮಕ್ಕಳಿಂದ ತಿದ್ದಿಸಿ ಆ ಅಂಕಿಗಳ ರೇಖಾ ಚಿತ್ರಗಳನ್ನು ರಚಿಸಲು ಹೇಳುವುದು. ಮಗು ತನಗೆ ಇಷ್ಟವಾದ/ ಬರುವ ಅಂಕಿಗಳನ್ನು ಬರೆಯಲು ಪ್ರೋತ್ಸಾಹಿಸುವುದು. ಸಂಖ್ಯೆಗಳಿಗನುಗುಣವಾಗಿ ವಸ್ತುಗಳನ್ನು ಜೋಡಿಸುವುದು.ಮಕ್ಕಳಿಗೆ ತಮಗೆ ಇಷ್ಟವಾದ ಅಂಕಿ/ಸಂಖ್ಯೆಗಳನ್ನು ಬರೆಯಲು ಪ್ರೋತ್ಸಾಹಿಸುವುದು. ಅಂಕಿ/ಸಂಖ್ಯೆಗಳಷ್ಟೆ ಮಣ್ಣನ್ನು ಮುಷ್ಟಿಯಲ್ಲಿ ಹಿಡಿದು ಗುಂಪು ಮಾಡುವುದು.<br>ವಿವರ; 2ಮತ್ತು 3 ನೇ ತರಗತಿಗೆ ತಾವು ಬರೆದುಕೊಂಡ ಸಂಖ್ಯೆಗಳಿಗೆ ಅನುಗುಣವಾಗಿ ಚಿತ್ರಗಳನ್ನು ಬರೆಯಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | **ಸಾಮರ್ಥ್ಯ,-ಪದ ಸಂಯೋಜನೆ**<br>**ಚಟುವಟಿಕೆ 10 ಪದರಚನೆ (ಗುಂಪು-2) ECL-10**<br>**ಉದ್ದೇಶ:**<br>*** ಪದ ರಚನಾ ಸಾಮರ್ಥ್ಯವನ್ನು ಹೆಚ್ಚಿಸುವುದು.**<br>*** ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದು.**<br>**ಸಾಮಗ್ರಿ-ಇಲ್ಲ**<br>**ಸಾಧನ-ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ ಸ್ಪಷ್ಟವಾದ ಸೂಚನೆಗಳನ್ನು ನೀಡಿ ಚಟುವಟಿಕೆಯನ್ನು ಆರಂಭಿಸಿ.**<br>*** ನಾನು ಹೇಳುವ ಅಕ್ಷರಗಳನ್ನು ಆಲಿಸಿ.**<br>*** ಅಕ್ಷರಗಳನ್ನು ಸೇರಿಸಿ ಪದ ರಚಿಸಿ ಹೇಳಿ.**<br>**ಉದಾಹರಣೆ-ಶಿಕ್ಷಕರು ಜೋರಾಗಿ ಸ(ವಿರಾಮ) ರ ಎಂದು ಉಚ್ಚರಿಸಿದಾಗ ಮಕ್ಕಳು ಅಕ್ಷರಗಳನ್ನು ಆಲಿಸಿ ಸರ ಎಂದು ಪದ ರಚಿಸಿ ಹೇಳಲಿ.**<br>**ಈ ಚಟುವಟಿಕೆಯಲ್ಲಿ ಶಿಕ್ಷಕರು ಹಂತ ಹಂತವಾಗಿ ಮೂರಕ್ಷರ ಹಾಗೂ ನಾಲ್ಕಕ್ಷರದ ಪದಗಳನ್ನು ಬಳಸಬಹುದಾಗಿದೆ.**<br>**ತರಗತಿಯ ವಿವರ : 2 ನೇ ತರಗತಿಯ ಮಕ್ಕಳು ಒಂದು ಅಕ್ಷರಕ್ಕೆ ಸಂಬಂಧಿಸಿದಂತೆ 2-3 ಪದಗಳನ್ನು ಹೇಳುವುದು. 3 ನೇ ತರಗತಿಯ ಮಕ್ಕಳು ಎರಡನೇ ತರಗತಿಯ ಮಕ್ಕಳು ಹೇಳಿದ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸುವುದು.** |
| | | **ಅರ್ಥಗ್ರಹಿಕೆಯೊಂದಿಗಿನ ಓದು** | **ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ....18**<br>**• ಚಿತ್ರ ಸಂಪುಟ (ಗುರಿ-2) ವಿಷಯ: 'ನೀರಿನ ಆಕರಗಳು ಮತ್ತು ಅವುಗಳಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳು '**<br>**ಉದ್ದೇಶ:**<br>**• ಚಿತ್ರದಲ್ಲಿನ ವಸ್ತು/ವ್ಯಕ್ತಿ/ಘಟನೆಗಳನ್ನು ಹೆಸರಿಸುವುದು ಊಹಿಸಿ ಅರ್ಥೈಸಿಕೊಳ್ಳಲು ಚಿತ್ರದೊಂದಿಗೆ ಪಠ್ಯವನ್ನು ಸಂಬಂಧಿಕರಿಸುವುದು.**<br>**• ಮಕ್ಕಳು ಚಿತ್ರಓದುವುದು ಮತ್ತು ಚರ್ಚಿಸಿ ಅರ್ಥಮಾಡಿಕೊಳ್ಳುವುದು ಮತ್ತು ವೈಯಕ್ತಿಕಚಿತ್ರ ಸಂಪುಟಗಳನ್ನು ರಚಿಸಿ ವೈಯಕ್ತಿಕವಾಗಿ ಮತ್ತು ಗುಂಪುಗಳಲ್ಲಿ ಮಂಡಿಸುವುದು ಮತ್ತು ಗುಂಪಿನಲ್ಲಿ ಕುಳಿತು ಗೋಡೆ ಪತ್ರಿಕೆಗಳನ್ನು ರಚಿಸುವುದು.**<br>**ಅಗತ್ಯ ಸಾಮಗ್ರಿಗಳು : ಮಕ್ಕಳು ರಚಿಸಿದ ಚಿತ್ರಗಳು**<br>**ವಿಧಾನ : ' ನೀರಿನ ಆಕರಗಳು ಮತ್ತು ಅವುಗಳಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳು ಸಂಬಂಧಿಸಿದಂತೆ ಮಕ್ಕಳು ಬರೆದ ಚಿತ್ರಗಳನ್ನು ಕೃತಿಸಂಪುಟದಿಂದ ತೆಗೆದು ಅದರ ಬಗ್ಗೆ ಸಹಜವಾಗಿ** |

DRAFT 22.02.22

| | |
|---|---|
| | ಮಾತನಾಡಲು ಪ್ರೋತ್ಸಾಹಿಸುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ  ...ಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ...ದನ್ನು ಖಾತ್ರಿಪಡಿಕೊಳ್ಳುವುದು ಜೊತೆಗೆ 2ನೇ ಮತ್ತು 3ನೇತರಗತಿಯ ಮಕ್ಕಳಿಗೂ ಸ್ವತಂತ್ರ... ...ವಕಾಶ ನೀಡುವುದು.<br>*(ಸದರಿ ಚಟುವಟಿಕೆಯ ಮುಂದುವರೆದ ಭಾಗವು 53ನೇ ದಿನದಲ್ಲಿ ಮುಂದುವರೆಯುವುದು)* |
| ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ, ಆಲಿಸಿ ಅರ್ಥ ಮಾಡಿಕೊಳ್ಳುವುದು, ಪರಿಸರದ ಅರಿವು.<br>**ಚಟುವಟಿಕೆ....33 ಪಟ್ಟಿ ಮಾಡೋಣ (ಗುರಿ–2) ECW-10**<br>ಉದ್ದೇಶಗಳು:<br>• ಉದ್ದೇಶಕ್ಕನುಸಾರವಾಗಿ ಬರವಣಿಗೆ ಮಾಡಲು ಅವಕಾಶ ನೀಡುವುದು.<br>• ಸೃಜನಶೀಲ ಚಿಂತನೆಯನ್ನು ಬೆಳೆಸುವುದು.<br>• ಪರಿಸರದ ಅರಿವು ಮೂಡಿಸುವುದು.<br>• ಪದಸಂಪತ್ತನ್ನು ಹೆಚ್ಚಿಸುವುದು.<br>• ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಕಾಗದ, ಕ್ರೇಯಾನ್ಸ್,<br>ವಿಧಾನ : ಮಕ್ಕಳ ಪದಸಂಪತ್ತನ್ನು ಹೆಚ್ಚಿಸಲು ಹಾಗೂ ಉದ್ದೇಶಿತ ಬರವಣಿಗೆಗೆ ಅವಕಾಶ ಕಲ್ಪಿಸಲು ಮಕ್ಕಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಲು ತಿಳಿಸಿ.<br>ಸೂಚಿತ ವಿಷಯ: ಪಕ್ಷಿಗಳು<br>ಇಡೀ ತರಗತಿಯನ್ನು ಒಳಗೊಂಡಂತೆ ಒಂದು ಚಾರ್ಟ್‌ಪೇಪರ್‌ನಲ್ಲಿ ಪಟ್ಟಿ ಮಾಡುವ ಚಟುವಟಿಕೆಯನ್ನು ಆಯೋಜಿಸಬಹುದು. ಈ ಚಾರ್ಟ್‌ನಲ್ಲಿ ಬಳಸಬಹುದಾದ ಸಾಮಾನ್ಯ ಪದಗಳ ಪಟ್ಟಿಯನ್ನು ಶಿಕ್ಷಕರೇ ಸಿದ್ಧಪಡಿಸಿ, ಮಕ್ಕಳು ಇವುಗಳನ್ನು ನೋಡಲು ಹಾಗೂ ಓದಲು ಸಹಾಯಕವಾಗುವಂತೆ ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.<br>ತರಗತಿವಾರು ವಿವರ: 1ನೇ ತರಗತಿಯವರು ತಯಾರಿಸಿರುವ ಪಟ್ಟಿಗೆ 2ನೇ ತರಗತಿಯ ಮಕ್ಕಳು ಹೆಚ್ಚುವರಿಯಾಗಿ ಪದಗಳನ್ನು ಸೇರಿಸಲಿ. 3ನೇ ತರಗತಿಯವರು ಪಟ್ಟಿಯಲ್ಲಿರುವ ಪದಗಳಿಗೆ ಸ್ವಂತ ವಾಕ್ಯಗಳನ್ನು ರಚಿಸಲು ಅವಕಾಶ ಮಾಡಿಕೊಡಿ. |
| | **ಬರವಣಿಗೆಯ ಮಾದರಿ:**<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| **ಹೊರಾಂಗಣ ಆಟಗಳು** | Day 49<br>ಚಟುವಟಿಕೆ –32 ಸಂಗೀತ ಕುರ್ಚಿ<br><br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ,<br>ಬೇಕಾಗುವ ಸಾಮಗ್ರಿ: ಕುರ್ಚಿಗಳು ಮತ್ತು ಡ್ರಮ್/ಸಂಗೀತ<br>ವಿಧಾನ:<br>• ದೊಡ್ಡ ವೃತ್ತದಲ್ಲಿ 5–6 ಕುರ್ಚಿಗಳನ್ನು ಇರಿಸುವುದು.<br>• ಆಟದಲ್ಲಿ ಭಾಗವಹಿಸುವ ಮಕ್ಕಳ ಸಂಖ್ಯೆಗಿಂತ ಒಂದು ಕುರ್ಚಿಯನ್ನು ಕಡಿಮೆ ಇರಿಸುವುದು.<br>• ಮಕ್ಕಳನ್ನು ಕುರ್ಚಿಗಳ ಸುತ್ತಲೂ ಓಡಲು ಹೇಳಿ ಮತ್ತು ಸಂಗೀತವನ್ನು ನುಡಿಸುವುದು<br>• ನೀವು ಸಂಗೀತವನ್ನು ನುಡಿಸುವುದನ್ನು ನಿಲ್ಲಿಸಿದ ತಕ್ಷಣ ಕುರ್ಚಿಯನ್ನು ಹುಡುಕಲು ಮತ್ತು ಕುಳಿತುಕೊಳ್ಳಲು ಸೂಚಿಸುವುದು<br>• ಈ ಹಂತದಲ್ಲಿ ಕುರ್ಚಿಸಿಗದ ಮಗು ಆಟದಿಂದ ಹೊರಗುಳಿಯುತ್ತದೆ. ಈಗ ಕುರ್ಚಿಗಳಲ್ಲಿ ಒಂದನ್ನು ತೆಗೆದುಹಾಕಿ |

DRAFT 22.02.22

| | | |
|---|---|---|
| | | ಮತ್ತು ಒಂದೇ ಮಗು ಉಳಿಯುವವರೆಗೆ ಆಟವನ್ನು ಮುಂದುವರಿಸಿ. ಅವರು ವಿಜೇತರಾಗುತ್ತಾರೆ.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರೆಸುವುದು** |
| | **ಕಥಾ ಸಮಯ** | **ಶೀರ್ಷಿಕೆ : ಗ್ರ್ಯಾಂಡ್ ಫಾಸ್ ಗಿಫ್ಟ್**<br>**ಸಾಮಗ್ರಿಗಳು : ಸಾಹಿತ್ಯ, ಚಿತ್ರಗಳು/ವಸ್ತುಗಳು**<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಮಾತನಾಡುವ ಸಾಮರ್ಥ್ಯವನ್ನು ಬೆಳೆಸುವುದು.<br>**ವಿಧಾನ :**<br>➢ **ಶಿಕ್ಷಕರು ಚಿತ್ರ ಕಥೆಯ ರಚನಾ ಶೈಲಿಯನ್ನು ಅರ್ಥಮಾಡಿಕೊಂಡು ಓದಿಕೊಳ್ಳುವುದು.**<br>➢ **ಕಥೆಯ ಪಾತ್ರಗಳನ್ನು/ವಸ್ತುಗಳನ್ನು ಮಕ್ಕಳಿಗೆ ಅರ್ಥ ಮಾಡಿಸುವುದು.**<br>➢ **ಮೊದಲು ಕಥೆಯನ್ನು ಕನ್ನಡದಲ್ಲಿಯೇ ಹೇಳುವುದು.**<br>➢ **ನಂತರವೂ ಕಥೆಯನ್ನು ಕನ್ನಡದಲ್ಲಿ ಹೇಳುತ್ತ ನಡು–ನಡುವೆ ಕಥೆಯ ಪಾತ್ರಗಳನ್ನು/ವಸ್ತುಗಳನ್ನು ಇಂಗ್ಲೀಷನಲ್ಲಿ ಪರಿಚಯಿಸುವುದು. ಉದಾ : ಗ್ರಾಂಡ್ ಫಾ ಅಂದರೆ ತಾತ(ಅಜ್ಜ) ಇತ್ಯಾದಿ**<br>➢ **ಆಯ್ದ ಪದಗಳನ್ನು ಪುನರುಚ್ಚರಿಸಲು ಮಕ್ಕಳಿಗೆ ಹೇಳುವುದು.**<br><br><br><br><br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮಕ್ಕಳು ಖುಷಿಯಿಂದ, ತಮಾಷೆಯಿಂದ ಇರುವ ಚಟುವಟಿಕೆಗಳನ್ನು ನಿರ್ವಹಿಸಿ.<br>**ಉದಾ : 'ಮ'** ಅಕ್ಷರದಿಂದ ಪ್ರಾರಂಭವಾಗುವ ವಸ್ತುಗಳ ಹೆಸರುಗಳನ್ನು ಮನೆಯಿಂದ ತಿಳಿದುಕೊಂಡು ಬರಲಿ ಮತ್ತು ಮುಂದಿನವಾರ ಅವುಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಲಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |
| | | |
| | | |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–9** **ದಿನ–50 (ಮಂಗಳವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 50 | **ಶುಭಾಶಯ ವಿನಿಮಯ** | 49 ನೇ ದಿನದ ಚಟುವಟಿಕೆ ಮಾಡಿಸುವುದು. |
| | **ಮಾತು ಕತೆ** *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | **ದಿನ 49 ರ ಚಟುವಟಿಕೆ: ಪ್ರಕೃತಿ ನಡಿಗೆ ಮಾಡಿಸಿ.**<br>ಈ ಕೆಳಕಂಡ ಹಾಡಿನ ಮೂಲಕ ಗಿಡವನ್ನು ಪರಿಚಯ ಮಾಡಿಕೊಡುವುದು.<br>ನನ್ನ ಮರ<br>ಮರವು ಮೇಲೆ ಬೆಳೆದಿದೆ<br>ಅದರ ಬೇರು ಒಳಗಿದೆ<br>ಬೇರು ಮರದ ಅಂಗವು<br>ಅದಕೆ ಮಣ್ಣ ಸಂಗವು...॥<br><br>ಮರದ ಕಾಂಡ ಹಿರಿದಿದೆ<br>ರೆಂಬೆ ಕೊಂಬೆ ಹಿಡಿದಿದೆ<br>ಕಾಂಡ ಮರದ ಅಂಗವು<br>ಅದಕೆ ಬೇರ ಸಂಗವು...॥<br><br>ಹಸಿರು ಎಲೆಯು ಹರಡಿದೆ<br>ಹೂಗಳಿನ್ನು ಅರಳಿದೆ<br>ಎಲೆಯು ಮರದ ಅಂಗವು<br>ಅದಕೆ ಹೂವ ಸಂಗವು...॥ |
| | **ನನ್ನ ಸಮಯ(Free Indore play) ('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು)** | ದಿನ –50<br>* ಮಗು ಎಲ್ಲಾ ಮೂಲೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದನ್ನು ಹಾಗೂ ಸೂಕ್ತವಾಗಿ ಪೂರ್ಣಗೊಳಿಸಿರುವುದನ್ನು ಖಚಿತ ಪಡಿಸಿಕೊಳ್ಳುವುದು.<br>* ಅಪೂರ್ಣಗೊಳಿಸಿರುವ ಚಟುವಟಿಕೆಗಳನ್ನು ಮಗು ಪೂರ್ಣಗೊಳಿಸಲು ಸಹಕರಿಸುವುದು.<br>* ಮುಂದಿನ ದಿನಗಳಲ್ಲಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಯಾವ ಮಕ್ಕಳ ಕಡೆಗೆ ಹೆಚ್ಚು ಗಮನಹರಿಸಬೇಕೆಂಬ ಬಗ್ಗೆ ಶಿಕ್ಷಕರು ಮಾನಸಿಕವಾಗಿ ಸಿದ್ಧರಾಗುವುದು.<br>* ದಿನದ ಅಂತ್ಯಕ್ಕೆ ಕಲಿಕಾ ಮೂಲೆಗಳಲ್ಲಿ ಮುಂದಿನ ಹಂತಕ್ಕೆ ಹೊಂದಿಸಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವುದು.<br>*** ಮುಂದಿನ ದಿನಗಳಲ್ಲಿ ಗ್ರೀಟಿಂಗ್ ತಯಾರಿಕೆಗಾಗಿ ಒಣ ಎಲೆಗಳ ಅಗತ್ಯತೆ ಇರುವುದರಿಂದ..ಈ ದಿನದಂದೇ ಮಕ್ಕಳಿಂದ ಉದುರಿದ ಬೇರೆ–ಬೇರೆ ಆಕಾರದ ಎಲೆಗಳನ್ನು ಸಂಗ್ರಹಿಸಿ ಹಳೇ ಪುಸ್ತಕದ ನಡುವೆ ಮಡಚದಂತೆ ಅವುಗಳನ್ನು ಇಟ್ಟು (ಹರ್ಬೇರಿಯಂ) ಒಣಗಿಸಲು ವ್ಯವಸ್ಥೆ ಮಾಡಿಕೊಳ್ಳುವುದು.** |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯಗಳು: ದೇಹದ ಭಾಗಗಳನ್ನು ಗುರುತಿಸುವುದು.**<br>**ಚಟುವಟಿಕೆ: 13 ಎ ದೇಹದ ಬಾಹ್ಯರೇಖೆ ( ಗುರಿ–1 )**<br>**ಉದ್ದೇಶ:– ದೇಹದ ಭಾಗಗಳನ್ನು ಗುರುತಿಸುವುದು.**<br>**ಸಾಮಗ್ರಿಗಳು: ವೃತ್ತ ಪತ್ರಿಕೆ/ ಚಾರ್ಟ್ ಪೇಪರ, ಸೀಮೆಸುಣ್ಣ**<br>**ವಿಧಾನ: ನೆಲದ ಮೇಲೆ ವೃತ್ತಪತ್ರಿಕೆ ಅಥವಾ ಚಾರ್ಟ್ ಪೇಪರನ್ನು ಹರಡಿ. ಒಂದು ಮಗು ಕಾಗದದ ಮೇಲೆ ಮಲಗಲಿ. ಮಲಗಿದ ಮಗುವಿನ ದೇಹದ ಬಾಹ್ಯ ರೇಖೆಯನ್ನು ಎಳೆಯಲು ತಿಳಿಸುವುದು. ನಂತರ ದೇಹದ ಬಾಹ್ಯರೇಖೆಯನ್ನು** |

DRAFT 22.02.22

| | | | |
|---|---|---|---|
| | | | ಪತ್ತೆ ಹಚ್ಚಲು ಮತ್ತೊಂದು ಮಗುವನ್ನು ಹೇಳುವುದು. ಎಲ್ಲಾ ಮಕ್ಕಳು ಅದರ ಮೇಲೆ ಪೇಪರ್ ಹರಿದು-ಅಂಟಿಸುವ ಚಟುವಟಿಕೆಯನ್ನು ಮಾಡಲಿ ಅಥವಾ ಮಕ್ಕಳಿಗೆ ದೇಹದ ಭಾಗಗಳ ವಿವರಗಳನ್ನು ತುಂಬಲು ಅವಕಾಶ ಮಾಡಿಕೊಡಿ ಮತ್ತು ಶಿಕ್ಷಕರು ದೇಹದ ಭಾಗಗಳಿಗೆ ಸಂಬಂಧಿಸಿದ ಪದಸಂಪತ್ತು ಹೆಚ್ಚಿಸಲು ಸಹಾಯ ಮಾಡಬಹುದು.<br>2ನೇ ತರಗತಿ<br>ದೇಹದ ಭಾಗಗಳನ್ನು ಕ್ರಮವಾಗಿ ಜೋಡಿಸಲು ತಿಳಿಸುವುದು ಮತ್ತು ಹೆಸರಿಸಲು ಪ್ರೋತ್ಸಾಹಿಸುವುದು.<br>3ನೇ ತರಗತಿ<br>ದೇಹದ ಭಾಗಗಳ ಹೆಸರನ್ನು ಬರೆಯಲು ತಿಳಿಸುವುದು. |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಬಿ **ಅಕ್ಷರಗಳ ಆಕಾರದ ಒಳಗೆ ಬಣ್ಣ ತುಂಬುವುದು** ಗುರಿ – 1<br>ಉದ್ದೇಶ; ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಸ್ಥಳದ ಪರಿಕಲ್ಪನೆಯನ್ನು ತಿಳಿಯುತ್ತಾರೆ.<br>ಸಾಮಗ್ರಿಗಳು : ಹಾಳೆ, ಬಣ್ಣಮತ್ತು ರಬ್ಬರ್ ಅಕ್ಷರಗಳು.<br>ವಿಧಾನ : ಮಕ್ಕಳಿಗೆ ಅಕ್ಷರಗಳ ಆಕಾರದ ರೇಖಾ ಚಿತ್ರಗಳನ್ನು ಕೊಟ್ಟು ಬಣ್ಣ ತುಂಬಲು ಹೇಳುವುದು.ಮಗು ತನಗೆ ಬರುವ ಕನ್ನಡ ಪದಗಳ ರೇಖಾ ಚಿತ್ರಗಳನ್ನು ಬರೆದು ಬಣ್ಣ ತುಂಬಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ಯಾವುದಾದರೊಂದು ಅಕ್ಷರವನ್ನು ಆಯ್ಕೆ ಮಾಡಿ ಅದರಿಂದ ಪ್ರಾರಂಭವಾಗುವ ಪದಗಳ ರೇಖಾ ಚಿತ್ರಗಳನ್ನು ಬರೆದು ಬಣ್ಣ ತುಂಬಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ : ಧ್ವನಿ ವಿಜ್ಞಾನದ ಅರಿವು. ವಾಕ್ಯದಲ್ಲಿ ಪದ ಗುರುತಿಸುವಿಕೆ.<br>ಚಟುವಟಿಕೆ– 9 : ಪದ ಚಪ್ಪಾಳೆಗಳು (ಗುರಿ 2) **ECL-19**<br>ಉದ್ದೇಶ :<br>* ಪದಗಳನ್ನು ಉಚ್ಚರಿಸುವುದುರ ಮೂಲಕ ಧ್ವನಿಯನ್ನು ಅರ್ಥೈಸಿಕೊಳ್ಳುವುದು.<br>* ಸೂಚಿಸಿದ ಪದವನ್ನು ವಾಕ್ಯದಲ್ಲಿ ಗುರುತಿಸುವುದು.<br>ಅಗತ್ಯ ಸಾಮಾಗ್ರಿಗಳು :.ಇಲ್ಲ<br>ವಿಧಾನ :ಮಕ್ಕಳನ್ನು ವೃತ್ತದಲ್ಲಿ ಕುಳಿತುಕೊಳ್ಳಲು ಹೇಳಿ. "" ನಂತರ ಸರಳ ವಾಕ್ಯ "ರೋಹನ್ ನ ಶಾಲೆ" ಎಂದು ಹೇಳಿ ಮತ್ತು ಶಾಲೆ ಹೇಳುವಾಗ ಚಪ್ಪಾಳೆ ತಟ್ಟಿ.. ಸೂಚಿಸಿದ ಪ್ರತಿ ಪದಕ್ಕೂ ಚಪ್ಪಾಳೆ ತಟ್ಟಲಾಗುತ್ತದೆ ಎಂದು ವಿವರಿಸಿ. ಅಗತ್ಯವಿದ್ದರೆ. ಮತ್ತೊಮ್ಮೆ ಪುನರಾವರ್ತಿಸಿ. ಮಕ್ಕಳು ಅದೇ ರೀತಿ ಪುನರಾವರ್ತಿಸಲಿ. ಮಕ್ಕಳು ಪ್ರತಿ ಪದಕ್ಕೂ ಚಪ್ಪಾಳೆ ತಟ್ಟುವುದನ್ನು ಅಭ್ಯಾಸ ಮಾಡಿಕೊಂಡಂತೆ, ಉದ್ದವಾದ, ಹೆಚ್ಚು ಆಸಕ್ತಿಕರ ವಾಕ್ಯಗಳನ್ನು ಅಥವಾ ಮಕ್ಕಳ ಹೆಸರನ್ನು ಹೊಂದಿರುವ ವಾಕ್ಯಗಳನ್ನು ಬಳಸಿ, ಉದಾ.. 'ಮೀರಾ ಅವರ ಸುಂದರ ನಗು'. ಈ ಚಟುವಟಿಕೆಯನ್ನು ಹೆಚ್ಚು ಸಂತೋಷದಾಯಕವಾಗಿಸಲು. ಒಂದೇ ರೀತಿಯ ಶಬ್ದಗಳನ್ನು ಹೊಂದಿರುವ ಪದಗಳನ್ನು ಹೊಂದಿರುವ ವಾಕ್ಯಗಳನ್ನು ಬಳಸಿ ಇದೇ ರೀತಿಯ ಶಬ್ದಗಳ ಉದಾಹರಣೆ:'ಪೀಪಲ್ ಮರದ ಕೆಳಗೆ, ಪಂಕಜ್ ಹಿತ್ತಾಳೆ ಪಾತ್ರೆಯಲ್ಲಿ ಹಳದಿ-ಹಣ್ಣಿನ ಪಪ್ಪಾಯಿಯನ್ನು ತಿಂದರು' 'ಚಂದುವಿನ ಚಿಕ್ಕಪ್ಪ, ಚಂದುವಿನ ಚಿಕ್ಕಮ್ಮ', 'ಚಾಂದಿನಿ ಚೌಕದಲ್ಲಿ, ಬೆಳದಿಂಗಳ ರಾತ್ರಿಯಲ್ಲಿ ಚೌಕಾಕಾರದ ವೇದಿಕೆಯಲ್ಲಿ', "ಅವಳು ಸಮುದ್ರ ತೀರದಲ್ಲಿ ಸಮುದ್ರ ಚಿಪ್ಪನ್ನು ಮಾರುತ್ತಾಳೆ" ಇತ್ಯಾದಿ.ಇಲ್ಲಿ ಯಾವ ಪದಕ್ಕೆ ಚಪ್ಪಾಳೆ ತಟ್ಟಬೇಕು ಎನ್ನುವುದನ್ನು ಸ್ಪಷ್ಟ ಪಡಿಸುವುದು.<br>ಗಮನಿಸಿ: ಮಕ್ಕಳಿಗೆ ತಿಳಿದಿರುವ ಅಂತಹ ಸ್ಥಳೀಯ ವಾಕ್ಯಗಳನ್ನು ನಾಲಿಗೆ ಟ್ವಿಸ್ಟರ್ ಆಗಿ ಬಳಸಬಹುದು.<br>ತರಗತಿವಾರು ವಿವಿರ : 2 ನೇ ತರಗತಿಯ ಮಕ್ಕಳುಒಣದು ವಾಕ್ಯದಲ್ಲಿ ಸೂಚಿಸಿದ 2-3 ಪದಗಳಿಗೆ ಚಪ್ಪಾಳೆ ತಟ್ಟುವುದು. 3 ನೇ ತರಗತಿಯ ಮಕ್ಕಳು ವಿವಿಧ ನಾಲಿಗೆ ಸುರುಳಿಗಳನ್ನು ಹೇಳುವ ಮೂಲಕ ಸೂಚಿಸಿದ ಪದಗಳನ್ನು ಚಪ್ಪಾಳೆ ಮೂಲಕ ಗುರುತಿಸುವುದು. |
| | | ಅರ್ಥ ಗ್ರಹಿಕೆಯೊಂದಿಗಿನ | ಸಾಮರ್ಥ್ಯ: ಪದ ಸಂಪತ್ತಿನ ಅಭಿವೃದ್ಧಿ, ಸ್ವಯಂ ಅಭಿವ್ಯಕ್ತಿ, ನಟನಾ ಓದು.<br>ಚಟುವಟಿಕೆ 1: ಚಿತ್ರ ಓದು (ಗುರಿ-2)<br>ಉದ್ದೇಶ: ವಿವಿಧ ಘಟನೆ/ಸನ್ನಿವೇಶಗಳ ಚಿತ್ರಗಳನ್ನು ನೋಡುವುದರ ಮೂಲಕ ಸನ್ನಿವೇಶವನ್ನು |

DRAFT 22.02.22

| | | | |
|---|---|---|---|
| | | ಓದು | ವಿವರಿಸುವರು<br>ಅಗತ್ಯ ಸಾಮಾಗ್ರಿಗಳು: ವಿವಿಧ ಘಟನೆ/ ಸ್ಥಳ/ ಜಾತ್ರೆ/ ಮೇಳಗಳ ಚಿತ್ರಗಳು/ ಉದ್ಯಾನವನ/ ಪೇಟೆ/ ಶಾಲೆ/ ಪ್ರಾಣಿ ಸಂಗ್ರಹಾಲಯ/ ಹಬ್ಬ / ಜಾತ್ರೆಯ ಇತ್ಯಾದಿಗಳ ಚಿತ್ರಗಳು<br>ವಿಧಾನ: ದಿನ 44ರ ಚಿತ್ರ ಓದು ಚಟುವಟಿಕೆ ಮುಂದುವರೆಸುತ್ತಾ<br>ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಹಿಂದೆ ಬಳಸಿರುವ ಸನ್ನಿವೇಶ ಚಿತ್ರವನ್ನು ನೀಡುವುದು. ನಂತರ ಮಕ್ಕಳು ಆ ಚಿತ್ರವನ್ನು ವೀಕ್ಷಿಸುವುದರ ಮೂಲಕ ಅಲ್ಲಿಯ ಸನ್ನಿವೇಶವನ್ನು ವಿವರಿಸುವಂತೆ ಮತ್ತು ನಟನಾ ಓದು ಮಾಡುವಂತೆ ತಿಳಿಸುವುದು.<br>2ಮತ್ತು 3ನೇ ತರಗತಿಗೆ: ಶಿಕ್ಷಕರು ಸನ್ನಿವೇಶದ ಕುರಿತು ಮಕ್ಕಳ ಅನುಭವಕ್ಕೆ ತಂದುಕೊಂಡು ವಿವರಿಸಲು ತಿಳಿಸುವುದು |
| | | ಉದ್ದೇಶಿತ ಬರಹ | ಸಾಮರ್ಥ್ಯ: ಕೈಕಣ್ಣು ಸಂಯೋಜನೆ, ಬರವಣಿಗೆ ಕೌಶಲಗಳ ಅಭ್ಯಾಸ, ಸೃಜನಶೀಲ ಅಭಿವ್ಯಕ್ತಿ.<br>ಚಟುವಟಿಕೆ....2 ಮುಕ್ತ ಚಿತ್ರ ರಚನೆ (ಗುರಿ–2) **ECW-6**<br>ಉದ್ದೇಶಗಳು:<br>• ಬರವಣಿಗೆಯ ಕೌಶಲಗಳನ್ನು ರೂಢಿಸುವುದು.<br>• ಕಣ್ಣು–ಕೈಗಳ ಸಮನ್ವಯ ಕೌಶಲವನ್ನು ಅಭಿವೃದ್ಧಿಪಡಿಸುವುದು.<br>• ಕ್ರಿಯಾತ್ಮಕ ಅಭಿವ್ಯಕ್ತಿಗೆ ಅವಕಾಶ ನೀಡುವುದು.<br>• ಸೃಜನಶೀಲ ಅಭಿವ್ಯಕ್ತಿಯನ್ನು ಪ್ರೋತ್ಸಾಹಿಸುವುದು.<br>ಅಗತ್ಯ ಸಾಮಗ್ರಿಗಳು: ಕ್ರೇಯಾನ್ಸ್, ಬಣ್ಣದ ಪೆನ್ಸಿಲ್‌ಗಳು, ಮಾರ್ಕರ್, ಬಿಳಿಯ ಹಾಳೆಗಳು<br>ವಿಧಾನ: ಕಾಗದದಲ್ಲಿ ಮುಕ್ತವಾಗಿ ಚಿತ್ರಿಸಲು/ ಬರೆಯಲು, ಅನಿಸಿದ್ದನ್ನು ಬಿಡಿಸಿ ಬಣ್ಣ ಹಾಕಲು ಅವಕಾಶ ಕಲ್ಪಿಸುವುದು. ಅವರ ಬರವಣಿಗೆ ಬಗ್ಗೆ ಮಾತನಾಡಲು ತಿಳಿಸುವುದು. ಸೂಕ್ತವಾದ ಪ್ರಶ್ನೆಗಳನ್ನು ಕೇಳುತ್ತಾ ಬರವಣಿಗೆ ಬಗ್ಗೆ ಮಾಹಿತಿ ಪಡೆಯುವುದು.<br>ತರಗತಿವಾರು ವಿವರ: 2 ಹಾಗೂ 3 ನೇ ತರಗತಿಯ ಮಕ್ಕಳು ತಮ್ಮ ಇಷ್ಟದ ಚಿತ್ರ/ ಸನ್ನಿವೇಶವನ್ನು ಚಿತ್ರಿಸಿ, ಅವುಗಳ ಬಗ್ಗೆ 4–5 ವಾಕ್ಯಗಳನ್ನು ಬರೆಯಲು ತಿಳಿಸಿ. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | **ಹೊರಾಂಗಣ ಆಟಗಳು** | ಚಟುವಟಿಕೆ : ಸಂಗೀತದ ಬಣ್ಣಗಳು<br>ಸಾಮರ್ಥ್ಯ : ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ,<br>ಸಾಮಗ್ರಿ : ಕುರ್ಚಿಗಳು<br>• ವಿಧಾನ : ಸಂಗೀತ ಕುರ್ಚಿಗಳ ವಿಧದಲ್ಲಿ ಆಟವನ್ನು ಆಡಿಸುವುದು . ಕುರ್ಚಿಗಳ ಮೇಲೆ ವಿವಿಧ ಬಣ್ಣಗಳ ಕಾಗದಗಳನ್ನು ಇರಿಸುವುದು.<br>• ಶಿಕ್ಷಕರು ಒಂದು ಮಗುವಿನ ಹೆಸರು ಕರೆದಾಗ ಆ ಮಗು ಕುಳಿತ ಕುರ್ಚಿಯಲ್ಲಿ ಇಟ್ಟಿರುವ ಬಣ್ಣದ ಹೆಸರನ್ನು ಹೇಳಲು ಸೂಚಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರೆಸುವುದು** | |
| | **ಕಥಾ ಸಮಯ** | ವಿಧಾನ :<br>➢ ಮೊದಲ ದಿನದ ಉದ್ದೇಶದಂತೆ ಕಥಾ ಸಮಯವು ಮುಂದುವರೆಯುತ್ತದೆ.<br>➢ ಮಕ್ಕಳ ನೆರವು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು.<br>ಉದಾ : ತಾತ ಏನು ಕೊಟ್ಟರು? ಯಾರಿಗೆ ಕೊಟ್ಟರು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಕನ್ನಡದಲ್ಲಿ ಸರಳ ಪ್ರಶ್ನೆಗಳನ್ನು ಕೇಳಿ.**<br>(ಕಥೆಯನ್ನು ಆನಂದಿಸುವುದರ ಜೊತೆಗೆ ಆಲಿಸುತ್ತಿದ್ದಾರೆ ಎನ್ನುವುದನ್ನು ಖಚಿತಪಡಿಸಿ ಕೊಳ್ಳುವುದು) | |

DRAFT 2022

| | | |
|---|---|---|
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮಕ್ಕಳು ಖುಷಿಯಿಂದ, ತಮಾಷೆಯಿಂದ ಇರುವ ಚಟುವಟಿಕೆಗಳನ್ನು ನಿರ್ವಹಿಸಿ.<br>**ಉದಾ : 'ಮ'** ಅಕ್ಷರದಿಂದ ಪ್ರಾರಂಭವಾಗುವ ವಸ್ತುಗಳ ಹೆಸರುಗಳನ್ನು ಮನೆಯಿಂದ ತಿಳಿದುಕೊಂಡು ಬರಲಿ ಮತ್ತು ಮುಂದಿನವಾರ ಅವುಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಲಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |
| | | |
| | | |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–9** **ದಿನ–51 (ಬುಧವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 51 | **ಶುಭಾಶಯ ವಿನಿಮಯ**<br>***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **49 ನೇ ದಿನದ 1 ನೇ ಚಟುವಟಿಕೆ ಮಾಡಿಸುವುದು.**<br>**ಚಟುವಟಿಕೆ 2:**<br>1. ದುಂಬಿ ಚಪ್ಪಾಳೆ ಯನ್ನು ಹೇಳಿಕೊಡುವುದು.<br>2. ಮಕ್ಕಳು ದುಂಬಿ ಚಪ್ಪಾಳೆ ತಟ್ಟುತ್ತಾ ತರಗತಿಯಲ್ಲಿ ವೃತ್ತಾಕಾರವಾಗಿ ನಿಲ್ಲುವುದು. |
| | **ಮಾತು ಕತೆ**<br>***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | **ದಿನ 49 ರ ಚಟುವಟಿಕೆ: ಪ್ರಕೃತಿ ನಡಿಗೆ ಮಾಡಿಸಿ.**<br>**ದಿನ 50 ರ ಹಾಡನ್ನು ಮುಂದುವರೆಸಿ. ನಂತರ ಹಾಡಿನ ಕುರಿತು ಕೆಲವು ಸರಳ ಪ್ರಶ್ನೆಗಳನ್ನು ಕೇಳಿ.** |
| | **ನನ್ನ ಸಮಯ(Free Indore play)**<br>**('ನನ್ನ ಸಮಯ'ದಲ್ಲಿ ಮಗು ತನ್ನ ಆದ್ಯತೆಯ ಚಟುವಟಿಕೆಯನ್ನು ನಡೆಸುವುದು)** | ದಿನ – 51<br>**ಕಲಿಕಾ ಸಿದ್ಧತಾ ಭಾಗವಾಗಿ 8 ಮೂಲೆಗಳಲ್ಲಿ ಮೊದಲ ಹಂತದಲ್ಲಿ ನಿಗದಿಪಡಿಸಿರುವ ಮೂಲೆವಾರು ಚಟುವಟಿಕೆಗಳ ಬಗ್ಗೆ ಹಾಗೂ ಆಯಾ ಮೂಲೆಗಳ ಸಾಮಗ್ರಿಗಳನ್ನು ಬಳಸುವ ಬಗ್ಗೆ ಶಿಕ್ಷಕರು ಮಕ್ಕಳಿಗೆ ಪರಿಚಯ ಒದಗಿಸುವರು. ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತ ಅವರ ಅರ್ಥೈಸಿಕೊಳ್ಳುವಿಕೆಯನ್ನು ಖಾತ್ರಿ ಪಡಿಸಿಕೊಳ್ಳುತ್ತಾರೆ.**<br>**(* ಮೂಲೆವಾರು ಸಲಹಾತ್ಮಕ ಚಟುವಟಿಕೆಗಳನ್ನು ನೀಡಿದ್ದು, ಸಾಮರ್ಥ್ಯಗಳನ್ನು ಸಾಧಿಸಲು ಅನುಕೂಲವಾಗುವಂತೆ ಮಕ್ಕಳಿಗೆ ಹೆಚ್ಚುವರಿ ಚಟುವಟಿಕೆಗಳನ್ನು ಯೋಜಿಸಬಹುದಾಗಿದೆ.)**<br>**************************************************************************<br>**ಮೂಲೆ – ಬಿಲ್ಡಿಂಗ್ ಬ್ಲಾಕ್ಸ್ ಮೂಲೆ:–**<br>**ಸಾಮರ್ಥ್ಯ: ಕಣ್ಣು ಮತ್ತು ಕೈಗಳ ಸಂಯೋಜನೆಯನ್ನು ಸಾಧಿಸುವುದು.**<br><br>ಚಟುವಟಿಕೆ: ಎತ್ತರಕ್ಕೆ ಏರೋಣ...<br>ಉದ್ದೇಶ :ಏಕಾಗ್ರತೆ, ಸಮರ್ಪಕತೆ ಹಾಗೂ ಆತ್ಮವಿಶ್ವಾಸ ಬೆಳೆಸಿಕೊಳ್ಳುವುದು.<br>ಸಾಮಗ್ರಿ :– ಕಲಿಕಾ ಕಿಟ್ ನ ಬಿಲ್ಡಿಂಗ್ ಬ್ಲಾಕ್ಸ್<br>( ಲಭ್ಯವಿಲ್ಲದಿದ್ದಲ್ಲಿ ಸೋಪ್ ಬಾಕ್ಸ್ ಗಳು, ಬೆಂಕಿ ಪೊಟ್ಟಣಗಳು, ಪೇಸ್ಟ್ ಬಾಕ್ಸ್‌ಗಳು)<br>ವಿಧಾನ:<br>ವಿದ್ಯಾ ಪ್ರವೇಶ (ವಿ.ಪ್ರ):<br>ಒದಗಿಸಿರುವ ಸಾಮಗ್ರಿಗಳನ್ನು ಬಳಸಿ ಒಂದರ ಮೇಲೊಂದರಂತೆ ಕಟ್ಟಡದ ರೀತಿಯಲ್ಲಿ ಜೋಡಿಸಿ ಕಟ್ಟುವುದು.<br>**2ನೇ ತರಗತಿ &3 ನೇ ತರಗತಿ :**<br>ಒದಗಿಸಿರುವ ಸಾಮಗ್ರಿಗಳನ್ನು ಬಳಸಿ ಒಂದರ ಮೇಲೊಂದರಂತೆ ಕಟ್ಟಡದ ರೀತಿಯಲ್ಲಿ ಜೋಡಿಸಿ ಸಾಧ್ಯವಾದಷ್ಟು |

DRAFT 2021-22

ಎತ್ತರದ ಹಂತಗಳನ್ನು ಕಟ್ಟುವುದು.

*******************************************************************************

**ಮೂಲೆ – ಗಣಿತ ಮೂಲೆ:–**

**ಸಾಮರ್ಥ್ಯ: ವಸ್ತುಗಳ ಗಾತ್ರ, ಎತ್ತರ–ಗಿಡ್ಡ, ಭಾರ–ಹಗುರ, ಆಧಾರದ ಮೇಲೆ ವರ್ಗೀಕರಿಸುವುದು ಹಾಗೂ ಸಾಂಕೇತಿಕವಾಗಿ ಸಂಖ್ಯೆಗಳ ಹೋಲಿಕೆ ಮಾಡುವುದು.**

ಚಟುವಟಿಕೆ: ದಾಳದ (ಡೈಸ್) ಚಟುವಟಿಕೆ

ಉದ್ದೇಶ :ನಿರ್ದಿಷ್ಟ ಗುರಿ ಸಾಧಿಸಲು ಶಕ್ತರನ್ನಾಗಿಸುವುದು.



ಸಾಮಗ್ರಿ :– ಚಿತ್ರದಲ್ಲಿ ತೋರಿಸಿರುವಂತೆ ವಿವಿಧ ಸಂಖ್ಯೆಯ ಚುಕ್ಕಿಗಳನ್ನು ಸಂಕೇತಿಸುವ ಚಾರ್ಟ್, ಗುಂಡಿ/ಮಣಿ

ವಿಧಾನ:

ವಿದ್ಯಾ ಪ್ರವೇಶ (ವಿ.ಪ್ರ):

* ಸಿದ್ಧಪಡಿಸಿಕೊಂಡಿರುವ ಚಾರ್ಟ್‌ನ್ನು ನೆಲದ ಮೇಲೆ ಇಡುವುದು.
* ವಿದ್ಯಾರ್ಥಿ ಡೈಸ್ ನ್ನು ನೆಲದ ಮೇಲೆ ಉರುಳಿಸಿದಾಗ ಡೈಸ್ ನ ಮೇಲ್ಮೈನಲ್ಲಿ ಕಾಣಸಿಗುವ ಚುಕ್ಕಿ ಮಾದರಿಗೆ ಸರಿಹೊಂದುವ ಚುಕ್ಕಿ ಮಾದರಿಯನ್ನು ಚಾರ್ಟ್ ನಲ್ಲಿ ಗಮನಿಸಬೇಕು ಮತ್ತು ಆ ಚುಕ್ಕಿ ಮಾದರಿಯ ಮೇಲೆ ಒಂದು ಮಣಿ/ಗುಂಡಿಯನ್ನು ಇಡಬೇಕು.

**2 ನೇ & 3 ನೇ ತರಗತಿ :**

ವಿದ್ಯಾರ್ಥಿ ಡೈಸ್ ನ್ನು ನೆಲದ ಮೇಲೆ ಉರುಳಿಸಿದಾಗ ಡೈಸ್ ನ ಮೇಲ್ಮೈನಲ್ಲಿ ಕಾಣಸಿಗುವ ಚುಕ್ಕಿ ಮಾದರಿಗೆ ಸರಿಹೊಂದುವ ಚುಕ್ಕಿ ಮಾದರಿಯನ್ನು ಚಾರ್ಟ್ ನಲ್ಲಿ ಗಮನಿಸಬೇಕು ಮತ್ತು ಆ ಚುಕ್ಕಿ ಮಾದರಿಯ ಮೇಲೆ ಅಷ್ಟೇ ಸಂಖ್ಯೆಯ ಮಣಿಗಳನ್ನು ಇಡುವುದು. ಹಾಗೂ ಸಂಖ್ಯೆಯನ್ನು ಹೇಳುವುದು.

*******************************************************************************

**ಅನ್ವೇಷಣೆ ಅಥವಾ ವಿಜ್ಞಾನ ಮೂಲೆ:**

**ಸಾಮರ್ಥ್ಯ: ವೈಜ್ಞಾನಿಕ, ಅನ್ವೇಷಣಾ ಮನೋಭಾವ ಹಾಗೂ ಚಿಂತನಾ ಮನೋಭಾವಗಳನ್ನು ಬೆಳೆಸುವುದು.**

ಚಟುವಟಿಕೆ: ಬಾಯಾರಿದ ಕಾಗೆ

ಉದ್ದೇಶ : ನೀರಿನಲ್ಲಿ ವಸ್ತುಗಳು ಸೇರಿಕೊಂಡಾಗ ನೀರಿನ ಮಟ್ಟದಲ್ಲಾಗುವ ಬದಲಾವಣೆ ಅರಿಯುವುದು.

ಸಾಮಗ್ರಿಗಳು: ಲೋಟ, ನೀರು, ಸಣ್ಣ ಹರಳು/ಕಲ್ಲು

ವಿಧಾನ : (ವಿ.ಪ್ರ ಹಾಗೂ 2&3 ನೇ ತರಗತಿ)

*ನೀರು ತುಂಬಿದ ಲೋಟದಲ್ಲಿ ಚಿಕ್ಕ ಕಲ್ಲು/ಹರಳುಗಳನ್ನು ಹಾಕುತ್ತಾ ಹೋದಂತೆ ನೀರಿನಲ್ಲಾಗುವ ಬದಲಾವಣೆಗಳನ್ನು ಗಮನಿಸುವುದು

*ಮುಕ್ಕಾಲು ಭಾಗ ನೀರು ತುಂಬಿದ ಲೋಟದಲ್ಲಿ ಚಿಕ್ಕ ಕಲ್ಲು/ಹರಳುಗಳನ್ನು ಸೇರಿಸುತ್ತಾ ಹೋದಂತೆ ನೀರಿನ ಮಟ್ಟದಲ್ಲಾಗುವ ಬದಲಾವಣೆಗಳನ್ನು ಗಮನಿಸುವುದು.

*******************************************************************

**ಗೊಂಬೆಗಳ ಮೂಲೆ :**

**ಸಾಮರ್ಥ್ಯ: ಸೌಂದರ್ಯೋಪಾಸನೆ, ವೈಯಕಿಕ ಸ್ವಚ್ಛತೆ, ಅಭಿವ್ಯಕ್ತಿ ಕೌಶಲ್ಯ ಬೆಳೆಸುವುದು.**

ಚಟುವಟಿಕೆ: ನಾನೇ ಗೊಂಬೆ

ಉದ್ದೇಶ: ನಿರ್ದಿಷ್ಠ ವಿಷಯದ ಕುರಿತು ಅಭಿವ್ಯಕ್ತಿ ಬೆಳೆಸುವುದು.

ಸಾಮಗ್ರಿ :– ಹಸು, ಹುಲಿ, ಆನೆ, ನವಿಲು, ಕೋಳಿ, ಪಾರಿವಾಳ, ಹಾಗೂ ಇತರೆ ಪ್ರಾಣಿ–ಪಕ್ಷಿಗಳ ಗೊಂಬೆಗಳು.

ವಿಧಾನ:

ವಿದ್ಯಾ ಪ್ರವೇಶ (ವಿ.ಪ್ರ):

ಮೂಲೆಯಲ್ಲಿ ಲಭ್ಯವಿರುವ ಗೊಂಬೆಗಳಲ್ಲಿ ಒಂದು ಗೊಂಬೆಯನ್ನು ಆಯ್ಕೆ ಮಾಡಿಕೊಂಡು ಗೊಂಬೆಯಾಗಿ 2–3 ವಾಕ್ಯಗಳನ್ನು ಹೇಳುವವನು. ( ನಾನು ಸಿಂಹ, ನಾನು ಕಾಡಿನಲ್ಲಿ ಇರುವೆ. ನಾನು ಮಾಂಸ ತಿನ್ನುವೆ.)

DRAFT 22.02.22

**2 ನೇ & 3 ನೇ ತರಗತಿ:–**

ಮೂಲೆಯಲ್ಲಿ ಲಭ್ಯವಿರುವ ಗೊಂಬೆಗಳಲ್ಲಿ ತಾನೇ ತನ್ನ ಸ್ನೇಹಿತನ ಜೊತೆಗೂಡಿ  ಗೊಂಬೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ತಮ್ಮ ತಮ್ಮ ಗೊಂಬೆಗಳ ಬಗ್ಗೆ ಇಬ್ಬರೂ ಮಾತುಗಳನ್ನು ಆಡುತ್ತಾರೆ.

**************************************************************************

**ಓದುವ / ತರಗತಿ ಗ್ರಂಥಾಲಯ ಮೂಲೆ :**

**ಸಾಮರ್ಥ್ಯ: ಚಿತ್ರಗಳನ್ನು ಓದುವುದರೊಂದಿಗೆ ಅರ್ಥೈಸಿಕೊಳ್ಳುವುದು, ಕಲ್ಪನಾಶಕ್ತಿ, ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸುವುದು.**

ಚಟುವಟಿಕೆ:  ಚಿತ್ರ  ಸರಣಿ ಓದು.

ಉದ್ದೇಶ  :ಚಿತ್ರ ಸರಣಿಯನ್ನುಅರ್ಥೈಸುವುದು ಹಾಗೂ ಅಭಿವ್ಯಕ್ತಿಸುವುದು.

ಸಾಮಗ್ರಿ :– ಸರಳ ಕಥೆಯ ಸರಣಿ ಚಿತ್ರಗಳು, ಚಿತ್ರ ಕಥಾ ಮಾಲಿಕೆ.

ವಿಧಾನ  : (ವಿ.ಪ್ರ ಹಾಗೂ **2& 3 ನೇ ತರಗತಿ)**

ಪರಿಚಿತ ಕಥೆಯ ಸರಣಿ ಚಿತ್ರಗಳನ್ನು ನೀಡಿ ಚಿತ್ರವನ್ನು ತೋರಿಸುತ್ತಾ ಕಥೆಯನ್ನು ಹೇಳಲು ಮಗುವಿಗೆ ತಿಳಿಸುವುದು. ಹಾಗೂ ಚಿತ್ರಗಳನ್ನು ಜೋಡಿಸುವುದು.

****************************************************************************

**ಕಲೆಗೊಂದು ನೆಲೆ/ಕರಕುಶಲ ಮೂಲೆ:**

**ಸಾಮರ್ಥ್ಯ:  ಸೂಕ್ಷ್ಮ ಸ್ನಾಯು ಬೆಳವಣಿಗೆಯೊಂದಿಗೆ ಸೌಂದರ್ಯೋಪಾಸನೆ, ಸೃಜನಶೀಲತೆಯನ್ನು ಬೆಳೆಸುವುದು.**

ಚಟುವಟಿಕೆ:  ದಾರ ಮತ್ತು ಬಣ್ಣಗಳ ಸಹಾಯದಿಂದ ವಿನ್ಯಾಸಗಳ ರಚನೆ.

ಉದ್ದೇಶ : * ನೀಡಲಾದ ಮಾರ್ಗದರ್ಶನವನ್ನು ಅರ್ಥೈಸಿಕೊಂಡು ಕಾರ್ಯೋನ್ಮುಖನಾಗುವುದು.

ಸಾಮಗ್ರಿ :– ಬಿಳಿ ಹಾಳೆಗಳು, ಬಣ್ಣ, ದಾರ.

ವಿದ್ಯಾ ಪ್ರವೇಶ (ವಿ.ಪ್ರ):**2 ನೇ & 3 ನೇ ತರಗತಿ :**

ಬಿಳಿ ಹಾಳೆಗಳನ್ನು ಅರ್ಧ ಭಾಗಕ್ಕೆ ಮಡಿಕೆ ಮಾಡುವುದು.

ಬಣ್ಣದಲ್ಲಿ ಅದ್ದಿದ ದಾರವನ್ನು ಮಧ್ಯದ ಭಾಗದಲ್ಲಿ ಇಡುವುದು.

ಹಾಳೆಯನ್ನು ಮಡಚಿದ ನಂತರ ಮೇಲ್ಭಾಗದಲ್ಲಿ ನೋಟ್ ಬುಕ್

ಇಟ್ಟು ಒತ್ತಿ ಹಿಡಿಯುವುದು. ನಂತರ ದಾರವನ್ನು ನಿಧಾನವಾಗಿ ಬೇರೆ–ಬೇರೆ

ಕಡೆಗಳಿಗೆ ಎಳೆಯುತ್ತ ಬಿಳಿ ಹಾಳೆಯಲ್ಲಿ ವಿನ್ಯಾಸ ಮೂಡಿಸುವುದು. * ( ಶಿಕ್ಷಕರು ಈ ಚಟುವಟಿಕೆ ನಿರ್ವಹಿಸುವ ಮೊದಲು ಮಕ್ಕಳಿಗೆ ಒಂದೆರಡು ಬಾರಿ ಮಾದರಿಯಾಗಿ ಮಾಡಿ ತೋರಿಸುವುದು. ಮಕ್ಕಳಿಗೆ ಅಗತ್ಯವಿರುವಲ್ಲಿ ಸಹಕರಿಸುವುದು.)

*************************************************************************

**ಬರೆಯುವ ಮೂಲೆ :**

**ಸಾಮರ್ಥ್ಯ : ಬರವಣಿಗೆ ಸಿದ್ಧತಾ ಅಭ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಅಕ್ಷರಗಳ ವಿನ್ಯಾಸವನ್ನು ರಚಿಸುವುದು.**

ಚಟುವಟಿಕೆ:  ಅಕ್ಷರ ವಿನ್ಯಾಸ

ಉದ್ದೇಶ :  * ಒದಗಿಸಲಾದ ಅಕ್ಷರಗಳ ಮಾದರಿ ಬಳಸಿ ಟ್ರೇಸ್ ಮಾಡುವನು/ಳು.

ಸಾಮಗ್ರಿ :– ಅಕ್ಷರದ ಮಾದರಿಗಳು, ಹಾಳೆ ಹಾಗೂ ಡ್ರಾಯಿಂಗ್ ಶೀಟ್ ತುಂಡುಗಳು (ಮಾದರಿ ಅಕ್ಷರ ನಕಲು ಮಾಡಲು ಅಗತ್ಯ ಅಳತೆಯಲ್ಲಿ)

ವಿದ್ಯಾ ಪ್ರವೇಶ (ವಿ.ಪ್ರ):

ಅಕ್ಷರದ ಮಾದರಿಗಳನ್ನು ಬಳಸಿ ನಕಲು ಮಾಡುವುದು.

**2 ನೇ & 3 ನೇ ತರಗತಿ :**

ನಕಲು ಮಾಡಿದ ಅಕ್ಷರಗಳನ್ನು ಬಳಸಿ ಸರಳ ಪದ ರಚನೆ ಮಾಡುವುದು.

ಉದಾ: ಕನ್ನಡದಲ್ಲಿ ಅ – ರ – ಸ.  ಇಂಗ್ಲೀಷ್ ನಲ್ಲಿ – ಕ್ಯಾಟ್

****************************************************************************


**ಆಟಿಕೆ / ಮಾಡಿ ನೋಡು ಮೂಲೆ :**

**ಸಾಮರ್ಥ್ಯ:  ಆಲೋಚನಾಶಕ್ತಿ, ಸೃಜನಶೀಲತೆ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು.**

DRAFT 22.02.22

| | | | |
|---|---|---|---|
| | | | ಚಟುವಟಿಕೆ: ಮಣ್ಣಿನೊಂದಿಗೆ ಬೆಳೆ<br>ಉದ್ದೇಶ :ಪರಿಸರ ಪ್ರೇಮದೊಂದಿಗೆ ಕೃಷಿಯ ಕಲ್ಪನೆ ಮೂಡಿಸುವುದು.<br><br>ಸಾಮಗ್ರಿ :ಪಾರದರ್ಶಕ ಲೋಟ, ಮಣ್ಣು, ನೀರು, ಕೊತ್ತಂಬರಿ ಬೀಜ, ರಾಗಿ, ಮೆಂತ್ಯ ಕಾಳು, ಮಕ್ಕಳ ಹೆಸರಿನ ಚೀಟಿಗಳು, ಗೋಂದು<br>ವಿಧಾನ : (ವಿ.ಪ್ರ. ಹಾಗೂ 2 & **3 ನೇ ತರಗತಿ)**<br>ಪ್ರತಿ ಲೋಟಕ್ಕೆ ಒಂದು ಮಗುವಿನ ಚಿತ್ರ ಅಂಟಿಸಿ, ಅರ್ಧಕ್ಕೆ ಮಣ್ಣು ತುಂಬಿಸುವುದು. ತಳಭಾಗದಲ್ಲಿ ಚಿಕ್ಕ ರಂಧ್ರವನ್ನು ಮಾಡುವುದು. ಕೆಲವು ಬೀಜ/ ಕಾಳುಗಳನ್ನು ಮಣ್ಣಿನ ಮೇಲೆ ಹಾಕುವುದು. ಪ್ರತಿದಿನ ಸ್ವಲ್ಪ ನೀರು ಸಿಂಪಡಿಸುವುದು. ದಿನದಿಂದ ದಿನಕ್ಕೆ ಮಣ್ಣಿನ ಮೇಲ್ಭಾಗದಲ್ಲಿ ಕಾಣುವ ಬದಲಾವಣೆಗಳನ್ನು / ಬೀಜ ಮೊಳಕೆಯೊಡೆಯುವುದನ್ನು ಗಮನಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | | **ಸಾಮರ್ಥ್ಯಗಳು : ತೂಕ ಮಾಡುವುದನ್ನು ತಿಳಿಯುವುದು.**<br>**ಚಟುವಟಿಕೆ : 13 ಬಿ ಪರಸ್ಪರ ತೂಕ ಮಾಡೋಣ ( ಗುರಿ–1)**<br>**ಉದ್ದೇಶ:– ತೂಕ ಮಾಡುವುದನ್ನು ತಿಳಿಯುವುದು.**<br>**ಸಾಮಗ್ರಿಗಳು : ತೂಕದ ಮಾಪಕ**<br>**ವಿಧಾನ: ಒಂದು ಮಗು ತೂಕದ ಮಾಪಕದ ಮೇಲೆ ನಿಲ್ಲಲಿ ಮತ್ತು ಇನ್ನೊಂದು ಮಗು ತೂಕವನ್ನು ಗಮನಿಸಲಿ. ಅದನ್ನು ಶಿಕ್ಷಕರು ಒಂದೆಡೆ ದಾಖಲಿಸುವುದು. ಹೀಗೆ ಪ್ರತಿ ಮಗುವಿನ ತೂಕದ ಬೆಳವಣಿಗೆಯ ಚಾರ್ಟ ನಿರ್ವಹಿಸಿ ತರಗತಿಯಲ್ಲಿ ಪ್ರದರ್ಶಿಸುವುದು. ಆರೋಗ್ಯಕರ ಆಹಾರದ ಅಭ್ಯಾಸವನ್ನು ಅನುಸರಿಸುವುದರಿಂದ ಮಕ್ಕಳು ಚೆನ್ನಾಗಿ ಬೆಳೆಯುತ್ತಾರೆ ಎಂಬುದನ್ನು ತಿಳಿದುಕೊಳ್ಳುತ್ತಾರೆ.**<br>**2ನೇ ತರಗತಿ**<br>**ಧಾನ್ಯಗಳ ತೂಕ ಮಾಡಿಸಿ ಅಳತೆಗಳನ್ನು ಮಕ್ಕಳಿಂದ ಹೇಳಿಸುವುದು.**<br>**3ನೇ ತರಗತಿ**<br>**ತನ್ನ ಗೆಳೆಯರ ತೂಕವನ್ನು ಮಾಡಿ ಅಳತೆಯನ್ನು ದಾಖಲಿಸಲು ತಿಳಿಸುವುದು. ಮತ್ತು ಪರಸ್ಪರ ಹೋಲಿಕೆ ಮಾಡುವಂತೆ ಹೇಳುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಕಷ್ಟವಿಲ್ಲದೇ ದಾರದಿಂದ ಚಿತ್ರ ರಚನೆ ಮಾಡುವುದು.<br>ಚಟುವಟಿಕೆ; 44 ದಾರದಿಂದ ಚಿತ್ರ ರಚನೆ.. ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಕಷ್ಟವಿಲ್ಲದೇ ಚಿತ್ರ ರಚಿಸಬಹುದೆಂಬ ಆತ್ಮ ವಿಶ್ವಾಸ ಮೂಡಿಸುತ್ತದೆ.<br>ಸಾಮಗ್ರಿಗಳು :ದಾರ, ಬಣ್ಣ ಮತ್ತು ಬಿಳಿಹಾಳೆ.<br>ವಿಧಾನ : ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು. ಪ್ರತಿ ಮಗುವಿಗೂ ಉದ್ದನೆಯ ಮೂರು ದಾರಗಳನ್ನು ನೀಡಿ, ಒಂದನ್ನು ಕೆಂಪು ಬಣ್ಣದಲ್ಲೂ ಇನ್ನೊಂದನ್ನು ನೀಲಿ ಬಣ್ಣದಲ್ಲೂ ಮತ್ತೊಂದನ್ನು ಹಳದಿ ಬಣ್ಣದಲ್ಲೂ ಅದ್ದಿ, ಮಡಿಸಿದ ಬಿಳಿಹಾಳೆಯ ಒಂದು ಭಾಗದಲ್ಲಿ ಬಣ್ಣದಲ್ಲಿ ಅದ್ದಿದ ದಾರಗಳನ್ನು ವಿವಿಧ ವಿನ್ಯಾಸಗಳಲ್ಲಿ ಹಾಕುವುದು ನಂತರ ಮಡಿಸಿದ ಇನ್ನೊಂದು ಭಾಗವನ್ನು ಅದರ ಮೇಲೆ ಮುಚ್ಚಿ , ದಾರವನ್ನು ಎಳೆಯಬೇಕು. ಹಾಳೆಯನ್ನು ತೆರೆದು ನೋಡಿದಾಗ ಸುಂದರವಾದ ಚಿತ್ರ ಮೂಡಿಬರುತ್ತದೆ. ಇದೇ ರೀತಿ ಬೇರೆ ಬೇರೆ ಬಣ್ಣಗಳನ್ನು ಬಳಸಿ ಚಿತ್ರ ಮಾಡಬಹುದು.<br>ವಿವರ; 2ಮತ್ತು 3 ನೇ ತರಗತಿ ಮಕ್ಕಳಿಗೆ ಮೇಲಿನ ಚಟುವಟಿಕೆಯನ್ನೇ ಮಾಡಲು ಹೇಳುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾ** | **ಆಲಿಸುವುದ ು ಮತ್ತು ಮಾತನಾಡ ುವುದು** | **ಸಾಮರ್ಥ್ಯ : ಸೃಜನಾತ್ಮಕ ಸ್ವ– ಅಭಿವ್ಯಕ್ತಿ, ಧ್ವನಿ ವಿಜ್ಞಾನದ ಅರಿವು, ಪ್ರಾಸ ಪದಗಳ ಪರಿಕಲ್ಪನೆ, ಪದ ಸಂಪತ್ತಿನ ಅಭಿವೃದ್ಧಿ**<br>**ಚಟುವಟಿಕೆ 3 ಎ : ಹಾಡು ಪ್ರಾಸ ಗೀತೆ (ಗುರಿ : 2) ECL-20**<br>**ಉದ್ದೇಶ:**<br>* **ಅಭಿನಯಪೂರ್ವಕವಾಗಿ ಹಾಡುವುದು.** |

DRAFT 22.02.22

<table>
<tr><td></td><td>ದಿ<br>ಸಾಕ್ಷರ<br>ತೆ</td><td></td><td>* ಧ್ವನಿ ಉಚ್ಚಾರವನ್ನು ಗಮನಿಸುವುದು.<br>* ಪ್ರಾಸ ಪದಗಳನ್ನು ಸಂಗ್ರಹಿಸುವುದು.<br>ಅಗತ್ಯ ಸಾಮಗ್ರಿಗಳು : ಇಲ್ಲ<br>ವಿಧಾನ :<br>–ಹೊಸ ಅಭಿನಯ ಗೀತೆ, ಪ್ರಾಸ ಗೀತೆ, ಅಥವ ಪದ್ಯ ಹೇಳಿಕೊಡಲು ಮಕ್ಕಳೊಂದಿಗೆ ವೃತ್ತಾಕಾರವಾಗಿ ನಿಲ್ಲುವುದು<br>–ಶಿಕ್ಷಕರು ಹೇಳಿಕೊಟ್ಟ ಅಭಿನಯ ಗೀತೆ, ಪ್ರಾಸ ಗೀತೆ, ಅಥವ ಪದ್ಯವನ್ನು ಅನುಸರಿಸಿ ಪುನರುಚ್ಚಿಸಲು ತಿಳಿಸುವುದು<br>–ಹಾಡು ಮತ್ತು ಪ್ರಾಸಗೀತೆಯನ್ನು ಹೇಳಿಕೊಡುವುದು<br>–ಭಾವಾಭಿನಯದೊಂದಿಗೆ ಹಾಡಿ ಮಕ್ಕಳನ್ನು ರಂಜಿಸುವುದು<br>–ಮಕ್ಕಳಿಗೆ ಪರಿಚಿತ ಹಾಡು, ಪ್ರಾಸ ಗೀತೆ ಅಥವಾ ಪದ್ಯಗಳಿಗೆ ಸಂಬಂಧಿತ ಚಿತ್ರಪುಟಗಳನ್ನು ಪ್ರದರ್ಶಿಸುವುದು<br>–ಹೊಸ ಪ್ರಾಸ ಪದ ಗುರುತಿಸಿ ಹೇಳಲು ಮಕ್ಕಳನ್ನು ಪ್ರೇರೇಪಿಸುವುದು<br>–ಹಾಡು, ಪ್ರಾಸ ಗೀತೆ, ಅಥವ ಪದ್ಯದಲ್ಲಿ ಬರುವ ಪ್ರಮುಖ ಪಾತ್ರ, ವಸ್ತು, ಘಟನೆಗಳ ಬಗ್ಗೆ ಚರ್ಚಿಸುವುದು<br>ಮೊಲದ ಮರಿ<br>ಮೊಲದ ಮರಿ ಮೊಲದ ಮರಿ ಆಡುಬಾರೆ<br>ಚುಪಕೆ ಚುಪಕೆ ಚುಪಕೆ ಎಂದು ನೆಗೆದು ಬಾರೆ<br>ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಪ್ರಾಸ ಪದಗಳನ್ನು ಗುರುತಿಸಿ, ಪ್ರತಿ ಪದಕ್ಕೂ ಹೆಚ್ಚು ಹೆಚ್ಚು ಪ್ರಾಸ ಪದಗಳನ್ನು ಜೋಡಿಸುವುದು. 3 ನೇ ತರಗತಿಯ ಮಕ್ಕಳು ಬೇರೆ ಬೇರೆ ಪ್ರಾಸ ಗೀತೆಗಳನ್ನು ಸಂಗ್ರಹಿಸಿ ಅವುಗಳಲ್ಲಿಯ ಪ್ರಾಸ ಪದಗಳನ್ನು ಗುರುತಿಸುವುದು.</td></tr>
<tr><td></td><td></td><td>ಅರ್ಥಗ್ರಹಿಕೆಯೊಂದಿಗಿನ ಓದು</td><td>ಸಾಮರ್ಥ್ಯ : ಪದ ಗುರುತಿಸುವುದು, ಮುದ್ರಿತ ಪಠ್ಯದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ : 11 ಹೆಸರಿನ ಜಗತ್ತು (ಗುರಿ 2)<br>ಉದ್ದೇಶ: ಪರಿಚಿತ ಸನ್ನಿವೇಶದಲ್ಲಿನ ವಸ್ತುಗಳನ್ನು ಲಿಪಿಸಂಕೇತಗಳೊಂದಿಗೆ ಸಹ ಸಂಬಂಧಿಕರಿಸಿಕೊಳ್ಳುವುದು. ಸಾಹಿತ್ಯ ಮತ್ತು ವಸ್ತು ಒಂದೇ ಇದೆ ಎಂಬ ತೀರ್ಮಾನಕ್ಕೆ ಬಂದು ಓದುವಿಕೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಚಾರ್ಟ್ ಪೇಪರ್, ಪೆನ್ಸಿಲ್, ಕ್ರೇಯಾನ್ಸ್, ನಮಗೆ ಕಣ್ಣಿಗೆ ಕಾಣುವ ಸುತ್ತಮುತ್ತಲಿನ ಸಾಮಾಗ್ರಿಗಳು<br>ವಿಧಾನ :<br>– ಮಕ್ಕಳ ಸಹಾಯದಿಂದ ತರಗತಿಯಲ್ಲಿರುವ ಸಾಮಾನ್ಯ/ಪರಿಚಿತ ವಸ್ತುಗಳ ಹೆಸರನ್ನು ಪಟ್ಟಿ ಮಾಡುವುದು.<br>ಉದಾ– ಮೇಜು, ಖುರ್ಚಿ, ಬಾಗಿಲು ಇತ್ಯಾದಿ.<br>– ಸಿದ್ಧಪಡಿಸಿದ ನಾಮ ಫಲಕಗಳನ್ನು ಆಯಾ ವಸ್ತುಗಳ ಮೇಲೆ ಅಂಟಿಸುವುದು.<br>– ಇನ್ನೊಂದು ಸೆಟ್ ನಾಮ ಫಲಕಗಳ ಮಿಂಚುಪಟ್ಟಿಗಳನ್ನು ತಯಾರಿಸಿಟ್ಟುಕೊಳ್ಳುವುದು.<br>– ಪದಗಳ ಮಿಂಚುಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುತ್ತಾ, ಮಕ್ಕಳಿಂದ ಗಟ್ಟಿಯಾಗಿ ಹೇಳಿಸುವುದು.<br>– ಪದ ಉಚ್ಚರಿಸುತ್ತಾ ಆ ವಸ್ತುವಿನ ಬಳಿಗೆ ಮಗು ಹೋಗಲು ತಿಳಿಸುವುದು.<br>_ ಮಗು ಕನಿಷ್ಟ ನಾಲ್ಕೈದು ವಸ್ತುಗಳನ್ನಾದರೂ ಹೆಸರಿಸಲು ಅವಕಾಶ ಕಲ್ಪಿಸುವುದು..<br>_ ಆ ಪದಗಳನ್ನು ಕಥೆಯಲ್ಲಿ ಗುರುತಿಸಲು ಅವಕಾಶ ಕಲ್ಪಿಸುವುದು.<br>– ಚಿತ್ರ ಸಹಿತ ನಾಮಫಲಕ/ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿ, ಚಟುವಟಿಕೆ ಸ್ಥಳದಲ್ಲಿ/ಸಮಯದಲ್ಲಿ ಮಕ್ಕಳಿಗೆ ಗುರುತಿಸಿ ಓದಲು (ಚಿತ್ರಗಳ ಸಹಾಯದಿಂದ) ಅವಕಾಶ ಕಲ್ಪಿಸುವುದು.<br>2ಮತ್ತು 3ನೇ ತರಗತಿ: ಕಥೆ/ಪಠ್ಯದಲ್ಲಿ ಬಂದಿರುವ ಮುಖ್ಯಪದಗಳ ಮಿಂಚುಪಟ್ಟಿ ತಯಾರಿಸಿಕೊಳ್ಳುವುದು ಮಕ್ಕಳಿಗೆ ಶಿಕ್ಷಕರು ಕಥೆ/ಪಠ್ಯವನ್ನು ನೀಡಿ ಓದಲು ಅವಕಾಶ ಕಲ್ಪಿಸುವುದು.ನಂತರ ಮಿಂಚುಪಟ್ಟಿಯಲ್ಲಿರುವ ಪದಗಳನ್ನು ಕತೆಯಲ್ಲಿ ಹುಡುಕಲು ಸೂಚಿಸುವುದು.<br>ಗಮನಿಸಿ ; ಈ ಹಿಂದೆ ಈ ಚಟುವಟಿಕೆಗಳಲ್ಲಿ ಬಳಸಿದ ಪದಗಳನ್ನು ಹೊರತುಪಡಿಸಿ ಬೇರೆ ಬೇರೆ ಸ್ಥಳ, ಸನ್ನಿವೇಶದಲ್ಲಿ ಬರುವ ಪದಗಳನ್ನು ಬಳಸಿ ಚಟುವಟಿಕೆಯನ್ನು ನಿರ್ವಹಿಸುವುದು.<br>
</td></tr>
</table>

DRAFT 2022

| | | | |
|---|---|---|---|
| | | ಉದ್ದೇಶಿತ ಬರಹ | ಸಾಮರ್ಥ್ಯ : ಸೂಕ್ಷ್ಮ ಸ್ನಾಯು ಚಲನಾ ಕೌಶಲಾಭಿವೃದ್ಧಿ. ಅಕ್ಷರಗಳನ್ನು ಗುರುತಿಸುವುದು.<br>**ಚಟುವಟಿಕೆ: 36, ಚುಕ್ಕಿ ಸೇರಿಸು –ಅಂಕಿ ಬರೆ (ಗುರಿ: 2 ) ECW-17**<br>ಉದ್ದೇಶ :<br>• ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಅಕ್ಷರಗಳನ್ನು ಗುರುತಿಸುವುದು.<br>• ಚುಕ್ಕಿಗಳಿಂದ ಅಂಕಿಗಳನ್ನು ರಚಿಸುವುದು<br>ಅಗತ್ಯ ಸಾಮಗ್ರಿ : ನೋಟ್ ಪುಸ್ತಕ, ಪೆನ್ಸಿಲ್, ಕರಿ ಹಲಗೆ, ಸೀಮೆ ಸುಣ್ಣ<br>ವಿಧಾನ :<br>– ಮಕ್ಕಳಿಗೆ ಚುಕ್ಕಿ ಬಳಸಿ 1,2,3,4,5 ಈ ಅಂಕಿಗಳನ್ನು ಬರೆಯುವ ವಿಧಾನವನ್ನು ಬರೆದು ತೋರಿಸುವುದು,<br>– ಮಕ್ಕಳು 1, 2, 3, 4, 5, ಈ ಅಂಕಿಗಳ ಚುಕ್ಕಿಗಳನ್ನು ಸೇರಿಸಲು ಹೇಳುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು 1 ರಿಂದ 5 ರ ವರೆಗಿನ ಅಂಕಿಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. 3ನೇ ತರಗತಿ ಮಕ್ಕಳು 1 ರಿಂದ 10 ರ ವರೆಗಿನ ಸಂಖ್ಯೆಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. (57 ನೇ ದಿನಕ್ಕೆ ಮುಂದುವರೆದಿದೆ) |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | ಹೊರಾಂಗಣ ಆಟಗಳು | | ಚಟುವಟಿಕೆ : ಸಂಗೀತದ ಅಂಕೆಗಳು<br>ಸಾಮರ್ಥ್ಯ : ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ,<br>ಸಾಮಗ್ರಿ : ಕುರ್ಚಿಗಳು<br>ವಿಧಾನ : ಸಂಗೀತ ಕುರ್ಚಿಗಳ ವಿಧದಲ್ಲಿ ಆಟವನ್ನು ಆಡಿಸುವುದು . ಕುರ್ಚಿಗಳ ಮೇಲೆ ಅಂಕೆಗಳ ಕಾರ್ಡಗಳನ್ನು ಇರಿಸುವುದು.<br>• ಶಿಕ್ಷಕರು ಒಂದು ಮಗುವಿನ ಹೆಸರು ಕರೆದಾಗ ಆ ಮಗು ಕುಳಿತ ಕುರ್ಚಿಯಲ್ಲಿ ಇಟ್ಟಿರುವ ಅಂಕ ಯಾವುದು ಎಂದು ಹೇಳಲು ಸೂಚಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರೆಸುವುದು** |
| | ಕಥಾ ಸಮಯ | | ಶೀರ್ಷಿಕೆ : ಗ್ರಾಂಡ್‌ಪಾಸ್ ಗಿಫ್ಟ<br>ಸಾಮಗ್ರಿಗಳು :<br>ಉದ್ದೇಶ :<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವು.<br>ವಿಧಾನ :<br>➢ ಶಿಕ್ಷಕರು ಕಥೆಯ ಸಾಹಿತ್ಯವನ್ನು ಪ್ರದರ್ಶಿಸಿ ಕಥೆಯನ್ನು ಮಾತೃಭಾಷೆಯಲ್ಲಿ ಹೇಳುವುದು.<br>➢ ಹಿರಿಯ ವಿದ್ಯಾರ್ಥಿಗಳಿಗೆ ಕಥೆಯ ಪಾತ್ರಗಳನ್ನು ಹೆಸರಿಸಲು ಹೇಳುವುದು.<br>➢ ಕಥೆಯ ಪಾತ್ರಗಳನ್ನು ಶಿಕ್ಷಕರು/ಹಿರಿಯ ವಿದ್ಯಾರ್ಥಿಗಳು ಹೆಸರಿಸುವಾಗ ಕಿರಿಯ ವಿದ್ಯಾರ್ಥಿಗಳು ಪಾತ್ರಗಳ ಚಿತ್ರಗಳನ್ನು ತೋರಿಸಲು ಕೇಳುವುದು.<br>➢ ಶಿಕ್ಷಕರು ಮಾತೃಭಾಷೆ ಮತ್ತು ಇಂಗ್ಲೀಷ ಭಾಷೆಯಲ್ಲಿ ಕಥೆಯನ್ನು ಅರ್ಥೈಸುವುದು.<br>ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು.<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | ಮತ್ತೆ ಸಿಗೋಣ | | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ |

DRAFT 22.02.22

| | | |
|---|---|---|
| | | • ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮಕ್ಕಳು ಖುಷಿಯಿಂದ, ತಮಾಷೆಯಿಂದ ಇರುವ ಚಟುವಟಿಕೆಗಳನ್ನು ನಿರ್ವಹಿಸಿ.<br>**ಉದಾ : 'ಮ'** ಅಕ್ಷರದಿಂದ ಪ್ರಾರಂಭವಾಗುವ ವಸ್ತುಗಳ ಹೆಸರುಗಳನ್ನು ಮನೆಯಿಂದ ತಿಳಿದುಕೊಂಡು ಬರಲಿ ಮತ್ತು ಮುಂದಿನವಾರ ಅವುಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಲಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |
| | | |
| | | |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–9** **ದಿನ–52 (ಗುರುವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 52 | ಶುಭಾಶಯ ವಿನಿಮಯ | **51 ನೇ ದಿನದ ಚಟುವಟಿಕೆಗಳನ್ನು ಮಾಡಿಸುವುದು** |
| | ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | **ದಿನ 49 ರ ಚಟುವಟಿಕೆ: ಪ್ರಕೃತಿ ನಡಿಗೆ ಮಾಡಿಸಿ.**<br>**ಇಂಗ್ಲೀಷ್ ಪ್ರಾಸ ಪದ್ಯವನ್ನು ಹಾಡಿಸಿ.**<br><br>**Parts Of A Plant**<br>The roots on a plant grow under ground,<br>Underground under the ground,<br>Roots are part of a plant.<br><br>The stems on a plant hold up the leaves,<br>Up the leaves, up the leaves,<br>Stems are part of plant.<br><br>The leaves on a plant are making food,<br>Making food, making food,<br>Leaves are part of plant.<br><br>The flowers on a plant are growing seeds,<br>Growing seeds, growing seeds,<br>Seeds are part of plant. |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿದೇ | **ಸಾಮರ್ಥ್ಯಗಳು : ಪ್ರಮಾಣಿತವಲ್ಲದ ಮಾಪನ, ವೀಕ್ಷಣೆ**<br>**ಚಟುವಟಿಕೆ : 30 ಎರಡು ವಿಭಿನ್ನ ಹಿಡುಪುಗಳ ಸಾಮರ್ಥ್ಯ ಅಳೆದು ಹೋಲಿಸುವುದು (ಗೋಲ್–3 )**<br>**ಉದ್ದೇಶ:– ವಿಭಿನ್ನ ಅಳತೆಯ ಹಿಡುಪುಗಳ ಬಗ್ಗೆ ತಿಳಿದುಕೊಳ್ಳುವುದು.**<br>**ಸಾಮಗ್ರಿಗಳು :ಬೇರೆ ಬೇರೆ ಅಳತೆಯ ಪಾತ್ರೆಗಳು, ನಾಲ್ಕು ಲೋಟಗಳು, ಬಣ್ಣದ ನೀರು**<br>**ವಿಧಾನ : ಎರಡು ವಿಭಿನ್ನ ಅಳತೆಯ ಪಾತ್ರೆಗಳನ್ನು ತೆಗೆದುಕೊಳ್ಳುವುದು ಅವುಗಳಿಗೆ 'ಅ' ಮತ್ತು 'ಬ'ಎಂದು** |

DRAFT 22.02.22

| | | | |
|---|---|---|---|
| | ಾಶಿತ) ಚಟುವಟಿಕೆ) | | ಹೆಸರಿಡುವುದು. 'ಅ'ಪಾತ್ರೆಗೆ ನಾಲ್ಕು ಲೋಟ ನೀರನ್ನು ಸುರಿದಾಗ ಪಾತ್ರ ತುಂಬುವುದು. ಈಗ 'ಬ' ಪಾತ್ರೆಗೆ ನೀರನ್ನು ತುಂಬಿಸುವುದು. 'ಬ' ಪಾತ್ರೆ ಕೇವಲ 2 ಲೋಟ ನೀರಿನಿಂದ ತುಂಬುವುದು. ಅಂದರೆ ಅ ಪಾತ್ರೆಗಿಂತ ಬ ಪಾತ್ರೆಯು ಕಡಿಮೆ ನೀರನ್ನು ಹಿಡಿಯುವುದನ್ನು ಗಮನಿಸಬಹುದು. ಹಾಗಾಗಿ 'ಅ' ಪಾತ್ರೆಯು 'ಬ' ಪಾತ್ರೆಗಿಂತ ದೊಡ್ಡದು.<br>2ನೇ ತರಗತಿ<br>ವಿಭಿನ್ನ ರೀತಿಯ ಅಳತೆ ಮಾಪನಗಳನ್ನು ಹೆಸರಿಸಲು ತಿಳಿಸುವುದು.<br>3ನೇ ತರಗತಿ<br>ವಿಭಿನ್ನ ರೀತಿಯ ಅಳತೆ ಮಾಪನಗಳ ಬಳಕೆ ಮತ್ತು ನಿತ್ಯಜೀವನದಲ್ಲಿ ಅವುಗಳ ಬಳಸುವ ಸಂದರ್ಭಗಳನ್ನು ಹೇಳುವುದು. |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ; ಚಿಕ್ಕ ಸ್ನಾಯುಗಳ ಚಲನಾ ಶಕ್ತಿಯ ವಿಕಾಸ.ಸೃಜನ ಶೀಲತೆಯ ಅಭಿವ್ಯಕ್ತಿ.<br>ಚಟುವಟಿಕೆ; 49 ಕತ್ತರಿಸುವುದು.<br>ಉದ್ದೇಶ;<br>• ಕತ್ತರಿಯನ್ನು ಹಿಡಿದು ಹಾಳೆಯನ್ನು ಕತ್ತರಿಸಿ ಅಂಟಿಸುವ ವಿಧಾನವನ್ನು ತಿಳಿಯುತ್ತಾರೆ.<br>• ಕೈ ಮತ್ತು ಬೆರಳುಗಳ ಕುಶಲತೆ ಹೆಚ್ಚುವುದರ ಜೊತೆಗೆ ಏಕಾಗ್ರತೆ ಬೆಳೆಯುತ್ತದೆ.<br>ಸಾಮಗ್ರಿ; ಕತ್ತರಿ [ ಪ್ಲಾಸ್ಟಿಕ್ ಕತ್ತರಿ ಅಪೇಕ್ಷಿತ] ಬಣ್ಣದ ಪೇಪರ್ , ಅಂಟು.<br>ವಿಧಾನ; ಮಕ್ಕಳಿಗೆ ಒಂದು ಕೈಯಿಂದ ಕತ್ತರಿಯನ್ನು ಇನ್ನೊಂದು ಕೈಯಿಂದ ಪೇಪರನ್ನು ಹಿಡಿದುಕೊಳ್ಳುವುದನ್ನು ತೋರಿಸಿ , ಬೆರಳುಗಳಿಂದ ಗಟ್ಟಿಯಾಗಿ ಕತ್ತರಿಯನ್ನು ಹಿಡಿಯುವ ಅಭ್ಯಾಸ ಮಾಡಿಸುವುದು.ಪ್ರತಿಯೊಂದು ಮಗುವಿಗೂ ಒಂದು ಕತ್ತರಿ ಮತ್ತು ಒಂದು ಪೀಸ್ ಪೇಪರನ್ನು ಕೊಟ್ಟು ಬೇರೆ ಬೇರೆ ರೀತಿಯಲ್ಲಿ ಅಂದರೆ ನೇರವಾಗಿ, ಜಿಗ್ ಜಾಗ್ ಅಥವಾ ಬೇರೆ ಬೇರೆ ಆಕಾರದಲ್ಲಿ ಕತ್ತರಿಸಲು ಹೇಳುವುದು.ನಂತರ ಅವುಗಳನ್ನು ಒಂದು ಚಾರ್ಟ ಮೇಲೆ ಅಥವಾ ಖಾಲಿ ಹಾಳೆಯ ಮೇಲೆ ಅಂಟಿಸಿ ಕೊಲ್ಯಾಜ್ ವರ್ಕ ಮಾಡಿಸುವುದು.<br>ಸೂಚನೆ; ಮಕ್ಕಳು ಉಪಯೋಗಿಸಲು ಯೋಗ್ಯವಾದ [ ಚೂಪಾಗಿಲ್ಲದ] ಕತ್ತರಿಗಳನ್ನು ಬಳಸಬೇಕು.ಶಿಕ್ಷಕಿ ಎಚ್ಚರಿಕೆಯಿಂದ ಮಕ್ಕಳನ್ನು ಗಮನಿಸುತ್ತಿರಬೇಕು. ಮಕ್ಕಳು ತೆಗೆದುಕೊಳ್ಳಬೇಕಾದ ಎಚ್ಚರಿಕೆಯನ್ನು ಅವರಿಗೆ ಮನದಟ್ಟು ಮಾಡಬೇಕು.<br>ವಿವರ; 2ಮತ್ತು 3 ನೇ ತರಗತಿಗೆ ಜಿಗ್ ಜಾಗ್ ಅಥವಾ ಬೇರೆ ಬೇರೆ ಆಕಾರದಲ್ಲಿ ಕತ್ತರಿಸಲು ಹೇಳುವುದು.ನಂತರ ಅವುಗಳನ್ನು ಒಂದು ಚಾರ್ಟ ಮೇಲೆ ಅಥವಾ ಖಾಲಿ ಹಾಳೆಯ ಮೇಲೆ ಅಂಟಿಸಿ ಕೊಲ್ಯಾಜ್ ವರ್ಕ ಮಾಡಿಸುವುದು.<br>* **ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-13 ( 01, 02,03ನೇ ತರಗತಿ)** |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | **ಸಾಮರ್ಥ್ಯ:– ಧ್ವನಿ ಸಂಕೇತಗಳ ಅರಿವು, ಅಕ್ಷರ ಶಬ್ದ ಸಹ ಸಂಬಂಧ.**<br>**ಚಟುವಟಿಕೆ–20** ಹೆಸರಿನ ಆರಂಭಿಕ ಅಕ್ಷರದಿಂದ ವಸ್ತುವನ್ನು ಪತ್ತೆ ಹಚ್ಚುವುದು (ಗುರಿ–2) **ECL-2 (46ನೇ ದಿನದಿಂದ ಮುಂದುವರೆದಿದೆ.)**<br>**ಉದ್ದೇಶಗಳು:–**<br>* ಧ್ವನಿ ಸಂಕೇತಗಳ ಅರಿವು ಮೂಡಿಸುವುದು.<br>* ಅಕ್ಷರಗಳು ಮತ್ತು ಪದಗಳ ನಡುವಿನ ಸಹಸಂಬಂಧವನ್ನು ಗ್ರಹಿಸುವುದು.<br>* ಪದಗಳನ್ನು ಗ್ರಹಿಸಿ ಗುರುತಿಸುವುದು.<br>* ಅಂತ್ಯಾಕ್ಷರಿ ಪದಗಳನ್ನು ಬರೆಯುವುದು.<br>ಅಗತ್ಯ ಸಾಮಗ್ರಿಗಳು– ಇಲ್ಲ<br>ಸಲಹಾತ್ಮಕ ವಿಷಯ : ವಿದ್ಯುತ್ ಉಪಕರಣಗಳು<br>ವಿಧಾನ:– ಸುಳಿವುಗಳ ಮೂಲಕ ವಿದ್ಯುತ್ ಉಪಕರಣಗಳ ಹೆಸರನ್ನು ಊಹಿಸಿ ಹೇಳುವ ಚಟುವಟಿಕೆಯನ್ನು ಆಯೋಜಿಸಿ. ಉದಾಹರಣೆಗಾಗಿ ಶಿಕ್ಷಕರು 'ನನ್ನ ಮನಸ್ಸಿನಲ್ಲಿರುವ ವಿದ್ಯುತ್ ಉಪಕರಣಗಳ ನಮಗೆ ಜಗತ್ತಿನ ಮಾಹಿತಿಯನ್ನು ಕ್ಷಣಮಾತ್ರದಲ್ಲಿ ಒದಗಿಸುತ್ತದೆ..ಅದರ ಹೆಸರು ದೂ ಅಕ್ಷರದಿಂದ ಪ್ರಾರಂಭವಾಗುತ್ತದೆ ಎಂದು ಹೇಳಿದಾಗ ಮಕ್ಕಳು ದೂರದರ್ಶನ ಎಂದು ಗುರುತಿಸುವುದು. ಹೀಗೆಯೇ ವಿವಿಧ ಉದಾಹರಣೆಗಳನ್ನು ನೀಡುವುದು.<br>ತರಗತಿವಾರು ವಿವರ: 2ನೇ ಮತ್ತು 3ನೇ ತರಗತಿ ಮಕ್ಕಳಿಗೆ ಪದಗಳ ಮುಂದುವರೆದ ಭಾಗವಾಗಿ ವಾಕ್ಯಗಳನ್ನು |

DRAFT 2022

| | | | |
|---|---|---|---|
| | | | ರಚಿಸುವಂತೆ ಹಾಗೂ ಸರಳ ವಾಕ್ಯಗುಚ್ಛಗಳನ್ನು ರಚಿಸುವಂತೆ ಚಟುವಟಿಕೆಗಳನ್ನು ಮುಂದುವರೆಸುವುದು..( 64 ನೇ ದಿನಕ್ಕೆ ಮುಂದುವರೆದಿದೆ)<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC-13 (ತರಗತಿ 1, 2, 3)** |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ : ಅವಧಾನ ಮತ್ತು ಆಲಿಸುವಿಕೆ<br>ಅನುಕ್ರಮ ಚಿಂತನೆ ಸ್ಥೂಲ ಸ್ನಾಯು ಕೌಶಲಗಳ ಅಭಿವೃದ್ಧಿ<br>ಚಟುವಟಿಕೆ .19 : ಧ್ವನಿ ವ್ಯತ್ಯಾಸಗಳು (ಗುರಿ–2)<br>ಉದ್ದೇಶ ; ಮಕ್ಕಳು ಪದಗಳನ್ನು ಆಲಿಸುವುದರ ಮೂಲಕ ಧ್ವನಿ ವ್ಯತ್ಯಾಸಗಳನ್ನು ಗುರುತಿಸುವರು<br>ಅಗತ್ಯ ಸಾಮಾಗ್ರಿಗಳು : ಸೀಮೆಸುಣ್ಣ, ಮಾರ್ಕರ್, ಕ್ರೇಯಾನ್ಸ್, ಕ್ರಮಸಂಖ್ಯೆ ಬರೆದಿರುವ ಚಾರ್ಟ್<br>ವಿಧಾನ : ಶಿಕ್ಷಕರು ಕಪ್ಪು ಹಲಗೆಯ ಮೇಲೆ 3 ಒಂದೇ ದ್ವನಿಯಿಂದ ಪ್ರಾರಂಭವಾಗುವ ಪದಗಳನ್ನು ಹಾಗು 1 ವಿಭಿನ್ನ ರೀತಿಯ ದ್ವನಿಯಿಂದ ಪ್ರಾರಂಭವಾಗುವ ಪದವನ್ನು ಬರೆದು ಗಟ್ಟಿಯಾಗಿ ಓದುವುವುದು ಅವುಗಳಲ್ಲಿ ವಿಭಿನ್ನ ಪದವನ್ನು ಗುರುತಿಸಿ ಮಕ್ಕಳ ಅನುಭವಕ್ಕೆ ತರವುದು. ಉದಾಹರಣೆ ಪಟ, ಪದಕ, ಚರಕ ಪುಸ್ತಕ ಇವುಗಳಲ್ಲಿ ವಿಭಿನ್ನ ಧ್ವನಿಯ ಪದ ಯಾವುದು? ಎಂದು ಕೇಳುವುದು. ಮಕ್ಕಳು ಗುರುತಿಸಿರುವ ಪದಗಳನ್ನು ಚಾರ್ಟನಲ್ಲಿ ಬರೆಯುವುದು.<br>2 ಮತ್ತು 3ನೇ ತರಗತಿಯ ಮಕ್ಕಳಿಗೆ: ಮಕ್ಕಳಿಂದ ಧ್ವನಿ ವ್ಯತ್ಯಾಸದ ಪದಗಳನ್ನು ಓದಿಸುವುದು. ಉದಾಹರಣೆ: ಹಕ್ಕಿ–ಅಕ್ಕಿ. ಆರು– ಹಾರು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ವೀಕ್ಷಣೆ, ಕಲ್ಪನೆ, ಸೃಜನಶೀಲ ಚಿಂತನೆ, ಪರಿಸರ ಪ್ರಜ್ಞೆ,<br>ಚಟುವಟಿಕೆ: 35 ಹವಾಮಾನ ನಕ್ಷೆ (ಗುರಿ–2) **ECW-16** (46 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>• ಉದ್ದೇಶಿತ ಬರವಣಿಗೆಯನ್ನು ರೂಢಿಸುವುದು.<br>• ವೀಕ್ಷಣಾ ಕೌಶಲವನ್ನು ಬೆಳೆಸುವುದು.<br>• ಸೃಜನಶೀಲ ಚಿಂತನೆಯನ್ನು ಉತ್ತೇಜಿಸುವುದು.<br>• ಪರಿಸರ ಪ್ರಜ್ಞೆ ಮೂಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ/ ಹಾಳೆಗಳು, ಪೆನ್ಸಿಲ್<br>ವಿಧಾನ : ವಾರದ ದಿನಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>– ವಾರದ ದಿನಗಳ ಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>– ಗುಂಪು ಚಟುವಟಿಕೆಯ ಸಮಯದಲ್ಲಿ ಆ ದಿನದ ಹವಾಮಾನವನ್ನು ಗುರುತಿಸಲು ತಿಳಿಸುವುದು.<br>– ಇದರ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ ಖಾಲಿ ಹಾಳೆಗಳನ್ನ ನೀಡಿ ಆ ದಿನದ ಹವಾಮಾನದ ಚಿತ್ರವನ್ನು ಬರೆಯಲು ತಿಳಿಸುವುದು.<br>– ಮಕ್ಕಳ ಕಾರ್ಯಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ದಿನದ ಹವಾಮಾನವನ್ನು ತಮ್ಮ ಪುಸ್ತಕದಲ್ಲಿ ದಾಖಲಿಸುವಂತೆಯೂ 3ನೇ ತರಗತಿಯ ಮಕ್ಕಳು ತರಗತಿ ಹವಾಮಾನ ನಕ್ಷೆಯಲ್ಲಿ ದಿನದ ಹವಾಮಾನವನ್ನು ದಾಖಲಿಸಲು ತಿಳಿಸುವುದು. (56 ನೇ ದಿನಕ್ಕೆ ಮುಂದುವರೆದಿದೆ) |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | **ಹೊರಾಂಗಣ ಆಟಗಳು** | Day 52<br>ಚಟುವಟಿಕೆ : ಸಂಗೀತದ ಅಕ್ಷರಗಳು<br>ಸಾಮರ್ಥ್ಯ : ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, | |

DRAFT 22.02.22

| | | |
|---|---|---|
| | | ಸಾಮಗ್ರಿ : ಕುರ್ಚಿಗಳು<br>ವಿಧಾನ : ಸಂಗೀತ ಕುರ್ಚಿಗಳ ವಿಧದಲ್ಲಿ ಆಟವನ್ನು ಆಡಿಸುವುದು . ಕುರ್ಚಿಗಳ ಮೇಲೆ ಅಕ್ಷರದ ಕಾರ್ಡಗಳನ್ನು ಇರಿಸುವುದು.<br>• ಶಿಕ್ಷಕರು ಒಂದು ಮಗುವಿನ ಹೆಸರು ಕರೆದಾಗ ಆ ಮಗು ಕುಳಿತ ಕುರ್ಚಿಯಲ್ಲಿ ಇಟ್ಟಿರುವ ಅಕ್ಷರ ಯಾವುದು ಎಂದು ಹೇಳಲು ಸೂಚಿಸುವುದು<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರೆಸುವುದು** |
| | ಕಥಾ ಸಮಯ | **ಶೀರ್ಷಿಕೆ : ಗ್ರಾಂಡ್‌ಪಾಸ್ ಗಿಫ್ಟ**<br>**ಸಾಮಗ್ರಿಗಳು : ಗೊಂಬೆಗಳು**<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ **ಸೃಜನ ಶೀಲತೆಯನ್ನು ಬೆಳೆಸುವುದು.**<br>➢ **ಪ್ರಶ್ನಿಸುವ ಮನೋಭಾವಉಂಟುಮಾಡುವುದು.**<br>**ವಿಧಾನ :**<br>➢ **ಶಿಕ್ಷಕರು ಮಾತೃಭಾಷೆ ಮತ್ತು ಇಂಗ್ಲೀಷ ಭಾಷೆಯಲ್ಲಿ ಕಥೆಯನ್ನು ಅರ್ಥೈಸುವುದು.**<br>➢ **ಕಥೆಯ ಪಾತ್ರಗಳನ್ನು ಶಿಕ್ಷಕರು/ಹಿರಿಯ ವಿದ್ಯಾರ್ಥಿಗಳು ಹೆಸರಿಸುವಾಗ ಕಿರಿಯ ವಿದ್ಯಾರ್ಥಿಗಳು ಪಾತ್ರಗಳ ಚಿತ್ರಗಳನ್ನು ತೋರಿಸಲು ಕೇಳುವುದು.**<br>➢ **ನಂತರ ಶಿಕ್ಷಕರು ಇಂಗ್ಲೀಷ ಭಾಷೆಯಲ್ಲಿ ಕಥೆಯನ್ನು ಹೇಳುವುದು. ಈಗ ಕನ್ನಡದಲ್ಲಿ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುವುದು.**<br>**ಉದಾ : ತಾತ ಕೊಟ್ಟ ಉಡುಗೊರೆ ಯಾವುದು?**<br>➢ **ಗೊಂಬೆಗಳನ್ನು ಪ್ರದರ್ಶಿಸಿ ಅವುಗಳ ಹೆಸರುಗಳನ್ನು ಒಮ್ಮೆ ಮಾತೃಭಾಷೆಯಲ್ಲಿ ನಂತರ ಇಂಗ್ಲೀಷ ಭಾಷೆಯಲ್ಲಿ ಹೇಳಿ ಪರಿಚಯಿಸುವುದು. ಉದಾ : ತಾತ(ಅಜ್ಜ)ನ ಗೊಂಬೆ ತೋರಿಸಿ – ಗ್ರ್ಯಾಂಡ್ ಫಾ ಇತ್ಯಾದಿ.**<br><br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮಕ್ಕಳು ಖುಷಿಯಿಂದ, ತಮಾಷೆಯಿಂದ ಇರುವ ಚಟುವಟಿಕೆಗಳನ್ನು ನಿರ್ವಹಿಸಿ.<br>**ಉದಾ : 'ಮ'** ಅಕ್ಷರದಿಂದ ಪ್ರಾರಂಭವಾಗುವ ವಸ್ತುಗಳ ಹೆಸರುಗಳನ್ನು ಮನೆಯಿಂದ ತಿಳಿದುಕೊಂಡು ಬರಲಿ ಮತ್ತು ಮುಂದಿನವಾರ ಅವುಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಲಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

DRAFT 2022

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–9** **ದಿನ–53 (ಶುಕ್ರವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 53 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **49 ನೇ ದಿನದ 1 ನೇ ಚಟುವಟಿಕೆ ಮಾಡಿಸುವುದು.**<br>**ಚಟುವಟಿಕೆ 2:**<br>1. ರೈಲು ಚಪ್ಪಾಳೆ ಯನ್ನು ಹೇಳಿಕೊಡುವುದು.<br>2. ಮಕ್ಕಳು ರೈಲು ಚಪ್ಪಾಳೆ ತಟ್ಟುತ್ತಾ ತರಗತಿಯಲ್ಲಿ ವೃತ್ತಾಕಾರವಾಗಿ ನಿಲ್ಲುವುದು. |
| | ಮಾತು ಕತೆ | **ದಿನ 49 ರ ಚಟುವಟಿಕೆ: ಪ್ರಕೃತಿ ನಡಿಗೆ ಮಾಡಿಸಿ.**<br>**ಇಂಗ್ಲೀಷ್ ಪ್ರಾಸ ಪದ್ಯವನ್ನು ಹಾಡಿಸಿ.** |
| | ನನ್ನ ಸಮಯ(**Free Indore play**) | ಮಕ್ಕಳು ತಾವು ನಿರ್ವಹಿಸಲಿಚ್ಛಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | **ಸಾಮರ್ಥ್ಯಗಳು : ಹೋಲಿಕೆ, ಹೊಂದಾಣಿಕೆ, ವಿಂಗಡಣೆ, ಗಾತ್ರ ಮತ್ತು ಪ್ರಮಾಣಗಳ ಪರಿಕಲ್ಪನೆ, ಪರಿಸರದ ಅರಿವು**<br>**ಚಟುವಟಿಕೆ : 18 ಈಗ ನಾವು ಹೋಲಿಕೆ ಮಾಡೋಣ (ಗೋಲ್– 3 )**<br>**ಉದ್ದೇಶ:– ಗಾತ್ರ ಮತ್ತು ಪ್ರಮಾಣಗಳನ್ನು ಹೋಲಿಕೆ ಮಾಡುವುದು.**<br>**ಸಾಮಗ್ರಿಗಳು : ವಿಭಿನ್ನ ರೀತಿಯ ಮಾಪಕಗಳು, ಪೆನ್ಸಿಲ್‌ಗಳು, ಹಣ್ಣಿನ ಮಾದರಿಗಳು, ವಿಭಿನ್ನ ಗಾತ್ರದ ವಸ್ತುಗಳು, ತರಕಾರಿ ಮಾದರಿಗಳು, ಪಾತ್ರೆಗಳು ಇತ್ಯಾದಿ.**<br>**ವಿಧಾನ : ಸರಳವಾದ ಹೋಲಿಕೆ ಕಾರ್ಯಗಳನ್ನು ಮೊದಲು ಸ್ಟ್ರಾಗಳು, ಪೆನ್ಸಿಲ್‌ಗಳು, ಹಣ್ಣುಗಳು, ತರಕಾರಿಗಳು ಮತ್ತು ಇತರ ಸಾಮಾನ್ಯವಾಗಿ ಲಭ್ಯವಿರುವ ವಸ್ತುಗಳನ್ನು ತೆಗೆದುಕೊಂಡು ಸರಳವಾದ ಹೋಲಿಕೆಯನ್ನು ಮಾಡಬಹುದು. ಗಾತ್ರ ಮತ್ತು ಪ್ರಮಾಣ ಎರಡೂ ಹೋಲಿಕೆಗೆ ಆಧಾರವಾಗಿಸಿಕೊಂಡು, ಗಾತ್ರದಿಂದ ಪ್ರಾರಂಭಿಸಿ ದೊಡ್ಡದು–ಚಿಕ್ಕದು ಎಂದು ಗುರುತಿಸುವುದು. ಗುಂಪಿನಲ್ಲಿ ಎತ್ತರದ ಹುಡುಗ, ಉದ್ದವಾದ ಸೀಮೆಸುಣ್ಣ/ಕೋಲು ಇತ್ಯಾದಿಗಳನ್ನು ಆಯ್ಕೆ ಮಾಡಲು ಹೇಳಿ. ಈ ಹೋಲಿಕೆಯ ಚಟುವಟಿಕೆಯು ಎತ್ತರಕ್ಕೆ ಸಂಬಂಧಿಸಿದ್ದು ಎಂದು ಖಚಿತಪಡಿಸಿಕೊಳ್ಳಿ. ಆಯತಾಕಾರದ ಎರೇಸರ್‌ನ್ನು ತೆಗೆದುಕೊಂಡು ಪುಸ್ತಕದೊಂದಿಗೆ ಹೋಲಿಕೆ ಮಾಡುವುದು ಹಾಗು ಸೇಬಿನೊಂದಿಗೆ ಚೆಂಡನ್ನು ಹೋಲಿಸುವುದು. ಮುಂತಾದ ಮಿಶ್ರ ಗುಂಪುಗಳೊಂದಿಗೆ (ಅದರೆ ಎತ್ತರವನ್ನು ಆಯತಕ್ಕೆ, ಆಯತವನ್ನುಎತ್ತರಕ್ಕೆ ಹೋಲಿಸಬೇಡಿ) ಕಾರ್ಯಗಳನ್ನು ಹೋಲಿಸಬೇಡಿ.**<br>**ಅಲ್ಲದೆ, ಗಾತ್ರದ ವ್ಯತ್ಯಾಸಗಳು ಸ್ಪಷ್ಟವಾಗಿರಬೇಕು. ಅಂತೆಯೇ,ಯಾವುದೇ ಒಂದು ದೊಡ್ಡ ವಸ್ತುವಿಗೆ ಯಾವ ಯಾವ ಚಿಕ್ಕ ವಸ್ತುಗಳ ತೂಕ ಸಮವಾಗುತ್ತದೆಂದು ಹೋಲಿಕೆ ಮಾಡುವುದು.**<br>**ತರಗತಿ–2**<br>**1. ಕುಂಬಳಕಾಯಿ ಮತ್ತು ಆಲುಗಡ್ಡೆ ಇವುಗಳಲ್ಲಿ ಭಾರ ಮತ್ತು ಹಗುರದ ವ್ಯತ್ಯಾಸವನ್ನು ಗುರುತಿಸಲು ತಿಳಿಸುವುದು.**<br>**2. ಮೂಲಂಗಿ ಮತ್ತು ನುಗ್ಗೆಕಾಯಿ ಇವುಗಳಲ್ಲಿ ಎತ್ತರ ಮತ್ತು ಗಿಡ್ಡ ಹೋಲಿಕೆಯನ್ನು ಗುರುತಿಸಲು ಹೇಳುವುದು.**<br>**ತರಗತಿ–3**<br>**ದಪ್ಪ–ಸಣ್ಣ, ಉದ್ದ–ಗಿಡ್ಡ, ಭಾರ–ಹಗುರ ಇವುಗಳಿಗೆ ಉದಾಹರಣೆಯನ್ನು ಹೇಳಿ ಬರೆಯಲು ಹೇಳುವುದು.** |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | ಸಾಮರ್ಥ್ಯ; ಸೂಕ್ಮ ಸ್ನಾಯುಗಳ ಚಲನಾ ಶಕ್ತಿಯ ವಿಕಾಸ.ಸೃಜನ ಶೀಲತೆಯ ಅಭಿವ್ಯಕ್ತಿ.<br>ಚಟುವಟಿಕೆ; 49 ಎ ಅಕ್ಷರ ಮತ್ತು ಸಂಖ್ಯೆಗಳನ್ನು ಕತ್ತರಿಸುವುದು.<br>ಉದ್ದೇಶ;<br>• ಕತ್ತರಿಯನ್ನು ಹಿಡಿದು ಹಾಳೆಯನ್ನು ಕತ್ತರಿಸಿ ಅಂಟಿಸುವ ವಿಧಾನವನ್ನು ತಿಳಿಯುತ್ತಾರೆ.<br>• ಕೈ ಮತ್ತು ಬೆರಳುಗಳ ಕುಶಲತೆ ಹೆಚ್ಚುವುದರ ಜೊತೆಗೆ ಏಕಾಗ್ರತೆ ಬೆಳೆಸಿಕೊಳ್ಳುತ್ತಾರೆ.<br>• ಅಕ್ಷರ ಮತ್ತು ಸಂಖ್ಯೆಗಳ ರೇಖಾ ಚಿತ್ರದಂತೆ ಕತ್ತರಿಸುತ್ತಾರೆ.<br>ಸಾಮಗ್ರಿ; ಕತ್ತರಿ [ ಪ್ಲಾಸ್ಟಿಕ್ ಕತ್ತರಿ ಅಪೇಕ್ಷಿತ] ಬಣ್ಣದ ಪೇಪರ್ , ಅಂಟು.ಕ್ಯಾಲೆಂಡರ್<br>ವಿಧಾನ; ಮಕ್ಕಳಿಗೆ ಒಂದು ಕೈಯಿಂದ ಕತ್ತರಿಯನ್ನು ಇನ್ನೊಂದು ಕೈಯಿಂದ ಪೇಪರನ್ನು ಹಿಡಿದುಕೊಳ್ಳುವುದನ್ನು ತೋರಿಸಿ , ಬೆರಳುಗಳಿಂದ ಗಟ್ಟಿಯಾಗಿ ಕತ್ತರಿಯನ್ನು ಹಿಡಿಯುವ ಅಭ್ಯಾಸ ಮಾಡಿಸುವುದು.ಪ್ರತಿಯೊಂದು |

DRAFT 2022

| | | | |
|---|---|---|---|
| | | | ಮಗುವಿಗೂ ಕ್ಯಾಲೆಂಡರ್ ನಿಂದ ಅಂಕಿಗಳನ್ನು ಕತ್ತರಿಸಲು ಹೇಳುವುದು.ಮಕ್ಕಳು ಹಳೆಯ ಪುಸ್ತಕ / ನಿಯತಕಾಲಿಕೆಗಳಿಂದ ದೊಡ್ಡ ಅಕ್ಷರಗಳನ್ನು ಕತ್ತರಿಸಲಿ. ತಮ್ಮ ಆಸಕ್ತಿಗೆ ತಕ್ಕಂತೆ ತಾವು ಕತ್ತರಿಸಿದ ಅಕ್ಷರ ಮತ್ತು ಅಂಕಿಗಳನ್ನು ಬಣ್ಣದ ಕಾಗದದ ಮೇಲೆ ಅಂಟಿಸಲಿ.<br>ಸೂಚನೆ; ಮಕ್ಕಳು ಉಪಯೋಗಿಸಲು ಯೋಗ್ಯವಾದ [ ಚೂಪಾಗಿಲ್ಲದ] ಕತ್ತರಿಗಳನ್ನು ಬಳಸಬೇಕು.ಶಿಕ್ಷಕಿ ಎಚ್ಚರಿಕೆಯಿಂದ ಮಕ್ಕಳನ್ನು ಗಮನಿಸುತ್ತಿರಬೇಕು. ಮಕ್ಕಳು ತೆಗೆದುಕೊಳ್ಳಬೇಕಾದ ಎಚ್ಚರಿಕೆಯನ್ನು ಅವರಿಗೆ ಮನದಟ್ಟು ಮಾಡಬೇಕು.<br>ವಿವರ; 2ಮತ್ತು 3 ನೇ ತರಗತಿಗೆ ಎರಡಂಕಿ ಮತ್ತು ಮೂರಂಕಿ ಸಂಖ್ಯೆ/ 3–4 ಅಕ್ಷರಗಳ ಪದಗಳನ್ನು ಕ್ಯಾಲೆಂಡರ್/ ಪುಸ್ತಕ / ನಿಯತಕಾಲಿಕೆಗಳಿಂದ ಕತ್ತರಿಸಿ ಅಂಟಿಸಲು ಹೇಳುವುದು |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಪದಸಂಪತ್ತಿನ ಅಭಿವೃದ್ಧಿ, ಊಹಿಸುವುದು, ತಂಡದ ಸದಸ್ಯರೊಂದಿಗೆ ಸಹಕಾರದಿಂದ ಕೆಲಸ ಮಾಡುವುದು.**<br>**ಚಟುವಟಿಕೆ....6 ಎ ನನ್ನನ್ನು ಹುಡುಕು. (ಗುರಿ–2) ECL-12**<br>**ಉದ್ದೇಶ:**<br>*** ಸೂಕ್ತ ಪದ ರಚಿಸುವುದು.**<br>*** ಸಾಂಘಿಕ ಮನೋಭಾವನೆ ಬೆಳೆಸುವುದು.**<br>*** ಸೂಚನೆಗಳನ್ನು ಎಚ್ಚರಿಕೆಯಿಂದ ಆಲಿಸಿ ಅನುಸರಿಸುವುದು.**<br>*** ಪದ ಸಂಪತ್ತಿನ್ನು ಅಭಿವೃದ್ಧಿ ಪಡಿಸುವುದು.**<br>**ಅಗತ್ಯ ಸಾಮಗ್ರಿಗಳು : ಪರಿಚಿತ ವಸ್ತು, ಪ್ರಾಣಿ, ಪಕ್ಷಿಗಳ ಚಿತ್ರಗಳು**<br>**ವಿಧಾನ: ಚಿತ್ರಗಳ ಮಿಂಚುಪಟ್ಟಿಗಳನ್ನು ಒಂದು ಬಾಕ್ಸ್ ನಲ್ಲಿ ಹಾಕಿ ಇಡುವುದು. ತರಗತಿಯಲ್ಲಿರುವ ಮಕ್ಕಳನ್ನು ಒಬ್ಬೊಬ್ಬರಾಗಿ ಕರೆದು ಬಾಕ್ಸ್ ನಲ್ಲಿರುವ ಚಿತ್ರಗಳಲ್ಲಿ ಒಂದನ್ನು ಎತ್ತಿಕೊಂಡು ಅದರ ಹೆಸರು ಹೇಳಲು ತಿಳಿಸುವುದು. ಮಕ್ಕಳು ಗುರುತಿಸಿದ ಚಿತ್ರಗಳ ಕುರಿತು ಅವರೊಂದಿಗೆ ಚರ್ಚಿಸುವುದು. ಇದೇ ರೀತಿ ಚಟುವಟಿಕೆಯನ್ನು ಮುಂದುವರೆಸುವುದು.**<br>**ತರಗತಿಯ ವಿವರ: 2 ನೇ ತರಗತಿಯ ಮಕ್ಕಳು ತಾವು ಗುರುತಿಸಿದ ಚಿತ್ರದ ಬಗ್ಗೆ 3–4 ವಾಕ್ಯಗಳಲ್ಲಿ ಮಾತನಾಡುವುದು. 3 ನೇ ತರಗತಿಯ ಮಕ್ಕಳು 2 ರಿಂದ 3 ನಿಮಿಷ ಆ ಚಿತ್ರದ ಬಗ್ಗೆ ಮಾತನಾಡುವುದು.** |
| | | **ಅರ್ಥಗ್ರಹಿಕೆಯೊಂದಿಗಿನ ಓದು** | **ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ....18**<br>• **ಚಿತ್ರ ಸಂಪುಟ (ಗುರಿ–2) ವಿಷಯ: 'ನೀರಿನ ಆಕರಗಳು ಮತ್ತು ಅವುಗಳಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳು '**<br>**ಉದ್ದೇಶ:**<br>• **ಚಿತ್ರದಲ್ಲಿನ ವಸ್ತು/ವ್ಯಕ್ತಿ/ಘಟನೆಗಳನ್ನು ಹೆಸರಿಸುವುದು ಊಹಿಸಿ ಅರ್ಥೈಸಿಕೊಳ್ಳಲು ಚಿತ್ರದೊಂದಿಗೆ ಪಠ್ಯವನ್ನು ಸಂಬಂಧಿಕರಿಸುವುದು.**<br>• **ಮಕ್ಕಳು ಚಿತ್ರಓದುವುದು ಮತ್ತು ಚರ್ಚಿಸಿ ಅರ್ಥಮಾಡಿಕೊಳ್ಳುವುದು ಮತ್ತು ವೈಯಕ್ತಿಕಚಿತ್ರ ಸಂಪುಟಗಳನ್ನು ರಚಿಸಿ ವೈಯಕ್ತಿಕವಾಗಿ ಮತ್ತು ಗುಂಪುಗಳಲ್ಲಿ ಮಂಡಿಸುವುದು ಮತ್ತು ಗುಂಪಿನಲ್ಲಿ ಕುಳಿತು ಗೋಡೆ ಪತ್ರಿಕೆಗಳನ್ನು ರಚಿಸುವುದು.**<br>ಅಗತ್ಯ ಸಾಮಗ್ರಿಗಳು : ಮಕ್ಕಳು ರಚಿಸಿದ ಚಿತ್ರಗಳು<br>ವಿಧಾನ : ' ನೀರಿನ ಆಕರಗಳು ಮತ್ತು ಅವುಗಳಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳು ಸಂಬಂಧಿಸಿದಂತೆ ಮಕ್ಕಳು ಬರೆದ ಚಿತ್ರಗಳನ್ನು ಕೃತಿಸಂಪುಟದಿಂದ ತೆಗೆದು ಅದರ ಬಗ್ಗೆ ಸಹಜವಾಗಿ ಮಾತನಾಡಲು ಪ್ರೋತ್ಸಾಹಿಸುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಸಹಾಯ ಒದಗಿಸಲು ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು ಜೊತೆಗೆ 2ನೇ ಮತ್ತು 3ನೇತರಗತಿಯ ಮಕ್ಕಳಿಗೂ ಸ್ವತಂತ್ರವಾಗಿ ಮಾತನಾಡಲು ಅವಕಾಶ ನೀಡುವುದು.<br>*(ಸದರಿ ಚಟುವಟಿಕೆಯ ಮುಂದುವರೆದ ಭಾಗವು 55ನೇ ದಿನದಲ್ಲಿ ಮುಂದುವರೆಯುವುದು)* |

DRAFT 22.02.22

| | | | |
|---|---|---|---|
| | | ಉದ್ದೇಶಿತ ಬರಹ | ಸಾಮರ್ಥ್ಯ : ಮಕ್ಕಳೊಂದಿಗೆ ಬರವಣಿಗೆ, ಉದ್ದೇಶಿತ ಬರವಣಿಗೆ, ಅವಧಾನ ಮತ್ತು ಆಲಿಸುವುದು, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ<br>ಚಟುವಟಿಕೆ: 32 ಹಂಚಿತ ಬರೆಹ (ಗುರಿ : 2) **ECW-8**<br>ಉದ್ದೇಶಗಳು:<br>• ಹಂಚಿತ ಬರವಣಿಗೆಯನ್ನು ಪರಿಚಯಿಸುವುದು.<br>• ಉದ್ದೇಶಕ್ಕನುಸಾರವಾಗಿ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿಸುವುದು.<br>• ಅವಧಾನದೊಂದಿಗೆ ಉದ್ದೇಶಿತ ಬರೆಹದಲ್ಲಿ ತೊಡಗಿಸುವುದು.<br>• ಸೃಜನಾತ್ಮಕವಾಗಿ ಚಿಂತಿಸಿ ಅವುಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವುದು.<br>• ಪದ ಸಂಪತ್ತನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು: ಕಪ್ಪುಹಲಗೆ ಡ್ರಾಯಿಂಗ್ ಶೀಟ್<br>ವಿಧಾನ: ಹಂಚಿತ ಬರೆಹ ಚಟುವಟಿಕೆಗಳನ್ನು ತಿಂಗಳಿಗೆ ಎರಡು ಅಥವಾ ಮೂರು ಬಾರಿ ಆಯೋಜಿಸುವುದು. ಒಂದು ವಿಷಯವನ್ನು ನೀಡಿ ಆ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಕಥೆಯ ಮೂಲಕ ಅಥವಾ ಬರವಣಿಗೆ ಮೂಲಕ ಹಂಚಿಕೊಳ್ಳಲು ತಿಳಿಸುವುದು.<br>ಸಲಹಾತ್ಮಕ ಸೂಚಿತ ವಿಷಯಗಳು:–<br>• ಉದ್ಯಾನವನಕ್ಕೆ ನಮ್ಮ ಭೇಟಿ.<br>• ಟೀ ತಯಾರಿಸುವ ವಿಧಾನ.<br>• ನೆಚ್ಚಿನ ಕ್ರೀಡೆ ಇತ್ಯಾದಿ<br>ಗಮನಿಸಬೇಕಾದ ಅಂಶಗಳು:<br>• ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಾಕ್ಯಗಳನ್ನು ರಚಿಸಲು ಅಗತ್ಯ ಸುಳಿವುಗಳನ್ನು ನೀಡುವುದು. ಮಕ್ಕಳೊಂದಿಗೆ ಬರವಣಿಗೆಯಲ್ಲಿ ತೊಡಗಿಕೊಳ್ಳುವ ಮೂಲಕ ಬರವಣಿಗೆಯ ಪ್ರಾತ್ಯಕ್ಷಿಕೆ ನೀಡುವುದು<br>• ಶಿಕ್ಷಕರು ಮೊದಲನೇ ವಾಕ್ಯವನ್ನು ಬರೆದು ಓದುವುದು. ನಂತರ ಮಕ್ಕಳು ತಮ್ಮ ಸ್ವಂತ ವಾಕ್ಯವನ್ನು ಹೇಳಿ ಬರೆಯಲು ತಿಳಿಸುವುದು.<br>• ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಪ್ರತಿಕ್ರಿಯಿಸಲು ಅವಕಾಶ ಕಲ್ಪಿಸಬಹುದು. ಅಂತಹ ಸನ್ನಿವೇಶದಲ್ಲಿ ಶಿಕ್ಷಕರು ಅದನ್ನು ಶಾಲಾ ಭಾಷೆಯಲ್ಲಿ ಅನುವಾದಿಸಿ ಹೇಳುವುದು.<br>ತರಗತಿವಾರು ವಿವರ: 1ನೇ ತರಗತಿಯವರು ವಿವರಿಸಿದ ಅಂಶಗಳನ್ನು 2ನೇ ಹಾಗೂ 3ನೇ ತರಗತಿಯ ಮಕ್ಕಳು ಬರವಣಿಗೆ ಮೂಲಕ ಅಭಿವ್ಯಕ್ತಿಪಡಿಸಲು ತಿಳಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | ಹೊರಾಂಗಣ ಆಟಗಳು | ಚಟುವಟಿಕೆ –32 ಸಂಗೀತ ಕುರ್ಚಿ<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ,<br>ಬೇಕಾಗುವ ಸಾಮಗ್ರಿ: ಕುರ್ಚಿಗಳು ಮತ್ತು ಡ್ರಮ್/ಸಂಗೀತ<br>ವಿಧಾನ:<br>• ದೊಡ್ಡ ವೃತ್ತದಲ್ಲಿ 5–6 ಕುರ್ಚಿಗಳನ್ನು ಇರಿಸುವುದು.<br>• ಆಟದಲ್ಲಿ ಭಾಗವಹಿಸುವ ಮಕ್ಕಳ ಸಂಖ್ಯೆಗಿಂತ ಒಂದು ಕುರ್ಚಿಯನ್ನು ಕಡಿಮೆ ಇರಿಸುವುದು.<br>• ಮಕ್ಕಳನ್ನು ಕುರ್ಚಿಗಳ ಸುತ್ತಲೂ ಓಡಲು ಹೇಳಿ ಮತ್ತು ಸಂಗೀತವನ್ನು ನುಡಿಸುವುದು<br>• ನೀವು ಸಂಗೀತವನ್ನು ನುಡಿಸುವುದನ್ನು ನಿಲ್ಲಿಸಿದ ತಕ್ಷಣ ಕುರ್ಚಿಯನ್ನು ಹುಡುಕಲು ಮತ್ತು ಕುಳಿತುಕೊಳ್ಳಲು ಸೂಚಿಸುವುದು<br>• ಈ ಹಂತದಲ್ಲಿ ಕುರ್ಚಿಸಿಗದ ಮಗು ಆಟದಿಂದ ಹೊರಗುಳಿಯುತ್ತದೆ. ಈಗ ಕುರ್ಚಿಗಳಲ್ಲಿ ಒಂದನ್ನು ತೆಗೆದುಹಾಕಿ ಮತ್ತು | |

DRAFT 22.02.22

| | | |
|---|---|---|
| | | ಒಂದೇ ಮಗು ಉಳಿಯುವವರೆಗೆ ಆಟವನ್ನು ಮುಂದುವರಿಸಿ. ಅವರು ವಿಜೇತರಾಗುತ್ತಾರೆ.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರೆಸುವುದು** |
| | ಕಥಾ ಸಮಯ | **ಶೀರ್ಷಿಕೆ : ಗ್ರಾಂಡ್‌ಪಾಸ್ ಗಿಫ್ಟ**<br>**ಸಾಮಗ್ರಿಗಳು : ಸಾಹಿತ್ಯ, ಬಿಳಿಹಾಳೆ, ಪೆನ್ಸಿಲ್, ಕ್ರೆಯಾನ್ಸ**<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ **ಸೃಜನ ಶೀಲತೆಯನ್ನು ಬೆಳೆಸುವುದು.**<br>➢ **ಪ್ರಶ್ನಿಸುವ ಮನೋಭಾವಉಂಟುಮಾಡುವುದು.**<br>➢ **ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವ ಆಸಕ್ತಿಯನ್ನು ಬೆಳೆಸುವುದು.**<br><br>**ವಿಧಾನ :**<br>➢ ಶಿಕ್ಷಕರು ಇಂಗ್ಲೀಷನಲ್ಲಿ ಕಥೆಯನ್ನು ಹೇಳುವುದು.<br>➢ ಮಾತೃಭಾಷೆಯಲ್ಲಿ ಕಥೆಯ ಸಾರಾಂಶ ಹೇಳುವುದು.<br>➢ ಇಂಗ್ಲೀಷ ಮತ್ತು ಮಾತೃಭಾಷೆಯಲ್ಲಿ ಕಥೆಯನ್ನು ಹೇಳುತ್ತಾ ಗೊಂಬೆಗಳನ್ನು ಪ್ರದರ್ಶಿಸುವುದು.<br>➢ ಮಕ್ಕಳಿಗೆ ಲೇಖನ ಸಾಮಗ್ರಿಗಳನ್ನು ನೀಡಿ, ತಮಗೆ ಇಷ್ಟವಾದ ಕಥೆಯ ಪಾತ್ರಗಳ ಚಿತ್ರಗಳನ್ನು ಚಿತ್ರಿಸಲು ಹೇಳುವುದು.<br>➢ ನಂತರ ಬಣ್ಣ ಹಾಕಲು ಸಹಕರಿಸುವುದು. |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮಕ್ಕಳು ಖುಷಿಯಿಂದ, ತಮಾಷೆಯಿಂದ ಇರುವ ಚಟುವಟಿಕೆಗಳನ್ನು ನಿರ್ವಹಿಸಿ.<br>**ಉದಾ : 'ಮ'** ಅಕ್ಷರದಿಂದ ಪ್ರಾರಂಭವಾಗುವ ವಸ್ತುಗಳ ಹೆಸರುಗಳನ್ನು ಮನೆಯಿಂದ ತಿಳಿದುಕೊಂಡು ಬರಲಿ ಮತ್ತು ಮುಂದಿನವಾರ ಅವುಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಲಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

## ವಾರ–9 ದಿನ–54 (ಶನಿವಾರ)

| | | | | |
|---|---|---|---|---|
| | ಪ್ರತಿಬಿಂಬ (ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | | |
| | ನನ್ನ ಸಾಧನೆ | | | |
| | ಕಲಿಕಾಫಲಗಳು | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
| | 1 ರಿಂದ 10ರ ವರೆಗೆ ಅಂಕಿ ಸಂಖ್ಯೆಗಳನ್ನು ಬರೆಯುವರು. | | | |
| | ವಿನ್ಯಾಸಗಳನ್ನು ರಚಿಸಿ ವಿಸ್ತರಿಸುವರು. | | | |
| | ಸಂಕೀರ್ಣ ಪದಬಂಧ/ಪಜಲ್/ಮಾಯಾಜಾಲ ಗಳನ್ನು ಬಿಡಿಸುವರು. | | | |
| | ವಸ್ತು ಮತ್ತು ಘಟನೆಗಳನ್ನು ಅನುಕ್ರಮವಾಗಿ ಯೋಚಿಸುವರು, ಜೋಡಿಸುವರು ಮತ್ತು ನಿರೂಪಿಸುವರು. | | | |
| | ಆಲಿಸಿದ ನಂತರ ಗ್ರಹಿಸಿ ಉತ್ತರಿಸುವರು. | | | |
| | ಹೆಚ್ಚು ವಿವರಗಳನ್ನು ಪೂರ್ಣ ವಾಕ್ಯಗಳಲ್ಲಿ ವಿವರಿಸುವರು | | | |

DRAFT 22.02.22

| | | | | |
|---|---|---|---|---|
| | ಮತ್ತು ಪುನ: ಹೇಳುವರು. | | | |
| | ಅರ್ಥಪೂರ್ಣ ಸಂಭಾಷಣೆಯಲ್ಲಿ ತೊಡಗಿಸಿಕೊಳ್ಳುವರು. | | | |
| | ಓದುವ ಮೂಲೆಯಿಂದ ಪುಸ್ತಕವನ್ನು ಆಯ್ಕೆ ಮಾಡುವರು. | | | |
| | ಚಿತ್ರಗಳನ್ನು ಗ್ರಹಿಸಿಕೊಂಡು ಅರ್ಥಪೂರ್ಣ ಪದಗಳನ್ನು ಹೇಳುವರು. | | | |
| | ಚಿತ್ರಗಳನ್ನು ಬಿಡಿಸಲು ಸಾಮಗ್ರಿಗಳನ್ನು ಸುಲಭವಾಗಿ ಬಳಸುವರು. | | | |

## ವಿದ್ಯಾಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

**ವಾರ–10** **ದಿನ–55 (ಸೋಮವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 55 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1:**<br>ಮಕ್ಕಳು ನಿಧಾನವಾಗಿ ಓಡುತ್ತಾ ತರಗತಿಯನ್ನು ಪ್ರವೇಶಿಸಲಿ. (slow motion)<br>1. ರಾಕೆಟ್ ಚಪ್ಪಾಳೆಯನ್ನು ಹೇಳಿಕೊಡುವುದು.<br>2. ಮಕ್ಕಳು ರಾಕೆಟ್ ಚಪ್ಪಾಳೆತಟ್ಟುತ್ತಾ ತರಗತಿಯಲ್ಲಿ ವೃತ್ತಾಕಾರವಾಗಿ ನಿಲ್ಲುವುದು. |
| | ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | ವಿಧಾನ:<br>• ಮಕ್ಕಳನ್ನು ವೃತ್ತ ಅಥವಾ ಅರ್ಧವೃತ್ತಾಕಾರದಲ್ಲಿ ಕೂರಿಸಿ.<br>• ಶಿಕ್ಷಕರು ಚಿತ್ರವನ್ನು ತೋರಿಸುತ್ತಾರೆ ಮತ್ತು ಚಿಹ್ನೆಯನ್ನು ಊಹಿಸಲು ಮಕ್ಕಳಿಗೆ ಕೇಳುತ್ತಾರೆ. ಉದಾ : ಕುಡಿಯುವ ನೀರು, ಅಪಾಯ, ಹ್ಯಾಂಡ್ ವಾಷ್, ಶೌಚಾಲಯ.<br>• ಮುಂದೆ ಪ್ರತಿ ಮಗುವೂ ನಿಂತು ಚಿಹ್ನೆಗಳು ಅಥವಾ ಸಹಿಯ ಫ್ಲಾಶ್ ಕಾರ್ಡ್ ಗಳನ್ನು ತೋರಿಸಬೇಕು ಮತ್ತು ಊಹಿಸಲು ತಮ್ಮ ಸ್ನೇಹಿತರಿಗೆ ಕೇಳಬೇಕು.<br>• ಶಿಕ್ಷಕರು ಪ್ರತಿ ಮಗುವಿಗೆ ಅವಕಾಶ ನೀಡಬೇಕು. |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿದೇ೯ಶಿತ) ಚಟುವಟಿಕೆ) | ಸಾಮರ್ಥ್ಯ: ಹಗುರ, ಭಾರದ ಪರಿಕಲ್ಪನೆಯೊಂದಿಗೆ ಹೋಲಿಸುವುದು<br>ಚಟುವಟಿಕೆ 32 : ಹೋಲಿಕೆ – ಭಾರ ಮತ್ತು ಹಗುರ ( ಗುರಿ–3 )<br>ಉದ್ದೇಶ:– ಭಾರ ಮತ್ತು ಹಗುರಗಳಿಗೆ ಹೋಲಿಕೆ ಮಾಡುವುದು.<br>ಸಾಮಗ್ರಿಗಳು: ಹತ್ತಿಚೆಂಡು, ಟೆನ್ನಿಸ್ ಬಾಲ್ / ಫುಟ್ ಬಾಲ್, ಕಲ್ಲು, ಕಬ್ಬಿಣ, ಹತ್ತಿ ಬಟ್ಟೆ<br>(ಹತ್ತಿಚೆಂಡು ಮತ್ತು ಫುಟ್ ಬಾಲ್ / ಟೆನಿಸ್ ಚೆಂಡಿನ ಗಾತ್ರವು ಒಂದೇ ತೆರನಾಗಿರಬೇಕು.)<br>ವಿಧಾನ : ಮಕ್ಕಳಿಗೆ ಎರಡೂ ಚೆಂಡುಗಳನ್ನು ಕೈಯಲ್ಲಿ ಎತ್ತಿ ಹಿಡಿಯಲು ಹೇಳುವುದು ಹಗುರ ಯಾವುದು? ಭಾರ ಯಾವುದೆಂದು ಕೇಳುವುದು? ಭಾರ ಮತ್ತು ಹಗುರಕ್ಕೆ ಹೋಲಿಕೆ ಮಾಡಲು ಹೇಳುವುದು ಮತ್ತು ಮಕ್ಕಳು ಅವುಗಳನ್ನು ಗುರುತಿಸಲು ಹೇಳುವುದು.<br>2ನೇ ತರಗತಿ<br>ಭಾರ ಮತ್ತು ಹಗುರಕ್ಕೆ ಒಂದೇ ಅಳತೆಯುಳ್ಳ ಫುಟ್‌ಬಾಲ್ ಮತ್ತು ಹತ್ತಿಯ ಬಾಲ್ ನೀಡಿ ಯಾವುದು ಭಾರ ಯಾವುದ ಹಗುರ ಎಂದು ಪ್ರಶ್ನಿಸುವುದು. (ಕಲ್ಲು, ಕಬ್ಬಿಣ, ಹತ್ತಿ ಬಟ್ಟೆ ಇತ್ಯಾದಿ)<br>3ನೇ ತರಗತಿ |

DRAFT 22.02.22

| | | | |
|---|---|---|---|
| | | | ಪರಿಸರದಲ್ಲಿ ಕಾಣುವ ಹಲವು ವಸ್ತುಗಳನ್ನು ಭಾರ ಹಗುರಕ್ಕೆ ಹೋಲಿಕೆ ಮಾಡಿ ಹೆಸರುಗಳನ್ನು ಪಟ್ಟಿ ಮಾಡಿಸುವುದು.<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: I. L. -31,32 (ತರಗತಿ 1, 2, 3)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಎ.ಟ್ರೇಸ್ ಮಾಡುವುದು. ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಅಕ್ಷರಗಳ ಆಕಾರಕ್ಕೆ ಅನುಗುಣವಾಗಿ ಚಿತ್ರಗಳನ್ನು ಊಹಿಸುತ್ತಾರೆ..<br>ಸಾಮಗ್ರಿಗಳು : ಮರಳು.<br>ವಿಧಾನ; ಮಕ್ಕಳು ತಾವು ತಿದ್ದಿದ ಅಕ್ಷರಗಳಿಗೆ ಚಿತ್ರಗಳನ್ನು ರಚಿಸಲು ಹೇಳುವುದು ಮತ್ತು ಸಂಖ್ಯೆಗಳಿಗನುಗುಣವಾಗಿ ವಸ್ತುಗಳನ್ನು ಜೋಡಿಸುವುದು.ಮಕ್ಕಳಿಗೆ ತಮಗೆ ಗೊತ್ತಿರುವ ಕನ್ನಡ,ಇಂಗ್ಲೀಷ್ ಹಾಗೂ ಅಂಕಿಗಳಿಂದ ಚಿತ್ರ ರಚಿಸಲು ಪ್ರೋತ್ಸಾಹಿಸುವುದು.<br>ವಿವರ; 2ಮತ್ತು 3 ನೇ ತರಗತಿಗೆ ತಮಗೆ ಗೊತ್ತಿರುವ ಕನ್ನಡ,ಇಂಗ್ಲೀಷ್ ಹಾಗೂ ಅಂಕಿಗಳಿಂದ ಚಿತ್ರ ರಚಿಸಲು ಪ್ರೋತ್ಸಾಹಿಸುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ : ಆಲಿಸುವಿಕೆ, ಸೃಜನಾತ್ಮಕ, ಸ್ವ– ಅಭಿವ್ಯಕ್ತಿ, ಔಪಚಾರಿಕ ಮಾತುಗಾರಿಕೆ,**<br>**ಚಟುವಟಿಕೆ: 8. ಆಶುಭಾಷಣ (ಗುರಿ–2) ECL-6**<br>**ಉದ್ದೇಶ :**<br>*** ಆಯ್ದುಕೊಂಡ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡುವುದು.**<br>*** ಔಪಚಾರಿಕ ಮಾತುಗಾರಿಕೆಯ ಕೌಶಲವನ್ನು ಬೆಳೆಸುವುದು.**<br>*** ಆಲಿಸಿದ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳುವುದು.**<br>*** ಸೃಜನಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.**<br>**ಸಾಮಗ್ರಿ : ಪ್ರಾಣಿ, ಪಕ್ಷಿ, ವಾಹನಗಳ ಚಿತ್ರಗಳ ಮಿಂಚುಪಟ್ಟಿಗಳು**<br>**ವಿಧಾನ : ಡಬ್ಬದಲ್ಲಿ ಪ್ರಾಣಿ, ಪಕ್ಷಿ, ವಿವಿಧ ವಾಹನಗಳ ಚಿತ್ರಗಳ ಮಿಂಚುಪಟ್ಟಿಗಳನ್ನು ಹಾಕುವುದು, . ಮಕ್ಕಳಿಗೆ ಡಬ್ಬದಲ್ಲಿ ಕೈ ಹಾಕಿ ಯಾವುದಾದರೂ ಒಂದು ಮಿಂಚುಪಟ್ಟಿಯನ್ನು ತೆಗೆದುಕೊಂಡು ಅದರಲ್ಲಿರುವ ಚಿತ್ರದ ಬಗ್ಗೆ ತಮ್ಮದೇ ಮಾತುಗಳಲ್ಲಿ ಹೇಳಲು ಅವಕಾಶ ನೀಡುವುದು.**<br>**ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಆಯ್ಕೆ ಮಾಡಿಕೊಂಡ ವಿಷಯದ ಕುರಿತು 2 ರಿಂದ 3 ನಿಮಿಷಗಳ ಕಾಲ ಮಾತನಾಡುವುದು.. 3ನೇ ತರಗತಿಯ ಮಕ್ಕಳು ವಿಷಯದ ದೈನಂದಿನ ಬಳಕೆ ಅಥವಾ ಅನ್ವಯಿಕ ಅಂಶಗಳ ಬಗ್ಗೆ ಮಾತನಾಡುವುದು.** |
| | | **ಅರ್ಥಗ್ರಹಿಕೆಯೊಂದಿಗಿನ ಓದು** | **ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ....18**<br>**• ಚಿತ್ರ ಸಂಪುಟ (ಗುರಿ–2) ವಿಷಯ: 'ನೀರಿನ ಆಕರಗಳು ಮತ್ತು ಅವುಗಳಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳು', ಅವಧಿ :16**<br>**ಉದ್ದೇಶ:**<br>**• ಮಕ್ಕಳು ಗುಂಪಿನಲ್ಲಿ ಕುಳಿತು ತಯಾರಿಸಿದ ಗೋಡೆ ಪತ್ರಿಕೆಗಳನ್ನು ರಚಿಸಿ ಮಂಡಿಸುವುದು**<br>**ಅಗತ್ಯ ಸಾಮಗ್ರಿಗಳು : ಚಾರ್ಟ್‌ಗಳು, ಸ್ವರಚಿತ ಚಿತ್ರಗಳು, ಕ್ರೇಯಾನ್ಸ್, ಅಂಟು, ಇಂಚುಪಟ್ಟಿ, ಟ್ಯಾಗ್**<br>**ವಿಧಾನ : ಮಕ್ಕಳು ಗುಂಪುಗಳಲ್ಲಿ ಅಗತ್ಯ ಸಾಮಗ್ರಿ ಬಳಸಿ ನೀರಿನ ಆಕರಗಳು ಮತ್ತು ಅವುಗಳಲ್ಲಿ ನೋಡಬಹುದಾದ ಪ್ರಾಣಿಗಳು/ಪಕ್ಷಿಗಳು/ವಸ್ತುಗಳ ಬಗ್ಗೆ ಗೋಡೆ ಪತ್ರಿಕೆ ತಯಾರಿಸಲು ಅಗತ್ಯ ಸಹಾಯ ನೀಡುವುದು. ರಚಿಸಿದ ಗೋಡೆ ಪತ್ರಿಕೆಯನ್ನು ತರಗತಿಯಲ್ಲಿ ಮಂಡಿಸಲು ಅವಕಾಶ ನೀಡುವುದು.** |

DRAFT 22.02.22

| | | | |
|---|---|---|---|
| | | | ಸಿದ್ಧವಾದ ಗೋಡೆಪತ್ರಿಕೆಗಳನ್ನು ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.<br>ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳಿಗೆ ಸಹಾಯ ಒದಗಿಸಿ ಗುಂಪುಗಳಲ್ಲಿ ಯೋಜನಾಕಾರ್ಯಗಳನ್ನು ಮಾಡಲು ತಿಳಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ, ಆಲಿಸಿ ಅರ್ಥ ಮಾಡಿಕೊಳ್ಳುವುದು, ಪರಿಸರದ ಅರಿವು.<br>ಚಟುವಟಿಕೆ....33 ಪಟ್ಟಿ ಮಾಡೋಣ (ಗುರಿ–2) **ECW-10**<br>ಉದ್ದೇಶಗಳು:<br>• ಉದ್ದೇಶಕ್ಕನುಸಾರವಾಗಿ ಬರವಣಿಗೆ ಮಾಡಲು ಅವಕಾಶ ನೀಡುವುದು.<br>• ಸೃಜನಶೀಲ ಚಿಂತನೆಯನ್ನು ಬೆಳೆಸುವುದು.<br>• ಪರಿಸರದ ಅರಿವು ಮೂಡಿಸುವುದು.<br>• ಪದಸಂಪತ್ತನ್ನು ಹೆಚ್ಚಿಸುವುದು.<br>• ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಕಾಗದ, ಕ್ರೇಯಾನ್ಸ್,<br>ವಿಧಾನ : ಮಕ್ಕಳ ಪದಸಂಪತ್ತನ್ನು ಹೆಚ್ಚಿಸಲು ಹಾಗೂ ಉದ್ದೇಶಿತ ಬರವಣಿಗೆಗೆ ಅವಕಾಶ ಕಲ್ಪಿಸಲು ಮಕ್ಕಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಲು ತಿಳಿಸಿ.<br>ಸೂಚಿತ ವಿಷಯ: ತಿಂಡಿಗಳು<br>ಇಡೀ ತರಗತಿಯನ್ನು ಒಳಗೊಂಡಂತೆ ಒಂದು ಚಾರ್ಟ್‌ಪೇಪರ್‌ನಲ್ಲಿ ಪಟ್ಟಿ ಮಾಡುವ ಚಟುವಟಿಕೆಯನ್ನು ಆಯೋಜಿಸಬಹುದು. ಈ ಚಾರ್ಟ್‌ನಲ್ಲಿ ಬಳಸಬಹುದಾದ ಸಾಮಾನ್ಯ ಪದಗಳ ಪಟ್ಟಿಯನ್ನು ಶಿಕ್ಷಕರೇ ಸಿದ್ಧಪಡಿಸಿ, ಮಕ್ಕಳು ಇವುಗಳನ್ನು ನೋಡಲು ಹಾಗೂ ಓದಲು ಸಹಾಯಕವಾಗುವಂತೆ ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.<br>ತರಗತಿವಾರು ವಿವರ: 1ನೇ ತರಗತಿಯವರು ತಯಾರಿಸಿರುವ ಪಟ್ಟಿಗೆ 2ನೇ ತರಗತಿಯ ಮಕ್ಕಳು ಹೆಚ್ಚುವರಿಯಾಗಿ ಪದಗಳನ್ನು ಸೇರಿಸಲಿ. 3ನೇ ತರಗತಿಯವರು ಪಟ್ಟಿಯಲ್ಲಿರುವ ಪದಗಳಿಗೆ ಸ್ವಂತ ವಾಕ್ಯಗಳನ್ನು ರಚಿಸಲು ಅವಕಾಶ ಮಾಡಿಕೊಡಿ. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | ಹೊರಾಂಗಣ ಆಟಗಳು | ಚಟುವಟಿಕೆ: ಹಗ್ಗದ ಆಟ<br>ಸಾಮರ್ಥ್ಯ: ಚುರುಕುತನ , ಕ್ಷಿಪ್ರ ಚಲನೆಯ ಅಭಿವೃದ್ಧಿ<br>ಸಾಮಗ್ರಿ: ಸ್ಕಿಪ್ಪಿಂಗ್ ರೋಪ್<br>ವಿಧಾನ :<br>• ಇಬ್ಬರು ಮಕ್ಕಳು ಹಗ್ಗದ ಎರಡು ತುದಿಗಳನ್ನು ಹಿಡಿದು ಎದುರು ಬದುರಾಗಿ ಕೂರುವುದು .<br>• ಉಳಿದ ಮಕ್ಕಳು ಓಡಿ ಬಂದು ಹಗ್ಗದಮೇಲಿಂದ ನೆಗೆಯಲು ಸೂಚಿಸುವುದು .<br>• **ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೆ ಇದೆ ಚಟುವಟಿಕೆ ಮುಂದುವರೆಸುವುದು.** | |
| | ಕಥಾ ಸಮಯ | ಶೀರ್ಷಿಕೆ : ಕೊಕ್ಕರೆ ಮತ್ತು ಏಡಿ<br>ಸಾಮಗ್ರಿಗಳು : ಕಥೆಯ ಸಾಹಿತ್ಯ<br>ಉದ್ದೇಶ :<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ನಿರರ್ಗಳವಾಗಿ ಮಾತನಾಡುವ ಕೌಶಲ ರೂಢಿಸುವುದು. | |

<table>
<tr>
<td></td>
<td></td>
<td>
ವಿಧಾನ :<br>
ಕಥಾ ಸಾಹಿತ್ಯ ನಿರೂಪಣೆ<br>
➢ ಶಿಕ್ಷಕರು ಕಥೆ ಹೇಳುವ ಮುನ್ನಕಥೆಯನ್ನು ಓದಿ ಅಭ್ಯೆಸಿಕೊಳ್ಳಬೇಕು.<br>
➢ ಸೂಕ್ತ ಆಂಗಿಕ ಚಲನೆಯೊಂದಿಗೆ ಸರಳ ಭಾಷೆಯಲ್ಲಿಕಥೆಯನ್ನು ಹೇಳಬೇಕು.<br>
➢ ಕಥೆ ಹೇಳುವಾಗ ಶಿಕ್ಷಕರು ಮಕ್ಕಳೊಂದಿಗೆ ವೃತ್ತದಲ್ಲಿ ಕುಳಿತುಕೊಳ್ಳಬೇಕು.<br>
➢ ಸರಳ ಪ್ರಶ್ನೆಗಳ್ನು ಕೇಳಿ ಕಥೆಯನ್ನುಅರ್ಥೈಸಬೇಕು.<br>
ಕಥೆ :<br>
ಒಂದು ಕೊಳದಲ್ಲಿ ಮೀನುಗಳು, ಕಪ್ಪೆಗಳು, ಏಡಿಗಳು ಹಾಗೂ ಕೊಕ್ಕರೆಯು ವಾಸವಾಗಿತ್ತು. ಅವೆಲ್ಲವೂಅನ್ಯೊನ್ಯವಾಗಿಜೀವನ ನಡೆಸುತ್ತಿದ್ದವು. ಇದ್ದಕ್ಕಿದಂತೆಕೊಕ್ಕರೆಗೆಒಂದುಕೆಟ್ಟ ಆಲೋಚನೆ ಬಂದಿತು. ಆಗ ಕೊಕ್ಕರೆಯು ಕೊಳದಲ್ಲಿ ವಾಸವಾಗಿದ್ದಎಲ್ಲಾ ಪ್ರಾಣಿಗಳನ್ನು ಒಂದೆಡೆ ಸೇರಿಸಿ ಹೀಗೆ ಹೇಳಿತು. “ಕೊಳದಲಲ್ಲಿ ನೀರುಕಡಿಮೆಯಾಗುತ್ತಾ ಬರುತ್ತಿದ್ದುಕಾಲಕ್ರಮೇಣ ಕೊಳದಲ್ಲಿನ ನೀರು ಸಂಪೂರ್ಣವಾಗಿ ಬತ್ತಿ ಹೋಗಿ ನಾವು ಬದುಕಲು ಸಾಧ್ಯವಾಗದೇಇರಬಹುದು. ಹಾಗಾಗಿ ನಾನು ಇನ್ನೋಂದುದೊಡ್ಡದಾದ ಮತ್ತು ನೀರು ಸಂಪೂರ್ಣವಾಗಿತುಂಬಿರುವ ಕೊಳವನ್ನು ನೋಡಿದ್ದೇನೆ. ನಾವೆಲ್ಲರೂಅಲ್ಲಿಗೆ ಹೋಗೋಣಎಂದಿತು. ಆಗ ಎಲ್ಲರೂ ಖುಷಿಯಿಂದಕೊಕ್ಕರೆಯ ಮಾತನ್ನುಒಪ್ಪಿಕೊಂಡವು. ನಾವೆಲ್ಲರೂಒಟ್ಟಿಗೆ ಹೋಗಲು ಸಾಧ್ಯವಿಲ್ಲ ಹಾಗಾಗಿ ನಾನು ಒಬ್ಬೊಬ್ಬರನ್ನು ನನ್ನಕೊಕ್ಕಿನಲ್ಲಿಕಚ್ಚಿಕೊಂಡು ಹೋಗಿ, ಪಕ್ಕದ ಕೊಳಕ್ಕೆ ಬಿಡುತ್ತೇನೆಎಂದು ಹೇಳಿತು. ಆಗ ಕೊಕ್ಕರೆಯು ಮೊದಲುಒಂದೊಂದೆ ಮೀನನ್ನುತನ್ನಕೊಕಿನಲ್ಲಿಕಚ್ಚಿಕೊಂಡು ಹಾರಿ ಹೋಗಿ ಮರದ ಮೇಲೆ ಕುಳಿತು ಆ ಮೀನನ್ನುತಿಂದುಅದರ ಎಲುಬನ್ನು ಮರದ ಕೆಳಗೆ ಹಾಕುತ್ತಿತ್ತು. ಹೀಗೆ ಸ್ವಲ್ಪ ದಿನಗಳ ವರೆಗೂಕೊಕ್ಕರೆಯ ಮೋಸದಾಟ ಸಾಗಿತ್ತು. ಕೊನೆಗೆ ಒಂದು ದಿನ ಒಂದುದಪ್ಪಏಡಿಯ ಸರದಿ ಬಂದಿತು. ಏಡಿಯು ಹೇಳಿತು ನೀನು ನನ್ನನ್ನುಕೊಕ್ಕಿನಲ್ಲಿಕಚ್ಚಿಕೊಂಡುಹಾರಲು ಸಾಧ್ಯವಿಲ್ಲ. ಹಾಗಾಗಿ ನಾನು ನಿನ್ನಕುತ್ತಿಗೆಯ ಮೇಲೆ ಕುಳಿತುಕೊಳ್ಳುತ್ತೇನೆ ಎಂದು ಹೇಳಿದಾಗ ಕೊಕ್ಕರೆಯು ವಿಧಿಯಿಲ್ಲದೇಒಪ್ಪಿಕೊಂಡಿತು. ಕೊಕ್ಕರೆಯುಏಡಿಯನ್ನುತನ್ನಕುತ್ತಿಗೆಯ ಮೇಲೆ ಕೂರಿಸಿ ಕೊಂಡು ಆ ಮರದಮೇಲೆ ಕುಳಿತಿತು. ಏಡಿಯುಕೊಕ್ಕರೆಯಕುತ್ತಿಗೆಯಿಂದ ಕೆಳಗೆ ಇಳಿಯದೆ ಮರದ ಕೆಳಗೆ ಬಿದ್ದಿದ್ದ ಮೀನಿನ ಎಲಬುಗಳನ್ನು ಗಮನಿಸಿತು. ಏಡಗೆಕೊಕ್ಕರೆಯ ಮೋಸದಅರಿವಾಗಿತನ್ನಗಟ್ಟಿಯಾದ ಕೊಂಬಿನಿಂದಕೊಕ್ಕರೆಯಕುತ್ತಿಗೆಯನ್ನುಕಚ್ಚಿ ಸಾಯಿಸಿತು.ಏಡಿಯುತನ್ನ ಸ್ನೇಹಿತರನ್ನು ಕಳೆದುಕೊಂಡ ಬೇಸರದಿಂದತಾನು ಮೊದಲು ವಾಸವಾಗಿದ್ದ ಕೊಳದ ಕಡೆಗೆ ನಿಧಾನವಾಗಿ ಚಲಿಸುತ್ತ ಹೋಯಿತು ಮತ್ತು ಆ ಕೊಳದಲ್ಲೇ ವಾಸಮಾಡಲು ಪ್ರಾರಂಭಿಸಿತು.<br>
ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.<br>
• ಕೊಕ್ಕರೆ ಜೊತೆ ಯಾವ ಯಾವ ಪ್ರಾಣಿಗಳು ವಾಸಿಸುತ್ತಿದ್ದವು?<br>
• ಆಹಾರ ತಿನ್ನಲು ಕೊಕ್ಕರೆ ಹೂಡಿದ ಉಪಾಯವೇನು?<br>
(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು)
</td>
</tr>
<tr>
<td></td>
<td>ಮತ್ತೆ ಸಿಗೋಣ</td>
<td>
• ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>
• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>
• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>
• ಮುಂದಿನ ವಾರದಲ್ಲಿ “ಹೊರಸಂಚಾರಕ್ಕೆ ಯೋಜನೆ” ರೂಪಿಸಿ ಮಕ್ಕಳು ವಿವಿಧ ಸಸ್ಯಗಳನ್ನು, ಮರಗಳನ್ನು ವೀಕ್ಷಿಸಲಿ ಇದಕ್ಕಾಗಿ ಅಗತ್ಯ ಸಿದ್ಧತೆ ತಯಾರಿ ಮಾಡಿಕೊಳ್ಳುವುದು.
</td>
</tr>
<tr><td></td><td></td><td></td></tr>
<tr><td></td><td></td><td></td></tr>
</table>

# ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

## ವಾರ–10 ದಿನ–56 (ಮಂಗಳವಾರ)

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 56 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | 55 ನೇ ದಿನದ ಚಟುವಟಿಕೆಗಳನ್ನು ಮಾಡಿಸುವುದು |
| | ಮಾತು ಕತೆ | ದಿನ 49 ರ ಮಾತುಕತೆ ಚಟುವಟಿಕೆಯನ್ನು ಮುಂದುವರೆಸಿ. |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ( ನಿರ್ದೇಶಿತ) ಚಟುವಟಿಕೆ) | ಸಾಮರ್ಥ್ಯ: ವೀಕ್ಷಣೆ, ಗುರುತಿಸುವುದು, ಹೆಚ್ಚು ಕಡಿಮೆ ಸಮ, ಪರಿಸರದ ಅರಿವು<br>ಚಟುವಟಿಕೆ 33 ಹೆಚ್ಚು ಕಡಿಮೆ ಸಮ ( ಗುರಿ–3 )<br>ಉದ್ದೇಶ:– ಹೆಚ್ಚು–ಕಡಿಮೆ–ಸಮಗಳನ್ನು ಗುರುತಿಸುವುದು.<br>ಸಾಮಗ್ರಿಗಳು: ವಿವಿಧ ಪ್ರಮಾಣದ ಧಾನ್ಯಗಳ ಸಂಗ್ರಹ<br>ವಿಧಾನ: ಅಕ್ಕಿ, ಬೇಳೆ, ರಾಗಿ, ಬೀಜ, ಇತ್ಯಾದಿ ಸ್ಥಳಿಯವಾಗಿ ದೊರೆಯುವ ಧಾನ್ಯಗಳನ್ನು ಸಂಗ್ರಹಿಸುವುದು. ಧಾನ್ಯಗಳನ್ನು ಮಕ್ಕಳು ವೀಕ್ಷಿಸುವುದು. ಧಾನ್ಯಗಳನ್ನು ಹೆಸರಿಸಿ ಒಂದೇ ಗಾತ್ರದ ಬಟ್ಟಲುಗಳಲ್ಲಿ ಧಾನ್ಯಗಳನ್ನು ಸಮ ಪ್ರಮಾಣದಲ್ಲಿ ಇರುವುದನ್ನು ಗುರುತಿಸುವುದು. ಒಂದು ಬಟ್ಟಲದಲ್ಲಿ ಹೆಚ್ಚು ಧಾನ್ಯ ಮತ್ತೊಂದು ಬಟ್ಟಲದಲ್ಲಿ ಕಡಿಮೆ ಧಾನ್ಯ ಹಾಕಿ ಯಾವುದರಲ್ಲಿ ಹೆಚ್ಚು ಯಾವುದರಲ್ಲಿ ಕಡಿಮೆ ಇದೆ ಎಂಬುವುದನ್ನು ಗುರುತಿಸಲು ಹೇಳುವುದು. ಇದನ್ನು ಪುನರಾರ್ವತಿಸಿ ಹೆಚ್ಚು ಕಡಿಮೆ ಸಮ ಗುರುತಿಸಲು ಹೇಳುವುದು. ತಮ್ಮ ಪರಿಸರದಲ್ಲಿ ಬೆಳೆಯುವ ಧಾನ್ಯಗಳನ್ನು ಹೋಲಿಸಿ ಹೆಚ್ಚು ಕಡಿಮೆ ಸಮ ಗುರುತಿಸುವುದು.<br>2 ನೇ ತರಗತಿ<br>ಸ್ಥಳೀಯ ಪರಿಸರದಲ್ಲಿ ಲಭ್ಯವಾಗುವ ಕಲ್ಲು, ಗೋಲಿ, ಹುಣಸೇ ಬೀಜ ಮತ್ತು ಧಾನ್ಯಗಳನ್ನು ಬಳಸಿ ವಿಭಿನ್ನ ಪಾತ್ರೆಗಳಿಗೆ ತುಂಬಿ ಹೆಚು–ಕಡಿಮೆ–ಸಮ ತೋರಿಸುವುದು.<br>1) ಯಾವ ಪಾತ್ರೆಯಲ್ಲಿ ಹೆಚ್ಚು ಇದೆ?<br>2) ಯಾವ ಪಾತ್ರೆಯಲ್ಲಿ ಕಡಿಮೆ ಇದೆ?<br>3ನೇ ತರಗತಿ<br>ನಮ್ಮ ಸುತ್ತಲಿನ ಪರಿಸರದಲ್ಲಿ ಬೆಳೆಯುವ ಧಾನ್ಯಗಳ ರಾಶಿಗಳನ್ನು ಹೋಲಿಸಿ ಹೆಚ್ಚು–ಕಡಿಮೆ–ಸಮ ತಿಳಿಸುವುದು.<br>1) ಎರಡು ಸಮ ಚೀಲ ರಾಗಿಯಲ್ಲಿ ಯಾವುದು ಹೆಚ್ಚು?<br>2) ಯಾವ ಚೀಲ ಕಡಿಮೆ?<br>3) ಯಾವುದು ಸಮವಿದೆ? |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಎ.. **ಅಕ್ಷರಗಳ ಮೇಲೆ ತಿದ್ದುವುದು.** ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>ಸಾಮಗ್ರಿಗಳು : ಮರಳು.<br>ವಿಧಾನ : ಮಕ್ಕಳಿಗೆ ತಮಗೆ ಗೊತ್ತಿರುವ ಸರಳ ಕನ್ನಡ ಪದಗಳನ್ನು ಬರೆಸಿ ಅದರ ಮೇಲೆ ಕಲ್ಲು /ಕಡ್ಡಿ/ಮಣಿ/ ಸ್ಟ್ರಾಗಳನ್ನು ಜೋಡಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ತಮಗೆ ಗೊತ್ತಿರುವ 3–4 ಅಕ್ಷರಗಳ ಕನ್ನಡ, ಪದಗಳನ್ನು ಬರೆದು. ಅದರ ಮೇಲೆ ಕಲ್ಲು /ಕಡ್ಡಿ/ಮಣಿ/ ಸ್ಟ್ರಾಗಳನ್ನು ಜೋಡಿಸಲು ಹೇಳುವುದು |

DRAFT 2022

| | | | |
|---|---|---|---|
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಪದ ಸಂಪತ್ತಿನ ಅಭಿವೃದ್ಧಿ, ಚಾಲನಾ ಕೌಶಲಗಳ ಅಭಿವೃದ್ಧಿ.<br>ಚಟುವಟಿಕೆ: 15 ಪ್ರಾಸ ಪದಗಳನ್ನು ಆಲಿಸುವುದು (ಗುರಿ–02) **ECL-4** ( **44** ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>* ಧ್ವನಿ ವಿಜ್ಞಾನದ ಅರಿವನ್ನು ಹೊಂದುವಂತೆ ಮಾಡುವುದು.<br>* ಪ್ರಾಸಪದಗಳ ಮೂಲಕ ಪದಸಂಪತ್ತನ್ನು ಹೆಚ್ಚಿಸುವುದು.<br>* ಸ್ಥೂಲ ಹಾಗೂ ಸೂಕ್ಷ್ಮ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು:– ಇಲ್ಲ<br>ವಿಧಾನ:<br>* ಪ್ರಾಸ ಪ್ರಾಸಪದಗಳ ವಿವಿಧ ಗುಂಪುಗಳನ್ನು. ಸಿದ್ಧಪಡಿಸಿಕೊಳ್ಳುವುದು.<br>* ಮಕ್ಕಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೆ ಒಂದೊಂದು ಪ್ರಾಸ ಪದಗಳ ಗುಂಪನ್ನು ನೀಡುವುದು.<br>* ಪ್ರಾಸ ಪದಗಳನ್ನು ಒಳಗೊಂಡಂತೆ ಶಿಕ್ಷಕರ ಸಹಾಯದಿಂದ ವಿವಿಧ ವಾಕ್ಯಗಳನ್ನು ರಚಿಸುವುದು.<br>* ಪ್ರಾಸ ಪದಗಳ ಗುಂಪಿನ ಪದಗಳನ್ನು ಬಳಸಿ ಸರಳ ಪ್ರಾಸ ಗೀತೆಯನ್ನು ಶಿಕ್ಷಕರ ಸಹಾಯದಿಂದ ರಚಿಸುವುದು.<br>ತರಗತಿವಾರು ವಿವರ: 2 ನೇ ತರಗತಿ ಮಕ್ಕಳು ಪ್ರಾಸ ಪದಗಳ ಗುಂಪಿನ ಪದಗಳಿಂದ ಸ್ವತಂತ್ರವಾಗಿ ಸರಳ ಪ್ರಾಸಗೀತೆ ರಚಿಸುವುದು.. 3 ನೇ ತರಗತಿ ಮಕ್ಕಳು ಪ್ರಾಸ ಪದಗಳ ಗುಂಪಿನ ಪದಗಳಿಂದ ಸ್ವತಂತ್ರವಾಗಿ ಸರಳ ಪ್ರಾಸಗೀತೆ ರಚಿಸುವುದು.. (68 ನೇ ದಿನಕ್ಕೆ ಮುಂದುವರೆದಿದೆ) |
| | | ಅರ್ಥ ಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಪದ ಸಂಪತ್ತಿನ ಅಭಿವೃದ್ಧಿ, ಸ್ವಯಂ ಅಭಿವ್ಯಕ್ತಿ, ನಟನಾ ಓದು.<br>ಚಟುವಟಿಕೆ 1 :ಚಿತ್ರ ಓದು (ಗುರಿ–2)<br>ಉದ್ದೇಶ : ಅನುಭವ ಮತ್ತು ಪೂರ್ವಜ್ಞಾನ ಆಧಾರದ ಮೇಲೆ ಚಿತ್ರ ಸನ್ನಿವೇಶವನ್ನು ವೀಕ್ಷಿಸುವ ಮೂಲಕ ಪಠ್ಯವನ್ನು ಅರ್ಥೈಸಿಕೊಳ್ಳುವರು.<br>ಅಗತ್ಯ ಸಾಮಾಗ್ರಿಗಳು: ವಿವಿಧ ಘಟನೆ/ ಸ್ಥಳ/ ಜಾತ್ರೆ/ ಮೇಳಗಳ ಚಿತ್ರಗಳು/ ಉದ್ಯಾನವನ/ ಪೇಟೆ/ ಶಾಲೆ/ ಪ್ರಾಣಿ ಸಂಗ್ರಹಾಲಯ/ ಹಬ್ಬ / ಜಾತ್ರೆಯ ಇತ್ಯಾದಿಗಳ ಚಿತ್ರಗಳು<br>ವಿಧಾನ: ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸುವುದು. ಮಕ್ಕಳಿಗೆ ತಾವು ನೋಡಿರುವ ಚಿತ್ರಗಳನ್ನು ಅವಲೋಕಿಸಿ ಅದರ ಬಗ್ಗೆ ವಿವರಣೆ ನೀಡಲು ತಿಳಿಸುವುದು. ಶಿಕ್ಷಕರು ವಿವಿಧ ದಿನ ಪತ್ರಿಕೆ, ಪುಸ್ತಕ, ನಿಯತ ಕಾಲಿಕೆ ಮುಂತಾದವುಗಳನ್ನು ಬಳಸಿ ಅದರ ಕುರಿತು ವಿವರಣೆ ನೀಡುವುದು.. ವಿವರಣೆ ನೀಡುವಲ್ಲಿ ಮಕ್ಕಳ ವಯಸ್ಸು, ಅಭಿವೃದ್ಧಿಯ ಅಗತ್ಯಗಳು ಹಾಗೂ ಮಕ್ಕಳ ಸುತ್ತಲಿನ ಪರಿಸರವನ್ನು ಗಮನದಲ್ಲಿಡುವುದು. ಸನ್ನಿವೇಶ ಕುರಿತು ಪ್ರಶ್ನೆ ಕೇಳುವಾಗ ಅಥವಾ ವಿವರಣೆ ನೀಡುವಾಗ ಅವರ ಸ್ವಂತ ಅನುಭವಕ್ಕೆ ಹೊಂದಾಣಿಕೆ ಆಗುವಂತೆ ಸಂಬಂಧ ಕಲಿಸುವುದು.. ಪ್ರಶ್ನೆಗಳನ್ನು ಕೇಳುತ್ತಾ ಸಂಭಾಷಣೆಯಲ್ಲಿ ಮಕ್ಕಳನ್ನು ತೊಡಗಿಸುವುದು ನೀಡಿದ ವಿಷಯದ ಕುರಿತು ಮಕ್ಕಳು ಸವಿವರವಾಗಿ ಗಮನಿಸಲು ಮತ್ತು ತಮ್ಮ ಸ್ವಂತ ಅನುಭವಗಳನ್ನು ಇವುಗಳ ಜೊತೆ ಜೋಡಿಸಿ ಹೇಳಲು ಸಹಾಯ ಮಾಡುವುದು.. ಕೆಲವು ಘಟನೆಗಳನ್ನು ತೋರಿಸಿ ಶಿಕ್ಷಕರು ಸೂಕ್ತ ಪ್ರಶ್ನೆಗಳನ್ನು ಕೇಳುತ್ತಾ ಹುರಿದುಂಬಿಸುವುದು.<br>ಶಿಕ್ಷಕರು ಕೆಲವು ಘಟನೆಗಳನ್ನು ತೋರಿಸಿ ಅದರ ಬಗ್ಗೆ ಈ ರೀತಿಯ ಪ್ರಶ್ನೆಗಳನ್ನು ಕೇಳಬಹುದು.<br>*. ನೀವು ಎಂದಾದರು ಇಂತಹ ಸ್ಥಳಕ್ಕೆ ಹೋಗಿದ್ದೀರಾ?<br>* ಈ ಸನ್ನಿವೇಶವು ನಿಮಗೆ ಏನನ್ನು ನೆನಪಿಸುತ್ತಿದೆ?<br>* ಈ ಚಿತ್ರದಲ್ಲಿ ಇರುವ ಜನರು ಏನು ಮಾಡುತ್ತಿದ್ದಾರೆ?<br>* ಈ ಸನ್ನಿವೇಶದಲ್ಲಿ ಜನರು ಏನು ಮಾಡುತ್ತಿದ್ದಾರೆ? ಇತ್ಯಾದಿ<br>2 ಮತ್ತು 3ನೇ ತರಗತಿ : ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುವಾಗ ಇಂತಹ ಸನ್ನಿವೇಶದಲ್ಲಿಯ ತನ್ನ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡುವುದು ಮತ್ತು ಪ್ರಶ್ನೆಗಳಿಗೆ ಉತ್ತರಿಸಿದ ನಂತರ ಶಿಕ್ಷಕರು ಮರು ಪ್ರಶ್ನೆಗಳನ್ನು ಕೇಳುತ್ತಾ ಮಕ್ಕಳನ್ನು ಅಲೋಚಿಸುವಂತೆ ಮಾಡಬೇಕು |
| | | ಉದ್ದೇಶಿತ ಬರಹ | ಸಾಮರ್ಥ್ಯ: ಕೈಕಣ್ಣು ಸಂಯೋಜನೆ, ಬರವಣಿಗೆ ಕೌಶಲಗಳ ಅಭ್ಯಾಸ, ಸೃಜನಶೀಲ ಅಭಿವ್ಯಕ್ತಿ.<br>ಚಟುವಟಿಕೆ....2 ಮುಕ್ತ ಚಿತ್ರ ರಚನೆ (ಗುರಿ–2) **ECW-6**<br>ಉದ್ದೇಶಗಳು:<br>• ಬರವಣಿಗೆಯ ಕೌಶಲಗಳನ್ನು ರೂಢಿಸುವುದು. |

DRAFT 2022


| | | |
|---|---|---|
| | | • ಕಣ್ಣು–ಕೈಗಳ ಸಮನ್ವಯ ಕೌಶಲವನ್ನು ಅಭಿವೃದ್ಧಿಪಡಿಸುವುದು.<br>• ಕ್ರಿಯಾತ್ಮಕ ಅಭಿವ್ಯಕ್ತಿಗೆ ಅವಕಾಶ ನೀಡುವುದು.<br>• ಸೃಜನಶೀಲ ಅಭಿವ್ಯಕ್ತಿಯನ್ನು ಪ್ರೋತ್ಸಾಹಿಸುವುದು.<br>ಅಗತ್ಯ ಸಾಮಗ್ರಿಗಳು: ಕ್ರೇಯಾನ್ಸ್, ಬಣ್ಣದ ಪೆನ್ಸಿಲ್‌ಗಳು, ಮಾರ್ಕರ್, ಬಿಳಿಯ ಹಾಳೆಗಳು<br>ವಿಧಾನ: ಕಾಗದದಲ್ಲಿ ಮುಕ್ತವಾಗಿ ಚಿತ್ರಿಸಲು/ ಬರೆಯಲು, ಅನಿಸಿದ್ದನ್ನು ಬಿಡಿಸಿ ಬಣ್ಣ ಹಾಕಲು ಅವಕಾಶ ಕಲ್ಪಿಸುವುದು. ಅವರ ಬರವಣಿಗೆ ಬಗ್ಗೆ ಮಾತನಾಡಲು ತಿಳಿಸುವುದು. ಸೂಕ್ತವಾದ ಪ್ರಶ್ನೆಗಳನ್ನು ಕೇಳುತ್ತಾ ಬರವಣಿಗೆ ಬಗ್ಗೆ ಮಾಹಿತಿ ಪಡೆಯುವುದು.<br>ತರಗತಿವಾರು ವಿವರ: 2 ಹಾಗೂ 3 ನೇ ತರಗತಿಯ ಮಕ್ಕಳು ತಮ್ಮ ಇಷ್ಟದ ಚಿತ್ರ/ ಸನ್ನಿವೇಶವನ್ನು ಚಿತ್ರಿಸಿ, ಅವುಗಳ ಬಗ್ಗೆ 4–5 ವಾಕ್ಯಗಳನ್ನು ಬರೆಯಲು ತಿಳಿಸಿ. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| | ಹೊರಾಂಗಣ ಆಟಗಳು | Day 56<br>ಚಟುವಟಿಕೆ: ಹಗ್ಗದ ಆಟ (ಸ್ಕಿಪ್ಪಿಂಗ್)<br>ಸಾಮರ್ಥ್ಯ: ಚುರುಕುತನ , ಕ್ಷಿಪ್ರ ಚಲನೆಯ ಅಭಿವೃದ್ಧಿ<br>ಸಾಮಗ್ರಿ: ಸ್ಕಿಪ್ಪಿಂಗ್ ರೋಪ್<br>ವಿಧಾನ :<br>• ಇಬ್ಬರು ಮಕ್ಕಳು ಹಗ್ಗದ ಎರಡು ತುದಿಗಳನ್ನು ಹಿಡಿದು ಎದುರು ಬದುರಾಗಿ ನಿಲ್ಲುವುದು . .<br>• ಮಕ್ಕಳು ರೋಪ್ ಅನ್ನು ತಿರುಗಿಸಿದಾಗ ಇನ್ನೊಂದು ಮಗು ತನ್ನ ಕಾಲು ಬಳಿ ರೋಪ್ ಬಂದಾಗ ಹಾರಲು ತಿಳಿಸುವುದು .<br>• **ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೆ ಇದೆ ಚಟುವಟಿಕೆ ಮುಂದುವರೆಸುವುದು.** |
| | ಕಥಾ ಸಮಯ | ಮೊದಲ ದಿನದಉದ್ದೇಶದಂತೆಕಥಾ ಸಮಯವು ಮುಂದುವರೆಯುತ್ತದೆ.<br>***ಕಥಾ ಸಾಹಿತ್ಯ ನಿರೂಪಣೆ***<br>ಶಿಕ್ಷಕರು ಕಥೆಯನ್ನು ನಿರೂಪಿಸುವುದರಜೊತೆಗೆ ಮಕ್ಕಳ ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣಗೊಳಿಸುವುದು<br>ಉದಾ :ಇದಾದ ಮೇಲೆ ಏನಾಗಿತ್ತು? ನಂತರಯಾರು ಬಂದರು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ಕೊಕ್ಕರೆಯು ಎಲ್ಲಿ ಕುಳಿತು ಪ್ರಾಣಿಗಳನ್ನು ತಿನ್ನುತ್ತಿತ್ತು?**<br>• **ಏಡಿಯು ಎಲ್ಲಿ ಕುಳಿತು ಕೊಂಡಿತು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>• ಮುಂದಿನ ವಾರದಲ್ಲಿ “ಹೊರಸಂಚಾರಕ್ಕೆ ಯೋಜನೆ” ರೂಪಿಸಿ ಮಕ್ಕಳು ವಿವಿಧ ಸಸ್ಯಗಳನ್ನು, ಮರಗಳನ್ನು ವೀಕ್ಷಿಸಲಿ ಇದಕ್ಕಾಗಿ ಅಗತ್ಯ ಸಿದ್ಧತೆ ತಯಾರಿ ಮಾಡಿಕೊಳ್ಳುವುದು. |
| | | |
| | | |

DRAFT 22.02.22

**ವಾರ–10** **ದಿನ–57 (ಬುಧವಾರ)**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 57 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | 55 ನೇ ದಿನದ ಚಟುವಟಿಕೆಗಳನ್ನು ಮಾಡಿಸುವುದು |
| | ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | ಕಾರ್ಯವಿಧಾನ:<br>ಮಕ್ಕಳು ವೃತ್ತಾಕಾರದಲ್ಲಿ ಕೂರಿಸಿ.<br>ಚಿತ್ರಗಳನ್ನು ಬುಟ್ಟಿಯಲ್ಲಿ ಅಥವಾ ತೆರೆದ ಪೆಟ್ಟಿಗೆಯಲ್ಲಿ ಇರಿಸಿ.<br>ಚಿಹ್ನೆಗಳು ಅಥವಾ ಚಿಹ್ನೆಯ ಯಾವುದೇ ಒಂದು ಚಿತ್ರವನ್ನು ತೆಗೆದುಕೊಳ್ಳಲು ಮತ್ತು ಆ ಚಿಹ್ನೆಗಳು ಅಥವಾ ಚಿಹ್ನೆಯ ಮೇಲೆ ಅವರ ಪದಗಳ ಬಗ್ಗೆ ಮಾತನಾಡಲು ಮಕ್ಕಳಿಗೆ ತಿಳಿಸಿ.<br>ಶಿಕ್ಷಕರು ಮಕ್ಕಳನ್ನು ಸಂತೋಷದಿಂದ ಚಟುವಟಿಕೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿದೇ೯ಶಿತ) ಚಟುವಟಿಕೆ) | ಸಾಮರ್ಥ್ಯ:– ಎಣಿಕೆ ಮತ್ತು ಸಂಖ್ಯೆಯನ್ನು ಹುಡುಕುವುದು /ಅರ್ಥಮಾಡಿಕೊಳ್ಳುವುದು<br>ಚಟುವಟಿಕೆ 34 ವಸ್ತು ಹುಡುಕುವುದು ( ಗುರಿ–3 )<br>ಉದ್ದೇಶ:– ಹೋಲಿಕೆ ಇರುವ ವಸ್ತುಗಳನ್ನು ಎಣಿಸುವುದು.<br>ಸಾಮಗ್ರಿಗಳು: ಸೀಮೆ ಸುಣ್ಣ,ಪೆನ್ಸಿಲ್, ಪುಸ್ತಕಗಳು, ಕಲ್ಲುಗಳು,ಚೀಲಗಳು (ಎಲ್ಲಾ ವಸ್ತುಗಳು ಮೂರಕ್ಕಿಂತ ಹೆಚ್ಚು ಇರಬೇಕು)<br>ವಿಧಾನ: ಶಿಕ್ಷಕರು ಮಕ್ಕಳಿಗೆ ಒಂದು ವಸ್ತುವನ್ನು ನೀಡಬೇಕು. ಅದೇ ರೀತಿಯ ಹೋಲಿಕೆ ಇರುವ ವಸ್ತುಗಳನ್ನು ತರಗತಿಯಲ್ಲಿ ಹುಡುಕಲು ಹೇಳುವುದು. ಈ ಆಟವು ಕೊಟ್ಟಿರುವ ವಿವಿಧ ವಸ್ತುಗಳೊಂದಿಗೆ ಪುನರಾರ್ವತಿಸಬೇಕು. ಶಿಕ್ಷಕರು ಒಂದು ಚಾರ್ಟ್ ಮಾಡಿ, 2 ಗುಂಪುಗಳನ್ನು ಮಾಡುವುದು. ನೆಲದ ಮೇಲೆ ಅ ಮತ್ತು ಬ ಭಾಗಗಳನ್ನು ಮಾಡಿ ಗೆರೆ ಎಳೆಯುವುದು. ಆ ಭಾಗದಲ್ಲಿ ಒಂದೇ ವಸ್ತು ಬ ಭಾಗದಲ್ಲಿ ಅದಕ್ಕೆ ಹೋಲಿಕೆಯಿರುವ ವಸ್ತುಗಳನ್ನು ಎಣಿಸಿ ಇಡುತ್ತಾರೆ. ಆನಂತರ ಯಾವ ಭಾಗದಲ್ಲಿ ಎಷ್ಟು ವಸ್ತುಗಳು ಇವೆ ಎಂದು ಎಣಿಕೆ ಮಾಡಿಸುವುದು.<br>2ನೇ ತರಗತಿ<br>ಹೋಲಿಕೆ ಇರುವ ಹಲವು ವಸ್ತುಗಳನ್ನು ನೀಡಿ ಎರಡು ಡಬ್ಬಗಳಿಗೆ ಒಂದೇ ತೆರನಾದ ವಸ್ತುಗಳನ್ನು ತುಂಬುವಂತೆ ಮಗುವಿಗೆ ಹೇಳುವುದು. ಅವುಗಳನ್ನು ನೋಡಿ ಯಾವ ಗುಂಪು ಹೆಚ್ಚು ಇದೆ ಎಂದು ಕೇಳುವುದು.<br>3ನೇ ತರಗತಿ<br>ಎರಡು ಗುಂಪುಗಳನ್ನು ಮಾಡಿ ಒಂದು ಗುಂಪು ಹಣ್ಣುಗಳ ಹೆಸರು, ಇನ್ನೊಂದು ಗುಂಪು ತರಕಾರಿಗಳ ಹೆಸರು ಪಟ್ಟಿ ಮಾಡಲು ತಿಳಿಸುವುದು. ಯಾವು ಗುಂಪು ಹೆಚ್ಚು ಹೆಸರು ಪಟ್ಟಿ ಮಾಡಿದೆ ಎಂಬುದನ್ನು ಆವಲೋಕಿಸುವುದು.<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: I. L. -33 (ತರಗತಿ 1, 2, 3)** |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | ಸಾಮರ್ಥ್ಯ:– ಎಣಿಕೆ ಮತ್ತು ಸಂಖ್ಯೆಯನ್ನು ಹುಡುಕುವುದು /ಅರ್ಥಮಾಡಿಕೊಳ್ಳುವುದು<br>ಚಟುವಟಿಕೆ 34 ವಸ್ತು ಹುಡುಕುವುದು ( ಗುರಿ–3 )<br>ಉದ್ದೇಶ:– ಹೋಲಿಕೆ ಇರುವ ವಸ್ತುಗಳನ್ನು ಎಣಿಸುವುದು.<br>ಸಾಮಗ್ರಿಗಳು: ಸೀಮೆ ಸುಣ್ಣ,ಪೆನ್ಸಿಲ್, ಪುಸ್ತಕಗಳು, ಕಲ್ಲುಗಳು,ಚೀಲಗಳು (ಎಲ್ಲಾ ವಸ್ತುಗಳು ಮೂರಕ್ಕಿಂತ ಹೆಚ್ಚು ಇರಬೇಕು)<br>ವಿಧಾನ: ಶಿಕ್ಷಕರು ಮಕ್ಕಳಿಗೆ ಒಂದು ವಸ್ತುವನ್ನು ನೀಡಬೇಕು. ಅದೇ ರೀತಿಯ ಹೋಲಿಕೆ ಇರುವ ವಸ್ತುಗಳನ್ನು ತರಗತಿಯಲ್ಲಿ ಹುಡುಕಲು ಹೇಳುವುದು. ಈ ಆಟವು ಕೊಟ್ಟಿರುವ ವಿವಿಧ ವಸ್ತುಗಳೊಂದಿಗೆ ಪುನರಾರ್ವತಿಸಬೇಕು. ಶಿಕ್ಷಕರು ಒಂದು ಚಾರ್ಟ್ ಮಾಡಿ, 2 ಗುಂಪುಗಳನ್ನು ಮಾಡುವುದು. ನೆಲದ ಮೇಲೆ ಅ ಮತ್ತು ಬ ಭಾಗಗಳನ್ನು ಮಾಡಿ ಗೆರೆ ಎಳೆಯುವುದು. ಆ ಭಾಗದಲ್ಲಿ ಒಂದೇ ವಸ್ತು ಬ ಭಾಗದಲ್ಲಿ ಅದಕ್ಕೆ ಹೋಲಿಕೆಯಿರುವ ವಸ್ತುಗಳನ್ನು ಎಣಿಸಿ ಇಡುತ್ತಾರೆ. ಆನಂತರ ಯಾವ ಭಾಗದಲ್ಲಿ ಎಷ್ಟು ವಸ್ತುಗಳು ಇವೆ ಎಂದು ಎಣಿಕೆ ಮಾಡಿಸುವುದು. |

DRAFT 2022

| | | | |
|---|---|---|---|
| | | | 2ನೇ ತರಗತಿ<br>ಹೋಲಿಕೆ ಇರುವ ಹಲವು ವಸ್ತುಗಳನ್ನು ನೀಡಿ ಎರಡು ಡಬ್ಬಗಳಿಗೆ ಒಂದೇ ತೆರನಾದ ವಸ್ತುಗಳನ್ನು ತುಂಬುವಂತೆ ಮಗುವಿಗೆ ಹೇಳುವುದು. ಅವುಗಳನ್ನು ನೋಡಿ ಯಾವ ಗುಂಪು ಹೆಚ್ಚು ಇದೆ ಎಂದು ಕೇಳುವುದು.<br>3ನೇ ತರಗತಿ<br>ಎರಡು ಗುಂಪುಗಳನ್ನು ಮಾಡಿ ಒಂದು ಗುಂಪು ಹಣ್ಣುಗಳ ಹೆಸರು, ಇನ್ನೊಂದು ಗುಂಪು ತರಕಾರಿಗಳ ಹೆಸರು ಪಟ್ಟಿ ಮಾಡಲು ತಿಳಿಸುವುದು. ಯಾವು ಗುಂಪು ಹೆಚ್ಚು ಹೆಸರು ಪಟ್ಟಿ ಮಾಡಿದೆ ಎಂಬುದನ್ನು ಆವಲೋಕಿಸುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ: ಕ್ರಿಯಾತ್ಮಕ ಸ್ವ ಅಭಿವ್ಯಕ್ತಿ, ಧ್ವನಿ ಸಂಕೇತ ಹಾಗೂ ಪ್ರಾಸದ ಅರಿವು, ಪರಿಸರ ಪ್ರಜ್ಞೆ, ಪದಸಂಪತ್ತಿನ ಬೆಳವಣಿಗೆ<br>ಚಟುವಟಿಕೆ 3 ಹಾಡು, ಪ್ರಾಸಗೀತೆ, ಪದ್ಯ/ನಾಟಕ. (ಗುರಿ–2) **ECL-3**<br>ಉದ್ದೇಶ:<br>* ಧ್ವನಿ ಸಂಕೇತಗಳ ಅರಿವನ್ನು ಮೂಡಿಸುವುದು.<br>* ಪ್ರಾಸಗಳ ಅರಿವನ್ನು ಉಂಟು ಮಾಡುವುದು.<br>* ಕ್ರಿಯಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.<br>* ತನ್ನ ಸುತ್ತಲಿನ ಪರಿಸರದೊಂದಿಗೆ ಸಂಬಂಧೀಕರಿಸುವುದು.<br>ಅಗತ್ಯ ಸಾಮಗ್ರಿಗಳು– ಇಲ್ಲ<br>ವಿಧಾನ: ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ. ಶಿಕ್ಷಕರು ಮಕ್ಕಳಿಗೆ ಹೊಸ ಪ್ರಾಸಗೀತೆಯನ್ನು ಅಭಿನಯದೊಂದಿಗೆ ಹಾಡಿ ತೋರಿಸಲಿ. ಶಿಕ್ಷಕರನ್ನು ಅನುಕರಿಸುತ್ತಾ ಮಕ್ಕಳು ಹಾಡನ್ನು ಪುನರುಚ್ಚರಿಸಲು ತಿಳಿಸಿ.<br>ನೆನಪಿಡಬೇಕಾದ ಅಂಶಗಳು:<br>* ಮಕ್ಕಳು ಹಾಡನ್ನು ಆನಂದಿಸಲು ಸೂಕ್ತ ಅಭಿನಯ ಹಾಗೂ ಉತ್ಸಾಹದಿಂದ ಹಾಡಿ.<br>* ಮಕ್ಕಳು ಗೀತೆಯಲ್ಲಿರುವ ಪ್ರಾಸ ಪದಗಳನ್ನು ಶಿಕ್ಷಕರ ಸಹಾಯದಿಂದ ಗುರುತಿಸಲಿ.<br>ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಪ್ರಾಸಗೀತೆಯಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸುವುದು. ನೇ ತರಗತಿ ಮಕ್ಕಳು ಆ ಪ್ರಾಸ ಪದಗಳಿಗೆ ಇನ್ನಷ್ಟು ಪದಗಳನ್ನು ಸೇರಿಸುವುದು.( 63 ನೇ ದಿನಕ್ಕೆ ಮುಂದುವರೆದಿದೆ) |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ : ಪದ ಗುರುತಿಸುವುದು, ಮುದ್ರಿತ ಪಠ್ಯದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ : 11 ಹೆಸರಿನ ಜಗತ್ತು (ಗುರಿ 2)<br>ಉದ್ದೇಶ: ಪರಿಚಿತ ಸನ್ನಿವೇಶದಲ್ಲಿನ ವಸ್ತುಗಳನ್ನು ಲಿಪಿಸಂಕೇತಗಳೊಂದಿಗೆ ಸಹ ಸಂಬಂಧಿಕರಿಸಿಕೊಳ್ಳುವುದು. ಸಾಹಿತ್ಯ ಮತ್ತು ವಸ್ತು ಒಂದೇ ಇದೆ ಎಂಬ ತೀರ್ಮಾನಕ್ಕೆ ಬಂದು ಓದುವಿಕೆಯಲ್ಲಿ ಆಸಕ್ತಿ ಬೆಳಸಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಚಾರ್ಟ್ ಪೇಪರ್, ಪೆನ್ಸಿಲ್, ಕ್ರೇಯಾನ್ಸ್, ನಮಗೆ ಕಣ್ಣಿಗೆ ಕಾಣುವ ಸುತ್ತಮುತ್ತಲಿನ ಸಾಮಾಗ್ರಿಗಳು<br>ವಿಧಾನ :<br>– ಮಕ್ಕಳ ಸಹಾಯದಿಂದ ತರಗತಿಯಲ್ಲಿರುವ ಸಾಮಾನ್ಯ/ಪರಿಚಿತ ವಸ್ತುಗಳ ಹೆಸರನ್ನು ಪಟ್ಟಿ ಮಾಡುವುದು.<br>ಉದಾ– ಮೇಜು, ಖುರ್ಚಿ, ಬಾಗಿಲು ಇತ್ಯಾದಿ.<br>– ಸಿದ್ಧಪಡಿಸಿದ ನಾಮ ಫಲಕಗಳನ್ನು ಆಯಾ ವಸ್ತುಗಳ ಮೇಲೆ ಅಂಟಿಸುವುದು.<br>– ಇನ್ನೊಂದು ಸೆಟ್ ನಾಮ ಫಲಕಗಳ ಮಿಂಚುಪಟ್ಟಿಗಳನ್ನು ತಯಾರಿಸಿಟ್ಟುಕೊಳ್ಳುವುದು.<br>– ಪದಗಳ ಮಿಂಚುಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುತ್ತಾ, ಮಕ್ಕಳಿಂದ ಗಟ್ಟಿಯಾಗಿ ಹೇಳಿಸುವುದು.<br>– ಪದ ಉಚ್ಚರಿಸುತ್ತಾ ಆ ವಸ್ತುವಿನ ಬಳಿಗೆ ಮಗು ಹೋಗಲು ತಿಳಿಸುವುದು.<br>_ ಮಗು ಕನಿಷ್ಟ ನಾಲ್ಕೈದು ವಸ್ತುಗಳನ್ನಾದರೂ ಹೆಸರಿಸಲು ಅವಕಾಶ ಕಲ್ಪಿಸುವುದು..<br>_ ಆ ಪದಗಳನ್ನು ಕಥೆಯಲ್ಲಿ ಗುರುತಿಸಲು ಅವಕಾಶ ಕಲ್ಪಿಸುವುದು.<br>– ಚಿತ್ರ ಸಹಿತ ನಾಮಫಲಕ/ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿ, ಚಟುವಟಿಕೆ ಸ್ಥಳದಲ್ಲಿ/ಸಮಯದಲ್ಲಿ ಮಕ್ಕಳಿಗೆ ಗುರುತಿಸಿ ಓದಲು (ಚಿತ್ರಗಳ ಸಹಾಯದಿಂದ) ಅವಕಾಶ ಕಲ್ಪಿಸುವುದು.<br><br><br>2ಮತ್ತು 3ನೇ ತರಗತಿ: ಕಥೆ/ಪಠ್ಯದಲ್ಲಿ ಬಂದಿರುವ ಮುಖ್ಯಪದಗಳ ಮಿಂಚುಪಟ್ಟಿ ತಯಾರಿಸಿಕೊಳ್ಳುವುದು ಮಕ್ಕಳಿಗೆ ಶಿಕ್ಷಕರು ಕಥೆ/ಪಠ್ಯವನ್ನು ನೀಡಿ ಓದಲು ಅವಕಾಶ |

DRAFT 20.02.22

| | | |
|---|---|---|
| | | ಕಲ್ಪಿಸುವುದು.ನಂತರ ಮಿಂಚುಪಟ್ಟಿಯಲ್ಲಿರುವ ಪದಗಳನ್ನು ಕತೆಯಲ್ಲಿ ಹುಡುಕಲು ಸೂಚಿಸುವುದು.<br>ಗಮನಿಸಿ ; ಈ ಹಿಂದೆ ಈ ಚಟುವಟಿಕೆಗಳಲ್ಲಿ ಬಳಸಿದ ಪದಗಳನ್ನು ಹೊರತುಪಡಿಸಿ ಬೇರೆ ಬೇರೆ ಸ್ಥಳ, ಸನ್ನಿವೇಶದಲ್ಲಿ ಬರುವ ಪದಗಳನ್ನು<br>ಬಳಸಿ ಚಟುವಟಿಕೆಯನ್ನು ನಿರ್ವಹಿಸುವುದು. |
| | ಉದ್ದೇಶಿತ ಬರಹ | ಸಾಮರ್ಥ್ಯ : ಸೂಕ್ಷ್ಮ ಸ್ನಾಯು ಚಲನಾ ಕೌಶಲಾಭಿವೃದ್ಧಿ. ಅಕ್ಷರಗಳನ್ನು ಗುರುತಿಸುವುದು.<br>**ಚಟುವಟಿಕೆ: 36, ಚುಕ್ಕಿ ಸೇರಿಸು –ಅಂಕಿ ಬರೆ (ಗುರಿ: 2 ) ECW-17**<br>ಉದ್ದೇಶ :<br>• ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಅಕ್ಷರಗಳನ್ನು ಗುರುತಿಸುವುದು.<br>• ಚುಕ್ಕಿಗಳಿಂದ ಅಂಕಿಗಳನ್ನು ರಚಿಸುವುದು<br>ಅಗತ್ಯ ಸಾಮಗ್ರಿ : ನೋಟ್ ಪುಸ್ತಕ, ಪೆನ್ಸಿಲ್, ಕರಿ ಹಲಗೆ, ಸೀಮೆ ಸುಣ್ಣ<br>ವಿಧಾನ :<br>- ಮಕ್ಕಳಿಗೆ ಚುಕ್ಕಿ ಬಳಸಿ 1,2,3,4,5 ಈ ಅಂಕಿಗಳನ್ನು ಬರೆಯುವ ವಿಧಾನವನ್ನು ಬರೆದು ತೋರಿಸುವುದು,<br>- ಮಕ್ಕಳು 1, 2, 3, 4, 5, ಈ ಅಂಕಿಗಳ ಚುಕ್ಕಿಗಳನ್ನು ಸೇರಿಸಲು ಹೇಳುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು 1 ರಿಂದ 5 ರ ವರೆಗಿನ ಅಂಕಿಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. 3ನೇ ತರಗತಿ ಮಕ್ಕಳು 1 ರಿಂದ 10 ರ ವರೆಗಿನ ಸಂಖ್ಯೆಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. (57 ನೇ ದಿನಕ್ಕೆ ಮುಂದುವರೆದಿದೆ) |
| ಹೊರಾಂಗಣ ಆಟಗಳು | | ಚಟುವಟಿಕೆ: ಹಗ್ಗದ ಆಟ<br>ಸಾಮರ್ಥ್ಯ: ಚುರುಕುತನ , ಕ್ಷಿಪ್ರ ಚಲನೆಯ ಅಭಿವೃದ್ಧಿ<br>ಸಾಮಗ್ರಿ: ಸ್ಕಿಪ್ಪಿಂಗ್ ರೋಪ್<br>ವಿಧಾನ :<br>• ನಾಲ್ಕು ಮಕ್ಕಳು ಎರಡು ಹಗ್ಗದ ತುದಿಗಳನ್ನು ಬಿಗಿಯಾಗಿ ಹಿಡಿದ್ದು ಸ್ವಲ್ಪ ಅಂತರದಲ್ಲಿ ಎದುರು ಬದುರಾಗಿ ಕೂರುವುದು<br>• ಮಕ್ಕಳು ಓಡುತ್ತಾ ಬಂದು ಒಂದು ಹಗ್ಗದ ಮೇಲಿಂದ ನೆಗೆದು ಮುಂದೆಯಿರುವ ಹಗ್ಗದ ಮೇಲೂ ನೆಗೆಯಬೇಕು ಎಂದು ಸೂಚಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೆ ಇದೆ ಚಟುವಟಿಕೆ ಮುಂದುವರೆಸುವುದುುವುದು.** |
| ಕಥಾ ಸಮಯ | | **ಶೀರ್ಷಿಕೆ :** ಕೊಕ್ಕರೆ ಮತ್ತು ಏಡಿ<br>**ಸಾಮಗ್ರಿಗಳು :** ಹತ್ತಿಗೊಂಬೆಗಳು/ಕಡ್ಡಿ ಚಿತ್ರಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ನಿರರ್ಗಳವಾಗಿ ಮಾತನಾಡುವ ಕೌಶಲ ರೂಢಿಸುವುದು.<br>➢ **ಸೃಜನ ಶೀಲತೆಯನ್ನು ಅಭಿವೃದ್ಧಿ ಪಡಿಸುವುದು.**<br>➢ **ಕುತೂಹಲ ಮತ್ತು ಆಸಕ್ತಿಯನ್ನು ಉಂಟುಮಾಡುವುದು.**<br>**ವಿಧಾನ :**<br>***ಕಡ್ಡಿಚಿತ್ರ/ಹತ್ತಿ ಗೊಂಬೆ ಪ್ರದರ್ಶನ***<br>ಕಡ್ಡಿಚಿತ್ರ/ಹತ್ತಿ ಗೊಂಬೆಗಳನ್ನು ಪ್ರದರ್ಶಿಸಿ ಕಥೆಯನ್ನು ನಿರೂಪಿಸುವುದು. ವಿವಿಧ ಕಾರ್ಯತಂತ್ರಗಳ ಅಡಿಯಲ್ಲಿಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು.<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| ಮತ್ತೆ ಸಿಗೋಣ | | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ |

DRAFT 22.02.22

| | | |
|---|---|---|
| | | • ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>• ಮುಂದಿನ ವಾರದಲ್ಲಿ "ಹೊರಸಂಚಾರಕ್ಕೆ ಯೋಜನೆ" ರೂಪಿಸಿ ಮಕ್ಕಳು ವಿವಿಧ ಸಸ್ಯಗಳನ್ನು, ಮರಗಳನ್ನು ವೀಕ್ಷಿಸಲಿ ಇದಕ್ಕಾಗಿ ಅಗತ್ಯ ಸಿದ್ಧತೆ ತಯಾರಿ ಮಾಡಿಕೊಳ್ಳುವುದು. |
| | | |
| | | |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–10** **ದಿನ–58 (ಗುರುವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 58 | ಶುಭಾಶಯ ವಿನಿಮಯ<br>*(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1:**<br>1. ಮಕ್ಕಳನ್ನು ಹಲವು ಗುಂಪುಗಳನ್ನಾಗಿ ಮಾಡಿಕೊಂಡು ಸ್ವಾಗತ ಚಪ್ಪಾಳೆಯನ್ನು ಹೇಳಿಕೊಡುವುದು.<br>2. ಮೊದಲ ಗುಂಪಿಗೆ ಶಿಕ್ಷಕರು ಸ್ವಾಗತ ಚಪ್ಪಾಳೆಯ ಮೂಲಕ ತರಗತಿಗೆ ಸ್ವಾಗತ ಕೋರುವುದು.<br>3. ಈಗ ಮೊದಲು ಬಂದ ಗುಂಪು ಉಳಿದವರಿಗೆ ಸ್ವಾಗತ ಚಪ್ಪಾಳೆಯ ಮೂಲಕ ತರಗತಿಗೆ ಸ್ವಾಗತ ಕೋರುವುದು. |
| | ಮಾತು ಕತೆ | ದಿನ 51 ರ ಮಾತುಕತೆ ಚಟುವಟಿಕೆಯನ್ನು ಮುಂದುವರೆಸಿ. |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | **ಸಾಮರ್ಥ್ಯ: ಸಂಖ್ಯೆಗಳನ್ನು ತಿಳಿಯುವುದು**<br>**ಚಟುವಟಿಕೆ 35 ಸಂಖ್ಯಾ ನಕಲು (ಗೋಲ್– 3)**<br>**ಉದ್ದೇಶ:– ಅಂಕಿ ಸಂಖ್ಯೆಗಳ ಆಕಾರಗಳನ್ನು ತಿಳಿಯುವುದು**<br>**ಸಾಮಗ್ರಿಗಳು: ಬೀಜಗಳು, ಹಿಟ್ಟು, ಮರಳು ಪೆಟ್ಟಿಗೆ, ಮರಳು ತುಂಬಿದ ಪಾತ್ರೆ, ಕಡ್ಡಿಗಳು, ಸೀಮೆಸುಣ್ಣ, ಜೇಡಿಮಣ್ಣು.**<br>**ವಿಧಾನ: ಮೊದಲು ಸಂಖ್ಯೆಗಳನ್ನು ಹೇಳಿಸಿ ಪರಿಚಯ ಮಾಡಿಸುವುದು. ನೆಲದ ಮೇಲೆ ಅಂಕಿಗಳನ್ನು ಬರೆದು ಅದರ ಮೇಲೆ ಬೀಜಕಲ್ಲು,ಹಿಟ್ಟನ್ನು ಹಾಕಿ ಅಂಕಿಗಳನ್ನು ಬರೆಯುವುದನ್ನು ಹೇಳಿಕೊಡುವುದು. ಮರಳು ಪೆಟ್ಟಿಗೆ / ಮರಳು ತುಂಬಿದ ಪಾತ್ರೆಯಲ್ಲಿ ಸೀಮೆಸುಣ್ಣ / ಕಡ್ಡಿಗಳಿಂದ ಕೈ ಬೆರಳಿನಿಂದ 0–9 ರವರೆಗೆ ಅಂಕಿಗಳನ್ನು ಅವುಗಳ ಆಕಾರಗಳನ್ನು ಬರೆಸಿ ಪತ್ತೆ ಹಚ್ಚಲು ಪ್ರೋತ್ಸಾಹ ನೀಡುವುದು. ಆಟದ ಮೈದಾನದಲ್ಲಿ ಕೋಲು ಮತ್ತು ಕಡ್ಡಿಗಳಿಂದ ಅಂಕಿಗಳನ್ನು ಬರೆದು ಬೀಜ, ಬೇಳೆ, ಕಲ್ಲುಗಳನ್ನು ಅದರ ಮೇಲೆ ಇಡಲು ಹೇಳುವುದು. ಜೇಡಿಮಣ್ಣು ಅಥವಾ ಹಿಟ್ಟಿನಿಂದ ಅಂಕಿಗಳನ್ನು ರಚಿಸಲು ಮಕ್ಕಳಿಗೆ ಹೇಳುವುದು. 0–9 ರ ಸಂಖ್ಯೆ ರಚಿಸಿ ಪ್ರದರ್ಶನ ಮಾಡಲು ಅವಕಾಶವನ್ನು ಕೊಡುವುದು.**<br>**2ನೇ ತರಗತಿ**<br>*** ಮರಳಿನ ಮೇಲೆ 0 ಯಿಂದ 9 ರವರೆಗಿನ ಅಂಕಿಗಳನ್ನು ಬರೆಯಲು ತಿಳಿಸುವುದು.**<br>*** ಗಾಳಿಯಲ್ಲಿ ಅಂಕಿಗಳನ್ನು ಬರೆಯಲು ತಿಳಿಸಿ ಬೇರೆಯವರಿಂದ ಬರೆದ ಸಂಖ್ಯೆಯನ್ನು ಹೇಳಲು ತಿಳಿಸುವುದು.** |

DRAFT 2022

| | | | |
|---|---|---|---|
| | | | 3ನೇ ತರಗತಿ<br>ಕಡ್ಡಿ ಮತ್ತು ಕೋಲಿನಿಂದ ಸಂಖ್ಯೆಗಳನ್ನು ಬರೆಸಿ ಅದಕ್ಕೆ ರಂಗೋಲಿ ಮತ್ತು ಬಣ್ಣವನ್ನು ತುಂಬಿಸಿ ಸಂಖ್ಯೆಗಳನ್ನು ಹೇಳಿಸುವುದು.<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: I. L. -34 (ತರಗತಿ 1, 2, 3)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಬಿ **ಅಕ್ಷರಗಳ ಮೇಲೆ ತಿದ್ದುವುದು** ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಸ್ಥಳದ ಪರಿಕಲ್ಪನೆಯನ್ನು ತಿಳಿಯುತ್ತಾರೆ.<br>ಉದ್ದೇಶ; ಸಾಮಗ್ರಿಗಳು :<br>ವಿಧಾನ : . ಸಾಮಗ್ರಿಗಳು : ಹಾಳೆ, ಬಣ್ಣ ಮತ್ತು ರಬ್ಬರ್ ಅಕ್ಷರಗಳು.<br>ವಿಧಾನ : ಮಕ್ಕಳಿಗೆ ಅಕ್ಷರಗಳ ಆಕಾರದ ರೇಖಾ ಚಿತ್ರಗಳನ್ನು ಕೊಟ್ಟು ಬಣ್ಣ ತುಂಬಲು ಹೇಳುವುದು.ಮಗು ತನಗೆ ಬರುವ ಇಂಗ್ಲೀಷ್ ಪದಗಳ ರೇಖಾ ಚಿತ್ರಗಳನ್ನು ಬರೆದು ಬಣ್ಣ ತುಂಬಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ಯಾವುದಾದರೊಂದು ಅಕ್ಷರವನ್ನು ಆಯ್ಕೆ ಮಾಡಿ ಅದರಿಂದ ಪ್ರಾರಂಭವಾಗುವ ಪದಗಳ ರೇಖಾ ಚಿತ್ರಗಳನ್ನು ಬರೆದು ಬಣ್ಣ ತುಂಬಲು ಹೇಳುವುದು.<br>* **ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-1 4 ( 01, 02,03ನೇ ತರಗತಿ)** |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಧ್ವನಿ ಸಂಕೇತಗಳ ಸಂಯೋಜನೆ, ಅವಧಾನ ಮತ್ತು ಆಲಿಸುವುದು.**<br>**ಚಟುವಟಿಕೆ 29 : ಮಧ್ಯದ ಅಕ್ಷರ ಗುರ್ತಿಸು** (ಅ ರ ಸ) (ಗುರಿ–2) **ECL-21**<br>**ಉದ್ದೇಶ :**<br>* **ಪದಗಳಲ್ಲಿಯ ಅಕ್ಷರಗಳ ಅಕ್ಷರ–ಧ್ವನಿ ಸಹ ಸಂಬಂಧ ಗುರುತಿಸುವುದು.**<br>* **ಗಮನವಿಟ್ಟು ಆಲಿಸಿ ಅಕ್ಷರ–ಧ್ವನಿ ಸಹ ಸಂಬಂಧ ಅರ್ಥೈಸಿಕೊಳ್ಳುವುದು.**<br>**ಅಗತ್ಯ ಸಾಮಗ್ರಿಗಳು : ಕಪ್ಪು ಹಲಗೆ, ಮಿಂಚುಪಟ್ಟಿ**<br>**ವಿಧಾನ: ಮಿಂಚುಪಟ್ಟಿಯಲ್ಲಿ ಬರೆದ ಪದಗಳನ್ನು ಪ್ರದರ್ಶಿಸುವುದು. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ, ಸ್ವರಾಕ್ಷರ ಪರಿಚಯಿಸುವುದು. ಪದದ ಮಧ್ಯದಲ್ಲಿರುವ ಅಕ್ಷರವನ್ನು ಗುರುತಿಸಲು ತಿಳಿಸುವುದು. ಕಪ್ಪುಹಲಗೆಯಲ್ಲಿ ಬರೆಯು ಮಕ್ಕಳಿಂದ ಹೇಳಿಸುವುದು. ಅಕ್ಷರ ಮತ್ತು ಶಬ್ದಗಳನ್ನು ಸಂಯೋಜಿಸುವುದು ಮತ್ತು ಗುರ್ತಿಸುವುದು.**<br>**ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಗುರುತಿಸಿದ ಅಕ್ಷರ ಮಧ್ಯದಲ್ಲಿ ಬರುವಂತೆ ವಿವಿಧ ಪದಗಳನ್ನು ಗುರುತಿಸುವುದು. 3 ನೇ ತರಗತಿಯ ಮಕ್ಕಳು ತಾವೇ ವಿವಿಧ ಪದಗಳಲ್ಲಿ ಮಧ್ಯದ ಅಕ್ಷರ ಗುರುತಿಸುವ ಚಟುವಟಿಕೆ ರೂಪಿಸುವುದು.**<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC-14 (ತರಗತಿ 1, 2, 3)** |
| | | **ಅರ್ಥಗ್ರಹಿಕೆಯೊಂದಿಗಿನ ಓದು** | **ಸಾಮರ್ಥ್ಯ : ಅವಧಾನ ಮತ್ತು ಆಲಿಸುವಿಕೆ**<br>**ಅನುಕ್ರಮ ಚಿಂತನೆ ಸ್ಥೂಲ ಸ್ನಾಯು ಕೌಶಲಗಳ ಅಭಿವೃದ್ಧಿ**<br>**ಚಟುವಟಿಕೆ .19 : ಧ್ವನಿ ವ್ಯತ್ಯಾಸಗಳು (ಗುರಿ–2)**<br>**ಉದ್ದೇಶ ; ಮಕ್ಕಳು ಪದಗಳನ್ನು ಆಲಿಸುವುದರ ಮೂಲಕ ದ್ವನಿ ವ್ಯತ್ಯಾಸಗಳನ್ನು ಗುರುತಿಸುವರು**<br>**ಅಗತ್ಯ ಸಾಮಾಗ್ರಿಗಳು : ಸೀಮೆಸುಣ್ಣ, ಮಾರ್ಕರ್, ಕ್ರೇಯಾನ್ಸ್, ಕ್ರಮಸಂಖ್ಯೆ ಬರೆದಿರುವ ಚಾರ್ಟ್**<br>**ವಿಧಾನ : ಶಿಕ್ಷಕರು ಕಪ್ಪು ಹಲಗೆಯ ಮೇಲೆ 3 ಒಂದೇ ದ್ವನಿಯಿಂದ ಪ್ರಾರಂಭವಾಗುವ ಪದಗಳನ್ನು ಹಾಗು 1 ವಿಭಿನ್ನ ರೀತಿಯ ದ್ವನಿಯಿಂದ ಪ್ರಾರಂಭವಾಗುವ ಪದವನ್ನು ಬರೆದು ಗಟ್ಟಿಯಾಗಿ ಓದುವುವುದು** |

DRAFT 2022

| | | | |
|---|---|---|---|
| | | | ಅವುಗಳಲ್ಲಿ ವಿಭಿನ್ನ ಪದವನ್ನು ಗುರುತಿಸಿ ಮಕ್ಕಳ ಅನುಭವಕ್ಕೆ ತರವುದು. ಉದಾಹರಣೆ ಪಟ, ಪದಕ, ಚರಕ ಪುಸ್ತಕ ಇವುಗಳಲ್ಲಿ ವಿಭಿನ್ನ ಧ್ವನಿಯ ಪದ ಯಾವುದು? ಎಂದು ಕೇಳುವುದು. ಮಕ್ಕಳು ಗುರುತಿಸಿರುವ ಪದಗಳನ್ನು ಚಾರ್ಟನಲ್ಲಿ ಬರೆಯುವುದು.<br>2 ಮತ್ತು 3ನೇ ತರಗತಿಯ ಮಕ್ಕಳಿಗೆ: ಮಕ್ಕಳಿಂದ ದ್ವನಿ ವ್ಯತ್ಯಾಸದ ಪದಗಳನ್ನು ಓದಿಸುವುದು.<br>ಉದಾಹರಣೆ: ಹಕ್ಕಿ–ಅಕ್ಕಿ. ಆರು– ಹಾರು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ವೀಕ್ಷಣೆ, ಕಲ್ಪನೆ, ಸೃಜನಶೀಲ ಚಿಂತನೆ, ಪರಿಸರ ಪ್ರಜ್ಞೆ.<br>ಚಟುವಟಿಕೆ: 35 ಹವಾಮಾನ ನಕ್ಷೆ (ಗುರಿ–2) **ECW-16** (52 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>• ಉದ್ದೇಶಿತ ಬರವಣಿಗೆಯನ್ನು ರೂಢಿಸುವುದು.<br>• ವೀಕ್ಷಣಾ ಕೌಶಲವನ್ನು ಬೆಳೆಸುವುದು.<br>• ಸೃಜನಶೀಲ ಚಿಂತನೆಯನ್ನು ಉತ್ತೇಜಿಸುವುದು.<br>• ಪರಿಸರ ಪ್ರಜ್ಞೆ ಮೂಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ/ ಹಾಳೆಗಳು, ಪೆನ್ಸಿಲ್<br>ವಿಧಾನ : ವಾರದ ದಿನಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>– ವಾರದ ದಿನಗಳ ಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>– ಗುಂಪು ಚಟುವಟಿಕೆಯ ಸಮಯದಲ್ಲಿ ಆ ದಿನದ ಹವಾಮಾನವನ್ನು ಗಮನಿಸಲು ತಿಳಿಸುವುದು.<br>– ಇದರ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ ಖಾಲಿ ಹಾಳೆಗಳನ್ನ ನೀಡಿ ನಿನ್ನೆ–ಇಂದಿನ ಹವಾಮಾನದ ಚಿತ್ರವನ್ನು ಬರೆಯಲು ತಿಳಿಸುವುದು.<br>– ಮಕ್ಕಳ ಕಾರ್ಯಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ದಿನದ ಹವಾಮಾನವನ್ನು ತಮ್ಮ ಪುಸ್ತಕದಲ್ಲಿ ದಾಖಲಿಸುವಂತೆಯೂ 3ನೇ ತರಗತಿಯ ಮಕ್ಕಳು ತರಗತಿ ಹವಾಮಾನ ನಕ್ಷೆಯಲ್ಲಿ ದಿನದ ಹವಾಮಾನವನ್ನು ದಾಖಲಿಸಲು ತಿಳಿಸುವುದು. (64 ನೇ ದಿನಕ್ಕೆ ಮುಂದುವರೆದಿದೆ) |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | **ಹೊರಾಂಗಣ ಆಟಗಳು** | Day 58<br>ಚಟುವಟಿಕೆ: ಸ್ಕಿಪ್ಪಿಂಗ್ (ವೈಯಕ್ತಿಕ)<br>ಸಾಮರ್ಥ್ಯ: ಚುರುಕುತನ , ಕ್ಷಿಪ್ರ ಚಲನೆಯ ಅಭಿವೃದ್ಧಿ<br>ಸಾಮಗ್ರಿ: ಸ್ಕಿಪ್ಪಿಂಗ್ ರೋಪ್<br>ವಿಧಾನ :<br>• ಪ್ರತಿ ಮಗುವು ಸ್ಕಿಪ್ಪಿಂಗ್ ಆಟವನ್ನು ಆಡಲು ಸೂಚಿಸುವುದು.<br>• ಹಗ್ಗಗಳ ಸಂಖ್ಯೆ ಕೊರತೆ ಇದ್ದಲ್ಲಿ ಸಮಯವನ್ನು ನಿಗದಿ ಪಡಿಸುವುದು .<br>• **ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೆ ಇದೆ ಚಟುವಟಿಕೆ ಮುಂದುವರೆಸುವುದು.ುವುದು.** | |
| | **ಕಥಾ ಸಮಯ** | **ಶೀರ್ಷಿಕೆ :** ಕೊಕ್ಕರೆ ಮತ್ತು ಏಡಿ<br>**ಸಾಮಗ್ರಿಗಳು :** ಸಾಹಿತ್ಯ<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ನಿರರ್ಗಳವಾಗಿ ಮಾತನಾಡುವ ಕೌಶಲ ರೂಢಿಸುವುದು.<br>➢ ಸೃಜನ ಶೀಲತೆಯನ್ನು ಅಭಿವೃದ್ಧಿ ಪಡಿಸುವುದು.<br>➢ ಕುತೂಹಲ ಮತ್ತು ಆಸಕ್ತಿಯನ್ನು ಉಂಟುಮಾಡುವುದು. | |

DRAFT 22.02.22

| | | |
|---|---|---|
| | | ➢ ಪ್ರಶಿನಿಸುವ ಮನೋಭಾವ ಬೆಳೆಸುವುದು.<br>➢ ಪದ ಸಂಪತ್ತನ್ನು ಹೆಚ್ಚಿಸುವುದು.<br>ವಿಧಾನ :<br>***ಕಥೆಯ ಸಾಹಿತ್ಯ ಓದು***<br>ಕಥೆಯ ಸಾರಾಂಶವನ್ನು ಹೇಳಿದ ನಂತರ ಸಾಹಿತ್ಯವನ್ನು ಗಟ್ಟಿಯಾಗಿ ಓದಿ, ಕಥೆಯ ಸಂಭಾಷಣೆಯಲ್ಲಿನ ಸಾಲುಗಳನ್ನು ಪುನರುಚ್ಚರಿಸುವುದು ಮತ್ತು ಬರೆಯುವುದು. ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು.<br><br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ಏಡಿಯು ಕೊಕ್ಕರೆಯ ಕುತ್ತಿಗೆಯ ಮೇಲೆ ಕುಳಿತುಕೊಳ್ಳುವೆನು ಎಂದು ಹೇಳಲು ಕಾರಣವೇನು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>• ಮುಂದಿನ ವಾರದಲ್ಲಿ "ಹೊರಸಂಚಾರಕ್ಕೆ ಯೋಜನೆ" ರೂಪಿಸಿ ಮಕ್ಕಳು ವಿವಿಧ ಸಸ್ಯಗಳನ್ನು, ಮರಗಳನ್ನು ವೀಕ್ಷಿಸಲಿ ಇದಕ್ಕಾಗಿ ಅಗತ್ಯ ಸಿದ್ಧತೆ ತಯಾರಿ ಮಾಡಿಕೊಳ್ಳುವುದು. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–10** **ದಿನ–59 (ಶುಕ್ರವಾರ)**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 59 | **ಶುಭಾಶಯ ವಿನಿಮಯ** | **59 ನೇ ದಿನದ ಚಟುವಟಿಕೆಗಳನ್ನು ಮಾಡಿಸುವುದು** |
| | **ಮಾತು ಕತೆ** | **ದಿನ 51 ರ ಮಾತುಕತೆ ಚಟುವಟಿಕೆಯನ್ನು ಮುಂದುವರೆಸಿ. ಪಾಸಿಂಗ್ ದ ಪಾರ್ಸಲ್ ಚಟುವಟಿಕೆಯನ್ನು ಬಳಸಿಕೊಳ್ಳಬಹುದು.** |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು. ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಸಂಖ್ಯೆಗಳನ್ನು ತಿಳಿಯುವುದು**<br>**ಚಟುವಟಿಕೆ 35 ಸಂಖ್ಯಾ ನಕಲು (ಗೋಲ್– 3)**<br>**ಉದ್ದೇಶ:– ಅಂಕಿ ಸಂಖ್ಯೆಗಳ ಆಕಾರಗಳನ್ನು ತಿಳಿಯುವುದು**<br>**ಸಾಮಗ್ರಿಗಳು: ಬೀಜಗಳು, ಹಿಟ್ಟು, ಮರಳು ಪೆಟ್ಟಿಗೆ, ಮರಳು ತುಂಬಿದ ಪಾತ್ರೆ, ಕಡ್ಡಿಗಳು, ಸೀಮೆಸುಣ್ಣ,ಜೇಡಿಮಣ್ಣು.**<br>**ವಿಧಾನ: ಮೊದಲು ಸಂಖ್ಯೆಗಳನ್ನು ಹೇಳಿಸಿ ಪರಿಚಯ ಮಾಡಿಸುವುದು. ನೆಲದ ಮೇಲೆ ಅಂಕಿಗಳನ್ನು ಬರೆದು ಅದರ ಮೇಲೆ ಬೀಜಕಲ್ಲು, ಹಿಟ್ಟನ್ನು ಹಾಕಿ ಅಂಕಿಗಳನ್ನು ಬರೆಯುವ ಸರಿಯಾದ ಕ್ರಮವನ್ನು ಹೇಳಿಕೊಡುವುದು. ಮರಳು ಪೆಟ್ಟಿಗೆ / ಮರಳು ತುಂಬಿದ ಪಾತ್ರೆಯಲ್ಲಿ ಸೀಮೆಸುಣ್ಣ / ಕಡ್ಡಿಗಳಿಂದ ಕೈ ಬೆರಳಿನಿಂದ 0–9 ರವರೆಗೆ ಅಂಕಿಗಳನ್ನು ಅವುಗಳ ಆಕಾರಗಳನ್ನು ಬರೆಯಲು ಪ್ರೋತ್ಸಾಹ ನೀಡುವುದು. ಆಟದ ಮೈದಾನದಲ್ಲಿ ಕೋಲು ಮತ್ತು ಕಡ್ಡಿಗಳಿಂದ ಅಂಕಿಗಳನ್ನು ಬರೆದು ಬೀಜ, ಬೇಳೆ, ಕಲ್ಲುಗಳನ್ನು ಅದರ ಮೇಲೆ ಇಡಲು ಹೇಳುವುದು. ಜೇಡಿಮಣ್ಣು ಅಥವಾ ಹಿಟ್ಟಿನಿಂದ ಅಂಕಿಗಳನ್ನು ರಚಿಸಲು ಮಕ್ಕಳಿಗೆ ಹೇಳುವುದು. 0–9 ರ ಸಂಖ್ಯೆ ರಚಿಸಿ ಪ್ರದರ್ಶನ ಮಾಡಲು ಅವಕಾಶವನ್ನು** |

DRAFT 22.02.22

| | | | |
|---|---|---|---|
| | | | ಕೊಡುವುದು.<br>**2ನೇ ತರಗತಿ**<br>ರಬ್ಬರ್ ಅಂಕಿಗಳನ್ನು ಬಣ್ಣದಲ್ಲಿ ಅದ್ದಿ ಹಾಳೆಯ ಮೇಲೆ ಒತ್ತುವುದು. ಹೀಗೆ ಒತ್ತಿದ ಅಂಕಿಗಳನ್ನು ಓದಿ ಶಾಲೆಯಲ್ಲಿ ಪ್ರದರ್ಶಿಸುವುದು.<br>**3ನೇ ತರಗತಿ**<br>ಜೇಡಿ ಮಣ್ಣಿನಿಂದ ಅಂಕಿಗಳ ಮಾದರಿಗಳನ್ನು ಮಾಡಲು ಸಹಾಯ ಮಾಡುವುದು ಮತ್ತು ಅವುಗಳನ್ನು ಪ್ರದರ್ಶಿಸುವುದು. |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ,<br>ಚಟುವಟಿಕೆ; 50 ವಿವಿಧ ರೀತಿಯ ಅಚ್ಚುಗಳ ರಚನೆ. ಗುರಿ – 1<br>ಉದ್ದೇಶ<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಕಲ್ಪನಾ ಶಕ್ತಿಯ ಅಭಿವೃದ್ಧಿಯಾಗುತ್ತದೆ.<br>ಸಾಮಗ್ರಿಗಳು : ಕಾಗದ/ ದಿನ ಪತ್ರಿಕೆ,ವಿವಿಧ ವಸ್ತುಗಳು , ಅಚ್ಚು ಮಾಡಲು ಬಳಸುವ ವಿವಿಧ ವಸ್ತುಗಳು,ಒರಟು ಬಟ್ಟೆ..ಇತ್ಯಾದಿ<br>ವಿಧಾನ : ಬಣ್ಣದಲ್ಲಿ ಅದ್ದಿ ಅಚ್ಚು ತೆಗೆಯಲು ಬೇರೆ ಬೇರೆ ವಸ್ತುಗಳನ್ನು ಸಂಗ್ರಹಿಸುವುದು. ಉದಾ. ಹಳೆಯ ಬಾಚಣಿಗೆ , ಟ್ವಯಿನ್ ದಾರ ಅಥವಾ ರಬ್ಬರ್ ಬ್ಯಾಂಡಿನಿಂದ ಸುತ್ತಿದ ಬ್ಲಾಕ್ಸ್ , ಪ್ಲಾಸ್ಟಿಕ್ ಅಲ್ಲದ ಹಳೆಯ ಆಟಿಕೆಗಳು ಇತ್ಯಾದಿ..ಹಾಳೆ ವೃತ್ತ ಪತ್ರಿಕೆಯನ್ನು ಪ್ರತಿ ಮಗುವಿಗೂ ನೀಡಿ ವಸ್ತುವನ್ನು ಬಣ್ಣದಲ್ಲಿ ಅದ್ದಿ ಪೇಪರ್ ಮೇಲೆ ಅಚ್ಚುತೆಗೆಯಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿ ಮಕ್ಕಳಿಗೆ ಮೇಲಿನ ಚಟುವಟಿಕೆಯನ್ನೇ ಮಾಡಿಸುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ : ಪದ ಸಂಪತ್ತಿನ ಅಭಿವೃದ್ಧಿ, ಊಹಿಸುವುದು, ತಂಡದ ಸದಸ್ಯರೊಂದಿಗೆ ಸಹಕಾರದಿಂದ ಕೆಲಸ. ಸೂಚನೆಗಳ ಪಾಲನೆ.**<br>**ಚಟುವಟಿಕೆ .6 ವಸ್ತುವನ್ನು ಊಹಿಸು (ಗುರಿ–2) ECL-7**<br>**ಉದ್ದೇಶಗಳು:**<br>* ಸೂಕ್ತ ಪದ ರಚಿಸುವುದು.<br>* ಸಾಂಘಿಕ ಮನೋಭಾವನೆ ಬೆಳೆಸುವುದು.<br>* ಸೂಚನೆಗಳನ್ನು ಎಚ್ಚರಿಕೆಯಿಂದ ಆಲಿಸಿ ಅನುಸರಿಸುವುದು.<br>* ಪದ ಸಂಪತ್ತನ್ನು ಅಭಿವೃದ್ಧಿ ಪಡಿಸುವುದು.<br>ಅಗತ್ಯ ಸಾಮಗ್ರಿಗಳು : ಬ್ಯಾಗ್, ಲಭ್ಯ ವಸ್ತುಗಳು<br>ವಿಧಾನ : ತರಗತಿಯಲ್ಲಿರುವ ಸೀಮೆ ಸುಣ್ಣ, ರಬ್ಬರ್, ಡಸ್ಟರ್ , ಡೈಸ್ ಮೊದಲಾದ ವಸ್ತುಗಳನ್ನು ಒಂದು ಚೀಲದಲ್ಲಿ ಹಾಕಿ..<br>– ಮಕ್ಕಳನ್ನು ಒಬ್ಬೊಬ್ಬರಾಗಿ ಕರೆದು ಬ್ಯಾಗ್‌ನಲ್ಲಿರುವ ವಸ್ತುಗಳಲ್ಲಿ ಯಾವುದಾದರೂ ಒಂದು ವಸ್ತುವನ್ನು ಸ್ಪರ್ಶಿಸಿ, ಆ ವಸ್ತುಗಳನ್ನು ಊಹಿಸಲು ಹೇಳುವುದು. ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಕ್ಕಳು ವಸ್ತುವನ್ನು ಸರಿಯಾಗಿ ಗುರುತಿಸಲು ಸಹಾಯ ಮಾಡುವುದು.<br>ಉದಾಹರಣೆಗಾಗಿ:<br>• ನೀನು ಸ್ಪರ್ಶಿಸುತ್ತಿರುವ ವಸ್ತು ದೊಡ್ಡದೋ ಚಿಕ್ಕದೋ ?<br>• ನೀನು ಸ್ಪರ್ಶಿಸುತ್ತಿರುವ ವಸ್ತುವಿನ ಆಕಾರ ಹೇಗಿದೆ?<br>• ಯಾವ್ಯದರಿಂದ ಆ ವಸ್ತು ಮಾಡಲ್ಪಟ್ಟಿದೆ?<br>• ನೀನು ಸ್ಪರ್ಶಿಸುತ್ತಿರುವ ವಸ್ತು ಗಟ್ಟಿಯಾಗಿದೆಯೇ? ಮೃದುವಾಗಿದೆಯೇ?<br>• ನೀನು ಸ್ಪರ್ಶಿಸುತ್ತಿರುವ ವಸ್ತು ಏನಿರಬಹುದು?<br>– ಮಕ್ಕಳು ಗುರುತಿಸಿದ ವಸ್ತುಗಳ ಕುರಿತು ಅವರೊಂದಿಗೆ ಚರ್ಚಿಸುವುದು.<br>ತರಗತಿಯ ವಿವರ: 2 ನೇ ತರಗತಿಯ ಮಕ್ಕಳು ತಾವು ಗುರುತಿಸಿದ ವಸ್ತುವಿನ ಬಗ್ಗೆ 3–4 ವಾಕ್ಯಗಳಲ್ಲಿ ಮಾತನಾಡುವುದು. |

DRAFT 2022

| | | | |
|---|---|---|---|
| | | | 3 ನೇ ತರಗತಿಯ ಮಕ್ಕಳು 2 ರಿಂದ 3 ನಿಮಿಷ ಆ ವಸ್ತುವಿನ ಬಗ್ಗೆ ಮಾತನಾಡುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಚಟುವಟಿಕೆ....18<br>ಚಿತ್ರ ಸಂಪುಟ (ಗುರಿ–2) ವಿಷಯ: ಮಕ್ಕಳ ಇಷ್ಟದ ಯಾವುದೇ ವಿಷಯ<br>ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥ ಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>ಅಗತ್ಯ ಸಾಮಗ್ರಿಗಳು : ಕಾಗದ, ಕ್ರೇಯಾನ್ಸ್, ಅಂಟು, ವಿವಿಧ ಚಿತ್ರಗಳು.<br>ವಿಧಾನ : * ಮಕ್ಕಳಿಗೆ ಪರಿಚಿತವಿರುವ ಹಾಡು ಮತ್ತು ಶಿಶುಗೀತೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಗುರುತಿಸುವುದು.<br>* ಹಾಡು/ಕಥೆಯಲ್ಲಿರುವ ವಿಶೇಷ ಪದಗಳನ್ನು ಗುರುತಿಸಿ ಹೆಸರಿಸುವುದು.<br>* ಹಾಡು/ಕಥೆಯಲ್ಲಿ ಬರುವ ಮುಖ್ಯ ಪಾತ್ರಗಳನ್ನು ಗುರುತಿಸುವುದು ಮತ್ತು ಪುನರಾವರ್ತಿತ ಪದ/ಸಾಲುಗಳನ್ನು ಹೇಳುವುದು/ಬರೆಯುವುದು.<br>* ಚಿತ್ರ ಸಂಪುಟವನ್ನು ವೈಯಕ್ತಿಕ ಮತ್ತು ಗುಂಪಿನಲ್ಲಿ ಮಕ್ಕಳಿಂದ ತಯಾರಿಸುವುದು.<br>ವೈಯಕ್ತಿಕ ಚಿತ್ರ ಸಂಪುಟ.– ಕಥೆ ಅಥವಾ ಹಾಡುಗಳಲ್ಲಿ ಬರುವ ವಸ್ತುಗಳು ಅಥವಾ ವಿಶೇಷ ಪದಗಳನ್ನು ಪ್ರತಿ ಮಗು ಚಿತ್ರಿಸಲು ಅನುವು ಮಾಡಿಕೊಡುವುದು.<br>ಉದಾ.. ಮರ, ಬಸ್ಸು, ಪ್ರಾಣಿ ಇತ್ಯಾದಿ ಚಿತ್ರಗಳು.<br>ಗುಂಪು ಚಿತ್ರ ಸಂಪುಟ– ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ವಿವಿಧ ವಿಷಯಗಳ ಕುರಿತು ಚರ್ಚಿಸಲು ಅವಕಾಶ ಕಲ್ಪಿಸುವುದು.<br>ಉದಾ–ಉದ್ಯಾನವನದಲ್ಲಿ ನೋಡಿರುವ ವಸ್ತುಗಳ್ರು, ರಾತ್ರಿಯ ವೇಳೆ ನೋಡಬಹುದಾದ ವಸ್ತುಗಳು, ನೀರಿನಲ್ಲಿ ಕಾಣಬಹುದಾದ ವಸ್ತುಗಳು, ಭೂಮಿಯೊಳಗೆ ಹುಡುಕಬಹುದಾದ ವಸ್ತುಗಳು..ಇತ್ಯಾದಿ. ಚಿತ್ರಗಳು<br>* ತಮಗಿಷ್ಟವಾದ ವಿಷಯದ ಕುರಿತು ತಮ್ಮದೇ ಕಲ್ಪನೆಯಲ್ಲಿ ಚಿತ್ರ ಬಿಡಿಸಲು ತಿಳಿಸುವುದು.<br>* ಮಕ್ಕಳು ಬರೆದ ಚಿತ್ರಗಳನ್ನು ಹೆಸರಿಸಲು ತಿಳಿಸುವುದು.<br>* ನಂತರ ಎಲ್ಲಾ ಚಿತ್ರಗಳನ್ನು ಸೇರಿಸಿ ಚಿತ್ರ ಸಂಪುಟವನ್ನು ಸಿದ್ಧಪಡಿಸಲು ಅವಕಾಶ ಮಾಡಿಕೊಡುವುದು.<br>* ಮಕ್ಕಳು ತಯಾರಿಸಿದ ಚಿತ್ರಸಂಪುಟವನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br><br>ನೀನೇ ಮಾಡಿನೋಡು: ಮಕ್ಕಳ ಸ್ನೇಹಿ ಕತ್ತರಿಯನ್ನು ನೀಡಿ, ಸೂಕ್ತ ಚಿತ್ರಗಳನ್ನು ಕತ್ತರಿಸಿ ಅವರ ಸ್ವಂತ ಚಿತ್ರಕೋಶವನ್ನು ರಚಿಸಲು ಪ್ರೇರೇಪಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ : ಮಕ್ಕಳೊಂದಿಗೆ ಬರವಣಿಗೆ, ಉದ್ದೇಶಿತ ಬರವಣಿಗೆ, ಅವಧಾನ ಮತ್ತು ಆಲಿಸುವುದು, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ ಸಂಖ್ಯೆ : 32 ಹಂಚಿತ ಬರೆಹ (ಗುರಿ : 2) **ECW-8**<br>ಉದ್ದೇಶಗಳು:<br>• ಹಂಚಿತ ಬರವಣಿಗೆಯನ್ನು ಪರಿಚಯಿಸುವುದು.<br>• ಉದ್ದೇಶಕ್ಕನುಸಾರವಾಗಿ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿಸುವುದು.<br>• ಅವಧಾನದೊಂದಿಗೆ ಉದ್ದೇಶಿತ ಬರೆಹದಲ್ಲಿ ತೊಡಗಿಸುವುದು.<br>• ಸೃಜನಾತ್ಮಕವಾಗಿ ಚಿಂತಿಸಿ ಅವುಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವುದು.<br>• ಪದ ಸಂಪತ್ತನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು: ಕಪ್ಪುಹಲಗೆ ಡ್ರಾಯಿಂಗ್ ಶೀಟ್<br>ವಿಧಾನ: ಹಂಚಿತ ಬರೆಹ ಚಟುವಟಿಕೆಗಳನ್ನು ತಿಂಗಳಿಗೆ ಎರಡು ಅಥವಾ ಮೂರು ಬಾರಿ ಆಯೋಜಿಸುವುದು. ಒಂದು ವಿಷಯವನ್ನು ನೀಡಿ ಆ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಕಥೆಯ ಮೂಲಕ ಅಥವಾ ಬರವಣಿಗೆ ಮೂಲಕ ಹಂಚಿಕೊಳ್ಳಲು ತಿಳಿಸುವುದು.<br>ಸಲಹಾತ್ಮಕ ಸೂಚಿತ ವಿಷಯ:– ನಾವು ಆಡುವ ಆಟಗಳು<br>ಗಮನಿಸಬೇಕಾದ ಅಂಶಗಳು:<br>• ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಾಕ್ಯಗಳನ್ನು ರಚಿಸಲು ಅಗತ್ಯ ಸುಳಿವುಗಳನ್ನು ನೀಡುವುದು. ಮಕ್ಕಳೊಂದಿಗೆ |

DRAFT 22.02.22

| | |
|---|---|
| | ಬರವಣಿಗೆಯಲ್ಲಿ ತೊಡಗಿಕೊಳ್ಳುವ ಮೂಲಕ ಬರವಣಿಗೆಯ ಪ್ರಾತ್ಯಕ್ಷಿಕೆ ನೀಡುವುದು<br>• ಶಿಕ್ಷಕರು ಮೊದಲನೇ ವಾಕ್ಯವನ್ನು ಬರೆದು ಓದುವುದು. ನಂತರ ಮಕ್ಕಳು ತಮ್ಮ ಸ್ವಂತ ವಾಕ್ಯವನ್ನು ಹೇಳಿ ಬರೆಯಲು ತಿಳಿಸುವುದು.<br>• ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಪ್ರತಿಕ್ರಿಯಿಸಲು ಅವಕಾಶ ಕಲ್ಪಿಸಬಹುದು. ಅಂತಹ ಸನ್ನಿವೇಶದಲ್ಲಿ ಶಿಕ್ಷಕರು ಅದನ್ನು ಶಾಲಾ ಭಾಷೆಯಲ್ಲಿ ಅನುವಾದಿಸಿ ಹೇಳುವುದು.<br>ತರಗತಿವಾರು ವಿವರ: 1ನೇ ತರಗತಿಯವರು ವಿವರಿಸಿದ ಅಂಶಗಳನ್ನು 2ನೇ ಹಾಗೂ 3ನೇ ತರಗತಿಯ ಮಕ್ಕಳು ಬರವಣಿಗೆ ಮೂಲಕ ಅಭಿವ್ಯಕ್ತಿಪಡಿಸಲು ತಿಳಿಸುವುದು. |
| | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| ಹೊರಾಂಗಣ ಆಟಗಳು | ಚಟುವಟಿಕೆ: ಸ್ಕಿಪ್ಪಿಂಗ್ (ವೈಯಕ್ತಿಕ)<br>ಸಾಮರ್ಥ್ಯ: ಚುರುಕುತನ , ಕ್ಷಿಪ್ರ ಚಲನೆಯ ಅಭಿವೃದ್ಧಿ ಸಾಮಗ್ರಿ: ಸ್ಕಿಪ್ಪಿಂಗ್ ರೋಪ್<br>ವಿಧಾನ : ವೈಯಕ್ತಿಕ ಹಗ್ಗದ ಆಟವನ್ನು ಮುಂದುವರಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿಯ ಮಕ್ಕಳಿಗೆ ಇದೆ ಚಟುವಟಿಕೆ ಮುಂದುವರೆಸುವುದುಉವುದು.**<br> |
| ಕಥಾ ಸಮಯ | **ಶೀರ್ಷಿಕೆ :** ಕೊಕ್ಕರೆ ಮತ್ತು ಏಡಿ<br>**ಸಾಮಗ್ರಿಗಳು :** ಬೆರಳುಗೊಂಬೆಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ನಿರರ್ಗಳವಾಗಿ ಮಾತನಾಡುವ ಕೌಶಲ ರೂಢಿಸುವುದು.<br>➢ ಸೃಜನ ಶೀಲತೆಯನ್ನು ಅಭಿವೃದ್ಧಿ ಪಡಿಸುವುದು.<br>➢ ಕುತೂಹಲ ಮತ್ತು ಆಸಕ್ತಿಯನ್ನು ಉಂಟುಮಾಡುವುದು.<br>➢ ಪ್ರಶ್ನಿಸುವ ಮನೋಭಾವ ಬೆಳೆಸುವುದು.<br>➢ ಪದ ಸಂಪತ್ತನ್ನು ಹೆಚ್ಚಿಸುವುದು.<br>➢ **ಗ್ರಾಂಥಿಕ ಶಬ್ದಗಳನ್ನು ಪರಿಚಯಿಸುವುದು.**<br>➢ **ಮೌಲ್ಯಗಳನ್ನು ರೂಢಿಸುವುದು.**<br>➢ **ಅಭಿವ್ಯಕ್ತಿ ಸಾಮರ್ಥ್ಯ ಹೆಚ್ಚಿಸುವುದು.**<br>**ವಿಧಾನ :**<br>***ಪಾತ್ರಾಭಿನಯ***<br>➢ ಕಥೆಯನ್ನು ಪುನರಾವಲೋಕನ ಮಾಡಿಕೊಳ್ಳುವುದು.<br>➢ ಕಥೆಯ ನಿರೂಪಣೆಯನ್ನುಮಾಡಲುಎರಡು ಮತ್ತು ಮೂರನೇತರಗತಿಯ ಮಕ್ಕಳಿಗೆ ಸಹಕರಿಸುವುದು.<br>➢ ಕೈ ಬೆರಳುಗಳಿಗೆ ಕಥೆಯ ಪಾತ್ರಗಳ ಚಿತ್ರಗಳನ್ನು ಜೋಡಿಸಿ, ಪಾತ್ರಗಳಿಗೆ ತಕ್ಕಂತೆ ಇರುವ ಸಂಭಾಷಣೆಯನ್ನು ಹೇಳಲು ಮಕ್ಕಳನ್ನು ಪ್ರೇರೇಪಿಸುವದು. |
| ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

DRAFT 22.02.22

| | | |
|---|---|---|
| | | • ಮುಂದಿನ ವಾರದಲ್ಲಿ "ಹೊರಸಂಚಾರಕ್ಕೆ ಯೋಜನೆ" ರೂಪಿಸಿ ಮಕ್ಕಳು ವಿವಿಧ ಸಸ್ಯಗಳನ್ನು, ಮರಗಳನ್ನು ವೀಕ್ಷಿಸಲಿ ಇದಕ್ಕಾಗಿ ಅಗತ್ಯ ಸಿದ್ಧತೆ ತಯಾರಿ ಮಾಡಿಕೊಳ್ಳುವುದು. |

## ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

**ವಾರ–10** **ದಿನ–60 (ಶನಿವಾರ)**

| | | | | |
|---|---|---|---|---|
| | ಪ್ರತಿಬಿಂಬ (ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | | |
| | ನನ್ನ ಸಾಧನೆ | | | |
| | ಕಲಿಕಾಫಲಗಳು | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
| | ಹಬ್ಬಗಳು, ಘಟನೆಗಳು ಮತ್ತು ಸ್ನೇಹಿತರ ಬಗ್ಗೆ ಮಾತನಾಡುವರು. | | | |
| | ಸ್ಪರ್ಶಜ್ಞಾನದಿಂದ ವಿನ್ಯಾಸವನ್ನು ಗುರುತಿಸುವರು. | | | |
| | ಸಮಸ್ಯೆ ಗುರುತಿಸಿ ಪರಿಹರಿಸುವರು. | | | |
| | ಶಿಶುಗೀತೆ/ಹಾಡುಗಳನ್ನು ಹಾಡಿ ಆನಂದಿಸುವರು. | | | |
| | ಶಬ್ದ–ಸಂಕೇತ ಸಹಸಂಬಂಧ ಗುರುತಿಸುವರು. | | | |
| | ಆರೋಗ್ಯಕರ ಆಹಾರ ಪದ್ಧತಿಯನ್ನು ಅನುಸರಿಸುವರು. | | | |
| | ಆರೋಗ್ಯಕರ ನೈರ್ಮಲ್ಯದ ಅಭ್ಯಾಸಗಳನ್ನು ರೂಢಿಸಿಕೊಳ್ಳುವರು. | | | |
| | ಗುಂಪು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವರು. | | | |
| | ಚಟುವಟಿಕೆಗಳು ನಡೆಯುವಾಗ ಮುಂದಾಳತ್ವ ತೆಗೆದುಕೊಳ್ಳುವರು. | | | |
| | ಸರಳ ಹಾಗೂ ಅನೌಪಚಾರಿಕ ಅಳತೆಯನ್ನು ಸ್ವತಂತ್ರವಾಗಿ ಮಾಡುವರು. | | | |
| | ಚಿಕ್ಕದು–ದೊಡ್ಡದು, ಎತ್ತರ–ಗಿಡ್ಡ, ಭಾರ–ಹಗುರ ಈ ಪದಕೋಶಗಳನ್ನು ಬಳಸಿ ಹೇಳುವರು. | | | |
| | ಚಿತ್ರ ಓದಿ ಸರಳ ಪದಗಳಲ್ಲಿ ವಿವರಿಸುವರು. | | | |

DRAFT 22.02.22

# ವಿದ್ಯಾಪ್ರವೇಶ 72 ದಿನಗಳ ಚಟುವಟಿಕೆಗಳು

## ವಾರ–11 ದಿನ–61 (ಸೋಮವಾರ)

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 61 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | **ಚಟುವಟಿಕೆ 1:**<br>1. ಶಾಲೆಗೆ ಮೊದಲು ಆಗಮಿಸಿದ ಮಗುವಿಗೆ ಪೇಪರಿನಿಂದ ಮಾಡಿದ ಕಿರೀಟ ಹಾಕಿ ಸ್ವಾಗತಿಸುವುದು.<br>2. ಹೀಗೆ ಮಗುವಿಗೆ ಸರಿಯಯಾದ ಸಮಯಕ್ಕೆ ಶಾಲೆಗೆ ಬರಲು ಪ್ರೇರೆಪಿಸುವುದು.<br>**ಚಟುವಟಿಕೆ 32:**<br>35 ನೇ ದಿನದ ಚಟುವಟಿಕೆಗಳನ್ನು ಮಾಡಿಸುವುದು |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ಚಟುವಟಿಕೆ : ನೆನಪಿಡಬಹುದೇ?<br>ವಿಧಾನ:<br>• ಮಕ್ಕಳನ್ನು ಅರ್ಧ–ವೃತ್ತಾಕಾರದಲ್ಲಿ ಕುಳಿತುಕೊಳ್ಳುವಂತೆ ಮಾಡಿ.<br>• ಹುಟ್ಟುಹಬ್ಬದ ಆಚರಣೆಗೆ ಸಂಬಂಧಿಸಿದಂತೆ ಮಗುವಿನ ಕಿವಿಯಲ್ಲಿ ಒಂದು ವಾಕ್ಯನ್ನು ಮೆಲ್ಲನೆ ಹೇಳಿ.<br>• ನಂತರ ಪ್ರತಿ ಮಗುವು ಕೊನೆಯ ಮಗುವಿಗೆ ಸಂದೇಶವನ್ನು ತಲುಪಿಸುವವರೆಗೆ ವೃತ್ತದಲ್ಲಿರುವ ಮುಂದಿನ ಮಗುವಿಗೆ ಸಂದೇಶವನ್ನು ಪಿಸುಗುಟ್ಟುತ್ತದೆ.<br>• ಕೊನೆಯ ಮಗುವಿಗೆ ಸಂದೇಶವನ್ನು ಜೋರಾಗಿ ಹೇಳಲು ಹೇಳಿ.<br>• ಆಟ ಮುಂದುವರಿಯುತ್ತದೆ.<br>• ಈ ಬಾರಿ ನೀವು ಸಂದೇಶವನ್ನು ಪಿಸುಗುಟ್ಟಲು ಮತ್ತೊಂದು ಮಗುವನ್ನು ಆಯ್ಕೆ ಮಾಡಬಹುದು.<br>ಚಟುವಟಿಕೆ :ನನ್ನ ಜನ್ಮದಿನದಂದು<br>ಸಾಮಗ್ರಿಗಳು: ಜನ್ಮದಿನವನ್ನು ಆಚರಿಸಲು ಬಳಸುವ ವಸ್ತುಗಳನ್ನು ಇರಿಸಿ: ಪಾರ್ಟಿ ಹ್ಯಾಟ್, ಮೇಣದ ಬತ್ತಿಗಳು, ಬಲೂನ್ ಗಳು, ಚಾಕೊಲೇಟ್ ಗಳು, ರಿಬ್ಬನ್ ಗಳು, ಉಡುಗೊರೆ–ಹೊದಿಕೆಗಳು, ಹೂವುಗಳು, ಅಲಂಕಾರ ಕಾಗದಗಳು ಇತ್ಯಾದಿ.<br>ವಿಧಾನ:<br>• ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ.<br>• ಪಟ್ಟಿ ಮಾಡಿದ ವಸ್ತುಗಳನ್ನು ವೃತ್ತದ ಮಧ್ಯದಲ್ಲಿ ಇರಿಸಿ.<br>• ನಂತರ ಒಂದು ಮಗುವನ್ನು ಕರೆದು ವಸ್ತುಗಳಲ್ಲಿ ಒಂದನ್ನು ಆಯ್ಕೆ ಮಾಡಿ ಹೆಸರಿಸಲು ತಿಳಿಸಿ.ನಂತರ ಪಟ್ಟಿ ಮಾಡಿದ ವಸ್ತುಗಳ ಬಗ್ಗೆ ಅವರ ಅಭಿಪ್ರಾಯವನ್ನು ಪಡೆಯಲು ಕೆಲವು ಪ್ರಶ್ನೆಗಳನ್ನು ಕೇಳಿ<br>ನೀವು ಅವರನ್ನು ಎಲ್ಲಿ ನೋಡಿದ್ದೀರಿ?<br>ನಾವು ಅವುಗಳನ್ನು ಎಲ್ಲಿ ಬಳಸುತ್ತೇವೆ?<br>ನೀವು ಎಂದಾದರೂ ಅವುಗಳನ್ನು ಬಳಸಿದ್ದೀರಾ?<br>ನೀವು ನಿಮ್ಮ ಜನ್ಮದಿನವನ್ನು ಆಚರಿಸುತ್ತೀರಾ? |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ** | **ಸಾಮರ್ಥ್ಯ: ಕ್ರಮಾನುಗತ ಎಣಿಕೆಯ ಜ್ಞಾನ**<br>**ಚಟುವಟಿಕೆ...36 ಸಂಖ್ಯೆಗಳ ಹಿಮ್ಮುಖ ಎಣಿಕೆ (ಗುರಿ 3)**<br>**ಉದ್ದೇಶ:– ಹಿಮ್ಮುಖ ಎಣಿಕೆ ಕ್ರಮವನ್ನು ರೂಢಿಸುವುದು.**<br>**ಅಗತ್ಯ ಸಾಮಗ್ರಿಗಳು : ಎಣಿಸಬಹುದಾದ ಲಭ್ಯ ವಸ್ತುಗಳು/ಮಿಂಚುಪಟ್ಟಿಗಳು** |

DRAFT 2022

| | | | |
|---|---|---|---|
| | ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | | ವಿಧಾನ : 9 ವಸ್ತುಗಳನ್ನು ಸಾಲಾಗಿ ಜೋಡಿಸುವುದು.ಜೋಡಿಸಿದ ವಸ್ತುಗಳನ್ನು ಮಕ್ಕಳಿಂದ ಎಣಿಸುವುದು. ಅದೇ ರೀತಿ 1 ರಿಂದ 9ರ ವರೆಗಿನ ಮಿಂಚುಪಟ್ಟಿಗಳನ್ನು ನೀಡಿ ಕ್ರಮಾಗತವಾಗಿ ಜೋಡಿಸಿ ಹಿಮ್ಮುಖವಾಗಿ ಎಣಿಸುವುದು.ಇದೇ ರೀತಿ ಮುಮ್ಮುಖ ಹಾಗೂ ಹಿಮ್ಮುಖ ಎಣಿಕೆಯ ಕ್ರಮವನ್ನು ಅಭ್ಯಾಸ ಮಾಡಿಸುವುದು.<br>2ನೇ ತರಗತಿ<br>10 ವಿದ್ಯಾರ್ಥಿಗಳನ್ನು ನಿಲ್ಲಿಸಿ 1 ರಿಂದ 10 ರವರೆಗಿನ ಸಂಖ್ಯೆಗಳನ್ನು ಮುಮ್ಮುಖವಾಗಿ ಹೇಳಿಸುವುದು. ನಂತರ ಹಿಮ್ಮುಖವಾಗಿ ಹೇಳಿಸಿ ಬರೆಯಿಸುವುದು.<br>3ನೇ ತರಗತಿ<br>1 ರಿಂದ 20 ರವರೆಗೆ ಕಲ್ಲುಗಳನ್ನು ಕ್ರಮವಾಗಿ ಜೋಡಿಸಿ ಸಂಖ್ಯೆಗಳನ್ನು ಹೇಳಿಸುವುದು. ನಂತರ ಸಂಖ್ಯೆಗಳನ್ನು ಮುಮ್ಮುಖ ಮತ್ತು ಹಿಮ್ಮುಖವಾಗಿ ಹೇಳುತ್ತಾ ಬರೆಯಲು ತಿಳಿಸುವುದು. |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಎ.. **ಅಕ್ಷರಗಳ ಮೇಲೆ ತಿದ್ದುವುದು.** ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>.<br>ಸಾಮಗ್ರಿಗಳು : ಮರಳು.<br>ವಿಧಾನ : ಮಕ್ಕಳಿಗೆ ತಮಗೆ ಗೊತ್ತಿರುವ ಸರಳ ಇಂಗ್ಲಿಷ್ ಪದಗಳನ್ನು ಬರೆಸಿ ಅದರ ಮೇಲೆ ಕಲ್ಲು /ಕಡ್ಡಿ/ಮಣಿ/ ಸ್ಟ್ರಾಗಳನ್ನು ಜೋಡಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ತಮಗೆ ಗೊತ್ತಿರುವ 3–4 ಅಕ್ಷರಗಳ ಇಂಗ್ಲಿಷ್, ಪದಗಳನ್ನು ಬರೆದು. ಅದರ ಮೇಲೆ ಕಲ್ಲು /ಕಡ್ಡಿ/ಮಣಿ/ ಸ್ಟ್ರಾಗಳನ್ನು ಜೋಡಿಸಲು ಹೇಳುವುದು |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ: ಧ್ವನಿ ಸಂಕೇತಗಳ ಸಂಯೋಜನೆ, ಅವಧಾನ ಮತ್ತು ಆಲಿಸುವುದು.<br>ಚಟುವಟಿಕೆ 29 : ಮಧ್ಯದ ಅಕ್ಷರ ಗುರ್ತಿಸು (ಅ ರ ಸ) (ಗುರಿ–2) **ECL-21**<br>ಉದ್ದೇಶ :<br>* ಪದಗಳಲ್ಲಿಯ ಅಕ್ಷರಗಳ ಅಕ್ಷರ–ಧ್ವನಿ ಸಹ ಸಂಬಂಧ ಗುರುತಿಸುವುದು.<br>* ಗಮನವಿಟ್ಟು ಆಲಿಸಿ ಅಕ್ಷರ–ಧ್ವನಿ ಸಹ ಸಂಬಂಧ ಅರ್ಥೈಸಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ಕಪ್ಪು ಹಲಗೆ, ಮಿಂಚುಪಟ್ಟಿ<br>ವಿಧಾನ: ಮಿಂಚುಪಟ್ಟಿಯಲ್ಲಿ ಬರೆದ ಪದಗಳನ್ನು ಪ್ರದರ್ಶಿಸುವುದು. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ, ಸ್ವರಾಕ್ಷರಗಳ ಪರಿಚಯಿಸುವುದು. ಪದದ ಮಧ್ಯದಲ್ಲಿರುವ ಅಕ್ಷರವನ್ನು ಗುರುತಿಸಲು ತಿಳಿಸುವುದು. ಕಪ್ಪುಹಲಗೆಯಲ್ಲಿ ಬರೆಯುವುದ ಮಕ್ಕಳಿಂದ ಹೇಳಿಸುವುದು. ಅಕ್ಷರ ಮತ್ತು ಶಬ್ದಗಳನ್ನು ಸಂಯೋಜಿಸುವುದು ಮತ್ತು ಗುರ್ತಿಸುವುದು.<br>ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಗುರುತಿಸಿದ ಅಕ್ಷರ ಮಧ್ಯದಲ್ಲಿ ಬರುವಂತೆ ವಿವಿಧ ಪದಗಳನ್ನು ಗುರುತಿಸುವುದು. 3 ನೇ ತರಗತಿಯ ಮಕ್ಕಳು ತಾವೇ ವಿವಿಧ ಪದಗಳಲ್ಲಿ ಮಧ್ಯದ ಅಕ್ಷರ ಗುರುತಿಸುವ ಚಟುವಟಿಕೆ ರೂಪಿಸುವುದು.<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC-15 (ತರಗತಿ 1, 2, 3)** |
| | | ಅರ್ಥಗ್ರಹಿಕೆಯೊಂದಿಗಿನ ಓದು | ಚಟುವಟಿಕೆ....18<br>ಚಿತ್ರ ಸಂಪುಟ (ಗುರಿ–2) ವಿಷಯ: ಮಕ್ಕಳ ಇಷ್ಟದ ಯಾವುದೇ ವಿಷಯ<br>ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥ ಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>ಅಗತ್ಯ ಸಾಮಗ್ರಿಗಳು : ಕಾಗದ, ಕ್ರೇಯಾನ್ಸ್, ಅಂಟು, ವಿವಿಧ ಚಿತ್ರಗಳು.<br>ವಿಧಾನ : * ಮಕ್ಕಳಿಗೆ ಪರಿಚಿತವಿರುವ ಹಾಡು ಮತ್ತು ಶಿಶುಗೀತೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು |

DRAFT 22.02.22

| | | | |
|---|---|---|---|
| | | | ಗುರುತಿಸುವುದು.<br>* ಹಾಡು/ಕಥೆಯಲ್ಲಿರುವ ವಿಶೇಷ ಪದಗಳನ್ನು ಗುರುತಿಸಿ ಹೆಸರಿಸುವುದು.<br>* ಹಾಡು/ಕಥೆಯಲ್ಲಿ ಬರುವ ಮುಖ್ಯ ಪಾತ್ರಗಳನ್ನು ಗುರುತಿಸುವುದು ಮತ್ತು ಪುನರಾವರ್ತಿತ ಪದ/ಸಾಲುಗಳನ್ನು ಹೇಳುವುದು/ಬರೆಯುವುದು.<br>* ಚಿತ್ರ ಸಂಪುಟವನ್ನು ವೈಯಕ್ತಿಕ ಮತ್ತು ಗುಂಪಿನಲ್ಲಿ ಮಕ್ಕಳಿಂದ ತಯಾರಿಸುವುದು.<br>ವೈಯಕ್ತಿಕ ಚಿತ್ರ ಸಂಪುಟ.– ಕಥೆ ಅಥವಾ ಹಾಡುಗಳಲ್ಲಿ ಬರುವ ವಸ್ತುಗಳು ಅಥವಾ ವಿಶೇಷ ಪದಗಳನ್ನು ಪ್ರತಿ ಮಗು ಚಿತ್ರಿಸಲು ಅನುವು ಮಾಡಿಕೊಡುವುದು.<br>ಉದಾ.. ಮರ, ಬಸ್ಸು, ಪ್ರಾಣಿ ಇತ್ಯಾದಿ ಚಿತ್ರಗಳು.<br>ಗುಂಪು ಚಿತ್ರ ಸಂಪುಟ– ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ವಿವಿಧ ವಿಷಯಗಳ ಕುರಿತು ಚರ್ಚಿಸಲು ಅವಕಾಶ ಕಲ್ಪಿಸುವುದು.<br>ಉದಾ–ಉದ್ಯಾನವನದಲ್ಲಿ ನೋಡಿರುವ ವಸ್ತುಗಳು, ರಾತ್ರಿಯ ವೇಳೆ ನೋಡಬಹುದಾದ ವಸ್ತುಗಳು, ನೀರಿನಲ್ಲಿ ಕಾಣಬಹುದಾದ ವಸ್ತುಗಳು, ಭೂಮಿಯೊಳಗೆ ಹುಡುಕಬಹುದಾದ ವಸ್ತುಗಳು..ಇತ್ಯಾದಿ. ಚಿತ್ರಗಳು<br>* ತಮಗಿಷ್ಟವಾದ ವಿಷಯದ ಕುರಿತು ತಮ್ಮದೇ ಕಲ್ಪನೆಯಲ್ಲಿ ಚಿತ್ರ ಬಿಡಿಸಲು ತಿಳಿಸುವುದು.<br>* ಮಕ್ಕಳು ಬರೆದ ಚಿತ್ರಗಳನ್ನು ಹೆಸರಿಸಲು ತಿಳಿಸುವುದು.<br>* ನಂತರ ಎಲ್ಲಾ ಚಿತ್ರಗಳನ್ನು ಸೇರಿಸಿ ಚಿತ್ರ ಸಂಪುಟವನ್ನು ಸಿದ್ಧಪಡಿಸಲು ಅವಕಾಶ ಮಾಡಿಕೊಡುವುದು.<br>* ಮಕ್ಕಳು ತಯಾರಿಸಿದ ಚಿತ್ರಸಂಪುಟವನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br><br>ನೀನೇ ಮಾಡಿನೋಡು: ಮಕ್ಕಳ ಸ್ನೇಹಿ ಕತ್ತರಿಯನ್ನು ನೀಡಿ, ಸೂಕ್ತ ಚಿತ್ರಗಳನ್ನು ಕತ್ತರಿಸಿ ಅವರ ಸ್ವಂತ ಚಿತ್ರಕೋಶವನ್ನು ರಚಿಸಲು ಪ್ರೇರೇಪಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ, ಆಲಿಸಿ ಅರ್ಥ ಮಾಡಿಕೊಳ್ಳುವುದು, ಪರಿಸರದ ಅರಿವು.<br>ಚಟುವಟಿಕೆ....33 ಪಟ್ಟಿ ಮಾಡೋಣ (ಗುರಿ–2) **ECW-10**<br>ಉದ್ದೇಶಗಳು:<br>• ಉದ್ದೇಶಕ್ಕನುಸಾರವಾಗಿ ಬರವಣಿಗೆ ಮಾಡಲು ಅವಕಾಶ ನೀಡುವುದು.<br>• ಸೃಜನಶೀಲ ಚಿಂತನೆಯನ್ನು ಬೆಳೆಸುವುದು.<br>• ಪರಿಸರದ ಅರಿವು ಮೂಡಿಸುವುದು.<br>• ಪದಸಂಪತ್ತನ್ನು ಹೆಚ್ಚಿಸುವುದು.<br>• ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಕಾಗದ, ಕ್ರೇಯಾನ್ಸ್,<br>ವಿಧಾನ : ಮಕ್ಕಳ ಪದಸಂಪತ್ತನ್ನು ಹೆಚ್ಚಿಸಲು ಹಾಗೂ ಉದ್ದೇಶಿತ ಬರವಣಿಗೆಗೆ ಅವಕಾಶ ಕಲ್ಪಿಸಲು ಮಕ್ಕಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಲು ತಿಳಿಸಿ.<br>ಸೂಚಿತ ವಿಷಯ: ಅಡುಗೆ ಮನೆಯ ಪರಿಕರಗಳು<br>ಇಡೀ ತರಗತಿಯನ್ನು ಒಳಗೊಂಡಂತೆ ಒಂದು ಚಾರ್ಟ್‌ಪೇಪರ್‌ನಲ್ಲಿ ಪಟ್ಟಿ ಮಾಡುವ ಚಟುವಟಿಕೆಯನ್ನು ಆಯೋಜಿಸಬಹುದು. ಈ ಚಾರ್ಟ್‌ನಲ್ಲಿ ಬಳಸಬಹುದಾದ ಸಾಮಾನ್ಯ ಪದಗಳ ಪಟ್ಟಿಯನ್ನು ಶಿಕ್ಷಕರೇ ಸಿದ್ಧಪಡಿಸಿ, ಮಕ್ಕಳು ಇವುಗಳನ್ನು ನೋಡಲು ಹಾಗೂ ಓದಲು ಸಹಾಯಕವಾಗುವಂತೆ ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು.<br>ತರಗತಿವಾರು ವಿವರ: 1ನೇ ತರಗತಿಯವರು ತಯಾರಿಸಿರುವ ಪಟ್ಟಿಗೆ 2ನೇ ತರಗತಿಯ ಮಕ್ಕಳು ಹೆಚ್ಚುವರಿಯಾಗಿ ಪದಗಳನ್ನು ಸೇರಿಸಲಿ. 3ನೇ ತರಗತಿಯವರು ಪಟ್ಟಿಯಲ್ಲಿರುವ ಪದಗಳಿಗೆ ಸ್ವಂತ ವಾಕ್ಯಗಳನ್ನು ರಚಿಸಲು ಅವಕಾಶ ಮಾಡಿಕೊಡಿ. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ | |

DRAFT 2022

| | | |
|---|---|---|
| | | ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| | **ಹೊರಾಂಗಣ ಆಟಗಳು** | Day 61<br>ಚಟುವಟಿಕೆ – ಸ್ಥಿರ ಸಮತೋಲನ (static balance)<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ದೇಹದ ಬೇರೆ ಬೇರೆ ಭಾಗಗಳ ಸಮತೋಲನ ಸಾಧಿಸುವುದು ..<br>ಬೇಕಾಗುವ ಸಾಮಗ್ರಿ: ಮೃದುವಾದ ಜಾಗ , ಚಾಪೆ ,ಜಮಖಾನ<br>ವಿಧಾನ :<br>• ಈ ಚಟುವಟಿಕೆಯನ್ನು ತರಗತಿ ಕೋಣೆಯೊಳಗೆ/ ಸಭಾಂಗಣದಲ್ಲಿ ಮಾಡಿಸುವುದು . ಚಾಪೆಯನ್ನು/ ಜಮಖಾನ ಹಾಸಿ ಮಕ್ಕಳಿಗೆ ಅಗತ್ಯವಿದಷ್ಟು ಜಾಗವನ್ನು ನೀಡುವುದು .<br><br>• ಮಕ್ಕಳು ಚಾಪೆಯ ಮೇಲೆ ಬೆನ್ನ ಮೇಲೆ ಮಲಗಲು ಸೂಚಿಸುವುದು .<br>• ಸ್ವಲ್ಪ ಸಮಯದ ನಂತರ ಹೊಟ್ಟೆಯ ಮೇಲೆ ಮಲಗಲು ಸೂಚಿಸುವುದು .<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಬೆನ್ನ ಮೇಲೆ ಮಲಗಿದಾಗ ಎರಡು ಕಾಲನ್ನು ಎತ್ತಲು ಹಾಗು ಕೈ ಗಳನ್ನೂ ಎತ್ತಲು ಸೂಚಿಸುವುದು .** |
| | **ಕಥಾ ಸಮಯ** | **ಶೀರ್ಷಿಕೆ : ಒಂಟೆ ಮತ್ತು ನರಿ**<br>**ಸಾಮಗ್ರಿಗಳು :** ಕಥೆಯ ಸಾಹಿತ್ಯ<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ಹೆಚ್ಚಿಸುವುದು.<br>**ವಿಧಾನ :**<br>***ಕಥಾ ಸಾಹಿತ್ಯ ನಿರೂಪಣೆ***<br>➢ ಶಿಕ್ಷಕರು ಕಥೆ ಹೇಳುವ ಮುನ್ನಕಥೆಯನ್ನು ಓದಿ ಅರ್ಥೈಸಿಕೊಳ್ಳಬೇಕು.<br>➢ ಸೂಕ್ತ ಆಂಗಿಕ ಚಲನೆಯೊಂದಿಗೆ ಸರಳ ಭಾಷೆಯಲ್ಲಿಕಥೆಯನ್ನು ಹೇಳಬೇಕು.<br>➢ ಕಥೆ ಹೇಳುವಾಗ ಶಿಕ್ಷಕರು ಮಕ್ಕಳೊಂದಿಗೆ ವೃತ್ತದಲ್ಲಿ ಕುಳಿತುಕೊಳ್ಳಬೇಕು.<br>➢ ಸರಳ ಪ್ರಶ್ನೆಗಳನ್ನು ಕೇಳಿ ಕಥೆಯನ್ನುಅರ್ಥೈಸಬೇಕು.<br>**ಕಥೆ :**<br>**ಒಂಟೆ ಮತ್ತು ನರಿ ಇಬ್ಬರೂ ಉತ್ತಮ ಸ್ನೇಹಿತರಾಗಿದ್ದವು. ಅವು ಪ್ರತಿ ದಿನ ಇಬ್ಬರೂ ಸೇರಿ ಆಹಾರ ಹುಡುಕುತ್ತಾ ಹೋಗುತ್ತಿದ್ದವು. ಒಂದು ದಿನ ಆಹಾರ ಹುಡುಕುತ್ತಾ ಹುಡುಕುತ್ತಾ ಊರ ಸಮೀಪ ಇರುವ ಕಬ್ಬಿನ ಗದ್ದೆಯ ಹತ್ತಿರ ಬಂದವು. ಕಬ್ಬನ್ನು ಕಂಡ ನರಿಗೆ ಅದನ್ನು ತಿನ್ನುವ ಆಸೆ ಆಯಿತು. ಇದನ್ನು ತನ್ನ ಗೆಳೆಯ ಒಂಟೆಯ ಹತ್ತಿರ ಹೇಳಿತು. ಒಂಟೆ ಈ ಮಾತನ್ನು ಒಪ್ಪಲಿಲ್ಲ. ಯಾರಾದರೂ ಕಾವಲುಗಾರರು ಬಂದರೆ ನಮ್ಮನ್ನು ಸುಮ್ಮನೇ ಬಿಡುವುದಿಲ್ಲ ಎಂದು ನರಿಗೆ ತಿಳಿ ಹೇಳಿತು. ಆದರೂ ಸಹ ನರಿಯು ಒಂಟೆಯನ್ನು ಪುಸಲಾಯಿಸಿ ಕಬ್ಬನ್ನು ತಿನ್ನಲು ಹೊರಟೇ ಬಿಟ್ಟಿತು. ಇಬ್ಬರೂ ಸಹ ಬಹಳ ಸಂತೋಷದಿಂದ ಕಬ್ಬನ್ನು ತಿನ್ನುತ್ತಿದ್ದವು. ಜೊತೆಗೆ ಗದ್ದಯಲೆಲ್ಲಾ ಓಡಾಡಿ ಕಬ್ಬನ್ನು ಹಾಳುಮಾಡಿತ್ತು. ಹೊಟ್ಟೆ ತುಂಬಿದ ನಂತರ ನರಿಯು ಒಂಟೆಯ ಹತ್ತಿರ ನನಗೆ ಹೊಟ್ಟೆ ತುಂಬಿದೆ, ಈಗ ನಾನು ಹಾಡನ್ನು ಹಾಡಬೇಕು ಎಂದಿತು. ಒಂಟೆಯು ಬೇಸರದಿಂದ ನನ್ನ ಹೊಟ್ಟೆ ದೊಡ್ಡದು ಇನ್ನೂ ತುಂಬಿಲ್ಲ ನೀನು ಹಾಡು ಹೇಳಿದರೆ ಕಾವಲುಗಾರರು ಬರುತ್ತಾರೆ, ಬೆನ್ನ ಮೇಲೆ ಬಾಸುಂಡೆ ಬರುವಂತೆ ಹೊಡೆಯುತ್ತಾರೆ ಎಂದಿತು. ಆದರೂ ನರಿಯು ಒಂಟೆಯ ಮಾತನ್ನು ಲೆಕ್ಕಿಸದೇ ತನ್ನ ಪಾಡಿಗೆ ತಾನು ಕೂಗಲು ಪ್ರಾರಂಭಿಸಿತು. ಈ ವೇಳೆಗೆ ನರಿಯ ಕೂಗನ್ನು ಕೇಳಿದ ಕಾವಲುಗಾರರು ದೊಣ್ಣೆಯನ್ನು ಹಿಡಿದು ಓಡಿ ಬಂದರು. ಕಾವಲುಗಾರರನ್ನು ನೋಡಿದ ನರಿಯು ಮೊದಲೇ ಓಡಿಹೋಯಿತು. ತಿನ್ನುವ ಭರದಲ್ಲಿದ್ದ ಒಂಟೆಗೆ ಕಾವಲುಗಾರರು ಬರುತ್ತಿರುವುದು ತಿಳಿಯುವಷ್ಟರಲ್ಲಿ ಅವರು ಬಂದು ಒಂಟೆಯನ್ನು ದೊಣ್ಣೆಯಿಂದ ಚೆನ್ನಾಗಿ ಹೊಡೆದರು. ಏಟನ್ನು ತಿಂದ ಒಂಟೆ ನೋವಿನಿಂದ ಕೂಗುತ್ತ ನರಿಯ ಸ್ವಾರ್ಥ ಬುದ್ಧಿಯನ್ನು ಶಪಿಸುತ್ತ ತನ್ನ ದಾರಿಯನ್ನು ಹಿಡಿಯಿತು.**<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ನರಿಗೆ ಏನನ್ನು ತಿನ್ನುವ ಆಸೆಯಾಯಿತು?**<br>• **ಮೊದಲಿಗೆ ಕಬ್ಬನ್ನು ತಿನ್ನಲು ಒಂಟೆಯು ಏಕೆ ಇಷ್ಟಪಡಲಿಲ್ಲ?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |

DRAFT 22.02.22

| | | |
|---|---|---|
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

# ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

**ವಾರ–11** **ದಿನ–62 (ಮಂಗಳವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 62 | **ಶುಭಾಶಯ ವಿನಿಮಯ** | 61 ನೇ ದಿನದ ಚಟುವಟಿಕೆಗಳನ್ನು ಮಾಡಿಸುವುದು |
| | **ಮಾತು ಕತೆ** | ದಿನ 61 ರ ಚಟುವಟಿಕೆಯನ್ನು ಮುಂದುವರೆಸಿ. |
| | **ನನ್ನ ಸಮಯ(Free Indore play)** | ದಿನ – 62<br>* ಮಗು ಎಲ್ಲಾ ಮೂಲೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದನ್ನು ಹಾಗೂ ಸೂಕ್ತವಾಗಿ ಪೂರ್ಣಗೊಳಿಸಿರುವುದನ್ನು ಖಚಿತ ಪಡಿಸಿಕೊಳ್ಳುವುದು.<br>* ಅಪೂರ್ಣಗೊಳಿಸಿರುವ ಚಟುವಟಿಕೆಗಳನ್ನು ಮಗು ಪೂರ್ಣಗೊಳಿಸಲು ಸಹಕರಿಸುವುದು.<br>* ಮುಂದಿನ ದಿನಗಳಲ್ಲಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಯಾವ ಮಕ್ಕಳ ಕಡೆಗೆ ಹೆಚ್ಚು ಗಮನಹರಿಸಬೇಕೆಂಬ ಬಗ್ಗೆ ಶಿಕ್ಷಕರು ಮಾನಸಿಕವಾಗಿ ಸಿದ್ಧರಾಗುವುದು.<br>* ದಿನದ ಅಂತ್ಯಕ್ಕೆ ಕಲಿಕಾ ಮೂಲೆಗಳಲ್ಲಿ ಮುಂದಿನ ಹಂತಕ್ಕೆ ಹೊಂದಿಸಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಪರಿಸರದ ಅರಿವು, ಆವಿಷ್ಕರಿಸುವುದು, ಪ್ರಯೋಗ ಶೀಲತೆ ಬೆಳೆಸುವುದು**<br>**ಚಟುವಟಿಕೆ...38 ಸಸ್ಯದ ಅವಶ್ಯಕತೆಗಳ ಬಗ್ಗೆ ತಿಳಿಯೋಣ (ಗುರಿ–3)**<br>**ಉದ್ದೇಶ:– ಸಸ್ಯದ ಬೆಳವಣಿಗೆ ಮತ್ತು ಉಪಯೋಗ ತಿಳಿಯುತ್ತಾರೆ.**<br>**ಅಗತ್ಯ ಸಾಮಗ್ರಿಗಳು : ಕಾಗದದ ಲೋಟ/ತೆಂಗಿನ ಕಾಯಿ ಚಿಪ್ಪು, ಮಣ್ಣು, ಬೀಜಗಳು**<br>**ವಿಧಾನ : ಸಸ್ಯವನ್ನು ಪರಿಚಯಿಸುವುದು,**<br>**– ಸಸ್ಯ ಬೆಳೆಯಲು ಅವಶ್ಯಕ ಅಂಶಗಳಾದ ಮಣ್ಣು, ನೀರು, ಗಾಳಿ, ಬೀಜ ಮತ್ತು ಅವಕಾಶಗಳ ಬಗ್ಗೆ ತಿಳಿಸುವುದು.**<br>**– ಕಾಗದದ ಲೋಟದಲ್ಲಿ ಮಣ್ಣು ಹಾಕಿ ವಿವಿಧ ರೀತಿಯ ಬೀಜಗಳನ್ನು ನೆಟ್ಟು, ಪ್ರತಿದಿನ ನೀರುಣಿಸಿ, ಆಗುವ ಬದಲಾವಣೆಯನ್ನು ಇತರರೊಂದಿಗೆ ಹಂಚಿಕೊಳ್ಳಲು ತಿಳಿಸುವುದು.**<br>**– ಹಾಡು ಹೇಳಿಕೊಡುವುದು.**<br>**ಮರ**<br>**ಮಣ್ಣಿನಿಂದ ಹುಟ್ಟುವೆ**<br>**ಮಣ್ಣು ಹಿಡಿದು ನಿಲ್ಲುವೆ**<br>**ಹಣ್ಣುಗಳನು ನೀಡುವೆ**<br>**ಇನ್ನು ಇನ್ನು ಬೆಳೆಯುವೆ**<br>**ಬಿಸಿಲಿನಲ್ಲಿ ನಿಲ್ಲುವೆ**<br>**ನಮಗೆ ನೆರಳು ನೀಡುವೆ**<br>**ಶುದ್ಧ ಗಾಳಿ ನೀಡುತಾ**<br> |

| | | | |
|---|---|---|---|
| | | | ಎಲ್ಲರನ್ನು ಸಲಹುವೆ<br>2ನೇ ತರಗತಿ<br>ಸಸ್ಯಗಳು ಬೆಳೆಯಲು ಬೇಕಾಗುವ ಅವಶ್ಯಕ ವಸ್ತುಗಳನ್ನು ಹೇಳಿಸುವುದು. ನಿಮ್ಮ ಮನೆಯಲ್ಲಿ ಇರುವ/ತಿಳಿದಿರುವ ಧಾನ್ಯಗಳ ಹೆಸರು ಹೇಳು.<br>3ನೇ ತರಗತಿ<br>ರಾಗಿ, ಜೋಳ, ಭತ್ತ, ಹೆಸರು ಇತ್ಯಾದಿ ಧಾನ್ಯಗಳನ್ನು ಚಿಪ್ಪು ಅಥವಾ ಲೋಟದಲ್ಲಿ ಮಣ್ಣು ತುಂಬಿಸಿ ಬೀಜಗಳನ್ನು ನೆಡಿಸಿ ನೀರು ಹಾಕಿ ಬೆಳೆಸಲು ಹೇಳುವುದು. ಧಾನ್ಯಗಳನ್ನು ಬೆಳೆದ ಕ್ರಮದ ಬಗ್ಗೆ ಮಕ್ಕಳಿಂದ ಹೇಳಿಸುವುದು. |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಎ **ಟ್ರೇಸಿಂಗ್**.[ **ಮರಳು**]. ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>.<br>ಸಾಮಗ್ರಿಗಳು : ಮರಳು.ಲೋಟ, ತೆಂಗಿನ ಚಿಪ್ಪು, ಚಮಚ.ರಟ್ಟುಗಳು.<br>ವಿಧಾನ : ಮಕ್ಕಳಿಗೆ ಮೇಲ್ಕಂಡ ವಸ್ತುಗಳನ್ನು ನೀಡಿ ಮನೆ, ಗೂಡು, ಬೆಟ್ಟ , ಕಾಲುವೆ, ಕಟ್ಟೆ ಕಟ್ಟುವುದು ಇತ್ಯಾದಿ ಮಾದರಿಯಲ್ಲಿ ಮರಳನ್ನು ಹಾಕಲು ಹೇಳಿ ಅದರ ಬಗ್ಗೆ ವಿವರಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ಮಕ್ಕಳಿಗೆ ಮೇಲಿನ ಚಟುವಟಿಕೆಯನ್ನೇ ಮಾಡಿಸುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ : ಧ್ವನಿ ಮತ್ತು ಸಂಕೇತಗಳ ಸಂಯೋಜನೆ, ಪದ ಸಂಪತ್ತಿ ಅಭಿವೃದ್ಧಿ, ಅಕ್ಷರ ಗುರುತಿಸುವುದು**<br>**ಚಟುವಟಿಕೆ : 26 – ಪದದ ಕೊನೆಯ ಧ್ವನಿಯನ್ನು ಗುರುತಿಸುವರು ಮತ್ತು ಹೊಂದಿಸುವರು (ಗುರಿ :2) ECL-22**<br>**ಉದ್ದೇಶ :**<br>*** ಧ್ವನಿ ಸಂಕೇತಗಳ ಅರಿವು ಮೂಡಿಸುವುದು.**<br>*** ಪದಗಳನ್ನು ಗ್ರಹಿಸಿ ಗುರುತಿಸುವುದು.**<br>*** ಪದಗಳಲ್ಲಿಯ ಅಕ್ಷರಗಳ ಅಕ್ಷರ–ಧ್ವನಿ ಸಹ ಸಂಬಂಧ ಗುರುತಿಸುವುದು.**<br>*** ಗಮನವಿಟ್ಟು ಆಲಿಸಿ ಅಕ್ಷರ–ಧ್ವನಿ ಸಹ ಸಂಬಂಧ ಅರ್ಥೈಸಿಕೊಳ್ಳುವುದು.**<br>**ಅಗತ್ಯ ಸಾಮಗ್ರಿಗಳು : ಕರಿ ಹಲಗೆ**<br>**ವಿಧಾನ : ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ, ಕೆಲವು ಪರಿಚಿತ ಪದಗಳನ್ನು ಹೇಳಲು ತಿಳಿಸುವುದು**<br>**ಉದಾ : ಸರ, ಮರ, ಅರ, ದರ, ಬರ,**<br>**–(ಒಂದೇ ರೀತಿಯ ) ಕೊನೆಯ ಅಕ್ಷರದ ಧ್ವನಿ ಗುರುತಿಸುವುದು ತಿಳಿಸುವುದು**<br>**–ಹೊಸ ಪದವೊಂದನ್ನು ಹೇಳಿ, ಅದೇ ಶಬ್ಧದಿಂದ ಕೊನೆಯಾಗುವ ಪದಗಳನ್ನು ಹೇಳಿಸುವುದು**<br>**–ವಿವಿಧ ಪದಗಳನ್ನು ಪ್ರದರ್ಶಿಸುತ್ತಾ, ಒಂದೇ ರೀತಿಯ ಧ್ವನಿಯಿಂದ ಕೊನೆಯಾಗುವ ಪದಗಳನ್ನು ಪರಿಚಯಿಸುವುದು.**<br>**ತರಗತಿವಾರು ವಿವರ : 2 ನೇ ತರಗತಿಯ ಮಕ್ಕಳು ಸೂಚಿಸಿದ ಧ್ವನಿ ಅಂತ್ಯದಲ್ಲಿ ಬರುವಂತೆ ವಿವಿಧ ಪದಗಳನ್ನು ಪಟ್ಟಿ ಮಾಡುವ**<br>**3 ನೇ ತರಗತಿಯ ಮಕ್ಕಳು ವಿವಿಧ ಪದಗಳಲ್ಲಿ ಸೂಚಿತ ಅಂತ್ಯ ಅಕ್ಷರದ ಪದ ಗುರುತಿಸಿ, ಆ ಪದ ಬಳಸಿ ವಾಕ್ಯ ರಚಿಸುವುದು.**<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC-16 (ತರಗತಿ 1, 2, 3)** |
| | | **ಅರ್ಥ ಗ್ರಹಿಕೆಯೊಂದಿಗಿನ ಓದು** | **ಚಟುವಟಿಕೆ....27 ಅಕ್ಷರಗಳನ್ನು ಧ್ವನಿಗಳೊಂದಿಗೆ ಸಂಯೋಜಿಸುವುದು (ಗುರಿ–2)**<br>**ಸಾಮರ್ಥ್ಯ: ಧ್ವನಿ ಸಂಕೇತಗಳ ಸಂಯೋಜನೆ, ಅಕ್ಷರಗಳನ್ನು ಗುರುತಿಸುವುದು, ಸೂಕ್ಷ್ಮ ಸ್ನಾಯು ಕೌಶಲಗಳ ಅಭಿವೃದ್ಧಿ**<br>**ಅಗತ್ಯ ಸಾಮಾಗ್ರಿಗಳು : ಮಣಿಗಳು, ಗುಂಡಿಗಳು, ಮಣ್ಣು, ಮರಳು, ಕಡ್ಡಿ, ಅಕ್ಷರಗಳ ಆಕಾರ ಇತ್ಯಾದಿ**<br>**ವಿಧಾನ : * ತರಗತಿಯಲ್ಲಿರುವ ವಸ್ತುಗಳ ಹಾಗೂ ಮಕ್ಕಳ ಹೆಸರುಗಳಲ್ಲಿರುವ ಅಕ್ಷರಗಳನ್ನು ಗುರುತಿಸಲು ತಿಳಿಸುವುದು.**<br>*** ಗುರುತಿಸಿದ ಅಕ್ಷರಗಳನ್ನು ಅದರ ಧ್ವನಿಯೊಂದಿಗೆ ಸಂಯೋಜಿಸುವುದು.**<br>*** ವಿವಿಧ ವಸ್ತುಗಳನ್ನು ಬಳಸಿ( ಮಣಿಗಳು, ಗುಂಡಿಗಳು, ಮಣ್ಣು, ಮರಳು, ಕಡ್ಡಿ) ಅಕ್ಷರಗಳ ಆಕಾರಗಳ ಕಲ್ಪನೆಯನ್ನು** |

DRAFT 22.02.22

| | | |
|---|---|---|
| | | ಮೂಡಿಸುವುದು.<br>* ಮರಳು ಮತ್ತು ಮಣ್ಣಿನ ಮೇಲೆ ಅಕ್ಷರಗಳನ್ನು ಅಭ್ಯಾಸ ಮಾಡಿಸುವುದು.<br>* ಅಕ್ಷರಗಳನ್ನು ಬರೆದು, ಅಕ್ಷರಗಳ ಒಳಗೆ ಬಣ್ಣ ತುಂಬಲು ಹೇಳುವುದು.<br>* ನೆಲದ ಮೇಲೆ ನೀರಿನಿಂದ ಅಕ್ಷರದ ಆಕಾರಗಳನ್ನು ರಚಿಸುವುದು.<br>* ಕಾಗದ ಮತ್ತು ಪೆನ್ಸಿಲ್‌ಗಳನ್ನು ಹೊರತುಪಡಿಸಿ ಅಕ್ಷರಗಳನ್ನು ರಚಿಸಲು ಅವಕಾಶ ಕಲ್ಪಿಸುವುದು.<br>* ಅಕ್ಷರಗಳ ಧ್ವನಿಗಳಿಗೆ ಒತ್ತು ನೀಡುವುದು. ಪರಿಚಿತ ಪದಗಳೊಂದಿಗೆ ಅವುಗಳನ್ನು ಸಂಬಂಧೀಕರಿಸುವುದು. |
| | ಉದ್ದೇಶಿತ ಬರಹ | ಸಾಮರ್ಥ್ಯ: ಸೂಕ್ಷ್ಮ ಸ್ನಾಯು ಕೌಶಲಗಳ ಅಭಿವೃದ್ಧಿ, ಉದ್ದೇಶಿತ ಬರವಣಿಗೆ<br>ಚಟುವಟಿಕೆ: 37 ಚಿತ್ರಿಸುವುದು ಮತ್ತು ಹೆಸರಿಸುವುದು. (ಗುರಿ–2) **ECW-3**<br>ಉದ್ದೇಶಗಳು:<br>• ಸೂಕ್ಷ್ಮ ಸ್ನಾಯು ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಉದ್ದೇಶಿತ ಬರವಣಿಗೆಗೆ ಅಣಿಗೊಳಿಸುವುದು.<br>• ಆಯ್ಕೆಯ ಚಿತ್ರ ಬಿಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ , ಕ್ರೇಯಾನ್ಸ್, ಪೆನ್ಸಿಲ್<br>ವಿಧಾನ : ಮಕ್ಕಳು ತಮ್ಮ ಆಯ್ಕೆಯ ಪ್ರಾಣಿ/ಪಕ್ಷಿಗಳಗಳ ಚಿತ್ರ ಬಿಡಿಸುವುದು.ಬರೆದ ಚಿತ್ರಕ್ಕೆ ಬಣ್ಣ ತುಂಬಿ ಹೆಸರಿಸಲು ತಿಳಿಸುವುದು<br>ತರಗತಿವಾರು ವಿವರ: 2 ಮತ್ತು 3ನೇ ತರಗತಿಯ ಮಕ್ಕಳು ತಮ್ಮ ಆಯ್ಕೆಯ ಪ್ರಾಣಿ/ಪಕ್ಷಿಗಳ ಚಿತ್ರವನ್ನು ರಚಿಸಿ, ಹೆಸರಿಸಲು ತಿಳಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| | **ಹೊರಾಂಗಣ ಆಟಗಳು** | ಚಟುವಟಿಕೆ – ಸ್ಥಿರ ಸಮತೋಲನ (static balance)<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ದೇಹದ ಬೇರೆ ಬೇರೆ ಭಾಗಗಳ ಸಮತೋಲನ ಸಾಧಿಸುವುದು.<br>ಬೇಕಾಗುವ ಸಾಮಗ್ರಿ: ಮೃದುವಾದ ಜಾಗ , ಚಾಪೆ ,ಜಮಖಾನ<br>ವಿಧಾನ : ಈ ಚಟುವಟಿಕೆಯನ್ನು ತರಗತಿ ಕೋಣೆಯೊಳಗೆ/ ಸಭಾಂಗಣದಲ್ಲಿ ಮಾಡಿಸುವುದು.<br><br>• ಮಕ್ಕಳು ಚಾಪೆಯ ಮೇಲೆ ಬೆನ್ನ ಮೇಲೆ ಮಲಗಲು ಸೂಚಿಸುವುದು .<br>• ಎಡಕ್ಕೆ ಹೊರಳಿ ಮಲಗಲು ಸೂಚಿಸುವುದು . ಬಲಗಾಲು ಮತ್ತು ಬಲಗೈ ಎತ್ತಲು ಸೂಚಿಸುವುದು .<br>• ಬಲಕ್ಕೆ ಹೊರಳಿ ಮಲಗಲು ಸೂಚಿಸುವುದು . ಎಡಗಾಲು ಮತ್ತು ಬಲಗೈ ಎತ್ತಲು ಸೂಚಿಸುವುದು .<br>**ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರಿಸುವುದು.** |
| | **ಕಥಾ ಸಮಯ** | ಮೊದಲ ದಿನದಉದ್ದೇಶದಂತೆಕಥಾ ಸಮಯವು ಮುಂದುವರೆಯುತ್ತದೆ.<br>***ಕಥಾ ಸಾಹಿತ್ಯ ನಿರೂಪಣೆ***<br>ಶಿಕ್ಷಕರು ಕಥೆಯನ್ನು ನಿರೂಪಿಸುವುದರಜೊತೆಗೆ ಮಕ್ಕಳ ನೆರವನ್ನು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು<br>ಉದಾ : ಅವರು ಎಲ್ಲಿಗೆ ಹೋದರು? ನಂತರ ಏನಾಯಿತು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ಕಬ್ಬಿನ ಗದ್ದೆ ಎಲ್ಲಿತ್ತು ?**<br>• **ಕಬ್ಬನ್ನು ತಿಂದ ನಂತರ ನರಿಯು ಏನೆಂದು ಹೇಳಿತು?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ |

DRAFT 22.02.22

| | | |
|---|---|---|
| | ಸಿಗೋಣ | • ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವ ... ಳ್ಕೊಡಿ. |



# ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

## ವಾರ–11 ದಿನ–63 (ಬುಧವಾರ)

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 63 | **ಶುಭಾಶಯ ವಿನಿಮಯ** | 61 ನೇ ದಿನದ ಚಟುವಟಿಕೆಗಳನ್ನು ಮಾಡಿಸುವುದು |
| | **ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | ಚಟುವಟಿಕೆ : ಹಬ್ಬಗಳು<br>ವಿಧಾನ: ( ಕೆರೆ ದಂಡೆ ಆಟದ ಮಾದರಿ )<br>• ತರಗತಿಯಲ್ಲಿ ನೆಲದ ಮೇಲೆ ದೊಡ್ಡ ವೃತ್ತವನ್ನು ಎಳೆಯಿರಿ (ಮಕ್ಕಳ ಶಕ್ತಿಗೆ ಅನುಗುಣವಾಗಿ)<br>• ಮಕ್ಕಳನ್ನು ವೃತ್ತದ ಹೊರಗೆ ನಿಲ್ಲಿಸಿ.<br>• ಶಿಕ್ಷಕರು ಹಬ್ಬಗಳ ಹೆಸರುಗಳನ್ನು ಹೇಳಿದರೆ, ಮಕ್ಕಳು ವೃತ್ತ ಒಳಗೆ ಜಿಗಿಯಬೇಕು ಮತ್ತು ವಾರಗಳ ಹೆಸರುಗಳನ್ನು ಹೇಳಿದರೆ ಅವರು ವೃತ್ತದ ಹೊರಗೆ ಜಿಗಿಯಬೇಕು ಮತ್ತು ಯಾರಾದರೂ ತಪ್ಪು ಮಾಡಿದರೆ, ಅವನು /ಅವಳು ಆಟದಿಂದ ಔಟ್ ಆಗುತ್ತಾರೆ.<br>ದಿನ 61 ರ ಚಟುವಟಿಕೆಯನ್ನು ಮುಂದುವರೆಸಿ.<br>ಚಟುವಟಿಕೆ: ನಮ್ಮ ಹಬ್ಬಗಳ ಸುತ್ತಲೂ<br>ಅಗತ್ಯವಿರುವ ಸಾಮಗ್ರಿಗಳು: ತಮ್ಮ ಪ್ರದೇಶದಲ್ಲಿ ಆಚರಿಸುತ್ತಿರುವ ವಿವಿಧ ರೀತಿಯ ಹಬ್ಬಗಳ ಚಿತ್ರ ಕಾರ್ಡ್ ಗಳು<br>ಕಾರ್ಯವಿಧಾನ:<br>1. ಮಕ್ಕಳನ್ನು ಅರೆ-ವೃತ್ತದಲ್ಲಿ ಕುಳಿತುಕೊಳ್ಳುವಂತೆ ಮಾಡಿ<br>2. ಚಿತ್ರ ಕಾರ್ಡ್ ಗಳನ್ನು ಚೀಲದಲ್ಲಿ ಇರಿಸಿ.<br>3. ಚೀಲವನ್ನು ಪಾಸ್ ಮಾಡಿ ಮತ್ತು ಸಂಗೀತವನ್ನು ನುಡಿಸಿ.<br>4. ನಡುವೆ ಸಂಗೀತವನ್ನು ನಿಲ್ಲಿಸಿ.<br>5. ಮ್ಯೂಸಿಕ್ ನಿಂತಾಗ, ಚೀಲವನ್ನು ಹೊಂದಿರುವ ಮಗುವು ತನ್ನ ಕೈಯನ್ನು ಚೀಲದೊಳಗೆ ಹಾಕಿ ಚೀಲದಿಂದ ಕಾರ್ಡ್ ಅನ್ನು ಹೊರತೆಗೆಯಬೇಕಾಗುತ್ತದೆ<br>6. ಕಾರ್ಡ್ ನಲ್ಲಿ ಹಬ್ಬದ ಚಿತ್ರವನ್ನು ನೋಡಿದ ನಂತರ, ಮಗುವು ತನ್ನ ಮನೆಯಲ್ಲಿ ಆಚರಿಸುತ್ತಿರುವ ಹಬ್ಬಗಳ ಬಗ್ಗೆ ತನ್ನ ಅಭಿಪ್ರಾಯವನ್ನು ಹಂಚಿಕೊಳ್ಳಬೇಕು.<br>7. ಹಬ್ಬಗಳ ಒದು ಅವರ ಆಲೋಚನೆಗಳನ್ನು / ಆಲೋಚನೆಗಳನ್ನು ಹೊರತರಲು ಅವರಿಗೆ ಕೆಲವು ಪ್ರಶ್ನೆಗಳನ್ನು ಹಾಕಿ. |
| | **ನನ್ನ ಸಮಯ(Free Indore play)** | ದಿನ – 63<br>**ಕಲಿಕಾ ಸಿದ್ಧತಾ ಭಾಗವಾಗಿ 8 ಮೂಲೆಗಳಲ್ಲಿ ಮೊದಲ ಹಂತದಲ್ಲಿ ನಿಗದಿಪಡಿಸಿರುವ ಮೂಲೆವಾರು ಚಟುವಟಿಕೆಗಳ ಬಗ್ಗೆ ಹಾಗೂ ಆಯಾ ಮೂಲೆಗಳ ಸಾಮಗ್ರಿಗಳನ್ನು ಬಳಸುವ ಬಗ್ಗೆ ಶಿಕ್ಷಕರು ಮಕ್ಕಳಿಗೆ ಪರಿಚಯ ಒದಗಿಸುವರು. ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತ ಅವರ ಅರ್ಥೈಸಿಕೊಳ್ಳುವಿಕೆಯನ್ನು ಖಾತ್ರಿ ಪಡಿಸಿಕೊಳ್ಳುತ್ತಾರೆ.**<br>**(* ಮೂಲೆವಾರು ಸಲಹಾತ್ಮಕ ಚಟುವಟಿಕೆಗಳನ್ನು ನೀಡಿದ್ದು, ಸಾಮರ್ಥ್ಯಗಳನ್ನು ಸಾಧಿಸಲು ಅನುಕೂಲವಾಗುವಂತೆ ಮಕ್ಕಳಿಗೆ ಹೆಚ್ಚುವರಿ ಚಟುವಟಿಕೆಗಳನ್ನು ಯೋಜಿಸಬಹುದಾಗಿದೆ.)**<br>***************************************************************************<br>**ಮೂಲೆ – ಬಿಲ್ಡಿಂಗ್ ಬ್ಲಾಕ್ಸ್ ಮೂಲೆ:-** |

DRAFT 22.02.22

**ಸಾಮರ್ಥ್ಯ: ಕಣ್ಣು ಮತ್ತು ಕೈಗಳ ಸಂಯೋಜನೆಯನ್ನು ಸಾಧಿಸುವುದು.**

ಚಟುವಟಿಕೆ : ಪಿರಮಿಡ್ ರಚನೆ



ಉದ್ದೇಶ : ವಸ್ತುಗಳನ್ನು ನಿರ್ದಿಷ್ಟವಾಗಿ ಜೋಡಿಸುವ ಕೌಶಲ್ಯ ಬೆಳೆಸುವುದು, ಏಕಾಗ್ರತೆ,ಸೌಂದರ್ಯಪ್ರಜ್ಞೆ ಹಾಗೂ ಆತ್ಮವಿಶ್ವಾಸ ಬೆಳೆಸುವುದು.

ಸಾಮಗ್ರಿಗಳು: ಬ್ಲಾಕ್ಸ್, ಪೇಪರ್ ಕಪ್ಸ್ ಇತ್ಯಾದಿ

ವಿಧಾನ : (ವಿ.ಪ್ರ ಹಾಗೂ **2 & 3 ನೇ ತರಗತಿ**

ಒದಗಿಸಲಾದ ವಸ್ತುಗಳನ್ನು ಪಿರಮಿಡ್ ಆಕಾರದಲ್ಲಿ ಜೋಡಿಸುವುದು.

******************************************************************************

**ಮೂಲೆ – ಗಣಿತ ಮೂಲೆ:-**

**ಸಾಮರ್ಥ್ಯ: ವಸ್ತುಗಳ ಗಾತ್ರ, ಎತ್ತರ-ಗಿಡ್ಡ, ಭಾರ-ಹಗುರ, ಆಧಾರದ ಮೇಲೆ ವರ್ಗೀಕರಿಸುವುದು ಹಾಗೂ ಸಾಂಕೇತಿಕವಾಗಿ ಸಂಖ್ಯೆಗಳ ಹೋಲಿಕೆ ಮಾಡುವುದು.**

ಚಟುವಟಿಕೆ :

ಉದ್ದೇಶ :ನಿರ್ದಿಷ್ಟ ಅಂಕಿಯ ವಸ್ತುಗಳ ಗುಂಪು ಮಾಡುವುದು.

ಸಾಮಗ್ರಿ :- ಮಣಿಗಳು, ಹರಳುಗಳು, ಬೀಜಗಳು, ಗೋಲಿಗಳು ಇತ್ಯಾದಿ.

ವಿಧಾನ:

ವಿದ್ಯಾ ಪ್ರವೇಶ (ವಿ.ಪ್ರ): ಶಿಕ್ಷಕರು ಬಿಳಿಹಾಳೆಯ ಮೇಲೆ ಗುರುತಿಸಿರುವ ಚುಕ್ಕಿಗಳಿಗೆ ಸಮನಾದ ಅಂಕಿಯ ಹರಳು/ಬೀಜ/ಮಣಿಗಳನ್ನು ಹಾಳೆಯ ಮೇಲೆ ಇಡುವುದು.

**2 ನೇ & 3 ನೇ ತರಗತಿ :**

ಶಿಕ್ಷಕರು ಬಿಳಿಹಾಳೆಯ ಮೇಲೆ ಬರೆದಿರುವ ಸಂಖ್ಯೆಯನ್ನು ಹರಳು/ಬೀಜ/ಮಣಿಗಳ ಮೂಲಕ ಹತ್ತು, ಬಿಡಿಗಳಾಗಿ ವಿಂಗಡಿಸುವುದು.

*************************************************************************************

**ಅನ್ವೇಷಣೆ ಅಥವಾ ವಿಜ್ಞಾನ ಮೂಲೆ:**

**ಸಾಮರ್ಥ್ಯ: ವೈಜ್ಞಾನಿಕ, ಅನ್ವೇಷಣಾ ಮನೋಭಾವ ಹಾಗೂ ಚಿಂತನಾ ಮನೋಭಾವಗಳನ್ನು ಬೆಳೆಸುವುದು.**

ಚಟುವಟಿಕೆ: ಜಾರು .. ಹಾರು

ಉದ್ದೇಶ :ಗಾಳಿಯಿಂದ ಕೆಲವು ವಸ್ತುಗಳ ಸ್ಥಾನ ಪಲ್ಲಟದ ಬಗ್ಗೆ ತಿಳಿಯುವುದು.

ಸಾಮಗ್ರಿ :- ಹತ್ತಿ, ಪೇಪರ್, ರೆಕ್ಕೆ, ಪುಕ್ಕ, , ಒಣಗಿದ ಎಲೆ, ಪ್ಲಾಸ್ಟಿಕ್ ಚೆಂಡು, ಸ್ಕೇಲ್

ವಿಧಾನ:

ವಿದ್ಯಾ ಪ್ರವೇಶ (ವಿ.ಪ್ರ):

ನೀಡಲಾಗಿರುವ ವಸ್ತುಗಳನ್ನು ಊದುವುದು. ಕೆಲವು ವಸ್ತುಗಳು ಜಾರುತ್ತವೆ ಹಾಗೂ ಕೆಲವು ವಸ್ತುಗಳು ಹಾರುವುದರಿಂದ ಆದ ಸ್ಥಾನ ಪಲ್ಲಟದ ಬಗ್ಗೆ ಗಮನಿಸುವುದು.

**2 & 3 ನೇ ತರಗತಿ :**

ಪರಿಸರದಲ್ಲಿ ತಾನು ನೋಡುವ ಹಾರುವ..ಹಾರದಿರುವ ವಸ್ತುಗಳನ್ನು ಹೆಸರಿಸುವನು.

***************************************************************************************

**ಗೊಂಬೆಗಳ ಮೂಲೆ :**

**ಸಾಮರ್ಥ್ಯ: ಸೌಂದರ್ಯೋಪಾಸನೆ, ವೈಯಕಿಕ ಸ್ವಚ್ಛತೆ, ಅಭಿವ್ಯಕ್ತಿ ಕೌಶಲ್ಯ ಬೆಳೆಸುವುದು.**

ಚಟುವಟಿಕೆ : ಗೊಂಬೆ ಕಥೆ

ಉದ್ದೇಶ :ನಿರ್ದಿಷ್ಠ ವಿಷಯದ ಕುರಿತು ಅಭಿವ್ಯಕ್ತಿ ಬೆಳೆಸುವುದು.

ಸಾಮಗ್ರಿಗಳು:ಹಸು, ಹುಲಿ, ಆನೆ, ನವಿಲು, ಕೋಳಿ, ಪಾರಿವಾಳ, ಹಾಗೂ ಇತರೆ ಪ್ರಾಣಿ-ಪಕ್ಷಿಗಳ ಗೊಂಬೆಗಳು ಇತ್ಯಾದಿ

ವಿಧಾನ : (ವಿ.ಪ್ರ ಹಾಗೂ 2& 3 ನೇ ತರಗತಿ)

ಮಗು ತನಗಿಷ್ಟವಾದ ಎರಡು - ಮೂರು ಗೊಂಬೆಗಳನ್ನು ಆಯ್ದುಕೊಂಡು ತನ್ನ ಕಲ್ಪನೆಯಂತೆ ಕಥೆಯನ್ನು ಕಲ್ಪಿಸಿ ಅಭಿವ್ಯಕ್ತಿಸುವುದು.

DRAFT 22.02.22

*******************************************************************************

**ಓದುವ / ತರಗತಿ ಗ್ರಂಥಾಲಯ ಮೂಲೆ :**

**ಸಾಮರ್ಥ್ಯ: ಚಿತ್ರಗಳನ್ನು ಓದುವುದರೊಂದಿಗೆ ಅರ್ಥೈಸಿಕೊಳ್ಳುವುದು, ಕಲ್ಪನಾಶಕ್ತಿ, ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸುವುದು.**

ಚಟುವಟಿಕೆ: ವಾಚಕ ಓದು

ಉದ್ದೇಶ : ವಾಚಕ, ಸರಳ ಚಿತ್ರ ಸಹಿತ ಕಥೆ ಓದಲುವ ಪ್ರಯತ್ನ ಮಾಡುವುದು.

ಸಾಮಗ್ರಿ :– ಸರಳ ಕಥೆಯ ಸರಣಿ ಚಿತ್ರಗಳು, ವಾಚಕಗಳು.

ವಿಧಾನ : (ವಿ.ಪ್ರ ಹಾಗೂ **2& 3 ನೇ ತರಗತಿ)**

ಪರಿಚಿತ ಕಥೆಯ ಸರಣಿ ಚಿತ್ರಗಳನ್ನು, ವಾಚಕಗಳನ್ನು ನೀಡಿ ಚಿತ್ರಗಳ ಸಹಾಯದಿಂದ ಕಥೆಯನ್ನು ಅರ್ಥೈಸಿಕೊಂಡು, ಹೇಳುವುದು.

*******************************************************************************

**ಕಲೆಗೊಂದು ನೆಲೆ/ಕರಕುಶಲ ಮೂಲೆ:**

**ಸಾಮರ್ಥ್ಯ: ಸೂಕ್ಷ್ಮ ಸ್ನಾಯು ಬೆಳವಣಿಗೆಯೊಂದಿಗೆ ಸೌಂದರ್ಯೋಪಾಸನೆ, ಸೃಜನಶೀಲತೆಯನ್ನು ಬೆಳೆಸುವುದು.**



ಚಟುವಟಿಕೆ: ಗ್ರೀಟಿಂಗ್ ಕಾರ್ಡ್

ಉದ್ದೇಶ : ಸೌಂದರ್ಯ ಪ್ರಜ್ಞೆ ಹಾಗೂ ಸೃಜನಾತ್ಮಕ ಕೌಶಲ್ಯ ಬೆಳೆಸುವುದು

ಸಾಮಗ್ರಿ :– ಒಣಗಿದ ಎಲೆಗಳು, ಕಡ್ಡಿಗಳು, ಸಣ್ಣ–ಸಣ್ಣ ಕಲ್ಲುಗಳು, ಬಣ್ಣ, ಬಿಳಿಹಾಳೆಗಳು, ಫೆವಿಕಾಲ್ , ಬಣ್ಣ

ವಿಧಾನ : (ವಿ.ಪ್ರ ಹಾಗೂ **2 & 3 ನೇ ತರಗತಿ** )

**ನೀಡಲಾದ ವಸ್ತುಗಳನ್ನು ಬಿಳಿಹಾಳೆಯ ಮೇಲೆ ಅಂಟಿಸಿ ವೈವಿಧ್ಯಮಯ ಚಿತ್ರಗಳನ್ನು ರಚಿಸುವುದು.**

*******************************************************************************

**ಬರೆಯುವ ಮೂಲೆ :**

**ಸಾಮರ್ಥ್ಯ : ಬರವಣಿಗೆ ಸಿದ್ಧತಾ ಅಭ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಅಕ್ಷರಗಳ ವಿನ್ಯಾಸವನ್ನು ರಚಿಸುವುದು.**




ಚಟುವಟಿಕೆ: ಅಕ್ಷರ ರಚಿಸೋಣ

ಉದ್ದೇಶ : ಅಕ್ಷರ ರಚಿಸುವ ಸರಳ ಕೌಶಲ್ಯ ಅರಿಯುವರು

ಸಾಮಗ್ರಿ :ಬಣ್ಣಬಣ್ಣದ ಕ್ಲೇ (ಜೇಡಿಮಣ್ಣು)

ವಿಧಾನ : (ವಿ.ಪ್ರ. ಹಾಗೂ 2 & **3 ನೇ ತರಗತಿ)**

ಕ್ಲೇ/ಜೇಡಿಮಣ್ಣಿನ ಸಹಾಯದಿಂದ ಅಕ್ಷರದ ಮಾದರಿಗಳನ್ನು ರಚಿಸುವುದು

*******************************************************************************

**ಆಟಿಕೆ / ಮಾಡಿ ನೋಡು ಮೂಲೆ :**

**ಸಾಮರ್ಥ್ಯ: ಆಲೋಚನಾಶಕ್ತಿ, ಸೃಜನಶೀಲತೆ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು.**

ಚಟುವಟಿಕೆ: ಸ್ಪಾಂಜ್ ಡಾಲ್ ತಯಾರಿಕೆ

ಉದ್ದೇಶ : * ವ್ಯವಸ್ಥಿತವಾಗಿ ಮತ್ತು ಕ್ರಮಬದ್ಧವಾಗಿ ನೀಡಿದ ನಿರ್ದೇಶನಗಳ ಪಾಲಿಸುವಿಕೆ.

ಸಾಮಗ್ರಿ :– ಸ್ಪಾಂಜ್, ರಬ್ಬರ್ ಬ್ಯಾಂಡ್ಗಳು, ಬಿಂದಿಗಳು, ಮಾರ್ಕರ್ ಪೆನ್.

ವಿಧಾನ :


ವಿದ್ಯಾ ಪ್ರವೇಶ (ವಿ.ಪ್ರ):**2 ನೇ & 3 ನೇ ತರಗತಿ :**

ಸ್ಪಾಂಜನ್ನು ಉದ್ದವಾಗಿ ಹಿಡಿದು ಮೇಲ್ಭಾಗದ ಎರಡು ತುದಿಗಳಿಗೆ ರಬ್ಬರ್ ಬ್ಯಾಂಡ್ ಹಾಕಿ ಕಿವಿಗಳ ರಚನೆ ಮಾಡುವುದು.


ಮಧ್ಯ ಭಾಗದಲ್ಲಿ ಸಡಿಲವಾಗಿ ಚಿತ್ರದಲ್ಲಿ ತೋರಿಸಿರುವಂತೆ ರಬ್ಬರ್ ಬ್ಯಾಂಡ್ ಹಾಕುವುದು.

ಬಿಂದಿಗಳನ್ನು ಕಣ್ಣಿನ ಜಾಗದಲ್ಲಿ ಅಂಟಿಸುವುದು.

DRAFT 2022

| | | | |
|---|---|---|---|
| | | | ಮಾರ್ಕರ್ ನಿಂದ ಬಾಯಿಯ ಭಾಗದಲ್ಲಿ ಗೆರೆ ಮೂಡಿಸುವುದು.<br>ಬಣ್ಣದ ಬಿಂದಿಗಳಿಂದ ಗೊಂಬೆಯನ್ನು ಅಲಂಕರಿಸುವುದು.<br>**2 ನೇ & 3 ನೇ ತರಗತಿ :**<br>ತನ್ನದೇ ಆದ ರೀತಿಯಲ್ಲಿ ಗೊಂಬೆಗೆ ಅಲಂಕಾರ ಮಡುವುದು.<br><br>*************************************************************************** |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿದೇ೯ಶಿತ) ಚಟುವಟಿಕೆ)** | | **ಸಾಮರ್ಥ್ಯ: ಹಣ್ಣುಗಳ ಬಗ್ಗೆ ಅರಿವು ಬೆಳೆಸಿಕೊಳ್ಳುವುದು, ಆರೋಗ್ಯಕರ ಆಹಾರ ಸೇವನೆ**<br>**ಚಟುವಟಿಕೆ:– 39 ಹಣ್ಣುಗಳ ಬಗ್ಗೆ ತಿಳಿಯೋಣ (ಗುರಿ–3)**<br>**ಉದ್ದೇಶ:– ಆರೋಗ್ಯಕರ ಅಭ್ಯಾಸದಲ್ಲಿ ಹಣ್ಣುಗಳ ಮಹತ್ವ ಅರಿಯುವುದು.**<br>**ಅಗತ್ಯ ಸಾಮಗ್ರಿಗಳು : ವಿವಿಧ ಬಣ್ಣಗಳ ಹಾಳೆಗಳು, ಕತ್ತರಿ**<br>**ವಿಧಾನ : ಹಣ್ಣುಗಳ ಬಗ್ಗೆ ಕೆಲವು ಪ್ರಶ್ನೆ ಕೇಳುವುದರ ಮೂಲಕ ತರಗತಿಯನ್ನು ಪ್ರಾರಂಭಿಸುವುದು. ಉದಾ: ನೀವು ತಿನ್ನುವ ಹಣ್ಣುಗಳ ಹೆಸರು ಹೇಳಿ.**<br>* **ನಿಮ್ಮ ನೆಚ್ಚಿನ ಹಣ್ಣು ಯಾವುದು?**<br>* **ಮಕ್ಕಳು ತಮಗೆ ಇಷ್ಟವಾದ ಚಿತ್ರ ಬಿಡಿಸಿ ಬಣ್ಣ ತುಂಬುವುದು. ಕತ್ತರಿಯ ಸಹಾಯದಿಂದ ಹಣ್ಣಿನ ಚಿತ್ರವನ್ನು ಕತ್ತರಿಸಿ ಕಟೌಟ್ ಸಿದ್ಧಪಡಿಸುವುದು. ಮಕ್ಕಳ ತಲೆಯ ಸುತ್ತ ಹಾಳೆಯ ಪಟ್ಟಿ ಧರಿಸುವುದು. ಕತ್ತರಿಸಿದ ಹಣ್ಣಿನ ಚಿತ್ರವನ್ನು ತಲೆಯ ಸುತ್ತ ಧರಿಸಿದ ಹಾಳೆಗೆ ಅಂಟಿಸಿ ಮುಖವಾಡವಾಗಿ ಬಳಸುವುದು.**<br>* **ಹಣ್ಣುಗಳನ್ನು ಮತ್ತು ಹಸಿರು ತರಕಾರಿಗಳನ್ನು ಹೆಚ್ಚು ಸೇವಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದು.**<br>**2ನೇ ತರಗತಿ**<br>**ನಿಮಗೆ ತಿಳಿದಿರುವ ಹಣ್ಣುಗಳ ಹೆಸರುಗಳನ್ನು ಹೇಳಿರಿ. ನಿಮಗೆ ಇಷ್ಟವಾದ ಹಣ್ಣಿನ ಚಿತ್ರ ಬರೆದು ಬಣ್ಣ ತುಂಬು.**<br>**3ನೇ ತರಗತಿ**<br>**ನೀವು ಸೇವಿಸಿರುವ/ನೋಡಿರುವ ಹಣ್ಣುಗಳ ಹೆಸರುಗಳನ್ನು ಪಟ್ಟಿ ಮಾಡಿರಿ. (10ಕ್ಕಿಂತ ಹೆಚ್ಚು) ಮಾವಿನ ಹಣ್ಣಿನ ಚಿತ್ರ ಬರೆದು ಬಣ್ಣ ಹಾಕು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | | ಸಾಮರ್ಥ್ಯ : ತನ್ನನ್ನು ತಾನು ಅರಿತುಕೊಳ್ಳುವುದು,ಮತ್ತು ಇತರರ ಬಗ್ಗೆ ಅರಿವು ಮೂಡಿಸಿಕೊಳ್ಳುವುದು , ಭಾಷಾ ವಿಕಾಸ, ಪದ ಸಂಪತ್ತಿನ ಅಭಿವೃದ್ದಿ.<br>ಚಟುವಟಿಕೆ; 2 ಹಾಡು.<br>ಉದ್ದೇಶ;<br>• ಶಾರೀರಿಕ ಬೆಳವಣಿಗೆಯ ವಿಕಾಸ ಹೊಂದುತ್ತಾರೆ.<br>• ಪದಸಂಪತ್ತು ಹೆಚ್ಚುವುದರೊಂದಿಗೆ ಪ್ರಾಸ, ಲಯ, ಸಂದರ್ಭ ಹಾಗೂ ಸ್ಪಷ್ಟ ಉಚ್ಚಾರಣೆ ಮಾಡುತ್ತಾರೆ.<br>• ಆಂಗಿಕ ಭಾವನೆಗಳನ್ನು ಗುರ್ತಿಸುತ್ತಾರೆ.<br>• ಪ್ರಾಸಪದಗಳನ್ನು ಕೇಳಿ ಆನಂದಿಸುವರು..<br>ಸಾಮಗ್ರಿಗಳು : ಹಾಡಿನ ಪ್ರತಿ<br>ವಿಧಾನ : ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು.ಸುಗಮಕಾರರು ತಾಳ ಬದ್ಧ ಚಟುವಟಿಕೆಗಳನ್ನು ನಡೆಸಲು ಮಕ್ಕಳಿಗೆ ಅವಕಾಶ ಕಲ್ಪಿಸುವುದು. ಅಭಿನಯ ಗೀತೆಗಳು / ಹಾಡುಗಳಿಗೆ ಪರಿಕರಗಳನ್ನು ಉಪಯೋಗಿಸಿ ಅಥವಾ ಆಂಗಿಕ ಚಲನವಲನಗಳಿಂದ ಹಾಡಿಸುವುದು.<br>ವಿವರ; 2ಮತ್ತು 3 ನೇ ತರಗತಿ ಮಕ್ಕಳಿಗೆ ಹಾಡಿಗೆ ಸಂಭಂದಿಸಿದ ಪ್ರಶ್ನೆಗಳನ್ನು ಕೇಳಿ ಉತ್ತರಪಡೆಯುವುದು |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಕ್ರಿಯಾತ್ಮಕ ಸ್ವ ಅಭಿವ್ಯಕ್ತಿ, ಧ್ವನಿ ಸಂಕೇತ ಹಾಗೂ ಪ್ರಾಸದ ಅರಿವು, ಪರಿಸರ ಪ್ರಜ್ಞೆ, ಪದಸಂಪತ್ತಿನ ಬೆಳವಣಿಗೆ**<br>**ಚಟುವಟಿಕೆ 3 ಹಾಡು, ಪ್ರಾಸಗೀತೆ, ಪದ್ಯ/ನಾಟಕ. (ಗುರಿ–2) ECL-3 (57 ನೇ ದಿನದಿಂದ ಮುಂದುವರೆದಿದೆ)**<br>**ಉದ್ದೇಶ:**<br>* **ಧ್ವನಿ ಸಂಕೇತಗಳ ಅರಿವನ್ನು ಮೂಡಿಸುವುದು.**<br>* **ಪ್ರಾಸಗಳ ಅರಿವನ್ನು ಉಂಟು ಮಾಡುವುದು.**<br>* **ಕ್ರಿಯಾತ್ಮಕ ಸ್ವ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದು.**<br>* **ತನ್ನ ಸುತ್ತಲಿನ ಪರಿಸರದೊಂದಿಗೆ ಸಂಬಂಧೀಕರಿಸುವುದು.** |

DRAFT 22.02.22

| | | | |
|---|---|---|---|
| | ಸಾಕ್ಷರತೆ | | ಅಗತ್ಯ ಸಾಮಗ್ರಿಗಳು– ಇಲ್ಲ<br>ವಿಧಾನ: ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ. ಶಿಕ್ಷಕರು ಮಕ್ಕಳಿಗೆ 57 ನೇ ದಿನ ಹೇಳಿಕೊಟ್ಟ ಪ್ರಾಸಗೀತೆಯನ್ನೇ ಅಭಿನಯದೊಂದಿಗೆ ಹಾಡಿ ತೋರಿಸಲಿ. ಶಿಕ್ಷಕರನ್ನು ಅನುಕರಿಸುತ್ತಾ ಮಕ್ಕಳು ಹಾಡನ್ನು ಪುನರುಚ್ಚರಿಸಲು ತಿಳಿಸಿ.<br>ನೆನಪಿಡಬೇಕಾದ ಅಂಶಗಳು:<br>* ಮಕ್ಕಳು ಹಾಡನ್ನು ಆನಂದಿಸಲು ಸೂಕ್ತ ಅಭಿನಯ ಹಾಗೂ ಉತ್ಸಾಹದಿಂದ ಹಾಡಿ.<br>* ಮಕ್ಕಳು ಗೀತೆಯಲ್ಲಿರುವ ಪ್ರಾಸ ಪದಗಳನ್ನು ಶಿಕ್ಷಕರ ಸಹಾಯದಿಂದ ಗುರುತಿಸಲಿ.<br>ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಪ್ರಾಸಗೀತೆಯಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸುವುದು.<br>3 ನೇ ತರಗತಿ ಮಕ್ಕಳು ಆ ಪ್ರಾಸ ಪದಗಳಿಗೆ ಇನ್ನಷ್ಟು ಪದಗಳನ್ನು ಸೇರಿಸುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ : ಪದ ಗುರುತಿಸುವುದು, ಮುದ್ರಿತ ಪಠ್ಯದ ಅರಿವು, ಅರ್ಥ ಗ್ರಹಿಕೆ, ಪದ ಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ : 11 ಹೆಸರಿನ ಜಗತ್ತು (ಗುರಿ 2)<br>ಉದ್ದೇಶ: ಪರಿಚಿತ ಸನ್ನಿವೇಶದಲ್ಲಿನ ವಸ್ತುಗಳನ್ನು ಲಿಪಿಸಂಕೇತಗಳೊಂದಿಗೆ ಸಹ ಸಂಬಂಧಿಕರಿಸಿಕೊಳ್ಳುವುದು. ಸಾಹಿತ್ಯ ಮತ್ತು ವಸ್ತು ಒಂದೇ ಇದೆ ಎಂಬ ತೀರ್ಮಾನಕ್ಕೆ ಬಂದು ಓದುವಿಕೆಯಲ್ಲಿ ಆಸಕ್ತಿ ಬೆಳಸಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ನೋಟ್ ಪುಸ್ತಕ, ಚಾರ್ಟ್ ಪೇಪರ್, ಪೆನ್ಸಿಲ್, ಕ್ರೇಯಾನ್ಸ್, ನಮಗೆ ಕಣ್ಣಿಗೆ ಕಾಣುವ ಸುತ್ತಮುತ್ತಲಿನ ಸಾಮಾಗ್ರಿಗಳು<br>ವಿಧಾನ :<br>– ಮಕ್ಕಳ ಸಹಾಯದಿಂದ ತರಗತಿಯಲ್ಲಿರುವ ಸಾಮಾನ್ಯ/ಪರಿಚಿತ ವಸ್ತುಗಳ ಹೆಸರನ್ನು ಪಟ್ಟಿ ಮಾಡುವುದು.<br>ಉದಾ– ಮೇಜು, ಖುರ್ಚಿ, ಬಾಗಿಲು ಇತ್ಯಾದಿ.<br>– ಸಿದ್ಧಪಡಿಸಿದ ನಾಮ ಫಲಕಗಳನ್ನು ಆಯಾ ವಸ್ತುಗಳ ಮೇಲೆ ಅಂಟಿಸುವುದು.<br>– ಇನ್ನೊಂದು ಸೆಟ್ ನಾಮ ಫಲಕಗಳ ಮಿಂಚುಪಟ್ಟಿಗಳನ್ನು ತಯಾರಿಸಿಟ್ಟುಕೊಳ್ಳುವುದು.<br>– ಪದಗಳ ಮಿಂಚುಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುತ್ತಾ, ಮಕ್ಕಳಿಂದ ಗಟ್ಟಿಯಾಗಿ ಹೇಳಿಸುವುದು.<br>– ಪದ ಉಚ್ಚರಿಸುತ್ತಾ ಆ ವಸ್ತುವಿನ ಬಳಿಗೆ ಮಗು ಹೋಗಲು ತಿಳಿಸುವುದು.<br>_ ಮಗು ಕನಿಷ್ಟ ನಾಲ್ಕೈದು ವಸ್ತುಗಳನ್ನಾದರೂ ಹೆಸರಿಸಲು ಅವಕಾಶ ಕಲ್ಪಿಸುವುದು..<br>_ ಆ ಪದಗಳನ್ನು ಕಥೆಯಲ್ಲಿ ಗುರುತಿಸಲು ಅವಕಾಶ ಕಲ್ಪಿಸುವುದು.<br>– ಚಿತ್ರ ಸಹಿತ ನಾಮಫಲಕ/ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿ, ಚಟುವಟಿಕೆ ಸ್ಥಳದಲ್ಲಿ/ಸಮಯದಲ್ಲಿ ಮಕ್ಕಳಿಗೆ ಗುರುತಿಸಿ ಓದಲು (ಚಿತ್ರಗಳ ಸಹಾಯದಿಂದ) ಅವಕಾಶ ಕಲ್ಪಿಸುವುದು.<br>2ಮತ್ತು 3ನೇ ತರಗತಿ: ಕಥೆ/ಪಠ್ಯದಲ್ಲಿ ಬಂದಿರುವ ಮುಖ್ಯಪದಗಳ ಮಿಂಚುಪಟ್ಟಿ ತಯಾರಿಸಿಕೊಳ್ಳುವುದು<br>ಮಕ್ಕಳಿಗೆ ಶಿಕ್ಷಕರು ಕಥೆ/ಪಠ್ಯವನ್ನು ನೀಡಿ ಓದಲು ಅವಕಾಶ ಕಲ್ಪಿಸುವುದು.ನಂತರ ಮಿಂಚುಪಟ್ಟಿಯಲ್ಲಿರುವ ಪದಗಳನ್ನು ಕತೆಯಲ್ಲಿ ಹುಡುಕಲು ಸೂಚಿಸುವುದು.<br>ಗಮನಿಸಿ ; ಈ ಹಿಂದೆ ಈ ಚಟುವಟಿಕೆಗಳಲ್ಲಿ ಬಳಸಿದ ಪದಗಳನ್ನು ಹೊರತುಪಡಿಸಿ ಬೇರೆ ಬೇರೆ ಸ್ಥಳ, ಸನ್ನಿವೇಶದಲ್ಲಿ ಬರುವ ಪದಗಳನ್ನು ಬಳಸಿ ಚಟುವಟಿಕೆಯನ್ನು ನಿರ್ವಹಿಸುವುದು.<br> |
| | | ಉದ್ದೇಶಿತ ಬರಹ | ಸಾಮರ್ಥ್ಯ : ಸೂಕ್ಷ್ಮ ಸ್ನಾಯು ಚಲನಾ ಕೌಶಲಾಭಿವೃದ್ಧಿ. ಅಕ್ಷರಗಳನ್ನು ಗುರುತಿಸುವುದು.<br>ಚಟುವಟಿಕೆ: 36, ಚುಕ್ಕಿ ಸೇರಿಸು –ಅಕ್ಷರ ಬರೆ (ಗುರಿ: 2 ) ECW-17<br>ಉದ್ದೇಶ :<br>• ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.<br>• ಅಕ್ಷರಗಳನ್ನು ಗುರುತಿಸುವುದು.<br>• ಚುಕ್ಕಿಗಳಿಂದ ಅಕ್ಷರಗಳನ್ನು ರಚಿಸುವುದು<br>ಅಗತ್ಯ ಸಾಮಗ್ರಿ : ನೋಟ್ ಪುಸ್ತಕ, ಪೆನ್ಸಿಲ್, ಕರಿ ಹಲಗೆ, ಸೀಮೆ ಸುಣ್ಣ<br>ವಿಧಾನ : |

DRAFT 2022

| | | |
|---|---|---|
| | | – ಮಕ್ಕಳಿಗೆ ಚುಕ್ಕಿ ಬಳಸಿ **A, B, C, D, E** ಈ ಅಕ್ಷರಗಳನ್ನು ಬರೆಯುವ ವಿಧಾನವನ್ನು ಬರೆದು ತೋರಿಸುವುದು,<br>– ಮಕ್ಕಳು **A, B, C, D, E** ಈ ಅಕ್ಷರಗಳ ಚುಕ್ಕಿಗಳನ್ನು ಸೇರಿಸಲು ಹೇಳುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ಇಂಗ್ಲಿಷ್ ವರ್ಣಮಾಲೆಯ ಯಾವುದಾದರೂ 5 ಅಕ್ಷರಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. 3ನೇ ತರಗತಿ ಮಕ್ಕಳು ತಮಗೆ ತಿಳಿದ 5 ಇಂಗ್ಲಿಷ್ ಪದಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. (69 ನೇ ದಿನಕ್ಕೆ ಮುಂದುವರೆದಿದೆ) |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| | **ಹೊರಾಂಗಣ ಆಟಗಳು** | ಚಟುವಟಿಕೆ – ಸ್ಥಿರ ಸಮತೋಲನ (static balance)<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ದೇಹದ ಬೇರೆ ಬೇರೆ ಭಾಗಗಳ ಸಮತೋಲನ ಸಾಧಿಸುವುದು .<br>ಬೇಕಾಗುವ ಸಾಮಗ್ರಿ: ಮೃದುವಾದ ಜಾಗ , ಚಾಪೆ ,ಜಮಖಾನ<br>ವಿಧಾನ :<br>• ಈ ಚಟುವಟಿಕೆಯನ್ನು ತರಗತಿ ಕೋಣೆಯೊಳಗೆ/ ಸಭಾಂಗಣದಲ್ಲಿ ಮಾಡಿಸುವುದು .<br>• ಚಾಪೆಯನ್ನು/ ಜಮಖಾನ ಹಾಸಿ ಮಕ್ಕಳಿಗೆ ಅಗತ್ಯವಿದಷ್ಟು ಜಾಗವನ್ನು ನೀಡುವುದು .<br>• ಮಕ್ಕಳು ಚಾಪೆಯ ಮೇಲೆ ಬೆನ್ನ ಮೇಲೆ ಮಲಗಲು ಸೂಚಿಸುವುದು .<br>• ಸ್ವಲ್ಪ ಸಮಯದ ನಂತರ ಹೊಟ್ಟೆಯ ಮೇಲೆ ಮಲಗಲು ಸೂಚಿಸುವುದು .<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಬೆನ್ನ ಮೇಲೆ ಮಲಗಿದಾಗ ಎರಡು ಕಾಲನ್ನು ಎತ್ತಲು ಹಾಗು ಕೈ ಗಳನ್ನೂ ಎತ್ತಲು ಸೂಚಿಸುವುದು .** |
| | **ಕಥಾ ಸಮಯ** | **ಶೀರ್ಷಿಕೆ :** ಒಂಟೆ ಮತ್ತು ನರಿ<br>**ಸಾಮಗ್ರಿಗಳು :** ಪಪೆಟ್, ಸ್ಕ್ರೀನ್<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ಹೆಚ್ಚಿಸುವುದು.<br>➢ **ಏಕಾಗ್ರತೆಯನ್ನು ಹೆಚ್ಚಿಸುವುದು.**<br>➢ **ಅಭಿನಯ ಕೌಶಲ ಹೆಚ್ಚಿಸುವುದು.**<br>ವಿಧಾನ :<br>***ಪಪೆಟ್ ಪ್ರದರ್ಶನ***<br>ಪಪೆಟ್ ಗೊಂಬೆಗಳನ್ನು ಪರದೆಯ ಮೇಲೆ ಪ್ರದರ್ಶಿಸಿ ಕಥೆಯನ್ನು ನಿರೂಪಿಸುವುದು. ಶಿಕ್ಷಕರು ಕಥೆಯ ಸಂಭಾಷಣೆಯನ್ನು ಮಕ್ಕಳಿಂದ ಹೇಳಿಸುತ್ತ ನಿರೂಪಣೆ ಮಾಡುವುದು. ನಂತರ ಏಕೆ? ಹಾಗಾದರೆ, ಹಾಗಾಗದಿದ್ದರೆ ಇತ್ಯಾದಿ ಪ್ರಶ್ನೆಗಳನ್ನು ಹಿರಿಯ ಮಕ್ಕಳಿಗೆ ಕೇಳಿ ಉತ್ತರ ಪಡೆಯುವುದು.<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

# ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

**ವಾರ–11** **ದಿನ–64 (ಗುರುವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 64 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | **ಚಟುವಟಿಕೆ 1:**<br>1. ಶಾಲೆಗೆ ಮೊದಲು ಆಗಮಿಸಿದ 3 ಮಕ್ಕಳಿಗೆ ಪೇಪರಿನಿಂದ ಮಾಡಿದ ಹೂವುಗಳನ್ನು ನೀಡುವ ಮೂಲಕ ಸ್ವಾಗತಿಸುವುದು.<br>2. ಹೀಗೆ ಮಗುವಿಗೆ ಸರಿಯಯಾದ ಸಮಯಕ್ಕೆ ಶಾಲೆಗೆ ಬರಲು ಪ್ರೇರೆಪಿಸುವುದು<br>**ಚಟುವಟಿಕೆ 32:**<br>ಹಿಂದಿನ ದಿನಗಳಲ್ಲಿ ಮಾಡಿದ TPR ಚಟುವಟಿಕೆಗಳನ್ನು ಮಾಡಿಸುವುದು |
| | ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | ಚಟುವಟಿಕೆ : ಹಬ್ಬಗಳು<br>ವಿಧಾನ: ( ಕೆರೆ ದಂಡೆ ಆಟದ ಮಾದರಿ )<br>• ತರಗತಿಯಲ್ಲಿ ನೆಲದ ಮೇಲೆ ದೊಡ್ಡ ವೃತ್ತವನ್ನು ಎಳೆಯಿರಿ (ಮಕ್ಕಳ ಶಕ್ತಿಗೆ ಅನುಗುಣವಾಗಿ)<br>• ಮಕ್ಕಳನ್ನು ವೃತ್ತದ ಹೊರಗೆ ನಿಲ್ಲಿಸಿ.<br>• ಶಿಕ್ಷಕರು ಹಬ್ಬಗಳ ಹೆಸರುಗಳನ್ನು ಹೇಳಿದರೆ, ಮಕ್ಕಳು ವೃತ್ತ ಒಳಗೆ ಜಿಗಿಯಬೇಕು ಮತ್ತು ವಾರಗಳ ಹೆಸರುಗಳನ್ನು ಹೇಳಿದರೆ ಅವರು ವೃತ್ತದ ಹೊರಗೆ ಜಿಗಿಯಬೇಕು ಮತ್ತು ಯಾರಾದರೂ ತಪ್ಪು ಮಾಡಿದರೆ, ಅವನು /ಅವಳು ಆಟದಿಂದ ಔಟ್ ಆಗುತ್ತಾರೆ.<br>ದಿನ 61 ರ ಚಟುವಟಿಕೆಯನ್ನು ಮುಂದುವರೆಸಿ.<br><br>ಚಟುವಟಿಕೆ: ನಮ್ಮ ಹಬ್ಬಗಳ ಸುತ್ತಲೂ<br>ಅಗತ್ಯವಿರುವ ಸಾಮಗ್ರಿಗಳು: ತಮ್ಮ ಪ್ರದೇಶದಲ್ಲಿ ಆಚರಿಸುತ್ತಿರುವ ವಿವಿಧ ರೀತಿಯ ಹಬ್ಬಗಳ ಚಿತ್ರ ಕಾರ್ಡ್ ಗಳು<br>ಕಾರ್ಯವಿಧಾನ:<br>1. ಮಕ್ಕಳನ್ನು ಅರೆ–ವೃತ್ತದಲ್ಲಿ ಕುಳಿತುಕೊಳ್ಳುವಂತೆ ಮಾಡಿ<br>2. ಚಿತ್ರ ಕಾರ್ಡ್ ಗಳನ್ನು ಚೀಲದಲ್ಲಿ ಇರಿಸಿ.<br>3. ಚೀಲವನ್ನು ಪಾಸ್ ಮಾಡಿ ಮತ್ತು ಸಂಗೀತವನ್ನು ನುಡಿಸಿ.<br>4. ನಡುವೆ ಸಂಗೀತವನ್ನು ನಿಲ್ಲಿಸಿ.<br>5. ಮ್ಯೂಸಿಕ್ ನಿಂತಾಗ, ಚೀಲವನ್ನು ಹೊಂದಿರುವ ಮಗುವು ತನ್ನ ಕೈಯನ್ನು ಚೀಲದೊಳಗೆ ಹಾಕಿ ಚೀಲದಿಂದ ಕಾರ್ಡ್ ಅನ್ನು ಹೊರತೆಗೆಯಬೇಕಾಗುತ್ತದೆ<br>6. ಕಾರ್ಡ್ ನಲ್ಲಿ ಹಬ್ಬದ ಚಿತ್ರವನ್ನು ನೋಡಿದ ನಂತರ, ಮಗುವು ತನ್ನ ಮನೆಯಲ್ಲಿ ಆಚರಿಸುತ್ತಿರುವ ಹಬ್ಬಗಳ ಬಗ್ಗೆ ತನ್ನ ಅಭಿಪ್ರಾಯವನ್ನು ಹಂಚಿಕೊಳ್ಳಬೇಕು.<br>7. ಹಬ್ಬಗಳ ಒದು ಅವರ ಆಲೋಚನೆಗಳನ್ನು / ಆಲೋಚನೆಗಳನ್ನು ಹೊರತರಲು ಅವರಿಗೆ ಕೆಲವು ಪ್ರಶ್ನೆಗಳನ್ನು ಹಾಕಿ. |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ | **ಸಾಮರ್ಥ್ಯ: ಪರಿಸರದ ಅರಿವು, ಹೆಚ್ಚು ಕಡಿಮೆ ಪರಿಕಲ್ಪನೆ, ವೈಯಕ್ತಿಕ ಅಭಿವೃದ್ಧಿ**<br>**ಚಟುವಟಿಕೆ….40 ಹಣ್ಣುಗಳ ವಿಂಗಡಣೆ (ಗುರಿ–3)**<br>**ಉದ್ದೇಶ:– ವಿವಿಧ ತರಹದ ಹಣ್ಣುಗಳನ್ನು ತಿಳಿಯುವುದು.** |

DRAFT 22.02.22

| | | | |
|---|---|---|---|
| | ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ) | | ಅಗತ್ಯ ಸಾಮಗ್ರಿಗಳು : ವಿವಿಧ ರೀತಿಯ ಹಣ್ಣುಗಳು/ಮಾದರಿ<br>ವಿಧಾನ : ವಿವಿಧ ಹಣ್ಣು / ಮಾದರಿಗಳನ್ನು ಮಕ್ಕಳಿಗೆ ನೀಡಿ ಅವುಗಳಲ್ಲಿರುವ ಬೀಜಗಳ ಆಧಾರದ ಮೇಲೆ ವಿಂಗಡಿಸಲು ತಿಳಿಸುವುದು. ಉದಾ: ಮಾವಿನ ಹಣ್ಣು (ಒಂದು ಬೀಜ ಹೊಂದಿರುವ), ಸೇಬು ಹಣ್ಣು (ಕೆಲವು ಬೀಜ ಹೊಂದಿರುವ), ಕಿತ್ತಳೆ/ಪಪ್ಪಾಯಿ ಹಣ್ಣು(ಹಲವು ಬೀಜ ಹೊಂದಿರುವ)<br>2ನೇ ತರಗತಿ<br>ನೀಡಿರುವ ವಿವಿಧ ಹಣ್ಣುಗಳ ಮಾದರಿಗಳನ್ನು ಗಮನಿಸಿ ಹುಳಿ ಮತ್ತು ಸಿಹಿ ಆಧಾರದ ಮೇಲೆ ವಿಂಗಡಿಸಲು ಹೇಳುವುದು.<br>3ನೇ ತರಗತಿ<br>ವಿವಿಧ ಮಾದರಿಯ ಹಣ್ಣಿನ ಚಿತ್ರಗಳನ್ನು ನೀಡಿ ಬೀಜಗಳ ಆಧಾರದ ಮೇಲೆ ವಿಂಗಡಿಸಿ ಹಣ್ಣಿನ ಹೆಸರುಗಳನ್ನು ಪಟ್ಟಿ ಮಾಡಲು ಹೇಳುವುದು. (ಒಂದು ಬೀಜವಿರುವ, ಕೆಲವು ಬೀಜಗಳಿರುವ ಮತ್ತು ಬಹಳ ಬೀಜಗಳಿರುವ ಹಣ್ಣುಗಳು) |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಬಿ **ಅಕ್ಷರಗಳ ಆಕಾರದ ಒಳಗೆ ಬಣ್ಣ ತುಂಬುವುದು** ಗುರಿ – 1<br>ಉದ್ದೇಶ; ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಸ್ಥಳದ ಪರಿಕಲ್ಪನೆಯನ್ನು ತಿಳಿಯುತ್ತಾರೆ.<br>ಸಾಮಗ್ರಿಗಳು : ಮರಳು ಮತ್ತು ಕಡ್ಡಿ.<br>ವಿಧಾನ : ಮಕ್ಕಳಿಗೆ ಅಂಕಿಗಳ ಆಕಾರದ ರೇಖಾ ಚಿತ್ರಗಳನ್ನು ಕೊಟ್ಟು ಬಣ್ಣ ತುಂಬಲು ಹೇಳುವುದು.ಮಗು ತನಗೆ ಬರುವ ಅಂಕಿಗಳ ರೇಖಾ ಚಿತ್ರಗಳನ್ನು ಬರೆದು ಬಣ್ಣ ತುಂಬಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ 2–3 ಅಂಕಿಯ ಸಂಖ್ಯೆಗಳನ್ನು ಆಯ್ಕೆ ಮಾಡಿ ಅದರಿಂದ ರೇಖಾ ಚಿತ್ರಗಳನ್ನು ಬರೆದು ಬಣ್ಣ ತುಂಬಲು ಹೇಳುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ:– ಧ್ವನಿ ಸಂಕೇತಗಳ ಅರಿವು, ಅಕ್ಷರ ಶಬ್ದ ಸಹ ಸಂಬಂಧ.<br>**ಚಟುವಟಿಕೆ–20 ಹೆಸರಿನ ಆರಂಭಿಕ ಅಕ್ಷರದಿಂದ ವಸ್ತುವನ್ನು ಪತ್ತೆ ಹಚ್ಚುವುದು (ಗುರಿ–2) ECL-2 (52 ನೇ ದಿನದಿಂದ ಮುಂದುವರೆದಿದೆ.)**<br>ಉದ್ದೇಶಗಳು:–<br>* ಧ್ವನಿ ಸಂಕೇತಗಳ ಅರಿವು ಮೂಡಿಸುವುದು.<br>* ಅಕ್ಷರಗಳು ಮತ್ತು ಪದಗಳ ನಡುವಿನ ಸಹಸಂಬಂಧವನ್ನು ಗ್ರಹಿಸುವುದು.<br>* ಪದಗಳನ್ನು ಗ್ರಹಿಸಿ ಗುರುತಿಸುವುದು.<br>* ಅಂತ್ಯಾಕ್ಷರಿ ಪದಗಳನ್ನು ಬರೆಯುವುದು.<br>ಅಗತ್ಯ ಸಾಮಗ್ರಿಗಳು– ಇಲ್ಲ<br>ಸಲಹಾತ್ಮಕ ವಿಷಯ : ಆಹಾರ ಪದಾರ್ಥಗಳು<br>ವಿಧಾನ:– ಸುಳಿವುಗಳ ಮೂಲಕ ಆಹಾರ ಪದಾರ್ಥಗಳ ಹೆಸರನ್ನು ಊಹಿಸಿ ಹೇಳುವ ಚಟುವಟಿಕೆಯನ್ನು ಆಯೋಜಿಸಿ. ಉದಾಹರಣೆಗಾಗಿ ಶಿಕ್ಷಕರು 'ನನ್ನ ಮನಸ್ಸಿನಲ್ಲಿರುವ ಆಹಾರ ಪದಾರ್ಥವನ್ನು ನಾವು ಚಪಾತಿಯನ್ನು ಮಾಡಲು ಬಳಸುತ್ತೇವೆ. ..ಅದರ ಹೆಸರು ಗೋ ಅಕ್ಷರದಿಂದ ಪ್ರಾರಂಭವಾಗುತ್ತದೆ ಎಂದು ಹೇಳಿದಾಗ ಮಕ್ಕಳು ಗೋಧಿ ಎಂದು ಗುರುತಿಸುವುದು. ಹೀಗೆಯೇ ವಿವಿಧ ಉದಾಹರಣೆಗಳನ್ನು ನೀಡುವುದು.<br>ತರಗತಿವಾರು ವಿವರ: 2ನೇ ಮತ್ತು 3ನೇ ತರಗತಿ ಮಕ್ಕಳಿಗೆ ಪದಗಳ ಮುಂದುವರೆದ ಭಾಗವಾಗಿ ವಾಕ್ಯಗಳನ್ನು ರಚಿಸುವಂತೆ ಹಾಗೂ ಸರಳ ವಾಕ್ಯಗುಚ್ಛಗಳನ್ನು ರಚಿಸುವಂತೆ ಚಟುವಟಿಕೆಗಳನ್ನು ಮುಂದುವರೆಸುವುದು..( 70 ನೇ ದಿನಕ್ಕೆ ಮುಂದುವರೆದಿದೆ)<br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC-17 (ತರಗತಿ 1, 2, 3)** |
| | | ಅರ್ಥಗ್ರಹಿಕೆ | ಸಾಮರ್ಥ್ಯ: ಪದಗಳನ್ನು ಗುರುತಿಸುವುದು, ಮುದ್ರಿತ ಪಠ್ಯದ ಅರಿವು, ಅರ್ಥಗ್ರಹಿಕೆ<br>**ಚಟುವಟಿಕೆ....28 ವಾಕ್ಯ ವಿಭಜನೆ. (ಗುರಿ–2)** |

| | |
|---|---|
| ಊಂದಿಗಿನ ಓದು | ಉದ್ದೇಶ : ಕಥೆ / ಪ್ರಾಸಗೀತೆಗಳಲ್ಲಿಯ ಪದಗಳನ್ನು ಗುರುತಿಸುವರು ರಚಿಸುವರು ಮತ್ತು ವಿಭಜಿಸುವರು.<br>ಅಗತ್ಯ ಸಾಮಾಗ್ರಿಗಳು : ಪ್ರಾಸಗೀತೆ, ಹಾಡು, ಕಥೆ, ನೆಚ್ಚಿನ ಪುಸ್ತಕ, ಖಾಲಿ ಕಾರ್ಡ್‌ಗಳು, ಚಾರ್ಟ ಪೇಪರ್.<br>ವಿಧಾನ :<br>* ಸರಳ ಪರಿಚಿತ ಪ್ರಾಸ, ಹಾಡು, ಕಥೆಗಳ ಚಾರ್ಟ್ ತಯಾರಿಸಿ ಅದರಲ್ಲಿಯ ಪ್ರಮುಖ ಪದ/ವಾಕ್ಯಗಳನ್ನು ದಪ್ಪ ಅಕ್ಷರಗಳಲ್ಲಿ ತೊರಿಸುವಂತೆ ಬರೆದು ಕಪ್ಪುಹಲಗೆ ಮೇಲೆ ಚಾರ್ಟನ್ನು ಪ್ರದರ್ಶಿಸುವುದು.<br>* ಮಕ್ಕಳಿಗೆ ಕಥೆ/ ಪ್ರಾಸಗೀತೆಯಲ್ಲಿಯ ವಾಕ್ಯಗಳನ್ನು ಪುನರಾವರ್ತಿಸಿ ಓದುವುದು ಮತ್ತು ಹೇಳಿಕೊಡುವುದು.<br>* ಶಿಕ್ಷಕರು ವಾಕ್ಯದಲ್ಲಿನ ಪದವನ್ನು ಗಟ್ಟಿಯಾಗಿ ಓದಬೇಕು ನಂತರ ಮಕ್ಕಳನ್ನು ಕಪ್ಪುಹಲಗೆ ಬಳಿ ಕರೆದು ತಾವು ಹೇಳಿದ ಪದವನ್ನು ಚಾರ್ಟ್ ನಲ್ಲಿ ಮುಟ್ಟುವ ಮೂಲಕ ಆ ಪದವನ್ನು ತೋರಿಸಲು ಹೇಳಬೇಕು.<br>* ಶಿಕ್ಷಕರು ಒಂದು ವಾಕ್ಯವನ್ನು ಓದಬೇಕು ಅದೇ ವಾಕ್ಯದಲ್ಲಿ ಒಂದು ಪದವನ್ನು ಬದಲಾಯಿಸಿ ಓದಬೇಕು. ಬದಲಾಯಿಸಿದ ಪದ ಯಾವುದು ಎಂದು ಮಕ್ಕಳು ಬೋರ್ಡ್‌ನಲ್ಲಿ ಮುಟ್ಟುವ ಮೂಲಕ ತೋರಿಸಬೇಕು.<br>ಉದಾ; ರವಿಯ ಬಳಿ ಒಂದು ಕುರಿ ಇತ್ತು.<br>ರವಿಯ ಬಳಿ ಒಂದು ಬೆಕ್ಕು ಇತ್ತು<br>ಶಿಕ್ಷಕರು ಯಾವ ಪದ ಬದಲಾಯಿಸಿದ್ದಾರೆ ಎಂಬುದನ್ನು ಮಕ್ಕಳು ತೋರಿಸಬೇಕು.<br>2 ಮತ್ತು 3ನೇ ತರಗತಿ : ಶಿಕ್ಷಕರು ಮಕ್ಕಳಿಗೆ ಕತೆ/ಪ್ರಾಸಗೀತೆಗಳಲ್ಲಿಯ ಪ್ರಮುಖ ಪಾತ್ರಗಳ ಹೆಸರುಗಳನ್ನು ಹೊರ ತೆಗೆದು ಬೇರೆ ಪಾತ್ರಗಳನ್ನು ಹೊಸದಾಗಿ ಸೇರಿಸುವ ಮೂಲಕ ಅದೇ ಕಥೆ ಪ್ರಾಸಗೀತೆಗಳನ್ನು ರಚಿಸಲು ಮಾರ್ಗದರ್ಶಿಸುವುದು.<br>ಗಮನಿಸಿ: ಈ ಚಟುವಟಿಕೆಯನ್ನು ದಿನ 69ರಲ್ಲಿ ಪುನರಾವರ್ತಿಸಸುವುದು. |
| ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ವೀಕ್ಷಣೆ, ಕಲ್ಪನೆ, ಸೃಜನಶೀಲ ಚಿಂತನೆ, ಪರಿಸರ ಪ್ರಜ್ಞೆ<br>ಚಟುವಟಿಕೆ: 35 ಹವಾಮಾನ ನಕ್ಷೆ (ಗುರಿ–2) **ECW-16** (58 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>• ಉದ್ದೇಶಿತ ಬರವಣಿಗೆಯನ್ನು ರೂಢಿಸುವುದು.<br>• ವೀಕ್ಷಣಾ ಕೌಶಲವನ್ನು ಬೆಳೆಸುವುದು.<br>• ಸೃಜನಶೀಲ ಚಿಂತನೆಯನ್ನು ಉತ್ತೇಜಿಸುವುದು.<br>• ಪರಿಸರ ಪ್ರಜ್ಞೆ ಮೂಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ/ ಹಾಳೆಗಳು, ಪೆನ್ಸಿಲ್<br>ವಿಧಾನ : ವಾರದ ದಿನಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>– ವಾರದ ದಿನಗಳ ಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>– ಗುಂಪು ಚಟುವಟಿಕೆಯ ಸಮಯದಲ್ಲಿ ಆ ದಿನದ ಹವಾಮಾನವನ್ನು ಗಮನಿಸಲು ತಿಳಿಸುವುದು.<br>– ಇದರ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ ಖಾಲಿ ಹಾಳೆಗಳನ್ನ ನೀಡಿ ನಿನ್ನೆ–ಇಂದಿನ ಹವಾಮಾನದ ಚಿತ್ರವನ್ನು ಬರೆಯಲು ತಿಳಿಸುವುದು.<br>– ಮಕ್ಕಳ ಕಾರ್ಯಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ದಿನದ ಹವಾಮಾನವನ್ನು ತಮ್ಮ ಪುಸ್ತಕದಲ್ಲಿ ದಾಖಲಿಸುವಂತೆಯೂ 3ನೇ ತರಗತಿಯ ಮಕ್ಕಳು ತರಗತಿ ಹವಾಮಾನ ನಕ್ಷೆಯಲ್ಲಿ ದಿನದ ಹವಾಮಾನವನ್ನು ದಾಖಲಿಸಲು ತಿಳಿಸುವುದು. (70 ನೇ ದಿನಕ್ಕೆ ಮುಂದುವರೆದಿದೆ) |

ಬರವಣಿಗೆಯ ಮಾದರಿ:
ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.
ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.

| | |
|---|---|
| **ಹೊರಾಂಗಣ ಆಟಗಳು** | Day 64<br>ಚಟುವಟಿಕೆ – ಸ್ಥಿರ ಸಮತೋಲನ (static balance)<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ದೇಹದ ಬೇರೆ ಬೇರೆ ಭಾಗಗಳ ಸಮತೋಲನ ಸಾಧಿಸುವುದು .<br>ಬೇಕಾಗುವ ಸಾಮಗ್ರಿ: ಮೃದುವಾದ ಜಾಗ , ಚಾಪೆ ,ಜಮಖಾನ |

DRAFT 22.02.22

| | | |
|---|---|---|
| | | ವಿಧಾನ : ಈ ಚಟುವಟಿಕೆಯನ್ನು ತರಗತಿ ಕೋಣೆಯೊಳಗೆ/ ಸಭಾಂಗಣದಲ್ಲಿ ಮಾಡಿಸುವುದು.<br>• ಮಕ್ಕಳು ಚಾಪೆಯ ಮೇಲೆ ಬೆನ್ನ ಮೇಲೆ ಮಲಗಲು ಸೂಚಿಸುವುದು .<br>• ಎಡಕ್ಕೆ ಹೊರಳಿ ಮಲಗಲು ಸೂಚಿಸುವುದು . ಬಲಗಾಲ ಮತ್ತು ಬಲಗೈ ಎತ್ತಲು ಸೂಚಿಸುವುದು .<br>• ಬಲಕ್ಕೆ ಹೊರಳಿ ಮಲಗಲು ಸೂಚಿಸುವುದು . ಎಡಗಾಲು ಮತ್ತು ಬಲಗೈ ಎತ್ತಲು ಸೂಚಿಸುವುದು .<br>**• ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರಿಸುವುದು .** |
| | **ಕಥಾ ಸಮಯ** | **ಶೀರ್ಷಿಕೆ :** ಒಂಟೆ ಮತ್ತು ನರಿ<br>➢ **ಸಾಮಗ್ರಿಗಳು :** ಸಾಹಿತ್ಯ<br>➢ **ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ಹೆಚ್ಚಿಸುವುದು.<br>➢ ಏಕಾಗ್ರತೆಯನ್ನು ಹೆಚ್ಚಿಸುವುದು.<br>➢ ಅಭಿನಯ ಕೌಶಲ ಹೆಚ್ಚಿಸುವುದು.<br>➢ **ಪ್ರಶ್ನಿಸುವ ಮನೋಭಾವ ಉಂಟುಮಾಡುವುದು.**<br>➢ **ಓದುವ ಹವ್ಯಾಸವನ್ನು ಬೆಳೆಸುವುದು.**<br>➢ **ವಿಧಾನ :**<br>➢ ***ಕಥೆಯ ಸಾಹಿತ್ಯ ಓದು***<br>➢<br>ಕಥೆಯ ಸಾರಾಂಶವನ್ನು ಹೇಳಿದ ನಂತರ ಸಾಹಿತ್ಯವನ್ನು ಯಥಾವತ್ತಾಗಿ ಗಟ್ಟಿಯಾಗಿ ಓದಿ, ಕಥೆಯ ಸಂಭಾಷಣೆಯಲ್ಲಿನ ಸಾಲುಗಳನ್ನು ಪುನರುಚ್ಚರಿಸುವುದು ಮತ್ತು ಬರೆಯುವುದು. ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು. ನಂತರ ಹಿರಿಯ ವಿದ್ಯಾರ್ಥಿಗಳು ಓದುವ ಮೋಲೆಯಲ್ಲಿ ಇಟ್ಟಿರುವ ಕಥಾ ಪುಸ್ತಕಗಳನ್ನು ಓದಲು ಸೂಚಿಸುವುದು.<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br>• **ಕಾವಲುಗಾರರಿಂದ ಒಂಟೆಗೆ ತಪ್ಪಿಸಿಕೊಳ್ಳಲು ಆಗಲಿಲ್ಲ ಏಕೆ?**<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

# ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

## ವಾರ–11 ದಿನ–65 (ಶುಕ್ರವಾರ)

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 65 | **ಶುಭಾಶಯ ವಿನಿಮಯ** | 64 ನೇ ದಿನದ ಚಟುವಟಿಕೆಗಳನ್ನು ಮಾಡಿಸುವುದು |
| | **ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ*** | **ಚಟುವಟಿಕೆ: ನನ್ನ ಹಳ್ಳಿಯಲ್ಲಿ ಜಾತ್ರೆ**<br>ಸಾಮಗ್ರಿಗಳು: ಹಳ್ಳಿಯ ಜಾತ್ರೆಗೆ ಸಂಬಂಧಿಸಿದ ಚಿತ್ರಗಳು.<br>ವಿಧಾನ:<br>1. ಮಕ್ಕಳನ್ನು ಅರ್ಧವೃತ್ತಾಕಾರದಲ್ಲಿ ಕುಳಿತುಕೊಳ್ಳುವಂತೆ ಮಾಡಿ.<br>2. ಮಕ್ಕಳನ್ನು ಒಂದೊಂದಾಗಿ ಕರೆಯಿರಿ ಮತ್ತು ಅವರಿಗೆ ಚಿತ್ರ ಕಾರ್ಡ್ ತೋರಿಸಿ. |

DRAFT 2022.22

| | | |
|---|---|---|
| | ***ಚಟುವಟಿಕೆ)*** | 3. ಚಿತ್ರವನ್ನು ಗುರುತಿಸಲು ಮತ್ತು ಅವರು ಅದನ್ನು ಎಲ್ಲಿ ನೋಡಿದ್ದಾರೆ ಅವರಿಗೆ ಸೂಚಿಸಲು ಅವರಿಗೆ ತಿಳಿಸಿ.<br>4. ಅವರ ಆಲೋಚನೆಗಳನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸುವುದು.<br>5. ಪ್ರಶ್ನೆಗಳು:<br>ಚಿತ್ರದಲ್ಲಿ ಏನಿದೆ?<br>ಚಿತ್ರ ಕಾರ್ಡ್ ನಲ್ಲಿರುವ ವಿಷಯವನ್ನು ನೀವು ನೋಡಿದ್ದೀರಾ?<br>ನೀವು ಅದನ್ನು ಎಲ್ಲಿ ನೋಡಿದ್ದೀರಿ?<br>ನೀವು ಯಾವುದೇ ಹಳ್ಳಿಯ ಜಾತ್ರೆಗೆ ಭೇಟಿ ನೀಡಿದ್ದೀರಾ?<br>ಜಾತ್ರೆಯಲ್ಲಿ ಏನು ಮಾಡಿದಿರಿ?<br>ಜಾತ್ರೆಯಲ್ಲಿ ನೀವು ಏನನ್ನು ನೋಡಬಹುದು?<br>ಹಳ್ಳಿಯ ಜಾತ್ರೆಯಲ್ಲಿ ನೀವು ಆಡುವ ಆಟಗಳು ಯಾವುವು? |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಛಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ( ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಪರಿಸರದ ಅರಿವು, ಸೃಜನಾತ್ಮಕ ಚಿಂತನೆ ಮತ್ತು ಸೂಕ್ಷ್ಮ ಸ್ನಾಯು ಚಲನ ಕೌಶಲಗಳ ಬೆಳವಣಿಗೆ**<br>**ಚಟುವಟಿಕೆ...41 ತರಕಾರಿಗಳ ತಿಳಿಯೋಣ (ಗುರಿ 3)**<br>**ಉದ್ದೇಶ:– ವಿವಿಧ ತರಹದ ತರಕಾರಿಗಳನ್ನು ತಿಳಿಯುವುದು.**<br>**ಅಗತ್ಯ ಸಾಮಗ್ರಿಗಳು : ಬಿಳಿಹಾಳೆಗಳು, ಬಣ್ಣಗಳು, ಬೆಂಡೆಕಾಯಿ, ಬಟಾಟಿ ಅಥವಾ ಈರುಳ್ಳಿ**<br>**ವಿಧಾನ : ವಿವಿಧ ತರಕಾರಿಗಳನ್ನು ಮಕ್ಕಳಿಗೆ ತೋರಿಸಿ ಅವುಗಳ ಬಗ್ಗೆ ಕೆಲವು ವಾಕ್ಯಗಳಲ್ಲಿ ಮಾತನಾಡಲು ಪ್ರೋತ್ಸಾಹಿಸುವುದು. ಕಣ್ಣಿಗೆ ಪಟ್ಟಿಕಟ್ಟಿ ಮಕ್ಕಳು ಮುಟ್ಟಿನೋಡುವ ಮೂಲಕ ತರಕಾರಿಗಳನ್ನು ಗುರುತಿಸಿ ಹೆಸರಿಸಲು ಹೇಳುವುದು. ತರಕಾರಿಗಳು ಸಸ್ಯದ ಭಾಗಗಳು ಮತ್ತು ಅವುಗಳನ್ನು ಆಹಾರವಾಗಿ ನಾವು ಮತ್ತು ಕೆಲವು ಪ್ರಾಣಿಗಳು ಸೇವಿಸುತ್ತವೆ ಎಂದು ವಿವರಿಸುವುದು. ತರಕಾರಿಗಳು ಬೇರು, ಕಾಂಡ, ಎಲೆ ಹಾಗೂ ಹೂವಿನ ರೂಪದಲ್ಲಿ ಇರಬಹುದು. ಮಕ್ಕಳು ತರಕಾರಿಗಳನ್ನು ನಿಯಮಿತವಾಗಿ ಹೆಚ್ಚು ಸೇವಿಸಲು ಹೇಳುವುದು. ತರಕಾರಿಗಳಿಂದ ಚಿತ್ರ ರಚಿಸಬಹುದು. ಮೊದಲಿಗೆ ಬೆಂಡೆಕಾಯಿ, ಈರುಳ್ಳಿಗಳನ್ನು ಅರ್ಧ ಕತ್ತರಿಸಿ ಬಣ್ಣಗಳಲ್ಲಿ ಅದ್ದಿ ಬಿಳಿಹಾಳೆಗಳ ಮೇಲೆ ಒತ್ತುವ ಮೂಲಕ ಚಿತ್ರ ರಚಿಸುವುದು.**<br>**2ನೇ ತರಗತಿ**<br>**ಮಕ್ಕಳ ಕಣ್ಣಿಗೆ ಬಟ್ಟೆ ಕಟ್ಟಿ ತರಕಾರಿಗಳನ್ನು ಮುಟ್ಟಿ ನೋಡಿ ಹೆಸರು ಹೇಳಲು ತಿಳಿಸುವುದು.**<br>**3ನೇ ತರಗತಿ**<br>**ಬೇರು, ಗಡ್ಡೆ, ಎಲೆ ಮತ್ತು ಕಾಯಿಗಳ ರೂಪದಲ್ಲಿರುವ ತರಕಾರಿಗಳನ್ನು ಪಟ್ಟಿ ಮಾಡಲು ತಿಳಿಸುವುದು.**<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: I. L. -35 (ತರಗತಿ 1, 2, 3)** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ವಿನ್ಯಾಸಗಳ ರಚನೆ.<br>ಚಟುವಟಿಕೆ; 36 ಸಿ ಎಲೆಗಳು ಮತ್ತು ಹೂಗಳನ್ನು ವಿವಿಧ ವಿನ್ಯಾಸಗಳಲ್ಲಿ ಜೋಡಿಸುವುದು. ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಆಕಾರ ಮತ್ತು ಗಾತ್ರವನ್ನು ಗುರುತಿಸುವುದರ ಜೊತೆಗೆ ವಿವಿಧ ವಿನ್ಯಾಸಗಳನ್ನು ರಚಿಸುತ್ತಾರೆ.<br>• ಗ್ರಹಣಶಕ್ತಿ ಮತ್ತು ಏಕಾಗ್ರತೆಯನ್ನು ಹೆಚ್ಚಿಸಲು ಸಹಾಯವಾಗುತ್ತದೆ.<br>ಸಾಮಗ್ರಿಗಳು : ಹೂಗಳು, ಎಲೆ ಮತ್ತು ದಾರ..<br>ವಿಧಾನ : ಮಕ್ಕಳಿಗೆ ಹೂಗಳು, ಎಲೆಗಳು ಮತ್ತು ದಾರ ನೀಡಿ ವಿವಿಧ ವಿನ್ಯಾಸಗಳಲ್ಲಿ ಹಾರ ಮತ್ತು ತೋರಣಗಳನ್ನು ಮಾಡಲು ಹೇಳುವುದು. ರಚಿಸಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ಮೇಲ್ಕಂಡ ಚಟುವಟಿಕೆಯನ್ನು ಮಾಡಿಸುವುದು |

DRAFT 2022

| | | | |
|---|---|---|---|
| | | | |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ : ಪದ ಸಂಪತ್ತಿನ ಅಭಿವೃದ್ಧಿ, ಊಹಿಸುವುದು, ತಂಡದ ಸದಸ್ಯರೊಂದಿಗೆ ಸಹಕಾರದಿಂದ ಕೆಲಸ. ಸೂಚನೆಗಳ ಪಾಲನೆ.<br>ಚಟುವಟಿಕೆ .6 ವಸ್ತುವನ್ನು ಊಹಿಸು (ಗುರಿ–2) **ECL-7**<br>ಉದ್ದೇಶಗಳು:<br>* ಸೂಕ್ತ ಪದ ರಚಿಸುವುದು.<br>* ಸಾಂಘಿಕ ಮನೋಭಾವನೆ ಬೆಳೆಸುವುದು.<br>* ಸೂಚನೆಗಳನ್ನು ಎಚ್ಚರಿಕೆಯಿಂದ ಆಲಿಸಿ ಅನುಸರಿಸುವುದು.<br>* ಪದ ಸಂಪತ್ತನ್ನು ಅಭಿವೃದ್ಧಿ ಪಡಿಸುವುದು.<br>ಅಗತ್ಯ ಸಾಮಗ್ರಿಗಳು : ಬ್ಯಾಗ್, ಲಭ್ಯ ವಸ್ತುಗಳು<br>ವಿಧಾನ : ತರಗತಿಯಲ್ಲಿರುವ ಸೀಮೆ ಸುಣ್ಣ, ರಬ್ಬರ್, ಡಸ್ಟರ್ , ಡೈಸ್ ಮೊದಲಾದ ವಸ್ತುಗಳನ್ನು ಒಂದು ಚೀಲದಲ್ಲಿ ಹಾಕಿ..<br>– ಮಕ್ಕಳನ್ನು ಒಬ್ಬೊಬ್ಬಗಿ ಕರೆದು ಬ್ಯಾಗ್‌ನಲ್ಲಿರುವ ವಸ್ತುಗಳಲ್ಲಿ ಯಾವುದಾದರೂ ಒಂದು ವಸ್ತುವನ್ನು ಸ್ಪರ್ಶಿಸಿ, ಆ ವಸ್ತುಗಳನ್ನು ಊಹಿಸಲು ಹೇಳುವುದು. ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಕ್ಕಳು ವಸ್ತುವನ್ನು ಸರಿಯಾಗಿ ಗುರುತಿಸಲು ಸಹಾಯ ಮಾಡುವುದು.<br>ಉದಾಹರಣೆಗಾಗಿ:<br>• ನೀನು ಸ್ಪರ್ಶಿಸುತ್ತಿರುವ ವಸ್ತು ದೊಡ್ಡದೋ ಚಿಕ್ಕದೋ ?<br>• ನೀನು ಸ್ಪರ್ಶಿಸುತ್ತಿರುವ ವಸ್ತುವಿನ ಆಕಾರ ಹೇಗಿದೇ?<br>• ಯಾವ್ವದರಿಂದ ಆ ವಸ್ತು ಮಾಡಲ್ಪಟ್ಟಿದೆ?<br>• ನೀನು ಸ್ಪರ್ಶಿಸುತ್ತಿರುವ ವಸ್ತು ಗಟ್ಟಿಯಾಗಿದೆಯೇ? ಮೃದುವಾಗಿದೆಯೇ?<br>• ನೀನು ಸ್ಪರ್ಶಿಸುತ್ತಿರುವ ವಸ್ತು ಏನಿರಬಹುದು?<br>– ಮಕ್ಕಳು ಗುರುತಿಸಿದ ವಸ್ತುಗಳ ಕುರಿತು ಅವರೊಂದಿಗೆ ಚರ್ಚಿಸುವುದು.<br>ತರಗತಿಯ ವಿವರ: 2 ನೇ ತರಗತಿಯ ಮಕ್ಕಳು ತಾವು ಗುರುತಿಸಿದ ವಸ್ತುವಿನ ಬಗ್ಗೆ 3–4 ವಾಕ್ಯಗಳಲ್ಲಿ ಮಾತನಾಡುವುದು. 3 ನೇ ತರಗತಿಯ ಮಕ್ಕಳು 2 ರಿಂದ 3 ನಿಮಿಷ ಆ ವಸ್ತುವಿನ ಬಗ್ಗೆ ಮಾತನಾಡುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಧ್ವನಿ ಸಂಕೇತಗಳನ್ನು ಹೊಂದಿಸುವುದು, ಪದ ಗುರ್ತಿಸುವುದು, ಅಕ್ಷರಗಳನ್ನು ಗುರ್ತಿಸುವುದು, ಪದ ಸಂಪತ್ತಿನ ಅಭಿವೃದ್ಧಿ<br>ಚಟುವಟಿಕೆ 30 : ಅರ್ಥಪೂರ್ಣ ಪದ ರಚಿಸುವುದು (ಗುರಿ–2)<br>ಉದ್ದೆಶ : ಅಕ್ಷರಗಳನ್ನು/ ಧ್ವನಿಗಳನ್ನು ಜೋಡಿಸುವ ಮೂಲಕ ಪದಗಳನ್ನು ರಚಿಸುವರು.<br>ಅಗತ್ಯ ಸಾಮಾಗ್ರಿಗಳು : ಮಕ್ಕಳ ಹೆಸರಿನಲ್ಲಿರುವ ಅಕ್ಷರಗಳ ಮಿಂಚುಪಟ್ಟಿಗಳು.<br>ವಿಧಾನ :* ಮಕ್ಕಳನ್ನು ಇಬ್ಬರಂತೆ ಗುಂಪು ಮಾಡುವುದು.<br>* ಅವರವರ ಹೆಸರಿನ ಅಕ್ಷರಗಳ ಮಿಂಚು ಪಟಿಗಳನ್ನು ಮಕ್ಕಳಿಗೆ ನೀಡುವುದು.<br>* ಅಕ್ಷರಗಳ ಮಿಂಚುಪಟ್ಟಿ ಬಳಸಿ ಅವರ ಹೆಸರನ್ನು ಜೋಡಿಸಲು ಮಾರ್ಗದರ್ಶಿಸುವುದು.<br>* ಇದೇ ಚಟುವಟಿಕೆಯನ್ನು ಪರಿಚಿತ ಹಾಡು/ಕಥೆ/ಪ್ರಾಸಗೀತೆಗಳಲ್ಲಿನ ಪದಗಳೊಂದಿಗೆ ಚಟುವಟಿಕೆಯನ್ನು ಕೈಗೊಳ್ಳುವುದು.<br>2 ಮತ್ತು 3ನೇ ತರಗತಿ : ಪದಗಳ ಮಿಂಚುಪಟ್ಟಿಗಳನ್ನು ತಯಾರಿಸಿಕೊಂಡು ಸರಳ ವಾಕ್ಯಗಳನ್ನು ರಚಿಸುವ ಮೂಲಕ ಚಟುವಟಿಕೆಯನ್ನು ನಿರ್ವಯಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ : ಮಕ್ಕಳೊಂದಿಗೆ ಬರವಣಿಗೆ, ಉದ್ದೇಶಿತ ಬರವಣಿಗೆ, ಅವಧಾನ ಮತ್ತು ಆಲಿಸುವುದು, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ ಸಂಖ್ಯೆ : 32 ಹಂಚಿತ ಬರೆಹ (ಗುರಿ : 2) **ECW-8**<br>ಉದ್ದೇಶಗಳು:<br>• ಹಂಚಿತ ಬರವಣಿಗೆಯನ್ನು ಪರಿಚಯಿಸುವುದು.<br>• ಉದ್ದೇಶಕ್ಕನುಸಾರವಾಗಿ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿಸುವುದು. |

DRAFT 22.02.22

| | |
|---|---|
| | • ಅವಧಾನದೊಂದಿಗೆ ಉದ್ದೇಶಿತ ಬರೆಹದಲ್ಲಿ ತೊಡಗಿಸುವುದು.<br>• ಸೃಜನಾತ್ಮಕವಾಗಿ ಚಿಂತಿಸಿ ಅವುಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವುದು.<br>• ಪದ ಸಂಪತ್ತನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು: ಕಪ್ಪುಹಲಗೆ ಡ್ರಾಯಿಂಗ್ ಶೀಟ್<br>ವಿಧಾನ: ಹಂಚಿತ ಬರೆಹ ಚಟುವಟಿಕೆಗಳನ್ನು ತಿಂಗಳಿಗೆ ಎರಡು ಅಥವಾ ಮೂರು ಬಾರಿ ಆಯೋಜಿಸುವುದು. ಒಂದು ವಿಷಯವನ್ನು ನೀಡಿ ಆ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಕಥೆಯ ಮೂಲಕ ಅಥವಾ ಬರವಣಿಗೆ ಮೂಲಕ ಹಂಚಿಕೊಳ್ಳಲು ತಿಳಿಸುವುದು.<br>ಸಲಹಾತ್ಮಕ ಸೂಚಿತ ವಿಷಯ:– ನಾವು ಸಾಕುವ ಪ್ರಾಣಿಗಳು<br>ಗಮನಿಸಬೇಕಾದ ಅಂಶಗಳು:<br>• ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಾಕ್ಯಗಳನ್ನು ರಚಿಸಲು ಅಗತ್ಯ ಸುಳಿವುಗಳನ್ನು ನೀಡುವುದು. ಮಕ್ಕಳೊಂದಿಗೆ ಬರವಣಿಗೆಯಲ್ಲಿ ತೊಡಗಿಕೊಳ್ಳುವ ಮೂಲಕ ಬರವಣಿಗೆಯ ಪ್ರಾತ್ಯಕ್ಷಿಕೆ ನೀಡುವುದು<br>• ಶಿಕ್ಷಕರು ಮೊದಲನೇ ವಾಕ್ಯವನ್ನು ಬರೆದು ಓದುವುದು. ನಂತರ ಮಕ್ಕಳು ತಮ್ಮ ಸ್ವಂತ ವಾಕ್ಯವನ್ನು ಹೇಳಿ ಬರೆಯಲು ತಿಳಿಸುವುದು.<br>• ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಪ್ರತಿಕ್ರಿಯಿಸಲು ಅವಕಾಶ ಕಲ್ಪಿಸಬಹುದು. ಅಂತಹ ಸನ್ನಿವೇಶದಲ್ಲಿ ಶಿಕ್ಷಕರು ಅದನ್ನು ಶಾಲಾ ಭಾಷೆಯಲ್ಲಿ ಅನುವಾದಿಸಿ ಹೇಳುವುದು.<br>ತರಗತಿವಾರು ವಿವರ: 1ನೇ ತರಗತಿಯವರು ವಿವರಿಸಿದ ಅಂಶಗಳನ್ನು 2ನೇ ಹಾಗೂ 3ನೇ ತರಗತಿಯ ಮಕ್ಕಳು ಬರವಣಿಗೆ ಮೂಲಕ ಅಭಿವ್ಯಕ್ತಿಪಡಿಸಲು ತಿಳಿಸುವುದು. |
| | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. |
| **ಹೊರಾಂಗಣ ಆಟಗಳು** | ಚಟುವಟಿಕೆ – ಸ್ಥಿರ ಸಮತೋಲನ (static balance)<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ದೇಹದ ಬೇರೆ ಬೇರೆ ಭಾಗಗಳ ಸಮತೋಲನ ಸಾಧಿಸುವುದು ..<br>ಬೇಕಾಗುವ ಸಾಮಗ್ರಿ: ಮೃದುವಾದ ಜಾಗ , ಚಾಪೆ ,ಜಮಖಾನ<br>ವಿಧಾನ :<br>• ಈ ಚಟುವಟಿಕೆಯನ್ನು ತರಗತಿ ಕೋಣೆಯೊಳಗೆ/ ಸಭಾಂಗಣದಲ್ಲಿ ಮಾಡಿಸುವುದು.<br>• ಈ ವಾರ ಪರಿಚಯಿಸಿದ ಎಲ್ಲ ಸ್ಥಿರ ಸಮತೋಲನ ವ್ಯಾಯಾಮಗಳನ್ನು ಇಂದು ಮಾಡಲು ಸೂಚಿಸುವುದು .<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೇ ಚಟುವಟಿಕೆಯನ್ನು ಮುಂದುವರಿಸುವುದು .** |
| **ಕಥಾ ಸಮಯ** | **ಶೀರ್ಷಿಕೆ :** ಒಂಟೆ ಮತ್ತು ನರಿ<br>**ಸಾಮಗ್ರಿಗಳು :** ಸಂಭಾಷಣೆಯ ಮಿಂಚುಪಟ್ಟಿಗಳು.<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ಹೆಚ್ಚಿಸುವುದು.<br>➢ ಏಕಾಗ್ರತೆಯನ್ನು ಹೆಚ್ಚಿಸುವುದು.<br>➢ ಅಭಿನಯ ಕೌಶಲ ಹೆಚ್ಚಿಸುವುದು.<br>➢ ಪ್ರಶ್ನಿಸುವ ಮನೋಭಾವ ಉಂಟುಮಾಡುವುದು.<br>➢ ಓದುವ ಹವ್ಯಾಸವನ್ನು ಬೆಳೆಸುವುದು.<br>➢ **ನಾಯಕತ್ವದ ಗುಣಗಳನ್ನು ಬೆಳೆಸುವುದು.**<br>➢ **ಮೌಲ್ಯಗಳನ್ನು ರೂಢಿಸುವುದು.** |

DRAFT 2022

| | | |
|---|---|---|
| | | ವಿಧಾನ :<br><br>**ಪಾತ್ರಾಭಿನಯ**<br><br>➢ ಕಥೆಯನ್ನು ಪುನರಾವಲೋಕನ ಮಾಡಿಕೊಳ್ಳುವುದು.<br>➢ ಕಥೆಯ ನಿರೂಪಣೆಯನ್ನುಮಾಡಲುಎರಡು ಮತ್ತು ಮೂರನೇತರಗತಿಯ ಮಕ್ಕಳಿಗೆ ಸಹಕರಿಸುವುದು.<br>➢ ಮಿಂಚುಪಟ್ಟಿಗಳಲ್ಲಿರುವ ಕಥೆಯ ಪಾತ್ರಗಳ ಸಂಭಾಷಣೆಗಳನ್ನು ಓದಲು ಹಿರಿಯ ಮಕ್ಕಳಿಗೆ ಹೇಳುವುದು.<br>➢ ಅಂತಿಮವಾಗಿ ಶಿಕ್ಷಕರು ಕಥೆಯ ಸಾರಾಂಶವನ್ನಾಗಲಿ ಅಥವಾ ವಿವರಣೆಯನ್ನಾಗಲಿ ನೀಡದೇ ಕೇವಲ ಸಾಹಿತ್ಯವನ್ನು ಓದುವುದು. ಇದನ್ನು ಕೇಳಿಸಿಕೊಂಡ ಮಕ್ಕಳು ಕಥೆಯನ್ನು ಅರ್ಥೈಸಿಕೊಳ್ಳಲು ನಂರ ಹೇಳಲು ಅವಕಾಶ ಒದಗಿಸುವುದು. |
| | ಮತ್ತೆ ಸಿಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ. |

## ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

**ವಾರ–11** **ದಿನ–66 (ಶನಿವಾರ)**

| | | | | | |
|---|---|---|---|---|---|
| | ಪ್ರತಿಬಿಂಬ (ತರಗತಿಯಲ್ಲಿನ ನಿರಂತರ ಮೌಲ್ಯಮಾಪನ) | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. | | | |
| | ನನ್ನ ಸಾಧನೆ | | | | |
| | ಕಲಿಕಾಫಲಗಳು | | ಅಪರೂಪಕ್ಕೆ | ಕೆಲವೊಮ್ಮೆ | ಯಾವಾಗಲೂ |
| | ತರಗತಿಯ ಜವಾಬ್ದಾರಿ ಮತ್ತು ಚಟುವಟಿಕೆ ನಿರ್ವಹಿಸುವಲ್ಲಿ ಸ್ವತಂತ್ರತೆಯನ್ನು ಪ್ರದರ್ಶಿಸುವರು. | | | | |
| | ಯೋಗ ವ್ಯಾಯಾಮಗಳು ಮತ್ತು ನೃತ್ಯದಲ್ಲಿ ಚುರುಕುತನವನ್ನು ತೋರಿಸುವರು. | | | | |
| | ವಿವಿಧ ವಸ್ತುಗಳೊಂದಿಗೆ ಒತ್ತುಚಿತ್ರ ಮಾಡುವರು. | | | | |
| | ಧ್ವನಿ–ಸಂಕೇತದ ಸಹಸಂಬಂಧ ಗುರುತಿಸುವರು. | | | | |
| | ಪದಗಳನ್ನು ಓದುವ ಪ್ರಯತ್ನ ಮಾಡುವರು. | | | | |
| | ಓದುವ ಸಂಪ್ರದಾಯವನ್ನು ಗುರುತಿಸುವರು. | | | | |
| | ಓದುವ ಮತ್ತು ಬರೆಯುವ ಸಾಮಾನ್ಯ ನಿಯಮಗಳನ್ನು ಗುರುತಿಸುವರು. | | | | |
| | ಒಂದಕ್ಕಿಂತ ಹೆಚ್ಚು ಗುಣಲಕ್ಷಣಗಳನ್ನು ಆಧರಿಸಿ ವಸ್ತುಗಳನ್ನು ವಿಂಗಡಿಸುವರು.(ಆಕಾರ/ಬಣ್ಣ/ಗಾತ್ರ) | | | | |
| | ವಸ್ತುಗಳನ್ನು ಕ್ರಮವಾಗಿ ಜೋಡಿಸುವರು.(ಗಾತ್ರ, ಉದ್ದ, ಎತ್ತರ) | | | | |
| | ಇತರರ ಭಾವನೆಗಳು, ಅಗತ್ಯತೆಗಳಿಗೆ ಸಂವೇದನೆ ತೋರುವರು. ವಿಶೇಷವಾಗಿ ವಿಶೇಷ ಚೇತನ ಮಕ್ಕಳಿಗೆ. | | | | |

DRAFT 2022

| | | | | |
|---|---|---|---|---|
| | ತನ್ನ ಸ್ವಂತ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಭ್ರಾತೃತ್ವ ಮತ್ತು ತಂಡ ಸ್ಫೂರ್ತಿಯನ್ನು ಪ್ರದರ್ಶಿಸುವರು. | | | |
| | ಅನೇಕ ಸೂಚನೆಗಳನ್ನು ಅನುಸರಿಸುವರು. | | | |
| | ಆಟಗಳು, ನೃತ್ಯ ಮತ್ತು ಯೋಗ ಚಟುವಟಿಕೆಗಳಲ್ಲಿ ಭಾಗವಹಿಸುವರು. | | | |
| | ಚೆಂಡನ್ನು ಗುರಿಯ ಕಡೆಗೆ ಒದೆಯುವರು. | | | |
| | ಬ್ಯಾರಲ್/ಟೈರ್‌ಗಳನ್ನು ತಳ್ಳುವರು. | | | |

DRAFT 22.02.22

# ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

**ವಾರ–12** **ದಿನ–67 (ಸೋಮವಾರ)**

| ದಿನ ಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 67 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ* | ಸಂಪೂರ್ಣ ವಿದ್ಯಾಪ್ರವೇಶ ಕಾರ್ಯಕ್ರಮದಲ್ಲಿ ಮಕ್ಕಳು ಹೆಚ್ಚು ಆನಂದಿಸಿದ ಚಟುವಟಿಕೆ ಯಾವುದು ಎಂದು ಮಕ್ಕಳಿಂದ ಕೇಳಿ ತಿಳಿದು ಆ ಚಟುವಟಿಕೆಯ ಮೂಲಕ ಮಕ್ಕಳನ್ನು ತರಗತಿಗೆ ಸ್ವಾಗತಿಸುವುದು. |
| | ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | *ಚಟುವಟಿಕೆ: ಸಂಕೇತಗಳನ್ನು ತಿಳಿಯೋಣ*<br>*ಸಾಮಗ್ರಿಗಳು: ಟ್ರಾಫಿಕ್ ಸಿಗ್ನಲ್ ಚಿತ್ರಗಳು*<br>**Red says stop**<br>**Green says go**<br>**Yellow says wait**<br>**Even if your are late**<br>*ವಿಧಾನ:*<br>*ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ.*<br>*ಈ ಕೆಳಗಿನ ಪ್ರಾಸವನ್ನು ಹಾಡಿಸಿ.*<br>*ನಂತರ ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ ಮತ್ತು ಅವರನ್ನು ಚರ್ಚೆಯಲ್ಲಿ ತೊಡಗಿಸಿ ಮತ್ತು ಟ್ರಾಫಿಕ್ ಸಿಗ್ನಲ್ ಗಳ ಕುರಿತು ಪ್ರಶ್ನೆಗಳನ್ನು ಕೇಳಿ ಉತ್ತರಿಸಲು ಅವರನ್ನು ಪ್ರೋತ್ಸಾಹಿಸಿ.* |
| | ನನ್ನ ಸಮಯ(Free Indore play) | ಮಕ್ಕಳು ತಾವು ನಿರ್ವಹಿಸಲಿಚ್ಛಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿದೇ ್ಶಿತ) ಚಟುವಟಿಕೆ) | ಸಾಮರ್ಥ್ಯ: ಪರಿಸರದ ಅರಿವು–ಪ್ರಕೃತಿ<br>ಚಟುವಟಿಕೆ...43 ಪ್ರಾಣಿಗಳ ಬಗ್ಗೆ ಮಾತಾಡೋಣ (ಗುರಿ 3)<br>ಉದ್ದೇಶ:– ಪ್ರಾಣಿಗಳ ಮಹತ್ವ ತಿಳಿಯುವುದು.<br>ಅಗತ್ಯ ಸಾಮಗ್ರಿಗಳು : ವಿವಿಧ ಪ್ರಾಣಿಗಳ ಪೇಪರ್ ಮುಖವಾಡಗಳು<br>ವಿಧಾನ : ಮಕ್ಕಳು ತಮ್ಮ ಸುತ್ತಮುತ್ತ ಕಾಣುವ ಪ್ರಾಣಿಗಳ ಬಗ್ಗೆ ಮಾತಾಡಲು ಹೇಳುವುದು. ಹಾಲನ್ನು ಎಲ್ಲಿಂದ ಪಡೆಯುತ್ತೇವೆ ಎಂಬ ಪ್ರಶ್ನೆ ಕೇಳುವುದು, ಬೆಚ್ಚಗಿನ ಬಟ್ಟೆಗಳನ್ನು ತಯಾರಿಸಲು ನಾವು ಉಣ್ಣೆಯನ್ನು ಎಲ್ಲಿಂದ ಪಡೆಯುತ್ತೇವೆ? ಉಳುಮೆಗೆ ಬಳಸುವ ಪ್ರಾಣಿಗಳಾವುವು? ಈ ರೀತಿ ಪ್ರಶ್ನೆ ಕೇಳುವುದರ ಮೂಲಕ ನಮಗೆ ಉಪಯುಕ್ತ ಸಾಕುಪ್ರಾಣಿಗಳ ಬಗ್ಗೆ ಮಾತಾಡಲು ಪ್ರೋತ್ಸಾಹಿಸುವುದು. ಪ್ರಾಣಿಗಳು ನಮ್ಮೊಂದಿಗೆ ಪರಿಸರವನ್ನು ಹಂಚಿಕೊಂಡಿವೆ ಮತ್ತು ಅವುಗಳ ಬಗ್ಗೆ ಕಾಳಜಿ ವಹಿಸಬೇಕೆಂದು ಚರ್ಚಿಸುವುದು. ನಾವು ಪ್ರಾಣಿಗಳಿಗೆ ದಯೆ ತೋರಬೇಕು ಮತ್ತು ಸಾಧ್ಯವಾದಾಗಲೆಲ್ಲ ಅವುಗಳಿಗೆ ಆಹಾರ ನೀಡಲು ಸೂಚಿಸುವುದು.<br>2ನೇ ತರಗತಿ<br>ನಿಮ್ಮ ಮನೆಯಲ್ಲಿ ಸಾಕಿರುವ ಪ್ರಾಣಿಗಳ ಹೆಸರನ್ನು ಹೇಳು.<br>3ನೇ ತರಗತಿ<br>ನೀವು ನೋಡಿರುವ ಯಾವುದಾದರೂ ಒಂದು ಪ್ರಾಣಿಯ ಕುರಿತು ಮಾತನಾಡು. |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ವಿನ್ಯಾಸಗಳ ರಚನೆ.<br>ಚಟುವಟಿಕೆ; 38 ಬಟ್ಟಲು ಮತ್ತು ಕಾಗದದ ಲೋಟಗಳಿಂದ ಕಟ್ಟಡ. ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ. |

DRAFT 2022

| | | | |
|---|---|---|---|
| | | | • ಆಕಾರ ಮತ್ತು ಗಾತ್ರವನ್ನು ಗುರುತಿಸುವುದರ ಜೊತೆಗೆ ವಿವಿಧ ವಿನ್ಯಾಸಗಳನ್ನು ರಚಿಸುತ್ತಾರೆ.<br>• ಗ್ರಹಣಶಕ್ತಿ ಮತ್ತು ಏಕಾಗ್ರತೆಯನ್ನು ಹೆಚ್ಚಿಸಲು ಸಹಾಯವಾಗುತ್ತದೆ.<br><br>ಸಾಮಗ್ರಿಗಳು : ಬಟ್ಟಲುಗಳು, ಕಟ್ಟಿಗೆಯ ಬ್ಲಾಕ್ಸಗಳು ಅಥವಾ ಪೇಪರ್ ಕಪ್‌ಗಳು.<br><br>ವಿಧಾನ : 3–4 ಮಕ್ಕಳನ್ನು ಒಂದು ಗುಂಪಿನಲ್ಲಿ ಕೂರಿಸುವುದು. ಅವರಿಗೆ ಬಟ್ಟಲುಗಳು ಅಥವಾ ಪೇಪರ್ ಕಪ್‌ಗಳನ್ನು ನೀಡುವುದು. ಸುಗಮಕಾರರು ಮಾದರಿಯಾಗಿ ಸೇತುವೆ, ಕಟ್ಟಡವನ್ನು ಮಾಡಿ ತೋರಿಸುವುದು, ಅದರಂತೆ ಮಕ್ಕಳಿಗೆ ಮಾಡಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿಗೆ ಮೇಲ್ಕಂಡ ಚಟುವಟಿಕೆಯನ್ನು ಮಾಡಿಸುವುದು |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** | **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಧ್ವನಿ ಸಂಕೇತಗಳ ಸಂಯೋಜನೆ, ಅವಧಾನ ಮತ್ತು ಆಲಿಸುವುದು.**<br>**ಚಟುವಟಿಕೆ 29 : ಮಧ್ಯದ ಅಕ್ಷರ ಗುರ್ತಿಸು (ಅ ರ ಸ) (ಗುರಿ–2) ECL-21**<br>**ಉದ್ದೇಶ :**<br>*** ಪದಗಳಲ್ಲಿಯ ಅಕ್ಷರಗಳ ಅಕ್ಷರ–ಧ್ವನಿ ಸಹ ಸಂಬಂಧ ಗುರುತಿಸುವುದು.**<br>*** ಗಮನವಿಟ್ಟು ಆಲಿಸಿ ಅಕ್ಷರ–ಧ್ವನಿ ಸಹ ಸಂಬಂಧ ಅರ್ಥೈಸಿಕೊಳ್ಳುವುದು.**<br>**ಅಗತ್ಯ ಸಾಮಗ್ರಿಗಳು : ಕಪ್ಪು ಹಲಗೆ, ಮಿಂಚುಪಟ್ಟಿ**<br>**ವಿಧಾನ: ಮಿಂಚುಪಟ್ಟಿಯಲ್ಲಿ ಬರೆದ ಪದಗಳನ್ನು ಪ್ರದರ್ಶಿಸುವುದು. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ, ಸ್ವರಾಕ್ಷರಗಳನ್ನು ಪರಿಚಯಿಸುವುದು. ಪದದ ಮಧ್ಯದಲ್ಲಿರುವ ಅಕ್ಷರವನ್ನು ಗುರುತಿಸಲು ತಿಳಿಸುವುದು. ಕಪ್ಪುಹಲಗೆಯಲ್ಲಿ ಬರೆಯುವುದು. ಮ ಹೇಳಿಸುವುದು. ಅಕ್ಷರ ಮತ್ತು ಶಬ್ದಗಳನ್ನು ಸಂಯೋಜಿಸುವುದು ಮತ್ತು ಗುರ್ತಿಸುವುದು.**<br>**ತರಗತಿವಾರು ವಿವರ: 2 ನೇ ತರಗತಿಯ ಮಕ್ಕಳು ಗುರುತಿಸಿದ ಅಕ್ಷರ ಮಧ್ಯದಲ್ಲಿ ಬರುವಂತೆ ವಿವಿಧ ಪದಗಳನ್ನು ಗುರುತಿಸುವುದು. 3 ನೇ ತರಗತಿಯ ಮಕ್ಕಳು ತಾವೇ ವಿವಿಧ ಪದಗಳಲ್ಲಿ ಮಧ್ಯದ ಅಕ್ಷರ ಗುರುತಿಸುವ ಚಟುವಟಿಕೆ ರೂಪಿಸುವುದು.**<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC-18 (ತರಗತಿ 1, 2, 3)** |
| | | **ಅರ್ಥಗ್ರಹಿಕೆಯೊಂದಿಗಿನ ಓದು** | **ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.**<br>**ಚಟುವಟಿಕೆ....18**<br>• **ಚಿತ್ರ ಸಂಪುಟ (ಗುರಿ–2) ವಿಷಯ: 'ನೆಲದ ಮೇಲೆ ನೋಡಿರುವ ಪ್ರಾಣಿಗಳು/ಪಕ್ಷಿಗಳು/ವಸ್ತುಗಳು'**<br>ಉದ್ದೇಶ:<br>• **ಮಕ್ಕಳು ಚಿತ್ರ ಓದುವುದು ಮತ್ತು ಚರ್ಚಿಸಿ ಅರ್ಥ ಮಾಡಿಕೊಳ್ಳುವುದು ಮತ್ತು ವೈಯಕ್ತಿಕ ಚಿತ್ರ ಸಂಪುಟಗಳನ್ನು ರಚಿಸುವರು.**<br>• **ಅನುಭವ ಮತ್ತು ಪೂರ್ವಜ್ಞಾನದ ಆಧಾರದ ಮೇಲೆ ಊಹಿಸುವುದು.**<br>**ಅಗತ್ಯ ಸಾಮಗ್ರಿಗಳು : ನೆಲದ ಮೇಲೆ ನೋಡಿರುವ ಪ್ರಾಣಿಗಳು/ಪಕ್ಷಿಗಳು/ವಸ್ತುಗಳಿಗೆ ಸಂಬಂಧಿಸಿದ ರಚಿಸಿದ ಚಿತ್ರಗಳು**<br>**ವಿಧಾನ : . ಹಿಂದೆ ರಚಿಸಿದ ಚಿತ್ರಗಳನ್ನು ಬಳಸಿ ಮಾತನಾಡಲು ಅವಕಾಶ ಕಲ್ಪಿಸುವುದು**<br>**ವೈಯಕ್ತಿಕ ಚಿತ್ರ ಸಂಪುಟ.–ಮಕ್ಕಳು ರಚಿಸಿದ ಚಿತ್ರಗಳನ್ನು ತಮ್ಮ ಕೃತಿ ಸಂಪುಟದಲ್ಲಿ ಸಂಗ್ರಹಿಸಲು ತಿಳಿಸುವುದು ಮತ್ತು ಅವುಗಳನ್ನು ಮುಂದಿನ 71 ನೇ ದಿನದಲ್ಲಿ ಚರ್ಚಿಸುವುದಾಗಿ ತಿಳಿಸುವುದು.**<br>**ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಪರಸ್ಪರ ಸಹಾಯ ಒದಗಿಸಲು** |

DRAFT 22.02.22

<table>
<tr><td></td><td></td><td></td><td>ಸೂಚಿಸುವುದು ಮತ್ತು ವಿಷಯದ ವಿಸ್ತಾರವನ್ನು ಚರ್ಚಿಸುವಾಗ ಎಲ್ಲಾ ಮಕ್ಕಳೂ ಅಭಿವ್ಯಕ್ತಿಸುವುದನ್ನು ಖಾತ್ರಿಪಡಿಕೊಳ್ಳುವುದು. ಜೊತೆಗೆ 2ನೇ ಮತ್ತು 3ನೇ ತರಗತಿಯ ಮಕ್ಕಳಿಗೂ ಸ್ವತಂತ್ರವಾಗಿ ಚಿತ್ರಬರೆಯಲು ಮತ್ತು ಬಣ್ಣಹಾಕಲು ಅವಕಾಶ ನೀಡಿ ಅವರೂ ಸಹ ತಮ್ಮ ಕೃತಿಸಂಪುಟಗಳಲ್ಲಿ ಸಂಗ್ರಹಿಸಲು ಅವಕಾಶ ನೀಡುವುದು.<br>(ಸದರಿ ಚಟುವಟಿಕೆಯ ಮುಂದುವರೆದ ಭಾಗವು 71 ನೇ ದಿನದಲ್ಲಿ ಮುಂದುವರೆಯುವುದು)</td></tr>
<tr><td></td><td></td><td>ಉದ್ದೇಶಿತ ಬರಹ</td><td>ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ, ಆಲಿಸಿ ಅರ್ಥ ಮಾಡಿಕೊಳ್ಳುವುದು, ಪರಿಸರದ ಅರಿವು.<br>ಚಟುವಟಿಕೆ: ಪಟ್ಟಿ ಮಾಡೋಣ, 33 (ಗುರಿ–2) ECW-10<br>ಉದ್ದೇಶಗಳು:<br>• ಉದ್ದೇಶಕ್ಕನುಸಾರವಾಗಿ ಬರವಣಿಗೆ ಮಾಡಲು ಅವಕಾಶ ನೀಡುವುದು.<br>• ಸೃಜನಶೀಲ ಚಿಂತನೆಯನ್ನು ಬೆಳೆಸುವುದು.<br>• ಪರಿಸರದ ಅರಿವು ಮೂಡಿಸುವುದು.<br>• ಪದಸಂಪತ್ತನ್ನು ಹೆಚ್ಚಿಸುವುದು.<br>• ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು: ನೋಟ್ ಪುಸ್ತಕ, ಕಾಗದ, ಕ್ರೆಯಾನ್ಸ್,<br>ವಿಧಾನ : ಮಕ್ಕಳ ಪದಸಂಪತ್ತನ್ನು ಹೆಚ್ಚಿಸಲು ಹಾಗೂ ಉದ್ದೇಶಿತ ಬರವಣಿಗೆಗೆ ಅವಕಾಶ ಕಲ್ಪಿಸಲು, ವಿವಿಧ ವಿಷಯಗಳಿಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಲು ತಿಳಿಸಿ.<br>ಸೂಚಿತ ವಿಷಯಗಳು:<br>• ನಾವು ನೋಡಿದ ವಸ್ತುಗಳು<br>• ಮಾರುಕಟ್ಟೆಯಲ್ಲಿ ಖರೀದಿಸುವ ವಸ್ತುಗಳು<br>• ಬಣ್ಣಗಳ ಹೆಸರುಗಳು<br>• ನಗರ/ ಹಳ್ಳಿಯಲ್ಲಿ ಕಂಡುಬರುವ ಪ್ರಾಣಿಗಳು, ಪಕ್ಷಿಗಳು ಇತ್ಯಾದಿ<br>ಇಡೀ ತರಗತಿಯನ್ನು ಒಳಗೊಂಡಂತೆ ಒಂದು ಚಾರ್ಟ್‌ಪೇಪರ್‌ನಲ್ಲಿ ಪಟ್ಟಿ ಮಾಡುವ ಚಟುವಟಿಕೆಯನ್ನು ಆಯೋಜಿಸಬಹುದು. ಈ ಚಾರ್ಟ್‌ನಲ್ಲಿ ಬಳಸಬಹುದಾದ ಸಾಮಾನ್ಯ ಪದಗಳ ಪಟ್ಟಿಯನ್ನು ಶಿಕ್ಷಕರೇ ಸಿದ್ಧಪಡಿಸಿ, ಮಕ್ಕಳು ಇವುಗಳನ್ನು ನೋಡಲು ಹಾಗೂ ಓದಲು ಸಹಾಯಕವಾಗುವಂತೆ ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು. ಹೆಚ್ಚುವರಿಯಾಗಿ ಬಣ್ಣಗಳ ಪಟ್ಟಿ, ಮಕ್ಕಳ ಹೆಸರುಗಳ ಪಟ್ಟಿ, ಪಕ್ಷಿಗಳ ಪಟ್ಟಿ ಇತ್ಯಾದಿ ಪಟ್ಟಿಗಳನ್ನು ತಯಾರಿಸಬಹುದು.<br>ತರಗತಿವಾರು ವಿವರ: 1ನೇ ತರಗತಿಯವರು ತಯಾರಿಸಿರುವ ಪಟ್ಟಿಗೆ 2ನೇ ತರಗತಿಯ ಮಕ್ಕಳು ಹೆಚ್ಚುವರಿಯಾಗಿ ಪದಗಳನ್ನು ಸೇರಿಸಲಿ. 3ನೇ ತರಗತಿಯವರು ಪಟ್ಟಿಯಲ್ಲಿರುವ ಪದಗಳಿಗೆ ಸ್ವಂತ ವಾಕ್ಯಗಳನ್ನು ರಚಿಸಲು ಅವಕಾಶ ಮಾಡಿಕೊಡಿ.</td></tr>
<tr><td></td><td></td><td colspan="2">ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.</td></tr>
<tr><td></td><td>ಹೊರಾಂಗಣ ಆಟಗಳು</td><td colspan="2">ಚಟುವಟಿಕೆ –43 ಹುಲಿ ಮತ್ತು ಹಸು<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ,<br>ಬೇಕಾಗುವ ಸಾಮಗ್ರಿ: ಹಸು ಹುಲಿ ಮುಖವಾಡ<br>ವಿಧಾನ:<br>• ಮಕ್ಕಳನ್ನು ಆಟದ ಮೈದಾನಕ್ಕೆ ಕರೆದುಕೊಂಡು ಹೋಗುವುದು.<br>• ಒಂದು ವೃತ್ತದಲ್ಲಿ ಮಕ್ಕಳನ್ನು ನಿಲ್ಲಲು ಸೂಚಿಸುವುದು.<br>• ಒಂದು ಮಗುವಿಗೆ ಹಸುವಿನ ಮುಖವಾಡ ಹಾಗು ಮತ್ತೊಂದು ಮಗುವಿಗೆ ಹುಲಿಯ ಮುಖವಾಡ ವನ್ನು ನೀಡುವುದು.</td></tr>
</table>

DRAFT 22.02.22

| | | |
|---|---|---|
| | | • ಉಳಿದ ಮಕ್ಕಳು ವೃತಾಕಾರದಲ್ಲಿ ಕೈ ಕೈ ಜೋಡಿಸಿ ನಿಲ್ಲಲು ಸೂಚಿಸುವುದು .<br>• ಹಸುವಿನ ಮುಖವಾಡ ಧರಿಸಿದ ಮಗು ವೃತ್ತದಲ್ಲಿ ನಿಲ್ಲುತ್ತದೆ ಮತ್ತು ಹುಲಿ ಮುಖವಾಡ ಧರಿಸಿದ ಮಗು ವೃತ್ತದ ಹೊರಗೆ ಇರಬೇಕು ಎಂದು ಸೂಚಿಸುವುದು. ಹುಲಿ ಮುಖವಾಡವನ್ನು ಧರಿಸಿರುವ ಮಗು ಹಸುವಿನ ಮುಖವಾಡವನ್ನು ಧರಿಸಿರುವ ಮಗುವನ್ನು ಹಿಡಿಯಲು ಪ್ರಯತ್ನಿಸುತ್ತದೆ;<br>• ವೃತ್ತದಲ್ಲಿ ನಿಂತಿರುವ ಮಕ್ಕಳು ಹಸುವನ್ನು ರಕ್ಷಿಸಲು ಸೂಚಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರಿಸುವುದು** . |
| | ಕಥಾ ಸಮಯ | **ಶೀರ್ಷಿಕೆ : ಟೋ ಟೋ & ದ ಕ್ಯಾಪ್**<br>**ಸಾಮಗ್ರಿಗಳು : ಚಿತ್ರಗಳು, ಆಟಿಕೆಗಳು**<br>**ಉದ್ದೇಶ :**<br>➢ ಆಸಕ್ತಿಯನ್ನು ಮೂಡಿಸುವುದು.<br>➢ ಸೃಜನಶೀಲತೆಯನ್ನು ಹೆಚ್ಚಿಸುವುದು.<br>**ವಿಧಾನ :**<br>• **ಶಿಕ್ಷಕರು ಸಾಹಿತ್ಯವನ್ನು ಆಧರಿಸಿ, ಆಟಿಕೆಗಳನ್ನು ಪ್ರದರ್ಶಿಸಿ, ಮಾತೃಭಾಷೆಯಲ್ಲಿ ಕಥೆಯನ್ನು ಹೇಳುವುದು.**<br>• **ಚಿತ್ರಗಳು/ಆಟಿಕೆಗಳನ್ನು ಪ್ರದರ್ಶಿಸಿ ಕಥೆಯಲ್ಲಿನ ಮಾತೃಭಾಷೆಯಲ್ಲಿ ಸಂಭಾಷಣೆಯನ್ನು ಹೇಳುವುದು.**<br>• **ಕಥೆಯ ನಡುವೆ ಮುಖ್ಯ ಪದಗಳನ್ನು ಇಂಗ್ಲೀಷಿನಲ್ಲಿ ಹೇಳುವುದು.**<br>**ಕಥೆ : TOTO AND THE CAP**<br>This is Toto, the baby cat. He lives with Papa cat and Mama Cat. Papa cat has a cap. Mama cat has a cap. Toto also wanted a cap. Papa cat said “baby cats do not wear caps”. One day, Papa cat was going out. He hid the cap in a pot. He put the pot on the cot and went out. Toto cat got on to the cot, put his hand in the pot and pulled out the cap. Toto cat put the cap on his head. He was very happy.<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | ಮತ್ತೆ ಒಗ್ಗೋಣ | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>**ಗಮನಿಸಿ :**<br>✓ ಕಲಿಕಾ ಫಲಗಳನ್ನು ಪರಿಶೀಲಿಸಿ, ಪೋಷಕರಿಗೆ ವರದಿ ಮಾಡಲು ದಾಖಲೆಗಳನ್ನು ಸಿದ್ಧಪಡಿಸಿ.<br>✓ ನಿಮ್ಮ ಮಕ್ಕಳು ಒಂದನೇ ತರಗತಿಯ ಚಟುವಟಿಕೆಗಳನ್ನು ಕಲಿಯಲು ಸಿದ್ಧರಿದ್ದಾರೆ ಎನ್ನುವುದನ್ನು ಮನದಟ್ಟುಮಾಡಿ.<br>✓ ಒಂದನೇ ತರಗತಿಯ ಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಇದೇ ಮಾದರಿಯಲ್ಲಿ ನಿರ್ವಹಿಸಲು ಸಿದ್ಧರಾಗಿ ಮತ್ತು ಪೋಷಕರೊಂದಿಗೆ ಮಾತನಾಡಿ, ಅವರನ್ನೂ ಇವುಗಳಲ್ಲಿ ತೊಡಗಿಸಿ ಕೊಳ್ಳಲು ಪೂರ್ವ ಸಿದ್ಧತೆ ಮಾಡಿಕೊಳ್ಳಿ. |

# ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

**ವಾರ–12** **ದಿನ–68 (ಮಂಗಳವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 68 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | ಸಂಪೂರ್ಣ ವಿದ್ಯಾಪ್ರವೇಶ ಕಾರ್ಯಕ್ರಮದಲಿಮಕ್ಕಳು ಹೆಚ್ಚು ಆನಂದಿಸಿದ ಚಟುವಟಿಕೆ ಯಾವುದು ಎಂದು ಮಕ್ಕಳಿಂದ ಕೇಳಿ ತಿಳಿದು ಆ ಚಟುವಟಿಕೆಯ ಮೂಲಕ ಮಕ್ಕಳನ್ನು ತರಗತಿಗೆ ಸ್ವಾಗತಿಸುವುದು. |
| | **ಮಾತು ಕತೆ** | **ದಿನ 67 ರ ಚಟುವಟಿಕೆ: ಇಂಗ್ಲೀಷ್ ಪ್ರಾಸ ಪದ್ಯವನ್ನು ಹಾಡಿಸಿ.** |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಛಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ (ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ: ಪರಿಸರದ ಅರಿವು–ಪ್ರಕೃತಿ**<br>**ಚಟುವಟಿಕೆ...43 ಸಿ ಪ್ರಾಣಿಗಳ ಬಗ್ಗೆ ಫಜಲ್ (ಗುರಿ 3)**<br>**ಉದ್ದೇಶ:– ಪ್ರಾಣಿಗಳ ದೇಹದ ಭಾಗಗಳನ್ನು ಅನುಕ್ರಮವಾಗಿ ಜೋಡಿಸುವುದು.**<br>**ಅಗತ್ಯ ಸಾಮಗ್ರಿಗಳು :ಪ್ರಾಣಿಗಳ ದೇಹದ ಭಾಗಗಳ ಚಿತ್ರಗಳು (ಉದಾ:ಆನೆ, ಒಂಟೆ, ಸಿಂಹ, ಮೊಸಳೆ ಇತ್ಯಾದಿ )**<br>**ವಿಧಾನ : ಮಕ್ಕಳಿಗೆ ಪ್ರಾಣಿಗಳ ದೇಹದ ಭಾಗಗಳ ಚಿತ್ರಗಳನ್ನು ನೀಡಿ ಅನುಕ್ರಮವಾಗಿ ಜೋಡಿಸಲು ಹೇಳುವುದು.**<br>**2ನೇ ತರಗತಿ**<br>**ನೀವು ನೋಡಿರುವ ಯಾವುದಾದರೂ ಒಂದು ಸಾಕು ಪ್ರಾಣಿಯ ದೇಹದ ಭಾಗಗಳನ್ನು ಹೆಸರಿಸು.**<br>**3ನೇ ತರಗತಿ**<br>**ನಿಮಗಿಷ್ಟವಾದ ಸಾಕು ಪ್ರಾಣಿ ಅಥವಾ ಕಾಡುಪ್ರಾಣಿಯ ಚಿತ್ರ ಬಿಡಿಸಿ ಬಣ್ಣ ಹಚ್ಚು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಎ..**ಸೀತಾಫಲ, ತಾರಾನಾಥದ ಮೇಲೆ ತಿದ್ದುವುದು.** ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ..<br>ಸಾಮಗ್ರಿಗಳು : ..**ಸೀತಾಫಲ, ತಾರಾನಾಥ**<br>ವಿಧಾನ.; ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು. ಒಂದು ಮಗುವಿನ ಕೈಯಲ್ಲಿ ತಾರಾನಾಥವನ್ನು ಕೊಡುವುದು.ಆ ಮಗು ಅದರ ಮೇಲೆ ಬೆರಳಾಡಿಸಿದ ನಂತರ ಪಕ್ಕದಲ್ಲಿ ಕುಳಿತ ಮಗುವಿಗೆ ನೀಡುವುದು. ಇದೇ ರೀತಿ ಒಬ್ಬರಿಂದ ಒಬ್ಬರಿಗೆ ಕೊಡುತ್ತಾ ಎಲ್ಲಾ ಮಕ್ಕಳೂ ತಾರಾನಾಥ ಮತ್ತು ಸೀತಾಫಲದ ಮೇಲೆ ಬೆರಳಾಡಿಸಲು ಅವಕಾಶ ನೀಡುವುದು.<br>ವಿವರ; 2ಮತ್ತು 3 ನೇ ತರಗತಿಗೆ ಇದೇ ಚಟುವಟಿಕೆಯನ್ನು ಮಾಡಲು ಹೇಳುವುದು. |
| | **ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ** — **ಆಲಿಸುವುದು ಮತ್ತು ಮಾತನಾಡುವುದು** | **ಸಾಮರ್ಥ್ಯ: ಧ್ವನಿ ವಿಜ್ಞಾನದ ಅರಿವು, ಪದ ಸಂಪತ್ತಿನ ಅಭಿವೃದ್ಧಿ, ಚಾಲನಾ ಕೌಶಲಗಳ ಅಭಿವೃದ್ಧಿ.**<br>**ಚಟುವಟಿಕೆ: 15 ಪ್ರಾಸ ಪದಗಳನ್ನು ಆಲಿಸುವುದು (ಗುರಿ–02) ECL-4 ( 44 ನೇ ದಿನದಿಂದ ಮುಂದುವರೆದಿದೆ)**<br>**ಉದ್ದೇಶಗಳು:**<br>* **ಧ್ವನಿ ವಿಜ್ಞಾನದ ಅರಿವನ್ನು ಹೊಂದುವಂತೆ ಮಾಡುವುದು.**<br>* **ಪ್ರಾಸಪದಗಳ ಮೂಲಕ ಪದಸಂಪತ್ತನ್ನು ಹೆಚ್ಚಿಸುವುದು.**<br>* **ಸ್ಥೂಲ ಹಾಗೂ ಸೂಕ್ಷ್ಮ ಚಾಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.**<br>**ಅಗತ್ಯ ಸಾಮಗ್ರಿಗಳು:– ಕರಿ ಹಲಗೆ, ಸೀಮೆ ಸುಣ್ಣ**<br>**ವಿಧಾನ:** |

DRAFT 22.02.22

| | | | |
|---|---|---|---|
| | | | * ಪ್ರಾಸ ಪ್ರಾಸಪದಗಳ ವಿವಿಧ ಗುಂಪುಗಳನ್ನು. ಸಿದ್ಧಪಡಿಸಿಕೊಳ್ಳುವುದು.<br>* ಮಕ್ಕಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೆ ಒಂದೊಂದು ಪ್ರಾಸ ಪದಗಳ ಗುಂಪನ್ನು ನೀಡುವುದು.<br>* ಪ್ರಾಸ ಪದಗಳನ್ನು ಒಳಗೊಂಡಂತೆ ಶಿಕ್ಷಕರ ಸಹಾಯದಿಂದ ವಿವಿಧ ವಾಕ್ಯಗಳನ್ನು ರಚಿಸುವುದು.<br>* ಪ್ರಾಸ ಪದಗಳ ಗುಂಪಿನ ಪದಗಳನ್ನು ಬಳಸಿ ಸರಳ ಪ್ರಾಸ ಗೀತೆಯನ್ನು ಶಿಕ್ಷಕರ ಸಹಾಯದಿಂದ ರಚಿಸುವುದು.<br>* ಸ್ವತಂತ್ರವಾಗಿ ಸರಳ ಪ್ರಾಸಗೀತೆಯನ್ನು ರಚಿಸುವುದು.<br>ತರಗತಿವಾರು ವಿವರ: 2 ನೇ ತರಗತಿ ಮಕ್ಕಳು ಸ್ವತಂತ್ರವಾಗಿ ಸರಳ ಪ್ರಾಸಗೀತೆ ರಚಿಸುವುದು.. 3 ನೇ ತರಗತಿ ಮಕ್ಕಳು ಸ್ವತಂತ್ರವಾಗಿ ಸರಳ ಪ್ರಾಸಗೀತೆ ರಚಿಸುವುದು.. (68 ನೇ ದಿನಕ್ಕೆ ಮುಂದುವರೆದಿದೆ) |
| | | ಅರ್ಥಗ್ರಹಿಕೆಂ ಯೊಂದಿಗಿನ ಓದು | ಸಾಮರ್ಥ್ಯ: ಧ್ವನಿ ಸಂಕೇತಗಳನ್ನು ಹೊಂದಿಸುವುದು, ಪದ ಗುರ್ತಿಸುವುದು, ಅಕ್ಷರಗಳನ್ನು ಗುರ್ತಿಸುವುದು, ಪದ ಸಂಪತ್ತಿನ ಅಭಿವೃದ್ಧಿ<br>ಚಟುವಟಿಕೆ 30 : ಅರ್ಥಪೂರ್ಣ ಪದ ರಚಿಸುವುದು (ಗುರಿ–2)<br>ಉದ್ದೇಶ : ಅಕ್ಷರಗಳನ್ನು/ ಧ್ವನಿಗಳನ್ನು ಜೋಡಿಸುವ ಮೂಲಕ ಪದಗಳನ್ನು ರಚಿಸುವರು.<br>ಅಗತ್ಯ ಸಾಮಾಗ್ರಿಗಳು : ಮಕ್ಕಳ ಹೆಸರಿನಲ್ಲಿರುವ ಅಕ್ಷರಗಳ ಮಿಂಚುಪಟ್ಟಿಗಳು.<br>ವಿಧಾನ :* ಮಕ್ಕಳನ್ನು ಇಬ್ಬರಂತೆ ಗುಂಪು ಮಾಡುವುದು.<br>* ಅವರವರ ಹೆಸರಿನ ಅಕ್ಷರಗಳ ಮಿಂಚು ಪಟಿಗಳನ್ನು ಮಕ್ಕಳಿಗೆ ನೀಡುವುದು.<br>* ಅಕ್ಷರಗಳ ಮಿಂಚುಪಟ್ಟಿ ಬಳಸಿ ಅವರ ಹೆಸರನ್ನು ಜೋಡಿಸಲು ಮಾರ್ಗದರ್ಶಿಸುವುದು.<br>* ಇದೇ ಚಟುವಟಿಕೆಯನ್ನು ಪರಿಚಿತ ಹಾಡು/ಕಥೆ/ಪ್ರಾಸಗೀತೆಗಳಲ್ಲಿನ ಪದಗಳೊಂದಿಗೆ ಚಟುವಟಿಕೆಯನ್ನು ಕೈಗೊಳ್ಳುವುದು.<br>2 ಮತ್ತು 3ನೇ ತರಗತಿ : ಪದಗಳ ಮಿಂಚುಪಟ್ಟಿಗಳನ್ನು ತಯಾರಿಸಿಕೊಂಡು ಸರಳ ವಾಕ್ಯಗಳನ್ನು ರಚಿಸುವ ಮೂಲಕ ಚಟುವಟಿಕೆಯನ್ನು ನಿರ್ವಯಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ : ಮಕ್ಕಳೊಂದಿಗೆ ಬರವಣಿಗೆ, ಉದ್ದೇಶಿತ ಬರವಣಿಗೆ, ಅವಧಾನ ಮತ್ತು ಆಲಿಸುವುದು, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ.<br>ಚಟುವಟಿಕೆ ಸಂಖ್ಯೆ : 32 ಹಂಚಿತ ಬರೆಹ (ಗುರಿ : 2) **ECW-8**<br>ಉದ್ದೇಶಗಳು:<br>• ಹಂಚಿತ ಬರವಣಿಗೆಯನ್ನು ಪರಿಚಯಿಸುವುದು.<br>• ಉದ್ದೇಶಕ್ಕನುಸಾರವಾಗಿ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿಸುವುದು.<br>• ಅವಧಾನದೊಂದಿಗೆ ಉದ್ದೇಶಿತ ಬರೆಹದಲ್ಲಿ ತೊಡಗಿಸುವುದು.<br>• ಸೃಜನಾತ್ಮಕವಾಗಿ ಚಿಂತಿಸಿ ಅವುಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವುದು.<br>• ಪದ ಸಂಪತ್ತನ್ನು ಅಭಿವೃದ್ಧಿಪಡಿಸುವುದು.<br>ಅಗತ್ಯ ಸಾಮಗ್ರಿಗಳು: ಕಪ್ಪುಹಲಗೆ ಡ್ರಾಯಿಂಗ್ ಶೀಟ್<br>ವಿಧಾನ: ಹಂಚಿತ ಬರೆಹ ಚಟುವಟಿಕೆಗಳನ್ನು ತಿಂಗಳಿಗೆ ಎರಡು ಅಥವಾ ಮೂರು ಬಾರಿ ಆಯೋಜಿಸುವುದು. ಒಂದು ವಿಷಯವನ್ನು ನೀಡಿ ಆ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಕಥೆಯ ಮೂಲಕ ಅಥವಾ ಬರವಣಿಗೆ ಮೂಲಕ ಹಂಚಿಕೊಳ್ಳಲು ತಿಳಿಸುವುದು.<br>ಸಲಹಾತ್ಮಕ ಸೂಚಿತ ವಿಷಯ:– ನಮ್ಮ ಆಟಿಕೆಗಳು<br>ಗಮನಿಸಬೇಕಾದ ಅಂಶಗಳು:<br>• ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಾಕ್ಯಗಳನ್ನು ರಚಿಸಲು ಅಗತ್ಯ ಸುಳಿವುಗಳನ್ನು ನೀಡುವುದು. ಮಕ್ಕಳೊಂದಿಗೆ ಬರವಣಿಗೆಯಲ್ಲಿ ತೊಡಗಿಕೊಳ್ಳುವ ಮೂಲಕ ಬರವಣಿಗೆಯ ಪ್ರಾತ್ಯಕ್ಷಿಕೆ ನೀಡುವುದು<br>• ಶಿಕ್ಷಕರು ಮೊದಲನೇ ವಾಕ್ಯವನ್ನು ಬರೆದು ಓದುವುದು. ನಂತರ ಮಕ್ಕಳು ತಮ್ಮ ಸ್ವಂತ ವಾಕ್ಯವನ್ನು ಹೇಳಿ ಬರೆಯಲು ತಿಳಿಸುವುದು.<br>• ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಪ್ರತಿಕ್ರಿಯಿಸಲು ಅವಕಾಶ ಕಲ್ಪಿಸಬಹುದು. ಅಂತಹ ಸನ್ನಿವೇಶದಲ್ಲಿ ಶಿಕ್ಷಕರು ಅದನ್ನು ಶಾಲಾ ಭಾಷೆಯಲ್ಲಿ ಅನುವಾದಿಸಿ ಹೇಳುವುದು. |

DRAFT 22.02.22

| | | |
|---|---|---|
| | | **ತರಗತಿವಾರು ವಿವರ: 1ನೇ ತರಗತಿಯವರು ವಿವರಿಸಿದ ಅಂಶಗಳನ್ನು 2ನೇ ಹಾಗೂ 3ನೇ ತರಗತಿಯ ಮಕ್ಕಳು ಬರವಣಿಗೆ ಮೂಲಕ ಅಭಿವ್ಯಕ್ತಿಪಡಿಸಲು ತಿಳಿಸುವುದು.** |
| | | **ಬರವಣಿಗೆಯ ಮಾದರಿ:**<br>**ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.**<br>**ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.** |
| | **ಹೊರಾಂ ಗಣ ಆಟಗಳು** | Day 68<br>ಚಟುವಟಿಕೆ –43 ಟ್ರಾಫಿಕ್ ಲೈಟ್ಸ್ (ಸಂಚಾರಿ ದೀಪ)<br><br><br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ಸೂಚನೆ ಮತ್ತೆ ಆದೇಶಗಳ ಪಾಲನೆ .<br>ಬೇಕಾಗುವ ಸಾಮಗ್ರಿ: ಸಂಚಾರಿ ದೀಪದ ಸಂಕೇತಕ್ಕೆ ಬಣ್ಣಗಳು ,ಮಾರ್ಕರ್<br>ವಿಧಾನ:<br>• ಮಕ್ಕಳನ್ನು ವೃತಾಕಾರದಲ್ಲಿ ನಿಲ್ಲಲು ಸೂಚಿಸುವುದು .<br>• ಸಂಚಾರಿ ದೀಪದ ಆಟದ ನಿಯಮಗಳನ್ನು ಪರಿಚಯಿಸುವುದು .<br>• ಮಕ್ಕಳು ವೃತಾಕಾರದಲ್ಲಿ ಚಲಿಸುವಂತೆ ಸೂಚಿಸುವುದು .<br>• ಶಿಕ್ಷಕರು ವೃತ್ತದ ಮಧ್ಯಭಾಗದಲ್ಲಿ ನಿಂತು ಕೆಂಪು ಬಣ್ಣ ಎಂದು ಹೇಳಿದಾಗ ನಿಲ್ಲಲು ಸೂಚಿಸುವುದು .<br>• ಹಳದಿ ಬಣ್ಣ ಎಂದು ಹೇಳಿದಾಗ ಚಲಿಸಲು ಸಿದ್ಧರಾದಂತೆ ನಿಲ್ಲಲು ಸೂಚಿಸುವುದು.<br>• ಹಸಿರು ಬಣ್ಣ ಎಂದು ಹೇಳಿದಾಗ ಚಲಿಸಲು ಸೂಚಿಸುವುದು.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರಿಸುವುದು .** |
| | **ಥಾ ಸಮಯ** | **ವಿಧಾನ :**<br>➢ ಮೊದಲ ದಿನದ ಉದ್ದೇಶದಂತೆ ಕಥಾ ಸಮಯವು ಮುಂದುವರೆಯುತ್ತದೆ.<br>➢ ಮಕ್ಕಳ ನೆರವು ಪಡೆದುಕೊಳ್ಳುವುದರ ಮೂಲಕ ಕಥೆಯನ್ನು ಪೂರ್ಣ ಗೊಳಿಸುವುದು.<br>ಉದಾ : ಕ್ಯಾಪ್ ಯಾರ ಬಳಿ ಇತ್ತು? ಬೆಕ್ಕು ಎಲ್ಲಿಗೆ ಹೋಯಿತು? ಇತ್ಯಾದಿ<br>**ಕಥೆಯನ್ನು ಹೇಳಿದ ನಂತರ ಕನ್ನಡದಲ್ಲಿ ಸರಳ ಪ್ರಶ್ನೆಗಳನ್ನು ಕೇಳಿ.**<br>(ಕಥೆಯನ್ನು ಆನಂದಿಸುವುದರ ಜೊತೆಗೆ ಆಲಿಸುತ್ತಿದ್ದಾರೆ ಎನ್ನುವುದನ್ನು ಖಚಿತಪಡಿಸಿ ಕೊಳ್ಳುವುದು) |
| | **ುತ್ತೆ ಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>**ಗಮನಿಸಿ :**<br>✓ ಕಲಿಕಾ ಫಲಗಳನ್ನು ಪರಿಶೀಲಿಸಿ, ಪೋಷಕರಿಗೆ ವರದಿ ಮಾಡಲು ದಾಖಲೆಗಳನ್ನು ಸಿದ್ಧಪಡಿಸಿ.<br>✓ ನಿಮ್ಮ ಮಕ್ಕಳು ಒಂದನೇ ತರಗತಿಯ ಚಟುವಟಿಕೆಗಳನ್ನು ಕಲಿಯಲು ಸಿದ್ಧರಿದ್ದಾರೆ ಎನ್ನುವುದನ್ನು ಮನದಟ್ಟುಮಾಡಿ.<br>✓ ಒಂದನೇ ತರಗತಿಯ ಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಇದೇ ಮಾದರಿಯಲ್ಲಿ ನಿರ್ವಹಿಸಲು ಸಿದ್ಧರಾಗಿ ಮತ್ತು ಪೋಷಕರೊಂದಿಗೆ ಮಾತನಾಡಿ, ಅವರನ್ನೂ ಇವುಗಳಲ್ಲಿ ತೊಡಗಿಸಿ ಕೊಳ್ಳಲು ಪೂರ್ವ ಸಿದ್ಧತೆ ಮಾಡಿಕೊಳ್ಳಿ. |

# ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

**ವಾರ–12** **ದಿನ–69 (ಬುಧವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 69 | **ಶುಭಾಶಯ ವಿನಿಮಯ** | ಸಂಪೂರ್ಣ ವಿದ್ಯಾಪ್ರವೇಶ ಕಾರ್ಯಕ್ರಮದಲ್ಲಿ ಮಕ್ಕಳು ಹೆಚ್ಚು ಆನಂದಿಸಿದ ಚಟುವಟಿಕೆ ಯಾವುದು ಎಂದು ಮಕ್ಕಳಿಂದ ಕೇಳಿ ತಿಳಿದು ಆ ಚಟುವಟಿಕೆಯ ಮೂಲಕ ಮಕ್ಕಳನ್ನು ತರಗತಿಗೆ ಸ್ವಾಗತಿಸುವುದು. |
| | **ಮಾತು ಕತೆ** | **ದಿನ 67 ರ ಚಟುವಟಿಕೆ: ಇಂಗ್ಲೀಷ್ ಪ್ರಾಸ ಪದ್ಯವನ್ನು ಹಾಡಿಸಿ.**<br>**ಒಂದು ಸಾಲನ್ನು ಶಿಕ್ಷಕರು ಇನ್ನೊಂದು ಸಾಲನ್ನು ಮಕ್ಕಳು ಹಾಡಲಿ.** |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ : ಪರಿಸರದ ಅರಿವು–ಪ್ರಕೃತಿ**<br>**ಚಟುವಟಿಕೆ...43 ಡಿ ಪ್ರಾಣಿಗಳ ವರ್ಗೀಕರಣ (ಗುರಿ 3)**<br>**ಉದ್ದೇಶ:– ಪ್ರಾಣಿಗಳ ವರ್ಗಿಕರಣದ ಬಗ್ಗೆ ತಿಳಿಯುವುದು.**<br>**ಅಗತ್ಯ ಸಾಮಗ್ರಿಗಳು : ವಿವಿಧ ಪ್ರಾಣಿಗಳ ಚಿತ್ರಗಳು ( ಜಲಚರ ಪ್ರಾಣಿಗಳು, ಸಾಕು ಪ್ರಾಣಿಗಳು, ಸಾರಿಗೆಗೆ ಬಳಸುವ ಪ್ರಾಣಿಗಳು ಇತ್ಯಾದಿ )**<br>**ವಿಧಾನ : ವಿವಿಧ ಪ್ರಾಣಿಗಳ ಚಿತ್ರಗಳನ್ನು ಮಕ್ಕಳಿಗೆ ನೀಡಿ ಅವುಗಳನ್ನು ಹಾಲು ನೀಡುವ ಪ್ರಾಣಿಗಳು, ಸಾರಿಗೆಗೆ ಬಳಸುವ ಪ್ರಾಣಿಗಳು, ಜಲಚರ ಪ್ರಾಣಿಗಳು ಮತ್ತು ಸಾಕು ಪ್ರಾಣಿಗಳು ಮುಂತಾದ ವರ್ಗಗಳಾಗಿ ಗುಂಪು ಮಾಡಲು ಸಹಾಯ ಮಾಡುವುದು.**<br>**2ನೇ ತರಗತಿ**<br>**ವಿವಿಧ ಪ್ರಾಣಿಗಳ ಚಿತ್ರಗಳ ಮಿಂಚುಪಟ್ಟಿಗಳನ್ನು ನೀಡಿ ಅವುಗಳನ್ನು ಸಾಕುಪ್ರಾಣಿ ಮತ್ತು ಕಾಡು ಪ್ರಾಣಿಗಳಾಗಿ ವಿಂಗಡಿಸುವುದು.**<br>**3ನೇ ತರಗತಿ**<br>**ವಿವಿಧ ಪ್ರಾಣಿಗಳ ಹೆಸರು ಬರೆದಿರುವ ಮಿಂಚುಪಟ್ಟಿಗಳನ್ನು ನೀಡಿ ಅವುಗಳನ್ನು ಸಾಕುಪ್ರಾಣಿ ಮತ್ತು ಕಾಡು ಪ್ರಾಣಿಗಳಾಗಿ ವಿಂಗಡಿಸುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 42. ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ<br>• ಏಕಾಗ್ರತೆಯನ್ನು ಹೆಚ್ಚಿಸಲು ಸಹಾಯಕವಾಗುತ್ತದೆ..<br>ಸಾಮಗ್ರಿಗಳು : ನೀರಿನ ಬಾಟಲಿ, ಫನಲ್[ಸೋಸುವ ಜಾಳಿಗೆ], ನೀರು ತುಂಬಿದ ತಂಬಿಗೆ.<br>ವಿಧಾನ :.ತಂಬಿಗೆ/ ಮಗ್ ಹಿಡಿದುಕೊಳ್ಳುವುದು ಮತ್ತು ನೀರನ್ನು ಸೋರಿಕೆಯಾಗದಂತೆ ಫನಲ್ ಮೂಲಕ ಬಾಟಲಿಗೆ ವರ್ಗಾಯಿಸುವುದು ಹೇಗೆ ಎಂದು ಮಕ್ಕಳಿಗೆ ತೋರಿಸುವುದು ಮತ್ತು ಮಕ್ಕಳಿಂದಲೂ ಮಾಡಿಸುವುದು.ವಸ್ತುಗಳ ಕುಶಲತೆಯನ್ನು ಒಳಗೊಂಡಿರುವ ಚಟುವಟಿಕೆಗಳು ಅಥವಾ ನೀರನ್ನು ಸುರಿಯುವ ಕೌಶಲ್ಯವನ್ನು ಒಳಗೊಂಡಿರುವ ಚಟುವಟಿಕೆಗಳು ಕಣ್ಣು ಕೈಗಳ ಸಮನ್ವಯತೆಗೆ ಬಹಳ ಸಹಕಾರಿಯಾಗಿವೆ.<br>ವಿವರ; 2ಮತ್ತು 3 ನೇ ತರಗತಿಗೆ ಬೇರೆ ಬೇರೆ ಆಕಾರ ಮತ್ತು ಗಾತ್ರದ ಧಾರಕಗಳಲ್ಲಿ ಫನಲ್ ಬಳಸದೇ ನೀರು ಸೋರದಂತೆ ತುಂಬಿಸಲು ಹೇಳುವುದು. |
| | **ಭಾಷಾ** / **ಆಲಿಸುವುದು** | **ಸಾಮರ್ಥ್ಯ : ಧ್ವನಿ ಮತ್ತು ಸಂಕೇತಗಳ ಸಂಯೋಜನೆ, ಪದ ಸಂಪತ್ತಿ ಅಭಿವೃದ್ಧಿ, ಅಕ್ಷರ ಗುರುತಿಸುವುದು** |

DRAFT 22.02.22

| | | | |
|---|---|---|---|
| | ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಮತ್ತು ಮಾತನಾಡುವುದು | ಚಟುವಟಿಕೆ : 26 – ಪದದ ಕೊನೆಯ ಧ್ವನಿಯನ್ನು ಗುರುತಿಸುವರು ಮತ್ತು ಹೊಂದಿಸುವರು (ಗುರಿ :2) **ECL-22**<br>ಉದ್ದೇಶ :<br>* ಧ್ವನಿ ಸಂಕೇತಗಳ ಅರಿವು ಮೂಡಿಸುವುದು.<br>* ಪದಗಳನ್ನು ಗ್ರಹಿಸಿ ಗುರುತಿಸುವುದು.<br>* ಪದಗಳಲ್ಲಿಯ ಅಕ್ಷರಗಳ ಅಕ್ಷರ–ಧ್ವನಿ ಸಹ ಸಂಬಂಧ ಗುರುತಿಸುವುದು.<br>* ಗಮನವಿಟ್ಟು ಆಲಿಸಿ ಅಕ್ಷರ–ಧ್ವನಿ ಸಹ ಸಂಬಂಧ ಅರ್ಥೈಸಿಕೊಳ್ಳುವುದು.<br>ಅಗತ್ಯ ಸಾಮಗ್ರಿಗಳು : ಕರಿ ಹಲಗೆ<br>ವಿಧಾನ : ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ, ಕೆಲವು ಪರಿಚಿತ ಪದಗಳನ್ನು ಹೇಳಲು ತಿಳಿಸುವುದು<br>ಉದಾ : ಸರ, ಮರ, ಅರ, ದರ, ಬರ,<br>–(ಒಂದೇ ರೀತಿಯ ) ಕೊನೆಯ ಅಕ್ಷರದ ಧ್ವನಿ ಗುರುತಿಸುವುದು ತಿಳಿಸುವುದು<br>–ಹೊಸ ಪದವೊಂದನ್ನು ಹೇಳಿ, ಅದೇ ಶಬ್ಧದಿಂದ ಕೊನೆಯಾಗುವ ಪದಗಳನ್ನು ಹೇಳಿಸುವುದು<br>–ವಿವಿಧ ಪದಗಳನ್ನು ಪ್ರದರ್ಶಿಸುತ್ತಾ, ಒಂದೇ ರೀತಿಯ ಧ್ವನಿಯಿಂದ ಕೊನೆಯಾಗುವ ಪದಗಳನ್ನು ಪರಿಚಯಿಸುವುದ<br>ತರಗತಿವಾರು ವಿವರ : 2 ನೇ ತರಗತಿಯ ಮಕ್ಕಳು ಸೂಚಿಸಿದ ಧ್ವನಿ ಅಂತ್ಯದಲ್ಲಿ ಬರುವಂತೆ ವಿವಿಧ ಪದಗಳನ್ನು ತ<br>ಮಾಡುವುದು.<br>3 ನೇ ತರಗತಿಯ ಮಕ್ಕಳು ವಿವಿಧ ಪದಗಳಲ್ಲಿ ಸೂಚಿತ ಅಂತ್ಯ ಅಕ್ಷರದ ಪದ ಗುರುತಿಸಿ, ಆ ಪದ ಬಳಸಿ ವಾಕ್ಯ ರಚಿಸುವುದು.<br><br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC-19 (ತರಗತಿ 1, 2, 3)** |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಪದಗಳನ್ನು ಗುರುತಿಸುವುದು, ಮುದ್ರಿತ ಪಠ್ಯದ ಅರಿವು, ಅರ್ಥಗ್ರಹಿಕೆ<br>ಚಟುವಟಿಕೆ....28 ವಾಕ್ಯ ವಿಭಜನೆ. (ಗುರಿ–2)<br>ಉದ್ದೇಶ : ಕಥೆ / ಪ್ರಾಸಗೀತೆಗಳಲ್ಲಿಯ ಪದಗಳನ್ನು ಗುರುತಿಸುವರು ರಚಿಸುವರು ಮತ್ತು ವಿಭಜಿಸುವರು.<br>ಅಗತ್ಯ ಸಾಮಾಗ್ರಿಗಳು : ಪ್ರಾಸಗೀತೆ, ಹಾಡು, ಕಥೆ, ನೆಚ್ಚಿನ ಪುಸ್ತಕ, ಖಾಲಿ ಕಾರ್ಡ್‌ಗಳು, ಚಾರ್ಟ ಪೇಪರ್.<br>ವಿಧಾನ : ದಿನ 64 ಚಟುವಟಿಕೆ 28ರಲ್ಲಿ ಅಯ್ಕೆ ಮಾಡಿಕೊಂಡ ಕಥೆ/ಪ್ರಾಸಗೀತೆಯನ್ನು ಅಯ್ಕೆ ಮಾಡಿಕೊಂಡು ಚಟುವಟಿಕೆಯನ್ನು ಪುನರಾವರ್ತಿಸುವುದು.<br>* ಸರಳ ಪರಿಚಿತ ಪ್ರಾಸ, ಹಾಡು, ಕಥೆಗಳ ಚಾರ್ಟ್ ತಯಾರಿಸಿ ಅದರಲ್ಲಿಯ ಪ್ರಮುಖ ಪದ/ವಾಕ್ಯಗಳನ್ನು ದಪ್ಪ ಅಕ್ಷರಗಳಲ್ಲಿ ತೋರಿಸುವಂತೆ ಬರೆದು ಕಪ್ಪುಹಲಗೆ ಮೇಲೆ ಚಾರ್ಟನ್ನು ಪ್ರದರ್ಶೀಸುವುದು.<br>* ಮಕ್ಕಳಿಗೆ ಕಥೆ/ ಪ್ರಾಸಗೀತೆಯಲ್ಲಿಯ ವಾಕ್ಯಗಳನ್ನು ಪುನರಾವರ್ತಿಸಿ ಓದುವುದು ಮತ್ತು ಹೇಳಿಕೊಡುವುದು.<br>* ಶಿಕ್ಷಕರು ವಾಕ್ಯದಲ್ಲಿನ ಪದವನ್ನು ಗಟ್ಟಿಯಾಗಿ ಓದಬೇಕು ನಂತರ ಮಕ್ಕಳನ್ನು ಕಪ್ಪುಹಲಗೆ ಬಳಿ ಕರೆದು ತಾವು ಹೇಳಿದ ಪದವನ್ನು ಚಾರ್ಟ್ ನಲ್ಲಿ ಮುಟ್ಟುವ ಮೂಲಕ ಆ ಪದವನ್ನು ತೋರಿಸಲು ಹೇಳಬೇಕು.<br>* ಶಿಕ್ಷಕರು ಒಂದು ವಾಕ್ಯವನ್ನು ಓದಬೇಕು ಅದೇ ವಾಕ್ಯದಲ್ಲಿ ಒಂದು ಪದವನ್ನು ಬದಲಾಯಿಸಿ ಓದಬೇಕು. ಬದಲಾಯಿಸಿದ ಪದ ಯಾವುದು ಎಂದು ಮಕ್ಕಳು ಬೋರ್ಡ್‌ನಲ್ಲಿ ಮುಟ್ಟುವ ಮೂಲಕ ತೋರಿಸಬೇಕು.<br>ಉದಾ; ರವಿಯ ಬಳಿ ಒಂದು ಕುರಿ ಇತ್ತು.<br>ರವಿಯ ಬಳಿ ಒಂದು ಬೆಕ್ಕು ಇತ್ತು<br>ಶಿಕ್ಷಕರು ಯಾವ ಪದ ಬದಲಾಯಿಸಿದ್ದಾರೆ ಎಂಬುದನ್ನು ಮಕ್ಕಳು ತೋರಿಸಬೇಕು.<br>2 ಮತ್ತು 3ನೇ ತರಗತಿ : ಶಿಕ್ಷಕರು ಮಕ್ಕಳಿಗೆ ಕತೆ/ಪ್ರಾಸಗೀತೆಗಳಲ್ಲಿಯ ಪ್ರಮುಖ ಪಾತ್ರಗಳ ಹೆಸರುಗಳನ್ನು ಹೊರ ತೆಗೆದು ಬೇರೆ ಪಾತ್ರಗಳನ್ನು ಹೊಸದಾಗಿ ಸೇರಿಸುವ ಮೂಲಕ ಅದೇ ಕಥೆ ಪ್ರಾಸಗೀತೆಗಳನ್ನು ರಚಿಸಲು ಮಾರ್ಗದರ್ಶಿಸುವುದು. |
| | | ಉದ್ದೇಶಿತ ಬರಹ | ಸಾಮರ್ಥ್ಯ : ಸೂಕ್ಷ್ಮ ಸ್ನಾಯು ಚಲನಾ ಕೌಶಲಾಭಿವೃದ್ಧಿ. ಅಕ್ಷರಗಳನ್ನು ಗುರುತಿಸುವುದು.<br>ಚಟುವಟಿಕೆ: 36, ಚುಕ್ಕಿ ಸೇರಿಸು –ಅಕ್ಷರ ಬರೆ (ಗುರಿ: 2 ) **ECW-17**<br>ಉದ್ದೇಶ :<br>• ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು. |

DRAFT 2022

| | | | |
|---|---|---|---|
| | | | • ಅಕ್ಷರಗಳನ್ನು ಗುರುತಿಸುವುದು.<br>• ಚುಕ್ಕಿಗಳಿಂದ ಅಕ್ಷರಗಳನ್ನು ರಚಿಸುವುದು<br>ಅಗತ್ಯ ಸಾಮಗ್ರಿ : ನೋಟ್ ಪುಸ್ತಕ, ಪೆನ್ಸಿಲ್, ಕರಿ ಹಲಗೆ, ಸೀಮೆ ಸುಣ್ಣ<br>ವಿಧಾನ :<br>- ಮಕ್ಕಳಿಗೆ ಚುಕ್ಕಿ ಬಳಸಿ A, B, C, D, E ಈ ಅಕ್ಷರಗಳನ್ನು ಬರೆಯುವ ವಿಧಾನವನ್ನು ಬರೆದು ತೋರಿಸುವುದು,<br>- ಮಕ್ಕಳು A, B, C, D, E ಈ ಅಕ್ಷರಗಳ ಚುಕ್ಕಿಗಳನ್ನು ಸೇರಿಸಲು ಹೇಳುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ಇಂಗ್ಲಿಷ್ ವರ್ಣಮಾಲೆಯ ಯಾವುದಾದರೂ 5 ಅಕ್ಷರಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. 3ನೇ ತರಗತಿ ಮಕ್ಕಳು ತಮಗೆ ತಿಳಿದ 5 ಇಂಗ್ಲಿಷ್ ಪದಗಳನ್ನು ಚುಕ್ಕಿ ಬಳಸಿ ಬರೆಯಲು ತಿಳಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | ಹೊರಾಂಗಣ ಆಟಗಳು | ಚಟುವಟಿಕೆ – ಟೋಪಿ ಬೇಕಾ ಟೋಪಿ<br>ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ಸಂವಹನ ಕೌಶಲ ಬೆಳವಣಿಗೆ .<br>ಬೇಕಾಗುವ ಸಾಮಗ್ರಿ: ಟೋಪಿ<br>ವಿಧಾನ:<br>• ಮಕ್ಕಳನ್ನು ವೃತಾಕಾರದಲ್ಲಿ ಕೂರಲು ಸೂಚಿಸುವುದು .<br>• ಒಂದು ಮಗುವಿಗೆ ಟೋಪಿ ನೀಡಿ ವೃತ್ತದ ಹೊರಭಾಗದಲ್ಲಿ ಚಲಿಸಲು ಸೂಚಿಸುವುದು.<br>• ಟೋಪಿ ಹಿಡಿದ ಮಗು ಚಲಿಸುತ "ಟೋಪಿ ಬೇಕಾ ಟೋಪಿ " ಎಂದು ಹಾಡುತ ಚಲಿಸಲು ಸೂಚಿಸುವುದು.<br>• ಉಳಿದ ಮಕ್ಕಳು " ಎಂತಹ ಟೋಪಿ " ಎಂದು ಕೇಳಲು ಸೂಚಿಸುವುದು.<br>• " ಚಿನ್ನದ ಟೋಪಿ " " ಎಷ್ಟು ರೂಪಾಯಿ " ನೂರು ರೂಪಾಯಿ" " ಬೇಡ ಬೇಡ "" ಹತ್ತು ರೂಪಾಯಿ " " ಬೇಕು ಬೇಕು "<br>• ಎಂದಾಗ ಟೋಪಿ ಹಿಡಿದ ಮಗು ಕುಳಿತ ಯಾವುದಾದರು ಮಗಿವಿನ ಹಿಂದೆ ಟೋಪಿ ಎಸೆಯಲು ಸೂಚಿಸುವುದು .<br>• ಟೋಪಿ ಪಡೆದ ಮಗು ಟೋಪಿ ಎಸೆದ ಮಗುವನ್ನು ಹಿಡಿಯಲು ಪ್ರಯತ್ನಿಸುವುದು ಟೋಪಿ ಎಸೆದ ಮಗು ಟೋಪಿ ಪಡೆದ ಮಗುವಿನ ಜಾಗಕ್ಕೆ ಹೋಗಿ ಕೂರಲು ಸೂಚಿಸುವುದು .<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರಿಸುವುದು .** | |
| | ಕಥಾ ಸಮಯ | **ಶೀರ್ಷಿಕೆ : ಟೋ ಟೋ & ದ ಕ್ಯಾಪ್**<br>**ಸಾಮಗ್ರಿಗಳು :** ಟೋಪಿ, ಆಟಿಕೆಗಳು<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ ಪ್ರಶ್ನಿಸುವ ಮನೋಭಾವ ಉಂಟುಮಾಡುವುದು.<br>➢ ಊಹಿಸುವ ಕೌಶಲವನ್ನು ಹೆಚ್ಚಿಸುವು.<br>ವಿಧಾನ :<br>➢ ಶಿಕ್ಷಕರು ಕಥೆಯ ಸಾಹಿತ್ಯವನ್ನು ಪ್ರದರ್ಶಿಸಿ ಕಥೆಯನ್ನು ಮಾತೃಭಾಷೆಯಲ್ಲಿ ಹೇಳುವುದು.<br>➢ ಹಿರಿಯ ವಿದ್ಯಾರ್ಥಿಗಳಿಗೆ ಕಥೆಯ ಪಾತ್ರಗಳನ್ನು ಹೆಸರಿಸಲು ಹೇಳುವುದು.<br>➢ ಕಥೆಯ ಪಾತ್ರಗಳನ್ನು ಶಿಕ್ಷಕರು/ಹಿರಿಯ ವಿದ್ಯಾರ್ಥಿಗಳು ಹೆಸರಿಸುವಾಗ ಕಿರಿಯ ವಿದ್ಯಾರ್ಥಿಗಳು ಪಾತ್ರಗಳ ಚಿತ್ರಗಳನ್ನು ತೋರಿಸಲು ಕೇಳುವುದು. | |

DRAFT 22.02.22

| | | |
|---|---|---|
| | | ➢ **ಟೋಪಿ ಮತ್ತು ಆಟಿಕೆಯ ಬೆಕ್ಕುಗಳನ್ನು ಮಕ್ಕಳಿಗೆ ಪ್ರದರ್ಶಿಸಿ ಮಾತೃಬಾಷೆ ಮತ್ತು ಇಂಗ್ಲೀಷನಲ್ಲಿ ಅವುಗಳ ಹೆಸರನ್ನು ಹೇಳಿಸುವುದು.**<br>➢ **ಶಿಕ್ಷಕರು ಮಾತೃಭಾಷೆ ಮತ್ತು ಇಂಗ್ಲೀಷ ಭಾಷೆಯಲ್ಲಿ ಕಥೆಯನ್ನು ಅರ್ಥೈಸುವುದು.**<br>ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು.<br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>**ಗಮನಿಸಿ :**<br>✓ ಕಲಿಕಾ ಫಲಗಳನ್ನು ಪರಿಶೀಲಿಸಿ, ಪೋಷಕರಿಗೆ ವರದಿ ಮಾಡಲು ದಾಖಲೆಗಳನ್ನು ಸಿದ್ಧಪಡಿಸಿ.<br>✓ ನಿಮ್ಮ ಮಕ್ಕಳು ಒಂದನೇ ತರಗತಿಯ ಚಟುವಟಿಕೆಗಳನ್ನು ಕಲಿಯಲು ಸಿದ್ಧರಿದ್ದಾರೆ ಎನ್ನುವುದನ್ನು ಮನದಟ್ಟುಮಾಡಿ.<br>✓ ಒಂದನೇ ತರಗತಿಯ ಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಇದೇ ಮಾದರಿಯಲ್ಲಿ ನಿರ್ವಹಿಸಲು ಸಿದ್ಧರಾಗಿ ಮತ್ತು ಪೋಷಕರೊಂದಿಗೆ ಮಾತನಾಡಿ, ಅವರನ್ನೂ ಇವುಗಳಲ್ಲಿ ತೊಡಗಿಸಿ ಕೊಳ್ಳಲು ಪೂರ್ವ ಸಿದ್ಧತೆ ಮಾಡಿಕೊಳ್ಳಿ. |

# ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

## ವಾರ–12 ದಿನ–70 (ಗುರುವಾರ)

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 70 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | ಸಂಪೂರ್ಣ ವಿದ್ಯಾಪ್ರವೇಶ ಕಾರ್ಯಕ್ರಮದಲ್ಲಿ ಮಕ್ಕಳು ಹೆಚ್ಚು ಆನಂದಿಸಿದ ಚಟುವಟಿಕೆ ಯಾವುದು ಎಂದು ಮಕ್ಕಳಿಂದ ಕೇಳಿ ತಿಳಿದು ಆ ಚಟುವಟಿಕೆಯ ಮೂಲಕ ಮಕ್ಕಳನ್ನು ತರಗತಿಗೆ ಸ್ವಾಗತಿಸುವುದು. |
| | **ಮಾತು ಕತೆ** ***( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)*** | **ದಿನ 67 ರ ಚಟುವಟಿಕೆ: ಇಂಗ್ಲೀಷ್ ಪ್ರಾಸ ಪದ್ಯವನ್ನು ಹಾಡಿಸಿ.**<br>**ಒಂದು ಸಾಲನ್ನು ಶಿಕ್ಷಕರು ಇನ್ನೊಂದು ಸಾಲನ್ನು ಮಕ್ಕಳು ಹಾಡಲಿ.**<br>ಚರ್ಚೆಗೆ ಬಳಸಬಹುದಾದ ಪ್ರಶ್ನೆಗಳು :<br>1. ರಸ್ತೆಯಲ್ಲಿ ಓಡುವುದು ಒಳ್ಳೆಯದೆ?<br>2. ರಸ್ತೆಯಲ್ಲಿ ಓಡಿದರೆ ಏನಾಗಬಹುದು?<br>3. ನೀವು ಶಾಲೆಗೆ ಹೇಗೆ ಬರುತ್ತೀರಿ?<br>4. ಹಿರಿಯರ ಕೈ ಹಿಡಿದು ರಸ್ತೆ ದಾಟುವ ಬಗ್ಗೆ ಏನು ಯೋಚಿಸುತ್ತೀರಿ?<br>5. ನೀವು ಒಬ್ಬಂಟಿಯಾಗಿ ನಡೆಯುವಾಗ ನೀವು ರಸ್ತೆಯನ್ನು ಹೇಗೆ ದಾಟುತ್ತೀರಿ? ಇತ್ಯಾದಿ. |
| | **ನನ್ನ ಸಮಯ(Free Indore play)** | ಮಕ್ಕಳು ತಾವು ನಿರ್ವಹಿಸಲಿಚ್ಚಿಸಿದ ಕಲಿಕಾ ಮೂಲೆಗಳಿಗೆ ಸಾಗಿ ಚಟುವಟಿಕೆಗಳನ್ನು ನಿರ್ವಹಿಸುವುದು.<br>ಶಿಕ್ಷಕರು ಅನುಪಾಲನಾ ಸೂಚಿಯಂತೆ ಕಾರ್ಯ ನಿರ್ವಹಿಸುವುದು. |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ) ಚಟುವಟಿಕೆ)** | **ಸಾಮರ್ಥ್ಯ : ಪರಿಸರದ ಅರಿವು–ಪ್ರಕೃತಿ**<br>**ಚಟುವಟಿಕೆ...43 ಬಿ ಪ್ರಾಣಿಗಳ ಹೆಸರಿನ ಮೊದಲ ಅಕ್ಷರ ಹೇಳುವುದು (ಗುರಿ 3)**<br>**ಉದ್ದೇಶ:– ಪ್ರಾಣಿಗಳ ಮೊದಲನೆಯ ಅಕ್ಷರ ಗುರುತಿಸಿ ಹೆಸರನ್ನು ಹೇಳುವುದು.**<br>**ಅಗತ್ಯ ಸಾಮಗ್ರಿಗಳು : ವಿವಿಧ ಪ್ರಾಣಿಗಳ ಕನ್ನಡ ಮತ್ತು ಇಂಗ್ಲೀಷ್ ಹೆಸರುಗಳ ಪಟ್ಟಿ**<br>**ವಿಧಾನ : ವಿವಿಧ ಪ್ರಾಣಿಗಳ ಹೆಸರು ಇರುವ ಪಟ್ಟಿಯನ್ನು ಕನ್ನಡ ಮತ್ತು ಇಂಗ್ಲೀಷಿನಲ್ಲಿ ನೀಡಿ ಅವುಗಳ ಹೆಸರಿನ ಮೊದಲ ಅಕ್ಷರ ಉಚ್ಚರಿಸಲು ಹೇಳುವುದು. ಉದಾ: ಆಡು–ಆ, ಎತ್ತು–ಎ ಅದೇ ರೀತಿ ಸಿ ಫಾರ್ ಕವ್, ಡಿ ಫಾರ್ ಡಾಗ್.** |

DRAFT 2022

| | | | |
|---|---|---|---|
| | | | 2ನೇ ತರಗತಿ<br>ಪ್ರಾಣಿಗಳ ಹೆಸರಿನ ಮೊದಲ ಅಕ್ಷರ ನೀಡಿ ಪ್ರಾಣಿಗಳ ಹೆಸರನ್ನು ಕೊಟ್ಟು ಹೊಂದಿಸಲು ಹೇಳುವುದು. (ಆ – ಆಕಳು)<br>3ನೇ ತರಗತಿ<br>ಪ್ರಾಣಿಗಳ ಹೆಸರಿನ ಅಕ್ಷರಗಳ ಚಿಕ್ಕ ಚಿಕ್ಕ ಮಿಂಚುಪಟ್ಟಿಗಳು/ಅಕ್ಷರಗಳ ಗುಂಪುಗಳನ್ನು ನೀಡಿ ಪ್ರಾಣಿಗಳ ಹೆಸರು ರಚಿಸಲು ತಿಳಿಸುವುದು. |
| | ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ) | | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ, ಕಣ್ಣು ಕೈಗಳ ಸಮನ್ವಯತೆ.ಆಕಾರಗಳ ಪರಿಕಲ್ಪನೆ.<br>ಚಟುವಟಿಕೆ; 33 ಬಿ **ಅಕ್ಷರಗಳ ಆಕಾರದ ಒಳಗೆ ಬಣ್ಣ ತುಂಬುವುದು** ಗುರಿ – 1<br>ಉದ್ದೇಶ;<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ಧಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.<br>• ಸ್ಥಳದ ಪರಿಕಲ್ಪನೆಯನ್ನು ತಿಳಿಯುತ್ತಾರೆ.<br>ಸಾಮಗ್ರಿಗಳು : ಬಣ್ಣ, ಹಲ್ಲುಜ್ಜುವ ಬ್ರಶ್, ಬಿಳಿಹಾಳೆ, ವಿವಿಧ ಚಿತ್ರಗಳು[ ಅಕ್ಷರ,ಅಂಕಿ, ಪ್ರಾಣಿ ಮತ್ತು ಪಕ್ಷಿಗಳು]<br>ವಿಧಾನ :ಮಕ್ಕಳನ್ನು 3–4 ರಂತೆ ಗುಂಪು ಮಾಡಿ ಕೂರಿಸುವುದು. ಪ್ರತಿ ಗುಂಪಿಗೂ ಬಣ್ಣ ,ಹಾಳೆ,ಬ್ರಶ್ ಹಾಗೂ ವಿವಿಧ ಚಿತ್ರಗಳನ್ನು ನೀಡುವುದು.ಅದರಲ್ಲಿ ಒಂದು ಚಿತ್ರವನ್ನು ಆಯ್ಕೆ ಮಾಡಿಕೊಂಡು ಬಿಳಿಹಾಳೆಯ ಮೇಲೆ ಇಡುವುದು.ತನಗೆ ಇಷ್ಟವಾದ ಬಣ್ಣವನ್ನು ಬ್ರಶ್ ನಿಂದ ಅದ್ದಿ ಚಿತ್ರದ ಸುತ್ತಲೂ ಸ್ಪ್ರೇ ಮಾಡುವುದು.ನಂತರ ಚಿತ್ರವನ್ನು ತೆಗೆದಾಗ ಅಲ್ಲಿ ಮೂಡಿರುವ ಚಿತ್ರ ನೋಡಿ ಸಂತಸಪಡುತ್ತಾರೆ.<br>ವಿವರ; 2ಮತ್ತು 3 ನೇ ತರಗತಿಗೆ ಇದೇ ಚಟುವಟಿಕೆಯನ್ನು ಮಾಡಲು ಹೇಳುವುದು.<br>*** ಬಳಸಬೇಕಾದ ಅಭ್ಯಾಸ ಹಾಳೆಗಳು: H.W.-15 ( 01, 02,03ನೇ ತರಗತಿ)** |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ:– ಧ್ವನಿ ಸಂಕೇತಗಳ ಅರಿವು, ಅಕ್ಷರ ಶಬ್ದ ಸಹ ಸಂಬಂಧ.<br>**ಚಟುವಟಿಕೆ–20 ಹೆಸರಿನ ಆರಂಭಿಕ ಅಕ್ಷರದಿಂದ ವಸ್ತುವನ್ನು ಪತ್ತೆ ಹಚ್ಚುವುದು (ಗುರಿ–2) ECL-2 (64 ನೇ ದಿನದಿಂದ ಮುಂದುವರೆದಿದೆ.)**<br>ಉದ್ದೇಶಗಳು:–<br>* ಧ್ವನಿ ಸಂಕೇತಗಳ ಅರಿವು ಮೂಡಿಸುವುದು.<br>* ಅಕ್ಷರಗಳು ಮತ್ತು ಪದಗಳ ನಡುವಿನ ಸಹಸಂಬಂಧವನ್ನು ಗ್ರಹಿಸುವುದು.<br>* ಪದಗಳನ್ನು ಗ್ರಹಿಸಿ ಗುರುತಿಸುವುದು.<br>* ಅಂತ್ಯಾಕ್ಷರಿ ಪದಗಳನ್ನು ಬರೆಯುವುದು.<br>ಅಗತ್ಯ ಸಾಮಗ್ರಿಗಳು– ಇಲ್ಲ<br>ಸಲಹಾತ್ಮಕ ವಿಷಯ : ಉಡುಪುಗಳು<br>ವಿಧಾನ:– ಸುಳಿವುಗಳ ಮೂಲಕ ಉಡುಪುಗಳ ಹೆಸರನ್ನು ಊಹಿಸಿ ಹೇಳುವ ಚಟುವಟಿಕೆಯನ್ನು ಆಯೋಜಿಸಿ. ಉದಾಹರಣೆಗಾಗಿ ಶಿಕ್ಷಕರು 'ನನ್ನ ಮನಸ್ಸಿನಲ್ಲಿರುವ ಉಡುಪನ್ನು ನಾವು ಚಳಿಗಾಲದಲ್ಲಿ ಹೆಚ್ಚಾಗಿ ಬಳಸುತ್ತೇವೆ.. ..ಅದರ ಹೆಸರು ಸ್ವೆ ಅಕ್ಷರದಿಂದ ಪ್ರಾರಂಭವಾಗುತ್ತದೆ ಎಂದು ಹೇಳಿದಾಗ ಮಕ್ಕಳು ಸ್ವೆಟರ್ ಎಂದು ಗುರುತಿಸುವುದು. ಹೀಗೆಯೇ ವಿವಿಧ ಉದಾಹರಣೆಗಳನ್ನು ನೀಡುವುದು.<br>ತರಗತಿವಾರು ವಿವರ: 2ನೇ ಮತ್ತು 3ನೇ ತರಗತಿ ಮಕ್ಕಳಿಗೆ ಪದಗಳ ಮುಂದುವರೆದ ಭಾಗವಾಗಿ ವಾಕ್ಯಗಳನ್ನು ರಚಿಸುವಂತೆ ಹಾಗೂ ಸರಳ ವಾಕ್ಯಗುಚ್ಚಗಳನ್ನು ರಚಿಸುವಂತೆ ಚಟುವಟಿಕೆಗಳನ್ನು ಮುಂದುವರೆಸುವುದು.<br>**ಬಳಸಬೇಕಾದ ಅಭ್ಯಾಸದ ಹಾಳೆಗಳು: EC-20 (ತರಗತಿ 1, 2, 3)** |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಧ್ವನಿ ಸಂಕೇತಗಳ ಸಂಯೋಜನೆ, ಅಕ್ಷರಗಳನ್ನು ಗುರುತಿಸುವುದು, ಸೂಕ್ಷ್ಮ ಸ್ನಾಯು ಕೌಶಲಗಳ ಅಭಿವೃದ್ಧಿ<br>ಚಟುವಟಿಕೆ....27 (ಗುರಿ–2) ಅಕ್ಷರಗಳನ್ನು ಧ್ವನಿಗಳೊಂದಿಗೆ ಸಂಯೋಜಿಸುವುದು |

DRAFT 2021-22

| | | | |
|---|---|---|---|
| | | | ಉದ್ದೇಶ: ಆಕಾರಗಳ ಆಧಾರದ ಮೇಲೆ ಅಕ್ಷರಗಳನ್ನು ಗುರುತಿಸುವುದು ಮತ್ತು ಅಕ್ಷರಗಳನ್ನು ಧ್ವನಿಗಳೊಂದಿಗೆ ಸಂಯೋಜಿಸಿ ಓದುವುದು<br>ಅಗತ್ಯ ಸಾಮಾಗ್ರಿಗಳು : ಮಣಿಗಳು, ಗುಂಡಿಗಳು, ಮಣ್ಣು, ಮರಳು, ಕಡ್ಡಿ, ಅಕ್ಷರಗಳ ಆಕಾರಇತ್ಯಾದಿ<br>ವಿಧಾನ :* ಮಕ್ಕಳಿಗೆ ಕಲಿಕೆಯು ಆಸಕ್ತಿದಾಯಕವಾಗಲು ಹಿಂದಿನ ತರಗತಿಯಲ್ಲಿ ಬಳಸಿರುವ ಸಾಮಾಗ್ರಿಗಳನ್ನು ಹೊರತು ಪಡಿಸಿ ಸಾಮಾಗ್ರಿಗಳನ್ನು ಬಳಸುವುದು ಮತ್ತು ಹಿಂದಿನ ಅವಧಿಯಲ್ಲಿ ಬಳಸಿರುವ ತರಗತಿಯಲ್ಲಿರುವ ವಸ್ತುಗಳ ಹಾಗೂ ಮಕ್ಕಳ ಹೆಸರುಗಳಲ್ಲಿರುವ ಅಕ್ಷರಗಳನ್ನು ಹೊರತು ಪಡಿಸಿ ಗುರುತಿಸಲು ತಿಳಿಸುವುದು.<br>* ಗುರುತಿಸಿದ ಅಕ್ಷರಗಳನ್ನು ಅದರಧ್ವನಿಯೊಂದಿಗೆ ಸಂಯೋಜಿಸುವುದು.<br>*ವಿವಿಧ ವಸ್ತುಗಳನ್ನು ಬಳಸಿ( ಮಣಿಗಳು, ಗುಂಡಿಗಳು, ಮಣ್ಣು, ಮರಳು, ಕಡ್ಡಿ) ಅಕ್ಷರಗಳ ಆಕಾರಗಳ ಕಲ್ಪನೆಯನ್ನು ಮೂಡಿಸುವುದು.<br>*ಮರಳು ಮತ್ತು ಮಣ್ಣಿನ ಮೇಲೆ ಅಕ್ಷರಗಳನ್ನು ಅಭ್ಯಾಸ ಮಾಡಿಸುವುದು.<br>*ಅಕ್ಷರಗಳನ್ನು ಬರೆದು, ಅಕ್ಷರಗಳ ಒಳಗೆ ಬಣ್ಣತುಂಬಲು ಹೇಳುವುದು.<br>*ನೆಲದ ಮೇಲೆ ನೀರಿನಿಂದಅಕ್ಷರದ ಆಕಾರಗಳನ್ನು ರಚಿಸುವುದು.<br>* ಕಾಗದ ಮತ್ತು ಪೆನ್ಸಿಲ್‌ಗಳನ್ನು ಹೊರತುಪಡಿಸಿ ಅಕ್ಷರಗಳನ್ನು ಓದಲು ಅವಕಾಶ ಕಲ್ಪಿಸುವುದು.<br>*ಸ್ಪಷ್ಟವಾದ ಉಚ್ಚಾರದೊಂದಿಗೆ ಪದಗಳ ವೇಗವನ್ನು ಹೆಚ್ಚಿಸುವುದು.<br>* ಅಕ್ಷರಗಳ ಧ್ವನಿಗಳಿಗೆ ಒತ್ತು ನೀಡುವುದು. ಪರಿಚಿತ ಪದಗಳೊಂದಿಗೆ ಅವುಗಳನ್ನು ಸಂಬಂಧೀಕರಿಸಿ ಹೇಳಿಸುವುದು.<br>2 ಮತ್ತು 3ನೇ ತರಗತಿಗೆ: ಈ ತರಗತಿಯ ಮಕ್ಕಳಿಗೆ ಗುಂಪಿನಲ್ಲಿರುವ ಹಿಂದಿನ ಅವಧಿಯಲ್ಲಿ (62ನೇ ದಿನ) ಬಳಸಿದ ಅಕ್ಷರ,ಪದ,ವಾಕ್ಯಗಳನ್ನು ಬಿಟ್ಟು ಇತರೆ ಅಕ್ಷರ,ಪದ,ವಾಕ್ಯಗಳನ್ನು ಗುರುತಿಸುವುದು, ವಿಂಗಡಿಸುವುದು, ಮತ್ತು ಓದುವ ಚಟುವಟಿಕೆ ಮಾಡಿಸುವುದು |
| | | ಉದ್ದೇಶಿತ ಬರಹ | ಸಾಮರ್ಥ್ಯ: ಉದ್ದೇಶಿತ ಬರವಣಿಗೆ, ವೀಕ್ಷಣೆ, ಕಲ್ಪನೆ, ಸೃಜನಶೀಲ ಚಿಂತನೆ, ಪರಿಸರ ಪ್ರಜ್ಞೆ,<br>ಚಟುವಟಿಕೆ: 35 ಹವಾಮಾನ ನಕ್ಷೆ (ಗುರಿ–2) ECW-16 (64 ನೇ ದಿನದಿಂದ ಮುಂದುವರೆದಿದೆ)<br>ಉದ್ದೇಶಗಳು:<br>• ಉದ್ದೇಶಿತ ಬರವಣಿಗೆಯನ್ನು ರೂಢಿಸುವುದು.<br>• ವೀಕ್ಷಣಾ ಕೌಶಲವನ್ನು ಬೆಳೆಸುವುದು.<br>• ಸೃಜನಶೀಲ ಚಿಂತನೆಯನ್ನು ಉತ್ತೇಜಿಸುವುದು.<br>• ಪರಿಸರ ಪ್ರಜ್ಞೆ ಮೂಡಿಸುವುದು.<br>ಅಗತ್ಯ ಸಾಮಗ್ರಿಗಳು : ಕಾಗದ/ ಹಾಳೆಗಳು, ಪೆನ್ಸಿಲ್<br>ವಿಧಾನ : ವಾರದ ದಿನಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>– ವಾರದ ದಿನಗಳ ಪಟ್ಟಿಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>– ಗುಂಪು ಚಟುವಟಿಕೆಯ ಸಮಯದಲ್ಲಿ ಆ ದಿನದ ಹವಾಮಾನವನ್ನು ಗಮನಿಸಲು ತಿಳಿಸುವುದು.<br>– ಇದರ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ ಖಾಲಿ ಹಾಳೆಗಳನ್ನ ನೀಡಿ ನಿನ್ನೆ–ಇಂದಿನ ಹವಾಮಾನದ ಚಿತ್ರವನ್ನು ಬರೆಯಲು ತಿಳಿಸುವುದು.<br>– ಮಕ್ಕಳ ಕಾರ್ಯಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು.<br>ತರಗತಿವಾರು ವಿವರ: 2ನೇ ತರಗತಿಯ ಮಕ್ಕಳು ದಿನದ ಹವಾಮಾನವನ್ನು ತಮ್ಮ ಪುಸ್ತಕದಲ್ಲಿ ದಾಖಲಿಸುವಂತೆಯೂ 3ನೇ ತರಗತಿಯ ಮಕ್ಕಳು ತರಗತಿ ಹವಾಮಾನ ನಕ್ಷೆಯಲ್ಲಿ ದಿನದ ಹವಾಮಾನವನ್ನು ದಾಖಲಿಸಲು ತಿಳಿಸುವುದು. |
| | | ಬರವಣಿಗೆಯ ಮಾದರಿ:<br>ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.<br>ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು. | |
| | ಹೊರಾಂಗಣ | ಚಟುವಟಿಕೆ – ರಿಂಗ್ ಮಾಸ್ಟರ್ | |

DRAFT 2022

| | | |
|---|---|---|
| | **ಆಟಗಳು** | ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ಅನುಕರಣ ಮತ್ತು ಕಲ್ಪನಾ ಶಕ್ತಿ ಬೆಳೆಸುವುದು ,.<br>ಬೇಕಾಗುವ ಸಾಮಗ್ರಿ: ಪ್ರಾಣಿಗಳ ಚಿತ್ರಗಳು<br>ವಿಧಾನ:<br>ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಲು ಸೂಚಿಸುವುದು .<br>ಶಿಕ್ಷಕರು ಯಾವ ಪ್ರಾಣಿಯ ಹೆಸರು ಹೇಳುವರೋ ಆ ಪ್ರಾಣಿಯಂತೆ ಕೂಗಲು ಸೂಚಿಸುವುದು<br>ಉದಾ : ನಾಯಿ  ಬೌ ಬೌ<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಪ್ರಾಣಿಗಳ ಚಿತ್ರವನ್ನು ತೋರಿಸಿ ಆ ಪ್ರಾಣಿಗಳಂತೆ ಕೂಗಲು ಸೂಚಿಸುವುದು.** |
| | **ಕಥಾ ಸಮಯ** | **ಶೀರ್ಷಿಕೆ : ಟೋ ಟೋ & ದ ಕ್ಯಾಪ್**<br>**ಸಾಮಗ್ರಿಗಳು : ಬೆರಳು ಗೊಂಬೆಗಳು**<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಆಲೋಚನಾ ಶಕ್ತಿಯನ್ನು ವೃದ್ಧಿಸುವುದು<br>➢ **ಸೃಜನ ಶೀಲತೆಯನ್ನು ಬೆಳೆಸುವುದು.**<br>➢ **ಪ್ರಶ್ನಿಸುವ ಮನೋಭಾವ ಉಂಟುಮಾಡುವುದು.**<br>➢ **ಪದ ಸಂಪತ್ತನ್ನು ಹೆಚ್ಚಿಸುವುದು.**<br>**ವಿಧಾನ :**<br>➢ **ಶಿಕ್ಷಕರು ಮಾತೃಭಾಷೆ ಮತ್ತು ಇಂಗ್ಲೀಷ ಭಾಷೆಯಲ್ಲಿ ಕಥೆಯನ್ನು ಅಭೈಸುವುದು.**<br>➢ **ಕಥೆಯ ಪಾತ್ರಗಳನ್ನು ಶಿಕ್ಷಕರು/ಹಿರಿಯ ವಿದ್ಯಾರ್ಥಿಗಳು ಹೆಸರಿಸುವಾಗ ಕಿರಿಯ ವಿದ್ಯಾರ್ಥಿಗಳು ಪಾತ್ರಗಳ ಚಿತ್ರಗಳನ್ನು ತೋರಿಸಲು ಕೇಳುವುದು.**<br>➢ **ಬೆರಳು ಗೊಂಬೆಗಳನ್ನು ಪ್ರದರ್ಶಿಸಿ ಅವುಗಳ ಹೆಸರುಗಳನ್ನು ಒಮ್ಮೆ ಮಾತೃಭಾಷೆಯಲ್ಲಿ ನಂತರ ಇಂಗ್ಲೀಷ ಭಾಷೆಯಲ್ಲಿ ಹೇಳಿ ಪರಿಚಯಿಸುವುದು.**<br>➢ **ಶಿಕ್ಷಕರು ಬೆರಳುಗೊಂಬೆಗಳನ್ನು ಪ್ರದರ್ಶಿಸಿ ಸಂಭಾಷಣೆ ರೂಪದಲ್ಲಿ ಹೇಳುವುದು.**<br>**ಕಥೆಯನ್ನು ಹೇಳಿದ ನಂತರ ಸರಳ ಪ್ರಶ್ನೆಗಳನ್ನು ಕೇಳಿ.**<br><br>(ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>**ಗಮನಿಸಿ :**<br>✓ ಕಲಿಕಾ ಫಲಗಳನ್ನು ಪರಶೀಲಿಸಿ, ಪೋಷಕರಿಗೆ ವರದಿ ಮಾಡಲು ದಾಖಲೆಗಳನ್ನು ಸಿದ್ಧಪಡಿಸಿ.<br>✓ ನಿಮ್ಮ ಮಕ್ಕಳು ಒಂದನೇ ತರಗತಿಯ ಚಟುವಟಿಕೆಗಳನ್ನು ಕಲಿಯಲು ಸಿದ್ಧರಿದ್ದಾರೆ ಎನ್ನುವುದನ್ನು ಮನದಟ್ಟುಮಾಡಿ.<br>✓ ಒಂದನೇ ತರಗತಿಯ ಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಇದೇ ಮಾದರಿಯಲ್ಲಿ ನಿರ್ವಹಿಸಲು ಸಿದ್ಧರಾಗಿ ಮತ್ತು ಪೋಷಕರೊಂದಿಗೆ ಮಾತನಾಡಿ, ಅವರನ್ನೂ ಇವುಗಳಲ್ಲಿ ತೊಡಗಿಸಿ ಕೊಳ್ಳಲು ಪೂರ್ವ ಸಿದ್ಧತೆ ಮಾಡಿಕೊಳ್ಳಿ. |

DRAFT 22.02.22

# ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

**ವಾರ–12** **ದಿನ–71 (ಶುಕ್ರವಾರ)**

| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
|---|---|---|
| 71 | **ಶುಭಾಶಯ ವಿನಿಮಯ** ***(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)*** | ಸಂಪೂರ್ಣ ವಿದ್ಯಾಪ್ರವೇಶ ಕಾರ್ಯಕ್ರಮದಲ್ಲಿ ಮಕ್ಕಳು ಹೆಚ್ಚು ಆನಂದಿಸಿದ ಚಟುವಟಿಕೆ ಯಾವುದು ಎಂದು ಮಕ್ಕಳಿಂದ ಕೇಳಿ ತಿಳಿದು ಆ ಚಟುವಟಿಕೆಯ ಮೂಲಕ ಮಕ್ಕಳನ್ನು ತರಗತಿಗೆ ಸ್ವಾಗತಿಸುವುದು. |
| | **ಮಾತು ಕತೆ** | ದಿನ 70 ರ ಚಟುವಟಿಕೆಯನ್ನು ಪುನರಾವರ್ತಿಸಿ. |
| | **ನನ್ನ ಸಮಯ(Free Indore play)** | * ಮಗು ಎಲ್ಲಾ ಮೂಲೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದನ್ನು ಹಾಗೂ ಸೂಕ್ತವಾಗಿ ಪೂರ್ಣಗೊಳಿಸಿರುವುದನ್ನು ಖಚಿತ ಪಡಿಸಿಕೊಳ್ಳುವುದು.<br>* ಅಪೂರ್ಣಗೊಳಿಸಿರುವ ಚಟುವಟಿಕೆಗಳನ್ನು ಮಗು ಪೂರ್ಣಗೊಳಿಸಲು ಸಹಕರಿಸುವುದು.<br>* ಮುಂದಿನ ದಿನಗಳಲ್ಲಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಯಾವ ಮಕ್ಕಳ ಕಡೆಗೆ ಹೆಚ್ಚು ಗಮನಹರಿಸಬೇಕೆಂಬ ಬಗ್ಗೆ ಶಿಕ್ಷಕರು ಮಾನಸಿಕವಾಗಿ ಸಿದ್ಧರಾಗುವುದು.<br>* ದಿನದ ಅಂತ್ಯಕ್ಕೆ ಕಲಿಕಾ ಮೂಲೆಗಳಲ್ಲಿ ಮುಂದಿನ ಹಂತಕ್ಕೆ ಹೊಂದಿಸಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವುದು.<br>*** ಕಲಿಕಾ ಸಿದ್ಧತಾ ಚಟುವಟಿಕೆಗಳನ್ನು ಈ ಹಂತದ ಅಂತ್ಯಕ್ಕೆ ನಿಲ್ಲಿಸದೆ ಮುಂದಿನ ಕಲಿಕಾ ಪಯಣದಲ್ಲಿ ಸಾಧ್ಯವಿರುವ ಕಡೆಗಳಲ್ಲಿ ವಿದ್ಯಾಪ್ರವೇಶ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು. ವಿದ್ಯಾಪ್ರವೇಶ ಚಟುವಟಿಕೆಗಳನ್ನು ನಿಪುಣ್ ಭಾರತ ಗುರಿ ಸಾಧನೆಗಳ ಆಶಯದೊಂದಿಗೆ ಮಿಳಿತಗೊಳಿಸಲಾಗಿದ್ದು, ಮಗುವಿನ ಮುಂದಿನ ಕಲಿಕಾ ಹಂತಗಳಲ್ಲಿ ಬಳಸಿಕೊಳ್ಳುವುದು ಆದ್ಯತೆಯಾಗಿರುತ್ತದೆ.** |
| | **ಬುನಾದಿ ಸಂಖ್ಯಾ ಜ್ಞಾನ, ಪರಿಸರದ ಅರಿವು ಮತ್ತು ವೈಜ್ಞಾನಿಕ ಚಿಂತನೆ (ಶಿಕ್ಷಕರಿಂದ ಪ್ರಾರಂಭಿಸುವ(ನಿರ್ದೇಶಿತ ) ಚಟುವಟಿಕೆ)** | **ಸಾಮರ್ಥ್ಯ: ಪರಿಸರದ ಅರಿವು ಮತ್ತು ಆರೋಗ್ಯಕರ ಆಹಾರ ಪದ್ಧತಿ**<br>**ಚಟುವಟಿಕೆ...42 ನೆಲದಡಿ ಇರುವ ಮತ್ತು ನೆಲದ ಮೇಲೆ ಇರುವ ತರಕಾರಿಗಳು (ಗುರಿ 3)**<br>**ಉದ್ದೇಶ:– ಮಣ್ಣಿನ ಒಳಗೆ ಮತ್ತು ಮಣ್ಣಿನ ಹೊರಗೆ ಬೆಳೆಯುವ ತರಕಾರಿಗಳ ಬಗ್ಗೆ ತಿಳಿಯುವುದು.**<br>**ಅಗತ್ಯ ಸಾಮಗ್ರಿಗಳು : ವಿವಿಧ ತರಕಾರಿಗಳ ಮಾದರಿಗಳು**<br>**ವಿಧಾನ : ತರಕಾರಿಗಳ ಬಗ್ಗೆ ಇರುವ ಪದ್ಯವನ್ನು ಮಕ್ಕಳೆದುರು ಹಾಡುವುದು.**<br>**ಬೇಕೆ ಬೇಕೆ ತರಕಾರಿ. . . . . . .**<br>**...........................**<br>**ವಿವಿಧ ತರಕಾರಿಗಳನ್ನು ಮಕ್ಕಳಿಗೆ ತೋರಿಸಿ ಮಣ್ಣಿನೊಳಗೆ( ನೆಲದ ಒಳಗೆ ) ಮತ್ತು ಮಣ್ಣಿನ ಹೊರಗೆ( ನೆಲದ ಮೇಲೆ ) ಬೆಳೆಯುವ ತರಕಾರಿಗಳನ್ನು ಗುರುತಿಸಿ ವಿವರಿಸಿ ಹೇಳುವುದು. ನಿಯಮಿತವಾಗಿ ತರಕಾರಿಗಳನ್ನು ಸೇವಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದು.**<br>**ವಿವಿಧ ರೀತಿಯ ತರಕಾರಿಗಳ ಮಾದರಿಗಳನ್ನು ತೋರಿಸಿ ಇದಕ್ಕೆ ಸಂಬಂಧಿಸಿದ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.**<br>**ಉದಾ:– 1. ನೀನು ನೋಡಿದ ನೆಲದ ಮೇಲೆ ಬೆಳೆಯುವ ತರಕಾರಿಯ ಹೆಸರನ್ನು ಹೇಳು**<br>**2ನೇ ತರಗತಿ**<br>**ಭೂಮಿಯ ಮೇಲೆ ಮತ್ತು ಭೂಮಿಯ ಒಳಗಡೆ ಬೆಳೆಯುವ ತರಕಾರಿಗಳ ಹೆಸರು ಹೇಳುವುದು.**<br>**3ನೇ ತರಗತಿ**<br>**ಭೂಮಿಯ ಮೇಲೆ ಮತ್ತು ಭೂಮಿಯ ಒಳಗಡೆ ಬೆಳೆಯುವ ತರಕಾರಿ/ಆಹಾರ ಧಾನ್ಯಗಳ ಪಟ್ಟಿ ಮಾಡಿಸುವುದು.** |
| | **ಸೃಜನಶೀಲ ಕಲೆ ಹಾಗೂ ಸೂಕ್ಷ್ಮ ಸ್ನಾಯು ಚಲನಾ ಕೌಶಲಗಳು (ಮಕ್ಕಳ ಚಟುವಟಿಕೆ)** | ಸಾಮರ್ಥ್ಯ : ಸೂಕ್ಷ್ಮ ಚಲನಾ ಕೌಶಲಗಳ ಅಭಿವೃದ್ಧಿ ಮತ್ತು ಸೃಜನಶೀಲತೆಯ ವಿಕಾಸ,<br>ಚಟುವಟಿಕೆ; 50 ಎ ವಿವಿಧ ರೀತಿಯ ಅಚ್ಚುಗಳ ರಚನೆ. ಗುರಿ – 1<br>ಉದ್ದೇಶ<br>• ಸೂಕ್ಷ್ಮ ಸ್ನಾಯುಗಳ ಅಭಿವೃದ್ದಿಯಾಗುತ್ತದೆ.<br>• ಕಣ್ಣು ಕೈಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ. |

DRAFT 2022

| | | | |
|---|---|---|---|
| | | • ಕಲ್ಪನಾ ಶಕ್ತಿಯ ಅಭಿವೃದ್ದಿಯಾಗುತ್ತದೆ.<br>ಸಾಮಗ್ರಿಗಳು : ಕಾಗದ/ ದಿನ ಪತ್ರಿಕೆ,ವಿವಿಧ ವಸ್ತುಗಳು , ಅಚ್ಚು ಮಾಡಲು ಬಳಸುವ ವಿವಿಧ ವಸ್ತುಗಳು,ಒರಟು ಬಟ್ಟೆ..ಇತ್ಯಾದಿ<br>ವಿಧಾನ : ಬಣ್ಣದಲ್ಲಿ ಅದ್ದಿ ಅಚ್ಚು ತೆಗೆಯಲು ಬೇರೆ ಬೇರೆ ವಸ್ತುಗಳನ್ನು ಸಂಗ್ರಹಿಸುವುದು. ಉದಾ. ಹಳೆಯ ಬಾಚಣಿಗೆ , ಟ್ವಯಿನ್ ದಾರ ಅಥವಾ ರಬ್ಬರ್ ಬ್ಯಾಂಡಿನಿಂದ ಸುತ್ತಿದ ಬ್ಲಾಕ್ಸ್ , ಪ್ಲಾಸ್ಟಿಕ್ ಅಲ್ಲದ ಹಳೆಯ ಆಟಿಕೆಗಳು ಇತ್ಯಾದಿ..ಹಾಳೆ ವೃತ್ತ ಪತ್ರಿಕೆಯನ್ನು ಪ್ರತಿ ಮಗುವಿಗೂ ನೀಡಿ ವಸ್ತುವನ್ನು ಬಣ್ಣದಲ್ಲಿ ಅದ್ದಿ ಪೇಪರ್ ಮೇಲೆ ಅಚ್ಚುತೆಗೆಯಲು ಹೇಳುವುದು.<br>ವಿವರ; 2ಮತ್ತು 3 ನೇ ತರಗತಿ ಮಕ್ಕಳಿಗೆ ಮೇಲಿನ ಚಟುವಟಿಕೆಯನ್ನೇ ಮಾಡಿಸುವುದು. |
| | ಭಾಷಾ ಅಭಿವೃದ್ಧಿ ಮತ್ತು ಬುನಾದಿ ಸಾಕ್ಷರತೆ | ಆಲಿಸುವುದು ಮತ್ತು ಮಾತನಾಡುವುದು | ಸಾಮರ್ಥ್ಯ : ಪದ ಸಂಪತ್ತಿನ ಅಭಿವೃದ್ಧಿ, ಊಹಿಸುವುದು, ತಂಡದ ಸದಸ್ಯರೊಂದಿಗೆ ಸಹಕಾರದಿಂದ ಕೆಲಸ. ಸೂಚನೆಗಳ ಪಾಲನೆ.<br>ಚಟುವಟಿಕೆ .6 ವಸ್ತುವನ್ನು ಊಹಿಸು (ಗುರಿ–2) **ECL-7**<br>ಉದ್ದೇಶಗಳು:<br>* ಸೂಕ್ತ ಪದ ರಚಿಸುವುದು.<br>* ಸಾಂಘಿಕ ಮನೋಭಾವನೆ ಬೆಳೆಸುವುದು.<br>* ಸೂಚನೆಗಳನ್ನು ಎಚ್ಚರಿಕೆಯಿಂದ ಆಲಿಸಿ ಅನುಸರಿಸುವುದು.<br>* ಪದ ಸಂಪತ್ತನ್ನು ಅಭಿವೃದ್ಧಿ ಪಡಿಸುವುದು.<br>ಅಗತ್ಯ ಸಾಮಗ್ರಿಗಳು : ಬ್ಯಾಗ್, ಲಭ್ಯ ವಸ್ತುಗಳು<br>ವಿಧಾನ : ತರಗತಿಯಲ್ಲಿರುವ ಸೀಮೆ ಸುಣ್ಣ, ರಬ್ಬರ್, ಡಸ್ಟರ್ , ಡೈಸ್ ಮೊದಲಾದ ವಸ್ತುಗಳನ್ನು ಒಂದು ಚೀಲದಲ್ಲಿ ಹಾಕಿ..<br>– ಮಕ್ಕಳನ್ನು ಒಬ್ಬೊಬ್ಬರಾಗಿ ಕರೆದು ಬ್ಯಾಗ್‌ನಲ್ಲಿರುವ ವಸ್ತುಗಳಲ್ಲಿ ಯಾವುದಾದರೂ ಒಂದು ವಸ್ತುವನ್ನು ಸ್ಪರ್ಶಿಸಿ, ಆ ವಸ್ತುಗಳನ್ನು ಊಹಿಸಲು ಹೇಳುವುದು. ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಕ್ಕಳು ವಸ್ತುವನ್ನು ಸರಿಯಾಗಿ ಗುರುತಿಸಲು ಸಹಾಯ ಮಾಡುವುದು.<br>ಉದಾಹರಣೆಗಾಗಿ:<br>• ನೀನು ಸ್ಪರ್ಶಿಸುತ್ತಿರುವ ವಸ್ತು ದೊಡ್ಡದೋ ಚಿಕ್ಕದೋ ?<br>• ನೀನು ಸ್ಪರ್ಶಿಸುತ್ತಿರುವ ವಸ್ತುವಿನ ಆಕಾರ ಹೇಗಿದೇ?<br>• ಯಾವ್ಯದರಿಂದ ಆ ವಸ್ತು ಮಾಡಲ್ಪಟ್ಟಿದೆ?<br>• ನೀನು ಸ್ಪರ್ಶಿಸುತ್ತಿರುವ ವಸ್ತು ಗಟ್ಟಿಯಾಗಿದೆಯೇ? ಮೃದುವಾಗಿದೆಯೇ?<br>• ನೀನು ಸ್ಪರ್ಶಿಸುತ್ತಿರುವ ವಸ್ತು ಏನಿರಬಹುದು?<br>– ಮಕ್ಕಳು ಗುರುತಿಸಿದ ವಸ್ತುಗಳ ಕುರಿತು ಅವರೊಂದಿಗೆ ಚರ್ಚಿಸುವುದು.<br>ತರಗತಿಯ ವಿವರ: 2 ನೇ ತರಗತಿಯ ಮಕ್ಕಳು ತಾವು ಗುರುತಿಸಿದ ವಸ್ತುವಿನ ಬಗ್ಗೆ 3–4 ವಾಕ್ಯಗಳಲ್ಲಿ ಮಾತನಾಡುವುದು. 3 ನೇ ತರಗತಿಯ ಮಕ್ಕಳು 2 ರಿಂದ 3 ನಿಮಿಷ ಆ ವಸ್ತುವಿನ ಬಗ್ಗೆ ಮಾತನಾಡುವುದು. |
| | | ಅರ್ಥಗ್ರಹಿಕೆಯೊಂದಿಗಿನ ಓದು | ಸಾಮರ್ಥ್ಯ: ಮುದ್ರಿತ ಪಠ್ಯದ ಅರಿವು, ಪದ ಗುರುತಿಸುವಿಕೆ, ಅರ್ಥಗ್ರಹಿಕೆ, ಪದ ಸಂಪತ್ತಿನ ಬೆಳವಣಿಗೆ ಮತ್ತು ಪರಿಸರದ ಅರಿವು.<br>ಚಟುವಟಿಕೆ....18 ಚಿತ್ರ ಸಂಪುಟ (ಗುರಿ–2) ವಿಷಯ: 'ನೆಲದ ಮೇಲೆ ನೋಡಿರುವ ಪ್ರಾಣಿಗಳು/ಪಕ್ಷಿಗಳು/ವಸ್ತುಗಳು' ಅವಧಿ :20<br>ಉದ್ದೇಶ: ಮಕ್ಕಳು ಗುಂಪಿನಲ್ಲಿ ಕುಳಿತು ತಯಾರಿಸಿದ ಗೋಡೆ ಪತ್ರಿಕೆಗಳನ್ನು ರಚಿಸಿ ಮಂಡಿಸುವುದು<br>ಅಗತ್ಯ ಸಾಮಗ್ರಿಗಳು : ಚಾರ್ಟಗಳು, ಸ್ವರಚಿತ ಚಿತ್ರಗಳು, ಕ್ರೇಯಾನ್ಸ್, ಅಂಟು, ಇಂಚುಪಟ್ಟಿ, ಟ್ಯಾಗ್<br>ವಿಧಾನ : ಮಕ್ಕಳು ಗುಂಪುಗಳಲ್ಲಿ ಅಗತ್ಯ ಸಾಮಗ್ರಿ ಬಳಸಿ ನೆಲದ ಮೇಲೆ ನೋಡಿರುವ ಪ್ರಾಣಿಗಳು/ಪಕ್ಷಿಗಳು/ವಸ್ತುಗಳ ಬಗ್ಗೆ ಗೋಡೆ ಪತ್ರಿಕೆ ತಯಾರಿಸಲು ಅಗತ್ಯ ಸಹಾಯ ನೀಡುವುದು. ರಚಿಸಿದ ಗೋಡೆ ಪತ್ರಿಕೆಯನ್ನು ತರಗತಿಯಲ್ಲಿ ಮಂಡಿಸಲು ಅವಕಾಶ ನೀಡುವುದು.<br>ಸಿದ್ಧವಾದ ಗೋಡೆಪತ್ರಿಕೆಗಳನ್ನು ತರಗತಿ ಕೋಣೆಯಲ್ಲಿ ಪ್ರದರ್ಶಿಸುವುದು. |

DRAFT 2022

ಶಿಕ್ಷಕರು 2 ಮತ್ತು 3ನೇ ತರಗತಿಯ ಮಕ್ಕಳಿಗೆ ಸಹಾಯ ಒದಗಿಸಿ ಗುಂಪುಗಳಲ್ಲಿ ಯೋಜನಾಕಾರ್ಯಗಳನ್ನು ಮಾಡಲು ತಿಳಿಸುವುದು.

**ಉದ್ದೇಶಿತ ಬರಹ**

ಸಾಮರ್ಥ್ಯ : ಮಕ್ಕಳೊಂದಿಗೆ ಬರವಣಿಗೆ, ಉದ್ದೇಶಿತ ಬರವಣಿಗೆ, ಅವಧಾನ ಮತ್ತು ಆಲಿಸುವುದು, ಸೃಜನಶೀಲ ಚಿಂತನೆ, ಪದಸಂಪತ್ತಿನ ಅಭಿವೃದ್ಧಿ.

ಚಟುವಟಿಕೆ ಸಂಖ್ಯೆ : 32 ಹಂಚಿತ ಬರೆಹ (ಗುರಿ : 2) **ECW-8**

ಉದ್ದೇಶಗಳು:

- ಹಂಚಿತ ಬರವಣಿಗೆಯನ್ನು ಪರಿಚಯಿಸುವುದು.
- ಉದ್ದೇಶಕ್ಕನುಸಾರವಾಗಿ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿಸುವುದು.
- ಅವಧಾನದೊಂದಿಗೆ ಉದ್ದೇಶಿತ ಬರೆಹದಲ್ಲಿ ತೊಡಗಿಸುವುದು.
- ಸೃಜನಾತ್ಮಕವಾಗಿ ಚಿಂತಿಸಿ ಅವುಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವುದು.
- ಪದ ಸಂಪತ್ತನ್ನು ಅಭಿವೃದ್ಧಿಪಡಿಸುವುದು.

ಅಗತ್ಯ ಸಾಮಗ್ರಿಗಳು: ಕಪ್ಪುಹಲಗೆ ಡ್ರಾಯಿಂಗ್ ಶೀಟ್

ವಿಧಾನ: ಹಂಚಿತ ಬರೆಹ ಚಟುವಟಿಕೆಗಳನ್ನು ತಿಂಗಳಿಗೆ ಎರಡು ಅಥವಾ ಮೂರು ಬಾರಿ ಆಯೋಜಿಸುವುದು. ಒಂದು ವಿಷಯವನ್ನು ನೀಡಿ ಆ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಕಥೆಯ ಮೂಲಕ ಅಥವಾ ಬರವಣಿಗೆ ಮೂಲಕ ಹಂಚಿಕೊಳ್ಳಲು ತಿಳಿಸುವುದು.

ಸಲಹಾತ್ಮಕ ಸೂಚಿತ ವಿಷಯ:– ಶಾಲಾ ದಿನಚರಿ

ಗಮನಿಸಬೇಕಾದ ಅಂಶಗಳು:

- ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಾಕ್ಯಗಳನ್ನು ರಚಿಸಲು ಅಗತ್ಯ ಸುಳಿವುಗಳನ್ನು ನೀಡುವುದು. ಮಕ್ಕಳೊಂದಿಗೆ ಬರವಣಿಗೆಯಲ್ಲಿ ತೊಡಗಿಕೊಳ್ಳುವ ಮೂಲಕ ಬರವಣಿಗೆಯ ಪ್ರಾತ್ಯಕ್ಷಿಕೆ ನೀಡುವುದು
- ಶಿಕ್ಷಕರು ಮೊದಲನೇ ವಾಕ್ಯವನ್ನು ಬರೆದು ಓದುವುದು. ನಂತರ ಮಕ್ಕಳು ತಮ್ಮ ಸ್ವಂತ ವಾಕ್ಯವನ್ನು ಹೇಳಿ ಬರೆಯಲು ತಿಳಿಸುವುದು.
- ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಪ್ರತಿಕ್ರಿಯಿಸಲು ಅವಕಾಶ ಕಲ್ಪಿಸಬಹುದು. ಅಂತಹ ಸನ್ನಿವೇಶದಲ್ಲಿ ಶಿಕ್ಷಕರು ಅದನ್ನು ಶಾಲಾ ಭಾಷೆಯಲ್ಲಿ ಅನುವಾದಿಸಿ ಹೇಳುವುದು.

ತರಗತಿವಾರು ವಿವರ: 1ನೇ ತರಗತಿಯವರು ವಿವರಿಸಿದ ಅಂಶಗಳನ್ನು 2ನೇ ಹಾಗೂ 3ನೇ ತರಗತಿಯ ಮಕ್ಕಳು ಬರವಣಿಗೆ ಮೂಲಕ ಅಭಿವ್ಯಕ್ತಿಪಡಿಸಲು ತಿಳಿಸುವುದು.

ಬರವಣಿಗೆಯ ಮಾದರಿ:

ಶಿಕ್ಷಕರು ಮಕ್ಕಳೆದುರು ಕಪ್ಪುಹಲಗೆಯಲ್ಲಿ ಬರೆಯುವುದು. ಬರವಣಿಗೆಯ ಸರಿಯಾದ ಕ್ರಮವನ್ನು ಮಕ್ಕಳು ನೋಡಲು ಅವಕಾಶ ಕಲ್ಪಿಸುವುದು.


ಮಕ್ಕಳ ಹೆಸರು, ಮಕ್ಕಳು ಬರೆದ ಚಿತ್ರಗಳ ಹೆಸರು ಮೊದಲಾದವುಗಳನ್ನು ಮಕ್ಕಳೆದುರೇ ಬರೆಯುವುದು. ಶಿಕ್ಷಕರು ತರಗತಿಯಲ್ಲಿ ಏನನ್ನೇ ಬರೆಯುವುದಾದರೂ ಮಕ್ಕಳ ಎದುರಿನಲ್ಲಿಯೇ ಬರೆಯುವುದು.

**ಹೊರಾಂಗಣ ಆಟಗಳು**

ಚಟುವಟಿಕೆ – ನಿಧಿಯ ಭೇಟಿ

ಸಾಮರ್ಥ್ಯ: ಸ್ಥೂಲ ಸ್ನಾಯು ಚಲನ ಕೌಶಲ ಬೆಳವಣಿಗೆ, ಸಹಕಾರ ಮನೋಭಾವ ಬೆಳವಣಿಗೆ.

ಬೇಕಾಗುವ ಸಾಮಗ್ರಿ: ಬಣ್ಣದ ಕಡ್ಡಿಗಳು / ಬಣ್ಣದ ಬಳಪ



ವಿಧಾನ:

- ಮಕ್ಕಳನ್ನು ನಾಲ್ಕು ಸಮನಾದ ಗುಂಪು ಮಾಡಲು ಸೂಚಿಸುವುದು .
- ಪ್ರತಿ ಗುಂಪಿಗೆ ಒಂದೊಂದು ಬಣ್ಣವನ್ನು ನಿಗದಿಪಡಿಸುವುದು .
- ಕೆಂಪು 2 ಹಸಿರು 3 –ನೀಲಿ 4 –ಹಳದಿ
- ನೆಲದ ಮೇಲೆ ನಾಲ್ಕು ಮನೆಗಳನ್ನು ಬರೆಯುವುದು . ಈ ನಾಲ್ಕು ಮನೆಗಳು ನಾಲ್ಕು ಬಣ್ಣಗಳನ್ನು ಪ್ರತಿನಿದಿಸುವಂತಿರಬೇಕು .

DRAFT 22.02.22

| | | |
|---|---|---|
| | | • ಆಟ ಪ್ರಾರಂಭಕ್ಕೂ ಮೊದಲು ಬಣ್ಣದ ಕಡ್ಡಿಗಳು /ವಸ್ತುಗಳನ್ನು ಬೇರೆ ಬೇರೆ ಜಾಗದಲ್ಲಿ ಹರಡಲು ಸೂಚಿಸುವುದು.<br>• ಆಟ ಪ್ರಾರಂಭವಾದಾಗ ಮಕ್ಕಳು ತಮಗೆ ಬಂದ ಬಣ್ಣದ ವಸ್ತುಗಳನ್ನು ಹುಡುಕಿ ತಂದು ತಮ್ಮ ಬಣ್ಣದ ಮನೆಯಲ್ಲಿ ಜೋಡಿಸಲು ಸೂಚಿಸುವುದು .<br>• ಯಾವ ತಂಡ ತಮಗೆ ಕೊಟ್ಟ ಬಣ್ಣದ ಎಲ್ಲ ವಸ್ತುಗಳನ್ನು ಅತಿ ವೇಗದಲ್ಲಿ ಹುಡುಕಿ ತರುತ್ತಾರೋ ಅವರು ವಿಜೇತರು.<br>• **ಎರಡನೇ ಮತ್ತು ಮೂರನೇ ತರಗತಿ ಮಕ್ಕಳಿಗೆ ಇದೆ ಚಟುವಟಿಕೆಯನ್ನು ಮುಂದುವರಿಸುವುದು .** |
| | **ಕಥಾ ಸಮಯ** | **ಶೀರ್ಷಿಕೆ : ಟೋ ಟೋ & ದ ಕ್ಯಾಪ್**<br>**ಸಾಮಗ್ರಿಗಳು : ಸಾಹಿತ್ಯ, ಪಪೆಟ್ ಮತ್ತು ಸ್ಕ್ರೀನ್**<br>**ಉದ್ದೇಶ :**<br>➢ ಆಲಿಸುವ ಸಾಮರ್ಥ್ಯ ಬೆಳೆಸುವುದು.<br>➢ ಪದಸಂಪತ್ತನ್ನು ಹೆಚ್ಚಿಸುವುದು.<br>➢ **ಸಂಭಾಷಣೆಯ ಕೌಶಲ ರೂಢಿಸುವುದು.**<br>**ವಿಧಾನ :**<br>➢ ಕಥೆಯನ್ನು ಕನ್ನಡ ಮತ್ತು ಇಂಗ್ಲೀಷ ಭಾಷೆಯಲ್ಲಿ ಹೇಳುವುದು.<br>➢ ಸಿದ್ಧಪಡಿಸಿದ ಪಪೆಟ್ ಮತ್ತು ಸ್ಕ್ರೀನನ್ನು ಬಳಸಿ, ಹಿರಿಯ ವಿದ್ಯಾರ್ಥಿಗಳಿಗೆ ಪಾತ್ರಗಳನ್ನು ಹಂಚಿ ಸಂಭಾಷಣೆಯನ್ನು ಶಿಕ್ಷಕರು ಹೇಳಿಕೊಟ್ಟಂತೆ ಕನ್ನಡ ಮತ್ತು ಇಂಗ್ಲೀಷ ಭಾಷೆಯಲ್ಲಿ ಪುನರುಚ್ಚರಿಸಲು ಸಹಕರಿಸಿ.<br>➢ ಕಥಾಸಮಯವನ್ನು ಮನೋರಂಜನಾತ್ಮಕವಾಗಿ ಸೃಜಿಸುವುದು.<br>**ಕಥೆಯನ್ನು ಹೇಳಿದ ನಂತರ ಪ್ರಶ್ನೆಗಳನ್ನು ಕೇಳಿ.**<br>➢ (ಕಥೆಯನ್ನು ಆನಂದಿಸುವುದರಜೊತೆಗೆ ಆಲಿಸುತ್ತಿದ್ದಾರೆಎನ್ನುವುದನ್ನು ಖಚಿತಪಡಿಸಿಕೊಳ್ಳುವುದು) |
| | **ಮತ್ತೆ ಸಿಗೋಣ** | • ಈ ದಿನ ನಿರ್ವಹಿಸಿದ ಚಟುವಟಿಕೆಗಳನ್ನು ಪುನರಾವರ್ತಿಸಿ/ನೆನಪಿಸಿ<br>• ಈ ದಿನ ಮಕ್ಕಳು ನಿರ್ವಹಿಸಿದ ಎಲ್ಲಾ ಚಟುವಟಿಕೆಗಳನ್ನು ಪೋಷಕರೊಂದಿಗೆ ಮತ್ತು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸಿ.<br>• ಮರುದಿನ ಮಕ್ಕಳು ಸಂತೋಷದಿಂದ ಹಿಂದಿರುಗಲು ಒಂದು ಚಿಕ್ಕ ಸಂತಸದಾಯಕ ಸನ್ನಿವೇಶವನ್ನು ಏರ್ಪಡಿಸಿ, ಬೀಳ್ಕೊಡಿ.<br>**ಗಮನಿಸಿ :**<br>✓ ಕಲಿಕಾ ಫಲಗಳನ್ನು ಪರಿಶೀಲಿಸಿ, ಪೋಷಕರಿಗೆ ವರದಿ ಮಾಡಲು ದಾಖಲೆಗಳನ್ನು ಸಿದ್ಧಪಡಿಸಿ.<br>✓ ನಿಮ್ಮ ಮಕ್ಕಳು ಒಂದನೇ ತರಗತಿಯ ಚಟುವಟಿಕೆಗಳನ್ನು ಕಲಿಯಲು ಸಿದ್ಧರಿದ್ದಾರೆ ಎನ್ನುವುದನ್ನು ಮನದಟ್ಟುಮಾಡಿ.<br>✓ ಒಂದನೇ ತರಗತಿಯ ಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಇದೇ ಮಾದರಿಯಲ್ಲಿ ನಿರ್ವಹಿಸಲು ಸಿದ್ಧರಾಗಿ ಮತ್ತು ಪೋಷಕರೊಂದಿಗೆ ಮಾತನಾಡಿ, ಅವರನ್ನೂ ಇವುಗಳಲ್ಲಿ ತೊಡಗಿಸಿ ಕೊಳ್ಳಲು ಪೂರ್ವ ಸಿದ್ಧತೆ ಮಾಡಿಕೊಳ್ಳಿ. |

# ವಿದ್ಯಾ ಪ್ರವೇಶ 72 ದಿನಗಳ ದಿನವಹಿ ಚಟುವಟಿಕೆಗಳು

## ವಾರ–12 ದಿನ–72 (ಶನಿವಾರ)

| | | |
|---|---|---|
| | **ಪ್ರತಿಬಿಂಬ (ತರಗತಿಯಲ್ಲಿನ ನಿರಂತರ ಮೌಲ್ಯಮಾಪನ)** | * ವಿವಿಧ ತಂತ್ರಗಳ ಮೂಲಕ (ವೀಕ್ಷಣೆ, ತಪಶೀಲು ಪಟ್ಟಿ, ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳು, ವೀಡಿಯೋ, ಆಡಿಯೋ ತುಣುಕುಗಳು, ಸಾಂದರ್ಭಿಕ ಟಿಪ್ಪಣಿಗಳು ಇತ್ಯಾದಿ) ನೀವು ಸಂಗ್ರಹಿಸಿದ ಮೌಲ್ಯಮಾಪನ ದತ್ತಾಂಶವನ್ನು ಪುನರಾವಲೋಕಿಸಿ.<br>* ಪ್ರತಿ ಮಗುವಿನ ವೈಯಕ್ತಿಕ ಅಗತ್ಯತೆಗನುಗುಣವಾಗಿ ಮುಂದಿನ ವಾರದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸಿ.<br>* ಕಲಿಕೆಯ ಮೂರೂ ಅಭಿವೃದ್ಧಿ ಗುರಿಗಳಲ್ಲಿ ಸಾಧನೆಯ ಮೌಲ್ಯಮಾಪನವನ್ನು ಪುನರಾವಲೋಕಿಸಿ. |

DRAFT 2022

# 4.4 ತಿಂಗಳುವಾರು ಮೌಲ್ಯಾಂಕನ ಚೌಕಟ್ಟು

## (ಶಾಲೆಗಾಗಿ ವಿದ್ಯಾರ್ಥಿಗಳ ಪೂರ್ವಸಿದ್ಧತೆಯನ್ನು ಅನುಪಾಲಿಸುವುದು)

## ಮೂರನೇ ತಿಂಗಳು

**ಉದ್ದೇಶಗಳು:** ಮೂಲಭೂತ ಕಲಿಕೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು.

ಎತ್ತರ ಮತ್ತು ತೂಕದ ಅಳತೆ

| ವಿದ್ಯಾರ್ಥಿ ಹೆಸರು | | | ತರಗತಿ | | |
|---|---|---|---|---|---|
| ಎತ್ತರ ಮತ್ತು ತೂಕದ ಅಳತೆ | | | | | |
| ತೂಕ: | | | ಎತ್ತರ: | | |
| ವೈಯುಕ್ತಿಕ ಸ್ವಚ್ಛತೆ (ಸಂಬಂಧಿಸಿದ ಕಾಲಂ ಅಲ್ಲಿ ✓ ಗುರುತು ಹಾಕಿ) | | | | | |
| | ಸ್ವಚ್ಛವಾಗಿದೆ | ಸುಧಾರಿಸಬೇಕಿದೆ | | ಸ್ವಚ್ಛವಾಗಿದೆ | ಸುಧಾರಿಸಬೇಕಿದೆ |
| ಬಟ್ಟೆ: | | | ಉಗುರುಗಳು: | | |
| ಹಲ್ಲುಗಳು: | | | ಕಣ್ಣುಗಳು: | | |
| ಕಿವಿಗಳು: | | | ಮೂಗು: | | |
| ಕೂದಲು | | | | | |

| ದೈನಂದಿನ ಚಟುವಟಿಕೆಗಳ ಹೊಂದಾಣಿಕೆ ಮತ್ತು ಅನುಸರಿಸುವಿಕೆ | ಅಪರೂಪಕ್ಕೆ | ಕೆಲವು ಸಲ | ಯಾವಾಗಲೂ |
|---|---|---|---|
| ಒಳ್ಳೆಯ ಸ್ಪರ್ಶ/ಕೆಟ್ಟ ಸ್ಪರ್ಶದ ತಿಳುವಳಿಕೆಯನ್ನು ಪ್ರದರ್ಶಿಸುತ್ತಾನೆ/ಳೆ. | | | |
| ಇತರರೊಂದಿಗೆ ಸಾಮಾಜಿಕ ಸಹಸಂಬಂಧಗಳನ್ನು ಹೊಂದಲು ಪ್ರಯತ್ನಿಸುತ್ತಾನೆ/ಳೆ. | | | |
| ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾನೆ/ಳೆ. | | | |
| ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುತ್ತಾನೆ/ಳೆ ಮತ್ತು ಹೊಂದಾಣಿಕೆಗಳನ್ನು ಮಾಡುತ್ತಾನೆ/ಳೆ. | | | |
| ಸರಿ ಮತ್ತು ತಪ್ಪುಗಳನ್ನು ಗುರುತಿಸುತ್ತಾನೆ/ಳೆ. | | | |
| ಸಮಸ್ಯೆಗಳನ್ನು ಪರಿಹರಿಸುವ ಮಾರ್ಗಗಳ ಕುರಿತು ಚರ್ಚಿಸುತ್ತಾನೆ/ಳೆ. | | | |
| ಶಾಲೆಯಲ್ಲಿ ವಯಸ್ಕರು, ಶಿಕ್ಷಕರು ಅಥವಾ ಮಕ್ಕಳಿಗೆ ಸಹಾಯ ಮಾಡುತ್ತಾನೆ/ಳೆ. | | | |
| ಇತರರ ಭಾವನೆಗಳು ಮತ್ತು ಅಗತ್ಯತೆಗಳ ಕುರಿತು ಸಂವೇದನೆಯನ್ನು ವ್ಯಕ್ತಪಡಿಸುತಾನೆ/ಳೆ. (ವಿಶೇಷವಾಗಿ ದಿವ್ಯಾಂಗ ಮಕ್ಕಳು) | | | |
| ಸ್ವಂತ ವಿಷಯವನ್ನು ಹಂಚಿಕೊಳ್ಳುವ ಮೂಲಕ ಭ್ರಾತೃತ್ವ ಮತ್ತು ತಂಡ ಸ್ಫೂರ್ತಿ ಪ್ರರ್ದಸುತ್ತಾನೆ/ಳೆ. | | | |
| ಬಹುಹಂತದ ಸೂಚನೆಗಳನ್ನು ಪಾಲಿಸುತಾನೆ/ಳೆ. | | | |
| ವಸ್ತುಗಳನ್ನು ಸರಿಯಾದ ಜಾಗದಲ್ಲಿ ಜೋಡಿಸುತ್ತಾನೆ/ಳೆ. | | | |
| ಪ್ರಾಣಿಗಳ ಹಾಗೂ ಸಸ್ಯಗಳ ಕುರಿತಾಗಿ ಕಾಳಜಿ ತೋರುತ್ತಾನೆ/ಳೆ. | | | |
| **ಹೊರಾಂಗಣ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ** | **ಸಹಾಯದ ಅವಶ್ಯಕತೆ ಇದೆ** | **ಕಷ್ಟ ಪಟ್ಟುಮಾಡ ುತ್ತಾನೆ/ಳೆ** | **ಮಾಡುತ್ತಾನೆ** |
| ಚೆಂಡಿನಿಂದ ಗುರಿಯಿಡುತ್ತಾನೆ/ಳೆ. | | | |
| ಚೆಂಡನ್ನು ಹಿಡಿಯುತ್ತಾನೆ/ಳೆ. | | | |
| ಕುಪ್ಪಳಿಸುತ್ತಾನೆ/ಳೆ , ಕುಂಟು ಓಟದಲ್ಲಿ ಭಾಗವಹಿಸುತ್ತಾನೆ/ಳೆ | | | |
| ಹಗ್ಗ ಮತ್ತು ಏಣಿಯನ್ನು ಆತ್ಮವಿಶ್ವಾಸದಿಂದ ಏರುತ್ತಾನೆ/ಳೆ. | | | |

DRAFT 2022

| | | | |
|---|---|---|---|
| ಯೋಗ, ಆಟ ಮತ್ತು ನೃತ್ಯದಲ್ಲಿ ಭಾಗವಹಿಸುತ್ತಾನ್ತೆ/ಳೆ. | | | |
| ಚೆಂಡನ್ನು ಗುರಿಯೆಡೆಗೆ ಒದೆಯುತ್ತಾನೆ/ಳೆ. | | | |
| ಟೈರುಗಳನ್ನು/ಬ್ಯಾರೆಲ್‌ಗಳನ್ನು ತಳ್ಳುತ್ತಾನೆ/ಳೆ. | | | |
| ಸುಲಭವಾಗಿ ಚೆಂಡನ್ನು ಪುಟಿಸುತ್ತಾನೆ/ಳೆ. | | | |
| ಯೋಗ ಸ್ಟ್ರೆಚಿಂಗ್ ವ್ಯಾಯಾಮ ಮತ್ತು ನೃತ್ಯದಲ್ಲಿ ಚುರುಕುತನವನ್ನು ತೋರಿಸುತ್ತಾನೆ/ಳೆ. | | | |
| **ಸೃಜನಾತ್ಮಕತೆ, ಸೌಂದರ್ಯ ಪ್ರಜ್ಞೆ ಹಾಗು ಸ್ನಾಯು ಚಲನಾ ಅಭಿವೃದ್ಧಿಗಾಗಿ ಕಲಾ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ** | **ಸಹಾಯದ ಅವಶ್ಯಕತೆ ಇದೆ** | **ಕಷ್ಟ ಪಟ್ಟುಮಾಡ ುತ್ತಾನೆ/ಳೆ** | **ಮಾಡುತ್ತಾನೆ** |
| ಸರಳ ಚಿತ್ರಗಳನ್ನು ಬಿಡಿಸುತ್ತಾನೆ/ಳೆ. | | | |
| ಗೆರೆಗಳ ಒಳಗೆ ಚಿತ್ರಗಳಿಗೆ ಬಣ್ಣ ನೀಡುತ್ತಾನೆ/ಳೆ. | | | |
| ವಸ್ತುಗಳನ್ನು ಸರಿಯಾದ ರೀತಿಯಲ್ಲಿ ತಿದ್ದುತ್ತಾನೆ. | | | |
| ಕತ್ತರಿ ಬಳಸಿ ಚಿತ್ರಗಳನ್ನು ಕತ್ತರಿಸುತ್ತಾನೆ/ಳೆ ಮತ್ತು ಅಂಟಿಸುತ್ತಾನೆ/ಳೆ. | | | |
| ಬೆರಳುಗಳನ್ನು ಬಳಸಿ ಮುದ್ರಿಸುತ್ತಾನೆ/ಳೆ. | | | |
| ಬಿಂದುಗಳನ್ನು ಜೋಡಿಸಿ ಚಿತ್ರಕ್ಕೆ ಬಣ್ಣ ಹಾಕುತ್ತಾನೆ/ಳೆ. | | | |
| ಕೊಲಾಜ್ ಮಾಡುತ್ತಾನೆ/ಳೆ. | | | |
| ಸ್ಟ್ರಿಂಗ್‌ಗಳು ಅಥವಾ ಲೇಸ್‌ಗಳು ಇತ್ಯಾದಿಗಳನ್ನು ಬಳಸಿ ವಿಭಿನ್ನ ವಿನ್ಯಾಸಗಳನ್ನು ಮಾಡುತ್ತಾನೆ/ಳೆ. | | | |
| **ಸಂಖ್ಯಾ ಜ್ಞಾನ ಹಾಗೂ ಪರಿಸರ ಪ್ರಜ್ಞೆಯ ಪ್ರದರ್ಶಿಸುವಿಕೆ** | **ಸಹಾಯದ ಅವಶ್ಯಕತೆ ಇದೆ** | **ಕಷ್ಟ ಪಟ್ಟುಮಾಡ ುತ್ತಾನೆ/ಳೆ** | **ಮಾಡುತ್ತಾನೆ** |
| ಸರಳವಾದ ನೈಸರ್ಗಿಕ ವಿದ್ಯಮಾನಗಳನ್ನು ಗಮನಿಸುತ್ತಾನೆ/ಳೆ ಪರಿಶೋಧಿಸುತ್ತಾನೆ/ಳೆ ಮತ್ತು ವಿವರಿಸುತ್ತಾನೆ/ಳೆ | | | |
| 1 ರಿಂದ 10 ರವರೆಗಿನ ಸಂಖ್ಯೆಯಲ್ಲಿನ ಹೆಚ್ಚಳದ ತಿಳುವಳಿಕೆಯನ್ನು ಪ್ರದರ್ಶಿಸುತ್ತಾನೆ/ಳೆ. | | | |
| ಒಂದರಿಂದ ಹತ್ತರವರೆಗೆ ಅನುಕ್ರಮವಾಗಿ ಎಣಿಸುತ್ತಾನೆ/ಳೆ. | | | |
| ಗುಂಪು ಮಾಡಿದಾಗ ಹೆಚ್ಚು ಅಥವಾ ಕಡಿಮೆ ಪ್ರಮಾಣವನ್ನು ನಿರ್ಧರಿಸುತ್ತಾನೆ/ಳೆ. | | | |
| ಗುಂಡಿಗಳು, ಬೀಜಗಳು, ಇತ್ಯಾದಿ ವಸ್ತುಗಳನ್ನು ಬಳಸಿಕೊಂಡು ಅಂಕಿಗಳ ಆಕಾರಗಳನ್ನು ರೂಪಿಸುತ್ತಾನೆ/ಳೆ. | | | |
| 1 ರಿಂದ 10 ರವರೆಗಿನ ಅಂಕಿಗಳನ್ನು ಬರೆಯುತ್ತಾನೆ/ಳೆ. | | | |
| ವಿನ್ಯಾಸಗಳನ್ನು ರಚಿಸುತ್ತಾನೆ/ಳೆ ಮತ್ತು ವಿಸ್ತರಿಸುತ್ತಾನೆ/ಳೆ. | | | |
| ಸಂಕೀರ್ಣ ಮೇಜ್‌ಗಳನ್ನು ಅಥವಾ ಒಗಟುಗಳನ್ನು ಪರಿಹರಿಸುತ್ತಾನೆ/ಳೆ. | | | |
| ವಸ್ತುಗಳನ್ನು ಮತ್ತು ಘಟನೆಗಳನ್ನು ಒಂದು ಅನುಕ್ರಮದಲ್ಲಿ ಯೋಚಿಸಿ ಮತ್ತು ಜೋಡಿಸುತ್ತಾನೆ/ಳೆ ಮತ್ತು ಅದನ್ನು ನಿರೂಪಿಸುತ್ತಾನೆ/ಳೆ. | | | |
| ಪ್ರಯೋಗಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾನೆ/ಳೆ. | | | |
| ಹಿರಿಯರ ಮಾರ್ಗದರ್ಶನದಲ್ಲಿ ಸರಳವಾದ ನೈಸರ್ಗಿಕ ವಿದ್ಯಮಾನಗಳನ್ನು ಗಮನಿಸುತ್ತಾನೆ/ಳೆ ಅಥವಾ ಅನ್ವೇಷಿಸುತ್ತಾನೆ/ಳೆ. | | | |
| ಹಬ್ಬಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾನೆ/ಳೆ. | | | |
| ಸಸ್ಯದ ಭಾಗಗಳು ಮತ್ತು ಅದರ ಬೆಳವಣಿಗೆಗೆ ಯಾವ ಅಂಶಗಳು ಬೇಕಾಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾನೆ/ಳೆ. | | | |
| ಹಣ್ಣುಗಳು ಮತ್ತು ತರಕಾರಿಗಳನ್ನು ಬಣ್ಣ, ಲಕ್ಷಣ ಮತ್ತು ರುಚಿಯಿಂದ ಗುರುತಿಸುತ್ತಾನೆ/ಳೆ. | | | |
| ಸಾಕು ಪ್ರಾಣಿ ಹಾಗೂ ಕಾಡು ಪ್ರಾಣಿಗಳ ನಡುವೆ ವ್ಯತ್ಯಾಸವನ್ನು ಗುರುತಿಸಿತ್ತಾನೆ/ಳೆ. | | | |
| ಹಗಲು ಮತ್ತು ರಾತ್ರಿಯ ಸಮಯದಲ್ಲಾಗುವ ಭೌತಿಕ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳುತ್ತಾನೆ/ಳೆ. | | | |
| **ಮೌಖಿಕ ಅಭಿವ್ಯಕ್ತಿಯ ಪ್ರದರ್ಶನ** | **ಅಪರೂಪಕ್ಕೆ** | **ಕೆಲವು ಸಲ** | **ಯಾವಾಗಲೂ** |
| ಆಲಿಸಿದ ನಂತರ ಗ್ರಹಿಸಿ ಉತ್ತರಿಸುತ್ತಾನೆ/ಳೆ. | | | |

| | | | |
|---|---|---|---|
| ಪೂರ್ಣ ವಾಕ್ಯಗಳಲ್ಲಿ ವಿವರವಾಗಿ ವಿವರಿಸುತ್ತಾನೆ. | | | |
| ಅರ್ಥಪೂರ್ಣ ಸಂಭಾಷಣೆಗಳಲ್ಲಿ ತೊಡಗಿಸಿಕೊಳ್ಳುತ್ತಾನೆ/ಳೆ. | | | |
| ಪದಗಳ ಆರಂಭದ,ಮಧ್ಯದ ಮತ್ತು ಅಂತ್ಯದ ಧ್ವನಿಯನ್ನು ಗುರುತಿಸುತ್ತಾನೆ/ಳೆ. | | | |
| ಪದಗಳಿಗೆ ಅಕ್ಷರಗಳನ್ನು ಸೇರಿಸಿ ಹೊಸ ಪದಗಳನ್ನು ರಚಿಸುತ್ತಾರೆ. | | | |
| ಸೃಜನಾತ್ಮಕವಾಗಿ ಉತ್ತರಿಸುತ್ತಾನೆ/ಳೆ ಅಥವಾ ಪ್ರಶ್ನೆಗಳನ್ನು ಕೇಳುತ್ತಾಳೆ. | | | |
| **ಪ್ರಾರಂಭಿಕ ಓದುವ ಕೌಶಲ್ಯಗಳ ಪ್ರದರ್ಶನ** | **ಅಪರೂಪಕ್ಕೆ** | **ಕೆಲವು ಸಲ** | **ಯಾವಾಗಲೂ** |
| ಮುದ್ರಣದಲ್ಲಿ ಪೂರ್ಣವಿರಾಮ, ಅಲ್ಪವಿರಾಮದಂತಹ ವಾಕರಣ ಚಿಹ್ನೆಗಳನ್ನು ಗುರುತಿಸುತ್ತಾನೆ/ಳೆ. | | | |
| ವಾಕ್ಯಗಳಲ್ಲಿನ ಸರಳ ಪಠ್ಯಗಳನ್ನು ಸ್ವತಂತ್ರವಾಗಿ ಓದುತ್ತಾನೆ/ಳೆ. | | | |
| ಅನುಕ್ರಮದಲ್ಲಿ ಪ್ರಾರಂಭದ , ಮಧ್ಯದ ಹಾಗೂ ಅಂತ್ಯದ ಘಟನೆಗಳೊಂದಿಗೆ ಪರಿಚಿತ ಕಥೆಗಳನ್ನು ಪುನರಾವತಿಸುತ್ತಾನೆ/ಳೆ. | | | |
| ಓದುವ ಮೂಲೆಯಿಂದ ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ/ಳೆ. | | | |
| **ಪ್ರಾರಂಭಿಕ ಬರವಣಿಗೆಯ ಕೌಶಲ್ಯಗಳ ಪ್ರದರ್ಶನ** | **ಅಪರೂಪಕ್ಕೆ** | **ಕೆಲವು ಸಲ** | **ಯಾವಾಗಲೂ** |
| ಪದಗಳಲ್ಲಿ ಹಾಗೂ ಚಿತ್ರಗಳಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತಾರೆ. | | | |
| ವರ್ಣಮಾಲೆ ಹಾಗೂ ಸಂಖ್ಯೆಗಳನ್ನು ಬರೆಯಲು ಪ್ರಯತ್ನಿಸುತ್ತಾನೆ/ಳೆ. | | | |
| ಚಿತ್ರಗಳ ಮೂಲಕ ಭಾವನೆಗಳನ್ನು ಅರ್ಥೈಸಲು ಉಪಕರಣಗಳನ್ನು ಸುಲಭವಾಗಿ ಬಳಸುತ್ತಾನೆ/ಳೆ. | | | |

| | | | | |
|---|---|---|---|---|
| **ಮಗುವಿನ ವೈಶಿಷ್ಟ್ಯತೆಗಳು:** | ವಿಶೇಷ ಆಸಕ್ತಿಗಳು | | | |
| | ಮಗುವಿನ ಪ್ರತಿಭೆಗಳು | | | |
| | ಸಾಮರ್ಥ್ಯ | | | |
| **ಹಾಜರಾತಿ:** | ನಿಯಮಿತ | ಹೌದು/ಇಲ್ಲ | **ಸಮಯಪಾಲನೆ** | ಇದೆ /ಇಲ್ಲ |
| **ಸಾಮಾನ್ಯ ಟಿಪ್ಪಣಿಗಳು (ರಿಮಾರ್ಕ್ಸ್)** | | | | |

| | |
|---|---|
| ಮುಖ್ಯ ಶಿಕ್ಷಕರ ಸಹಿ ದಿನಾಂಕದೊಂದಿಗೆ | ಶಿಕ್ಷಕರ ಸಹಿ ದಿನಾಂಕದೊಂದಿಗೆ |
| ಪಾಲಕರ ಸಹಿ ದಿನಾಂಕದೊಂದಿಗೆ | |

DRAFT 22.02.22